ಮಾತಂಗಿ

ಮತ್ತು
ಇತರ ಕಾದಂ ಕಥನಗಳು

ಸಂಪಾದಕರು :

ಶ್ರೀನಿವಾಸ ಹಾವನೂರ



ಮಾತಂಗಿ ಹಾಗೂ ಇತರ ಕಾದಂಕಥನಗಳು

ಸಂಪಾದಕರು

ಶ್ರೀನಿವಾಸ ಹಾವನೂರ

ಪ್ರಕಾಶಕರು :

ಹೇಮಂತ ಸಾಹಿತ್ಯ

ನಂ. 972 'ಸಿ', 4ನೇ 'ಇ' ವಿಭಾಗ, 10ನೇ 'ಎ' ಮುಖ್ಯ ರಸ್ತೆ

ರಾಜಾಜಿನಗರ, ಬೆಂಗಳೂರು – 560 010

ದೂರವಾಣಿ : 080 23354619

MATANGI HAGU ITARA KADAMKATHANAGALU — Collection of narratives of some famous novels by Dr. Shrinivas Havanur, ***Published by*** Hemantha Sahitya, # 972C, IV 'E' Block, 10th 'A' Main, Rajajinagar, Bangalore- 560010. Phone : 23354619

ಮೊದಲನೆಯ ಮುದ್ರಣ : 1982

ದ್ವಿತೀಯ ಮುದ್ರಣ : **2011**

ಬಳಸಿದ ಕಾಗದ : 70 ಜಿ.ಎಸ್.ಎಂ. ಮ್ಯಾಪ್‌ಲಿಥೊ.

ಆಕಾರ : ಡೆಮಿ $\frac{1}{8}$,

ಪುಟಗಳು : 216

ಬೆಲೆ : ರೂ. 110/-

ಟೈಪ್‌ಸೆಟ್ :
ಸ್ನೇಹ ಗ್ರಾಫಿಕ್ಸ್,
ಭುವನೇಶ್ವರಿನಗರ, ಬೆಂಗಳೂರು– 23.
ದೂರವಾಣಿ : 23308498

ಮುದ್ರಣ :
ದಿವ್ಯ ಪ್ರಿಂಟ್ಸ್
ನಂ. 23, 11ನೇ 'ಬಿ' ಅಡ್ಡರಸ್ತೆ
10ನೇ ಮುಖ್ಯರಸ್ತೆ, ಅಂದಾನಪ್ಪ ಬಡಾವಣೆ
ವೃಷಭಾವತಿನಗರ, ಬೆಂಗಳೂರು - 560 079.
ಮೊಬೈಲ್ : 99001 63443, 98804 63443

ಒಂದಿಷ್ಟು ವಿವರಣೆ —

'ಕಾದಂ–ಕಥನ' ವೆಂಬುದು ಕನ್ನಡದಲ್ಲಿ ಒಂದು ನವೀನ ಸಾಹಿತ್ಯರೂಪ. ಇದು ಕಾದಂಬರಿಯ ಡೈಜೆಸ್ಟ್ ಅಥವಾ ಸಾರಾಂಶವಲ್ಲ. ಇಂಗ್ಲಿಷ್‌ನಲ್ಲಿಯ ಮ್ಯಾಕ್ಮಿಲನ್ ಸೀರೀಸ್‌ನಂತೆ, ಎಳೆಯರಿಗಾಗಿ ಬರೆದ ಕಥಾಸಾರವಲ್ಲ. ಬದಲಾಗಿ ಕಾದಂಬರಿಯೊಂದರ 'ಕತೆಯ ಮೆಯ್ಗೆಡಲೀಯದೆ' ಅದರ ಕೆಲವು ಹೃದ್ಯವಾದ ಸನ್ನಿವೇಶಗಳನ್ನು ಯಥಾವತ್ತಾಗಿ ಕೊಡುತ್ತ , ಆ ಮೂಲಕ ಹೇಳಲಾದ ಕಥನವಿದು'. ಕಾದಂಬರಿ ಕನ್ನಡದ್ದೇ ಆದರೆ, ಕಾದಂಬರಿಕಾರರ ನುಡಿಕಟ್ಟನ್ನೇ ಚಾಚೂ ತಪ್ಪದಂತೆ ಇಟ್ಟುಕೊಳ್ಳುವುದು ಸಾಧ್ಯ. ಆಗ ಮೂಲ ಕೃತಿಯನ್ನೇ ಸಂಕ್ಷೇಪದಲ್ಲಿ ಓದಿದಂತಾಗಿ ರಸಾನುಭವ ಪಡೆಯುವುದು ಒಂದು ವಿಶೇಷವೇ ಸೈ.

'ಕಾದಂ–ಕಥನ'ದಲ್ಲಿ ಕಾದಂಬರಿಯ ಆದಿ–ಮಧ್ಯ–ಅಂತ್ಯವನ್ನು ಉಳಿಸಿಕೊಳ್ಳುವುದು ಕ್ರಮಪ್ರಾಪ್ತವಾದುದು. ಕೆಲವು ಕಾದಂಬರಿಗಳಲ್ಲಿ ಹಾಗೆ ಮಾಡುವುದು ಸಾಧ್ಯವಾಗುವುದಿಲ್ಲ. ಆದ್ದರಿಂದ ಅಂಥ ಕೃತಿಯ ಪೂರ್ವಾರ್ಧದ ಇಲ್ಲವೆ ಉತ್ತರಾರ್ಧದ ಕಥಾಭಾಗವಷ್ಟನ್ನೇ ತೆಗೆದುಕೊಳ್ಳಬೇಕಾದೀತು. ಇನ್ನು ಕೆಲವೆಡೆ ಕಾದಂಬರಿಯ ವಿಶಿಷ್ಟ ಪಾತ್ರವೊಂದನ್ನು ತೆಗೆದುಕೊಂಡು ಆ ವ್ಯಕ್ತಿಗೆ ಸಂಬಂಧಿಸಿದಷ್ಟೇ ಕಥಾಭಾಗ ಮತ್ತು ಸನ್ನಿವೇಶಗಳನ್ನು ಆಯ್ದುಕೊಳ್ಳಬಹುದು. ಭೈರಪ್ಪನವರ 'ದಾಟು' ಕಾದಂಬರಿಯಿಂದ ಹೆಣೆಯಲಾದ 'ಮಾತಂಗಿ' ಇದಕ್ಕೆ ಸೂಕ್ತವಾದ ಉದಾಹರಣೆ. ಕಾದಂ–ಕಥನದ ಎಲ್ಲ ಲಕ್ಷಣಗಳು ಅತ್ಯಂತ ಸೊಗಸಾಗಿ ಇದರಲ್ಲಿ ತೋರಿಬರುವವಾದ್ದರಿಂದ ಈ ಸಂಗ್ರಹದ ಶೀರ್ಷಿಕೆಯಲ್ಲಿ ಅದನ್ನು ಪ್ರಮುಖವಾಗಿ ಕಾಣಿಸಿದೆ.

ನಾನು ಓದಿ ಮೆಚ್ಚಿದ ಕಾದಂಬರಿಗಳನ್ನು ಇತರರಿಗೂ ಉಣಬಡಿಸುವ ಹೇತುವಿನಿಂದ, ಸಂಗ್ರಹಕಾರ್ಯವನ್ನು ೧೯೪೦ರ ರಷ್ಟು ಹಿಂದೆಯೇ ಪ್ರಾರಂಭ ಮಾಡಿದೆ (ನುಡಿ, ಕತೆಗಾರ ಪತ್ರಿಕೆಗಳಲ್ಲಿ). ಆದರೆ ೪–೫ ಪುಟಗಳಿಗೆ ಸೀಮಿತವಾಗಿದ್ದ ಅವುಗಳಲ್ಲಿ ಅದಾವ ರಸಾಸ್ವಾದನೆ ಸಾಧ್ಯ? ಮುಂದೆ 'ಕಸ್ತೂರಿ' ಪ್ರಾರಂಭವಾದಾಗ (೧೯೫೬), ಈ ಕಾದಂಕಥನಕ್ಕೆ ಒಂದು ನಿಶ್ಚಿತ ರೂಪವನ್ನು ಕೊಟ್ಟದ್ದಾಯಿತು. ಅನಂತರ ಇನ್ನೂ ಅನೇಕರು ಕಾದಂಬರಿಗಳ ಸಂಗ್ರಹ ಮಾಡಿರುವರಾದರೂ, ಮೇಲ್ಕಾಣಿಸಿದ ಲಕ್ಷಣಗಳುಳ್ಳ ಕಥನ–ಸ್ವರೂಪವು ಈ ಸಂಕಲನದಲ್ಲಿ ಪ್ರಮುಖವಾಗಿ ಕಾಣಿಸಿಕೊಂಡಿದೆ.

ಕಸ್ತೂರಿಯಲ್ಲಿ ಅದರ ಆರಂಭದ ಸಂಚಿಕೆಗಳಿಂದ ಮೊದಲ್ಗೊಂಡು ಬಂದ ನನ್ನ ಕಾದಂ–ಕಥನಗಳು ೩೦–೩೫ ಇವೆಯಾದರೂ ಕೆಲವನ್ನು ಮಾತ್ರ ಇಲ್ಲಿ ಆಯ್ದುಕೊಂಡಿದೆ. ಹಾಗಿದ್ದರೂ ಸಾಕಷ್ಟು ವೈವಿಧ್ಯವಿದೆ. ಎಂದರೆ ಇಲ್ಲಿ ಪೌರಾಣಿಕ, ಐತಿಹಾಸಿಕ ಕಥನಗಳಿವೆ; ಕಾರ್ಮಿಕ, ಹರಿಜನ ಸಮಸ್ಯೆಗಳುಳ್ಳವು ಅದರಂತೆ ವೈಜ್ಞಾನಿಕ ಹಿನ್ನೆಲೆ ಇರುವಂತಹವು ಸಮಾವೇಶಗೊಂಡಿವೆ. ಇದರಲ್ಲಿಯ ಎರಡು ಕಾದಂಬರಿಗಳು (ಮಹಾಕ್ಷತ್ರಿಯ, ದಾಟು) ಕೇಂದ್ರ ಸಾಹಿತ್ಯ ಅಕಾಡೆಮಿಯಿಂದ ಪುರಸ್ಕೃತವಾದವುಗಳಾದರೆ, ಇನ್ನೊಂದು (ಮೂಕಜ್ಜಿಯ ಕನಸುಗಳು) ಜ್ಞಾನಪೀಠ ಪ್ರಶಸ್ತಿಯನ್ನು ಪಡೆದಿದೆ ಒಟ್ಟಿನ ಆಯ್ಕೆಯಲ್ಲಿ ಬದುಕಿನ ಮೌಲ್ಯಗಳನ್ನು ಎತ್ತಿಹಿಡಿಯುವ ಉದಾತ್ತಕೃತಿಗಳಿಗೆ ಹೆಚ್ಚು ಗಮನ ಕೊಡಲಾಗಿದೆ.

ಕಾದಂಕಥನಗಳನ್ನು ಮುಂಚೆ ಪತ್ರಿಕೆಗಳಲ್ಲಿಯೂ, ಈಗ ಪುಸ್ತಕರೂಪದಲ್ಲೂ ಪ್ರಕಟವಾಗಲು ಅನುಕೂಲವಾಗುವಂತೆ ನನಗೆ ಒಪ್ಪಿಗೆ ಕೊಟ್ಟ ಆಯಾ ಲೇಖಕರಿಗೂ, ಕಾಪಿರೈಟ್ ಹೋಲ್ಡರರಿಗೂ ನನ್ನ ಕೃತಜ್ಞತೆಗಳು

ಮಂಗಳೂರು

– ಶ್ರೀ. ಹಾ.

ಆಗಸ್ಟ್ ೧೯೮೭

ಕಾದಂಕಥನಗಳನ್ನು ಬರೆಯಲು ನನಗೆ ಪ್ರಚೋದನೆಯಿತ್ತ,

ಹಾಗೂ ಬೌದ್ಧಿಕ ಸಹೃದಯತೆಯಿಂದ ಕೂಡಿದ

ಒಡನಾಟವನ್ನು ಒದಗಿಸುತ್ತಿರುವ

ಶ್ರೀ. ಪಾ. ವೆಂ. ಆಚಾರ್ಯರಿಗೆ

ಅರ್ಪಿತ

– ಶ್ರೀ. ಹಾ.

ಪರಿವಿಡಿ

೧

ಇಂದ್ರಪದವಿ

ದೇವುಡು ಅವರ
'ಮಹಾಕ್ಷತ್ರಿಯ' ಕಾದಂಬರಿಯ ಕಥನ

ನಹುಷ ಮಹಾರಾಜನ ಕಥೆಯನ್ನು ಎಲ್ಲರೂ ಬಲ್ಲರು. ಯಜ್ಞ ಬಲದಿಂದ ಇಂದ್ರಪದವಿಗೇರಿ, ಅಹಂಕಾರ ದೌರ್ಬಲ್ಯದಿಂದ ಋಷಿಗಳನ್ನು ನೋಯಿಸಿ, ಶಾಪಗ್ರಸ್ತನಾಗಿ, ಹಾವಿನ ಜನ್ಮಕ್ಕೆ ಬಿದ್ದವನೆಂಬುದು ಅವನ ಬಗ್ಗೆ ಸಾಮಾನ್ಯರ ಮಾನಸಿಕ ಚಿತ್ರ. ಆದರೆ ದೇವುಡು ನರಸಿಂಹ ಶಾಸ್ತ್ರಿಗಳ ಅಗಾಧ ಶಾಸ್ತ್ರ ಸಂಪತ್ತು ಮತ್ತು ಪ್ರತಿಭೆಯ ಮಂತ್ರಸ್ಪರ್ಶವು ನಹುಷ ಮಹಾರಾಜನನ್ನು ಒಂದು ಅಪೂರ್ವ ಉದಾತ್ತ ವ್ಯಕ್ತಿಯನ್ನಾಗಿ ಮಾರ್ಪಡಿಸಿದೆ. ಸಾಹಿತ್ಯ ಅಕಾದಮಿಯ ಬಹುಮಾನ ಪಡೆದ ಈ ಪೌರಾಣಿಕ ಕಾದಂಬರಿಯ ಉತ್ತರಾರ್ಧದ ಕಥನವಿದು.

ಇಂದ್ರಪದವಿ

ಚಕ್ರವರ್ತಿ ನಿವಾಸದ ಬಿಸಿಲು ಮಚ್ಚಿನಲ್ಲಿ ಚಕ್ರವರ್ತಿನಿ ವಿರಜಾದೇವಿಯು ಸುಖಾಸನದಲ್ಲಿ ಕುಳಿತು ಪತಿದೇವನನ್ನು ಇದಿರು ನೋಡುತ್ತಿದ್ದಾಳೆ. ವಿರಜಾದೇವಿಯು ತಾನು ಪಿತೃಕನ್ಯೆ, ಪರಿಶುದ್ಧಳು ಎಂಬುದನ್ನು ತೋರಿಸಿಕೊಳ್ಳಲೆಂಬಂತೆ, ನಿರ್ಮಲವಾದ ಬಿಳಿಯುಡೆಯುಟ್ಟಿದ್ದಾಳೆ. ಮಿತವಾದ ಆಭರಣಗಳು ತಮ್ಮ ರತ್ನಗಳ ಅಮಿತವಾದ ಕಾಂತಿಯನ್ನು ಎಲ್ಲೆಲ್ಲೂ ಪ್ರಸರಿಸಬೇಕೆಂದು ವಿಜಿಗೀಷುವಾದ ಕ್ಷತ್ರಿಯ ವೀರನಂತೆ ಪ್ರಕಾಶಿಸುತ್ತಿವೆ. ದಾಸಿಯರು ರತ್ನ ಖಚಿತವಾದ ಚಾಮರಗಳನ್ನು ಬೀಸಲು ಸಿದ್ಧರಾಗಿದ್ದಾರೆ. ಎದುರಿಗೊಬ್ಬಳು ವೀಣೆಯನ್ನು ಮೃದುವಾಗಿ ಬಾರಿಸುತ್ತ ಕುಳಿತಿದ್ದಾಳೆ.

ಮೃದುವಾಗಿ ಕೇಳಿಸಿದ ಶೃಂಗನಾದವು ಚಕ್ರವರ್ತಿಯ ಆಗಮನವನ್ನು ಸೂಚಿಸಿತು. ಬಾಗಿಲಲ್ಲಿದ್ದ ಪ್ರಹರಿಣಿಯು ಮಂಡಿಯೂರಿ ಮಣಿದು ದಾರಿ ತೋರಿಸಿಕೊಂಡು ಚಕ್ರವರ್ತಿಯಿರುವೆಡೆಗೆ ಕರೆತಂದಳು. ಅರಸಿತಿಯು ಆಸನದಿಂದೆದ್ದು ಮೂರು ಹೆಜ್ಜೆ ಮುಂದೆ ಹೋಗಿ ಅರಸನನ್ನು ಎದುರುಗೊಂಡು, ಮಂಡಿಯೂರಿ ಬಗ್ಗಿ, ಆತನ ಪಾದಗಳನ್ನು ಮುಟ್ಟಿ ಕಣ್ಣೊತ್ತಿಕೊಂಡಳು. ಅರಸನು ಜಲಭಾರ ನಮ್ರವಾದ ಮೇಘರಾಜವು ಬಗ್ಗಿ ಶಿಖರಿಣಿಯನ್ನು ಆಲಿಂಗಿಸುವಂತೆ, ಬಗ್ಗಿ ಆಕೆಯನ್ನು ಮೇಲಕ್ಕೆತ್ತಿ ಆಲಿಂಗಿಸಿಕೊಂಡು ಜೊತೆಯಲ್ಲಿ ನಡೆದು ಹೋಗಿ, ಸುಖಾಸನವನ್ನು ಅಲಂಕರಿಸಿದನು. ಪರಿಜನರು ಒಬ್ಬೊಬ್ಬರಾಗಿ ಬಂದು ಮುಜರ ಮಾಡಿ ಹೋಗಿ ದೂರದಲ್ಲಿ ನಿಂತರು. ತಿರಸ್ಕರಣಿಯು ನಿಶ್ಶಬ್ದವಾಗಿ ಮುಂದೆ ಸರಿದು ಅವರಿಬ್ಬರೂ ಕುಳಿತಿರುವ ಮೂಲೆಯನ್ನು ಒಂದು ಕೋಣೆಯನ್ನಾಗಿ ಮಾಡಿತು. ವಿರಜಾದೇವಿಯು ಅಲ್ಲಿ ಸಿದ್ಧವಾಗಿದ್ದ ರಸಾಯನವನ್ನೂ ಆಸನವನ್ನೂ ಪತಿಗೊಪ್ಪಿಸಿ ಉಪಚಾರ ಮಾಡಿದಳು. ಅರಸನು ಸಕಾಮನಾಗಿ ಆಕೆಯನ್ನು ಬರಸೆಳೆದು ಗಾಢವಾಗಿ ಆಲಿಂಗನ ಮಾಡಿಕೊಂಡು ಸಸೀತ್ಕಾರವಾಗಿ ಆಕೆಯನ್ನು ಬರಸೆಳೆದು ಗಾಢವಾಗಿ ಆಲಿಂಗನ ಮಾಡಿಕೊಂಡು ಸಸೀತ್ಕಾರವಾಗಿ ಚುಂಬಿಸಿ, ''ನನಗೆ ನಿನ್ನಲ್ಲಿ ಎಷ್ಟೋ ಚೇಷ್ಟೆ ಮಾಡಬೇಕೆಂದು ಆಸೆ. ಆದರೆ ನೀನು ಧರ್ಮಪತ್ನಿ, ಕಾಮಪತ್ನಿಯ ಚೇಷ್ಟೆಯನ್ನು ಧರ್ಮಪತ್ನಿಯಲ್ಲಿ ಮಾಡಬಾರದು. ಏನು ಮಾಡಲಿ?'' ಎಂದನು.

ದೇವಿಯು ಗಂಡನನ್ನು ಕೆರಳಿಸುವಂತೆ ಕೇಳಿದಳು : ''ಪ್ರವಾಹ ಬಂದಾಗ ನದಿಯು ದಡಗಳನ್ನು ಕೇಳುವುದೇನು? ನೆನಪಿರಲಿ, ತಾವು ಇಲ್ಲಿಗೆ ಬಂದಿರುವುದು ನನ್ನ ಪ್ರಾರ್ಥನೆಯಿಂದ, ನನ್ನನ್ನು ಅನುಗ್ರಹಿಸುವುದಕ್ಕೆ''

''ಒಂದು ನಿಜ; ಇನ್ನೊಂದು ಸುಳ್ಳು.''

''ಹಾಗೆಂದರೆ?''

''ನಿನ್ನ ಪ್ರಾರ್ಥನೆಯಿಂದ ಬಂದಿದ್ದೇನೆ ನಿಜ. ಆದರೆ ಬಂದಿರುವುದು ನಿನ್ನನ್ನು ಅನುಗ್ರಹಿಸುವುದಕ್ಕಲ್ಲ, ನಿನ್ನಿಂದ ಅನುಗ್ರಹವನ್ನು ಪಡೆದುಕೊಳ್ಳುವುದಕ್ಕೆ''

''ಕನಸು ಮನಸಿನಲ್ಲಿಯೂ ನಾವು ಅನುಗ್ರಾಹ್ಯರು. ತಾವು ಅನುಗ್ರಾಹಕರು, ದೇವ.''

''ಧರ್ಮಪ್ರಪಂಚದಲ್ಲಿ ಪತಿಯು ಅನುಗ್ರಾಹಕ. ಪತ್ನಿಯು ಅನುಗ್ರಾಹ್ಯಳು. ಕಾಮಪ್ರಪಂಚದಲ್ಲಿ ಪತ್ನಿಯು ಅನುಗ್ರಾಹಕಳು. ಪತಿಯು ಅನುಗ್ರಾಹ್ಯ. ಅದರಿಂದ, ಅಂತಃಪುರಗಳಲ್ಲಿ, ಅದೂ ತಿರಸ್ಕರಿಣಿಯು ಹೊರಗಿನ ಪ್ರಪಂಚವನ್ನು ಹೊರಗೇ ಇಟ್ಟು, ನಮ್ಮನ್ನು ಏಕಾಂತದಲ್ಲಿ ಬಿಟ್ಟಿರುವಾಗ ದೇವಿಯವರು ದೊಡ್ಡ ಮನಸ್ಸು ಮಾಡಿ ನಮ್ಮಲ್ಲಿ ದಾಸಭಾವವನ್ನು ಆರೋಪಿಸಿ ನಡೆಸಿಕೊಂಡರೆ ಕೃತಾರ್ಥರಾಗುವೆವು. ಇಗೋ, ಮಿಕ್ಕೆಲ್ಲರಿಗೂ ಸಿಂಹಾಸನಾಧೀಶ್ವರನಾಗಿ ಭೂಮಂಡಲದ ಏಕನಾಥನಾದ ನಹುಷನು ತಾನು ಚಕ್ರವರ್ತಿಯೆಂಬುದನ್ನು ಮರೆತು ಮಹಾದೇವಿಯರ ಎದುರು ನಿಂತು ಸೆರಗೊಡ್ಡಿ ಕಾಮಭಿಕ್ಷೆಯನ್ನು ಬೇಡುತ್ತಿರುವನು.''

''ದೇವಾ, ತಮ್ಮ ಮಾತುಗಳು ನನ್ನ ಕಿವಿಗೆ ರಸಾಯನವಾಗಿವೆ. ಸಿಂಹಾಸನದಲ್ಲಿಯೂ ಧರ್ಮಾಸನದಲ್ಲಿಯೂ ತಮ್ಮೊಡನೆ ಕುಳಿತಾಗ ನಾನು ಯಾವ ಸಂತೋಷವನ್ನು ಅನುಭವಿಸುತ್ತಿದ್ದೇನೋ, ಈ ಸುಖಾಸನದಲ್ಲಿ ನಾವು ಕುಳಿತಿರುವಾಗ, ಅದೂ ಏಕಾಂತದಲ್ಲಿ ಅಪರೂಪವಾಗಿ ತಾವು ಕೈಗೆ ಸಿಕ್ಕಿರುವಾಗ, ಇನ್ನೂ ಅಷ್ಟು ಹೊತ್ತು ಈ ಮಧುರಾಲಾಪವನ್ನು ಬಯಸಿ ಹಾತೊರೆದಿದ್ದೇನೆ. ಆದ್ದರಿಂದ ತಾವು ಏನಾದರೂ ಹೇಳುತ್ತಿರಿ. ನಾನೂ ಯಥಾಶಕ್ತಿಯಾಗಿ ಪ್ರಣಯೋಪಚಾರವನ್ನು ಒಪ್ಪಿಸುತ್ತ ಸಂತೋಷವಾಗಿ ಕೇಳುವೆನು.''

''ಭಲೆ ದೇವಿ, ಸಂತೋಷದಿಂದ ಉಬ್ಬುತ್ತಿರುವ ನಿನ್ನ ಸ್ಥಿತಿಯನ್ನು ಸೂಚಿಸಿಕೊಂಡೆ. ನೋಡು, ನೀನು ದೇವತೆಯಾದರೂ ನನಗಾಗಿ ಮಾನುಷ ಧರ್ಮವನ್ನು ಅನುಸರಿಸಿರುವೆಯೆಂಬುದ್ನು ಪರ್ಯಾಯವಾಗಿ ಸೂಚಿಸಿ ಉಪಕಾರ ಮಾಡಿದೆ. ಹಾಗೂ ಆಗಲಿ. ವೈಣಿಕನ ಉಪಮರ್ದವನ್ನು ಸಹಿಸಿಕೊಂಡು ಮೃದು ಮಧುರವಾಗಿ ನುಡಿಯುವ ವೀಣೆಯಂತೆ ನೀನೂ ನನ್ನನ್ನು ಸಂಪ್ರೀತಿಗೊಳಿಸು. ಹೆಣ್ಣೊಲಿದು ಹೂಸಲಂತುಬ್ಬಿ ಮೈಮೇಲೆ ಬಂದರೆ ಸ್ವರ್ಗವು ಕೈಗೆ ಸಿಕ್ಕಂತಲ್ಲವೆ?''

''ದೇವಾ, ಮೂರು ಲೋಕಗಳಲ್ಲಿಯೂ ತಮ್ಮಂತಹ ಧರ್ಮಜ್ಞರೂ ಧಾರ್ಮಿಕರೂ ಇಲ್ಲವೆನ್ನುವರು. ಈ ಧರ್ಮಬಲದಿಂದ ಸ್ವರ್ಗವನ್ನು ಗೆದ್ದವರು. ಬೇಕೆಂದರೆ ಇಂದ್ರ ಪದವಿಯನ್ನು ನಿರ್ವಹಿಸಬಲ್ಲ ತಾವು ಕೋರಿದ್ದಾದರೆ, ಸ್ವರ್ಗವು ಇಲ್ಲಿಗೇ ಬರುವುದು ಏನತಿಶಯ?''

ವಿರಜಾದೇವಿ ಸಹಜವಾಗಿ ನುಡಿದ ಮಾತಿದು. ಮರುದಿನಕ್ಕೆ ಸತ್ಯ ಸೃಷ್ಟಿಗೇ ಇಳಿಯುವಂತಾಯ್ತು! ದೇವಲೋಕದ ಆಚಾರ್ಯನಾದ ಬೃಹಸ್ಪತಿಯು, ವಾಯುದೇವನನ್ನೂ, ದೇವಲೋಕದ ಕೆಲವು ಪ್ರತಿನಿಧಿಗಳನ್ನೂ ಹಿಂದಿಟ್ಟುಕೊಂಡು ನಹುಷನ ದರ್ಶನಕ್ಕೆಂದು ಬಂದನು. ದರ್ಶನಮಂದಿರದಲ್ಲಿ ದಂಪತಿಗಳೀರ್ವರಿಂದ ಸತ್ಕರಿಸಲ್ಪಟ್ಟವನಾಗಿ, ಸುರಾಚಾರ್ಯನು ಮಾತಿಗೆ ಮೊದಲು ಮಾಡಿದನು :

''ಚಕ್ರವರ್ತಿ, ನೀನು ಚಂದ್ರವಂಶದ ರಾಜೇಂದ್ರನು. ಚಂದ್ರನಿಂದ ಐದನೆಯವನು. ನಿನ್ನ ಪುಣ್ಯಬಲದಿಂದ ಮೂರು ಲೋಕಗಳಿಗೂ ಅರಸನಾಗಲು ಅರ್ಹನಾದವನು. ನಾವು

ನಿನ್ನ ಬಳಿಗೆ ವಿಚಿತ್ರವಾದ ಪ್ರಾರ್ಥನೆಯೊಂದನ್ನು ಮಾಡಿಕೊಳ್ಳಲು ಬಂದಿದ್ದೇವೆ. ನೀನು ಅನುಕೂಲನಾಗಿ ಅದನ್ನು ಒಪ್ಪಿಕೊಳ್ಳಬೇಕು.''

ನಹುಷನು ಸಣ್ಣಗೆ ನಕ್ಕು ಹೇಳಿದನು, ''ದೇವಗುರುವೇ, ಆ ಪ್ರಾರ್ಥನೆಯಾದರೂ ಎಂಥದು?''

''ಈಗ ಕಾರಣಾಂತರಗಳಿಂದ ಇಂದ್ರಪದವಿಯು ಶೂನ್ಯವಾಗಿರುವುದು. ಅದನ್ನು ನೀನು ಅಲಂಕರಿಸಬೇಕೆಂದು ಕೇಳಲು ನಾವು ಬಂದಿರುವೆವು. ಇವರು ಋಷಿಗಣದ ಪ್ರತಿನಿಧಿಗಳು. ಇವರು ಪಿತೃಗಣದ ಪ್ರತಿನಿಧಿಗಳು. ಈತನು ದೇವಾಗ್ರಗಣ್ಯರಲ್ಲಿ ಒಬ್ಬನಾದ ಜಾತವೇದನು. ನನ್ನನ್ನಂತೂ ಬಲ್ಲೆ.''

''ತಾವು ಇಂದ್ರಪದವಿಯು ಶೂನ್ಯವಾಗಿದೆಯೆಂದಿರಿ. ಆ ವಿಚಾರವನ್ನು ವಿಸ್ತಾರವಾಗಿ ಕೇಳಬಹುದೆ?''

''ಹೇಳುತ್ತೇನೆ. ಇಂದ್ರನ ಮೇಲೆ ಬೇಸರಗೊಂಡು ನಾನು ಕಣ್ಮರೆಯಾಗಿದ್ದಾಗ, ಇಂದ್ರನು ವಿಶ್ವರೂಪನನ್ನು ದೇವಾಚಾರ್ಯನನ್ನಾಗಿ ನಿಯಮಿಸಿಕೊಂಡನು. ಆದರೆ ವಿಶ್ವರೂಪನು ಮಾತೃಭಾಗದಿಂದ ದಾನವರ ಕಡೆಯವನಾಗಿ, ದೇವತೆಗಳ ಹಿತವನ್ನು ಚೆನ್ನಾಗಿ ನೋಡಿಕೊಳ್ಳಲಾರ ಎಂದು ಕಂಡುಬಂದು, ಇಂದ್ರನು ಅವನನ್ನು ಸಂಹರಿಸಬೇಕಾಗಿ ಬಂತು. ಅದರಿಂದ ರೊಚ್ಚಿಗೆದ್ದ ವಿಶ್ವರೂಪನ ತಂದೆಯು ಯಾಗವನ್ನು ಮಾಡಿ, ವೃತ್ರನೆಂಬ ಮಹಾನ್ ರಾಕ್ಷಸನನ್ನು, ಇಂದ್ರನನ್ನು ಕೊಲ್ಲುವುದಕ್ಕಾಗಿಯೇ ಸೃಜಿಸಿದನು. ವಿಷ್ಣುವಿನ ಕೃಪೆಯಿಂದ, ಇಂದ್ರನು ಅವನನ್ನು ನಿರ್ದೇಹಿಯನ್ನಾಗಿ ಮಾಡಿದನಾದರೂ, ಹತ್ಯಾರೂಪದಿಂದ ಅವನು ಇಂದ್ರನನ್ನು ಬೆನ್ನಟ್ಟಿದ ಕೂಡಲೇ, ಇಂದ್ರನು ತಲೆಮರೆಸಿಕೊಂಡಿದ್ದಾನೆ. ಅದರಿಂದಾಗಿ ಇಂದ್ರಸಿಂಹಾಸನವು ಶೂನ್ಯವಾಗಿದೆ. ದೇವತೆಗಳೆಲ್ಲರಿಗೂ ಅವರವರ ಕಾರ್ಯಗಳಿರುವದರಿಂದ, ಈಗಿದ್ದವರಾರೂ ಆ ಅಧಿಕಾರವನ್ನು ಪಡೆಯುವಂತಿಲ್ಲ, ಪಾತಾಳಲೋಕದವರಂತೂ ನಮ್ಮ ವೈರಿಗಣದವರು. ಆದ್ದರಿಂದ ಮನುಷ್ಯಲೋಕದಲ್ಲಿರುವ ಒಬ್ಬನನ್ನು —ಕ್ಷತ್ರಿಯನೂ ಧರ್ಮಿಷ್ಠನೂ ಆದವನನ್ನೇ ನಾವು ಹುಡುಕಿಕೊಂಡು ಹೊರಟು, ನಿನ್ನಲ್ಲಿಗೆ ಬಂದಿದ್ದೇವೆ,'' ಎಂದು ಸುರಾಚಾರ್ಯನು ವಿವರಿಸಿದನು.

ನಹುಷನು ಸಾವಧಾನವಾಗಿ ಯೋಚಿಸಿ ಹೇಳಿದನು : ''ಬಂದಿರುವ ತಾವೆಲ್ಲರೂ ಪೂಜ್ಯರು. ತಾವು ನಮಗೆ ವರಪ್ರದಾನ ಮಾಡುವವರು. ಹೀಗಿರುವಲ್ಲಿ ನಾವು ತಮ್ಮ ಮೇಲೆ ಅಧಿಕಾರವನ್ನು ಚಲಾಯಿಸಲು ಸಾಧ್ಯವೆ?''

ದೇವ, ಋಷಿ, ಪಿತೃಗಳು ಒಬ್ಬರನ್ನೊಬ್ಬರು ನೋಡಿಕೊಂಡರು. ನಹುಷನು ಹೇಳುವುದು ಸರಿ; ಏನು ಮಾಡಬೇಕು? ಸುರಾಚಾರ್ಯನು ಹೇಳಿದನು : ''ಚಕ್ರವರ್ತಿ, ನಿನ್ನ ಆಕ್ಷೇಪಣೆಯು ಸಾಧುವಾದುದು. ಯಾವಪ್ರಾಣಿಯ ಇತಿಮಿತಿಯನ್ನು ಬೇಕಾದರೂ ಪಿತೃಗಳು ಬದಲಾಯಿಸಬಲ್ಲರು. ಪಿತೃಗಳು ನಿನ್ನ ಮಾನವತ್ವವನ್ನು ತೆಗೆದು ಅಲ್ಲಿ ದೇವತ್ವವನ್ನು ಸ್ಥಾಪಿಸುವರು.''

''ದೇವಾ, ತಾವು ಹೇಳುತ್ತಿರುವಾಗ, ಬೇಡವೆನ್ನಲು ಸಾಧ್ಯವಿಲ್ಲ. ಅಲ್ಲದೆ

ಮನುಷ್ಯಲೋಕದಲ್ಲಿ ನ್ಯಾಯವಾಗಿ ರಾಜ್ಯಭಾರ ಮಾಡಿದವರಿಗೆ ಇಂದ್ರಸಿಂಹಾಸನದಲ್ಲಿ ಅರ್ಧ ಸಿಕ್ಕುವುದು ಎಂದು ಬಲ್ಲವರು ಹೇಳುವರು. ತಾವು ಇಂದ್ರತ್ವವನ್ನೇ ಕೊಡುವೆವು ಎನ್ನುವಿರಿ. ಆಗಲಿ, ಆದರೆ, ಅದಕ್ಕೂ ಮೊದಲು ನಾನು ಎರಡು ನಿಬಂಧನೆಗಳನ್ನು ತಮ್ಮ ಮುಂದಿಡಬಹುದೆ?''

ದೇವಗುರುವು ''ಆಗಬಹುದು'' ಎಂದನು. ನಹುಷನು ಹೇಳಿದನು : ''ಅಲ್ಲಿಯೂ ಈ ವಿರಜಾದೇವಿಯು ನನ್ನ ಪತ್ನಿಯಾಗಿದ್ದು, ಈಗ ಇಲ್ಲಿ ಅರಮನೆಯಲ್ಲಿ ನಾವು ನಡೆಸುವ ಧರ್ಮಗಳನ್ನು ದಿನವೂ ನಡೆಸುತ್ತಿರಲು ಅನುಕೂಲವಿರಬೇಕು ಎಂಬುದೊಂದು. ಜೊತೆಗೆ ಅಲ್ಲಿ ನಾನು ಏನು ಕೇಳಿದರೂ ಅದನ್ನು ರಹಸ್ಯವೆನ್ನದೆ ನನಗೆ ಹೇಳಬೇಕು ಎನ್ನುವುದು ಎರಡನೆಯದು. ಈ ಎರಡು ನಿಯಮಗಳನ್ನು ಒಪ್ಪಿಕೊಳ್ಳಬೇಕು.''

''ಒಪ್ಪಿಕೊಂಡಿರುವೆವು. ಇವೆರಡರಿಂದ ಆಗುವ ಹಾನಿಗೆ ನಾವು ಹೊಣೆಯಲ್ಲ, ನೀನೇ ಹೊಣೆ. ನೀನು ಧರ್ಮ ಮಾಡುತ್ತಿರಬೇಕು ಎಂದೆ. ಅಧರ್ಅರ್ಥವೇನಾಯಿತು ಬಲ್ಲೆಯಾ? 'ನಾನು ಇಂದ್ರನಾದರೂ ಮನುಷ್ಯಧರ್ಮವನ್ನು ಬಿಡುವುದಿಲ್ಲ' ಎಂದಾಯಿತು. ಎಂದರೆ ಮನುಷ್ಯರು ಮರ್ತ್ಯರು. ನಾವು ನಿನ್ನನ್ನು ಅಜರ, ಅಮರಧರ್ಮಿಯಾಗಿ ಮಾಡಬೇಕೆಂದಿದ್ದೆವು. ನೀನು ಒಂದನ್ನು ಒಪ್ಪಿಕೊಂಡು, ಇನ್ನೊಂದನ್ನು ಬೇಡವೆಂದ ಹಾಗಾಯಿತು.''

ನಹುಷನು ಅದನ್ನು ಕೇಳಿ ನಿಟ್ಟುಸಿರು ಬಿಟ್ಟನು. ದಂಪತಿಗಳು ಒಬ್ಬರ ಮುಖವನ್ನೊಬ್ಬರು ನೋಡಿಕೊಂಡು ಒಂದು ಗಳಿಗೆ ವಿಷಾದಪಟ್ಟರು. ನಹುಷನು ಕೇಳಿದನು: ''ಇನ್ನೊಂದು?''

''ಅದೇ? ದೇವಲೋಕದಲ್ಲಿ ಇಂದ್ರನಾದ ಮೇಲೆ ನಿನಗೆ ತಿಳಿಯದ ರಹಸ್ಯಗಳೇನಿದ್ದಾವು? ರಹಸ್ಯವು ತಾನಾಗಿ ತಿಳಿದರೆ ವರ; ನೀನಾಗಿ ಭೇದಿಸಿದರೆ ಶಾಪ. ಅದರಿಂದ ಏನು ಬೇಕಾದರೂ ಆಗಬಹುದು.''

ನಹುಷನು ಅದಕ್ಕಾಗಿ ಅಷ್ಟು ವಿಷಾದಪಡಲಿಲ್ಲ. 'ಆಗಲಿ, ಅದು ನನ್ನ ಕೈಯಲ್ಲಿದೆ. ಹೆಚ್ಚು ಕುತೂಹಲ ಪಡದಿದ್ದರೆ ಆಯಿತು' ಎಂದುಕೊಂಡನು.

ದೇವಾಚಾರ್ಯಾದಿಗಳು ನಹುಷನನ್ನು ಪತ್ನಿಸಮೇತವಾಗಿ ದೇವಲೋಕಕ್ಕೆ ಕರೆದುಕೊಂಡು ಹೋಗಿ ಇಂದ್ರಪಟ್ಟಾಭಿಷೇಕ ಮಾಡಿದರು. ನಹುಷನು ಇಂದ್ರನಾಗಿ ಅಧಿಕಾರವನ್ನು ವಹಿಸಿಕೊಂಡನು. ಅಗ್ನಿವಾಯುಗಳನ್ನು ಹಿಂದಿನಂತೆ ಅವರವರ ಅಧಿಕಾರದಲ್ಲಿಟ್ಟು ಅವರ ಮುಖಾಂತರವಾಗಿ ತ್ರೈಲೋಕ್ಯಾಧಿಪತ್ಯವನ್ನು ನಿರ್ವಹಿಸಿದನು.

ಒಂದು ದಿನ ಹೊಸ ಇಂದ್ರನು ಸುರಾಚಾರ್ಯರನ್ನು ಕೇಳಿದನು : ''ದೇವಾ, ನನಗೆ ಇಂದ್ರಪಟ್ಟವನ್ನು ಕಟ್ಟಿರುವಿರಲ್ಲಾ? ಅದು ಪೂರ್ಣವಾಗಿದೆಯೇ?''

ಬೃಹಸ್ಪತಿಯು ಹೇಳಿದನು : ''ನೀನು ತಿಳಿಯಬೇಕೆಂದ ರಹಸ್ಯವನ್ನು ನಿನಗೆ ಹೇಳುವೆವು ಎಂದು ನಾವು ವರವನ್ನು ಕೊಟ್ಟಿದ್ದೇವೆಯಾಗಿ ಹೇಳಲೇಬೇಕು. ಆದರೆ ಅದನ್ನು ತಿಳಿದು ನಿನಗೆ ಆಗಬೇಕಾದುದೇನು?''

''ಅಧಿಕಾರವು ಪೂರ್ಣವಾಗಲು ಏನು ಮಾಡಬೇಕೋ ಅದನ್ನು ಮಾಡಿಯೆಂದು ತಮ್ಮನ್ನೇ ಕೇಳುವುದು.''

''ಕಾಲವನ್ನು ಕುರಿತು ಆಗಲೇ ಹೇಳಿದ್ದೇವೆ. ನೀನಾಗಿ ಮಾನವತ್ವವನ್ನೊಪ್ಪಿಕೊಂಡಿರುವಿಯಾಗಿ ಕಾಲದಲ್ಲಿ ನಿನ್ನ ಇಂದ್ರತ್ವವು ಅಪೂರ್ಣ. ಕಾಲದೃಷ್ಟಿಯಿಂದ ಅಪೂರ್ಣವಾದ ಅಧಿಕಾರವು ಎಷ್ಟು ಪೂರ್ಣವಾಗಬಹುದೋ ಅಷ್ಟನ್ನು ನಾವು ಕೊಟ್ಟೇ ಇದ್ದೇವೆ. ಆದರೆ ಇಂದ್ರತ್ವವು ಶಚೀಪತಿಯಾಗುವವರೆಗೂ ಪೂರ್ಣವಾಗುವುದಿಲ್ಲ.''

''ಹಾಗಾದರೆ ಶಚಿಯು ಇಂದ್ರಾಣಿಯಲ್ಲದೆ ಇಂದ್ರಪತ್ನಿಯಲ್ಲ?''

''ಹೌದು. ಪರಿಸ್ಥಿತಿಯಿಂದ ಹಾಗೆಯೇ ಅರ್ಥವಾಗುವುದು. ಆದರೆ ಇದುವರೆಗೆ ಇಂದ್ರನು ಬೇರೆಯಾಗಿದ್ದರೂ ಶಚೀಪತಿಯು ಬೇರೆಯಾಗಿರಲಿಲ್ಲ. ಈಗ ಶಚೀಪತಿಯು ಇಂದ್ರನೋ? ಅಥವಾ ಶಚೀದೇವಿಯು ಇಂದ್ರನ ಅಧಿಕಾರದ್ಯೋತಕವಾದ ಪ್ರತೀಕವೋ ಅಥವಾ ಆತನ ವ್ಯಯಕ್ತಿಕ ಸಂಬಂಧವನ್ನುಳ್ಳವಳೋ ಎಂಬುದನ್ನು ಗೊತ್ತುಮಾಡಬೇಕಾಗಿದೆ.''

''ಅದನ್ನು ಗೊತ್ತುಮಾಡುವವರು ಯಾರು?''

''ದೇವಸಭೆ.''

''ಹಾಗಾದರೆ ದೇವಸಭೆಯನ್ನು ಸೇರಿಸಿ ಈ ಅಂಶವನ್ನು ಗೊತ್ತುಮಾಡಿಕೊಡಬೇಕು.''

''ಆಗಲಿ'' ಎಂದು ಬೃಹಸ್ಪತಿಯು ಕುಳಿತಲ್ಲಿಯೇ ಕುಳಿತು ಚಿಂತಿಸಿದನು. ಕೊನೆಗೆ ಅಲ್ಲಿಂದ ಎದ್ದು, ''ನಾನೇಕೆ ವ್ಯಥಿಸಲಿ? ಇದು ಮಹಾವಿಷ್ಣುವಿನ ಅಪ್ಪಣೆಯಂತೆ ಆಗುತ್ತಿದೆ.'' ಎಂದು ಆಳುಗಳನ್ನು ಕರೆದು, ''ಚಿತ್ರರಥ ಗಂಧರ್ವರಾಜನನ್ನು ಬರಹೇಳು.'' ಎಂದು ಆಜ್ಞೆ ಮಾಡಿದನು.

ಇನ್ನೊಂದು ಗಳಿಗೆಗೆ ಚಿತ್ರರಥನು ಕಾಣಿಸಿಕೊಂಡನು. ಬೃಹಸ್ಪತಿಯು ''ಗಂಧರ್ವರಾಜಾ, ಈ ಇಂದ್ರನು ಇನ್ನೊಂದು ಗೊಂದಲವೆಬ್ಬಿಸಿದ್ದಾನೆ. ಇದೇ ಈತನ ಪತನಕ್ಕೆ ಕಾರಣವಾದೀತೋ ಏನೋ? ಏನಾದರಾಗಲಿ, ದೇವಸಭೆಯನ್ನು ಕರೆ. ಶಚೀದೇವಿಯಿಲ್ಲದೇ ಇಂದ್ರಾಧಿಕಾರವು ಪೂರ್ಣವಾಗುವುದಿಲ್ಲ, ಅದರಿಂದ ಆಕೆಯು ಇಂದ್ರಾಣಿಯೋ ಇಂದ್ರಪತ್ನಿಯೋ ಗೊತ್ತುಮಾಡಬೇಕು'' ಎಂದನು.

ಚಿತ್ರರಥನು ಏನೋ ಹೇಳುವುದಕ್ಕೆ ಹೋದನು. ದೇವಗುರುವು, ''ಆ ವಿಚಾರ ನಾನೂ ನೀನೂ ಚರ್ಚಿಸುವುದು ಬೇಡ. ಅದನ್ನು ದೇವಸಭೆಯೇ ಚರ್ಚಿಸಲಿ. ನಾವಿಬ್ಬರೂ ತಲೆಮರೆಸಿಕೊಂಡಿರುವ ಇಂದ್ರನ ಕಡೆಯವರು.'' ಎಂದು ಬೇಸರದಿಂದ ಮುಕ್ತಾಯ ಮಾಡಿದನು.

ಅದೇ ದಿನ ಸಂಜೆಗೆ ದೇವಸಭೆಯು ದೇವಾಚಾರ್ಯನ ಅಧ್ಯಕ್ಷತೆಯಲ್ಲಿ ಸೇರಿದೆ. ಪಿತೃಗುಣಗಳೂ ಋಷಿಗಣಗಳೂ ವಿಶೇಷಾಹ್ವಾನದ ಮೇಲೆ ಬಂದಿದ್ದಾರೆ. ಸಭೆಯು ಸಕಾಲದಲ್ಲಿ ಆರಂಭವಾಯಿತು. ಅಧ್ಯಕ್ಷನು ಎದ್ದು ಸಭೆಯನ್ನು ಸಂಬೋಧಿಸಿ, ''ಮಾನ್ಯರೆ, ಈಗಿನ ದೇವೇಂದ್ರನು ತನ್ನ ಅಧಿಕಾರ ಪೂರ್ಣವಾಗಿದೆಯೋ ಎಂಬ ಪ್ರಶ್ನೆಯನ್ನು ಎತ್ತಿದ್ದಾನೆ. 'ಶಚೀಪತಿತ್ವವಿಲ್ಲದೆ ಇಂದ್ರತ್ವವು ಪೂರ್ಣವಾಗುವುದಿಲ್ಲ.' ಈಗ ಆ ಇಂದ್ರತ್ವವು

ಪೂರ್ಣವಾಗಬೇಕಾದರೆ ಏನು ಮಾಡಬೇಕೋ ಅದನ್ನು ಗೊತ್ತುಪಡಿಸುವದು ಈ ಸಭೆಯ ಕೆಲಸ.'' ಎಂದು ಹೇಳಿ ಕುಳಿತನು.

ಒಬ್ಬ ದೇವತೆಯು ಎದ್ದು ಹೇಳಿದನು : ''ಶಚೀಪತಿತ್ವದ ಮಾತನ್ನು ಈ ಸಂದರ್ಭದಲ್ಲಿ ಎತ್ತಬೇಕಾಗಿಲ್ಲ. ಶಚೀದೇವಿಯು ಆ ಇಂದ್ರನ ಪತ್ನಿ. ನಾವು ದುಡುಕಿದರೆ ಅನ್ಯ ಪತ್ನಿಯನ್ನು ವಿಯೋಗ ಮಾಡಿದ ಅಕಾರ್ಯವನ್ನು ಮಾಡಿದವರಾದೇವು.''

ಋಷಿಗಳು ಒಬ್ಬರು ಎದ್ದು ಹೇಳಿದರು, ''ಇರಬಹುದು, ಆದರೆ ಶಚೀದೇವಿಯು ಅಧಿಕಾರಪ್ರಯುಕ್ತಳಾದಳು. ಇಂದ್ರನ ಪಟ್ಟಕ್ಕೆ ಬಂದವರ ಸ್ವತ್ತಾಗಿರಬೇಕು ಎಂದು ಅಭಿಪ್ರಾಯಪಡುತ್ತೇನೆ.''

ಸಭೆಯಲ್ಲಿ ಗದ್ದಲವೋ ಗದ್ದಲವಾಯಿತು. ಕೆಲವರು–''ಇದು ಸ್ತ್ರೀವಿಷಯಕವಾದ ಪ್ರಶ್ನೆ'' ಎಂದು ಧರ್ಮಕಾಮುಗಳ ಪ್ರಸ್ತಾಪವನ್ನೆತ್ತಿದರೆ, ಇನ್ನೊಬ್ಬರು –''ಇಲ್ಲಿ ಧರ್ಮ–ಕಾಮುಗಳ ಪ್ರಸ್ತಾಪವೇ ಇಲ್ಲ, ಅಧಿಕಾರವು ಅರ್ಥಸ್ಥಾನ'' ಎಂದರು. ಸಭೆಯಲ್ಲಿ ದೀರ್ಘಕಾಲ ಚರ್ಚೆಯಾಗಿ ಕೊನೆಗೆ —ಶಚಿಯು ಅಧಿಕಾರಸ್ಥಾನಬದ್ಧಳು. ಅದರಿಂದ ಶಚೀಪತಿತ್ವವೆನ್ನುವುದು ಅಧಿಕಾರ ಸಂಕೇತವೇ ಹೊರತು ಮತ್ತೇನೂ ಇಲ್ಲ, ಅದರಿಂದ ಶಚೀದೇವಿಯು ಹೊಸ ಇಂದ್ರನನ್ನು ಕಾಯೇನ ವಚಸಾ ಮನಸಾ ಸೇವಿಸಲೇಬೇಕು'' ಎಂದು ಗೊತ್ತಾಯಿತು. ದೇವಗುರುವು ಇಷ್ಟವಿಲ್ಲದಿದ್ದರೂ ಸಭೆಯ ನಿರ್ಣಯವನ್ನು ಅಂಗೀಕರಿಸಬೇಕಾಯಿತು. ಬೃಹಸ್ಪತಿಯು ಚಿಂತಾಭಾರದಿಂದ ಕುಗ್ಗಿದವನಂತೆ ನಿಧಾನವಾಗಿ ಮಂದಿರಕ್ಕೆ ಬಂದನು. ಆತನು ಮಂದಿರಕ್ಕೆ ಬರುತ್ತಿದ್ದ ಹಾಗೆಯೇ ಪ್ರಹರಿಯು ಬಂದು ವಂದಿಸಿ, ''ಶಚೀದೇವಿಯು ದರ್ಶನಕ್ಕೆ ಬಂದಿದ್ದಾಳೆ'' ಎಂದನು. ಬೃಹಸ್ಪತಿಯು ''ಒಳ್ಳೆಯದಾಯಿತು'' ಎಂದು ನೇರವಾಗಿ ಆಕೆಯನ್ನು ನೋಡಲು ಹೋದನು.

ಇಂದ್ರನು ಓಡಿಹೋದಾಗಿನಿಂದ ಶಚೀದೇವಿಯು ಇಳಿದುಹೋಗಿದ್ದಳು. ದೇವತೆಗಳು ಇಂದ್ರನನ್ನು ಹುಡುಕಿದುದು, ಆತನೆಲ್ಲಿರುವನು ಎಂಬ ಗುರುತೂ ಸಿಕ್ಕದುದು, ಆಗ ಯತ್ನವಿಲ್ಲದೆ ದೇವರ್ಷಿ, ಪಿತೃಗಣಗಳು ಇನ್ನೊಬ್ಬ ಇಂದ್ರನನ್ನು ಆರಿಸಿ ತಂದುದು, ಆತನು ಅಧಿಕಾರ ಪೂರ್ಣತೆಯನ್ನು ಬಯಸಿದುದು—ಇಷ್ಟು ಆಕೆಗೆ ಗೊತ್ತು. ಶಚಿಯು ಅಂತಃಪುರವನ್ನು ಬಿಟ್ಟು ಈಚೆಗೆ ಬರದಿದ್ದರೂ, ಇಂದಿನ ದೇವಸಭೆಯಲ್ಲಿ ಆದ ನಿರ್ಣಯವನ್ನು ಕೇಳಿ ಆಕೆಗೆ ಎದೆಯು ಒಡೆದಂತಾಗಿದೆ. ಬೃಹಸ್ಪತಿಯನ್ನು ಕಂಡೊಡನೆ ಶಚಿಯು ಗೋಳೋ ಎಂದು ಅತ್ತಳು. ಹಾಗೆಯೇ ಬಿಕ್ಕಳಿಸುತ್ತ ಹೇಳಿದಳು, ''ದೇವಸಭೆಯು ದೇವರಾಜನ ಅಧಿಕಾರ ಪೂರ್ಣವಾಗುವುದನ್ನು ಮಾತ್ರ ನೋಡಿತು. ನಾನು ಸ್ತ್ರೀ, ನನಗೆ ಪ್ರತ್ಯೇಕವಾದ ಅಧಿಕಾರವೊಂದಿದೆಯೆಂಬುದನ್ನು ಮಾತ್ರ ಗಮನಿಸಲಿಲ್ಲ.''

ದೇವಗುರುವು ವಿಷಣ್ಣನಾಗಿ ಹೇಳಿದನು, ''ಅಮ್ಮಾ, ಈ ಸಭೆಗೆ ನಾವು ಅಧ್ಯಕ್ಷನಾಗ ಬಾರದಾಗಿತ್ತು, ಯತ್ನವಿಲ್ಲ, ನಡೆದು ಹೋಯಿತು, ಚಿಂತಿಸಬೇಡ, ಈ ನಿರ್ಣಯದಿಂದ ನಿನಗೆ ಹಾನಿಯಾಗದಂತೆ ನೋಡಿಕೊಳ್ಳೋಣ. ನೀನು ಆತನ ಬಳಿಗೆ ಹೋಗು. 'ಸ್ತ್ರೀಯು

ದೇಶಾಂತರಗತನಾದ ಪುರುಷನಿಗಾಗಿ ಎಷ್ಟು ದಿನ ಕಾಯಬೇಕು ಎಂದು ಶಾಸ್ತ್ರವು ಹೇಳುವುದೋ, ಅಷ್ಟು ದಿನ ಕಾದು ನೋಡುವುದಕ್ಕೆ ಅಪ್ಪಣೆಯಾಗಬೇಕು' ಎಂದು ಆತನಿಗೆ ಹೇಳು. ಧರ್ಮಿಷ್ಠನಾದ ಆತನು ತಪ್ಪದೇ ಆಗಲೆನ್ನುವನು. ಅಷ್ಟರೊಳಗೆ ವಿಶ್ವ ಪ್ರಯತ್ನ ಮಾಡಿ ನಮ್ಮ ಇಂದ್ರನನ್ನು ಹುಡುಕಿಸೋಣ.''

ಶುಚಿಗೆ ಏನೋ ಮನಸ್ಸು ಹಗುರವಾದಂತಾಯಿತು. ಆದರೂ ಇನ್ನೂ ಬೆದರು ತಪ್ಪಲಿಲ್ಲ. ಕೇಳಿದಳು, ''ಒಂದು ವೇಳೆ ಆತನು ದುಡುಕಿದರೆ? ಇತ್ತ ಹುಡುಕಿದರೂ ಇಂದ್ರನು ಸಿಕ್ಕದೆ ಹೋದರೆ?'' ಬೃಹಸ್ಪತಿಯು ಧೀರಭಾವದಿಂದ ಹೇಳಿದನು: ''ಧರ್ಮವನ್ನು ಮೀರುವುದಕ್ಕೆ ಯಾರಿಗೂ ಸಾಧ್ಯವಿಲ್ಲ. ಧರ್ಮದಿಂದಲೇ ಎಲ್ಲವೂ ನಿಂತಿರುವುದು. ನೀನು ಸೌಭಾಗ್ಯವತಿ. ನಿಮ್ಮಂಥವರಿಗೆ ಬಂದ ಕಷ್ಟಗಳು ಬಹುಕಾಲವಿರುವುದಿಲ್ಲ. ಇರಲಿ ನೋಡೋಣ. ನಮ್ಮ ಕೈಯಲ್ಲಾಗದಾಗ ಚತುರ್ಮುಖನ ಮೊರೆಹೊಕ್ಕರಾಯಿತು'' ಎಂದನು.

ನೂತನ ದೇವೇಂದ್ರನು ವಿರಜಾದೇವಿಯೊಡನೆ, ಶಚೀದೇವಿಗಾಗಿ ಕಾಯುತ್ತಿದ್ದಾನೆ. ಆತನಿಗೆ ಆಶ್ಚರ್ಯ. ಹಿಂದಿನ ಇಂದ್ರನು ಹೊರಟುಹೋದಂದಿನಿಂದ ಕಣ್ಣೀರಿನಲ್ಲಿ ಕೈತೊಳೆಯುತ್ತ , ಅಂತಃಪುರವನ್ನು ಬಿಟ್ಟು ಈಚೆಗೇ ಬರದಿದ್ದವಳು, ಈ ದಿನ ಇಲ್ಲಿಗೆ ಬರುವಳೆ? ಆಕೆಯು ದೇವಸಭೆಯ ನಿರ್ಣಯವನ್ನು ನಿಜವಾಗಿ ಗೌರವಿಸುವಳೆ? ಆ ಗರ್ವಗಂಧಿನಿಯು ಹೊಸ ಇಂದ್ರನನ್ನು ಸೇವಿಸಲು ಒಪ್ಪುವಳೆ?

ವಿರಜಾದೇವಿಯೂ ಈ ಸುದ್ದಿಯನ್ನು ಕೇಳಿ ವಿಸ್ಮಿತಳಾಗಿದ್ದಾಳೆ. ಆಕೆಯು ಶಚೀಹೃದಯದ ಸ್ಥಿತಿಯನ್ನು ಊಹಿಸಬಲ್ಲವಳು. ಹೆಣ್ಣು ಹೆಣ್ತನವನ್ನು ಬಿಟ್ಟು, ತನ್ನ ಕೈ ಹಿಡಿದವನನ್ನು ಬಿಟ್ಟು ಪರಪುರುಷನನ್ನು ಓಲೈಸಲು ಸಿದ್ಧಳಾಗುವಳೆಂದು ನಂಬಲಾರಳು. ಅಲ್ಲದೆ ಆಕೆಗೆ ಇನ್ನೂ ಒಂದು ಯೋಚನೆ : ''ಎಷ್ಟೇ ಆಗಲಿ, ಪರಸ್ತ್ರೀಯಾದ ಶಚಿಯನ್ನು ತನ್ನ ಗಂಡನು ಕೈಹಿಡಿದದ್ದೇ ಆದರೆ ಆತನಿಗೆ ಈ ಪದವಿ, ಈ ಐಶ್ವರ್ಯಗಳು ಉಳಿಯುವವೆ? ಇಂತಹ ಯೋಚನೆ ತನ್ನ ಪತಿಗೆ ಬಂತೇಕೆ?'' ಅದನ್ನು ಕೇಳಿಯೂ ಬಿಟ್ಟಳು.

''ದೇವಾ, ಇದುವರೆಗೂ ತಮಗೆ ಇಲ್ಲದ ಸ್ತ್ರೀಚಾಪಲ್ಯವು ಇಂದೇಕೆ ಬಂತು?''

ಏನೋ ಯೋಚನೆಯಿಂದಿದ್ದ ನಹುಷನು ಬೆಚ್ಚಿ ಹೇಳಿದನು, ''ಆಂ? ಇಲ್ಲ ದೇವಿ, ನನಗೆ ಯಾವಾಗಲೂ ಸ್ತ್ರೀಚಾಪಲ್ಯವಿಲ್ಲದಲ್ಲ. ನಾನು ಅಧಿಕಾರ ಪೂರ್ಣವಾಗಿದೆಯೇ ಎಂದು ಪ್ರಸಂಗವಶವಾಗಿ ಕೇಳಿದೆ. ನನ್ನ ಅಭಿಪ್ರಾಯವಿದ್ದುದು, 'ನನ್ನ ಮರ್ತ್ಯತ್ವವನ್ನು ತೆಗೆದಿದ್ದೀರಾ? ನಾನು ಕೊನೆವರೆಗೂ ಇಂದ್ರನಾಗಿರುವೆನೆ?' ಎಂದು. ದೇವಗುರುಗಳು ಅದಕ್ಕೆ–'ಶಚೀಪತಿತ್ವವು ಲಭಿಸುವವರೆಗೂ ಅಧಿಕಾರವು ಪೂರ್ಣವಲ್ಲ' ಎಂದರು. ನಾನು ಮಾತಿನ ಭರದಲ್ಲಿ 'ಹಾಗಾದರೆ ಅಧಿಕಾರವನ್ನು ಪೂರ್ಣಮಾಡಿ ಕೊಡಿ' ಎಂದೆ. ಅದು ಇಷ್ಟೆಲ್ಲ ರಾದ್ಧಾಂತಕ್ಕಿಟ್ಟುಕೊಂಡಿದೆ.''

''ಶಚೀದೇವಿಯು ಹೇಳಿಕಳುಹಿರುವುದನ್ನು ನೋಡಿದರೆ, ಆಕೆಯು ಒಪ್ಪುವಂತಿದೆಯಲ್ಲ?''

''ಅದೇ ನನ್ನ ಧರ್ಮಸಂಕಟ. ಆಕೆಯು ಒಪ್ಪಿದರೂ ಕಾರ್ಯ ಕೆಟ್ಟಿತು. ಇದುವರೆಗೂ ದೇವಲೋಕದ ಅಪ್ಸರೆಯರನ್ನು—ಅವರು ಲಭ್ಯವಾಗಿದ್ದರೂ ಕಣ್ಣೆತ್ತಿ ನೋಡದ ನಾನು ಶಚಿಯನ್ನು ಹೇಗೆ ಒಪ್ಪಿಕೊಳ್ಳಲಿ? ಆಕೆಯು ಒಪ್ಪಿಕೊಳ್ಳದಿದ್ದರೆ, ದೇವಋಷಿ, ಪಿತೃಗಳು ನನ್ನನ್ನು ಹಂಗಿಸುವರಲ್ಲಾ, ಏನು ಮಾಡುವುದು?''

ವಿರಜಾದೇವಿಗೆ ತನ್ನ ಗಂಡನು ಮತ್ತೆ ಯಾವ ಸ್ತ್ರೀಯನ್ನೂ ಕಾಮುಕನಾಗಿ ನೋಡಲಿಲ್ಲವೆಂದು ಏನೋ ಒಂದು ಹೆಮ್ಮೆ . ಈ ಶಚೀಪ್ರಸಂಗವು ಎರಡು ಅಲಗಿನ ಕತ್ತಿಯಾಗಿದ್ದು, ಮುಂದೇನಾಗುವುದೋ ಎಂದು ದಿಗಿಲು. ಆದರೂ ತನ್ನ ಗಂಡನು ಮನಃಪೂರ್ವಕವಾಗಿ ಅವಳನ್ನು ಬಯಸಿಲ್ಲವೆಂದು ಒಂದು ಸಮಾಧಾನ.

ಅನಿತು ವೇಳೆಯಲ್ಲಿ ಶಚೀದೇವಿಯೂ ಬಂದಳು. ಇಂದ್ರಾಣಿಯೆಂದು ಆಡಂಬರವೇನೂ ಇಲ್ಲ. ಶಾಂತಿದೂತನಂತೆ ಬಿಳಿಯ ವಸ್ತ್ರವನ್ನು ಉಟ್ಟಿದ್ದಾಳೆ. ಕೆನೆಯ ಬಣ್ಣದ ರವಕೆಯನ್ನು ಧರಿಸಿದ್ದಾಳೆ. ನಡುವಿನಲ್ಲಿ ಒಂದು ಸಿಂಹ ಮೇಖಲೆ ಇದೆ. ಕಿವಿಯಲ್ಲಿರುವ ವಜ್ರದ ಓಲೆಗಳು ಪುನರ್ವಸು ಪುಂಜದ ಯೋಗತಾರೆಯಂತೆ ಬೆಳಗುತ್ತಿವೆ. ಕೊರಳಲ್ಲಿರುವ ತಾಳಿಯು ತನ್ನ ಸುತ್ತಲೂ ಇರುವ ಜೀವರತ್ನಗಳಿಗಿಂತ ಪ್ರಕಾಶವಾಗಿ ಮೆರೆಯುತ್ತಿದೆ. ತಲೆಯ ಮೇಲೆ ಧರಿಸಿರುವ ರತ್ನಕಿರೀಟವೂ, ಹಣೆಯ ಮೇಲಿರುವ ಜೀವರತ್ನವೂ, ಹೊದ್ದಿರುವ ವಿದ್ಯುನ್ಮಾಲಾ ಸುಂದರವಾದ ತೆಳುಮೋಡದಂತಿರುವ ಹೊದಿಕೆಯೂ ಆಕೆಯ ಅಂತಸ್ತನ್ನು ಉದ್ಘೋಷಿಸುತ್ತವೆ.

ನಹುಷನು ಆಕೆಯನ್ನು ನೋಡಿ ಆಶ್ಚರ್ಯಪಟ್ಟನು. ಉಜ್ವಲವಾದರೂ ಶಾಂತವಾದ ಆ ರೂಪರಾಶಿಯನ್ನು, ಆ ಅಂಗಸೌಷ್ಠವವನ್ನು, ಮಿತಿಯನ್ನು ಯಾವ ರೀತಿಯಲ್ಲಿಯೂ ಮೀರದಂತೆ, ಜೋಡಿಸಿಟ್ಟಿರುವಂತೆ, ಮೆರೆಯುತ್ತಿರುವ ಅಂಗಾಂಗಗಳ ಸೌಭಾಗ್ಯವನ್ನು ನೋಡಿ ವಿಸ್ಮಿತನಾದನು. ಮನುಷ್ಯಲೋಕದಲ್ಲಿರಲಿ, ದೇವಲೋಕದಲ್ಲಿಯೂ ಅಂತಹ ರೂಪಸೌಭಾಗ್ಯಸಂಪನ್ನೆಯಿನ್ನೊಬ್ಬಳಿಲ್ಲ. ರಂಭೆ, ಮೇನಕೆ, ಊರ್ವಶಿ, ತಿಲೋತ್ತಮೆ ಯಾರೂ ಆಕೆಯ ಬಳಿಯೂ ನಿಲ್ಲುವಂತಿಲ್ಲ. ಆತನಿಗೆ ಎನ್ನಿಸಿತು, 'ಹೌದು, ಈ ಪುಣ್ಯವಂತೆಯನ್ನು ಪಡೆಯದೆ ಇಂದ್ರಾಧಿಕಾರವು ಯಾವ ರೀತಿಯಲ್ಲೂ ಪರಿಪೂರ್ಣವಲ್ಲ. ಚೆನ್ನಾಗಿ ಸವಾರಿಯನ್ನು ಬಲ್ಲವನು, ಸೊಗಸಾದ ಕುದುರೆಯನ್ನು ನೋಡಿ 'ಇದನ್ನು ವಿಹರಿಸದಿದ್ದರೆ ನಾನು ಸವಾರಿಯನ್ನು ಕಲಿತೇನು ಫಲ' ಎಂಬಂತೆ, ಆ ದಿವ್ಯ ಸ್ತ್ರೀಯನ್ನು ನೋಡಿದನು. ಆತನ ಮನಸ್ಸು ಒಮ್ಮೆ ತೂನೆಯಿತು. ಕೂಡಲೇ ಆ ಮನಸ್ಸು ಧರ್ಮದತ್ತ ತಿರುಗಿ, ಧರ್ಮಪತ್ನಿಯನ್ನು ನೋಡುತ್ತ ''ಹೌದು, ನದಿಯಲ್ಲಿ ಸಮುದ್ರದಷ್ಟು ನೀರಿಲ್ಲ. ಆದರೂ ಬಾಯಾರಿದವನಿಗೆ ಬೇಕಾದುದು ನದಿಯ ನೀರೇ!'' ಎಂದುಕೊಂಡನು.

ಶಚೀದೇವಿಯು ಮುಂಬಂದು ಇಂದ್ರನಿಗೆ ಬಗ್ಗಿ ಪ್ರಣಾಮ ಮಾಡಿದಳು. ವಿರಜಾದೇವಿಯತ್ತ ತಿರುಗಿ ಪ್ರಣಾಮ ಮಾಡುವುದರೊಳಗಾಗಿ ಆಕೆಯೇ ಬಂದು ಶಚೀದೇವಿಯನ್ನು ಆಲಿಂಗಿಸಿ, ''ದೇವಿಗೆ ವಿಜಯವಾಗಲಿ! ನಿನ್ನನ್ನು ಪೂಜಿಸಿ, ನಿನ್ನ ಕೃಪೆಯಿಂದ ದೊಡ್ಡವರಾದವರು ನಾವು. ನಮಗೆ ನೀನು ಆಶೀರ್ವಾದ ಮಾಡಬೇಕು

ತಾಯೀ'' ಎಂದು ವಿನಯದಿಂದ ತನ್ನ ಜೊತೆಯಲ್ಲಿ ತನ್ನ ಆಸನದ ಮೇಲೆ ಕುಳ್ಳಿರಿಸಿಕೊಂಡಳು. ಇಂದ್ರನು ಆ ವೇಳೆಗೆ ಆಸನದಲ್ಲಿ ಮಂಡಿಸಿರುವುದನ್ನು ನೋಡಿ ಶಚಿಯು ತಾನೂ ಕುಳಿತಳು.

ಶಚಿಯು ತಾನೇ ಮೊದಲು ಮಾತನಾಡಿದಳು : ''ದೇವೇಂದ್ರನಿಗೆ ವಿಜಯವಾಗಲಿ. ದೇವಸಭೆಯು ನಾನು ಇಂದ್ರನನ್ನು ಕಾಯಾ ವಾಚಾ ಮನಸಾ ಸೇವಿಸಬೇಕೆಂದು ನಿರ್ಣಯಮಾಡಿದೆ. ಆ ಸಭೆಯು ಮಾಡಿದ ನಿರ್ಣಯವೆಂದರೆ ಅದು ನಮ್ಮೆಲ್ಲರಿಗೂ ಶಿರೋಧಾರ್ಯವಾದುದು. ಆದರೆ ಒಂದು ಅಡ್ಡಿ ಇದೆ. ನಾನು ಇಂದ್ರನನ್ನು ಪತಿಯೆಂದು ಸೇವಿಸಿದ್ದೇನೆ. ಆತನು ಹೊರಟುಹೋಗುವಾಗ ನನಗೂ ಹೇಳದೆ ಹೊರಟುಹೋಗಿದ್ದಾನೆ. ಆದ್ದರಿಂದ ಧರ್ಮಶಾಸ್ತ್ರದಲ್ಲಿ ದೇಶಾಂತರಗತನಾದ ಪತಿಯನ್ನು ಪತ್ನಿಯಾದವಳು ಎಷ್ಟುದಿನ ನಿರೀಕ್ಷಿಸಬೇಕೆಂದು ಹೇಳಿದೆಯೋ ಅಷ್ಟು ದಿನ ನಿರೀಕ್ಷಿಸಲು ಅಪ್ಪಣೆಯಾಗಬೇಕು.''

ನಹುಷನು ಆಕೆಯ ಮಾತಿನಲ್ಲಿರುವ ಅರ್ಥವನ್ನು ಪೂರ್ಣವಾಗಿ ಗ್ರಹಿಸಿದನು. ಆಕೆಯು ಈಗ ಮಾಡುವುದು ಪತಿನಿರೀಕ್ಷೆ, ಒಪ್ಪದಿದ್ದರೆ ಧರ್ಮದ್ರೋಹ. ಒಪ್ಪಿದರೆ ಆತ್ಮದ್ರೋಹ. ಆಕೆಯ ನಿರೀಕ್ಷೆಯು ಸಫಲವಾದರೂ ನಮಗೆ ಇಂದ್ರಪದವಿಯಿಲ್ಲ. ವಿಫಲವಾದರೆ ನಾವಾಗಿ ಕಳೆದುಕೊಳ್ಳಲು ದಾರಿಮಾಡಿಕೊಂಡಂತಾಯಿತು ಅಂತೂ ಆಕೆಯು ಬಂದು, 'ನೀನು ಇಂದ್ರನಾಗಿರುವುದು ಕೆಲವುದಿನ ಮಾತ್ರ!' ಎಂದು ಕಾಲಕ್ಕೆ ಅಂಚು ಕಟ್ಟಿಟ್ಟಂತಾಯಿತು ಎಂದು ವಿಷಣ್ಣನಾಗಿ ಕರದಲ್ಲಿ ಕಪೋಲವನ್ನಿಟ್ಟು, ಚಿಂತಿಸಿದನು.

'ಈ ದೇವತೆಗಳು ನಮ್ಮನ್ನು ಇಲ್ಲಿ ಉಳಿಸುವುದಿಲ್ಲ. ಏನಾದರೂ ಮಾಡಿ ಉರುಳಿಸಿಯೇ ಉರುಳಿಸುವರು. ಅಷ್ಟರೊಳಗೆ ಹಿಂದಿನ ಇಂದ್ರನು ಮಾಡದಿದ್ದುದು ಏನಾದರೂ ಮಾಡಿ, ನಾನೇ ಈ ಇಂದ್ರಪದವಿಯನ್ನು ಬಿಟ್ಟು, ಬಿಡೋಣ.'

ಅರಸನು ಒಂದು ಗಳಿಗೆ ನಿರುತ್ತರನಾಗಿದ್ದು ಹೇಳಿದನು, ''ಶಚಿದೇವಿ, ಈ ಇಂದ್ರನು ಧರ್ಮವಿರೋಧಿಯಲ್ಲ. ಅವರವರು ಧರ್ಮವೆಂದು ಒಪ್ಪಿಕೊಂಡಿರುವುದನ್ನೇ ಪಾಲಿಸಬೇಕಾದುದು ಇಲ್ಲಿಯ ಧರ್ಮ. ಅದರಿಂದ ನೀನು ಪತಿಯೆಂದು ಗ್ರಹಿಸಿರುವ ಇಂದ್ರನನ್ನು ಪ್ರತೀಕ್ಷಿಸಲು ಕಾಲಾವಧಿಯು ನಿನಗೆ ಲಭಿಸಿರುವುದು–ಅಷ್ಟೇ ಅಲ್ಲ, ನಿನ್ನ ಪತಿಯನ್ನು ನೀನು ಹುಡುಕಲೂ ಅಧಿಕಾರವುಂಟು. ಈ ವಿಷಯದಲ್ಲಿ ನಮ್ಮಿಂದ ಆಗಬೇಕಾಗಿರುವುದು ಏನಾದರೂ ಇದ್ದರೆ ಸಂಕೋಚವಿಲ್ಲದೆ ಹೇಳಬೇಕು.''

ಶಚಿಯು ಈ ಉತ್ತರಕ್ಕೆ ಸಿದ್ಧಳಾಗಿರಲಿಲ್ಲ. ನಹುಷನು 'ಅರ್ಥಪರಃ ಕಾಮಚಪಲಃ' ಅದರಿಂದ ತನ್ನನ್ನು ಬಯಸಿದನು ಎಂದಾಕೆ ತಿಳಿದಿದ್ದಳು. ತಾನು ಎದುರಿಗೆ ಬಂದಿದ್ದರೂ ಮೆಚ್ಚಿಕೆಯ ಭಾವದಿಂದ ಒಮ್ಮೆ ತನ್ನತ್ತ ದೃಷ್ಟಿಯನ್ನು ಹಾಯಿಸಿದ್ದರೂ, ಸಮಚಿತ್ತನಾಗಿರುವುದನ್ನು ನೋಡಿ ಆಶ್ಚರ್ಯವಾಯಿತು. ಸಮ್ಮುಖದಲ್ಲಿ ಮಾನವನಂತ ಕಂಡರೂ ತನ್ನ ಮನೋನ್ನತಿಯಿಂದ ಮಹಾನುಭಾವನಾಗಿ ತೋರಿದನು. ಋಷಿಪತ್ನಿ ಅಹಲ್ಯೆಗಾಗಿ ಬಾಯಿಬಿಟ್ಟು, ಅಲ್ಲದೆ, ಹಿಂದೊಮ್ಮೆ ತನ್ನ ಅಧಿಕಾರವನ್ನು ಉಳಿಸಿಕೊಳ್ಳಲು ಏನು ಬೇಕಾದರೂ ಮಾಡುವುದಕ್ಕೆ ಸಿದ್ಧನಾಗಿದ್ದ ತನ್ನ ಪತಿಯೊಡನೆ ಆತನನ್ನು

ಹೋಲಿಸುವಂತಾಯಿತು. 'ಅದೆಷ್ಟು ಧರ್ಮಪರಾಯಣ!' ಈ ಮಹಾಪುರುಷನನ್ನು ಈ ಪದವಿಯಿಂದ ಉರುಳಿಸುವ ದೌರ್ಭಾಗ್ಯ ನನ್ನ ಹಣೆಯಲ್ಲಿ ಬರೆದಿದೆಯೋ ಏನೋ?' ಎಂದು ಚಿಂತಿಸಿ ಹೇಳಿದಳು :

''ದೇವಾ, ಇಷ್ಟು ಬೇಗ ನನ್ನ ಇಂದ್ರನು ಸಿಕ್ಕು ಹೊರಬರುವ ಸಂಭವವಿಲ್ಲ. ಏಕೆಂದರೆ ತಮಗೆ ಈಗ ದೇವಸಭೆಯು ಕೊಟ್ಟಿರುವ ಪದವಿಯು ಇಷ್ಟು ಕಾಲವಾದರೂ ನಡೆಯಲೇಬೇಕೆಂಬ ನಿಯಮವುಂಟಾಗಿ, ಅದುವರೆಗೂ ಯಾರೂ ತಮ್ಮನ್ನು ಏನೂ ಮಾಡಲಾಗುವುದಿಲ್ಲ. ಅದರಿಂದ ನಾವು ಕಾಲಯಾಪನೆ ಮಾಡಲೇಬೇಕು.''

''ಇಲ್ಲ , ಕಾಲಯಾಪನೆ ಮಾಡಬೇಕಾಗಿಲ್ಲ ನನ್ನದೊಂದು ಕೋರಿಕೆಯಿದೆ. ಇದು ಪೂರೈಸಿದರೆ ನಾನಾಗಿ ಇಂದ್ರಪಟ್ಟವನ್ನು ಬಿಟ್ಟುಕೊಡಲು ಸಿದ್ಧನಾಗಿದ್ದೇನೆ.''

ಶಚಿಗೆ ಅರ್ಥವಾಗಲಿಲ್ಲ, ''ಆ ಕೋರಿಕೆಯನ್ನು ಹೇಳಬಹುದೇ?'' ಎಂದಳು.

ಅರಸನು ಹೇಳಿದನು, ''ಇಂದ್ರಪತ್ನೀ, ಹಿಂದಿನ ಇಂದ್ರನು ಮಾಡದೇಬಿಟ್ಟಿದ್ದ ಕೆಲಸವೇನು ಹೇಳಿ, ಅದನ್ನು ನಾನು ಮಾಡಿ ಇಂದ್ರತ್ವವನ್ನು ಬಿಟ್ಟು ವಾನಪ್ರಸ್ಥನಾಗುವೆನು.''

ಶಚಿಯು ಬೆಚ್ಚಿದಳು. ''ನಾನು ಕೇಳುತ್ತಿರುವುದು ನಿಜವೇ?'' ಎನ್ನಿಸಿತು. ಅಲ್ಲದೆ, ನಹುಷನು ಮೂರನೆಯಾಶ್ರಮವನ್ನು ಪಡೆಯುವುದಾದರೆ, ವಿರಜಾದೇವಿಯು ಒಪ್ಪುವಳೇ? ಎನ್ನಿಸಿ ಆಕೆಯ ಮುಖವನ್ನು ನೋಡಿದಳು. ಆಕೆಯು ಮುಗುಳುನಗೆಯಿಂದ ''ಹೌದು. ಅವರು ಮಾಡಿದುದು ನನಗೂ ಒಪ್ಪಿಗೆ'' ಎಂದುಬಿಟ್ಟಳು.

ಶಚಿಯು ಯೋಚಿಸಿ ಮೆಲ್ಲಗೆ ಹೇಳಿದಳು, ''ಸಪ್ತರ್ಷಿ ಶಿಬಿಕಾ ಎಂದು ಒಂದುಂಟು. ಅದು ಇಂದ್ರನಿಗೆ ಮಾತ್ರ ಸಲ್ಲುವ ಮರ್ಯಾದೆ. ಅದರಲ್ಲಿ ವಿಶೇಷವೆಂದರೆ, ಮನ್ವಂತರದ ವರೆಗೂ ವೇದರಕ್ಷಣಕ್ಕಾಗಿ ದೀಕ್ಷಿತರಾಗಿರುವ ಸಪ್ತರ್ಷಿಗಳು ಬಂದು, ಒಂದು ಪಲ್ಲಕ್ಕಿಯಲ್ಲಿ ಇಂದ್ರನನ್ನು ಕುಳ್ಳಿರಿಸಿ ತಾವು ಅದರ ವಾಹಕರಾಗುವರು. ಆದರೆ ನಿತ್ಯೇಂದ್ರನು ಇದುವರೆಗೆ ಹಾಗೆ ಕುಳಿತುದಿಲ್ಲ. ಸಪ್ತರ್ಷಿಗಳ ಯೋಗ್ಯತೆಯನ್ನೂ ಗೌರವವನ್ನೂ ಗಮನಿಸಿ, ವರ್ಷಕ್ಕೊಂದು ಸಲ ಈ ಪಲ್ಲಕ್ಕಿಯನ್ನೂ ಅವರನ್ನೂ ಪೂಜಿಸಿ, ಆ ಪಲ್ಲಕ್ಕಿಯನ್ನು ಏರಿದಂತೆ ಮಾಡಿ, ಅಲ್ಲಿಗೇ ಬಿಡುವನು. ಅದಕ್ಕಿಂತ ಹೆಚ್ಚಿನ ಗೌರವವು ಇಂದ್ರನಿಗಿಲ್ಲ.''

''ಎಂದರೆ, ಐರಾವತ, ಉಚ್ಚೈಶ್ರವ, ಇವುಗಳಿಗಿಂತ, ಇಂದ್ರನ ಸಿಂಹಾಸನಕ್ಕಿಂತ ಅದು ಹೆಚ್ಚಿನ ಮರ್ಯಾದೆಯೆಂದು ತಮ್ಮ ಅಭಿಪ್ರಾಯವೆ?''

''ಹೌದು. ಸಂದೇಹವಿಲ್ಲ.''

''ಆಯಿತು ದೇವಿ, ತಾವು ಹೇಳುವ ಈ ಶಿಬಿಕಾಪೂಜೆಯು ನಡೆಯುವುದು ಯಾವಾಗ?''

''ಉತ್ತರಾಯಣ ಸಂಕ್ರಮಣದ ಮರುದಿನ.

''ಸರಿ. ಆ ದಿನ ನಾವು ಶಿಬಿಕಾಪೂಜೆಯನ್ನು ಮಾಡಿ ಶಿಬಿಕಾರೋಹಣವನ್ನು ಮಾಡುವೆವು. ಆ ವೇಳೆಗೆ ಇಂದ್ರನು ಪರಿಶುದ್ಧನಾಗಿ ಬರಲಿ. ಸಾಧ್ಯವಾದರೆ ಅನಂತರ ನಾವೂ ಇಂದ್ರಾಭಿಷೇಕದಲ್ಲಿ ಭಾಗಿಗಳಾಗುವೆವು.''

ಶಚಿಯು ಏನೂ ಉತ್ತರಕೊಡಲಾರದೇ ಹೋದಳು. ಆದರೆ ಸುಮ್ಮನಿರುವುದೆಂತು? ಪೆಚ್ಚು ನಗೆ ನಗುತ್ತ, "ದೇವತ್ವಕ್ಕಿಂತ ಮನುಷ್ಯತ್ವವು ಇಂದು ಶ್ರೇಷ್ಠವಾಯಿತು," ಎಂದಳು.

ನಹುಷನು, ಸಂತೋಷದಿಂದ ಮುಖವು ಒಂದು ಹರಿವಾಣದಷ್ಟಾಗುತ್ತಿರಲು, "ಏನು, ಏನು?" ಎಂದು ಕೇಳಿದನು.

ಶಚಿಯು ಸಹಜವಾಗಿ ಸತ್ಯವನ್ನಾಡುವ ಮಗುವಿನಂತೆ ನುಡಿದಳು, "ದೇವ, ಇದುವರೆಗೂ ದೇವತೆಗಳು ಮಾನವರಿಗೆ ವರಗಳನ್ನು ಕೊಡುತ್ತಿದ್ದರು. ಈಗ ಮಾನವರು ದೇವತೆಗಳಿಗೆ, ಅದೂ ಇಂದ್ರದಂಪತಿಗಳಿಗೆ ವರವನ್ನು ಕೊಡುವಂತಾಯಿತು."

ಅರಸನು, "ಹಾಗೆಯೇ ದೇವಿ? ನಮಗೆ ಬೇಡವಾದುದನ್ನು ಬಿಡುವುದು ಇತರರಿಗೆ ಕೊಡುವ ವರವೆಂತಾದೀತು? ಗಾರ್ಹಸ್ಥ್ಯಕ್ಕಿಂತ ವಾನಪ್ರಸ್ಥವು ಹೆಚ್ಚೆಂದು ಶಾಸ್ತ್ರವು ಹೇಳುತ್ತದೆ. ಪರಿಗ್ರಹಕ್ಕಿಂತ ತ್ಯಾಗವು ಹೆಚ್ಚು. ಪದವಿಗಳಲ್ಲೆಲ್ಲಾ ಅನಧಿಕವಾದ ಇಂದ್ರಪದವಿಯು ಲಭಿಸಿತು. ಅದರಲ್ಲಿಯೂ ಇಂದ್ರನಿಗಿಂತ ಹೆಚ್ಚಾಗುವ ಉಪಾಯವನ್ನು ತಿಳಿಸಿಕೊಟ್ಟೆ. ಅಲ್ಲಿಗೆ ಪರಿಗ್ರಹವು ಪೂರ್ಣವಾಯಿತು. ಇನ್ನು ಉಳಿದಿರುವುದು ತ್ಯಾಗ, ಅಷ್ಟೇ ತಾನೆ?" ಎಂದು ಸಹಜ ಶುದ್ಧವಾಗಿ ಆಡಿದನು.

ಶಚಿಯು ಆ ಅಪಶುನತ್ವವನ್ನು ಕಂಡು ಚಕಿತಳಾದಳು. 'ಭೋಗವೆಂದರೆ ಅಂಟಿಗಿಂತಲೂ ಹೆಚ್ಚಾಗಿ ಅಂಟಿಕೊಳ್ಳುವ ದೇವತ್ವಕ್ಕಿಂತಲೂ ತ್ಯಾಗವನ್ನು ಆರಾಧಿಸುವ ಈ ಮನುಷ್ಯತ್ವವು ಹೆಚ್ಚು ಎನ್ನಬೇಕು ಅಥವಾ ಇದು ಈತನ ಧರ್ಮಾಸಕ್ತಿಯ ಫಲವೋ? ಧರ್ಮವೃಕ್ಷವು ಸಾಫಲ್ಯವಾಗಿ ಬೆಳೆದರೆ, ತ್ಯಾಗವೆನ್ನುವ ಮಹಾಫಲವನ್ನು ಕಾಯುವುದೇನು? ಬಹುಶಃ ಆ ಮಾತನ್ನು ಒಪ್ಪಿಕೊಳ್ಳಲು—ಭೋಗಕ್ಕಿಂತ ತ್ಯಾಗವು ಹೆಚ್ಚೆಂದು ಒಪ್ಪಿಕೊಳ್ಳುವುದಕ್ಕೂ ಚಿತ್ತಶುದ್ಧಿಯು ಬೇಕೋ ಏನೋ' ಎಂದು ಚಿಂತಿಸುತ್ತಿರುವಾಗ, ವಿರಜಾದೇವಿಯು, ಮಂಗಳ ದ್ರವ್ಯಗಳನ್ನೂ ಫಲ–ತಾಂಬೂಲಗಳನ್ನೂ ಇಟ್ಟಿದ್ದ ರತ್ನದ ತಟ್ಟೆಯನ್ನು ತಂದು ಶಚೀದೇವಿಗೆ ಒಪ್ಪಿಸಿದಳು. ಅದೆಲ್ಲವನ್ನೂ ನೋಡಿ, ಶಚಿಗೆ ಆನಂದವು ತಾನೇ–ತಾನಾಗಿ, ಕಣ್ಣಲ್ಲಿ ನೀರಾಗಿ ಹರಿಯಿತು. ವಿರಜಾದೇವಿಯನ್ನು ಬಾಚಿ ತಬ್ಬಿಕೊಂಡು, "ತಂಗೀ, ನಿನ್ನವೈಭವವು ಅಖಂಡವಾಗಿರಲಿ" ಎಂದು ಆಶೀರ್ವಾದ ಮಾಡಿ, ಇಂದ್ರನಿಗೆ ಮತ್ತೆ ಬಗ್ಗಿ ನಮಸ್ಕಾರ ಮಾಡಿ ಹೊರಟುಹೋದಳು.

ನಹುಷೇಂದ್ರನು ದರ್ಶನ–ಮಂದಿರದಲ್ಲಿ ದೇವಗುರುಗಳೊಡನೆ ಮಾತನಾಡುತ್ತ ಕುಳಿತಿದ್ದಾನೆ. ಅರಸನು ಕೇಳಿದನು, "ಅದೇನು? ನೀವು ದೇವತೆಗಳು ಸಪ್ತರ್ಷಿಗಳನ್ನು ಅಷ್ಟು ಗೌರವಿಸುವುದು?"

ದೇವಗುರುವು ಹೇಳಿದನು, "ಮಿಕ್ಕವರು ಗುರುಮುಖದಿಂದ ಅಧ್ಯಯನ ಮಾಡಿ ತಿಳಿದುಕೊಂಡರೂ, ಚಿತ್ರಾಗ್ನಿಯಂತೆ ಇರುವ ಬ್ರಹ್ಮವಿದ್ಯೆಯು ಸಪ್ತರ್ಷಿಗಳಲ್ಲಿ ಯಾವಾಗಲೂ ಜ್ವಾಲಮಾಲಾ ಸುಂದರವಾಗಿರುವುದು. ಇತರರಿಗೆ ಅಲಭ್ಯವಾದುದರಿಂದ ಖಿಲವೆನ್ನಿಸಿಕೊಂಡಿರುವ ವೇದಭಾಗವು ಅವರಿಗೆ ತಿಳಿದಿರುವುದು. ಇತರರು ತಪಸ್ಸಿನಿಂದಲೂ ಅರ್ಜಿಸಲಾರದ ಸ್ಥಿತಿಯು ಅವರಿಗೆ ಸಹಜವಾಗಿ ಸಿದ್ಧವಾಗಿರುವುದು. ಇದನ್ನು ಬಲ್ಲ ದೇವತೆಗಳು ಅವರನ್ನು ಗೌರವಿಸುವುದನ್ನು ಬಿಟ್ಟು ಇನ್ನೇನು ಮಾಡಬಲ್ಲರು?"

''ದೇವಗುರುಗಳು ದಯಮಾಡಿ ನಮಗೆ ಸಪ್ತಋಷಿಗಳ ದರ್ಶನವನ್ನು ಮಾಡಿಸಬೇಕು. ಮತ್ತು ನಾವು ಅವರೊಡನೆ ಸ್ವಂತಕ್ಕಾಗಿ ಕೆಲವು ಮಾತುಗಳನ್ನು ಆಡಲು ಅಪ್ಪಣೆ ಕೊಡಬೇಕು.''

ಬೃಹಸ್ಪತಿಯು ''ಆಗಬಹುದು'' ಎಂದು ಆಸನಸ್ಥನಾಗಿ ಧ್ಯಾನದಲ್ಲಿ ಕುಳಿತನು. ಸಪ್ತಋಷಿಗಳಿಗಾಗಿ ಆಸನಗಳೂ ಮಧುಪರ್ಕಾದಿ ಪೂಜಾಸಾಧನಗಳೂ ಸಿದ್ಧವಾದವು. ಉತ್ತರ ಕ್ಷಣದಲ್ಲಿಯೇ ದೇವಗುರುವು ಜಗ್ಗನೆದ್ದು, ''ಇದೋ ಸಪ್ತ–ಋಷಿಗಳು ದಯಮಾಡಿಸುತ್ತಿರುವರು'' ಎಂದನು. ಅರಸನೂ ಎದ್ದನು. ದೇವಾಚಾರ್ಯನು ಅವರಿಗೆಲ್ಲ ಇಂದ್ರನ ಪರವಾಗಿ ಮಧುಪರ್ಕಾದಿ ಪೂಜೆಯನ್ನೊಪ್ಪಿಸಿದನು. ಅವರೆಲ್ಲ ಪ್ರಸನ್ನರಾಗಿ, ''ದೇವರಾಜನಿಗೆ ನಮ್ಮಿಂದ ಆಗಬೇಕಾದ ಕೆಲಸವೇನು? ಲೋಕಲೋಕಗಳೂ ಕ್ಷೇಮವಾಗಿವೆಯಷ್ಟೆ?'' ಎಂದು ಕುಶಲ ಪೂರ್ವಕವಾಗಿ ವಿಚಾರಿಸಿದರು.

''ತಮ್ಮೆಲ್ಲರ ಅನುಗ್ರಹದಿಂದ, ಚ್ಯವನ ಗುರುಕೃಪೆಯಿಂದ ಕ್ಷೇಮವಿದೆ. ಈಗ ನಡೆದಿರುವ ನಡೆವಳಿಕೆಗಳಿಂದ ಎಂದಿದ್ದರೂ ಈ ಇಂದ್ರಪದವಿಯು ತಪ್ಪಿಯೇ ತಪ್ಪಬೇಕು. ಆದರೆ ಧರ್ಮಾಯತ್ತವಾಗಿ ಬಂದುದು ದೈವಾಯತ್ತವಾಗಿ ತಪ್ಪಿತೆನ್ನುವುದಕ್ಕಿಂತ ನಾನೇ ಸ್ವಾಯತ್ತವಾಗಿ ಇದನ್ನು ತ್ಯಜಿಸಿ ಧರ್ಮವೃದ್ಧಿಯಾಗುವಂತೆ ಮಾಡಿಕೊಳ್ಳಬೇಕು ಎಂದಿರುವೆನು. ಈ ಪದವನ್ನು ತ್ಯಜಿಸುವುದಕ್ಕಿಂತ ಮುಂಚೆ ಅತೀಂದ್ರವಾದ ಕಾರ್ಯವನ್ನು ಮಾಡಬೇಕೆಂದಿರುವೆನು. ಸಪ್ತರ್ಷಿ ಶಿಬಿಕೆಯು ಇಂದ್ರನಿಗೆ ಸಲ್ಲುವ ಅತ್ಯಂತ ಗೌರವಗಳಲ್ಲಿ ಒಂದು ಎಂದು ಕೇಳಿದೆನು. ಅದನ್ನು ಆತನು ತೇಜೋಹಾನಿಯಾದೀತೆಂದು ಹೆದರಿ ಆರೋಹಿಸುವದಿಲ್ಲವಂತೆ. ಯಾವ ಕಾರ್ಯವನ್ನು ಮಾಡಿದರೂ ಅದರಿಂದ ತೇಜೋಹಾನಿಯಾಗದೆ ವೃದ್ಧಿಯೇ ಆಗುವಂತೆ ಮಾಡಿಕೊಳ್ಳುವ ಸಾಧನವೊಂದುಂಟು ಎಂದು ಕೇಳಿರುವೆನು. ಅದನ್ನು ನಾವು ದಯವಿಟ್ಟು ಅನುಗ್ರಹಿಸಬೇಕು.''

ಭರದ್ವಾಜರು ಹೇಳಿದರು —''ಹೌದು, ನೀನು ಸಪ್ತರ್ಷಿ ಶಿಬಿಕಾರೋಹಣ ಮಾಡಬೇಕೆಂದಿರುವೆ. ಅದಕ್ಕಾಗಿ ಮಾಡಬೇಕಾದ ಯಜ್ಞವೆಂದರೆ ವಿಶ್ವಜಿದ್ಯಜ್ಞ. ನಿನ್ನ ಸರ್ವಸ್ವವನ್ನೂ ನಿನ್ನಲ್ಲಿರುವ ಕರ್ತೃಭೋಕ್ತೃ ಶಕ್ತಿಯನ್ನೂ ಸರ್ವವ್ಯಾಪಕನಾದ ಮಹಾವಿಷ್ಣುವಿಗೆ ಒಪ್ಪಿಸುವುದೇ ವಿಶ್ವಜಿದ್ಯಜ್ಞ. ಅದಕ್ಕಾಗಿ ಅಹಂಕಾರಣವಾದ ಅಭಿಮಾನವನ್ನು ತ್ಯಜಿಸಬೇಕು. ಶತ್ರುಮಿತ್ರ ಭೇದವನ್ನು ಬಿಡಬೇಕು. ಇದಿಷ್ಟು ಶಿಬಿಕಾರೋಹಣದ ಪೂರ್ವಸಿದ್ಧತೆ. ಅಹಂಕಾರವನ್ನು ಅರ್ಥಾತ್ ರಾಗದ್ವೇಷವನ್ನು ಬಿಡಲಾರದೆ ಆ ಇಂದ್ರನು ಈ ಶಿಬಿಕಾರೋಹಣವೇ ಬೇಡವೆಂದನು. ನೀನು ಇದನ್ನೆಲ್ಲ ಮಾಡಲು ಸಿದ್ಧನಾಗಿರುವೆಯಾ?''

''ತಮ್ಮಿಂದ ಅಪ್ಪಣೆಯಾದುದನ್ನು ಮಾಡಲು ನಾನು ಸಿದ್ಧವಾಗಿದ್ದೇನೆ.''

''ಆಗಲಿ. ನೀನು ಶಿಬಿಕಾರೋಹಣವನ್ನು ಮಾಡಬಹುದು.''

''ತಾವು ಅಪ್ಪಣೆ ಕೊಟ್ಟುದಕ್ಕಾಗಿ ನಾನು ಕೃತಜ್ಞನಾಗಿರುವೆನು. ಆದರೆ ಆರೋಹಿಸಿದ ಮೇಲೆ, ಶಿಬಿಕೆಯಲ್ಲಿರುವಾಗ ಹೇಗೆ ಇರಬೇಕು?''

"ಆಗಲಿ ಕೇಳು. ಮಹಾವಿಷ್ಣುವು ಅಣುರೇಣು–ತೃಣಕಾಷ್ಠಗಳನ್ನು ವ್ಯಾಪಿಸಿರುವನು. ಅಂಥವನ ಸಗುಣ ಮೂರ್ತಿಯನ್ನು ನೀನೀಗ ಧ್ಯಾನಿಸುತ್ತಿರುವಿಯಷ್ಟೆ? ಧರ್ಮದಲ್ಲಿ ಅದೇ ಸರಿ. ಆದರೆ, ಈ ಶಿಬಿಕಾರೋಹಣವು ಇಂದ್ರತ್ವದ ಪರಮಾವಧಿ. ಅಲ್ಲಿ ಸಗುಣಮೂರ್ತಿಯು ಕರಗಿ ನಿರ್ಗುಣವಾಗಬೇಕು. ಆತನನ್ನು ನೋಡುವ ಇಂದ್ರಿಯಗಳೂ ಕರಗಿಹೋಗಬೇಕು. ಅಥವಾ ಶಾಸ್ತ್ರದ ಮಾತಿನಲ್ಲಿ ಹೇಳುವುದೆಂದರೆ ನೀನು ತ್ರಿಪುಟೀರಹಿತನಾಗಿ ಶಿಬಿಕೆಯನ್ನು ಆರೋಹಣ ಮಾಡಬೇಕು. ನಾವು ಶಿಬಿಕಾವಾಹಕರಾದಾಗ ತ್ರಿಪುಟೀಸಹಿತನಾಗಿ ಶಿಬಿಕೆಯಲ್ಲಿ ಯಾರೂ ಕುಳಿತಿರುವಂತಿಲ್ಲ. ನಾವು ಶಿಬಿಕೆಯನ್ನು ಇಳಿಸಿದಾಗ ತ್ರಿಪುಟಿಯು ಮತ್ತೆ ಜಾಗ್ರತವಾಗುವುದು."

"ಶಿಬಿಕಾರೋಹಣವಾಗುತ್ತಲೂ ತ್ರಿಪುಟಿ ಇಲ್ಲದಾಗಿ ಶಿಬಿಕಾವರೋಹಣದಲ್ಲಿ ಅದು ಜಾಗ್ರತವಾಗುವುದಾದರೆ ನಾನು ಮಾಡಬೇಕಾದ ಕಾರ್ಯವಾವುದು?"

"ನಿಜ, ಅಲ್ಲಿ ನಿನಗೆ ಕರ್ತೃತ್ವವಿಲ್ಲ. ಆದರೂ ಶಿಬಿಕೆಯಲ್ಲಿರುವಾಗ ತ್ರಿಪುಟಿಯು ಉದಯವಾದರೆ, ಆಗ ಅದರ ಫಲವನ್ನು ನೀನು ಅನುಭವಿಸಬೇಕಾಗುವುದು."

"ಆಗಬಹುದು."

ಬೃಹಸ್ಪತಿಯು ಥಟ್ಟನೆ ವಂದಿಸಿ ವಿನಯದಿಂದ ಕೈಮುಗಿದು ಪ್ರಾರ್ಥಿಸಿದನು, "ಈ ಶಿಬಿಕೋತ್ಸವದಿಂದ ಲೋಕಕ್ಕೆ ಆಗುವ ಉಪಕಾರವೇನು?"

"ಹೀಗೆ ಶಿಬಿಕಾರೋಹಣ ಸಾಮರ್ಥ್ಯವುಳ್ಳ ಯಾವನಾದರೊಬ್ಬನು ಹುಟ್ಟಿ, ಶಿಬಿಕೋತ್ಸವವು ನಡೆಯಿತು ಎಂದರೆ, ಧರ್ಮವೃಷ್ಟಿಯಾಗಿ ಲೋಕತ್ರಯಗಳಲ್ಲಿ ಎಲ್ಲರೂ ತಮೋಗುಣವನ್ನು ತುಳಿದು, ರಜೋಗುಣವನ್ನು ಮೀರಿ ಸತ್ವದತ್ತ ಸುಗ್ಗುವರು."

ದೇವಗುರು, ದೇವರಾಜರಿಬ್ಬರೂ ಅತಿಶಯವಾದ ಹರ್ಷದಿಂದ ಸಪ್ತರ್ಷಿಗಣಕ್ಕೆ ನಮಸ್ಕಾರ ಮಾಡಿದರು. ಆ ನಮಸ್ಕಾರವನ್ನು ಅಂಗೀಕರಿಸಿದ ಸಪ್ತರ್ಷಿಗಳ ಪರವಾಗಿ ಭರದ್ವಾಜರು ಹೇಳಿದರು :

"ಸಪ್ತರ್ಷಿಗಣವೂ, ಇಂತಹ ಧೀರನೊಬ್ಬನು ಹುಟ್ಟಿಬಂದಾನೇ ಎಂದು ಕಾದಿದ್ದಿತು. ದೇವರಾಜಾ, ನೀನು ನಾವು ವಿಧಿಸಿದ ನಿಯಮಗಳಿಗೆಲ್ಲ ಒಪ್ಪಿಕೊಂಡಿರುವೆಯಾಗಿ, ನಾವು ಸಂತೋಷದಿಂದ ಸ್ವಯಂ ಒಂದು ನಿಯಮವನ್ನು ಅಂಗೀಕರಿಸುವೆವು. ಕೇಳು : ನೀನು ಶಿಬಿಕಾರೋಹಣವು ಒಂದು ದಿನ ನಡೆಯಬೇಕೆಂದರೆ, ಇಗೋ. ಸಪ್ತರ್ಷಿಗಳು ಈ ಶಿಬಿಕೋತ್ಸವವನ್ನು ಏಳು ದಿನ–ಒಂದು ವಾರ ಪರ್ಯಂತವಾಗಿ ನಡೆಸಲು ಒಪ್ಪುವರು. ಹೌದು ದೇವಾಚಾರ್ಯ, ಈ ಧರ್ಮಾಭಿವೃದ್ಧಿಯಿಂದ ನಿನ್ನ ಇಂದ್ರನು ಉದ್ಧಾರವಾಗುವನು. ನೀವೆಲ್ಲರೂ ನಿಮಗೆ ಲಭಿಸುವ ಪುಣ್ಯವನ್ನು ಆತನಿಗೆ ಧಾರೆಯರೆಯಿರಿ. ಮಹಾವಿಷ್ಣುವಿನ ಅನುಗ್ರಹದಿಂದ ಆತನಿಗೆ ಹತ್ಯೆಯ ನಿವಾರಣವಾಗುವುದು."

ದೇವರಾಜ, ದೇವಾಚಾರ್ಯರಿಗೆ ಆದ ಆನಂದ ಅಷ್ಟಿಷ್ಟಲ್ಲ. ಮತ್ತೊಮ್ಮೆ ನಮಸ್ಕರಿಸಿ ಪೂಜೆಯನ್ನು ಮಾಡಿದರು. ಸಪ್ತರ್ಷಿಗಳು, "ಅಭೀಷ್ಟ ಸಿದ್ಧಿರಸ್ತು" ಎಂದು ಆಶೀರ್ವಾದ ಮಾಡಿ ಅಂತರ್ಧಾನವನ್ನು ಹೊಂದಿದರು.

ಇಬ್ಬರಿಗೂ ತಮಗೆ ಬೇಕಾದವರಿಗೆ ಈ ಸಂತೋಷದ ವರ್ತಮಾನವನ್ನು ಹೇಳುವ ಅವಸರ! ದೇವರಾಜನು ವಿರಜಾದೇವಿಗೆ ಎಲ್ಲವನ್ನೂ ಹೇಳಲು ಹೋದರ, ದೇವಗುರುವು ಶಚೀದೇವಿಗೆ ಎಲ್ಲವನ್ನೂ ವರದಿ ಮಾಡಲು ಮನೋವೇಗದಿಂದ ಹೋದನು.

ಅಮರಾವತಿಯಲ್ಲಿ ಶಿಬಿಕೋತ್ಸವಕ್ಕಾಗಿ ಅದ್ಭುತವೂ ಅಪೂರ್ವವೂ ಆದ ಸಿದ್ಧತೆಗಳು ನಡೆಯುತ್ತಿವೆ. ದಾನವಗುರು ಶುಕ್ರಾಚಾರ್ಯರನ್ನು ಬರಮಾಡಿಕೊಂಡು ಇಂದ್ರನು ಆತನು ಹೇಳಿದವರಿಗೆಲ್ಲ ಆಹ್ವಾನಪತ್ರಿಕೆಗಳನ್ನು ಕಳಿಸುತ್ತಿದ್ದಾನೆ. ಆತನೂ ಈ ಹೊಸ ಇಂದ್ರನ ಸೌಜನ್ಯವನ್ನು ಕಂಡು ಮಾರುಹೋಗಿದ್ದಾನೆ. ದೇವತೆಗಳ ಮೇಲೆ ವೈರವನ್ನು ಸಾಧಿಸುತ್ತಿದ್ದುದು ತಪ್ಪೋ ಎಂದುಕೊಳ್ಳುತ್ತಾನೆ.

ಭೂಲೋಕದಿಂದ ನಹುಷನ ಮಗನಾದ ಯಯಾತಿಯೂ ಆತನ ಮಕ್ಕಳೂ ಬಂದಿದ್ದಾರೆ. ಅಮರಾವತಿಯು ಅತಿಥಿಗಳಿಂದ ಕಿಕ್ಕಿರಿಯತ್ತಿದೆ.

ಒಂದು ಪ್ರಾತಃಕಾಲ ದೇವಗುರುವು ದೇವರಾಜನನ್ನು ನೋಡಲು ಹೋದನು. ಆತನೂ ದೇವಗುರುವನ್ನು ನೋಡಬೇಕು ಎಂದುಕೊಳ್ಳುತ್ತಿದ್ದನು. ದೇವಗುರುಗಳಿಗೆ ನಮಸ್ಕಾರಾದಿಗಳನ್ನು ಒಪ್ಪಿಸಿ ಕೈಮುಗಿದುಕೊಂಡುನಿಂತು, ''ಅನುಗ್ರಹವಮಾಡಿ ಬಂದಿರಿ'' ಎಂದನು. ದೇವಗುರುವು ನಗುತ್ತ ''ದೇವರಾಜನಿಗೆ ತಿಳಿಯದ್ದು ಇಲ್ಲ, ಆದರೂ ನೆನಪು ಕೊಡುತ್ತೇನೆ, ತಪ್ಪಿಲ್ಲವಲ್ಲ? ಸಪ್ತರ್ಷಿಗಳು ನಿರ್ವಿಕಲ್ಪ ಸಮಾಧಿಯಲ್ಲಿ ಶಿಬಿಕೆಯಲ್ಲಿ ಕುಳಿತಿರಬೇಕು ಎಂದು ಹೇಳಿದರು. ಅದನ್ನು ಪಡೆಯುವ ದಾರಿಯನ್ನು ಹೇಳಲಿಲ್ಲ, ಅಲ್ಲವೇ? ನಮ್ಮಲ್ಲಿ ಮೂವರು ಈ ವಿದ್ಯೆಯನ್ನು ಬಲ್ಲವರು. ಒಬ್ಬನು ಇಂದ್ರ, ಮತ್ತೊಬ್ಬನು ಯಮಧರ್ಮ, ಇನ್ನೊಬ್ಬನು ವರುಣನು. ಇವರು ಮೂವರಲ್ಲಿ ಯಾರನ್ನಾದರೂ ಕರೆಯಿಸಿಕೊಂಡು ಬ್ರಹ್ಮವಿದ್ಯೆಯ ವಿಚಾರವಾದರೂ ಮಾಡಿದರೆ ಒಳ್ಳೆಯದು.''

ದೇವರಾಜನು ನಸುನಗುತ್ತ, ''ಆಗಬಹುದು. ಯಾರನ್ನು ಕರೆಯಿಸಬೇಕೆಂದು ತಮ್ಮ ಇಷ್ಟ?'' ಎಂದು ಕೇಳಿದನು.

ದೇವಗುರುವು ಆತನ ಅರ್ಥವನ್ನು ಗ್ರಹಣಮಾಡದೆ, ''ಇಂದ್ರನು ಈಗ ಅಂತರ್ಧಾನನಾಗಿರುವನು. ಇನ್ನು ಉಳಿದ ಇಬ್ಬರಲ್ಲಿ ಯಾರನ್ನು ಕರೆಯಿಸು ಎಂದರೆ ಅವರನ್ನು ಕರೆಯುತ್ತೇನೆ'' ಎಂದನು.

''ಮೂವರನ್ನೂ ಕರೆಯಿಸಬೇಕೆಂದು ನಮ್ಮ ಕೋರಿಕೆಯಿದ್ದರೆ?''

ಆಚಾರ್ಯನು ತಬ್ಬಿಬ್ಬಾದನು. ''ಆದರೆ...?''

''ಆದರೆ ಏನೂ ಇಲ್ಲ...ಆಚಾರ್ಯ, ಆ ಹತ್ಯೆಯು ಇಂದ್ರನನ್ನು ಬಿಟ್ಟರ ಸರಿ. ಇಲ್ಲದಿದ್ದರೆ ನನಗಿರುವ ಸರ್ವಶಕ್ತಿಯನ್ನೂ ಪ್ರಯೋಗಿಸಿ ಅದನ್ನು ಎಳತರಿಸಿ ಬಂಧನದಲ್ಲಿಡುವೆನು. ಇಂದ್ರನು ಇಲ್ಲಿಗೆ ಬರಬೇಕು.''

''ಹತ್ಯೆ...!''

''ಹತ್ಯೆಯೇ? ಯಾರಲ್ಲಿ? ಚಿತ್ರರಥನನ್ನೂ ಅಗ್ನಿವಾಯುಗಳನ್ನೂ ಬರಮಾಡು. ಹಾಗೆಯೇ ಶುಕ್ರಾಚಾರ್ಯರನ್ನು, ಇಲ್ಲಿಗೆ ಬಂದು ನಮ್ಮನ್ನು ಅನುಗ್ರಹಿಸುವಂತೆ ಪ್ರಾರ್ಥಿಸು.''

ಉತ್ತರ ಕ್ಷಣದಲ್ಲಿಯೇ ಅವರೆಲ್ಲರೂ ಬಂದರು. ದೈತ್ಯ ಗುರುಗಳನ್ನು ದೇವಗುರುವು ನಮಸ್ಕಾರಾದಿಗಳಿಂದ ಗೌರವಿಸಿ, ''ಆಚಾರ್ಯ, ತಮ್ಮ ಸನ್ನಿಧಿಯಲ್ಲಿ ಕೆಲವು ಅಪ್ಪಣೆಗಳನ್ನು ಮಾಡುವೆನು. ಅನುಗ್ರಹ ಮಾಡಬೇಕು.'' ಎಂದು ಆತನ ಅನುಜ್ಞೆಯನ್ನು ಪಡೆದು, ಅಗ್ನಿ–ವಾಯುಗಳನ್ನು ಕುರಿತು ಹೇಳಿದನು :

''ಇಂದು ಮಹೇಂದ್ರನನ್ನು ಇಲ್ಲಿಗೆ ಕರೆತರಬೇಕು. ಆತನಿಗೆ ಅಡ್ಡಿಯಾಗುವ ಹತ್ಯೆಯನ್ನು, ಪುಣ್ಯಶಕ್ತಿಗಳನ್ನು ಬಿಟ್ಟು ಕಟ್ಟಿಸಿಬಿಡಿ. ಸಾಮಾನ್ಯ ಪುಣ್ಯಶಕ್ತಿಗಳಿಗೆ ಅದು ಸಾಧ್ಯವಾಗದಿದ್ದರೆ, ನಮಗೆ ಇದುವರೆಗೂ ಇರುವ, ಮುಂದೆ ಬರುವ, ಪುಣ್ಯಗಳನ್ನೆಲ್ಲಾ ಸೇರಿಸಿ ಅದನ್ನು ಕಟ್ಟಿಹಾಕಿ. ಈ ಕೂಡಲೇ ಇದು ನಡೆಯಬೇಕು. ಯಜ್ಞೇಶ್ವರ, ಮಾತರಿಶ್ವ, ಆ ಹತ್ಯೆಯೇನಾದರೂ ಸಗ್ಗದಿದ್ದರೆ, ನೀವಿಬ್ಬರೂ ನಿಮ್ಮ ವಿಶ್ವರೂಪವನ್ನು ಧರಿಸಿ ಅದನ್ನು ಧ್ವಂಸ ಮಾಡಿಬಿಡಿ.'' ಅರಸನು ಚಿತ್ರರಥನ ಕಡೆಗೆ ತಿರುಗಿದನು. ''ಗಂಧರ್ವಪತಿ, ನೀನು ಸಕಲ ಸೈನ್ಯದೊಡನೆ, ಸಮರಾಂಗಣಕ್ಕೆ ನಡೆವಂತೆ, ವ್ಯೂಹ ಕ್ರಮದಿಂದ ಸನ್ನಾಹ ಮಾಡಿಕೊಂಡು ಈ ಮಹಾಪುರುಷರ ಜೊತೆಯಲ್ಲಿ ನಡೆಯತಕ್ಕದು.''

ಅಗ್ನಿ, ವಾಯು, ಚಿತ್ರರಥರಿಗೆ ಆ ಮಾತುಗಳನ್ನು ಕೇಳಿ ಮೈಯುಬ್ಬಿತು. 'ಹೀಗೆ ತಮಗೆ ಹಿಂದೆ ಅಪ್ಪಣೆಯಾಗಿದ್ದರೆ ಆ ಹತ್ಯೆಯು ಇದುವರೆಗೆ ಉಳಿಯುತ್ತಿರಲಿಲ್ಲ' ಎನ್ನಿಸಿತು. 'ಸರ್ವಪ್ರಕಾರದಿಂದಲೂ ಗೆದ್ದೇ ಬರುವೆವು' ಎಂದು ಶ್ರದ್ಧಾಪೂರ್ವಕವಾಗಿ ಪ್ರತಿಜ್ಞೆಯನ್ನು ಮಾಡಿಕೊಂಡರು. ಅದಷ್ಟೂ ಅವರ ದನಿಯಲ್ಲಿಯೇ ತೋರುತ್ತಿರಲು ಅಪ್ಪಣೆಯೆಂದರು.

ದೇವರಾಜನು ಗಂಭೀರವಾಗಿ ಕೈಮುಗಿದುಕೊಂಡು ಧ್ಯಾನಿಸಿದನು. ಇಂದ್ರಾಯುಧ ಗಳೆಲ್ಲವೂ ಎದುರಿಗೆ ಬಂದು ನಿಂತವು. ''ಅಸ್ತ್ರಶ್ರೇಷ್ಠರೇ, ತಮ್ಮ ನಾಥನಾದ ಮಹೇಂದ್ರನನ್ನು ಇಲ್ಲಿಗೆ ಕರೆತರಲು ಅಗ್ನಿವಾಯುಗಳು ಸಸೈನ್ಯರಾಗಿ ಹೊರಟಿರುವರು. ತಾವೆಲ್ಲರೂ ಅವರಿಗೆ ರಕ್ಷಣೆಯನ್ನು ಕೊಟ್ಟು, ಆ ಮಹೇಂದ್ರನನ್ನು ಇಲ್ಲಿಗೆ ಕರೆತರಬೇಕು.''

ಆಯುಧಗಳೆಲ್ಲವೂ ಮಹೋತ್ಸಾಹದಿಂದ ಪ್ರಜ್ವಲಿಸುತ್ತ, ''ದೇವರಾಜನ ಅಪ್ಪಣೆಯನ್ನು ಸರ್ವಥಾ ಪಾಲಿಸುವೆವು'' ಎಂದು ಆಜ್ಞೆಯನ್ನು ಶಿರಸಾವಹಿಸಿ ನಡೆದವು.

ಇಂದ್ರನು ಮತ್ತೆ ಆಚಾರ್ಯರಿಬ್ಬರ ಕಡೆಗೆ ತಿರುಗಿ, ಕಠಿಣವಾದ ಉಕ್ಕು, ಪುಷ್ಪದಂತೆ ಮೃದುವಾದ ಹಾಗಾಗಿ, ''ಆಚಾರ್ಯರ ಸನ್ನಿಧಾನದಲ್ಲಿಯೂ ಗಡುಸಾಗಬೇಕಾಗಿ ಬಂತು. ಮನ್ನಿಸಬೇಕು, ನಮ್ಮ ಅಪ್ಪಣೆಗಳೆಲ್ಲವೂ ನೆರವೇರುವಂತೆ ಅನುಗ್ರಹವಾಗಬೇಕು'' ಎಂದು ನಮಸ್ಕರಿಸಿದನು.

ಆಚಾರ್ಯರಿಬ್ಬರೂ ಮನಃಪೂರ್ವಕವಾಗಿ ಆಶೀರ್ವದಿಸಿದರು.

ದೇವಗುರುವು ಎಲ್ಲವನ್ನು ಕೇಳಿ ಆಶ್ಚರ್ಯಪಡುತ್ತ, ''ಹೌದು, ಹೌದು. ಅಧಿಕಾರವಿರುವುದು ಹೆಚ್ಚಲ್ಲ. ಅದನ್ನು ವಿನಿಯೋಗಿಸುವ ಸಾಮರ್ಥ್ಯವೂ ಇರಬೇಕು''– ಎಂದು ತಲೆದೂಗಿದನು. ಶುಕ್ರಾಚಾರ್ಯನು, ''ಭಲೆ, ಪ್ರಭುವೆಂದರೆ ಹೀಗಿರಬೇಕು. ನಮ್ಮ ಎದುರಿಗೆ ಆಜ್ಞೆ ಮಾಡಿ, ನಾವು ಗುಪ್ತವಾಗಿಯಾಗಲಿ ಪ್ರಕಟವಾಗಿಯಾಗಲಿ, ಅದನ್ನು ಪ್ರತಿಭಟಿಸದಂತೆ, ಅದಕ್ಕೆ ಅಡ್ಡಿ ಮಾಡಿಡದಂತೆ ಮಾಡಿಟ್ಟನಲ್ಲ!'' ಎಂದು ಮೆಚ್ಚಿಕೊಂಡನು.

ಅರಸನು ಪ್ರಹರಿಯನ್ನು ಕರೆದು, ''ಮಹೇಂದ್ರನು ಅಮರಾವತಿಯ ಬಾಗಿಲಿಗೆ ಬರುವ ವೇಳೆಗೆ, ಆತನಿಗೆ ಸಲ್ಲಬೇಕಾದ ಗೌರವಗಳೆಲ್ಲ ಬಾಗಿಲಲ್ಲಿಯೆ ಸಂದು, ಆತನನ್ನು ವೈಭವದಿಂದ ಶಚೀದೇವಿಯರ ಮನೆಗೆ ಕರೆದೊಯ್ಯಬೇಕು. ಇದು ನಮ್ಮಾಜ್ಞೆ'' ಎಂದನು.

ನಹುಷೇಂದ್ರನು, ''ಇನ್ನು ಮುಂದಿನ ಕೆಲಸ ಬ್ರಹ್ಮೋಪದೇಶ. ದೇವಗುರುಗಳು ಯಮಧರ್ಮರಾಜನನ್ನು ನನಗಾಗಿ ಬರಮಾಡಬೇಕು'' ಎಂದನು.

ದೇವಾಚಾರ್ಯರು ಯಮಧರ್ಮನನ್ನು ಧ್ಯಾನಿಸಿದರು. ಯಮಧರ್ಮನು ಅಲ್ಲಿಯೇ ಪ್ರತ್ಯಕ್ಷವಾಗಿ ಆಚಾರ್ಯರನ್ನು ನಮಸ್ಕರಿಸಿದನು. ಆತನು ಇಂದ್ರನನ್ನು ತೋರಿಸಿ, ''ಶಿಬಿಕಾರೋಹಣಕಾಲದಲ್ಲಿ ನಿರ್ವಿಕಲ್ಪ ಸಮಾಧಿಯಲ್ಲಿರಬೇಕು. ಅದಕ್ಕೆ ಉಪಷ್ಟಂಭಕ ವಾಗಿ ಬ್ರಹ್ಮವಿಚಾರವನ್ನು ಮಾಡಬೇಕೆಂದು ನಾನು ಕೋರಿದೆನು. ಅದಕ್ಕಾಗಿ ನಿನ್ನನ್ನು ಬರಮಾಡಿಕೊಂಡೆವು'' ಎಂದನು.

ಯಮಧರ್ಮನು ಬ್ರಹ್ಮವಿಚಾರವನ್ನು ನಹುಷನಿಗೆ ತಿಳಿಸಿಕೊಟ್ಟನು. ನಹುಷನು–''ಇಂದ್ರನಾದುದು ಸಾರ್ಥಕವಾಯಿತು. ಏನು ತಿಳಿಯಬೇಕೋ ಅದನ್ನು ತಿಳಿದುದಾಯಿತು'' ಎಂದು ಆನಂದಪಟ್ಟುಕೊಳ್ಳುತ್ತಿದ್ದನು.

ಅದರಂತೆ ವರುಣನೂ ಬಂದು, ಬ್ರಹ್ಮೋಪದೇಶದ ಬೀಜಮಂತ್ರವನ್ನು ತಿಳಿಸುವುದು ಮುಗಿದಿದ್ದಾಗ ಹೊರಗೆ ಗದ್ದಲವಾಯಿತು. ಸಮುದ್ರವು ಉಕ್ಕಿಬಂದು ಮಾಡುತ್ತಿರುವಂತೆ ಆಗುವ ಆರ್ಭಟ....! ಏನೆಂದು ಎದ್ದು ಆಚಾರ್ಯರು ಕಿಟಕಿಯಲ್ಲಿ ಬಗ್ಗಿ ನೋಡಿದರು. ಪ್ರಹರಿಯು ಬಂದು,

''ಅಗ್ನಿ ವಾಯುಗಳು....'' ಎನ್ನುತ್ತಿರುವ ಹಾಗೆಯೇ ಅವರಿಬ್ಬರೂ ಬಂದು ನಹುಷೇಂದ್ರನಿಗೆ ಕೈಮುಗಿದು, ''ಮಹಾಪಾದದ ಆಜ್ಞೆಯು ಸಫಲವಾಯಿತು. ಹತ್ಯೆಯು ಉರಿದುಹೋಯಿತು. ಇಂದ್ರನನ್ನು ಬಿಡಿಸಿಕೊಂಡು ಬಂದೆವು'' ಎಂದರು. ನಹುಷನು ಸಂತೋಷದಿಂದ ಎದ್ದು ಅವರಿಬ್ಬರನ್ನೂ ಆಲಿಂಗಿಸಿದನು.

ಎಲ್ಲರೂ ಹೊರಟು ಹೋದಮೇಲೆ, ನಹುಷೇಂದ್ರನಲ್ಲಿಗೆ ಬಂದವಳು ನಿಯತಿದೇವಿ. ಆಕೆಯು ಅವನನ್ನು ಕಂಡು ವಿನಯದಿಂದ ನಮಸ್ಕರಿಸಿ, ತಾನು ಬಂದ ಕಾರ್ಯವನ್ನು ನಿವೇದಿಸಿದಳು: ''ಮಹಾಪ್ರಭುಗಳು ಶಿಬಿಕೋತ್ಸವವು ಏಳು ದಿನ ನಡೆಯಬೇಕೆಂದು ಗೊತ್ತುಮಾಡಿರುವಿರಂತೆ. ಹಾಗಾದರೆ ಮನುಷ್ಯಲೋಕದಲ್ಲಿ ಎಲ್ಲವೂ ವ್ಯತ್ಯಾಸವಾಗಿ ಹೋಗಿ, ನಾನು ಮಾಡಬೇಕಾಗಿರುವುದು ಏನೂ ಉಳಿಯದೇ ಹೋಗುವುದು.''

''ಹಾಗಂದರೇನು? ಅದನ್ನು ವಿಶದವಾಗಿ ಹೇಳು, ದೇವಿ!''

''ದೇವಾ, ತಮ್ಮ ಏಳು ದಿನದ ಶಿಬಿಕೋತ್ಸವದಿಂದ ಮಧ್ಯಲೋಕದಲ್ಲಿ ಬಹು ಪರಿವರ್ತನೆಗಳಾಗುವುವು. ಅದು ರಜೋಗುಣಪೂರ್ಣವಾದ ಲೋಕ. ಅಲ್ಲಿ ಯಾವಾಗಲೂ ಒಳ್ಳೆಯದು, ಕೆಟ್ಟದ್ದು—ಎರಡೂ ಇರಬೇಕು. ಅಂಥದ್ದರಲ್ಲಿ ತಮ್ಮ ಶಿಬಿಕೋತ್ಸವದಿಂದ ಎಲ್ಲವೂ ಒಳ್ಳೆಯದೇ ಆಗಿ ಹೋದರೆ, ಹಿಟ್ಟು, ಬೂದಿ ಎಂಬ ಭೇದವೇ ಇಲ್ಲದೆ ಹೋದರೆ,

ನಾನು ಅಲ್ಲಿ ಮಾಡಬೇಕಾದುದು ಏನೂ ಉಳಿಯುವುದಿಲ್ಲ. ಅಲ್ಲಿಗೆ ಸ್ಥಿತಿಯೇ ಲೋಪವಾಗುವುದು. ಅದನ್ನು ಬಿನ್ನವಿಸಲು ಬಂದಿದ್ದೇನೆ.''

''ಹಾಗಾದರೆ, ಏನು ಮಾಡಬೇಕೆಂದಿರುವೆ?''

''ಆಜ್ಞಾಸ್ಥಾನವು ತಮ್ಮದು. ನಾವು ಏನಿದ್ದರೂ ಆಜ್ಞಾವಾಹಕರು. ದೇವಾ, ಶಿಬಿಕೋತ್ಸವವು ಏಳು ದಿನಗಳು ಪೂರ್ಣವಾಗಿ ನಡೆಯದಂತೆ ನಾವೊಂದು ಅಡ್ಡಿಯನ್ನು ತಂದೊಡ್ಡಲು ಅಪ್ಪಣೆಯಾಗಬೇಕು. ಯಾವುದೂ ಈ ಲೋಕದಲ್ಲಿ ಪೂರ್ಣವಾಗಬಾರದು. ಅಪೂರ್ಣವಾಗಿಯೇ ಉಳಿಯಬೇಕು. ಇದು ಬ್ರಹ್ಮನಿಯಮ. ಸ್ವಾಮಿಗೆ ಸಮ್ಮತವಾದರೆ ಏಳನೆಯ ದಿನ ಶಿಬಿಕೆಯಲ್ಲಿರುವಾಗಲೇ ತಾವು ಸಮಾಧಿ ಭಂಗಮಾಡಿಕೊಳ್ಳಬೇಕು. ಅದರಿಂದ ಸನ್ನಿಧಿಗೆ ಕೊಂಚ ಶ್ರಮವಾಗಬಹುದು. ಆದರೂ ಲೋಕವು ಉಚ್ಛೃಂಖಲವಾಗುವುದಿಲ್ಲ. ಅದರಿಂದ ನನಗೆ ಈ ವರವನ್ನು ಕೊಡಬೇಕು'' ಎಂದು ನಿಯತಿದೇವಿಯು ಇಂದ್ರನಿಗೆ ನಮಸ್ಕಾರ ಮಾಡಿದಳು. ಇಂದ್ರನು ಮರುಮಾತನಾಡದೆ ''ಆಗಬಹುದು'' ಎಂದನು. ನಿಯತಿಯು ಹಸನ್ಮುಖಿಯಾಗಿ ಇಂದ್ರನಿಗೆ ಮತ್ತೆ ನಮಸ್ಕರಿಸಿ ಬೀಳ್ಕೊಂಡಳು. ಇಂದ್ರನು ಅಲ್ಲಿಯೇ ಶಥಪಥ ತಿರುಗುತ್ತಿರುವಾಗ ವಿರಜಾದೇವಿಯು ಬಂದು ಕಾಣಿಸಿಕೊಂಡು, ''ಶಚೀಂದ್ರರು ಬರುವ ಕಾಲವಾಯಿತು. ಅವರನ್ನೆಲ್ಲಿ ನೋಡುವಿರಿ?'' ಎಂದಳು.

ನಹುಷನು ವಿರಜಾದೇವಿಯ ಭುಜದ ಮೇಲೆ ಸ್ನೇಹದಿಂದ ಕೈ ಇಟ್ಟು, ''ಆ ದಂಪತಿಗಳನ್ನು ಈ ದಂಪತಿಗಳು ನಿನ್ನ ಅಪ್ಪಣೆಯಾದರೆ ನಿನ್ನ ಅಂತಃಪುರದಲ್ಲಿ ಕಾಣುವರು.'' ಎಂದನು.

''ತಾವು ಅಪ್ಪಣೆ ಕೊಡಿಸಿದುದು ಸರ್ವಥಾ ಸರಿ. ಇಂದ್ರದಂಪತಿಗಳು ಈಗ ದೂರದವರಲ್ಲ, ದಯಮಾಡಿಸಿ.'' ಎಂದು ಗಂಡನನ್ನು ಅಂತಃಪುರಕ್ಕೆ ಕರೆದೊಯ್ದಳು.

ಸಕಾಲದಲ್ಲಿ ಶಚೀಂದ್ರರು ಬಂದರು. ಸಾಮಾನ್ಯವಾದ ವೇಷ, ಭೂಷಣಗಳಿಂದ ಬಂದಿದ್ದಾರೆ. ಇಂದ್ರನು ಒಂದು ಪೀತಾಂಬರವನ್ನು ಉಟ್ಟಿದ್ದಾನೆ. ಇನ್ನೊಂದನ್ನು ಹೊದೆದಿದ್ದಾನೆ. ತಲೆಯ ಮೇಲೆ ಹೇಮಕಿರೀಟವೊಂದಿದೆ. ದೇವಸಹಜವಾದ ಗಂಧಮಾಲ್ಯಗಳು, ಜೊತೆಗೆ ಕಾಲಿನಲ್ಲಿ ರತ್ನಗಳು ಕೆತ್ತಿರುವ ಆಭರಣವೊಂದು, ಹಸ್ತಾಭರಣಗಳು, ಕರ್ಣಾಭರಣಗಳು, ವಿನಾ ಇನ್ನೇನೂ ಇಲ್ಲ.

ಶಚೀಂದ್ರರು ವಿರಜಾ–ನಹುಷರಿಗೆ ನಮಸ್ಕಾರ ಮಾಡಲು ಮುಂದಾದರು. ಅವರನ್ನು ತಡೆದು ನಹುಷನು, ''ನೀನು ನಿತ್ಯೇಂದ್ರ, ನಾನು ನೈಮಿತ್ತಿಕೇಂದ್ರ. ನನಗೆ ನೀನು ನಮಸ್ಕಾರ ಮಾಡುವುದೆ?'' ಎಂದನು. ಇಂದ್ರನು, ''ಆ ಮಾತು ನಿಜ. ಆದರೆ ಬುದ್ಧಿಯಲ್ಲಿ, ಪ್ರಭಾವದಲ್ಲಿ, ಸಾಮರ್ಥ್ಯದಲ್ಲಿ, ಪ್ರತಿಯೊಂದರಲ್ಲೂ ನೀನು ನನಗಿಂತ ಹೆಚ್ಚು. ಅಲ್ಲದೇ ಹತ್ಯೆಗೆ ಸಿಕ್ಕಿ ಗೋಳಿಡುತ್ತಿದ್ದ ನನ್ನನ್ನು ಉದ್ಧರಿಸಿರುವೆ. ಇಂತಹ ಪರೋಪಕಾರಿಗೆ ನಾನೇನು ತಾನೇ ಉಪಚಾರ ಮಾಡಲಿ?'' ಎಂದು ನುಡಿದು, ತಾವು ತಂದಿದ್ದ ವಸ್ತ್ರಾಭರಣ

ಗಂಧಮಾಲ್ಯಾದಿಗಳನ್ನು ಪತ್ನೀಸಮೇತವಾಗಿ ಇಂದ್ರನು ಪತ್ನೀದ್ವಿತೀಯನಾದ ನಹುಷನಿಗೆ ಒಪ್ಪಿಸಿದನು.

ನಹುಷನು ಹೇಳಿದನು : ''ಇಂದ್ರ, ನೀನು ಬಂದುದು ಬಹು ಸಂತೋಷವಾಯಿತು. ಈ ಶಿಬಿಕೋತ್ಸವವನ್ನು ಪೂರಯಿಸಿಕೊಂಡು, ನಾನು ವಿರಜಾ ದೇವಿಯೊಡನೆ ವಾನಪ್ರಸ್ಥಕ್ಕೆ ತೆರಳುವೆನು. ನೀನು ನಿನ್ನ ಇಂದ್ರಾಧಿಪತ್ಯವನ್ನು ನಿರಾತಂಕವಾಗಿ ವಹಿಸಿಕೊಳ್ಳಬಹುದು.''

ಇಂದ್ರನು ಸಂಕೋಚದಿಂದ ಹೇಳಿದನು : ''ಅದು ಕೂಡದು. ಅಷ್ಟೇ ಅಲ್ಲ. ನಿನಗೆ ಶಚೀಪತಿತ್ವವು ಬೇಕೆಂದು ಅಪೇಕ್ಷಿಸಿದೆಯಂತೆ. ಶಚಿಯು ತನ್ನ ಶಚಿತ್ವವನ್ನೆಲ್ಲ ವಿರಜಾದೇವಿಗೆ ಒಪ್ಪಿಸುವಳು. ನಾವು ತಮ್ಮ ಸಖರಾಗಿ ತಮ್ಮ ದಾಸರಾಗಿ ಕೊನೆಯವರೆಗೂ ಇದ್ದು ಬಿಡುವೆವು.''

ಅರಸನೂ ವಿರಜೆಯೂ ಶಚೀದೇವಿಯ ಮುಖವನ್ನು ನೋಡಿದರು. ಆಕೆಯು ಹೇಳಿದಳು, ''ಅರಸಾ, ನಾನೂ ನನ್ನ ಪತಿಯೂ ಮಾತನಾಡಿಕೊಂಡೆವು. ನೀನು ಮಾಡಿದಂತೆ ಮಾಡಿ ಹತ್ಯೆಯನ್ನು ನಿವಾರಿಸಿಕೊಳ್ಳಬಹುದಿತ್ತು. ನಮಗೆ ಬುದ್ಧಿಯು ಬಿಡಲಿಲ್ಲ. ಅದರಿಂದ ನೀನು ಬುದ್ಧಿಯಲ್ಲಿ ಜ್ಯೇಷ್ಠನಾದೆ. ಆತ ಏವ ನೀನೇ ಇಂದ್ರಪದವಿಗೆ ಯೋಗ್ಯನು. ಅಲ್ಲದೆ ದೇವಾ, ನಿಜವಾಗಿ ಹೇಳುವೆನು, ಹೆಣ್ಣಿಗೆ ಸರ್ವಸೌಭಾಗ್ಯವೂ ಒಂದು ತೂಕ. ತಾನೊಲಿದ ಪತಿಯೇ ಒಂದು ತೂಕ. ಹಾಗೆ ಪತಿ ಪತಿಭಾಗ್ಯವನ್ನೂ ಮಾಂಗಲ್ಯಭಾಗ್ಯವನ್ನೂ ಕರುಣಿಸಿದ ನಿನಗೆ ನಾನು ಏನು ತಾನೆ ಒಪ್ಪಿಸಲಿ? ಅದರಿಂದ, ನನ್ನಲ್ಲಿದ್ದ ಇಂದ್ರಾಣೀತ್ವವನ್ನು ನಿನ್ನ ಅಪ್ಪಣೆಯಾದರೆ ವಿರಜಾದೇವಿಗೆ ಒಪ್ಪಿಸುವೆನು. ಈ ತ್ರೈಲೋಕ್ಯಾಧಿಪತ್ಯವನ್ನು ಕೊನೆಯವರೆಗೂ ಅನುಭವಿಸು. ಮೂರುಲೋಕದವರೂ ನಿನ್ನಂತಹ ಸರ್ವತಃಸರ್ವಥಾ ಜ್ಯೇಷ್ಠನಾದವನನ್ನು, ಧರ್ಮಪರಾಯಣನನ್ನು ಅರಸಾಗಿ ಪಡೆದು ಸುಖಿಸುವ ಭಾಗ್ಯವನ್ನು ಹೊಂದಲಿ.''

ಬುಟ್ಟಿಯಿಂದ ಎತ್ತಿ ಸುರಿದ ಹೂವಿನಂತೆ ನಿರರ್ಗಳವಾಗಿ, ಸಹಜ ಸುಂದರವಾಗಿ ಹೃದಯದಿಂದ ಬಂದುದಾಗಿರುವ ಶಚೀದೇವಿಯ ಭಾಷಣವನ್ನು ಕೇಳಿ ನಹುಷ ದಂಪತಿಗಳು ಅಮಂದಾನಂದವನ್ನು ಪಡೆದರು. ಅದನ್ನು ಪೂರ್ಣವಾಗಿ ಅನುಭವಿಸುವವನಂತೆ ನಹುಷನು ಒಂದು ಗಳಿಗೆ ಸುಮ್ಮನಿದ್ದು ನುಡಿದನು,

''ಮಹಾಭಾಗರೇ, ನಾವು ಭೋಗದ ಪರಾಕಾಷ್ಠತೆಯನ್ನು ಅನುಭವಿಸಿದೆವು. ಮನುಷ್ಯದೇಹದಲ್ಲಿ ದಿವ್ಯ ಮನಸ್ಸನ್ನು ಧಾರಣಮಾಡಿ ಮಾನುಷಾನಂದಕ್ಕಿಂತ ಕೋಟಿ ಕೋಟಿ ಹೆಚ್ಚಾದ ಆನಂದವನ್ನು ಅನುಭವಿಸಿದೆವು. ಆಯಿತಲ್ಲ? ಮತ್ತೇಕೆ ಈ ಪದವಿಗೆ ಅಂಟಿಕೊಳ್ಳೋಣ? ಅದರಿಂದ, ನಾವು ಇನ್ನು ಮುಂದೆ ಪಯಣಕ್ಕೆ ಸಿದ್ಧರಾಗಿರುವೆವು. ಅದಕ್ಕಾಗಿ ನಿಮ್ಮಿಂದ ನಮಗೆ ಉಪಕಾರವಾಗಬೇಕಾಗಿದೆ.''

''ಏನದು ಅಪ್ಪಣೆ ಮಾಡು.''

''ಅದೇ ; ಶಿಬಿಕೋತ್ಸವವು ಮುಗಿಯುತ್ತಲೂ ಈ ಇಂದ್ರಾಧಿಕಾರವನ್ನು ವಹಿಸಿಕೊಂಡು ನಮ್ಮನ್ನು ಇದರಿಂದ ಮುಕ್ತಮಾಡುವುದು. ಹಾಗೆಯೇ ನಿನಗೆ ಪ್ರಜಾಪತಿಯು ಕೊಟ್ಟಿರುವ

ಬ್ರಹ್ಮವಿದ್ಯೆಯನ್ನು ಅನುಗ್ರಹಿಸಿ, ಬ್ರಹ್ಮವಿದ್ಯಾ ಸ್ವರೂಪಿಣಿಯಾದ ಉಮಾದೇವಿಯನ್ನು ಪ್ರತ್ಯಕ್ಷ ಮಾಡಿಕೊಡುವಿಯಾ?''

ಇಂದ್ರನು ನಗುತ್ತ ಹೇಳಿದನು, ''ನಿನಗೆ ಇಂದ್ರಪದವಿಯು ಬಂದಾಗ ಇದೆಲ್ಲವೂ ಬಂದೇ ಇದೆ. ಅದರಿಂದ ಗುರುವಾಗಿ ಅಲ್ಲ, ಮಿತ್ರನಾಗಿ ನಾನು ಕೊಡುವಂತೆ, ನಿನ್ನಲ್ಲಿ ಇರುವುದನ್ನು ನಿನಗೆ ಗುರುತುಮಾಡಿ ಕೊಡುವೆನು. ಅದು ಮೊದಲಾಗಲಿ ಕೇಳು, ಜಾಗ್ರತ್, ಸ್ವಪ್ನ, ಸುಷುಪ್ತಿಗಳು ವೃತ್ತಿಗಳು. ದೇಹವಿರುವವರೆಗೂ ವೃತ್ತಿಗಳುಂಟು. ಆ ವೃತ್ತಿಗಳನ್ನು ಮೀರಿ ನಿವೃತ್ತಿಯಾಗಿರುವುದೇ ಬ್ರಹ್ಮ, ಅದನ್ನು ತಿಳಿಯುವುದೇ ಬ್ರಹ್ಮವಿದ್ಯೆ. ವೃತ್ತಿಗೆ ಮೀರಿದವನಿಗೂ ವೃತ್ತಿಗಳುಂಟು. ಸೂರ್ಯನನ್ನು ಕಂಡವನಿಗೆ ಸೂರ್ಯನ ಕಿರಣಗಳಲ್ಲೆಲ್ಲ ಸೂರ್ಯನೇ ಕಾಣುವಂತೆ, ವೃತ್ತಿ ಸಾಕ್ಷಿಯನ್ನು ಅರಿತವನ ವೃತ್ತಿಗಳು ತಾವು ಹೋದೆಡೆಯಲ್ಲೆಲ್ಲಾ ಆ ಸಾಕ್ಷಿಯನ್ನೇ ತೋರಿಸುವವು. ಆಗ ನಾಮರೂಪಗಳು ಹಾರಿಬಿಟ್ಟು ಸಚ್ಚಿದಾನಂದವನ್ನು ತೋರಿಸುವವು. ನೋಡು, ನೋಡು. ನಾನು ಹೇಳುತ್ತಿದ್ದಂತೆಯೆ ನಿನಗೆ ಅನುಭವವು ಬಂತು. ಆ ಅನುಭವವನ್ನು ಸಾಕ್ಷಾತ್ಕರಿಸು. ಅದರ ಮೂರ್ತಿಮಾನ್ ರೂಪವೇ ಉಮಾ ದೇವಿಯು. ಅಕೋ, ನಿನ್ನ ಕಣ್ಣಮರಾಗಿ ನಿಂತಿದ್ದಾಳೆ.''

ಅರಸನು ಉಮಾದರ್ಶನದಿಂದ ಸಂತೃಪ್ತನಾಗಿ ಮಾನಸೋಪಚಾರಗಳಿಂದ ಆರಾಧಿಸಿದನು. ಪ್ರಸನ್ನೆಯಾದ ಆಕೆಯು—''ಅರಸಾ, ನಿನ್ನ ಇಂದ್ರಿಯ ವೃತ್ತಿಗಳು ಹರಿವೆಡೆಯಲ್ಲೆಲ್ಲಾ, ಅಷ್ಟೇನು, ಪ್ರತಿಬೋಧದಲ್ಲೂ ನಿನಗೆ ನಾಮರೂಪರಹಿತವಾದ ಬ್ರಹ್ಮದ ಸಾಕ್ಷಾತ್ಕಾರವಾಗಲಿ, ಎಚ್ಚರಿಕೆ. ಆನಂದವನ್ನು ಅನುಭವಿಸುವವನು ನೀನಲ್ಲ. ಆನಂದವೇ ನೀನು!'' ಎಂದು ರಹಸ್ಯವನ್ನು ಬೋಧಿಸಿ ಕಣ್ಮರೆಯಾದಳು. ಅರಸನಿಗೆ ಕೂಡಲೇ ಎಚ್ಚರಾಯಿತು.

ಆಮೇಲೆ ಇಂದ್ರನು ಹೇಳಿದನು, ''ದೇವ, ಇನ್ನು ಇಂದ್ರತ್ವವನ್ನು ಗ್ರಹಿಸುವ ಮಾತು. ಅದು ನನ್ನೊಬ್ಬನ ವಿಷಯವಲ್ಲ. ಅಗ್ನಿ, ವಾಯುಗಳೂ ದೇವಗುರುವೂ ಗೊತ್ತುಮಾಡ ಬೇಕಾದ ವಿಷಯ. ದಯವಿಟ್ಟು ಅವರನ್ನು ಕರಸಬೇಕು.''

ಅರಸನು ಆಗಲೆಂದನು. ಮತ್ತೊಂದು ಕ್ಷಣದೊಳಗೆ ಅವರೂ ಬಂದರು. ಅವರೆಲ್ಲರ ಸಮ್ಮುಖದಲ್ಲಿ ಇಂದ್ರನು ಮತ್ತೆ, ''ಸರ್ವರೀತಿಯಿಂದಲೂ ನನಗಿಂತ ಶ್ರೇಷ್ಠನಾಗಿರುವ ಈತನೇ ಈ ಕಲ್ಪಾಂತದವರೆಗೂ ಇಂದ್ರನಾಗಿರಲೆಂದು ನನ್ನ ಕೋರಿಕೆ. ಈತನು ಶಿಬಿಕೋತ್ಸವವಾದ ಮೇಲೆ ಇಂದ್ರತ್ವವನ್ನು ಬಿಟ್ಟು ಬಿಡಬೇಕು ಎಂದಿರುವನು. ಇದನ್ನು ನೀವಲ್ಲ ವಿಮರ್ಶಿಸಬೇಕು'' ಎಂದನು.

''ನಾನು ಇಂದ್ರನಿಗೆ ಉಪಕಾರವಾಗಲೆಂದು ಯಾವ ಕಾರ್ಯವನ್ನೂ ಮಾಡಲಿಲ್ಲ. ನಾನು ಬಿಟ್ಟುಕೊಡುವ ಇಂದ್ರತ್ವವನ್ನು ವಹಿಸಿಕೊಳ್ಳಲು ಇನ್ನೊಬ್ಬನು ಸಿದ್ಧನಾಗಿರಬೇಕೆಂದು ಹಾಗೆ ಮಾಡಿರುವೆನು. ಆದರಿಂದ ಉಪಕಾರದ ಭಾರವೂ ಇಲ್ಲ, ಋಣವೂ ಇಲ್ಲ'' ಎಂದು ನಹುಷೇಂದ್ರನು ಹೇಳಿದನು.

ದೇವಗುರುವು ಯೋಚಿಸಿ ನುಡಿದನು : ''ಈತನು ಬ್ರಹ್ಮವಿದ್ಯಾರ್ಥವಾಗಿ

ಸರ್ವಸ್ವವನ್ನೂ ತ್ಯಾಗಮಾಡಿರುವಾಗ, ನಾವು ಅಡ್ಡಿ ಬರುವುದು ಸರ್ವಥಾ ಸರಿಯಲ್ಲ. ಆದ್ದರಿಂದ ಆದಿಯಲ್ಲಿ ಇಂದ್ರನಾಗಿದ್ದ ಈತನು ಇಂದ್ರಪದವಿಯನ್ನು ಸ್ವೀಕರಿಸಲಿ. ಶಿಬಿಕೋತ್ಸವವಾಗುವವರೆಗೆ ಶಚೀಂದ್ರರು ಈ ಇಂದ್ರನ ಮಿತ್ರರೂ ಅನುಯಾಯಿಗಳೂ ಆಗಿರಲಿ''

ಅಗ್ನಿವಾಯುಗಳೂ ''ಆಗಬಹುದು'' ಎಂದರು.

ಶಿಬಿಕೋತ್ಸವದ ದಿನವು ಬಂತು. ಸಪ್ತರ್ಷಿಗಳು ಬಂದರು. ಅವರನ್ನು ಇಬ್ಬರು ಇಂದ್ರರೂ ಸ್ವಾಗತಿಸಿ, ಅಮರಾವತಿಯಲ್ಲಿ ಮೆರವಣಿಗೆ ಮಾಡಿಸಿಕೊಂಡು ಬಂದು, ಅವರಿಗಾಗಿ ನಿರ್ಮಿತವಾಗಿದ್ದ ಮಂದಿರದಲ್ಲಿ ಇಳಿಸಿದರು.

ಅಮರಾವತಿಯು ಅಭೂತಪೂರ್ವವಾಗಿ ಶೃಂಗಾರವಾಗಿದೆ. ಅಲ್ಲಿನ ದೇವಜನಕ್ಕೆಲ್ಲ ಮರೆಯಾಗಿದ್ದ ಇಂದ್ರನು ಬಂದುದೊಂದು, ಎಂದೂ ಇಲ್ಲದ ರೀತಿಯಲ್ಲಿ ಶಿಬಿಕೋತ್ಸವವು ನಡೆಯುವುದೊಂದು–ಹೀಗೆ ಎರಡು ಸಂತೋಷಗಳು. ಈ ಕೊನೆಯಿಂದ ಆ ಕೊನೆಯವರೆಗೂ ಎಲ್ಲೆಲ್ಲೂ ಎಲ್ಲರೂ ನಗು ನಗುತ್ತ ಉತ್ಸಾಹದಿಂದ ವಿರಾಜಿತರಾಗಿ ಬರುತ್ತಿದ್ದಾರೆ.

ಯಥಾಕಾಲದಲ್ಲಿ ಶಿಬಿಕೆಯ ಅರಮನೆಯ ಮುಂದೆ ಬಂತು. ಸುರಗುರುಗಳು ಶಿಬಿಕೆಯನ್ನು ಅರ್ಚಿಸಿದರು. ಶಿಬಿಕೆಯನ್ನು ಪುಷ್ಪ, ವಸನ, ರತ್ನಗಳಿಂದ ಇಂದ್ರವೈಭವಕ್ಕೆ ತಕ್ಕಂತೆ ಅಲಂಕರಿಸಿದ್ದಾರೆ. ಅಲಂಕಾರ್ಯವನ್ನು ಶಚೀಂದ್ರರು ವಹಿಸಿ, ಇನ್ನಿಲ್ಲ ಎಂಬಂತೆ ಮಾಡಿದ್ದಾರೆ.

ಸಪ್ತರ್ಷಿಗಳು ಬಂದು ನಹುಷನನ್ನು ಹಸ್ತಲಾಘವ ಕೊಟ್ಟು, ಕರೆದುಕೊಂಡು ಹೋಗಿ ಪಲ್ಲಕ್ಕಿಯಲ್ಲಿ ಕುಳ್ಳಿರಿಸಿದರು. ಆತನಿಗೆ ಅವರ ಹಸ್ತವನ್ನು ಮುಟ್ಟುತ್ತಲೇ ದೇಹಭಾರವು ಮರೆತು ಹೋಗಿ ನಿರ್ವಿಕಲ್ಪ ಸಮಾಧಿಯು ಬಂದಿದೆ. ಆತನಿಗೆ ಅಂಗಾಂಗಗಳಲ್ಲೂ ರತ್ನಾಭರಣಗಳನ್ನು ಶೃಂಗರಿಸಿದ್ದಾರೆ. ಅರಸನ ಮುಖವೊಂದು ಬಿಟ್ಟು ಇನ್ನೇನೂ ಕಾಣುವಂತಿಲ್ಲ. ಅಲ್ಲಿ ಕುಳಿತಿರುವುದು ರತ್ನಾಭರಣರಂಜಿತವಾದ ಪುತ್ಥಳಿಯೋ, ಜೀವಂತವಾದ ವ್ಯಕ್ತಿಯೋ ಅದೂ ಹೇಳುವಂತಿಲ್ಲ.

ಅಂದಿನ ಶಿಬಿಕೋತ್ಸವವನ್ನು ವರ್ಣಿಸಲು ಯಾರಿಗೂ ಸಾಧ್ಯವಿಲ್ಲ. ಜ್ಞಾನಚಕ್ಷುಗಳಾದವರು ಮೇಲಿಂದ ಪುಣ್ಯಾಹಶಕ್ತಿಗಳು ತರಂಗತರಂಗವಾಗಿ ಇಳಿದು, ಪಾಪಶಕ್ತಿಗಳನ್ನು ಕಬಳಿಸುತ್ತಿರುವುದನ್ನು ನೋಡಿ, ''ನಿಜ, ಸತ್ಪುರುಷರ ವೈಭವವು ಲೋಕಕಲ್ಯಾಣಕಾರಕವು'' ಎಂದು ತಲೆದೂಗಿದರು. ಅಕಾರಣವಾಗಿ ಹರ್ಷವು ಎಲ್ಲೆಲ್ಲೂ ವರ್ಧಿಸುತ್ತಿದೆ. ದುಃಖವನ್ನು ಹೃದಯ, ಮನಸ್ಸುಗಳಿಂದ ಸಮೂಲವಾಗಿ ಕಿತ್ತೆಸೆದಂತೆ ಆಗಿದೆ. ಮರ ಗಿಡಬಳ್ಳಿಗಳೂ ಹೊಸ ಮಳೆಯಲ್ಲಿ ಮಿಂದಂತೆ ಮಂಗಳವಾದ, ಮನೋಹರವಾದ ರೂಪವನ್ನು ಧರಿಸಿವೆ. ಪುರುಷರ ಹೃದಯದಲ್ಲಿ, ಸ್ತ್ರೀಯರ ಮುಖದಲ್ಲಿ, ಹಕ್ಕಿಗಳ ಕಂಠದಲ್ಲಿ ಎಲ್ಲೆಲ್ಲಿಯೂ ಮಾಂಗಲ್ಯ!

ಮಳನೆಯ ದಿನ ಬಂತು. ಅರಸನು ತನ್ನ ನಿತ್ಯಕರ್ಮಗಳನ್ನೂ ಸಪ್ತರ್ಷಿಗಳ ಪೂಜೆಯನ್ನೂ

ಮುಗಿಸಿಕೊಂಡು ಬಂದನು. ಅಲ್ಲಿ ಶಚೀಂದ್ರರೂ, ಅಗ್ನಿವಾಯುಗಳೂ, ಗುರುದ್ವಯರೂ ಯಯಾತಿಯೂ ಕಾದಿದ್ದಾರೆ. ಅರಸನು ಶಚೀಂದ್ರರ ಮುಖವನ್ನು ನೋಡಿದಾಗ ಅವರೇನೋ ಹೇಳಬೇಕೆಂದಿರುವಂತೆ ತೋರಿತು. ಶಚಿಯು ಇಂದ್ರನ ಮುಖವನ್ನು ನೋಡಿ, ಮತ್ತೆ ನಹುಷೇಂದ್ರನ ಕಡೆಗೆ ತಿರುಗಿ :

"ದೇವಾ, ತಾವು ಸಪತ್ನೀಕರಾಗಿ ತಪೋಲೋಕಕ್ಕೆ ಹೋಗಿ ವಾನಪ್ರಸ್ಥಾಶ್ರಮವನ್ನು ಅವಲಂಬಿಸಬೇಕೆಂದಿದ್ದೀರಿ. ಅದು ಸ್ವೇಚ್ಛೆ, ಹಾಗೆಯೇ ಪರೇಚ್ಛೆಯನ್ನೂ ಗೌರವಿಸುವುದು. ತಾವಿಬ್ಬರೂ ದಿವ್ಯದೇಹವನ್ನು ಧರಿಸಿಕೊಂಡು, ಇಲ್ಲಿ ನಾವಿರುವವರೆಗೂ ಇಂದ್ರಸಖರಾಗಿ ಇರಬೇಕೆಂದು ನಮ್ಮ ಪ್ರಾರ್ಥನೆ. ಅದನ್ನು ಸ್ತ್ರೀಮುಖದಿಂದ ತಮ್ಮ ಸನ್ನಿಧಾನದಲ್ಲಿಟ್ಟರೆ ತಪ್ಪದೆ ವರವಾಗಿ, ತಮ್ಮ ಅನುಗ್ರಹವು ಲಭಿಸುವುದೆಂದು ನಾನು ಹೇಳಿದೆ."

"ಏನು ವಿರಜಾದೇವಿಯರೇ, ನಾವು ಬೇಡವೆಂದರೂ ಭೋಗಲಕ್ಷ್ಮಿಯು ನಮ್ಮನ್ನು ಬಿಡುವಂತಿಲ್ಲ. ಓಹೋ ತಮಗೂ ಸಮ್ಮತವಾದಂತಿದೆ. ಹೂಂ, ಆಗಲಿ. ನಿತ್ಯೇಂದ್ರನ ಆಜ್ಞೆಯು ನೈಮಿತ್ತಿಕರಾದ ನಮಗೂ ಮಾನ್ಯವೇ ತಾನೇ?"

ಆ ಒಪ್ಪಿಗೆಯನ್ನು ಕೇಳಿ, ಶಚೀಂದ್ರರ ಮುಖವು ಹಿರಿಹಿರಿ ಹಿಗ್ಗಿತು. ಅಗ್ನಿಯು ಇಂದ್ರನ ಕಣ್ಣಿನ ಸನ್ನೆಯ ಮೇರೆಗೆ, ಐದು ಹರಿವಾಣಗಳ ತುಂಬ ರತ್ನಭೂಷಣ, ವಸನ, ಗಂಧಮಾಲ್ಯಗಳನ್ನು ತರಲು, ಅವೆಲ್ಲವನ್ನು ಶಚೀಂದ್ರರು ವಿರಜಾ ನಹುಷರಿಗೆ ಕಾಣಿಕೆ ಮಾಡಿದರು. ಆತನು ನಗುತ್ತ, "ನಾಳೆ ನಮ್ಮ ಕಾಣಿಕೆ, ಇಂದು ನಿಮ್ಮ ಕಾಣಿಕೆ." ಎಂದು ಒಪ್ಪಿಸಿಕೊಂಡು ಅದೆಲ್ಲವನ್ನೂ ಮಗನಿಗೆ ಕೊಟ್ಟು, "ಯಯಾತಿ, ಇದಿಷ್ಟೂ ನಿನಗೆ ನೆನಪಿರಲಿ; ಧರ್ಮಾಚರಣೆಯ ಫಲವಿದು. ಮನುಷ್ಯರಿಗೆ ದಾನಕ್ಕಿಂತ ಧರ್ಮವಿಲ್ಲ. ಅದರಿಂದ ಕೊಡು. ಕೊಟ್ಟು, ಬದುಕು. ಇದೇ ನಿನಗೆ ನನ್ನ ಸಂದೇಶ" ಎಂದು ಪಾದಗಳಿಗೆ ತಲೆಯಿಟ್ಟಿರುವ ಮಗನಿಗೆ ಮನಃಪೂರ್ವಕವಾಗಿ ಆಶೀರ್ವಾದ ಮಾಡಿದನು.

ಅರಸು ಅಗ್ನಿವಾಯುಗಳ ಕಡೆಗೆ ತಿರುಗಿದನು : "ನಮ್ಮ ಆಳ್ವಿಕೆಯಲ್ಲಿ ತಮಗೆ ಏನಾದರೂ ಅಪಚಾರವಾಗಿದ್ದರೆ, ಅದನ್ನು ದಯೆಯಿಂದ ಕ್ಷಮಿಸಬೇಕು" ಎಂದು ಕೈಮುಗಿದನು. ಅವರಿಬ್ಬರೂ ಇನ್ನಷ್ಟು ನಮ್ರತೆಯಿಂದ ನಮಿಸಿ, "ದೇವ, ಮನುಷ್ಯರು ನಮ್ಮಿಂದ ಅನುಗ್ರಾಹ್ಯರು ಎಂಬ ಅಹಂಕಾರವು ನಮಗಿತ್ತು. ತಮ್ಮ ಸನ್ನಿಧಾನದಿಂದ ನಮ್ಮ ಆ ಅಹಂಕಾರವು ಕಳೆಯಿತು. ಧರ್ಮಾಚರಣದಿಂದ ಮಾನವರು ದೇವತೆಗಳಾದರೆ, ಅವರು ಅತಿದೇವಮಾನವರಾಗುವರು ಎಂಬುದನ್ನು ಕಣ್ಣಾರೆ ಕಂಡೆವು. ಇನ್ನೊಂದು ವಿಷಯದಲ್ಲಿ ನೀವು ನಮಗೆ ಗುರುಸ್ವರೂಪರೂ ಅಹುದು. ನಮಗಿಬ್ಬರಿಗೂ ವಿಶ್ವರೂಪಾಧಿಕಾರವುಂಟು. ಆಗ ವಿಶ್ವವೆಲ್ಲವೂ ನಾವು ಹೇಳಿದಂತೆ ಕೇಳಬೇಕು. ಆದರೆ ಇಂದ್ರನು ಹತ್ಯಾಭಿಹತನಾಗಿ ಕಣ್ಮರೆಯಾದಾಗ, ನಾವು ವಿಶ್ವರೂಪಧಾರಣ ಮಾಡಿ ಆತನನ್ನು ಉಳಿಸಬಹುದು ಎಂಬುದು ನಮಗೆ ಮರೆತು ಹೋಯಿತು. ಹೀಗೆ ನಮ್ಮ ಆತ್ಮಶಕ್ತಿಯ ಪರಿಚಯ ಮಾಡಿಕೊಟ್ಟು ಕಾಪಾಡಿದ ತಾವು ಗುರುಗಳಲ್ಲದೆ ಇನ್ನೇನು?" ಎಂದು ನಾನಾ ವಿಧವಾಗಿ ಹೊಗಳಿ, ಬೇಡಬೇಡವೆನ್ನುತ್ತಿದ್ದರೂ ಆತನಿಗೆ ನಮಸ್ಕಾರ ಮಾಡಿದರು.

ಇಂದು ಶಿಬಿಕೋತ್ಸವದ ಕೊನೆಯ ದಿನ. ಸಪ್ತರ್ಷಿಗಳು ನಹುಷನನ್ನು ಕೈಹಿಡಿದು ಕರೆದುಕೊಂಡು ಬಂದು, ಪೂಜೆಯನ್ನು ಒಪ್ಪಿಸಿಕೊಂಡು ಆಲಂಕೃತವಾಗಿ ಸಿದ್ಧವಾಗಿದ್ದ ಶಿಬಿಕೆಯಲ್ಲಿ ಕೂರಿಸಿದರು. ಅದುವರೆಗೆ ಇತರರು, ನೂರಾರು ಜನ ಪಲ್ಲಕ್ಕಿಯನ್ನು ಹೊರುತ್ತಿದ್ದು, ಸಪ್ತಋಷಿಗಳು ನೆಪಕ್ಕೆ ಹೆಗಲು ಕೊಡುತ್ತಿದ್ದರು. ಇಂದು ಅವರು ಎಲ್ಲವರನ್ನೂ ನಿವಾರಿಸಿ ತಾವೇ ಪಲ್ಲಕ್ಕಿಯನ್ನು ಎತ್ತಿಕೊಂಡರು. ಅದನ್ನು ತಿಳಿದು ಶಿಬಿಕಾಧಿದೇವಿಯು ತನ್ನ ಭಾರವನ್ನೆಲ್ಲ ತಾನೇ ವಹಿಸಿಕೊಂಡಳು. ಅರ್ಧದೂರ ಬಂದಿದೆ. ಎಲ್ಲರೂ ಶಿಬಿಕಯಲ್ಲಿರುವ ಅರಸನನ್ನು ನೋಡಿ, ''ಈ ಮುದ್ರಿಕೆ ಇತರರಿಗೆ ಸಾಧ್ಯವೇ?'' ಎಂದು ಆಶ್ಚರ್ಯಪಡುತ್ತಿದ್ದಾರೆ. ಇಂದ್ರನೂ, ''ಇಂತಹ ಭಾಗ್ಯವು ಇನ್ನು ಯಾರಿಗುಂಟು?'' ಎಂದು ವಿಸ್ಮಿತನಾಗಿದ್ದಾನೆ. ಹೀಗೆ ಎಲ್ಲರೂ ವಿಸ್ಮಯಾವಿಷ್ಟರಾಗಿರುವಾಗ ಅರಸನಿಗೆ ಸಮಾಧಿಯು ಶಿಥಿಲವಾಯಿತು. ಸಪ್ತರ್ಷಿಗಳು 'ಓಂ' ಎಂದು ಸಿಂಹನಾದ ಮಾಡಿ, ತಾವು ಹೊತ್ತಿದ್ದ ಪಲ್ಲಕ್ಕಿಯನ್ನು ಅತ್ತ ಎಸೆದರು. ಪಲ್ಲಕ್ಕಿಯಲ್ಲಿದ್ದ ಅರಸನು ಮೂರು ಉರುಳು ಉರುಳಿ ಭೂಗತನಾದನು. ಎಲ್ಲರೂ ಹಾ ಹಾ ! ಎಂದು ಓಡಿ ಬಂದರು. ಅರಸನು ಮೈ ಕೈ ಒರೆಸಿಕೊಳ್ಳುತ್ತ ಎದ್ದು, ''ಸಪ್ತರ್ಷಿಗಳು ಮಾಡಿದುದು ಸರಿ'' ಎಂದು ಅವರಿಗೆ ಕೈಮುಗಿಯುತ್ತಿದ್ದಾನೆ!

ಎಲ್ಲರೂ ಇನ್ನೂ ಅಷ್ಟು ವಿಸ್ಮಿತರಾದರು. ಅರಸನು ಅವರೆಲ್ಲರನ್ನೂ ಸಮಾಧಾನಮಾಡುತ್ತ, ನಿಯತಿದೇವಿಗೆ ಕೊಟ್ಟ ವಚನವನ್ನು ವಿವರಿಸಿ ಹೇಳಿದನು. ಹಾಗೆಯೇ ನೇರವಾಗಿ ಸಪ್ತರ್ಷಿಗಳ ಬಳಿಗೆ ಹೋಗಿ ನಮಸ್ಕರಿಸಿ ಕೈಮುಗಿದುಕೊಂಡು ಹೇಳಿದನು : ''ಆದ ದ್ರೋಹವನ್ನು ಕ್ಷಮಿಸಬೇಕು. ಅಪರಾಧಕ್ಕೆ ಶಿಕ್ಷೆಯೇನೋ ವಿಧಿಸೋಣವಾಗಲಿ. ಭೂಪತನವಷ್ಟೇಯೋ? ಇನ್ನೂ ಏನಾದರೂ ಉಂಟೋ?''

ಸಪ್ತಋಷಿಗಳು ನಗುತ್ತ, ''ನಾವು ಅಪರಾಧವನ್ನು ತೋರಿಸಿದೆವು. ದಂಡಿಸುವ ಕೆಲಸ ನಿನ್ನದು. ನಿನ್ನ ದಂಡನೆಯು ಸರಿಯಲ್ಲದೇ ಹೋದರೆ, ಆ ಮೇಲೆ ನಾವು'' — ಎಂದರು.

ಅರಸನು, 'ಸರಿ' ಎಂದು ವಿಚಾರಗ್ರಸ್ತನಾಗಿ ಅಲ್ಲಿಯೇ ನಿಂತನು. ಒಂದು ಗಳಿಗೆ ಯೋಚಿಸಿದನು. 'ನಹುಷನ ಅಪರಾಧವು ಗುರುತರವಾಗಿದೆ.' ಈ ಅಪರಾಧಕ್ಕೆ ಶಿಕ್ಷೆಯು ಹೀಗಿರಬೇಕು. ಚೇತನವನ್ನು ಜಡವು ಅಲ್ಲಾಡಿಸಿ ಹೊರಕ್ಕೆ ಎಳೆಯಿತು. ಅದರಿಂದ ಜಡದಲ್ಲಿ ಜಡವಾದ ಅವಸ್ಥೆಯು ಈತನಿಗೆ ಪ್ರಾಪ್ತವಾಗಬೇಕು. ಆದರೆ ಇದು ವಿಧಿನಿಯತವಾಗಿ ಬಂದುದರಿಂದ ಖನಿಜ, ಉದ್ಭಿಜಗಳಲ್ಲದ ತಿರ್ಯಗ್ಯೋನಿಯಲ್ಲಿ ಹುಟ್ಟಬೇಕು. ಈತನು ಇಂದ್ರನಾಗಿದ್ದಾಗ ಈ ಕಾರ್ಯವು ನಡೆಯಿತಾಗಿ ಈತನು ಎಲ್ಲದಕ್ಕಿಂತ ಮಿಗಲಾಗಿ ಅಜಗರವಾಗಿ ಹುಟ್ಟಬೇಕು. ಶಿಕ್ಷೆಯು ಸರಿಯಾಗಿದೆ ತಾನೇ?'' ಎನ್ನುತ್ತ ಶಚೀಂದ್ರನತ್ತ ನೋಡಿದನು.

ಇಂದ್ರನು ಕಣ್ಣಿನ ಒದ್ದೆಯನ್ನು ಒರೆಸಿಕೊಳ್ಳುತ್ತ, ''ಶಿಕ್ಷೆಯು ಸರಿಯಾಗಿದೆ'' ಎಂದನು. ಸಪ್ತರ್ಷಿಗಳಲ್ಲಿ ಒಬ್ಬ ಭಗವಾನರು, ''ಅಪರಾಧಿಯು ಬ್ರಹ್ಮಜ್ಞನು, ಇಂದ್ರನು. ಅದರಿಂದ ಆತನಿಗೆ ಅಜಗರತ್ವವು ಪ್ರಾಪ್ತವಾದರೂ ಇಂದ್ರಾನಂದವೂ ಜಾತಿಸ್ಮರತ್ವವೂ ಇರತಕ್ಕದು'' — ಎಂದು ಕೈ ಎತ್ತಿ ಹೇಳಿದರು.

ಶಚಿಯು ಮುಂದೆ ಬಂದು ಅವರಿಗೆ ನಮಸ್ಕರಿಸಿ, ಸೆರಗೊಡ್ಡಿ ಬೇಡಿದಳು. ''ಈತನು ಸಪತ್ನೀಕನಾಗಿ ತಪೋಲೋಕಕ್ಕೆ ವಾನಪ್ರಸ್ಥನಾಗಿ ಹೋಗಿ ತಪಸ್ಸು ಮಾಡಬೇಕೆಂದಿದ್ದನು. ಇಲ್ಲಿ ವಿರಜಾದೇವಿಯೊಡನೆ ಇಂದ್ರಸಖನಾಗಿ ಕೊನೆಯವರೆಗೂ ಇರುವುದಾಗಿ ನಮಗೆ ವರ ಕೊಟ್ಟಿದ್ದನು...'' ಮುಂದಕ್ಕೆ ಆಕೆಯ ಬಾಯಲ್ಲಿ ಮಾತು ಹೊರಲಿಲ್ಲ. ದುಃಖದಿಂದ ಗಂಟಲು ಕಟ್ಟಿಹೋಯಿತು.

ಭಗವಾನರು ಮತ್ತೆ ಹೇಳಿದರು, ''ಆತನು, ಇನ್ನೂ ಇಂದ್ರನೇ. ಬೇಕಾದರೆ ಆತನೇ, ಅಥವಾ ನಾಳೆ ಇಂದ್ರನಾಗುವ ನಿನ್ನ ಪತಿ. ಯಾರು ಬೇಕಾದರೂ ಈ ಶಿಕ್ಷೆಯನ್ನು ವಿಲೋಪ ಮಾಡಬಹುದು. ಆತನಿಗೂ ಸ್ವರ್ಗವಾಸ, ತಪೋಲೋಕವಾಸಗಳು ತಪ್ಪಿದ್ದಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ಆತನು ಬ್ರಹ್ಮಜ್ಞನು, ನಿರ್ವಿಕಲ್ಪ ಸಮಾಧಿಗೆ ಹೋಗಬಲ್ಲವನು. ಆತನು ಎಲ್ಲಿದ್ದರೆ ಅದು ಬ್ರಹ್ಮಲೋಕಕ್ಕೆ ಮಿಗಿಲಾಗುವುದು'' ಎಂದು ಎಲ್ಲರಿಗೂ ಆಶೀರ್ವಾದ ಮಾಡಿ, ಸಪ್ತರ್ಷಿಗಳು ಅಂತರ್ಧಾನರಾದರು.

ಇಂದ್ರನು ನಹುಷನ ಕೈ ಹಿಡಿದುಕೊಂಡು, ''ದೇವಾ, ಅಪ್ಪಣೆಯಾದರೆ ನಾನು ಈ ಶಿಕ್ಷೆಯನ್ನು ವಿಲೋಪ ಮಾಡುವೆನು'' ಎಂದನು. ನಹುಷನು ನಗುತ್ತ, ''ಅಪರಾಧಿಯು ನಿನ್ನ ಬಳಿ ಬಂದು ಕೇಳಿಕೊಂಡಾಗ ಆ ಕೆಲಸ, ಅದುವರೆಗೆ ಏನವಸರ?'' ಎಂದು ವಿರಜಾದೇವಿಯ ಕಡೆ ತಿರುಗಿದನು. ಆಕೆ ವಿಸ್ಮಯ, ಭೀತಿಗಳಿಂದ ನಿಶ್ಚೇತನಳಾದಂತೆ ಇದ್ದಾಳೆ. ಮಗನ ಆಸರೆಯಿಲ್ಲದಿದ್ದರೆ ಆಕೆಯು ದೇಹಭಾರವನ್ನು ಹೊತ್ತು ನಿಂತೂ ಇರಲಾರಳು. ನಹುಷನು ಆ ಭಾರವನ್ನು ಮಗನಿಂದ ತಾನು ವಹಿಸಿಕೊಂಡು ಹೇಳಿದನು,

''ಈ ಜನ್ಮಾಂತರ ಲಾಭವು ನಿನಗೇನೂ ಇಲ್ಲ ವಿರಜಾ, ನನಗೆ ಮಾತ್ರ. ಯಯಾತೀ, ಈ ಜನ್ಮವು ಭೂಲೋಕದಲ್ಲಿ ಹಿಮಾಲಯ ಪ್ರಾಂತ್ಯದ ದೇವಭೂಮಿಯಲ್ಲಾಗುವುದು. ಆಗ, ನೀನು ಅಭಿಮಾನ ವಹಿಸಿ ಉಪಚಾರಮಾಡಲು ಯತ್ನಿಸಬೇಕು. ಅಲ್ಲಿ ಅಜಗರವಾದಾಗ ನನಗೆ ಕಷ್ಟವಾಗುವುದು ಎಂದುಕೊಳ್ಳಬೇಡ. ದೇಹವು ತಾನಲ್ಲ ಎಂದು ಬಲ್ಲವನಿಗೆ, ಉಪಾಧಿಯ ಕಷ್ಟಗಳಿರುವುದಿಲ್ಲ. ಇನ್ನು ಇದನ್ನು ಇಲ್ಲಿ ಬಿಡೋಣ. ನಾಳೆಯ ಇಂದ್ರಾಭಿಷೇಕದಲ್ಲಿ ಆನಂದಪಡಲು ಸಿದ್ಧರಾಗೋಣ.''

ಎಲ್ಲರಿಗೂ ಹೃದಯವು ಚಿಂತಾಭರವೂ ಆಗಿತ್ತು; ಸೌಖ್ಯಪೂರ್ಣವೂ ಆಗಿತ್ತು. ಯಾರೂ ಮಾತನಾಡದೇ ಮೌನದಿಂದ ಅವನ ಆಣತಿಯನ್ನು ಸ್ವೀಕರಿಸಿದರು.

❋ ❋ ❋ ❋

೨

ಮಲ್ಲಯುದ್ಧ

ಗಳಗನಾಥರ
'ಮಾಧವ ಕರುಣಾ ವಿಲಾಸ' ಕಾದಂಬರಿಯ ಕಥನ

ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ಕಥಾನಕವನ್ನೊಳಗೊಂಡ 'ಮಾಧವ ಕರುಣಾ ವಿಲಾಸ'ವು ಗಳಗನಾಥರ ಶ್ರೇಷ್ಠ, ಸ್ವತಂತ್ರ ಕಾದಂಬರಿಯಾಗಿದೆ; ಅವರ ಪ್ರಸನ್ನ ಶೈಲಿಗೆ ಉತ್ತಮ ಉದಾಹರಣೆಯೆನಿಸಿದೆ. ಯವನರ ದಬ್ಬಾಳಿಕೆಗೆ ಸಿಡಿದೆದ್ದು, ಮಾಧವಾಚಾರ್ಯರ ಮಾರ್ಗದರ್ಶನದಲ್ಲಿ ಹುಕ್ಕ ಮತ್ತು ಬುಕ್ಕರು ವಿಜಯನಗರದಲ್ಲಿ ಸ್ವತಂತ್ರ ರಾಜ್ಯಸ್ಥಾಪನೆ ಮಾಡಿದ ವಿಷಯವು ವಿಸ್ತಾರವಾಗಿ ಈ ಕಾದಂಬರಿಯಲ್ಲಿ ಬಂದಿದ್ದು, ಪ್ರಸ್ತುತ ಭಾಗದಲ್ಲಿ ಹುಕ್ಕನ ಅನುಯಾಯಿಯಾದ ಮಲ್ಲಸರ್ಜನನು ಮಹಮ್ಮದ ತಗಲಖನ ಆಶ್ರಯಸ್ಥ ಜಟ್ಟಿಯಾದ ಮಲಿಕ ನಾಯಬನೊಡನೆ ಮಲ್ಲಯುದ್ಧವನ್ನು ನಡೆಸಿದ್ದರ ಹೃದ್ಯ ವರ್ಣನೆಯಿದೆ.

ಮಲ್ಲಯುದ್ಧ

ಮುಂಜಾವಿನ ಸಮಯ. ಆನೇಗುಂದಿಯ ಜನರಲ್ಲಿ ವಿಲಕ್ಷಣ ಗೊಂದಲವೆದ್ದಿದೆ. ವ್ಯಗ್ರಚಿತ್ತರಾಗಿದ್ದುದರಿಂದ ಅವರ ದಿನದ ಕೆಲಸಗಳೂ ಸುಸೂತ್ರವಾಗಿ ಸಾಗದಂತಾಗಿದೆ. ಪ್ರಾತಃಕಾಲದ ಪೂಜೆ–ಪುರಸ್ಕಾರ ಮಾಡುವವರು, ತಾವು ಎಲ್ಲಿ ಮರೆತವೋ ಎಂಬ ಭ್ರಾಂತಿಯಿಂದ ಆಗಾಗ್ಗೆ ತಿರುತಿರುಗಿ ಮಂತ್ರಗಳನ್ನು ಅನ್ನತೊಡಗಿದ್ದಾರೆ. ಹೆಣ್ಣುಮಕ್ಕಳು ಬಗೆಹರಿಯದ ಆಲೋಚನೆಯಲ್ಲಿ ಮುಳುಗಿ ಉಸುರು ಹಾಕುತ್ತ , ಏನು ಪ್ರಸಂಗ ಬರುವುದೋ ಎಂಬ ಚಿಂತೆಯಲ್ಲಿರುವಾಗ ಕೈಯೊಳಗಿನ ಕೆಲಸ ಮರೆತು, ಥಕ್ಕನೆ ನೆನಪಾದ ಕೂಡಲೇ ಬಡಬಡ ಕೆಲಸಗಳನ್ನು ಮಾಡತೊಡಗಿದ್ದಾರೆ. ವೃದ್ಧರಾದವರು ತಮ್ಮ ಜಂಬುಕೇಶ್ವರರಾಯನ ಕಾಲದ ಚಂದವನ್ನೂ ವೈಭವವನ್ನೂ ಸ್ಮರಿಸಿ, 'ಸದ್ಯದ ರಾಜನಾದ ದೇವರಾಯನಿಗೆ, ಎಂಥ ಭಯಂಕರ ಕಾಲವು ಒದಗಿಬಂತಲ್ಲ.' ಎಂದು ಉಸುರ್ಗರೆಯುತ್ತ ತಮ್ಮ ತಮ್ಮ ಇಷ್ಟದೇವತೆಗಳನ್ನು ಸ್ಮರಿಸತೊಡಗಿದ್ದಾರೆ. 'ಯವನರ ಪ್ರಾಬಲ್ಯವಾಯಿತು. ರಕ್ಷಕರಿಲ್ಲದೆ ಹೋಯಿತು. ಯಾವ ಕಾಲಕ್ಕೆ ಎಂಥ ಪ್ರಸಂಗ ಬಂದೀತೆಂಬುದನ್ನು ಹೇಳಲಿಕ್ಕೆ ಬಾರದಾಯಿತು' ಎಂದು ಅಲ್ಲಲ್ಲಿ ನಿರಾಶೆಯ ಉದ್ಗಾರಗಳು ಹೊರಡಹತ್ತಿವೆ.

ತಾಸು ಹೊತ್ತು ಏರಿ ದಿನಮಣಿಯು ಮೇಲಕ್ಕೆ ಬರತೊಡಗಲು, ಯಪನರಾವುತರ ಬೆಟ್ಟದಂಥ ಕುದುರೆಗಳು, ತಮ್ಮ ಖುರಗಳ ಆಘಾತದಿಂದ ಕರ್ನಾಟಕ ಭೂಮಾತೆಯನ್ನೇ ಅಲ್ಲ, ತಮ್ಮ ದರ್ಪದಿಂದ ಕನ್ನಡಿಗರ ದುರ್ಬಲ ಹೃದಯವನ್ನು ಕೂಡ ನಡುಗಿಸುತ್ತ ಅರಮನೆಯ ಕಡೆಗೆ ಸಾಗಹತ್ತಿದವು. ಆ ರಾವುತರ ಕ್ರೂರ ಮುದ್ರೆಗಳನ್ನೂ ಅವರ ಭವ್ಯ ಶರೀರಗಳನ್ನೂ ನೋಡಿ ಪುಕ್ಕ ಜನರು ಅಂಜಿ ಮನೆಯನ್ನು ಸೇರಹತ್ತಿದರು. ಬೀದಿಯಲ್ಲಿ ಗದ್ದಲವು ಕಡಿಮೆಯಾಗ ಹತ್ತಿತು. ಮನೆಯ ಬಾಗಿಲುಗಳು ಇಕ್ಕಹತ್ತಿದವು. ಸುಂದರ ಸ್ತ್ರೀಯರ ಸಪ್ಪು ಅಡಗಹತ್ತಿತು. ವ್ಯಾಪಾರ ಉದ್ಯಮಗಳು ನಿಂತವು.

ಅಷ್ಟರಲ್ಲಿ ಭವ್ಯಾಕಾರದ ಒಬ್ಬ ಯವನವೀರನು ಅಶ್ವಾರೂಢನಾಗಿ ರಾಜಮಾರ್ಗವಿಡಿದು ಸಾವಕಾಶ ಬರತೊಡಗಿದನು. ಆತನ ಹಿಂದು, ಮುಂದು, ಮಗ್ಗುಲಗಳಲ್ಲಿ ಅಂಗರಕ್ಷಕರಾದ ತೀಕ್ಷ್ಣಶಸ್ತ್ರದ ಹಲವು ಯವನಸೈನಿಕರು ಅಶ್ವಾರೂಢರಾಗಿ, ತಮ್ಮ ಒಡೆಯನ ಚಲನವಲನದಲ್ಲಿ ಸಂಪೂರ್ಣ ದೃಷ್ಟಿಯಿಟ್ಟು, ಬಹು ಜಾಗರೂಕತೆಯಿಂದ ಸಾಗಿ ಬರುತ್ತಲಿದ್ದರು. ಆ ಘನವಂತನ ಮೈಬಣ್ಣ ಕೆಂಪು ; ಮುಖಮುದ್ರೆ ಉಗ್ರ; ಮೈಕಟ್ಟು ಹವಣೆಯದು. ಆತನ ಇಡಿಯ ಮೂರ್ತಿಯು ಮನೋಹರವಾಗಿದ್ದರೂ ಅತ್ಯಂತ ಭಯಪ್ರದವಾಗಿತ್ತು. ಈ ಕ್ರೂರ ಪುರುಷನು ಸಿಟ್ಟಿಗೆದ್ದರೆ ಕ್ಷಣದಲ್ಲಿ ಆನೇಗುಂದಿಗೆ

ಆನೇಗುಂದಿಯನ್ನೇ ಮಣ್ಣು ಗೂಡಿಸಬಹುದೆನ್ನುವ ಹಾಗೆ ನಮ್ಮ ಅಳ್ಳೆದೆಯ ಕನ್ನಡಿಗರಿಗೆ ತೋರಹತ್ತಿತ್ತು, ಯಾಕೆಂದರೆ ಆ ರಾಕ್ಷಸಸ್ವಭಾವದ ಘನವಂತನ ಕ್ರೂರತನದ ಹಲವು ಚರಿತ್ರಗಳನ್ನು ಕೇಳಿ ಕೇಳಿ ಅವರ ದುರ್ಬಲ ಹೃದಯಗಳು ಹಣ್ಣು ಹಣ್ಣಾಗಿ ಚರಿತ್ರಗಳನ್ನು ಕೇಳಿ ಕೇಳಿ ಅವರ ದುರ್ಬಲ ಹೃದಯಗಳು ಹಣ್ಣು ಹಣ್ಣಾಗಿ ಹೋಗಿದ್ದವು! ಆ ಭವ್ಯ ಪುರುಷನು ತನ್ನ ಕೆಂಪಡರಿದ ಕಣ್ಣುಗಳಿಂದ ರಾಜಬೀದಿಯ ಬದಿಗಳನ್ನು ನೋಡುತ್ತ ಸಾಗಿರಲು, ಆತನ ಉಗ್ರ ನೋಟಕ್ಕೆ ಗುರಿಯಾಗಲಾರದೆ, ಕೆಲವರು ತಮ್ಮ ದೃಷ್ಟಿಗಳನ್ನು ಹೊರಳಿಸುವರು. ಪುಕ್ಕರಲ್ಲಿ ಕೆಲವರು ತಮ್ಮ ಮನೆಯ ಬಾಗಿಲ ಮರೆಗೆ, ಕೆಲವರು ಕಿಟಕಿಯಮರೆಗೆ ನಿಂತು ಆತನನ್ನು ನೋಡುತ್ತಿದ್ದರು. ಹೆಣ್ಣು ಮಕ್ಕಳು ಮನಸ್ಸುನಿಲ್ಲದೆ, ತಮ್ಮ ಮನೆಯ ಇಂಥ ಪುಕ್ಕ ಗಂಡಸರ ಮರೆಗೆ ನಿಂತು ಅಂಜುತ್ತಂಜುತ್ತ ಆ ಲೋಕವಿಲಕ್ಷಣ ಪುರುಷನನ್ನು ನೋಡತೊಡಗಿದರು. ಆ ಧೀರಪುರುಷನು ಇದಾವುದನ್ನೂ ಲಕ್ಷಿಸದೇ ಅರಮನೆಯ ಸಮೀಪಕ್ಕೆ ಬರುತ್ತಿರಲು, ಒಂದು ಬದಿಯಿಂದ ಗಾಯನದ ಇಂಪಾದ ಸ್ವರವು ಕೇಳತೊಡಗಿತು !

ಆ ಗಾಯನ ಮಾಡುವ ವ್ಯಕ್ತಿಯು ತರುಣ ಸುಂದರಿಯಾಗಿದ್ದಳು. ಆಕೆಯ ಸುಂದರ ಜಟಾಮಂಡಲ, ಕೇವೆಯ ಬಣ್ಣದ ಮನೋಹರವಾದ ಕಪನಿ, ಕೊರಳೊಳಗಿನ ರುದ್ರಾಕ್ಷಮಾಲೆ, ಬಗಲಿಗೆ ಹಾಕಿದ ಜೋಳಿಗೆ, ಕೈಯೊಳಗಿನ ಏಕತಾರಿಯವಾದ್ಯ–ಇವು ಆಕೆಯ ಗೌರಕಾಯಕ್ಕೆ ಬಹಳವಾಗಿ ಒಪ್ಪುತ್ತಿದ್ದವು. ಆಕೆಯು ಭಸ್ಮವನ್ನು ಬಳಿದಿದ್ದಳು. ತನ್ನ ಮುಖದಲ್ಲಿ ಉಕ್ಕಿ ಹೊರಸೂಸುವ ತಪಃಕಾಂತಿಯ ತೀವ್ರತೆಯು ಕಡಿಮೆಯಾಗಬೇಕೆಂದು ಆಕೆಯು ಮುಖಕ್ಕೆ ಭಸ್ಮ ಹಚ್ಚಿಕೊಂಡಂತೆ ತೋರುತ್ತಿತ್ತು ; ಆದರೆ ವಿನಯಶಾಲಿಯಾದ ಶ್ರೀಮಂತನು ತನ್ನ ಐಶ್ವರ್ಯದ ಪ್ರಭಾವವನ್ನು ಮುಚ್ಚಿಕೊಳ್ಳುವುದಕ್ಕಾಗಿ ಬಡತನದ ಸ್ವಚ್ಛವಾದ ಉಡಿಗೆ–ತೊಡಿಗೆಗಳನ್ನು ಧರಿಸಿಕೊಳ್ಳಲು ಅದರಿಂದ ಆತನ ಐಶ್ವರ್ಯದ ಪ್ರಭಾವವು ಮತ್ತಿಷ್ಟು ಹೆಚ್ಚುವಂತೆ, ಆ ತರುಣಿಯ ದಿವ್ಯ ತೇಜಸ್ಸಿನ ಪ್ರಭಾವವು ಪವಿತ್ರ ವಿಭೂತಿಧಾರಣದಿಂದ ಮತ್ತಿಷ್ಟು ಹೆಚ್ಚಾಗಿತ್ತು. ಆಕೆಯು ಬಹು ಗಾಂಭೀರ್ಯದ ಹಾವಭಾವಗಳಿಂದ ಗಾಯನ ಮಾಡುತ್ತ ರಾಜಬೀದಿಯನ್ನು ಹಿಡಿದು ಬರತೊಡಗಿದಳು.

ಆ ಯವನವೀರನು ಕ್ರೂರನಿದ್ದರೂ ಹಲವು ವಿದ್ಯೆಗಳಲ್ಲಿಯೂ ಕಲೆಗಳಲ್ಲಿಯೂ ನಿಪುಣನಾಗಿದ್ದನು. ಗಾಯನಕಲೆಯ ಮರ್ಮವು ಚೆನ್ನಾಗಿ ಆತನಿಗೆ ಗೊತ್ತಿತ್ತು. ಆತನೂ ಆತನ ಪರಿವಾರದವರೂ ಅತ್ಯಂತ ಲುಬ್ಧರಾಗಿ, ಗಾಯನ ಕೇಳುತ್ತ ಕುದುರೆಯ ಮೇಲೆ ಕುಳಿತಿರುವಾಗ, ಚಡಪಡಿಸುವ ಆ ಕುದುರೆಗಳ ಖುರಗಳ ಆಘಾತದಿಂದ ಎಚ್ಚತ್ತವಳಂತೆ, ಆ ತರುಣ ಗಾಯಕಿಯು ಮೆಟ್ಟಿಬಿದ್ದು ಎಚ್ಚತ್ತು, ತಟ್ಟನೆ ತನ್ನ ಗಾಯನವನ್ನು ನಿಲ್ಲಿಸಿದಳು; ಆ ವಿಶಾಲಾಕ್ಷಿಯು ಬೆದರಿದ ಎರಳೆಯಂತೆ ಬಿರಿಬಿರಿ ಕಣ್ಣು ಬಿಡುತ್ತ ಮಗ್ಗಲಿಗೆ ಸರಿದು ನಿಂತಳು. ಆಗ ಆ ಯವನ ವೀರನು, "ದೇವಾಂಗನೆಯೇ, ನೀನಾರು? ಗುಣಲುಬ್ಧನಾದ ಈ ತಗಲಖ ಮಹಮ್ಮದನು ನಿನಗಿಂತ ಹೆಚ್ಚಿನ ಗಾಯಕಿಯರನ್ನು ನೋಡಿರುವನು; ಆದರೆ ನಿನ್ನಲ್ಲಿಯ ಈ

ದೈವೀ ತೇಜಸ್ಸನ್ನು ಮಾತ್ರ ಆತನು ಎಂದೂ ನೋಡಿದ್ದಿಲ್ಲ. ಇಂದಿನ ದರ್ಬಾರದಲ್ಲಿ ನೀನು ಇರು. ನಿನ್ನ ಮಧುರ ಗಾಯನದಿಂದ ನನ್ನನ್ನು ಸಂತೋಷಗೊಳಿಸುವೆಯಂತೆ. ದರ್ಬಾರವಾದರೂ ನೀನಿದ್ದ ಈ ಬೀದಿಯಲ್ಲಿಯೇ ನೆರೆಯಲಿ; ಆ ಕೃತಘ್ನ ದೇವರಾಯನ ಅರಮನೆಯ ದರ್ಬಾರವು ನನಗೆ ಬೇಕಾಗಿಲ್ಲ'' ಎಂದು ನುಡಿದು ದೇವರಾಜನಿಗೆ ಹಾಗೆ ಹೇಳುವಂತ ಬಳಿಯಲ್ಲಿಯ ಒಬ್ಬ ಅಂಗರಕ್ಷಕನನ್ನು ಆಜ್ಞಾಪಿಸಿದನು.

'ಸೆಟ್ಟಿ ಇಳಿದಲ್ಲಿ ಪಟ್ಟಣ'ವೆಂಬ ಮಾತು ಸುಳ್ಳಲ್ಲ. ಅದರಲ್ಲಿ ತಗಲಖ ಮಹಮ್ಮದನು ಬರಿಯ ಶೆಟ್ಟಿಯೇ ಅಲ್ಲ, ಯಾರ ಮಾತೂ ಕೇಳದ ಎಟ್ಟಿಯೂ ಆಗಿದ್ದನು. ಆತನು ಮುನಿದರೆ ಕೃತಾಂತನೆಂಬುದು ಎಲ್ಲರಿಗೂ ಗೊತ್ತಿತ್ತು; ಈ ಹುಚ್ಚ ದೊರೆಯು ಸಾಮಾನ್ಯ ವ್ಯಕ್ತಿಯಲ್ಲ. ದಿಲ್ಲಿಯ ರಾಜಧಾನಿಯ ಜನರನ್ನೆಲ್ಲ ದೌಲತಾಬಾದಿಗೆ ಮೂರು ದಿನಗಳಲ್ಲಿ ಹೊರಡಿಸಿದನು ! ಇಂಥ ಕ್ರೂರನ ಕೆಲಸದಲ್ಲಿ ತಡಮಾಡಿದರೆ ಯಾರಿಗೆ ಏನು ಶಿಕ್ಷೆಯಾಗುವದೊ ಎಂಬ ಅಂಜಿಕೆಯಿಂದ ಪ್ರತಿಯೊಬ್ಬನು ಮುಗಿಬಿದ್ದು ಕೆಲಸಮಾಡ ತೊಡಗಿದನು.

ಇಂದಿನ ದರ್ಬಾರದಲ್ಲಿ ಮಹಮ್ಮದನ ಅಣ್ಣನ ಮಗ ಬಹಾಉದ್ದೀನನ ಹಾಗೂ ಅವನ ಸಂಗಡಿಗರ ವಿಚಾರಣೆಯಾಗತಕ್ಕದ್ದಿತ್ತು. ಬಹಾಉದ್ದೀನನು, ಹಗ್ಗನೆಂದು ಕರೆಯಲ್ಪಡುತ್ತಿದ್ದ ಹುಕ್ಕನ ಅನುಮತಿಯಿಂದ, ಮಲ್ಲಸರ್ಜನನೇ ಮೊದಲಾದವರೊಡನೆ ದ್ವಾರಸಮುದ್ರದ ಬಲ್ಲಾಳನ ಆಶ್ರಯಕ್ಕೆ ಹೋದಾಗ, ಬಲ್ಲಾಳರಾಯನು ತಗಲಖ ಮಹಮ್ಮದನ ಅಂಜಿಕೆಯಿಂದ ತನ್ನ ಕ್ಷಾತ್ರಧರ್ಮವನ್ನು ಮರೆತು ಶರಣಾಗತನಾದ ಬಹಾಉದ್ದೀನನನ್ನು ಅವನ ಸಂಗಡಿಗರೊಡನೆ ಸೆರೆಹಿಡಿದು, ಮಹಮ್ಮದನಿಗೆ ಒಪ್ಪಿಸಿಬಿಟ್ಟನು. ಬಹಾಉದ್ದೀನನು ಆನೆಗುಂದಿಯ ಅರಸನ ಹಾಗೂ ಅಲ್ಲಿಯ ಕೆಲವು ಶೂರ ಜನರ ಸಹಾಯದಿಂದ ಬಹು ದಿನ ಕೈಗೆ ಸಿಗದೆ ಮಹಮ್ಮದನಿಗೆ ತೊಂದರೆ ಕೊಟ್ಟಿದ್ದನಾದ್ದರಿಂದ ಆನೆಗುಂದಿಯವರ ಮೇಲೆ ಮಹಮ್ಮದನ ಸಿಟ್ಟು ವಿಶೇಷವಾಗಿ ಇತ್ತು.

ಬಟ್ಟಬಯಲಿನ ಆ ದರ್ಬಾರದಲ್ಲಿ ಭಯಾನಕ ರಸವು ತುಂಬಿ ಹೊರಸೂಸುತ್ತಿತ್ತು. ಸಿಟ್ಟಿನಿಂದ ಉರಿಯಹತ್ತಿದ ಮಹಮ್ಮದನೊಡನೆ ಮಾತನಾಡುವ ಧೈರ್ಯವು ಹೋಗಲಿ; ಎದ್ದು ಒಬ್ಬನೂ ಮುಜರೆ ಮಾಡಲೊಲ್ಲನು; ಸ್ತುತಿಪಾಠಕನು ಸ್ತುತಿಪರ ಶಬ್ದಗಳನ್ನು ಉಚ್ಚರಿಸಲೊಲ್ಲನು. ಇಡಿಯ ದರ್ಬಾರವು ನಿಶ್ಶಬ್ದವಾಗಿತ್ತು.

ತಗಲಖನ ಮುಂದೆ ನಿಲ್ಲಿಸಲ್ಪಟ್ಟಿದ್ದ ಬಹಾಉದ್ದೀನನು ಧೀರ ಗಂಭೀರ ವೀರಪುರುಷನಾಗಿದ್ದನು. ತನ್ನ ಕ್ರೂರ ಕಕ್ಕನಿಂದ ಲೋಕಕ್ಕಾಗುವ ತಾಪವನ್ನು ತಪ್ಪಿಸುವ ಮನಸ್ಸಿನಿಂದ ಆತನು ದಕ್ಷಿಣದಲ್ಲಿ ಬಂಡಾಯವೆಬ್ಬಿಸಿದಂತೆ ಆಗಿತ್ತು. ಆತನ ಮುಖದಲ್ಲಿ ಅಂಜಿಕೆಯ ಲಕ್ಷಣವು ಲವಲೇಶವಾದರೂ ತೋರುತ್ತಿದ್ದಿಲ್ಲ. ಆ ಗಳಿಗೆಗೆ ಮಹಮ್ಮದನ ತಮೋಗುಣಕ್ಕೂ ಬಹಾಉದ್ದೀನನ ಸತ್ವಗುಣಕ್ಕೂ ಗುಪ್ತ ಸಂಗರವು ಒದಗಿತ್ತೆಂದು ಹೇಳಬಹುದು.

ಇತ್ತ ಮಹಮ್ಮದನು ಸಂತಾಪದಿಂದ ಬಹಾಉದ್ದೀನನನ್ನು ನೋಡುತ್ತ, "ಏ, ಬದಮಾಷ್, ನಿನ್ನ ಕೃತಕರ್ಮದ ಪ್ರಾಯಶ್ಚಿತ್ತವನ್ನು ಭೋಗಿಸು. ತಗಲಖ ಮಹಮ್ಮದನೊಡನೆ ವಿರೋಧ ಬೆಳೆಸಿದವನ ಗತಿಯು ಏನಾಗುತ್ತದೆಂಬುದನ್ನುಜನರು ನೋಡಿ ಎಚ್ಚರಪಡಲಿ" ಎಂದು ಎರಡೇ ಮಾತುಗಳನ್ನಾಡಿ, ತನ್ನ ಅಂಗರಕ್ಷಕರಲ್ಲಿ ಒಬ್ಬನನ್ನು ಕುರಿತು, "ಹೋಗು. ಈ ನೆರೆದ ದರ್ಬಾರದಲ್ಲಿ ಈ ನೀಚನ ಮೈದೊಗಲು ಸುಲಿಸು," ಎಂದು ಆಜ್ಞಾಪಿಸಿದನು. ಕೂಡಲೇ ಸೇವಕರು ಮುಂದುವರಿದು ಬಹಾಉದ್ದೀನನನ್ನು ಹಿಡಿದಳೆದರು. ಈ ಕ್ರೂರ ಕರ್ಮವನ್ನು ನೋಡಲಾರದೆ ಯಾರಾದರೂ ಎದ್ದು ಹೋಗಬೇಕೆಂದರೆ ಬಾದಶಹನ ದುಸ್ಸಹವಾದ ದರ್ಪವು ಅವರನ್ನು ಮೇಲಕ್ಕೇಳಗೊಡಲೊಲ್ಲದು!

ತನ್ನ ಮಿತ್ರನಿಗೆ ಈ ಕ್ರೂರ ಶಿಕ್ಷೆಯನ್ನು ವಿಧಿಸಿದ್ದನ್ನು ನೋಡಿ ದೇವರಾಯರಿಗೆ ಸ್ವಲ್ಪ ಸಂತಾಪವೂ ಆಯಿತು. ಆ ಸಂತಾಪದ ಭರದಲ್ಲಿ ಆತನು ತನ್ನ ಸೈನಿಕರ ಕಡೆಗೆ ನೋಡಿ ಏನೋ ಆಜ್ಞಾಪಿಸುವ ಹವಣಿಕೆಯಲ್ಲಿದ್ದನು. ಆದರೆ ಜಂಬುಕೇಶ್ವರರಾಯನ ದುರವಸ್ಥೆಯು ಅವನ ಕಣ್ಣಿಗೆ ಕಟ್ಟಿ, ಆ ವೃದ್ಧರಾಜನು ತನ್ನ ಸಂತಾಪವನ್ನು ತನ್ನೊಳಗೇ ನುಂಗಿಕೊಂಡು ಉಸುರ್ಗರೆದನು. ಮುಸಲ್ಮಾನ ಸೈನ್ಯದ ಪ್ರತಾಪಕ್ಕೆ ಅಂಜಿದ್ದ ಕನ್ನಡ ಸೈನಿಕರಿಗೆ ದೇವರಾಯನ ಈ ಹೇಡಿತನದಿಂದ ಸಮಾಧಾನವೇ ಆಯಿತು!

ಇತ್ತ ಸೇವಕರು ಬಹಾಉದ್ದೀನನನ್ನು ನಿರ್ದಯದಿಂದ ಹಿಡಿದೆಳೆಯುವಾಗ ಕನ್ನಡಿಗರ ಹೆಣ್ಣುಗರಳಿನ ಹೃದಯಗಳು ಕಂಪಿಸಿ, ಈ ಕ್ರೂರನಿಂದ ತಮಗೇನು ಉಪಹತಿಯು ತಟ್ಟುವದೋ ಎಂಬ ಚಿಂತೆಯು ಅವರನ್ನು ಬಾಧಿಸಹತ್ತಿತು. ಮೇಲೆ ಬಿಸಿಲ ತಾಪ, ಅಂತರಂಗದಲ್ಲಿ ಶೋಕದ ತಾಪ, ಎದುರಿಗೆ ಪ್ರತ್ಯಕ್ಷ ಮಾರಿಯಂತೆ ನರಬಲಿಗಾಗಿ ಕುಳಿತಿದ್ದ ಕ್ರೂರನ ದರ್ಶನದ ತಾಪ–ಹೀಗೆ ತಾಪತ್ರಯಗಳಿಂದ ಪೀಡಿತರಾಗಿ ಜನರು ತಳಮಳಿಸುತ್ತಿರಲು, ಮೈದೊಗಲು ಸುಲಿಯುವ ಸರ್ವಸಾಧನಗಳು ಬಹಾಉದ್ದೀನನ ಬಳಿಯಲ್ಲಿ ಬಂದುಬಿದ್ದವು. ಇಷ್ಟಾದರೂ ಬಹಾಉದ್ದೀನನ ಗಾಂಭೀರ್ಯವು ಅಳಿದಿದ್ದಿಲ್ಲ. ಅವನು ತನ್ನ ಕಕ್ಕನನ್ನು ಪ್ರಾರ್ಥಿಸಲೂ ಇಲ್ಲ, ತಿರಸ್ಕರಿಸಲೂ ಇಲ್ಲ. ತನ್ನೊಡನೆ ಸೆರೆಯಾಳಾಗಿ ಬಂದಿದ್ದ ಮಲ್ಲಸರ್ಜನನ ಗತಿಯೇನಾಗುವುದೋ ಎಂದು ವ್ಯಸನಪಟ್ಟನು. ಈ ಪ್ರಸಂಗದಲ್ಲಿ ಉದಾರಾಂತಃಕರಣದ ನಮ್ಮ ಹೆಗ್ಗಣ್ಣನು ಬಂದಿರಬಹುದೆ? ಎಂದು ಆತನು ನಾಲ್ಕೂ ಕಡೆಗೆ ನೋಡಿದನು ಆದರೆ ಅಲ್ಲಿ ದುಃಖದಿಂದ ಕಣ್ಣೀರು ಸುರಿಸುವ ಕನ್ನಡಿಗರ ಮುಖಗಳೇ ಕಂಡವಲ್ಲದೆ, ಅನ್ಯಾಯದ ಆಚರಣೆಗಾಗಿ ಹುಬ್ಬುಗಂಟಿಕ್ಕಿದ ಹೆಗ್ಗಣ್ಣನ ಉಗ್ರ ಮುಖದರ್ಶನವಾಗಲಿಲ್ಲ!

ಬಹಾಉದ್ದೀನನು ಕಣ್ಣುಗಳನ್ನು ಮುಚ್ಚಿ, "ಯಾ ಅಲ್ಲಾ!" ಎಂದು ಆಕಾಶದ ಕಡೆಗೆ ಮುಖವೆತ್ತಿ, ದೇವರನ್ನು ಧ್ಯಾನಿಸುತ್ತ ನಿಂತಾಗ, ಆತನ ಮುಖದಲ್ಲಿ ವಿಲಕ್ಷಣವಾದ ದೈವೀ ತೇಜಸ್ಸು ಪ್ರಕಟವಾಯಿತು. "ಹೂಂ! ಸುಲಿಯಿರಿ ಈ ನೀಚ ಬಂಡುಗಾರನ ಚರ್ಮವನ್ನು"–ಎಂದು ಮಹಮ್ಮದನು ಆವೇಶದಿಂದ ಮುಂದಕ್ಕೆ ಬಂದು ಆಜ್ಞಾಪಿಸಲು,

ಸೇವಕರು ಬಹಾಉದ್ದೀನನ ಚರ್ಮವನ್ನು ಅತ್ಯಂತ ಕ್ರೂರತನದಿಂದ ಸುಲಿಯಹತ್ತಿದ್ದರು! ಪ್ರಿಯವಾಚಕರೇ, ನಮ್ಮ ಲೇಖನಿಯು ತತ್ತರಿಸುವದರಿಂದ ಈ ಕ್ರೂರಕೃತ್ಯವನ್ನು ನಾವು ವರ್ಣಿಸಲಾರೆವು.

ಮಧ್ಯಾಹ್ನದ ಬಿಸಿಲಲ್ಲಿ ಒದಗಿಸ ಈ ಘೋರ ಕೃತ್ಯವನ್ನು ನೋಡಿ, ''ಹಾ ಹಾ!'' ಎಂಬ ರವವು ತನ್ನಿಂದ ತಾನೆ ಜನರ ಬಾಯಿಂದ ಹೊರಟಿತು. ಆದರೆ ಬಹಾಉದ್ದೀನನು ಮಿಸುಗಲಿಲ್ಲ; ಮಿಸುಗುವುದಿಲ್ಲ! ಹೀಗೆ ನಿಂತಿರುವವನನ್ನು ಮುಹಮ್ಮದನು ಸಂತಾಪದಿಂದ ಬಂದು ಒದೆಯಲು, ಆ ದೈವಹೀನನು ನೆಲಕ್ಕೆ ಬಿದ್ದವನು ಬಿದ್ದು ಹೋದನು! ದರ್ಬಾರದ ಅಂದಿನ ಕಾರ್ಯವು ಮುಗಿಯಿತು. ಆಗ ನೆರೆದಿದ್ದವರ ಮುಖದಿಂದ, ''ಇದೇನು ದೇವರಾಯನ ದರ್ಬಾರವೋ, ಯಮನ ದರ್ಬಾರವೋ,'' ಎಂಬ ಉದ್ಗಾರವು ಹೊರಡುತ್ತಿರಲು, ಮುಹಮ್ಮದನು ಅಶ್ವಾರೂಢನಾಗಿ, ಅಂಗರಕ್ಷಕರೊಡಗೂಡಿ ತನ್ನ ಬಿಡಾರದ ಕಡೆಗೆ ನಡೆದನು.

ಮುಹಮ್ಮದನು ಪಂಜಾಬದಲ್ಲಿ ಬಂಡೆದ್ದ ಜನರ ಶಾಸನ ಮಾಡುವುದಕ್ಕಾಗಿ ಈಗಾಗಲೇ ಹೋಗತಕ್ಕವನಿದ್ದನು. ಆದರೆ ಕನ್ನಡಿಗರ ಮೇಲೆ ತನ್ನ ದರ್ಪವನ್ನು ಕೂಡ್ರಿಸುವುದಕ್ಕಾಗಿ, ಅವರ ಸಮಕ್ಷಮ ಇತರ ಸೆರೆಯಾಳುಗಳನ್ನು ಕ್ರೂರತನದಿಂದ ಶಿಕ್ಷಿಸಬೇಕಾಗಿತ್ತೆಂದೇ ಮರುದಿನ ಮತ್ತೆ ದರ್ಬಾರನ್ನು ನೆರೆಸಿದನು. ಆ ಕೂರನ ಅಪ್ಪಣೆಯಿಂದ ಬಹಾಉದ್ದೀನನ ಶವವು ಬಿದ್ದಲ್ಲಿಯೆ ಬಿದ್ದಿತ್ತು. ದರ್ಪ ವಿಶೇಷದಿಂದ ಜನರ ಮನಸ್ಸನ್ನು ಬಗ್ಗು ಬಡಿಯಬೇಕೆಂದು ಬುದ್ಧಿಪೂರ್ವಕವಾಗಿ ಹಾಗೇ ಶವವನ್ನು ಬೀಳಗೊಟ್ಟು, ಕಾವಲಿಡಿಸಿದ್ದನು. ಇದರಿಂದ ಅಂದಿನ ಭಯಂಕರ ದರ್ಬಾರವು ಅಮಂಗಲ ಸುರಿಯುತ್ತಿತ್ತು.

ಮುಹಮ್ಮದನು ಆಸನದಲ್ಲಿ ಕುಳಿತ ಕೂಡಲೇ ದೇವರಾಯನನ್ನು ಕುರಿತು ಸಿಟ್ಟಿನಿಂದ, ''ದೇವರಾವ, ವೃದ್ಧಾಪ್ಯದ ಮೂಲಕ ನಿಮ್ಮ ಶಕ್ತಿಯು ಕ್ಷೀಣವಾದರೂ ನಿಮ್ಮ ಮಿತ್ರದ್ರೋಹದ ಕಸುವು ಕಡಿಮೆಯಾಗಿರುವುದಿಲ್ಲ. ನಮ್ಮ ಶತ್ರುಗಳಿಗೆ ನಿಮ್ಮ ರಾಜ್ಯದಲ್ಲಿ ಆಶ್ರಯವೇ? ನಮ್ಮ ಪ್ರತಿನಿಧಿಯಾದ ಕಾಶೀಮನೊಡನೆ ನಿಮ್ಮ ದ್ರೋಹವೇ? ಎಲ್ಲಿರುವನು ನಿಮ್ಮ ಆ ಕುರುಬರ ಹೆಗ್ಗನೆಂಬವನು? ಅವನ ಒಳಸಂಚುಗಳೆಲ್ಲ ನಮಗೆ ತಿಳಿದಿವೆ. ಇರಲಿ. ಮೊದಲು ಮಲ್ಲಸರ್ಜನನೆಂಬ ಪುಂಡನ ಸಮಾಚಾರವನ್ನು ತೆಗೆದುಕೊಳ್ಳೋಣ,'' ಎಂದು ಅಂಗರಕ್ಷಕರತ್ತ ನೋಡಲು ಕೂಡಲೇ ಮಲ್ಲಸರ್ಜನನನ್ನು ಬಹಾಉದ್ದೀನನದ ಶವದ ಬಳಿಯಲ್ಲಿ ತಂದು ನಿಲ್ಲಿಸಿದರು.

ಜಾತಿಯಿಂದ ಮಲ್ಲಸರ್ಜನನು ಕುರುಬನಾಗಿದ್ದರೂ, ಶೌರ್ಯವು ಅವನ ಹುಟ್ಟುಗುಣವಾಗಿತ್ತು. ಬಹಾಉದ್ದೀನನ ಅವಸ್ಥೆಯನ್ನು ನೋಡಿ ಬಹಳ ವಿಷಾದವಾಗಿ ಆತನು ಒಮ್ಮೆ ಮುಹಮ್ಮದನನ್ನೂ ಕನ್ನಡ ಸೈನಿಕರನ್ನೂ ಸಂತಾಪದಿಂದ ನೋಡಿದನು. ಅವನನ್ನು ನೋಡಿ ಕನ್ನಡಿಗರಲ್ಲಿ ಒಂದು ಪ್ರಕಾರದ ಹೊಸ ಜೀವನದ ಸಂಚಾರವಾದಂತಾಗಿ, ''ಏನೇ ಆಗಲಿ, ಇಂದು ಈ ವೀರನನ್ನು ಮುಹಮ್ಮದನ ಕ್ರೂರತನಕ್ಕೆ ತುತ್ತಾಗಗೊಡಬಾರದು.''

ಎಂದು ಆಡಿಕೊಳ್ಳಹತ್ತಿದರು. ಅವರಿಗೆ ಮಲ್ಲಸರ್ಜನನಗುರುತಿಲ್ಲ, ಪರಿಚಯವಿದ್ದಿಲ್ಲ. ಆದರೆ ಇವನು ಕನ್ನಡ ವೀರನು, ನಮ್ಮವನು ಎಂಬ ಅಭಿಮಾನದಿಂದಲೇ ಅವರಲ್ಲಿ ಈ ಭಾವನೆಯು ಉತ್ಪನ್ನವಾಗಿತ್ತು. ಅತ್ತ ಕನ್ನಡ ಸೈನಿಕರ ಬಾಹುಗಳು ಈ ವೀರಮಲ್ಲನ ಕ್ರೋಧಸಂತಪ್ತ ಮುಖದರ್ಶನದಿಂದ ಸ್ಫುರಣಗೊಂಡು ಅವರು ಮುಸಲ್ಮಾನ್ ಸೈನಿಕರನ್ನು ಸಿಟ್ಟಿನಿಂದ ನೋಡಹತ್ತಿದರು.

ಆಗ ಮಹಮ್ಮದನು ಮಲ್ಲಸರ್ಜನನ್ನು ಕುರಿತು, "ರಾಜದ್ರೋಹಿಯೇ, ಕನ್ನಡಿಗರಲ್ಲಿ ಜಾಗೃತಿಯನ್ನುಂಟುಮಾಡಲು ನಿಮ್ಮ ಒಡೆಯನಾದ ಪುಂಡ ಹೆಗ್ಗನು ಯತ್ನಿಸುತ್ತಿರುವನಂತೆ! ಅದಾವ ಗಂಡಸವನು? ನಿಮ್ಮ ಈ ಔದ್ಧತ್ಯಕ್ಕಾಗಿ ನನ್ನ ಸರ್ವಾಂಗವು ದಹಿಸುತ್ತಿರುವದು. ನಿಮ್ಮೆಲ್ಲರ ಸಾಲಡಾವಣೆ ಹೊರಡಿಸಿ ನಿಮ್ಮನ್ನು ಚಂಡಾಡಿದಾಗಲೇ ನನ್ನ ಸಿಟ್ಟು ಶಾಂತವಾಗುವದು. ಹೇಳು, ನಿನ್ನ ಆ ದುಷ್ಟ ಹೆಗ್ಗನು ಎಲ್ಲಿಯವನು, ಹೇಳು!"

ಮಲ್ಲಸರ್ಜ, "ಕ್ರೂರ ಮಹಮ್ಮದಾ, ಬಾಯಿಂದ ಸುಮ್ಮನೆ ಪುಂಡ, ದುಷ್ಟ ಎಂದು ತಿರಸ್ಕರಿಸಿ ನುಡಿಯುವದರಿಂದ ಪ್ರಯೋಜನವೇನು? ನಮ್ಮ ಗಂಡುಗಲಿಯಾದ ಹೆಗ್ಗಣ್ಣನ ಸಹವಾಸದಿಂದ, ಈ ಕಗ್ಗ ಕುರುಬ ಮಲ್ಲನಲ್ಲಿ ಯಾವ ಬಗೆಯ ಜಾಗ್ರತಿಯಾಗಿರುತ್ತ ದೆಂಬುದನ್ನು ನೋಡುವ ಮನಸ್ಸಿದ್ದರೆ, ಇಗೋ ಸ್ವತಃ ನೀನೇ ಬಾ, ನಿನ್ನಲ್ಲಿ ಸಾಮರ್ಥ್ಯವಿಲ್ಲದಿದ್ದರೆ ಬೇರೆ ಬಲಿಷ್ಠರನ್ನಾದರೂ ಕಳಿಸು." ಎಂದವನೇ ತನ್ನ ಮೈಮೇಲಿನ ಅರಿವೆಗಳನ್ನು ತೆಗೆದು ಚೆಲ್ಲಿ ರಾಜಬೀದಿಯ ಪ್ರಾಸಾದದಲ್ಲಿ ಪ್ರತಿಧ್ವನಿಯುಂಟಾಗುವ ಹಾಗೆ ಸಡ್ಡು ಹೊಡೆಯುತ್ತಿರಲು, ಅವನ ಕಣ್ಣುಗಳು ಕೆಂಡದಂತಾದವು. ಮುಂದುವರಿದು, ಅವನು "ದುಷ್ಟ ಮಹಮ್ಮದಾ, ಹೀಗೆ ಪ್ರತ್ಯಕ್ಷ ಅಣ್ಣನ ಮಗನ ಮೈದೊಗಲು ಸುಲಿಸುವ ನೀನು ರಾಕ್ಷಸನಲ್ಲದೆ ಮನುಷ್ಯನೇ? ಡಾವಣೆ ಹೊಡೆದು ನಮ್ಮ ಚಂಡುಗಳನ್ನು ತುಂಡರಿಸಲಿಕ್ಕೆ ನಮ್ಮನ್ನೇನು ಕುರಿಗಳೆಂದು ಭಾವಿಸಿದೆಯಾ?" ಎಂದು ನುಡಿದು, ಪುನಃ ಮಲ್ಲನು ಸಡ್ಡು ಹೊಡೆದನು.

ಅವನ ಈ ಉದ್ದಾಮತನವನ್ನು ನೋಡಿ, ಮಹಮ್ಮದನು ಕ್ರೋಧ ಸಂತಪ್ತನಾಗಿ, ಆತನಿಗೆ ಯಾವ ಕ್ರೂರ ಶಿಕ್ಷೆಯನ್ನು ವಿಧಿಸಬೇಕೆಂದು ಆಲೋಚಿಸತೊಡಗಿದನು. ಅಷ್ಟರಲ್ಲಿ ಗಾಯನದ ಮಂಜುಲಸ್ವರವು ದರ್ಬಾರದ ರುಕ್ಷ ಪ್ರದೇಶದಲ್ಲಿ ಹಬ್ಬಿತು. ಎಲ್ಲರ ದೃಷ್ಟಿಗಳು ಗಾಯನ ಧ್ವನಿಯು ಬರುವ ದಿಕ್ಕಿನೆಡೆಗೆ ಹೊರಳಿದವು. ಆಗ ಗಾಯನ ಮಾಡುವ ತರುಣಿಯ ಮನೋಹರ ರೂಪವು ಕಣ್ಣಿಗೆ ಬಿದ್ದಿತು! ಮಹಮ್ಮದನು ತನ್ನ ಪೂರ್ವ ಪರಿಚಿತ ಗಾಯನವನ್ನು ಕೇಳಿ ಶಾಂತನಾಗತೊಡಗಿದನು. ದರ್ಬಾರದ ಜನರು ಒಮ್ಮೆ ಗಾಯಕಿಯನ್ನೂ ಒಮ್ಮೆ ಮಹಮ್ಮದನನ್ನೂ ನೋಡಿ ಕೌತುಕಪಡತೊಡಗಿದರು. ಆಗ ಆ ಕಲಾನಿಪುಣನೂ ಘನವಿದ್ವಾಂಸನೂ ಆದ ತೊಗಲಖನು ಗಾಯಕಿಯನ್ನು ಕುರಿತು, "ದೇವಾಂಗನೆಯೇ, ಧನ್ಯಳು. ನಿನ್ನ ಪವಿತ್ರ ಮುಖವನ್ನು ನೋಡುವ ನನ್ನ ಕಣ್ಣುಗಳೂ, ನಿನ್ನ ಲಲಿತ ಗಾಯನವನ್ನು ಕೇಳುವ ನನ್ನ ಕಿವಿಗಳೂ ಕೃತಾರ್ಥವಾಗಿ ನಿನ್ನ ವಿಷಯದಲ್ಲಿ ನನಗೆ ಪೂಜ್ಯಭಾವವು

ಉತ್ಪನ್ನವಾಗಿರುವದು. ಆದ್ದರಿಂದ, ನಿನಗೆ ಏನು ಬೇಕೋ ಕೇಳಿಕೋ. ನಿನ್ನ ಗುಣಲುಬ್ಧನಾದ ಮಹಮ್ಮದನು ಸುಪ್ರಸನ್ನನಾಗಿರುವನು.''

ಮಹಮ್ಮದನ ಮಾತುಗಳನ್ನು ಕೇಳಿ ಗಾಯಕಿಯು ಮಲ್ಲಸರ್ಜನನ ಕಡೆಗೆ ತನ್ನ ದೃಷ್ಟಿಯನ್ನು ಹೊರಳಿಸಿದಳು. ಆಗ ಆ ಮಲ್ಲಸರ್ಜನನ ಗಂಭೀರ ದೃಷ್ಟಿಗಳೂ ಗಾಯಕಿಯ ಮನೋಹರ ದೃಷ್ಟಿಗಳೂ ಒಂದಕ್ಕೊಂದು ತಾಕಲಾಡಿ, ತಟ್ಟನೆ ಅವು ಸಿಡಿದು ಹಿಂದಕ್ಕೆ ಸರಿದವು. ಈ ದೃಷ್ಟಿಸಮ್ಮೇಲನದ ಆಘಾತದಿಂದ ಗಾಯಕಿಯ ಮೈ ಜುಮ್ಮೆಂದು ಪುಲಕಿತವಾಯಿತು. ಆಕೆಯ ಮುಖವು ನಸುಗೆಂಪೇರಿ ಗಲ್ಲಗಳು ಬೆವೆತವು. ವಾಚಕರೇ, ಪವಿತ್ರವೇಷದ ಗಾಯಕಿಯ ಮುಖವು ಹೀಗೆ ವಿಕೃತವಾದದ್ದು ಸೋಜಿಗವೇ ಸರಿ. ನಮಗಂತೂ ಅವರ ರಹಸ್ಯವು ತಿಳಿಯಲೊಲ್ಲದು. ಸ್ವಲ್ಪ ಮಟ್ಟಿಗೆ ತಿಳಿದ ಹಾಗಾದರೂ ಅದನ್ನು ಈಗ ಹೇಳುವ ಮನಸ್ಸು ನಮಗೆ ಆಗಲೊಲ್ಲದು. ಆಗ ಗಾಯಕಿಯು ಮಹಮ್ಮದನನ್ನು ಕುರಿತು—

ಗಾಯಕಿ, ''ಪ್ರತಾಪಿಯೇ, ನನ್ನಂಥ ಭಿಕ್ಷುಕಿಯು ನಿನ್ನಂಥ ಸಾರ್ವಭೌಮ ರಾಜನನ್ನು ಏನು ಕೇಳಿಕೊಳ್ಳಬೇಕು? ಹಣಕಾಸು, ಭೂಮಿಕಾಣಿಗಳ ಅವಶ್ಯಕತೆಯಂತೂ ನನಗಿರುವುದಿಲ್ಲ, ನನಗೆ ಬೇಕಾದದ್ದು ಭೂತದಯವು.''

ಮಹಮ್ಮದ, ''ಉದಾರಚರಿತಳೇ, ಸುಪ್ರಸನ್ನನಾದ ಮಹಮ್ಮದನಲ್ಲಿ ಭೂತದಯಕ್ಕೂ ಕೊರತೆಯಿರುವದಿಲ್ಲ! ಆದ್ದರಿಂದ ಹೇಳು, ನಿನ್ನ ಸಲುವಾಗಿ ನಾನು ಭೂತದಯದ ಯಾವ ಕಾರ್ಯಮಾಡಲಿ ಹೇಳು?''

ಗಾಯಕಿ, ''ದಯಾರಾಶಿಯೇ, ನಿನ್ನ ಔದಾರ್ಯದ ಕೀರ್ತಿಯನ್ನು ನಾನು ಬಹಳವಾಗಿ ಕೇಳಿದ್ದೇನೆ. ನನ್ನಂಥ ಬಡ ಗಾಯಕಿಯ ಮನಸ್ಸನ್ನು ಸಂತೋಷಪಡಿಸಿ, ಪರಮೌದಾರ್ಯವನ್ನು ತೋರಿಸುವ ಇಚ್ಛೆ ನಿನಗಿದ್ದರೆ, ಇಗೋ, ಈ ಕನ್ನಡ ವೀರನನ್ನೂ ಈತನ ಅನುಯಾಯಿಗಳನ್ನೂ ಬಂಧಮುಕ್ತಮಾಡಿ ಬಿಟ್ಟುಬಿಡು!''

ಗಾಯಕಿಯ ಈ ಮಾತುಗಳನ್ನು ಕೇಳಿ ಮಹಮ್ಮದನಿಗೆ ಬಹಳ ಸಮಾಧಾನವೇ ಆಯಿತು. ಔದಾರ್ಯವನ್ನು ಪ್ರಕಟಿಸುವ ಪ್ರಸಂಗ ಒದಗಿದಾಗ ಉದಾರ ಮನುಷ್ಯನಿಗೆ ಆಗುವಂಥ ಆನಂದವು ಈ ಮಹಮ್ಮದನಿಗೂ ಆಗಿತ್ತು.

''ಗುಣಸುಂದರಿಯೇ, ನಿನ್ನ ಬೇಡಿಕೆಯನ್ನು ಕೇಳಿ ನನಗೆ ಬಹಳ ಸಂತೋಷವಾಯಿತು. ಅದರಂತೆ ಈ ಕನ್ನಡ ವೀರನನ್ನೂ ಈತನ ಅನುಯಾಯಿಗಳನ್ನೂ ಈಗ ಬಂಧಮುಕ್ತ ಮಾಡಿದ್ದೇನೆ. ಅವರು ಬೇಕಾದಲ್ಲಿಗೆ ಹೋಗಲಿ.''

ಆಗ ಮಲ್ಲಸರ್ಜನನು, ''ಯವನವೀರಾ, ನಿನ್ನ ಈ ಔದಾರ್ಯವು ನಿನ್ನ ಶೌರ್ಯಕ್ಕೆ ವಿಶೇಷವಾಗಿ ಒಪ್ಪುತ್ತದೆ. ಪರಸ್ಪರ ವಿರುದ್ಧ ಗುಣಗಳ ಪ್ರಕಟನೆಯ ವಿಷಯದಲ್ಲಿ ಅತ್ಯಂತ ಪ್ರಸಿದ್ಧನಾದ ನೀನು ತೋರಿದ ಔದಾರ್ಯಕ್ಕಿಂತ, ಗಾಯಕಿಯು ನಮ್ಮ ಬಂಧವಿಮೋಚನೆಯ ವಿಷಯವಾಗಿ ತೋರಿಸಿದ ನಿರಪೇಕ್ಷ ಬುದ್ಧಿಯು

ಬಣ್ಣಿಸತಕ್ಕದ್ದಾಗಿರುತ್ತದೆ. ಆದರೆ ಹೆಗ್ಗನ ಅನುಯಾಯಿಯೆನಿಸಿದ ನಾನು ಬಾಯಿಂದ ದೊಡ್ಡ ದೊಡ್ಡ ಮಾತುಗಳನ್ನಾಡಿ, ಒಬ್ಬ ಹೆಂಗಸಿನ ದಯಾಗುಣದ ಆಶ್ರಯದಿಂದ ಪಾರಾಗಿಹೋಗಲಾರೆನು. ನಮ್ಮ ಮಿತ್ರನೆನಿಸುವ ಬಹಾಉದ್ದೀನನು ಮೃತಿಹೊಂದಿ ಬಿದ್ದಿರಲು, ಆತನ ಸಲುವಾಗಿ ನಿನ್ನ ಕಡೆಯ ಒಬ್ಬ ವೀರನ ಪ್ರಾಣವನ್ನಾದರೂ ಆಹುತಿಯಾಗಿ ತಕ್ಕೊಳ್ಳದೆ ಇರುವದು, ಅಥವಾ ಹಾಗೆ ಆಹುತಿ ತಕ್ಕೊಳ್ಳುವ ಪ್ರಸಂಗದಲ್ಲಿ ನಮ್ಮ ಆ ಮಿತ್ರನ ಸಲುವಾಗಿ ನನ್ನ ದೇಹವನ್ನರ್ಪಿಸದೆ ಇರುವದು ಹೇಡಿತನದ ಮಾತಾಗಿರುವದು. ಒಬ್ಬ ಹೆಂಗಸರು ನಿರ್ನಿಮಿತ್ತ ನನ್ನ ಸಲುವಾಗಿ ಅನುಕಂಪವನ್ನು ತೋರಿಸುತ್ತಿರಲು, ನನ್ನ ಮಿತ್ರನ ಮರಣದ ವಿಷಯವಾಗಿ ನಾನು ಅನುಕಂಪವನ್ನು ತೋರಿಸದಿರುವದು ಹೀನತನವಲ್ಲವೆ? ಆದ್ದರಿಂದ ನನ್ನೊಡನೆ ಶಸ್ತ್ರಯುದ್ಧಕ್ಕಾಗಲಿ, ಮಲ್ಲಯುದ್ಧಕ್ಕಾಗಲಿ ನಿನ್ನ ಕಡೆಯ ಒಬ್ಬ ವೀರನು ಈಗ ಎದುರಾಗಲೇಬೇಕು.'' ಎನ್ನುವಾಗ ಆತನ ಕೆಂಪಡರಿದ ಕಣ್ಣುಗಳು ಕಾಸೀಮನ ಕಡೆಗೆ ಕೆಕ್ಕರಿಸಿದವು!

ಕಾಸೀಮನು ನಮಗೆ ಅಪರಿಚಿತನೇನಲ್ಲ. ಈತನು ಮಹಮ್ಮದನ ಪ್ರತಿನಿಧಿಯಾಗಿ ಕಂಪಲಿಯಲ್ಲಿ ಇರುತ್ತಿದ್ದನು. ಕಾಸೀಮನು ಮಹಾಬುದ್ಧಿಶಾಲಿಯು; ಆದರೆ ಅತ್ಯಂತ ಸ್ತ್ರೀಲಂಪಟನು. ದೇವರಾಯನ ಮಗಳಾದ ಪದ್ಮಿನಿಯನ್ನು ಅಪಹರಿಸುವ ಉದ್ಯೋಗವನ್ನು ಕಾಸೀಮನೇ ಮಾಡಿದ್ದನೆಂಬುದು ಮಲ್ಲನಿಗೆ ಗೊತ್ತಾಗಿತ್ತು. ಆಗ ಹೆಗ್ಗನ ಸಹಾಯದಿಂದ ಬಿಡಿಸಿಕೊಂಡು ಬಂದಿದ್ದನು. ಇಂಥ ನೀಚನನ್ನು ದ್ವಂದ್ವಯುದ್ಧದಲ್ಲಿ ಕೊಂದು ಸೇಡು ತೀರಿಸಿಕೊಳ್ಳಬೇಕೆಂದು ಮಲ್ಲಸರ್ಜನನು ಆತುರಪಟ್ಟನು. ಅವನ ಈ ಮನೋದಯವು ಗೊತ್ತಾಗಿ ಕಾಸೀಮನೂ ಆವೇಶಗೊಂಡನು. ಕೈಗೆ ಸಿಕ್ಕುಹೋಗಿದ್ದ ಪದ್ಮಿನಿಯನ್ನು ಈ ಮಲ್ಲನಿಂದಾಗಿಯೇ ಅಂತರಿಸಿದಳೆಂಬ ಸಿಟ್ಟು ಕಾಸೀಮನಿಗೆ ವಿಶೇಷವಾಗಿತ್ತು. ಈ ಸಂದರ್ಭದಲ್ಲಿ ಕ್ಷಣಮಾತ್ರದೊಳಗೆ ಮಲ್ಲನ ಚೆಂಡು ತಿರುವಿ ಒಗೆಯುವೆನೆಂದು ಕಾಸೀಮನು ಭಾವಿಸಿದ್ದನು. ಆಗಿನ ಕಾಲದಲ್ಲಿ ಅವನು ಅತ್ಯಂತ ಬಲಶಾಲಿಯೆಂದು ಪ್ರಸಿದ್ಧನಾಗೇ ಇದ್ದನು. ಜನರು ಅವನನ್ನು ಕಂಡರೆ ಸಾಕು, ನಡುಗುತ್ತಿದ್ದರು. ಇಂಥವನು ಪುಡಿ ಆಳಾಗಿ ತೋರುವ ಮಲ್ಲನೊಡನೆ ಕಾದಲಿಕ್ಕೆ ಯಾಕೆ ಹಿಂಜರಿದಾನು? ಆ ವೀರನೂ ಎದ್ದುನಿಂತು ಮಲ್ಲನನ್ನು ಸುಟ್ಟು ಸೂರೆ ಮಾಡುವಂತೆ ಬಿರಿಬಿರಿ ನೋಡಹತ್ತಿದನು. ಇದನ್ನು ನೋಡಿ ದರ್ಬಾರದ ಯಾವತ್ತೂ ಜನರು ಇನ್ನು ಕಾಸೀಮನಿಗೂ ಮಲ್ಲನಿಗೂ ದ್ವಂದ್ವಯುದ್ಧವಾಗುವದು ನಿಶ್ಚಯವೆಂದು ತಿಳಿದರು.

ಈ ಮಾತು ಮಹಮ್ಮದನ ಮನಸ್ಸಿಗೆ ಬರಲಿಲ್ಲ. ಕಾಸೀಮನಂಥ ಕುಲೀನನು ಸರ್ವಸಾಮಾನ್ಯನಾದ ಮಲ್ಲನೊಡನೆ ಯುದ್ಧ ಮಾಡುವುದು ಆತನ ಮನಸ್ಸಿಗೆ ಪ್ರಶಸ್ತವಾಗಿ ತೋರಲಿಲ್ಲ. ಇದಲ್ಲದೆ ಪ್ರಸಂಗವಶಾತ್ ಕಾಸೀಮನಂಥ ದೊಡ್ಡ ಅಧಿಕಾರಿಯು ಪರಾಜಿತನಾದರೆ ತನ್ನ ಅಧಿಕಾರದ ಕಸುವು ಕಡಿಮೆಯಾಗಬಹುದೆಂದು ಅವನು ಭಾವಿಸಿದನು. ಆದರೂ ಮಲ್ಲಯುದ್ಧದ ಸಂಭ್ರಮಕ್ಕೆ ಮೆಚ್ಚಿದ ಮಹಮ್ಮದನು ಮಲ್ಲನ

ಮಲ್ಲಯುದ್ಧದ ಚಾತುರ್ಯವೆಷ್ಟಿರುವದೆಂಬುದನ್ನು ನೋಡಲು ಉತ್ಸುಕನಾಗಿದ್ದನು. ಆತನು ಕಾಸೀಮನನ್ನು ಕುರಿತು, ''ಖಾನಸಾಹೇಬ, ಈ ಕೆಲಸವು ನಿಮ್ಮ ತನಕ ಬರತಕ್ಕದ್ದಲ್ಲ. ಇಂಥ ಮೂವರು ಕನ್ನಡ ಮಲ್ಲರೊಡನೆ ದ್ವಂದ್ವಯುದ್ಧಮಾಡಲು ನಮ್ಮಲ್ಲಿ ಜನರಿರುವರು. ನಮ್ಮ ಮಲಿಕಸಾಹೇಬನು ಇದಕ್ಕೆ ತಕ್ಕವನಿದ್ದಾನೆ,'' ಎಂದು ನುಡಿದು ಮಲಿಕನ ಕಡೆಗೆ ನೋಡಲು, ಅವನು ಉದ್ದಾಮತನದಿಂದ ಎದ್ದು ಮಹಮ್ಮದನಿಗೆ ಬಗ್ಗಿ ಸಲಾಂಮಾಡಿ, ಮಲ್ಲನನ್ನು ತಿರಸ್ಕಾರದಿಂದ ನೋಡತೊಡಗಿದನು. ಮಲಿಕನ ಒಗರನ್ನೂ ಆತನ ಬಲಿಷ್ಠ ದೇಹವನ್ನೂ ನೋಡಿ, ಇವನು ಮಲ್ಲನಿಗೆ ಮೀರಿದವನೆಂದು ಜನರು ಅನ್ನತೊಡಗಿದರು. ಮಲಿಕನಂತೂ ಮಲ್ಲನನ್ನು ಗಣನೆಗೆ ತರಲಿಲ್ಲ. ಮಹಮ್ಮದನ ಬಳಿಯಲ್ಲಿದ್ದ ಜಟ್ಟಿಗಳಲ್ಲಿ ಈ ಮಲಿಕನೇ ಮಿಗಿಲಾದವನು. ತನ್ನ ಜಟ್ಟಿಗಳು ಪರಾಭೂತರಾದರೆ ತನ್ನ ಗೌರವಕ್ಕೆ ಕೊರತೆ ಬರುವದೆಂದು ತಿಳಿದು, ಮಹಮ್ಮದನು ಶ್ರೇಷ್ಠ ಜಟ್ಟಿಯನ್ನೇ ಮುಂದೆ ಮಾಡಿದ್ದನು. ಅತ್ತ ಗಾಯಕಿಯು ಇದನ್ನೆಲ್ಲ ಬೆರಗಾಗಿ ನೋಡುತ್ತ ಭಯಗ್ರಸ್ತಳಾದಂತೆ ತೋರುತ್ತಿದ್ದಳು. ನೆರೆದ ಕನ್ನಡಿಗರು ತಮ್ಮವನ ಗತಿ ಏನಾಗುವುದೋ ಎಂದು ಆಲೋಚಿಸತೊಡಗಿದ್ದರು. ಹೀಗಿರುವಾಗ ಮಲ್ಲನು ಉತ್ಸಾಹದಿಂದ ಮಹಮ್ಮದನಿಗೆ, ''ಗುಣಲಬ್ಧನಾದ ವೀರನೇ, ನಿಮ್ಮ ಮಲಿಕಸಾಹೇಬ ನೊಡನೆ ಹೋರಾಡಲು ನಾನು ಸಿದ್ಧನಿರುವೆನು! ಆದರೆ ನಮ್ಮಿಬ್ಬರ ಯುದ್ಧವೆಂದರೆ ಒಬ್ಬರನ್ನೊಬ್ಬರು ನೆಲಕ್ಕೆ ಕೆಡಹುವದಲ್ಲ, ಒಬ್ಬರ ಜೀವವನ್ನೊಬ್ಬರು ಹಿಂಡುವದು! ಈ ಮಾತು ತಗಲಖ ವೀರನಿಗೆ ಸಮ್ಮತವಷ್ಟೆ?'' ಎಂದು ಕೇಳಲು, ಮಲಿಕನು ತಿರಸ್ಕಾರದಿಂದ ಗಹಗಹಿಸಿ ನಕ್ಕನು. ಈ ಪುಡಿಯಾಳಾದ ಮಲ್ಲನನ್ನು ಯಾವಾಗ ನೆಲಕ್ಕೆ ಅಪ್ಪಳಿಸೇನು ಎಂದು ಆ ಮಕಮೀಸೆಯ ಮಲಿಕನು ಆತುರಪಡತೊಡಗಿದನು. ಆಗ ಬಿಸಿಲು ಏರತೊಡಗಿದ್ದರೂ ಜನರಿಗೆ ತಮ್ಮ ಉತ್ಸಾಹದಲ್ಲಿ ಬಿಸಿಲು ಹತ್ತದಾಗಿತ್ತು, ಅವರೂ ಈಗಲೇ ಯುದ್ಧ ಮುಗಿಯಲೆಂದು ಆತುರಪಡುತ್ತಲಿದ್ದರು. ಆದರೆ ಮಹಮ್ಮದನೇ ದರ್ಬಾರವನ್ನು ಸಂಜೆಗೆ ಮುಂದೆ ಹಾಕಿದ್ದರಿಂದ ಎಲ್ಲರೂ ತಮ್ಮ ಮನೆಗಳಿಗೆ ಹೋದರು. ಆದರೆ ಮಲ್ಲಸರ್ಜನನು ಮಾತ್ರ ಮಹಮ್ಮದನ ಸೆರೆಯಲ್ಲಿಯೇ ಉಳಿದನು. ಯಾಕೆಂದರೆ ಒಬ್ಬ ಹೆಂಗಸಿನ ಮುರವತ್ತಿನಿಂದ ಬಂಧಮುಕ್ತನಾಗುವದು ಆತನ ಮಾನಕ್ಕೆ ಸಾಲಲಿಲ್ಲ. ಅವನ ಅನುಯಾಯಿಗಳಾದರೂ ಅವನೊಡನೆ ಕಾರಾಗೃಹದಲ್ಲಿಯೇ ಉಳಿದರು!

☆ ☆ ☆ ☆

ಅಂದು ಆನೆಗುಂದಿಯ ಪ್ರತಿ ಒಬ್ಬನ ಮಾತಿನಲ್ಲೂ ಮಲ್ಲಯುದ್ಧದ ಪ್ರಸಕ್ತಿಯೇ ಪ್ರಸಕ್ತಿಯು. ತಮ್ಮವರ ಮುಂದೆ ಮಲ್ಲಸರ್ಜನನ ಧೈರ್ಯದ ಸುದ್ದಿ ಹೇಳುವುದರಲ್ಲಿ ಪ್ರತಿಯೊಬ್ಬನು ತೊಡಗಿದ್ದನು. ಅವನು ಹುಚ್ಚ ಮಹಮ್ಮದನಂಥ ಕ್ರೂರನ ಸಂಗಡ ಇಷ್ಟು ತೇಜಸ್ವಿತೆಯಿಂದ ನಡೆದುಕೊಂಡದ್ದಕ್ಕಾಗಿಯೂ, ಗಾಯಕಿಯು ತನ್ನ ವರ್ಚಸ್ಸಿನಿಂದ ಮಹಮ್ಮದನ ಮನಸ್ಸು ಮೆಚ್ಚಿಸಿ ಸೆರೆಯವರನ್ನು ಬಿಡಿಸಿದಕ್ಕಾಗಿಯೂ ಕನ್ನಡಿಗರು

ಅಭಿಮಾನಪಡುತ್ತಿದ್ದರು. ಗುಣಗ್ರಾಹಿಗಳಾದ ಕನ್ನಡಿಗರು ಮಹಮ್ಮದನ ವಿಷಯದಲ್ಲಿ, "ಸಿಟ್ಟಿಗೆದ್ದರೆ ಮಾತ್ರ ಮಹಮ್ಮದನು ಮನುಷ್ಯನಲ್ಲ, ರಾಕ್ಷಸನು; ಆದರ ಸುಪ್ರಸನ್ನನಾಗಿದ್ದರೆ ಅವನಂಥ ಮನುಷ್ಯನೇ ಇಲ್ಲ." ಎಂದರು.

ಅಂದು ಉಂಡ ಬಳಿಕ ಯಾರೂ ಅಡ್ಡಾಗಲಿಲ್ಲ. ಕೆಲಸ ಬೊಗಸೆಗಳ ಗೊಡವೆಗಂತೂ ಹೋಗಲೇ ಇಲ್ಲ. ಮಲ್ಲಯುದ್ಧದ ಸುದ್ದಿಯು ಸುತ್ತಲಿನ ಗ್ರಾಮಗಳಲ್ಲಿಯೂ ಹಬ್ಬಿತ್ತಾದ್ದರಿಂದ, ಜನರು ಗುಂಪು ಗುಂಪಾಗಿ ಕಣದ ಕಡೆಗೆ ಸಾಗತೊಡಗಿದರು. ಹಳ್ಳಿಗಳ ಗೌಡರೂ ಶಾನಭೋಗರೂ ಶೆಟ್ಟರೂ ತಮ್ಮ ತಮ್ಮ ಗರಡಿಮನೆಗಳಲ್ಲಿ ಮೇಯಿಸಿದ ಹುಡುಗರೊಡನೆ ಉತ್ಸುಕತೆಯಿಂದ ಕುಸ್ತಿ ನೋಡಲಿಕ್ಕೆ ಬರುತ್ತಿದ್ದರು. ನಮ್ಮ ಜನರು ಪ್ರಾಚೀನ ಕಾಲದಿಂದಲೂ ಮಲ್ಲಯುದ್ಧಕ್ಕೆ ಮೆಚ್ಚಿದವರು. ಮಲ್ಲಯುದ್ಧವೆಂದರೆ ಅವರ ಮೈಯುಬ್ಬುವುದು. ಇತ್ತ ಮಹಮ್ಮದನ ಅಪ್ಪಣೆಯಿಂದ ಇಂದಿನ ಕುಸ್ತಿಗೆ ವಿಶಾಲವಾದ ಸ್ಥಳವು ಗೊತ್ತುಮಾಡಲ್ಪಟ್ಟಿತು. ಆ ಹುಚ್ಚ ದೊರೆಗೆ ತನ್ನ ಜಟ್ಟಿಯ ಸಾಮರ್ಥ್ಯವನ್ನು ಹಿಂದೂ ಜನರಿಗೆ ತೋರಿಸಬೇಕಾಗಿತ್ತು. ಜನರು ಬಿಸಿಲು ನೋಡದೆ ತಮಗೆ ಸ್ಥಳ ಸಿಕ್ಕಲಿಕ್ಕಿಲ್ಲವೆಂಬ ಅಂಜಿಕೆಯಿಂದ ಮುಂಗಡವಾಗಿ ಹೋಗಿ, ಕಣದ ಸುತ್ತಮುತ್ತ ಕುಳಿತುಕೊಳ್ಳಹತ್ತಿದರು. ಅಂತೂ ಒಬ್ಬ ಕನ್ನಡ ಮಲ್ಲನ ಕುಸ್ತಿಯ ನೆವದಿಂದ ಹಲವು ಜನ ಮಲ್ಲರು ಅಲ್ಲಿ ನೆರೆದಿದ್ದರು.

ಒಂಬತ್ತು ತಾಸು ಆಗುವುದರೊಳಗೆ ಕುಸ್ತಿಯ ಕಣದ ಸುತ್ತಮುತ್ತಲಿನ ಜಾಗವೆಲ್ಲ ತುಂಬಿ ಹೋಗಿದ್ದಿತು. ಹುಚ್ಚ ಮಹಮ್ಮದನ ಕ್ರೂರತನಕ್ಕೆ ಬಹಳವಾಗಿ ಅಂಜುತ್ತಿದ್ದ ಜನರು, ಯಾವ ಅಂಜಿಕೆಯೂ ಇಲ್ಲದವರಂತೆ ಇಂದು ಹೀಗೆ ಬಡ ಬಡ ಬಂದು ಕುಳಿತದ್ದು ಆಶ್ಚರ್ಯವೇ ಸರಿ. ಕನ್ನಡಿಗರ ಸ್ವಭಾವವು ವಿಲಕ್ಷಣವಾದದ್ದು. ಅಂಜಿದರೆ ಅವರಂಥ ಅಂಜುಬುರುಕರಿಲ್ಲ, ಬೈಲಿಗೆ ನಿಂತರೆ ಅವರಂಥ ಬಂಟರಿಲ್ಲ. ಅಲ್ಲದೆ ನಮ್ಮವರಲ್ಲಿ ಸ್ವತಂತ್ರ ವಿಚಾರ ಕಡಿಮೆ. ಒಬ್ಬರನ್ನು ನೋಡಿ ಒಬ್ಬರು ಮಾಡುವ ಗುಣ ಹೆಚ್ಚು. ಹೀಗೆ ಅವರು ಹುಂಬತನದಿಂದ ಕುಸ್ತಿಗೆ ಬಂದಿದ್ದರೂ ಮೈಮರೆತಿದ್ದಿಲ್ಲ. ಕ್ರೂರ ಮಹಮ್ಮದನ ಬುದ್ಧಿಯು ಸ್ಥಿರವಲ್ಲದ್ದರಿಂದ ಯಾವ ಕಾಲಕ್ಕೆ ಎಂಥ ಪ್ರಸಂಗ ಬರುವುದೋ ಎಂದು ತಿಳಿದು ತಮ್ಮ ಶಸ್ತ್ರಾಸ್ತ್ರಗಳಿಂದ ಸಜ್ಜಾಗಿ ಬಂದಿದ್ದರು.

ಕುಸ್ತಿಯ ಹೊತ್ತು ಸನಿಹಕ್ಕೆ ಬಂದಬಂದಂತೆ ಮಹಮ್ಮದನ ಕಡೆಯ ಜಟ್ಟಿಗಳು ಒಗರಿನಿಂದ ಬರತೊಡಗಲು, "ಇವರು ಯಾರು, ಅವರು ಯಾರು" ಎಂಬ ಕೌತುಕದ ಚರ್ಚೆಯಿಂದಲೂ ಅವರವರ ಶಕ್ತಿಯ ಅತಿಶಯೋಕ್ತಿಯ ವರ್ಣನೆಗಳಿಂದಲೂ ಜನರಲ್ಲಿ ಗಲಿಬಿಲಿಯುಂಟಾಯಿತು. ಮುಸಲ್ಮಾನ್ ಜಟ್ಟಿಗಳೂ ಪ್ರೇಕ್ಷಕರೂ ತಾವು ಜಯಶಾಲಿಗಳೆಂಬ ಹೆಮ್ಮೆಯಿಂದ ಬಂದು, ತಮಗಾಗಿ ಕಾದಿಟ್ಟಿದ್ದ ಸ್ಥಳಗಳಲ್ಲಿ ಡೌಲಿನಿಂದ ಕುಳಿತುಕೊಳ್ಳಹತ್ತಿದರು. ಅಷ್ಟರಲ್ಲಿ ಕಾಸೀಮನು ಮಲಿಕನನ್ನು ಕೂಡಿಕೊಂಡು ಕುಸ್ತಿಯ ಕಣಕ್ಕೆ ಬಂದನು. ಇತ್ತ ಮಲ್ಲಸರ್ಜನನೂ ತನ್ನ ಅನುಯಾಯಿಗಳೊಡನೆ ಸ್ವಸಂತೋಷದ ಸೆರೆಯಾಳೆನಿಸಿಕೊಂಡು ಕುಸ್ತಿಯ ಕಣಕ್ಕೆ ಬಂದನು. ಆಗ ಜನರ ಗದ್ದಲವು ಕಡಿಮೆಯಾಗಿ, ಆ

ಇಬ್ಬರು ಜಟ್ಟಿಗಳನ್ನೂ ಕೌತುಕದಿಂದ ನೋಡತೊಡಗಿದರು. ನೋಡುವ ಭರವು ತಗ್ಗಿದ ಬಳಿಕ ಪುನಃ ಕಲಕಲ ಧ್ವನಿಯು ಹಬ್ಬಿತು. ಬಹು ಬಲಿಷ್ಠನಾಗಿ ತೋರುವ ಮಲಿಕನೊಡನೆ, ಸೆರೆಮನೆಯ ಕಷ್ಟ ಸೋಸಿ ಸೊರಗಿ ಹೋಗಿದ್ದ ಮಲ್ಲಣ್ಣನು ಹ್ಯಾಗೆ ಕುಸ್ತಿಯನ್ನು ಹಿಡಿದಾನೆಂದು ಅವರು ಚಿಂತಿಸತೊಡಗಿದರು. ಸ್ವತಃ ಜಟ್ಟಿಗಳವರು ಮಲ್ಲಣನನ್ನು ಬಿಡಿಸಿ, ನಾವಾದರೂ ಮಲಿಕನೊಡನೆ ಕುಸ್ತಿಯಾಡೋಣವೇ ಎಂದು ಆಲೋಚಿಸಿ ತಮ್ಮ ತಮ್ಮೊಳಗೆ ಮಾತನಾಡತೊಡಗಿದರು. ಮಲಿಕನಿಗಂತೂ ಮಲ್ಲನ ಲಕ್ಷ್ಯವು ಸ್ವಲ್ಪವಾದರೂ ಇರದೆ, ಆತನು ತಮ್ಮವರೊಡನೆ ನಗೆಯಾಡುತ್ತಿದ್ದನು. ಮಲ್ಲಸರ್ಜನನು ಗಾಂಭೀರ್ಯದಿಂದ ಅದನ್ನು ಸಹಿಸಿಕೊಂಡು, ನೋಡಲು ನೆರೆದಿದ್ದ ಕನ್ನಡಿಗರ ಹಿಂಡಿನೊಳಗಿನ ಯಾವನೋ ಒಬ್ಬ ಮನುಷ್ಯನನ್ನು ಅತ್ಯಂತ ಭಕ್ತಿಯಿಂದ ನೋಡುತ್ತಿದ್ದನು. ಆ ಮನುಷ್ಯನು ಯಾವನೋ ನಾವರಿಯೆವು. ಮೋರೆಯ ಹೊರತು ಮೈತುಂಬ ಕಂಬಳಿಯ ಮುಸುಕು ಹಾಕಿಕೊಂಡು, ಮಂದಿಯ ಮರಗೆ ಕುಳಿತಿದ್ದ ಆತನ ಗುರುತಾದರೂ ಹ್ಯಾಗೆ ಹತ್ತಬೇಕು? ಸಿಪಾಯಿಗಳು ಜನರನ್ನು ಹಿಂದಕ್ಕೆ ಸರಿಸಿ ಕಣವನ್ನು ಪ್ರಶಸ್ತ ಮಾಡತೊಡಗಿದರು. ಆಗ ಆ ಗೊಂಗಡಿಯ ಮನುಷ್ಯನು ಮೇಲಕ್ಕೆದ್ದು ಹಿಂದೆ ಸರಿಯುತ್ತಿರಲು, ಕಂಬಳಿಯ ಮುಸುಕು ತುಸು ಓರೆಯಾದಂತಾಗಿ, ಆತನ ತೇಜಃಪುಂಜ ಮುಖವೂ, ಭವ್ಯವಾಗಿ ತೋರುವ ಅವನ ದೇಹವೂ ಕಣ್ಣಿಗೆ ಬಿದ್ದವು.

ಅಷ್ಟರಲ್ಲಿ ಮಹಮ್ಮದನು ಬರಲಿದ್ದಾನೆಂಬ ಗದ್ದಲವೆದ್ದಿತು. ಆ ಅಲೌಕಿಕ ಪುರುಷನನ್ನು ನೋಡಲಿಕ್ಕೆ ಹಳ್ಳಿಯ ಜನರು ಹಾತೊರೆಯುತ್ತಿದ್ದರು. ನಾನೇಳು, ನೀನೇಳು ಎನ್ನುತ್ತ ಪ್ರೇಕ್ಷಕರೆಲ್ಲ ಎದ್ದು ನಿಂತರು. ಈ ಪ್ರಸಂಗದಲ್ಲಿ ಬಲಿಷ್ಠರು ದುರ್ಬಲರನ್ನು ಒತ್ತಾಯದಿಂದ ಹಿಂದಕ್ಕೆ ಸರಿಸುವುದು, ಜನರನ್ನು ಬಗಿಬಗಿದು ಮುಂದಕ್ಕೆ ಬರುವುದು, ಹಿಂದಿನವರ ಹಂಗಿಲ್ಲದೆ ಮುಂದಿನವರು ಎದ್ದು ನಿಲ್ಲುವುದು, ಹೆಗಲಿಗೆ ಕೂಸೆದು 'ಕುಳಿತುಕೊಳ್ಳಿ'ರೆಂದು ಹಿಂದಿನವರು ಮುಂದಿನವರನ್ನು ಗದರಿಸುವುದು ಮುಂತಾದ ಸ್ವಾರ್ಥಸಾಧಕ ಬಲಾತ್ಕಾರದ ಕಾರ್ಯಗಳು ನಡೆದಿದ್ದವು. ನೆರೆದ ಜನರಲ್ಲಿ ಯಾರೋ ಒಬ್ಬರು, "ಓಹೋ! ಬಾದಶಹನು ಬಂದನು" ಎಂದು ನುಡಿದ ಕೂಡಲೇ ಜನರ ಚಿತ್ತವೃತ್ತಿಗಳೆಲ್ಲ ಒತ್ತಟ್ಟಿಗಾಗಿ, ಆ ಅಲೌಕಿಕ ಪುರುಷನನ್ನು ನೋಡಲಿಕ್ಕೆ ಅವು ಒತ್ತರಿಸಹತ್ತಿದವು. ಆದರೆ ಬಂದವನು ಬಾದಶಹನಾಗಿರದೇ "ಕುಂಬಳ ರಾಜನ ಪಟ್ಟಣದಲ್ಲಿ ಸಂಬಳದವರೆಷ್ಟೋ ಜನರೆ"ನ್ನುವಂತೆ ಯಾವನೊಬ್ಬ ಮುಸಲ್ಮಾನ ಸರದಾರನಾಗಿರಲು, ಜನರ ಚಿತ್ತವೃತ್ತಿಗಳು ಹಿಂಜರಿದು ವ್ಯಥಿತವಾಗುತ್ತಿದ್ದವು.

ಎಲ್ಲ ವ್ಯವಸ್ಥೆಯಾಗಿ ಬಾದಶಹನ ಸಿಂಹಾಸನವು ಆತನಿಂದ ಅಲಂಕೃತವಾಗುವದೊಂದು ಮಾತ್ರ ಉಳಿದಿತ್ತು. ಮನಸ್ವಿಯಾದ ಬಾದಷಹನು ಇಂದು ಮಲ್ಲಯುದ್ಧ ನೋಡಲಿಕ್ಕೆ ಬಾರದಿದ್ದರೆ ನಾವು ಊರಿಂದೂರಿಗೆ ಬಂದ ಶ್ರಮವು ವ್ಯರ್ಥವಾಗುವುದಲ್ಲ ಎಂದು ಪರಸ್ಥಳದ ಜನರು ಚಿಂತಿಸುತ್ತಿದ್ದರು. ವಿಲಂಬವಾದಂತೆ ಜನರಿಗೆ ಬೇಜಾರವಾಗಹತ್ತಿತ್ತು. ಹಿಂದೆ, ಮುಂದ ಜನಸಂದಣಿಯ ಶಿಕ್ಕಾಟ; ಮೇಲೆ ಸೂರ್ಯಕಿರಣಗಳ ಕಾಟ; ಹರಿದು ಮುಂದಕ್ಕೆ

ಹೋದೇವೆಂದರೆ ಮುಸಲ್ಮಾನ ಸಿಪಾಯಿಗಳ ಸೋಟಾ; ಹೀಗಾಗಿ ಎಷ್ಟೋ ಜನರು— ''ಸಾಕೋ ನಮ್ಮಪ್ಪಾ ! ಈ ಕುಸ್ತಿಯ ಸುಖ! ಹಾದಿ ಸಿಕ್ಕರ ಸುಮ್ಮನೆ ಹೋದೇವೆನ್ನುತ್ತೇವೆ,'' ಎಂದು ಜನಸಂಮರ್ದದಿಂದ ಹೊರಬೀಳಲಿಕ್ಕೆ ಹವಣಿಸುತ್ತಿದ್ದರು. ಎದ್ದು ನಿಂತವರು ಬೇಸತ್ತು ಕುಳಿತುಕೊಳ್ಳಹತ್ತಿದರು. ಹರಿಬಿದ್ದು ಹೋದವರು ಹಿಂದಕ್ಕೆ ಸರಿಯಹತ್ತಿದರು. ಎಷ್ಟೋ ಜನರು ಮುಹಮ್ಮದನನ್ನು ಬೈದರು ಸಹ! ಹೀಗೆ ಹೊತ್ತಾದ್ದರಿಂದ ಜನರು ಹೊಯ್ದು ಹೋಳಿಗೆಯಾಗುತ್ತಿರಲು, ತಗಲಖ ಬಾದಷಹನು ಬರುತ್ತಿರುವ ಸುದ್ದಿಯು ಜನರಲ್ಲಿ ಮತ್ತೆ ಹಬ್ಬಿತು. ಆದರೆ ಹೀಗೆ ಹಲವು ಬಾರಿ ಸುದ್ದಿಯು ಹಬ್ಬಿ ನಿರಾಶೆಯಾದ್ದರಿಂದ, ''ಬಂದರ ಬರುತ್ತಿದ್ದಾನು ಬಿಡು, ಅವನೇನು ದೇವರಲ್ಲ'' ಎಂದು ಕೆಲವರು ತಿರಸ್ಕರಿಸತೊಡಗಿದರು.

ಹೀಗೆ ಭಿನ್ನ ರುಚಿಯ ಜನರ ಭಿನ್ನ ವ್ಯಾಪಾರಗಳು ನಡೆದಿರಲು, ಬಾದಶಹನ ಸವಾರಿಯು ಬಂದು ಸಿಂಹಾಸನವೇರಿತು. ಆಗ ಜನರಲ್ಲಿ ಉಂಟಾದ ಗದಿಬಿಡಿ, ಗಲಿಬಿಲಿಗಳನ್ನು ವರ್ಣಿಸಲಾಸಲ್ಲ. ಪ್ರತಿಯೊಬ್ಬನೂ ಸಾಗರಬಿದ್ದು ಮುಂದೆ ನುಗ್ಗಿ ಬಾದಷಹನನ್ನು ನೋಡಲಿಕ್ಕೆ ಹವಣಿಸುತ್ತಿದ್ದನು. ಮುಗಿಬಿದ್ದು ನೋಡುವ ಅವಸರದಲ್ಲಿ ಜನರ ಕಾಲ–ತುಳಿತವನ್ನೂ ನೂಕುನುಗ್ಗಲನ್ನೂ ಒದೆತ ಒಡೆತಗಳನ್ನೂ ಯಾರೂ ಲೆಕ್ಕಿಸಲಿಲ್ಲ. ಆಗ ಜನರ ಯೋಗ್ಯತೆಯ ತಾರತಮ್ಯವಿಲ್ಲದಾಯಿತು. ಹುಡುಗರು–ಹುಪ್ಪಡಿಗಳು ಗದ್ದಲದಲ್ಲಿ ಸಿಕ್ಕು ಕಕ್ಕಾಬಿಕ್ಕಿಯಾಗಿ ಚೀರಹತ್ತಿದವು. ಮುದುಕರು–ತದಕರು ನೂಕನುಗ್ಗಲು ತಡೆದುಕೊಳ್ಳಲಿಕ್ಕೆ ಶಕ್ತಿ ಸಾಲದೆ ಹಾಯಗುಟ್ಟಿದರು. ಹೀಗೆ ಜನಸಮೂಹವು ಬಾದಶಹನನ್ನು ನೋಡುವ ಭರದಲ್ಲಿ ಕುಸ್ತಿಯ ಕಣದ ಮಧ್ಯದ ಕಡೆಗೆ ಸಾಗಿರಲು, ಕ್ರೂರರಾದ ಮುಸಲ್ಮಾನ್ ಸಿಪಾಯಿಗಳು ಗರ್ಜಿಸಿ, ಹೊಡೆದು ಜನರನ್ನು ಹಿಂದಕ್ಕೆ ಸರಿಸಹತ್ತಿದರು. ತಮ್ಮ ಉದ್ದಾಮತನದಿಂದ ಸಿಪಾಯಿಗಳು ಜನರನ್ನು ಪಶುಗಳಂತೆ ನಡಸಿಕೊಳ್ಳಹತ್ತಿದರು. ಬಾಯಿಗೆ ಬಂದಹಾಗೆ ಬೈದರು. ಇದನ್ನು ನೋಡಿ ಸ್ವಾಭಿಮಾನಿಗಳಾದ ಕೆಲವು ಕನ್ನಡಿಗರು ಸಂತಾಪಗೊಳ್ಳುವರು; ಕೆಲವರು ಸಂತಾಪದ ಭರದಲ್ಲಿ ಮುಸಲ್ಮಾನ್ ಸಿಂಪಾಯಿಗಳ ಕೈಯನ್ನು ಹಿಡಿದು ಅವರ ಸಮಾಚಾರ ತಗೊಳ್ಳಲಿಕ್ಕೆ ಮುಂದುವರಿಯುತ್ತಿದ್ದರು. ಆದರ ಸಾಮಾನ್ಯವಾಗಿ ಕನ್ನಡಿಗರು, 'ನಮಗೇಕೆ ಒಣ ಉಸಾಬರಿ', ಎಂಬ ಮಂತ್ರವನ್ನು ಜಪಿಸುತ್ತ ಹೇಡಿತನದ ಸಿದ್ಧಿಯನ್ನು ಪಡೆದವರಾಗಿದ್ದರಿಂದ, ಹೇಳಿದಲ್ಲಿ ಸರಿದು ತೆಪ್ಪಗೆ ಕುಳಿತುಕೊಂಡರು. ಸ್ವಾಭಿಮಾನಶೂನ್ಯರಿಗಾಗಿ ತಕ್ಕ ಫಲವು ಇದೇ ಸರಿ. ತಮ್ಮೊಳಗಿನವನಾದರೂ ಒಗರಿನಿಂದ ಮುಂದುವರೆದು ಭಂಗಿತನಾದರೆ ಅವರು, ''ಇವನು ಇಲ್ಲದ ಪೌಲಿಸವನು, ಹತ್ತು ಜನರಂತೆ ಶಕ್ಯವಿದ್ದಷ್ಟು ನೋಡಿಹೋದರಾಯಿತು. ನಾವೇನು ಕಾಲಕಳೆಯಲಿಕ್ಕೆ ಬಂದಿರುವೆವೆ?'' ಎಂದು ಆಡಿಕೊಳ್ಳವರು. ಹೀಗೆ ಆಡಿಕೊಳ್ಳುವದು ತಮ್ಮ ಜಾಣತನದ ಲಕ್ಷಣವೆಂದು ತಿಳಿದು ಅದನ್ನು ಮೆರೆಸುವರು! ಇರಲಿ.

ಇತ್ತ ಸಿಂಹಾಸನದ ಮೇಲೆ ಕುಳಿತ ಮುಹಮ್ಮದನು ಕಾಸೀಮನ ಕಡೆಗೆ ನೋಡಲು, ಅವನು ಕುಸ್ತಿಯ ಕಣದಲ್ಲಿ ಬಂದು ಜನರಿಗೆ ಸೂಕ್ಕಿನಿಂದ, ''ಎಚ್ಚರಿಕೆ ! ಕುಸ್ತಿಯು ನಡೆವಾಗ

ಯಾರಾದರೂ ಪಕ್ಷಕಟ್ಟಿ ನಡುವೆ ಎದ್ದರೆ ತುಂಡರಿಸಿ ಚೆಲ್ಲೇವು. ಬಾದಶಹರ ಚಿತ್ತವು ಕ್ಷೋಭಿಸದಂತೆ ಎಚ್ಚರಪಡಿರಿ. ಇಂದಿನ ಮಲ್ಲಯುದ್ಧದ ವಿಶೇಷ ನಿಯಮವನ್ನು ಹೇಳುವೆನು ಕೇಳಿರಿ. ಎದೆಯ ಮೇಲೆ ಕುಳಿತವನು ನೆಲಕ್ಕೆ ಬಿದ್ದವನ ಕೊರಳಿಗೆ ಕಠಾರಿಯಿಂದ ಇರಿದು ಪ್ರಾಣಹರಣ ಮಾಡತಕ್ಕದ್ದು! ಈ ಮಾತಿನ ವಿಚಾರ ಮಾಡಿ ಮುಸ್ಲಿಮನು ಈಗ ಬೇಕಾದರೆ ನಮ್ಮ ಮಲಿಕನಾಯಬನಿಗೆ ಶರಣುಹೊಡೆದು ಹೊರಟುಹೋಗಲಿ,'' ಎಂದು ನುಡಿದು, ಒಂದು ಕಠಾರಿಯನ್ನು ಒಬ್ಬ ಯವನ ಸಿಪಾಯಿಯ ಕೈಯಲ್ಲಿ ಕೊಟ್ಟು ನಿಲ್ಲಿಸಿದನು. ಮಲಿಕನಾಯಬನನ್ನು ಸ್ವತಃ ಕೈಹಿಡಿದು ಕರಕೊಂಡು ಬಂದು ಕಣದಲ್ಲಿ ಬಿಟ್ಟನು.

ಆ ಯವನ ಜಟ್ಟಿಯು ಸೈಲಾದ ತೆಳ್ಳನ್ನ ನಿಲುವಂಗಿಯನ್ನು ಹಾಕಿಕೊಂಡು, ಬಕ್ಕತಲೆಯಿಂದ ಕಣದಲ್ಲಿ ಬಂದು ನಿಂತಿದ್ದನು. ಆ ತರುಣನು ಜನರ ಕೌತುಕಕ್ಕ ಪಾತ್ರನಾದ ವೀರನಿದ್ದನೆಂದು ಒಪ್ಪಬೇಕಾಗುವುದು. ಮೊದಲೇ ಮುಸಲ್ಮಾನರ ಪಕ್ಷವು ಜಯಶಾಲಿಯಾದದ್ದು; ಅದರಲ್ಲಿ ಪ್ರತ್ಯಕ್ಷ ಬಾದಶಹನು ತನ್ನ ದರ್ಪವನ್ನು ಕನ್ನಡಿಗರ ಮೇಲೆ ಕೂಡ್ರಿಸುವುದಕ್ಕಾಗಿ ಬುದ್ಧಿಪೂರ್ವಕವಾಗಿ ಮಲಿಕನಿಗೆ ಬೆಂಬಲವಾಗಿ ನಿಂತವನು. ಇತ್ತ ನಮ್ಮ ಬಡವನಾದ, ಅನಾಥ ಮಲ್ಲನ ಪಕ್ಷಗಟ್ಟಿ ಅವನನ್ನು ಇಷ್ಟು ಉದ್ದಾಮತನದಿಂದ ಯಾರು ಕರೆತಂದು ನಿಲ್ಲಿಸಬೇಕು? ಕನ್ನಡಿಗರು ಎಷ್ಟೆಂದರೂ ಗೆತ್ತ ಎತ್ತಿನ ಬಾಲಹಿಡಿಯಲಿಕ್ಕೆ ಮೆಚ್ಚಿದವರು. ಆದರೆ ವೀರಮಲ್ಲನು ಎದ್ದು ತಟ್ಟನೆ ಕಣದಲ್ಲಿ ನಿಂತುಕೊಂಡಿದ್ದನು. ತಮ್ಮ ಮಲಿಕನಿಗೆ ಎದುರಾಗದೇ ಹೀಗೆ ಎತ್ತೋ ಮೋರೆ ಮಾಡಿಕೊಂಡು ನಿಂತಿದ್ದ ಮಲ್ಲನನ್ನು ನೋಡಿ, ಬಳಿಯಲಿದ್ದ ಒಬ್ಬ ಮುಸಲ್ಮಾನನು ಎದ್ದು ಬಂದು, ಉದ್ಧಟತನದಿಂದ ಮಲ್ಲನ ರಟ್ಟೆಹಿಡಿದು, ''ಏ ಬದಮಾಸ್ ! ನೀನೇನು ಜಟ್ಟಿಯೊ? ದನಕಾಯುವವನೊ? ಹೀಗೇಕ ನಿಂತೆ?'' ಎಂದು ಗದ್ದರಿಸಿ, ದೂಡಹೋಗಲು, ನೋಡಲಿಕ್ಕೆ ಕುಳಿತವರಲ್ಲಿ ಆ ಗೊಂಗಡಿಯ ಮುಸುಕಿನವನು ಸಿಟ್ಟಿನಿಂದ ಎದ್ದು ಬಂದು, ಆ ಉದ್ಧಟ ಮುಸಲ್ಮಾನನನ್ನು ಹಿಂದಕ್ಕೆ ದೂಡಿ, ''ಯಾಕಲೇ ಮಂಗಾ, ನಡುವೆ ಯಾರೂ ಏಳಬಾರದೆಂದು ಹೇಳಿದ್ದರ ಅರಿವಿಲ್ಲವೆ? ಸರಿ ಹಿಂದಕ್ಕೆ. ಇಲ್ಲದಿದ್ದರೆ ಈ ಕಠಾರಿಯು——'' ಎಂದು ಕಂಬಳಿಯ ಮುಸುಕಿನೊಳಗಿಂದ ತನ್ನ ಕಠಾರಿಯನ್ನು ಎತ್ತಲು, ಮುಸಲ್ಮಾನರು ಕ್ಷೋಭಿಸಿದರು. ಇತ್ತ ಕನ್ನಡಿಗರಾದರೂ ಜಾಗರೂಕರಾಗಿ ಕುಳಿತಲ್ಲಿಂದಲ್ಲೇ, ''ಏನೋ ನೋಡುವಿರಲೇ? ದೂಡಿರಿ ಆ ಮುಠಳನನ್ನು! ಗದ್ದಲ ಮಾಡಿದರೆ ಪಾರಾಗಲಿಕ್ಕಿಲ್ಲ'' ಎಂದು ತಮ್ಮ ತಮ್ಮ ಶಸ್ತ್ರಗಳನ್ನು ಹಿರಿದರು. ಇದನ್ನು ನೋಡಿ, ಅತ್ತ ಮುಸಲ್ಮಾನ್ ಸೈನಿಕರು ಶಸ್ತ್ರವನ್ನು ಹಿರಿಯಲು, ಇತ್ತ ದೇವರಾಯನ ಸೈನಿಕರೂ ಶಸ್ತ್ರ ಹಿರಿದರು. ಒಬ್ಬನು ಹುಯ್ ಅಂದರಾಯಿತು, ಎಲ್ಲರೂ ಹುಯ್ ಎಂದು ಗಲಭೆ ಮಾಡಲಿಕ್ಕೆ ಕನ್ನಡಿಗರು ಹಿಂದೆಮುಂದೆ ನೋಡುವವರಲ್ಲ, ಕನ್ನಡಿಗರ ಈ ಸ್ವಭಾವದ ಪರಿಚಯವಿಲ್ಲದ ಮಹಮ್ಮದನು ಅವರ 'ದಿಟ್ಟತನ'ದಲ್ಲಿ ವಿಶೇಷ ಅರ್ಥವನ್ನು ಕಂಡನು! ಅಂದರೆ ತನ್ನ ಸ್ವಭಾವದ ಸ್ಥಿರತೆಯನ್ನು ಅವರಲ್ಲಿ ಆರೋಪಿಸಿದನು. ಮೇಲಾಗಿ ಆತನು

ನ್ಯಾಯಪ್ರಿಯನಾದ್ದರಿಂದ, ತಮ್ಮವರು ನಡುವೆ ಎದ್ದು ಮಲ್ಲನ ಮೇಲೆ ಒದರಾಡಿದ್ದು ಆತನಿಗೆ ನ್ಯಾಯವಾಗಿ ತೋರಲಿಲ್ಲ. ಆದ್ದರಿಂದ ಆತನು ತನ್ನ ಸಿಂಹಾಸನದಿಂದ ಎದ್ದು ತನ್ನ ಜನರನ್ನು ಗದ್ದರಿಸಿ ಸುಮ್ಮನೆ ಮಾಡಿದರು.

ಇಷ್ಟು ಗದ್ದಲವಾದರೂ ಮಲ್ಲನು ರಾಹುವನ್ನು ಸಾಧಿಸಿ ನಿಂತುಕೊಂಡಿದ್ದ ತನ್ನ ಸ್ಥಳದಲ್ಲಿ ಉಲಿಕಿದ್ದಿಲ್ಲ. ತುಸು ಸಮಯದಲ್ಲಿ ಮಲಿಕನು ತನ್ನ ಅಂಗಿಯನ್ನು ತೆಗೆದು ಚೆಲ್ಲಿ, ಸದ್ದು ಹೊಡೆದು, ಮಲ್ಲನ ಮುಂದೆ ಬಂದು ನಿಂತುಕೊಂಡನು. ಅಷ್ಟರಲ್ಲಿ ಮಲ್ಲನು ತನ್ನ ಗೊಂಗಡಿಯನ್ನು ದೂರ ಚೆಲ್ಲಿಕೊಟ್ಟು, ಸದ್ದು ಹೊಡೆದು ಸಿದ್ಧನಾದನು. ಆ ಇಬ್ಬರು ಜಟ್ಟಿಗಳು ಚೆಲ್ಲಿಕೊಟ್ಟ ಅಂಗಿ ಕಂಬಳಿಗಳನ್ನು ಅವರವರ ಅನುಯಾಯಿಗಳು ಆದರದಿಂದ ತಕ್ಕೊಂಡು ಇಟ್ಟುಕೊಂಡರು. ಕಾಸೀಮನು ನಿಲ್ಲಿಸಿದ ಒಬ್ಬ ಮುಸಲ್ಮಾನನು ಮಲಿಕನ ಸಲುವಾಗಿ ಒಂದು ಕಠಾರಿಯನ್ನು ಹಿಡಕೊಂಡು ಕಣದಲ್ಲಿ ದೂರ ನಿಂತಿದ್ದನು. ಇತ್ತ ಆ ಗೊಂಗಡಿಯವನು ಮಲ್ಲನ ಸಲುವಾಗಿ ತನ್ನ ಕಠಾರಿಯನ್ನು ಹಿಡಿದುಕೊಂಡು ಒತ್ತಟ್ಟಿಗೆ ನಿಂತಿದ್ದನು. ಇವರಿಬ್ಬರ ಹೊರತು ಬೇರೆ ಯಾರೂ ಕಣದಲ್ಲಿ ಸುಳಿದಾಡುತ್ತಿದ್ದಿಲ್ಲ.

ಪಕ್ಷಪಾತವಿಲ್ಲದೆ ನೋಡುವವರಿಗೆ ಇಬ್ಬರು ವೀರರೂ ಶ್ಲಾಘನೀಯರಾಗಿ ತೋರುತ್ತಿದ್ದರು. ಮಲಿಕನ ಪುಷ್ಟ ದೇಹವು ಮಹಾಬಲಿಷ್ಠವಾಗಿದ್ದರೆ, ತೆಳ್ಳನ್ನ ಮಲ್ಲನು ಮಹಾಚಪಲನಾಗಿ ತೋರುತ್ತಿದ್ದನು. ಮಲಿಕನು ಗೌರಕಾಯನೂ ಮಲ್ಲನು ನಸುಗೆಂಪು ಮೈಬಣ್ಣದವನೂ ಇದ್ದರೂ, ಅವರ ಮುಖಕಾಂತಿಯು ಅವರ ಅಲೌಕಿಕ ಪೌರುಷವನ್ನು ಪ್ರಕಟಿಸುತ್ತಿತ್ತು. ಅವರಿಬ್ಬರೂ ಪರಸ್ಪರರನ್ನು ಎದುರಿಸಿ, ರಭಸದಿಂದ ತೋಳು–ತೊಡೆಗಳನ್ನು ತಟ್ಟಿಕೊಂಡು, ಮುಜುರೆ ಮಾಡಿ, ಕೈಗೆ ಕೈ ಕೊಟ್ಟು, ಕಾದಹತ್ತಲು, ಜನರ ಚಿತ್ತವೃತ್ತಿಗಳು ತಲ್ಲೀನವಾಗಿಹೋದವು.

ಹೀಗೆ ಆ ಉಭಯ ವೀರರು ವೀರಜನ ಸಮ್ಮತವಾಗಿ ಕಾದುತ್ತಿರುವಾಗ ಬರಬರುತ್ತ ಮಲಿಕನ ಕಸುವು ಹೆಚ್ಚಾಗುತ್ತ ಬಂದಂತೆ ತೋರಿತು. ಇದರಿಂದ ಮುಸಲ್ಮಾನರು ಉತ್ಸಾಹಗೊಂಡರು. ಹಿಂದೂ ಜನರ ಚಿಂತೆಗೊಳಗಾದರು. ಈ ಮಲ್ಲಯುದ್ಧದ ಜಯಾಪಜಯಗಳ ಪರಿಣಾಮಗಳು ಬಹುದೂರದವರೆಗೆ ಮುಟ್ಟತಕ್ಕವಾದ್ದರಿಂದ, ಮಲ್ಲನ ದೌರ್ಬಲ್ಯಕ್ಕಾಗಿ ಹಿಂದೂ ಜನರ ಹೃದಯಗಳು ನಡುಗಹತ್ತಿದವು. ಆದರೂ ಮಲ್ಲನು ಮಲಿಕನಿಗೆ ಸೊಪ್ಪು ಹಾಕುವ ಹಾಗೆ ತೋರಲಿಲ್ಲ. ಒಂದೆರಡು ಸಲ, ಒಳ್ಳೆಯ ಹಿಡಿತಗಳಿಂದ ಮಲಿಕನನ್ನು ಬೊಕ್ಕಬೋರಲು ಕೆಡವಿ ಮಲ್ಲನು ಜನರಿಂದ ಹೊಗಳಿಸಿಕೊಂಡನು. ಮಲಿಕನು ಒಂದೆರಡು ಸಾರೆ ಮಲ್ಲನನ್ನು ನಿಡಿಚಾಪಾಗಿ ಕೆಡವಿದನು. ಆ ವೀರರು ಒಬ್ಬರ ಹಿಡಿತಗಳನ್ನು ಮತ್ತೊಬ್ಬರು ತಪ್ಪಿಸಿಕೊಳ್ಳುವರು; ಒಬ್ಬನು ಮತ್ತೊಬ್ಬನನ್ನು ನೆಲಕ್ಕಟ್ಟಿಸುವನು; ಒಬ್ಬನ ಕೈಯೊಳಗಿಂದ ಮತ್ತೊಬ್ಬನು ಸರಕ್ಕನೆ ನುಸಿದು ಪಾರಾಗುವನು, ಒಬ್ಬನು ಮತ್ತೊಬ್ಬನನ್ನು ನೆಲಕ್ಕಪ್ಪಳಿಸುವನು. ಹೀಗಾದರೂ ಸೋಲು–ಗೆಲುವುಗಳ ನಿರ್ಣಯವಾಗಲೊಲ್ಲದು.

ಉಭಯವೀರರನ್ನು ವಿಶೇಷವಾಗಿ, ಮಲ್ಲಣ್ಣನನ್ನು, ಜನರು ಶ್ಲಾಘಿಸಹತ್ತಿದರು. ಯಾಕೆಂದರೆ ಮಲ್ಲಣ್ಣನು ನೋಡಲಿಕ್ಕೆ ಪುಡಿಯಾಳಾಗಿ ತೋರುತ್ತಿದ್ದು, ಮಲಿಕನಂಥ ಮಹಾ ಬಲಿಷ್ಠನೊಡನೆ ಕಾದುತ್ತಿದ್ದನು. ನೋಡು ನೋಡುವಷ್ಟರಲ್ಲಿ ಮಲಿಕನಾಯಬನು ಮಲ್ಲಣ್ಣನನ್ನು ಬಲವಾಗಿ ಹಿಡಿದು, ಮಹಾ ಸಾಮರ್ಥ್ಯದಿಂದ ನೆಲಕ್ಕೆ ಕೆಡವಿದನು.

''ಬಿದ್ದನು, ಬಿದ್ದನು! ಮಲ್ಲಣ್ಣನು ಬಿದ್ದಹಾಗೆಯೇ ಸರಿ,'' ಎಂದು ಮುಸಲ್ಮಾನರು ಕೂಗತೊಡಗಿದರು. ಮಲಿಕನಿಗೆ ಇನ್ನು ಕಠಾರಿಯನ್ನು ಕೊಡಬೇಕೆಂದು ಯವನನು ಆತುರದಿಂದ ನೋಡತೊಡಗಿದನು. ಆದರೆ ಈ ಸ್ಥಿತಿಯಲ್ಲಿಯೂ ಮಲ್ಲಣ್ಣನು ಮಲಿಕನಿಗೆ ಮಣಿಯದೆ ಬಹಳ ಹೊತ್ತು ತಡೆದು ನಿಂತದ್ದನ್ನು ನೋಡಿ ಜನರು ಅವನನ್ನು ಕೊಂಡಾಡಹತ್ತಿದರು. ''ಇನ್ನೇನು? ಈಗ ಇವನನ್ನು ನೆಲಕ್ಕೆ ಅಂಗಾತ ಉರುಳಿಸುವೆನು,'' ಎಂಬ ಹೆಮ್ಮೆಯಿಂದ ಬೀಗುತ್ತಿದ್ದ ಮಲಿಕನು ಪರಿಪರಿಯ ಹಿಡಿತಗಳನ್ನು ಪ್ರಯೋಗಿಸಿ ನೋಡಿ ವಿಫಲನಾದನು. ಆದರೂ ಇನ್ನು ಮಲ್ಲಣ್ಣನು ಮೇಲೆದ್ದು ಮಲಿಕನನ್ನು ಕೆಡಹುವನೆಂದು ಯಾರಿಗೂ ತೋರುತ್ತಿದ್ದಿಲ್ಲ. ಅಷ್ಟರಲ್ಲಿ ಮಲ್ಲಣ್ಣನು ಏನು ಮಾಡಿದನೋ ತಿಳಿಯಲಿಲ್ಲ. ಆತನು ಕ್ಷಣದಲ್ಲಿ ಮಲಿಕನನ್ನು ನೆಲಕ್ಕಟ್ಟಿಸಿ, ತಾನು ಮೇಲೆಯಾದನು. ಹೀಗೆ ಕಾದುವುದರಲ್ಲಿ ಮಲ್ಲಣ್ಣನ ಕೈ ಮೇಲಾಗಲು ಕನ್ನಡಿಗರ ಉತ್ಸಾಹವು ಹೆಚ್ಚಿ, ಅವರು ಜಯನಾದ ಮಾಡಹತ್ತಿದರು. ಅವರ ಉತ್ಸಾಹದ ಕೂಗುಗಳಿಂದ ಮಲ್ಲನ ಉತ್ಸಾಹವು ಹೆಚ್ಚತೊಡಗಿತು. ಆನಂದಪರವಶರಾದ ಕನ್ನಡಿಗರು ಮುಸಲ್ಮಾನರ ಗದ್ದರಿಕೆಗೆ ಸುಮ್ಮನಾಗದಾದರು. ''ಭಪ್ಪರೆ ಮಲ್ಲಸರ್ಜಾ! ಆನೆಗುಂದಿಗೆ ಕೀರ್ತಿ ತಂದೆ! ಶಾಬಾಸ್! ಶಾಬಾಸ್!'' ಎಂದು ಕೂಗಹತ್ತಿದರು.

ಯಾವ ಹಿಡಿತದಿಂದ ಮಲಿಕನನ್ನು ಮಲ್ಲಣ್ಣನು ಹಣ್ಣು ಮಾಡಿದ್ದನೋ ತಿಳಿಯದು. ಸಮರ್ಥ ಮಲಿಕನು ಬರಬರುತ್ತ ಸಪ್ಪಗಾಗಿ, ಮಲ್ಲಣ್ಣನನ್ನು ಒಗೆಯುವದಂತೂ ಇರಲಿ, ಅವನ ಕೈಯೊಳಗಿಂದ ಹೇಗಾದರೂ ಪಾರಾದರೆ ಸಾಕೆಂದು ಹೆಣಗಹತ್ತಿದನು! ಈ ಗುಟ್ಟು ಮಲ್ಲಣ್ಣನಿಗೆ ಅರಿವಾಯಿತು. ಆಗ ಎದುರಾಳಿಯ ಮೇಲಿನ ಹಿಡಿತವನ್ನು ಬಲಗೊಳಿಸಿದನು. ಇತ್ತ ಗುಣಗ್ರಾಹಿಯಾದ ಮಹಮ್ಮದ ತಗಲಖನು ಮುಕ್ತಕಂಠವಾಗಿ ಮಲ್ಲಣ್ಣನನ್ನು ಹೊಗಳಹತ್ತಿದನು! ಇದನ್ನು ನೋಡಿ ಕಾಸೀಮನೇ ಮೊದಲಾದ ಅಸೂಯಾಭಾವದ ಜನರಿಗೆ ಕಷ್ಟವಾಗಹತ್ತಿತು. ಇನ್ನು ಮುಸಲ್ಮಾನರು ಜಗಳ ತೆಗೆಯುವ ಹವಣಿಕೆಯಲ್ಲಿದ್ದರು. ಮಲ್ಲಣ್ಣನು ಬಾದಶಹನನ್ನು ನೋಡಿ, ''ನೋಡುತ್ತಿರು. ಎಲೆ ಗುಣಗ್ರಾಹಿಯಾದ ತಗಲಖ ಪ್ರಭುವೇ, ನಮ್ಮ ಒಡೆಯನಾದ ಹೆಗ್ಗಣ್ಣನು ಪುಂಡನಲ್ಲ, ತುಂಟನಲ್ಲ; ಪುಂಡ—ತುಂಟರ ಗಂಡನು! ಇದು ನೋಡು, ಈ ಹೊಡತವು ಹೆಗ್ಗಣ್ಣನು ಕಲಿಸಿದ್ದು,'' ಎಂದು ನುಡಿದು, ವೀರ ಮಲ್ಲನು ಮಲಿಕನನ್ನು ಅನಾಯಾಸವಾಗಿ, ಹೋಳಿಗೆ ತಿರುವಿ ಹಾಕಿದಂತೆ ನೆಲಕ್ಕೆ ಅಂಗಾತ ತಿರುವಿ ಹಾಕಿ, ಎದೆಯ ಮೇಲೆ ಕುಳಿತುಕೊಂಡನು!! ಕನ್ನಡಿಗರ ಆಗಿನ ಜಯ ಘೋಷದಿಂದ ದಶದಿಕ್ಕುಗಳು ತುಂಬಿದವು.

ಆಗ ತಗಲಖ ಮಹಮ್ಮದನು ಸಂತುಷ್ಟನಾಗಿ, ''ಶಾಬಾಸ್! ಮಲ್ಲಸರ್ಜಾ! ಶಾಬಾಸ್! ಈ ತಗಲಖನಲ್ಲಿ ಗುಣಕ್ಕೆ ಮಾತ್ಸರ್ಯವಿಲ್ಲ. ನೀನು ನಿನ್ನ ಸತ್ವಾತಿಶಯದಿಂದ ನಿನ್ನ ಬಂಧವಿಮೋಚನೆ ಮಾಡಿಕೊಂಡಿರುತ್ತೀ! ನಿಜವಾದ ವೀರನು ನೀನು,'' ಎಂದು ಹೊಗಳುತ್ತಿರಲು ಆ ಗೊಂಗಡಿಯವನು ತನ್ನ ಕೈಯೊಳಗಿನ ಕಠಾರಿಯನ್ನು ಮಲ್ಲಣ್ಣನ ಕೈಗ ಕೊಟ್ಟನು. ಅದನ್ನು ನೋಡಿ ಮಲಿಕನ ಎದೆಯೊಡೆದು ನೀರಾಯಿತು. ಮುಸಲ್ಮಾನರಲ್ಲಿ ಹಾಹಾಕಾರವುಂಟಾಗಿ ಅವರು ದೊಂಬಿಯೆಬ್ಬಿಸುವ ಹವಣಿಕೆಯಲ್ಲಿದ್ದರು. ಆಗ ತಗಲಖ ಮಹಮ್ಮದನು ಸ್ವತಃ ಸಿಂಹಾಸನದಿಂದ ಇಳಿಯುತ್ತ ಜನರನ್ನು ತಂತಮ್ಮ ಸ್ಥಳದಲ್ಲಿ ಕುಳಿತುಕೊಳ್ಳುವಂತೆ ಸೂಚಿಸುತ್ತ ಮಲ್ಲನ ಬಳಿಗೆ ಬಂದನು. ಕಾಸೀಮನೇ ಮೊದಲಾದವರೂ ಅಲ್ಲಿಗೆ ಬಂದರು. ಆಗ ಬಾದಶಹನು, ''ಮಲ್ಲಣ್ಣಾ, ಮೊದಲು ಗೊತ್ತಾದಂತೆ ಈಗ ನೀನು ನಿರ್ಬಾಧಿತನಾಗಿ ಮಲಿಕನ ಪ್ರಾಣಹರಣ ಮಾಡಬಹುದು. ಈ ಮಲಿಕನು ನಮ್ಮವನು. ಅವನ ಮೇಲೆ ನಮ್ಮ ಪ್ರೀತಿಯೂ ಬಹಳ; ಆದರೆ ಕೊಟ್ಟ ಮಾತು ಯಾರ ಮನೆಯದು? ನಿನ್ನ ಕೂದಲು ಕೊಂಕದಂತೆ ನಾನು ಕಾಯುವೆನು. ನೀನು ನಿಶ್ಚಿಂತನಾಗಿ ಮಲಿಕನ ಪ್ರಾಣಹರಣ ಮಾಡು.''

ಆದರೆ ಮಲಿಕನಾಯಬನ ಸ್ಥಿತಿಯು ಶೋಚನೀಯವಾಗಿತ್ತು. ಕಠಾರಿಯನ್ನು ಕೈಯಲ್ಲಿ ಹಿಡಿದುಕೊಂಡು ಎದೆಯ ಮೇಲೆ ಕುಳಿತಿದ್ದ ಮಲ್ಲನನ್ನು ನೋಡಿ ಮಲಿಕನ ಎದೆಯೊಡೆದು ನೀರಾಯಿತು. ತಲೆಗೇರಿದ ಅವನ ದುರಭಿಮಾನದ ನಂಜು ತಟ್ಟನೆ ಇಳಿದು, ಅವನು ಮರಣಭಯದಿಂದ ಕಂಪಿಸತೊಡಗಿದನು. ತನ್ನ ಸುಖಸರ್ವಸ್ವವನ್ನು ನೆನೆಸಿ ಮನೋವ್ಯಥೆಯಿಂದ ಮಿಡುಕಹತ್ತಿದನು. ಅವನ ಬಾಯಿಂದ ಮಾತುಗಳು ಹೊರಡಲೊಲ್ಲವು. ಅಷ್ಟರಲ್ಲಿ ಪರಮೋದಾರನಾದ ಮಲ್ಲಣ್ಣನು ಸೌಜನ್ಯದ ಸದ್ಭಾವನೆಯಿಂದ ಕೂಡಿದವನಾಗಿ ಮಲಿಕನ ಎದೆಯ ಮೇಲಿಂದ ಎದ್ದು, ಆತನನ್ನು ಆದರದಿಂದ ಕೈಹಿಡಿದು ಎಬ್ಬಿಸುತ್ತ ''ವೀರನೇ, ಏಳು. ಸೋಲು—ಗೆಲುವುಗಳೆರಡೂ ನಿನ್ನಂಥ ವೀರನಿಗೆ ಒಪ್ಪುವವು! ಅವುಗಳೆರಡೂ ಭೂಷಣಗಳೆಂದು ತಿಳಿ. ಯಾಕೆಂದರೆ, ನಿನ್ನ ಗೆಲುವು ನಿನ್ನ ಕೀರ್ತಿಗೆ ಕಾರಣವಾಗುವಂತೆ ನಿನ್ನ ಸೋಲು ನಮ್ಮಂಥ ಹೀನಬಲರನ್ನು ಕೀರ್ತಿಶಾಲಿಗಳಾಗಿ ಮಾಡುವದು! ಇಲ್ಲದಿದ್ದರೆ ಈ ಮಲ್ಲನನ್ನು ಯಾರು ಕೇಳುತ್ತಿದ್ದರು? ನಿನ್ನ ಒಡೆಯನಾದ ಬಾದಶಹನ ಮುಂದೆ ನನ್ನ ಒಬ್ಬನ ಮಾನವೇ ಏಕೆ, ನಮ್ಮ ಒಡೆಯನ ಮಾನವೂ–ಇಡಿಯ ಕನ್ನಡಿಗರ ಮಾನವೂ ಉಳಿದವು! ಪ್ರಿಯ ದೋಸ್ತ ಮಲಿಕನಾಯಬ! ನೀನು ಬೀಳಲೊಲ್ಲೇಕೆ, ಏಳಲೊಲ್ಲೇಕೆ; ನಿನ್ನಲ್ಲಿಯ ವೀರ್ಯಕ್ಕೆ ಸರ್ವಥಾಕಲಂಕ ಉಂಟಾಗದು. ನಿನ್ನ ಮಲ್ಲಯುದ್ಧದ ಚಾತುರ್ಯವಾದರೂ ಏಷ್ಟದು! ನಿನ್ನ ಎದೆಗೆ ಕಠಾರಿಯನ್ನು ಇರಿದು ಕೊಲ್ಲುವ ಅಧಿಕಾರವೇನೋ ನನಗೆ ಬಂದಿದೆ. ಆದರೆ ನ್ಯಾಯಪಕ್ಷಪಾತಿಯೂ ಅತ್ಯಂತ ಉದಾರನೂ ಆದ ಬಾದಶಹನು, 'ಇವನು ನನ್ನವನು. ಇವನ ಮೇಲೆ ನನ್ನ ಪ್ರೇಮ ಬಹಳ,' ಎಂದು ಹೇಳುತ್ತಿರುವಾಗ, ನಾನು ನಿನ್ನ ಹೃದಯದಲ್ಲಿ

ಕಠಾರಿಯನ್ನು ಹೇಗೆ ಇರಿಯಲಿ! ಆದ್ದರಿಂದ ವೀರನೇ, ಹೋಗು, ನಿನ್ನನ್ನು ನಾನು ಕೊಲ್ಲುವದಿಲ್ಲ,'' ಎಂದು ಕಠಾರಿಯನ್ನು ಗೊಂಗಡಿಯವನ ಕೈಗಿತ್ತು, ಮಲಿಕನಿಗೆ ಮುಜುರೆ ಮಾಡಿ, ಬಾದಶಹನಿಗೂ ವಿನಯದಿಂದ ನಮಿಸಿದನು. ತಗಲಖ ಬಾದಶಹನು ಮಲ್ಲನ ದೊಡ್ಡಿಸ್ತನಕ್ಕೆ ನಾಚಿ, ತಲೆತಗ್ಗಿಸಿದ ತನ್ನ ಅನುಯಾಯಿಗಳೊಂದಿಗೆ ಹೊರಟುಹೋದನು. ಇತ್ತ ಕನ್ನಡಿಗರು ಮಲ್ಲಣ್ಣನನ್ನು ರಾಜಧಾನಿಯಲ್ಲಿ ಮೆರೆಸುವ ಉದ್ಯೋಗ ಮಾಡಹತ್ತಿದರು!

೩

ಯದುಮಹಾರಾಜ

ಕೆರೂರ ವಾಸುದೇವಾಚಾರ್ಯರ 'ಯದುಮಹಾರಾಜ' ಕಾದಂಬರಿಯ ಕಥನ

ಬಾಗಲಕೋಟೆಯ ಕೆರೂರು ವಾಸುದೇವಾಚಾರ್ಯರು ಆಧುನಿಕ ಗದ್ಯ ಸಾಹಿತ್ಯದ ಪ್ರವರ್ತಕರಲ್ಲೊಬ್ಬರಾಗಿದ್ದಾರೆ. ರಾಜಕೀಯ ಮತ್ತು ಸಾಮಾಜಿಕವಾದ ವೈಖರಿಯಿಂದ ಪ್ರಾರಂಭವಾದ ಅವರ ಸಾಹಿತ್ಯರಚನೆ ಕಾಲಾಂತರದಲ್ಲಿ ಕಥೆ, ಕಾದಂಬರಿ, ನಾಟಕ ರಚನೆಯಲ್ಲಿ ಪಕ್ವಗೊಂಡಿತು. ಅವರ ಸ್ವತಂತ್ರ ಕೃತಿಗಳಲ್ಲಿ ಮುಖ್ಯವಾದ ''ಯದುಮಹಾರಾಜ'' ಮತ್ತು ''ಇಂದಿರಾ'' ಕ್ರಮವಾಗಿ ಕನ್ನಡ ಸಾಹಿತ್ಯಲೋಕದಲ್ಲಿನ ಆದಿಮ ಐತಿಹಾಸಿಕ ಮತ್ತು ಸಾಮಾಜಿಕ ಕಾದಂಬರಿಗಳಲ್ಲಿ ಪರಿಗಣಿತವಾಗುತ್ತವೆ. ಮೈಸೂರು ರಾಜಮನೆತನದ ಐತಿಹಾಸದ ಒಂದು ಮಹತ್ವದ ಘಟನೆಯನ್ನು ಅವಲಂಬಿಸಿದೆ ಈ ಕಾದಂಬರಿ.

ಯದುಮಹಾರಾಜ

ಶಾಲಿವಾಹನ ಶಕದ ೧೩೩೧ ನೆಯ ವರುಷದ ಪುಷ್ಯ ಮಾಸದಲ್ಲಿ, ಒಂದು ದಿನ ಅರುಣೋದಯಕ್ಕೆ ಮುಂಚಿತವಾಗಿ, ಸಾವಿರಾರು ಜನ ದಂಡಾಳುಗಳು ಮೈಸೂರು ಪಟ್ಟಣವನ್ನು ಸೇರಿ ಎಲ್ಲ ಬೀದಿಗಳಲ್ಲಿಯೂ ತುಂಬಿಕೊಂಡರು. ದಂಡಾಳುಗಳ ಕೂಗಾಟವೂ ಕುದುರೆಗಳ ಆರ್ಭಟೆಯ ಹೇಷಾರವಗಳೂ ರಣವಾದ್ಯಗಳ ನಿನಾದವೂ ಊರಿಗೆ ಊರನ್ನೇ ಗದಗಂಪಿಸಿಕೊಟ್ಟವು. ಇದೇನು ಪರರಾಜರ ಅಭಿಯೋಗವೋ ಸುಲಿಗೆಗಾರರ ಹಾವಳಿಯೇ ತಿಳಿಯದಂತಾಗಿತ್ತು. ಯಾವತ್ತೂ ಮನೆಯ ಬಾಗಿಲುಗಳಿಗೆ ಹೊರಚಿಲಕಗಳು ಬಿದ್ದು ಹೋಗಿದ್ದುವು. ಇದೇನು ಅನರ್ಥವೆಂದು ಕಿಡಿಕಿಗಳಲ್ಲಿ ಮೋರೆಯಿಟ್ಟು ನೋಡಿದವರು ನಿರ್ದಯರಾದ ಬಿಲ್ಲಾಳುಗಳ ಕೂರ್ಗಣೆಗೆ ಗುರಿಯಾದರು. ಆಕಸ್ಮಾತ್ತಾಗಿ ಬೀದಿಯಲ್ಲಿ ಬಂದ ಪೌರ ಜನರ ದೇಹಗಳು ಕಡಿದುಹೋದವು.

ನಾಗರಿಕರನ್ನು ಹೀಗೆ ಕಟ್ಟಿನಲ್ಲಿಟ್ಟು, ದಂಡಾಳುಗಳು ಅರಮನೆಯನ್ನು ಮುತ್ತಿಕೊಂಡರು. ಅಲ್ಲಿಯ ಕಾವಲುಗಾರರು ಪರಾಕ್ರಮಿಗಳಾದರೂ ಆ ಮಂದಿ ಸ್ವಲ್ಪ. ಆ ಸ್ವಾಮಿಭಕ್ತಿ ಪರಾಯಣರು ಆವೇಶದಿಂದ ಕಾದಿದರಾದರೂ ಅವರ ಚಿಕ್ಕ ಮೇಳೆಯು ಬೇಗನೆ ಕರಗಿಹೋಯಿತು.

ಕೂಡಲೇ ಬಂಡುಗಾರರು ಅರಮನೆಯ ಹೆಬ್ಬಾಗಿಲನ್ನು ಮುರಿದು, ಒಳಹೊಕ್ಕರು. ಆಗ ಚಾಮರಾಜರು ಪ್ರಾತಃಸ್ನಾನವನ್ನು ಮುಗಿಸಿ, ದೇವತಾಯತನದಲ್ಲಿ ಕುಳಿತು ಆಹ್ನಿಕದಲ್ಲಿ ತೊಡಗಿದ್ದರು. ಬಂಡುಗಾರ ನಾಯಕರು ತಮ್ಮ ಸೈನ್ಯದೊಡನೆ ಅಲ್ಲಿಗೇ ಬರಲು, ರಾಜೋಪಾಧ್ಯಾಯರು ಆ ದೇವಮಂದಿರದಿಂದ ಹೊರಬಂದು,

''ಮಾರನಾಯಕಾ, ಶಾಂತರಾಜಾ, ಇದೇನು ಅನರ್ಥವನ್ನು ನಡೆಯಿಸಿರುವಿರಿ? ಮಹಾರಾಜರು ನಿಮ್ಮನ್ನು ಚಿಕ್ಕಂದಿನಿಂದ ಸಲಹಿ ಜೋಪಾನ ಮಾಡಿದವರು. ಅಜಾತಶತ್ರುವಿನಂತಿರುವ ಅವರ ಮೇಲೆ ಕೈ ಮಾಡಬಯಸುವಿರಾ?'' ಎಂದು ಕೇಳುವಷ್ಟರಲ್ಲಿಯೇ ಆ ವಿಪ್ರೋತ್ತಮನ ಪವಿತ್ರವಾದ ದೇಹವು ಛಿನ್ನ ಭಿನ್ನವಾಗಿ ಕೆಳಗುರುಳಿತು.

ಬ್ರಾಹ್ಮಣಹತ್ಯೆಯಂತಹ ಪರಾಕ್ರಮವನ್ನು ಮಾಡಿದವರಾಗಿ, ಇನ್ನು ಚಾಮರಾಜರನ್ನು ಬಂಧಿಸಿ ತೆಗೆದುಕೊಂಡು ಹೋಗಬೇಕೆಂದು ಉಬ್ಬಿನಲ್ಲಿ ಒಳಗೆ ಬಂದು ನೋಡುತ್ತಾರೆ! ಆ ರಾಜರ್ಷಿಯು ಐಹಿಕ ಬಂಧನಗಳನ್ನು ಹರಿದೊಗೆದು, ಕುಳಿತಲ್ಲಿಯೆ ಪ್ರಾಣವನ್ನು ಬಿಟ್ಟಿದ್ದನು.

ಆಗ ಅರಮನೆಯಲ್ಲಿ ನಡೆದ ಗೋಳಾಟವನ್ನು ಏನೆಂದು ಹೇಳಬೇಕು? ಅಂತಃಪುರದ ನಾರೀಗಣವೆಲ್ಲವೂ ಆಕ್ರಂದಿಸುವ ಘೋರತರ ಸ್ವರವು ಎಣ್ದೆಸೆಗಳಲ್ಲಿ ತುಂಬಿಕೊಂಡಿತು.

ಮಹಾರಾಣಿಯವರೂ ಮಹಾರಾಜರ ಏಕಮಾತ್ರ ಪುತ್ರಿ ದೇವಕೀದೇವಿಯೂ ಒಬ್ಬರಿಗೊಬ್ಬರು ತೆಕ್ಕೆಬಿದ್ದು, 'ಇನ್ನೇನು ಗತಿ?'ಯೆಂದು ಕಲ್ಮರಗಳು ಕರಗುವಂತೆ ಕೊರಗಿದರು.

ಇಡೀ ಮೈಸೂರು ಪಟ್ಟಣವೇ ಆ ದಿವಸ ಭಯಂಕರವಾಗಿ ತೋರುತ್ತಿತ್ತು. ಬೀದಿ ಬೀದಿಗಳಲ್ಲಿ ಕಡಿದು ತುಂಡಾಗಿ ಬಿದ್ದ ಪೌರಜನರ ದೇಹಗಳೊಳಗಿಂದ ರಕ್ತವು ಚಿಲಿಚಿಲಿಯಾಗಿ ಹರಿಯುತ್ತಿತ್ತು. ನಾಲಗೆಗಳನ್ನು ಕಚ್ಚಿಕೊಂಡ ರುಂಡಗಳೂ ಅಸ್ತವ್ಯಸ್ತವಾಗಿ ಬಿದ್ದಿರುವ ಮುಂಡಗಳೂ ಹೋಗಿ ಬರುವವರ ಎದೆಗಳನ್ನು ಸೀಳುತ್ತಿದ್ದವು.

ಇಷ್ಟೆಲ್ಲ ಅನರ್ಥಕ್ಕೆ ಕಾರಣನಾದ ಮಾರನಾಯಕನು ಚಾಮರಾಜರ ಆಶ್ರಯದವನಾದ ಒಬ್ಬ ವೀರನ ಮಗನು. ತಂದೆ ಸತ್ತಾಗ ಅವನು ಹತ್ತು ವರುಷದ ಬಾಲಕನಾಗಿದ್ದನು. ಚಾಮರಾಜರು ಆ ಬಾಲಕನನ್ನು ಮನೆಯಲ್ಲಿರಿಸಿಕೊಂಡು, ವಾತ್ಸಲ್ಯದಿಂದ ಅವನನ್ನು ಪೋಷಿಸಿ, ಅವನಿಗೆ ಯುದ್ಧ ಕಲೆಯನ್ನು ಕಲಿಸಿದರು. ತನ್ನ ತರುಣ ವಯಸ್ಸಿನಲ್ಲಿ ಮಾರನಾಯಕನು ಚಾಮರಾಜರ ಆಶ್ರಯದಲ್ಲಿದ್ದ ವೀರರಿಗೆ ಅಗ್ರೇಸರನಾದನು. ಮುಂದೆ ಅವನು ವಿಜಯನಗರದವರ ಸೇವೆಯಲ್ಲಿ ಸೇರಿ, ಅಲ್ಲಿ ಹೆಸರುಗೊಂಡು ಕಡೆಗೆ ಮೈಸೂರಿನ ನೆರೆಯಲ್ಲಿದ್ದ ಕುರುಗಳ್ಳಿಯ ಪಾಳ್ಯಗಾರನಾದನು.

ಇವನ ಹಸ್ತಕನಾದ ಶಾಂತರಾಜನು ಚಾಮರಾಜರ ದಾಯಾದನಿದ್ದು ಮೈಸೂರಿನ ನೆರೆಯಲ್ಲಿಯೇ ಇರುವ ಮತ್ತೊಂದು ಸಂಸ್ಥಾನದ ಅಧಿಪತಿಯಾಗಿದ್ದನು. ಇವನು ಸ್ವಭಾವತಃ ಮತ್ಸರಿಯೂ ವಂಚಕನೂ ವಿಷಯಾಸಕ್ತನೂ ಆಗಿದ್ದುದರಿಂದ ಅವನಿಗೂ ಚಾಮರಾಜರಿಗೂ ಮನಸಾ ನೆಟ್ಟಗಿದ್ದಿಲ್ಲ. ಚಾಮರಾಜರು ತಮ್ಮ ಪೂರ್ವ ವಯಸ್ಸಿನಲ್ಲಿ ಪ್ರತಾಪಶಾಲಿಗಳೂ ರಾಜಕಾರಣ ಧುರಂಧರರೂ ಆಗಿ ರಾಜ್ಯವಾಳುತ್ತಿದ್ದಾಗ ಶಾಂತರಾಜನ ದಾಯಾದ ಮತ್ಸರವು ಹೊಗೆಯಾಡದೇ ಕುಳಿತಿದ್ದಿತು. ಮುಂದೆ ತಮಗೆ ಪುತ್ರಸಂತಾನವಿಲ್ಲೆಂದು ಚಾಮರಾಜರು ತಮ್ಮ ಆಳಿಕೆಯ ಉತ್ತರಕಾಲದಲ್ಲಿ ರಾಜ್ಯದ ಸೂತ್ರಗಳನ್ನು ಮಂತ್ರಿಗಳ ಸ್ವಾಧೀನಮಾಡಿ, ಪಾರಲೌಕಿಕ ಅನುಷ್ಠಾನದಲ್ಲಿ ನಿರತರಾದರು. ಅವರ ಮೇಲೆ ಹಗೆ ಸಾಧಿಸಲು ಇದು ತಮ್ಮ ಸಮಯವೆಂದು ಶಾಂತರಾಜನಿಗೆ ತೋರಿತು.

ಇತ್ತ ಕುರುಗಳ್ಳಿಯ ಪಾಳ್ಯಗಾರನಾದಂದಿನಿಂದ ಮಾರನಾಯಕನ ಮೈಯಲ್ಲಿ ಅಹಂಕಾರದ ಗಾಳಿಯು ತುಂಬಿತು. ಇದನ್ನರಿತ ಶಾಂತರಾಜನು ಅವನಿಗೆ ಇಲ್ಲದ ದುರ್ಬೋಧನೆಯನ್ನು ಮಾಡಿ ಮೈಸೂರಿನ ರಾಜ್ಯದ ಮೇಲೆ ಅಭಿಯೋಗವನ್ನು ಮಾಡಹಚ್ಚಿದನು. ಮಹಾರಾಜರನ್ನು ಸಂಹರಿಸಿ, ರಾಜ್ಯವನ್ನು ಗೆದ್ದಮೇಲೆ, ಅದನ್ನು ಸರಿಯಾಗಿ ಹಂಚಿಕೊಳ್ಳಬೇಕೆಂದು ಇಬ್ಬರೂ ಮಾತನಾಡಿಕೊಂಡಿದ್ದರು. ಆದರೆ ಸದ್ಯಕ್ಕಂತೂ ಮಾರನಾಯಕನು ತಾನೇ ರಾಜನೆಂದು ಡಂಗುರ ಹೊಡಿಸಿಬಿಟ್ಟನು!

ಆಗ ರಾಜ್ಯ ಪ್ರಮುಖರಲ್ಲಿ ಮೂರು ಬಣಗಳಾದವು. ಮೊದಲನೆಯದು ಕೇವಲವಾಗಿ ಚಾಮರಾಜರ ಅಭಿಮಾನಿಗಳದು; ಎರಡನೆಯದು, ರಾಜಪಕ್ಷವನ್ನು ಮನಸ್ಸಿನಿಂದ ಸೇರುತ್ತಿದ್ದರೂ ತಮ್ಮ ಮನೋಗತವನ್ನು ವ್ಯಕ್ತಪಡಿಸಲು ಧೈರ್ಯ ಸಾಲದೆ 'ನಡೆಯುವ ಕಾಲಿಗೆ

ನಮಸ್ಕಾರ'ವೆಂದು ಹೇಳುವ ದೇವರಾಜನಂತಹ ಮಧ್ಯಸ್ಥರದು; ಮೂರನೆಯದು ಮಾರನಾಯಕನಲ್ಲಿಯೆ ಅಭಿಮಾನವುಳ್ಳ ಸ್ವಾರ್ಥೀ ಸೈನ್ಯಾಧಿಕಾರಿಗಳದು.

ಮೊದಲನೆಯ ಪಕ್ಷವು ಸ್ವಾಭಾವಿಕವಾಗಿಯೆ ದುರ್ದಶೆಯನ್ನು ಭೋಗಿಸುತ್ತಿತ್ತು. ಅವರು ತಮ್ಮ ಮನೆಮಾರುಗಳನ್ನು ಬಿಟ್ಟುಕೊಟ್ಟು, ವಿಜಯನಗರ ರಾಜ್ಯದಲ್ಲಿ ಸೇರಿಕೊಂಡರು. ಇವರಲ್ಲಿ ಮೂವರು ಮುಖ್ಯಸ್ಥರು; ಪ್ರಧಾನರಾದ ಶ್ಯಾಮಯ್ಯಂಗಾರರು, ವರ್ತಕನಾದ ಶ್ರೀಶೈಲ ಸೆಟ್ಟಿಯು, ಮೂರನೆಯವನು ಚಾಮರಾಜರ ಇನ್ನೊಬ್ಬ ದಾಯಾದನಾದ ನಂಜರಾಜ ಬಹದ್ದರನು.

⋆ ⋆ ⋆ ⋆

ಚೈತ್ರಮಾಸದ ಬಿಸಿಲೇ ಪ್ರಖರವಾದುದು. ಇಳಿಹೊತ್ತಾಗಲು ಬಂದಿದ್ದರೂ ಬಿಸಿಲಿನ ತಾಪವು ಎಷ್ಟು ಮಾತ್ರಕ್ಕೂ ಕಡಿಮೆಯಾಗಿದ್ದಿಲ್ಲ. ಆದ್ದರಿಂದ ಬೀದಿಗಳಲ್ಲಿ ಜನರ ಉಲಿವು ಕಡಿಮೆಯೇ ಇತ್ತು. ಅಂಥ ಸಮಯದಲ್ಲಿ ಮೈಗೆಲ್ಲ ಬೂದಿಯನ್ನು ಬಳಿದುಕೊಂಡ ಒಬ್ಬ ಬೈರಾಗಿಯು 'ಸೂರತ ಸೇ ಕೀರತ್ ಬಡಿ, ಬಿನಾ ಪಂಖ ಉಡಜಾಯ' ಎಂಬ ವಚನವನ್ನು ಹಾಡುತ್ತ ಸಾಗಿದನು. ದೇವರಾಜನೆಂಬ ಘನವಂತನ ಮನೆಯ ಸಮೀಪಕ್ಕೆ ಬರುತ್ತಲೂ ಹಾಡುತ್ತ ಅಲ್ಲಿಯೇ ನಿಂತನು.

ಮೇಘಘರ್ಜನೆಯಾದ ಕೂಡಲೇ ವಿದ್ಯುಲ್ಲತೆಯು ಪ್ರಕಟವಾಗುವಂತೆ, ಈ ಸುಸ್ವರದ ಧ್ವನಿಯನ್ನು ಕೇಳಿದ ಕೂಡಲೇ, ಲಲಿತಾಂಗಿಯಾದ ಯುವತಿಯೊಬ್ಬಳು ದೇವರಾಜನ ಮನೆಯ ಉಪ್ಪರಿಗೆಯ ಕಿಡಿಕಿಯನ್ನು ತೆರೆದು ಉತ್ಕಂಠೆಯಿಂದ ಅತ್ತಿತ್ತ ನೋಡಿದಳು. ಆ ಸ್ವರವು ತನಗೆ ಪರಿಚಿತವಾದುದೇ ಆದರೂ ಆ ಕಾತರಾಕ್ಷಿಗೆ ಹಾಡಿದವನು ಕಾಣಲೊಲ್ಲನು. ಗೇಣುದ್ದ ಗಡ್ಡ, ಹಣೆಯ ಮೇಲೆ ತ್ರಿಪುಂಡ್ರ, ಕೊರಳಲ್ಲಿ ತುಳಸಿಯ ಮಣಿಗಳ ಮಾಲೆ ಇವುಗಳಿಂದ ಯುಕ್ತನಾದ, ಕಾಶಿಯ ಕಡೆಯವನಂತಹ ಬೈರಾಗಿಯೊಬ್ಬನು ಮಾತ್ರ ಎದುರಿನಲ್ಲಿ ನಿಂತಿದ್ದನು. ನನ್ನ ಹೃದಯಾಭಿರಮಣನ ಸ್ವರದಂತೆಯೇ ಈ ಬೈರಾಗಿಯ ಸ್ವರವಿರಬಹುದೆ?' ಎಂದು ಅವಳು ಆಲೋಚಿಸುತ್ತ ತನ್ನ ಹಸ್ತದ ಮೇಲೆ ಗಲ್ಲವನ್ನಿಟ್ಟುಕೊಂಡು ಚಿಂತಾಕುಲೆಯಾದಳು.

ಪ್ರೇಮಪರವಶಳಾದ ಆ ಸುಂದರಾಂಗಿಯನ್ನು ಕಂಡು ಆ ನಮ್ಮ ಬಾವಾಜಿಯ ಮನಸ್ಸು ಚಂಚಲವಾಯಿತು. ಅವನ ಸ್ವರವು ಗಂಟಲಿನಲ್ಲಿಯೆ ಸಿಕ್ಕಿಕೊಂಡಿತು. ಕ್ಷಣಕಾಲವಾದ ಬಳಿಕ ಆ ಬೈರಾಗಿಯು ಕನ್ನಡದಲ್ಲಿ ಬೇರೊಂದು ಪದವನ್ನು ಹಾಡಿದನು. ತನಗೆ ಪರಿಚಿತವಾದ ಈ ಪದವನ್ನು ಕೇಳಿಯಂತೂ ಆ ಲಲನೆಯು ಚಕಿತಳಾಗಿ ನಿಂತಳು. ಅವಳು ಆ ಬೈರಾಗಿಯ ಮುಖವನ್ನೂ ದೇಹವನ್ನೂ ದಿಟ್ಟಿಸಿ ನೋಡಿ, ''ತಿಳಿಯಿತು. ತಿಳಿಯಿತು'' ಎಂದು ಬಾಯಲ್ಲಿ ಹೇಳುತ್ತ ಕೋಲ್ಮಿಂಚಿನ ಚಪಲತೆಯಿಂದ ಧಾವಿಸುತ್ತ ''ನೀಲಾ, ನೀಲಾ'' ಎಂದು ಉಬ್ಬಸದಿಂದ ತನ್ನ ದಾಸಿಯನ್ನು ಕರೆದಳು. ದಾಸಿಯೊ, ನಗುತ್ತ ಬಳಿಯಲ್ಲಿಯೇ ನಿಂತಿದ್ದಾಳೆ.

"ಸುಮ್ಮನೆ ಹಾಗೆ ಪಿಸಿ ಪಿಸಿ ನಗಬೇಡ. ಹೊರಗೆ ಬೀದಿಯಲ್ಲಿ ನಿಂತಿರುವ ಬೈರಾಗಿಯನ್ನು ಜಾಗ್ರತೆಯಾಗಿ ಕರೆದುಕೊಂಡು ಬಾ" ಎಂದು ಸಸುಕೋಪದಿಂದ ಆ ಚಾರುಗಾತ್ರಿಯು ನುಡಿದಳು.

"ಇದಕ್ಕೆ ಇಷ್ಟು ಕೋಪವೇಕೆ? ಕಾಸು ಎರಡು ಕಾಸು ಕೊಡುವದಿದ್ದರೆ ನನ್ನ ಕೈಯಲ್ಲಿ ಕೊಡಿರಿ. ಆ ಬಾವಾಜಿಗೆ ಮುಟ್ಟಿಸುವೆನು" ಎಂದು ಸೆರಗನ್ನು ಹಲ್ಲಿನಲ್ಲಿ ಕಚ್ಚಿ ನೀಲೆಯು ನುಡಿದವಳೆ, ನಗೆ ತಡೆಯದೆ ಗಟ್ಟಿಯಾಗಿ ನಗಲಾರಂಭಿಸಿದಳು.

ಆ ಬಾವಾಜಿಯು ಯಾರೆಂಬುದು ತನ್ನ ದಾಸಿಗೂ ಗೊತ್ತಾಗಿದೆಯೆಂಬುದನ್ನು ಅರಿತ ಆ ಚಾರುಗಾತ್ರಿಯು ತಾನೂ ನಕ್ಕಳು.

"ಅದಿರಲಿ, ನೀಲಾ, ಅವರನ್ನು ಬೇಗನೆ ಕರೆದುಕೊಂಡು ಬಾ, ಬಹಳ ಹೊತ್ತು ಬಿಸಿಲಿನಲ್ಲಿ ನಿಂತಿದ್ದಾರೆ" ಎಂದು ಹೇಳಿದಳು.

ನೀಲೆಯು ಲಗುಬಗೆಯಿಂದ ಸೋಪಾನವನ್ನಿಳಿದವಳೆ ಬೈರಾಗಿಯನ್ನು ಕರೆತಂದು ಒಡತಿಯ ಮುಂದೆ ನಿಲ್ಲಿಸಿದಳು ಮತ್ತು.....

"ಬಾವಾಜೀ, ನಿಮ್ಮ ಜಡೆಯೂ ಗಡ್ಡವೂ ನಮ್ಮನ್ನು ಮೋಸಗೊಳಿಸಲಾರವು. ನಿಮ್ಮ ಸೋಗೆಲ್ಲವೂ ನಮಗೆ ತಿಳಿದುಹೋಗಿದೆ. ಅಮ್ಮಣ್ಣಿಯವರೇ, ನಾನೀಗಲೇ ಈ ಬಾವಾಜಿಗೆ ಮಂತ್ರಹಾಕಿ ನಂಜರಾಜರ ರೂಪವನ್ನು ಕೊಡುತ್ತೇನೆ" ಎಂದು ನೀಲೆಯು ನುಡಿದಳು.

ಆಗ ಬೈರಾಗಿಯು ತಾನಾಗಿಯೇ ತನ್ನ ಕೃತ್ರಿಯ ಜಡೆ, ಗಡ್ಡಗಳನ್ನು ತೆಗದೊಗೆದು, ಉಮೆಯ (ಆ ಸುಂದರಾಂಗಿಯ ಹೆಸರು) ಉತ್ತರೀಯವನ್ನು ಸೆಳೆದುಕೊಂಡು, ಮೈಗೆ ಸುತ್ತಿಕೊಂಡನು. ಉಮೆಯು ನಂಜರಾಜನ ನಿಜರೂಪವನ್ನು ಕಂಡವಳೇ ಪ್ರೇಮದ ಭರದಿಂದ ಅವನನ್ನು ಗಟ್ಟಿಯಾಗಿ ಅಪ್ಪಿಕೊಂಡಳು.

"ಬೈರಾಗಿಗೆ ತೆಕ್ಕಿಬಿದ್ದರೆ ಮೈಯೆಲ್ಲ ಬೂದಿ!" ಎನ್ನುತ್ತ ನೀಲೆಯು ಚಪ್ಪಾಳೆ ತಟ್ಟಿದಳು ಮತ್ತು ಬೈರಾಗಿಗಳ ಸ್ನಾನದ ಸಿದ್ಧತೆ ಮಾಡುವ ನಿಮಿತ್ತದಿಂದ ನೀಲೆಯು ಹೊರಟು ಹೋದಳು.

ಉಮೆಯು ತನ್ನ ಪ್ರಾಣಕಾಂತನ ಬಾಹುಪಾಶಗಳಿಂದ ಮುಕ್ತಳಾಗಲು ಯತ್ನ ಮಾಡದಲೆ, "ಬೈರಾಗಿಯ ವೇಷವನ್ನು ತೊಡುವಂತಹ ಪ್ರಸಂಗವೇನು?" ಎಂದು ಕೇಳಿದಳು.

"ಉಮಾ, ಮಾರನಾಯಕನು ನಮ್ಮ ಪಕ್ಷದವರನ್ನು ಬಲು ಪರಿಯಿಂದ ಬಾಧಿಸುತ್ತಿರುವನು. ಅವನ ಪಾಳತಿಗಾರರು ಎರಡು ತಿಂಗಳು ಅಖಂಡವಾಗಿ ನನ್ನ ಬೆನ್ನು ಬಿಟ್ಟಿದ್ದೇ ಇಲ್ಲ. ನಿತ್ಯದಲ್ಲಿಯೂ ಹೊಸ ಹೊಸ ವೇಷ ತೊಡುತ್ತ ನಿನ್ನ ದರ್ಶನಕ್ಕಾಗಿ ಇಂದು ಸಾಹಸಮಾಡಿ ಬಂದೆನು."

"ಅಂತೂ ಈ ಕಾರಣದಿಂದ ನನಗೆ ನಿಮ್ಮ ದರ್ಶನವು ಅಪರೂಪವಾಯಿತೇನು?"

ನಂಜರಾಜನು, "ಪ್ರಿಯೆ, ಉಮೆಯ ಪತಿಯಾಗತಕ್ಕವನು ಮೊದಲು ಮಾರನನ್ನು ಸುಟ್ಟುಹಾಕಬೇಕಲ್ಲವೆ? ನನಗೀಗ ಅಪ್ಪಣೆಯನ್ನು ಕೊಡು. ಊರಲ್ಲಿ ಇನ್ನು ಹಲವರನ್ನು ಕಾಣಬೇಕಾಗಿದೆ."

''ಹೋಗುವಿರಂತೆ ತಡೆಯಿರಿ. ನೀಲೆಯು ಈಗಲೇ ಭೋಜನವನ್ನು ಸಿದ್ಧಪಡಿಸುವಳು,'' ಎಂದು ಉಮೆಯು ದೈನ್ಯದಿಂದ ಹೇಳಿದಳು.

''ಆಗಲಿ. ದೇವಕೀದೇವಿಯ ವರ್ತಮಾನವೇನು?''

''ಅವರದೇನು ವರ್ತಮಾನ? ತನ್ನನ್ನು ಮದುವೆಯಾಗೆಂದು ಮಾರ ನಾಯಕನು ಅವರ ಬೆನ್ನುಗೊಂಡಿರುವನು. ಮಹಾರಾಣಿಯವರು ಆ ಮಾತಿಗೆ ಸಮ್ಮತಿಪಡುವದಿಲ್ಲ.''

''ಆ ನೀಚನು ಹೀಗ ಮಾತನಾಡುವನೆ? ಇದಕ್ಕೆ ಶಾಂತನ ಒಪ್ಪಿಗೆ ಇದ್ದೀತಲ್ಲವೇ?''

''ಮಾರನಾಯಕನು ಶಾಂತರಾಜನಿಗೆ ಮೈಸೂರಿನ ಅರ್ಧ ರಾಜ್ಯವನ್ನು ಕೊಡಲೊಪ್ಪಿದರೆ, ಅವನು ದೇವಾಜಿಯನ್ನು ಮಾರನಾಯಕನಿಗೆ ಮದುವೆ ಮಾಡಿಸಿಕೊಡುವನಂತೆ.''

''ಹೀಗೋ? ಮಾರನು ಅವನಿಗ, ಮೈಸೂರು ರಾಜ್ಯದ ಒಂದಂಗುಲನ್ನೂ ಕೊಡಲಿಚ್ಛಿಸುವದಿಲ್ಲ.''

''ಇನ್ನೊಂದು ಸುದ್ದಿಯನ್ನು ಕೇಳಿದ್ದೀರಾ? ಚತರ ಗ್ರಾಮದ ಪಾಳೆಯಗಾರನಾದ ಭದ್ರನಾಯಕನನ್ನು ಹಬ್ಬದ ನೆವ ಮಾಡಿ ಕರೆಯಿಸಿಕೊಂಡು ಮಾರನಾಯಕನು ಅವನನ್ನು ಸೆರೆಯಲ್ಲಿರಿಸಿದ್ದಾನಂತೆ.''

''ಹೌದು, ಕೇಳಿದ್ದೇನೆ. ಭದ್ರನಾಯಕನು ಮಹಾ ಪರಾಕ್ರಮಿ. ಮೇಲಾಗಿ ಮಾರನಾಯಕನಿಗ ಸೋದರಮಾವನಾಗಬೇಕು. ಚಾಮರಾಜರ ವಿರುದ್ಧ ಬಂಡೇಳುವಾಗ, ಮಾರನು ಅವನ ಸಹಾಯವನ್ನು ಕೇಳಿದ್ದಕ್ಕೆ, 'ಮಾರಾ, ಇನ್ನೊಮ್ಮೆ ಈ ಸುದ್ದಿಯನ್ನು ತೆಗೆದದ್ದಾದರೆ ನಿನ್ನ ನಾಲಿಗೆಯನ್ನು ಕಿತ್ತುಹಾಕುವೆನು' ಎಂದು ಗದ್ದರಿಸಿದನಂತೆ. ಅವನ ಮೇಲೆ ಮಾರನಾಯಕನು ಈ ರೀತಿಯಾಗಿ ಸೇಡುತೀರಿಸಿಕೊಂಡನಲ್ಲವೆ? ಭದ್ರನಾಯಕನ ಮಗ ವೆಂಕಟನು, ಮಾರನಾಯಕನ ಮೇಲೆ ಕತ್ತಿ ಮಸೆಯುತ್ತಿದ್ದಾನಂತೆ. ಅವನನ್ನು ನಮ್ಮ ಪಕ್ಷಕ್ಕೆ ಕರೆದುಕೊಳ್ಳುವವರಿದ್ದೇವೆ.''

ಅವರಿಬ್ಬರೂ ಹೀಗೆ ಮಾತಿನಲ್ಲಿ ತೊಡಗಿದ್ದಾಗ ನೀಲೆಯು ಭೋಜನದ ಪಾತ್ರವನ್ನು ಸಿದ್ಧಮಾಡಿ ತಂದಿರಿಸಿದಳು. ಭೋಜನವಾದ ಬಳಿಕ ಉಮೆಯು ಮಾಡಿಕೊಟ್ಟ ತಾಂಬೂಲವನ್ನು ಸೇವಿಸಿ, ನಂಜರಾಜನು ಹೊರಡಲನುವಾದನು. 'ಹೋಗಿ ಬರ್ರಿ!' ಎಂದು ಹೇಳಲಿಕ್ಕೆ ಉಮೆಯ ಬಾಯಿಂದ ಶಬ್ದಗಳೇ ಹೊರಡಲೊಲ್ಲವು. ಆದರೂ ಸಾವರಿಸಿಕೊಂಡು, ''ಸಣ್ಣಸಣ್ಣ ಮಾತುಗಳಿಗಾಗಿ ಜೀವಕ್ಕೆ ಗಂಡಾಂತರವನ್ನು ತಂದುಕೊಳ್ಳಬೇಡಿರಿ. ನೀವು ಸಾಹಸ ಕಾರ್ಯದಲ್ಲಿ ತೊಡಗಿರುವುದು ನನ್ನ ಚಿಂತೆಗೆ ಕಾರಣವಾದರೂ ಸ್ವಾಮಿಕಾರ್ಯವು ನನ್ನ ಸುಖಕ್ಕಿಂತಲೂ ಹೆಚ್ಚಿನದು. ಅನುಕೂಲವಿದ್ದಾಗ ಕ್ಷೇಮಸಮಾಚಾರವನ್ನು ತಿಳಿಸುತ್ತ ಇರಬೇಕು. ಇಷ್ಟೇ ನಾನು ಬೇಡಿಕೊಳ್ಳುವುದು'' ಎಂದಳು.

ಭವ್ಯವಾದ ಕುದುರೆಗಳನ್ನೇರಿಕೊಂಡು ಇಬ್ಬರು ತರುಣರು ಶ್ರಾವಣ ಪೌರ್ಣಿಮೆಯ ದಿವಸ, ಮೈಸೂರಿನ ಸಮೀಪದಲ್ಲಿದ್ದ ಕಾಡಿನೊಳಗಿಂದ ದಕ್ಷಿಣಾಭಿಮುಖವಾಗಿ ನಡೆದಿದ್ದರು. ಇವರಲ್ಲಿ ಹಿರಿಯನಾದವನು ಸಾದಗಪ್ಪಿನ ಬಣ್ಣದವನಾಗಿದ್ದರೂ ಅವನ ವಿಶಾಲವಾದ

ಹಣೆಯನ್ನೂ, ನೀಲೋತ್ಪಲಗಳಂತೆ ಒಪ್ಪುವ ಅವನ ಕಣ್ಣುಗಳನ್ನೂ, ರಕ್ತಿಮೆಯಿಂದೊಪ್ಪುವ ಅವನ ತುಟಿಗಳನ್ನೂ ನಿಡಿದಾದ ಮೂಗನ್ನೂ ಕಂಡಾಗ ಇವನೇನು ವಿಲಾಸಿನಿಯರ ಇಷ್ಟ ಮೂರ್ತಿಯೊ, ಎಂಬಂತೆ ಕಾಣುತ್ತಿದ್ದನು. ಅವನ ತೇಜಃಪುಂಜವಾದ ಮುಖಕ್ಕೆ ಅಧಿಕವಾದ ಶೋಭೆಯನ್ನು ಕೊಡುವ ದಟ್ಟವಾದ ಕಿರಿಮೀಸೆಗಳು ಭ್ರಮರದ ರೆಕ್ಕೆಗಳಂತೆ ಕರ್‍ರಗೆ ನುಣುಪಾಗಿ ಹೊಳೆಯುತ್ತಿದ್ದವು. ಅವನ ಉನ್ನತವಾದ ದೇಹವನ್ನೂ, ಕಣ್ಣುಗಳಲ್ಲಿ ಉಕ್ಕುತ್ತಿರುವ ಪ್ರಭೆಯನ್ನೂ, ಕುದುರೆಯ ಮೇಲೆ ಕೂಡುವ "ಸೆಟೆ"ಯನ್ನೂ ನೋಡಿ ಇವನೊಡನೆ ಅವಿನೀತರಾಗಿ ವರ್ತಿಸುವುದು ಸರ್ವಥಾ ಕ್ಷೇಮಕರವಾದುದಲ್ಲವೆಂದು ತಿಳಿದು ಉನ್ಮತ್ತರು ಅಂಜಿ ದೂರ ಹಾಯಬಹುದಾಗಿತ್ತು. ಇನ್ನೊಬ್ಬನು ಚಿಕ್ಕವನು; ದೃಢಾಂಗನೂ ಸತ್ತ್ವಶಾಲಿಯೂ ಆಗಿ ಕಾಣುತ್ತಿದ್ದನು. ಇವನು ಗೌರವರ್ಣದವನಾಗಿದ್ದನು. ಸೊಬಗಿನಿಂದ ತುಂಬಿದ ಮುಖವು ಅವನ ಶಾಂತಗುಣವನ್ನು ವ್ಯಕ್ತಗೊಳಿಸುತ್ತಿದ್ದಿತು. ಕೆಣಕಿ ಜಗಳವನ್ನು ತೆಗೆಯದಿದ್ದರೂ ಹತ್ತೆಂಟು ಜಟ್ಟಿಗಳನ್ನು ನಿರಾಯಾಸವಾಗಿ ಎದುರಿಸಬಲ್ಲವನೆಂದು ಇವನನ್ನು ನೋಡಿದಾಕ್ಷಣ ಹೇಳಬಹುದಾಗಿತ್ತು.

ಆಗ ಹಿರಿಯವನು ಕೇಳಿದನು, "ಕೃಷ್ಣರಾಜಾ, ಯಾವ ಊರದು? ನಿನ್ನೆ ರಾತ್ರಿ ಅಲ್ಲಿ ನಮಗೆ ಇಳಿದುಕೊಳ್ಳಲಿಕ್ಕೆ ಹಾಳುದೇಗುಲದ ಹೊರತಾಗಿ ಮತ್ತೊಂದು ಸ್ಥಳವೇ ದೊರೆಯಲಿಲ್ಲ. ಆ ಗ್ರಾಮವು ನಮ್ಮ ವಂಶದವರಾದ ದ್ವಾರಸಮುದ್ರದ ಬಲ್ಲಾಳರ ರಾಜ್ಯಕ್ಕೆ ಸೇರಿದ್ದಲ್ಲವೇ? ಆ ರಾಜ್ಯವು ಹಾಳಾಗಿ ಹೋದುದು ನೆನಪಿಗೆ ಬಂದರೆ ಅದಾವ ಯದುವಂಶಸಂಭವನ ಎದೆ ಕುದಿಯಲಿಕ್ಕಿಲ್ಲ? ಇಲ್ಲಿ ದ್ವಾರಸಮುದ್ರದ ರಾಜ್ಯವು ಹೆಸರಿಲ್ಲದೆ ಹೋಯಿತು. ಮೇಲೆ ದೇವಗಿರಿಯ ರಾಜ್ಯವೂ ಬಲು ಕೆಟ್ಟರೀತಿಯಿಂದ ಮುರಿದು ಹೋಯಿತು. ಶ್ರೀಕೃಷ್ಣನ ವಂಶಜರ ಅವಸ್ಥೆ ಹೀಗಾಗಬೇಕೆ?"

"ಅಣ್ಣಾ, ನಾವೂ ದೇವಗಿರಿಯವರೂ ದ್ವಾರಸಮುದ್ರದವರೂ ಎಲ್ಲರೂ ಯಾದವರೇ. ಆತ್ಮಕಲಹಗಳಿಂದಲೇ ಇವೆರಡೂ ರಾಜ್ಯಗಳು ಹಾಳಾದುವಲ್ಲದೆ, ಅವರಲ್ಲಿ ಒಕ್ಕಟ್ಟಿದ್ದಿದ್ದರೆ ಮುಸಲ್ಮಾನರು ಏನು ಮಾಡುವ ಹಾಗಿದ್ದರು?"

ಹೀಗೆ ಅವರು ಮಾತನಾಡುತ್ತ ಚಾಮುಂಡಿಯ ಬೆಟ್ಟವನ್ನು ಸಮೀಪಿಸಿದರು. ಚಾಮುಂಡಿಯ ದೇವಾಲಯದಲ್ಲಿ ಈ ತೇಜಸ್ವೀ ತರುಣರು ಬಂದುದನ್ನು ಕಂಡು, ವ್ಯವಸ್ಥಾಪಕರು ಆದರದಿಂದ ಸ್ವಾಗತ ಮಾಡಿದರು. ದೇವರ ದರ್ಶನವನ್ನು ಮಾಡಿಕೊಂಡು ಈರ್ವರೂ ಸಭಾಮಂಟಪಕ್ಕೆ ಆಗಮಿಸಿದಾಗ, ಅಲ್ಲಿ ಒಬ್ಬ ಬ್ರಹ್ಮಚಾರಿಯು ಭಗವದ್ಗೀತೆಯ ಪಾರಾಯಣವನ್ನು ಮಾಡುತ್ತಿದ್ದನು. ಇವರನ್ನು ಕಂಡೊಡನೆ, ಕುಳಿತುಕೊಳ್ಳಲು ಸಂಜ್ಞೆ ಮಾಡಿ, "ನೀವು ಯಾರು? ಎಲ್ಲಿಂದ ಬಂದಿರಿ?" ಎಂಬುದಾಗಿ ಕೇಳಿದನು. ಯದುರಾಜನ ಬಾಯಿಂದ ಅವರ ಪೂರ್ವವೃತ್ತಾಂತವನ್ನು ಕೇಳಿಕೊಂಡಂತೆ ಮಾಡಿ, "ಇಲ್ಲಿಯೇ ತುಸು ದೂರದಲ್ಲಿ ನಮ್ಮ ಆಶ್ರಮವಿದೆ. ನಿಮ್ಮೊಂದಿಗೆ ಒಂದಿಷ್ಟು ಆಲೋಚನೆ ಮಾಡುವದಿದೆ, ಬರುತ್ತೀರಾ?" ಎಂದು ಕೇಳಿದನು.

ಭೋಜನೋತ್ತರದಲ್ಲಿ ಆ ಅಣ್ಣ-ತಮ್ಮಂದಿರು ಕುದುರೆಗಳನ್ನೇರಿ, ಬ್ರಹ್ಮಚಾರಿಯ ಸಂಗಡ ನಡೆದರು. ಮಾರ್ಗವನ್ನು ತೋರಿಸುವದಕ್ಕಾಗಿ ಬ್ರಹ್ಮಚಾರಿಯು ಮುಂದೆ ಮುಂದೆ ನಡೆದನು.

ಬಳಿಕ ಅವರು ಸುತ್ತಲಿನ ಅರಣ್ಯದ ಶೋಭೆಯನ್ನು ನೋಡುತ್ತ ಕಷ್ಟದಿಂದ ಮಾರ್ಗ ಕ್ರಮಣವನ್ನು ಮಾಡಿ, ಒಂದು ಬೆಟ್ಟದ ಅಡಿಯಲ್ಲಿ ನಿಂತುಕೊಂಡರು. ಆಗ ಬ್ರಹ್ಮಚಾರಿಯು "ಆರಮೊಗಾ ಆರಮೊಗಾ" ಎಂದು ಮೆಲ್ಲಗೆ ಕೂಗಿದನು. ಕೂಡಲೇ ಗಿಡಗಂಟಿಗಳನ್ನು ಓರಮಾಡಿ, ಅವುಗಳ ಹಿಂದೆ ಮರೆಯಾಗಿದ್ದ ಒಂದು ಗುಹಾಮುಖದಿಂದ ಆರಮೊಗನು ಹೊರಬಿದ್ದು ಬಂದನು.

ಆ ಆರಮೊಗನಿಗೆ ಒಂದೇ ಮೊಗವಿದ್ದರೂ ಅದೊಂದೇ ಆರು ಮೊಗಗಳಿಗೆ ಸರಿಯಾಗಿತ್ತು. ಹಂಪೆಯ ಉದ್ದವಾದ ವೀರಭದ್ರನಿಗಿಂತಲೂ ಇವನು ಎತ್ತರವಾಗಿ ಕಂಡನು. ಸಾಲಿಗ್ರಾಮದಂತೆ ಮಿರಿಮಿರಿ ಮಿಂಚುವ ಅವನ ಕಪ್ಪು ಬಣ್ಣವೂ, ಅವನ ಗುಳ್ಳೆ ಗಣ್ಣುಗಳೂ, ಅತಿ ಭವ್ಯವಾದ ಆಕೃತಿಯೂ ಅವನು ಹಿಡಿಂಬಾ ಮಾತೆಯ ಜ್ಯೇಷ್ಠ ಪುತ್ರನೇ ಎಂದು ಹೇಳುತ್ತಿದ್ದವು. ಬ್ರಹ್ಮಚಾರಿಯ ಅಪ್ಪಣೆಯ ಮೇರೆಗೆ ಆರಮೊಗನು ಕುದುರೆಗಳನ್ನು ಗಿಡಗಳ ಮರೆಯಲ್ಲಿ ಕಟ್ಟಿದ ಬಳಿಕ ನಾಲ್ವರೂ ಗುಹೆಯೊಳಗೆ ಪ್ರವೇಶಿಸಿದರು. ಆರಮೊಗನು ಹಾರೆಯನ್ನು ತೆಗೆದುಕೊಂಡು, ಪ್ರಚಂಡವಾದ ಒಂದು ಬಂಡೆಯನ್ನು ಮೀಟಿ ಸರಿಸಿದನು. ಇವರು ಒಳಗೆ ಹೋದ ಕೂಡಲೇ, ಆರಮೊಗನು ಹೊರಗೇ ಉಳಿದು, ಅದನ್ನು ಮತ್ತೆ ಮೊದಲಿನ ಜಾಗಕ್ಕೆ ಕೂಡ್ರಿಸಿದನು.

ಒಳಗೆ ಬಂದ ತರುಣರು ಒಂದು ಪ್ರಶಸ್ತವಾದ ನಡುಮನೆಯನ್ನು ಕಂಡರು. ಆ ಸ್ಥಳದಲ್ಲಿ ೪೦-೫೦ ಜನ ಬಂಟರು ತಮಗೆ ಬೇಕುಬೇಕಾದ ಹಾಗೆ ಕುಳಿತುಕೊಂಡಿದ್ದರು. ಕೆಲವರು ಶಸ್ತ್ರಗಳಿಗೆ ಸಿಕಲಿಯನ್ನು ಮಾಡುತ್ತಿದ್ದರು. ಕೆಲವರು ನಿಡಿದಾದ ಕೋಲುಗಳಿಗೆ ಬರ್ಚಿಯ ಮೊನೆಗಳನ್ನು ಜೋಡಿಸುತ್ತಿದ್ದರು. ಕೆಲವರು ಕತ್ತಿಗಳನ್ನು ತಿರುವುತ್ತಿದ್ದರು. ಬ್ರಹ್ಮಚಾರಿಯನ್ನೂ ಸಂಗಡ ಬಂದ ಆಗಂತುಕರನ್ನೂ ಕಂಡೊಡನೆ, ಅವರು ಮರ್ಯಾದೆಯಿಂದ ಎದ್ದು ನಿಂತು ಪ್ರಣಾಮ ಮಾಡಿದರು.

ಬಳಿಕ ಆ ಮೂವರೂ ಒಳಗಿನ ಮನೆಯಲ್ಲಿ ಹೊಕ್ಕರು. ಅಲ್ಲಿ ಏಳೆಂಟು ಜನ ಮಹನೀಯರು ರನ್ನಗಂಬಳಿಯ ಮೇಲೆ ಕುಳಿತು ಆಲೋಚನೆಯಲ್ಲಿ ತೊಡಗಿದ್ದರು. ಮಧ್ಯದಲ್ಲಿ ಕುಳಿತ ತೇಜಸ್ವಿಯಾದ ಮುದುಕನೊಬ್ಬನು ಸ್ಪಷ್ಟವಾದ ವಾಣಿಯಿಂದ ಏನನ್ನೋ ಹೇಳುತ್ತಿದ್ದನು. ಅವನನ್ನು ಕುರಿತು ಬ್ರಹ್ಮಚಾರಿಯು,

"ಶ್ಯಾಮಯ್ಯಂಗಾರರೇ, ಈ ಮಹಾತ್ಮರೀರ್ವರೂ ಯದುವಂಶಸಂಭವರಾದ ವೀರರು. ಇವರು ಯದುರಾಜರು, ಇವರು ತಮ್ಮಂದಿರಾದ ಕೃಷ್ಣ ರಾಜರು" ಎಂದು ಗುರುತು ಮಾಡಿಕೊಟ್ಟನು.

"ಈ ಪುರುಷಸಿಂಹರ ಹೆಸರನ್ನು ನಾನು ಕೇಳಿ ಬಲ್ಲೆನು. ವಿಜಯನಗರದ ಮಹಾವೀರರಲ್ಲಿ ಯದುರಾಜರು ಅಗ್ರೇಸರರೆಂದು ನಾನು ಹರಿಹರರಾಜರ

ಮುಖದಿಂದಲೇ ಕೇಳಿದ್ದೇನೆ'' ಎಂದು ಶ್ಯಾಮಯ್ಯಂಗಾರರು ಇಬ್ಬರನ್ನೂ ಆದರದಿಂದ ಬರಮಾಡಿಕೊಂಡು ಮುಂದುವರಿಸಿದರು.

''ಯದುರಾಜ, ಚಾಮರಾಜರಿಗೆ ಉಂಟಾದ ಅನರ್ಥವನ್ನು ನೀವು ಕೇಳಿಯೇ ಇದ್ದೀರಿ. ನಾವೆಲ್ಲ ರಾಜಪಕ್ಷದ ಮುಖ್ಯಸ್ಥರು. ಮಾರನಾಯಕನ ಪಾರುಪತ್ಯವನ್ನು ಹೇಗೆ ಮಾಡಬೇಕೆಂದು ತಿಳಿಯದೇ ಹೀಗೆ ಹುದುಗಿಕೊಂಡು ಕುಳಿತಿದ್ದೇವೆ ನೋಡಿರಿ!''

ಆಗ ಯದುರಾಜನು—''ನೀವು ಹೀಗೆ ಅಂಜಿ ಕುಳಿತರ ಲೋಕದ ಜನರು ನಿಮಗೆ ಅಪವಾದವನ್ನು ಕೊಡಲಿಕ್ಕಿಲ್ಲವೆ?'' ಎಂದು ಗಟ್ಟಿಸಿ ಕೇಳಿದನು.

ಆಗ ಬ್ರಹ್ಮಚಾರಿಯು—''ಯದುರಾಜರೇ, ನೀವು ಸರಿಯಾದದ್ದನ್ನೇ ಹೇಳಿದಿರಿ'' ಎಂದು ನುಡಿದವನೇ ತಾನು ಹೊದ್ದುಕೊಂಡಿದ್ದ ಶಾಟಿಯಿಂದ ತನ್ನ ಮೋರೆಯ ಬೂದಿಯನ್ನು ಅಳಿಸಿಕೊಂಡು, ಆ ಶಾಟಿಯನ್ನು ಚೆಲ್ಲಿ ನಿಂತನು. ಯದುರಾಜನು ಅವನನ್ನು ದಿಟ್ಟಿಸಿ ನೋಡುತ್ತ ''ನಂಜರಾಜ!'' ಎಂದು ಆಶ್ಚರ್ಯದಿಂದ ಉದ್ಗಾರ ತೆಗೆದನು. ಆಗ ನಂಜರಾಜನು ಯದುರಾಜನ ಕೈಯನ್ನು ವಿಶ್ವಾಸದಿಂದ ಹಿಡಿದುಕೊಂಡು—

''ವೀರ ಶಿರೋಮಣಿಯೆ, ನಾನು ನಂಜರಾಜನು ಅಹುದು. ಈ ರಾಜ್ಯಕ್ಕೆ ಬಂದ ದುಃಸ್ಥಿತಿಯನ್ನು ದೂರಮಾಡಲು ಅರಿಯದ ಅಧಮನಾದ ನಾನು ನಿಮ್ಮ ಸಮ್ಮುಖದಲ್ಲಿ ನಿಂದಿರಲು ಕೂಡ ಯೋಗ್ಯನಲ್ಲ'' ಎಂದು ವ್ಯಸನದಿಂದ ಕೆಳಮೋರೆಯನ್ನು ಮಾಡಿಕೊಂಡು ನಿಂತನು.

''ನಂಜರಾಜ, ನೀವು ಅಧಮರಲ್ಲ; ಹೇಡಿಗಳೂ ಅಲ್ಲ. ವಿಜಯನಗರದಲ್ಲಿ ನಾವು ನೀವೂ ಕೂಡಿಯೆ ಯುದ್ಧ ಕಲೆಯನ್ನು ಕಲಿತವರು. ನಿಮ್ಮ ಪರಾಕ್ರಮವನ್ನು ನಾನು ಅರಿಯೆನೆ?'' ಎಂದು ಯದುರಾಜನು ಸಮಾಧಾನ ಮಾಡಿದನು.

ರಾಜಪಕ್ಷದ ಇನ್ನೊಬ್ಬ ಮುಖ್ಯಸ್ಥನಾದ ಬಂಕನಕರ ವಾಸುದೇವಯ್ಯನು ''ಯದುರಾಜರೇ, ನೀವು ನಮ್ಮ ಪಕ್ಷವನ್ನು ಸೇರಿಕೊಂಡು, ಸಹಾಯ ಮಾಡಬೇಕೆಂದು ನಾವೆಲ್ಲರೂ ಪ್ರಾರ್ಥಿಸುತ್ತೇವೆ'' ಎಂದು ನುಡಿದನು.

''ಅಗತ್ಯವಾಗಿ. ನನ್ನ ಮನಸ್ಸಿನಲ್ಲಿಯೂ ಒಂದಾವೃತ್ತಿ ಮಾರನಾಯಕನೊಡನೆ ಯುದ್ಧ ಮಾಡುವ ಕುತೂಹಲವು ನೆಲೆಗೊಂಡಿದೆ'' ಎಂದನು. ಹೀಗೆ ಆ ತರುಣ ವೀರರು ತಮ್ಮೊಡನೆ ಸೇರಿದ ಉತ್ಸಾಹದಲ್ಲಿ ''ಜಯ್ ಬಲಭೀಮ'' ಎಂದು ಕೂಗಿ ಕುಣಿದಾಡಿದರು.

☆ ☆ ☆ ☆

ಆನೆಗೊಂದಿಯ ಶ್ರೀ ಚಿದಾನಂದ ಸ್ವಾಮಿಗಳವರು ದಿಗ್ವಿಜಯಾರ್ಥವಾಗಿ ಹೊರಟು ಮೈಸೂರಲ್ಲಿ ಬಂದು ಇಳಿದುಕೊಂಡರು. ವಿಜಯನಗರದ ರಾಜನಿಗೆ ಈ ಸ್ವಾಮಿಗಳವರಲ್ಲಿ ವಿಶ್ವಾಸ ಬಹಳ. ಅವರ ಅನುಕೂಲತೆಗಾಗಿ ವಿಜಯನಗರ ಸೈನ್ಯದ ಚಿಕ್ಕ ಪಥಕವೂ, ಇಬ್ಬರು ಅಧಿಕಾರಿಗಳೂ ಸ್ವಾಮಿಗಳ ಸಂಗಡ ಬಂದಿದ್ದರು. ಹೀಗೆ ವೈಭವಯುತವಾದ ಅವರ ಆಗಮನಕ್ಕೆ ಮೈಸೂರಲ್ಲಿ ವಿಶೇಷ ಸನ್ಮಾನವಾದುದು ಏನಾಶ್ಚರ್ಯ!

ಆ ದಿವಸ ಮಾರನಾಯಕನು ಸ್ವಾಮಿಗಳವರ ಮಠದಲ್ಲಿಯೇ ಆತಿಥ್ಯವನ್ನು ಮಾಡಿಸಿದನು. ಮರುದಿವಸ ಪೂಜೆಯು ಅರಮನೆಯಲ್ಲಿ ಜಗತಕ್ಕದೆಂದು ಸ್ವಾಮಿಗಳು ಅಪ್ಪಣೆಗೆಯ್ದ ಮೇರೆಗೆ ನಾಯಕನು ನಿರ್ವಾಹವಿಲ್ಲದೆ ಒಪ್ಪಿಕೊಂಡು, ವ್ಯವಸ್ಥೆಯನ್ನು ಇಡಿಸಿದನು.

ಪೂಜೆಯಾಗಿ ತೀರ್ಥಪ್ರಸಾದಗಳಾದ ಬಳಿಕ, ಹೊರಗಿನ ಎಲ್ಲ ಜನರೂ ಹೊರಟುಹೋದರು. ರಾಣಿಯವರೂ ದೇವಕೀದೇವಿಯೂ ಸ್ವಾಮಿಗಳ ಶಿಷ್ಯನೊಬ್ಬನ ಕರೆಯ ಮೇರೆಗೆ ದೇವದರ್ಶನಕ್ಕೆಂದು ಮತ್ತೊಮ್ಮೆ ಬಂದರು.

ಆಗ ಸ್ವಾಮಿಗಳ ಸನ್ನಿಧಾನದಲ್ಲಿ ಬಹಳ ಜನರು ಇದ್ದಿಲ್ಲ. ನಾಲ್ಕೂ ಜನ ಪರಿಚಾರಕರು ಪೂಜೆಯ ಉಪಕರಣಗಳನ್ನು ಕಟ್ಟಿ, ಪೆಟ್ಟಿಗೆಗಳಿಗೆ ಹಾಕುತ್ತಿದ್ದರು. ರೂಪಸಂಪನ್ನರಾದ ತರುಣರಿರ್ವರು ಸ್ವಾಮಿಗಳಿಗೆ ಚೌರಿಗಳನ್ನು ಬೀಸುತ್ತ ನಿಂತಿದ್ದರು. ಅವರಲ್ಲಿ ಶ್ಯಾಮಸುಂದರ ನಾದವನೊಬ್ಬನು, ಜರತಾರಿಯ ಅರಿಶಿಣ ಬಣ್ಣದ ಮಡಿಯನ್ನು ಉಟ್ಟುಕೊಂಡು, ಕಲಾಬತ್ತಿನ ಕೆಂಪು ಶಾಲನ್ನು ಮೈಮೇಲೆ ಹೊದ್ದುಕೊಂಡಿದ್ದನು. ಅವನ ಬಂಧುರವಾದ ದೇಹವೂ ಸೊಬಗಿನ ನಿಲುವಿಕೆಯೂ ಉಕ್ಕುವ ತಾರುಣ್ಯವೂ ನೋಡುವವರ ಅಭಿಲಾಷೆಯನ್ನು ಹೆಚ್ಚಿಸುತ್ತಿದ್ದವು. ಮತ್ತೊಬ್ಬ ಸತ್ವಶಾಲಿಯು ನೀಲಾಂಬರವನ್ನು ಉಟ್ಟುಕೊಂಡು ವಿನಯಭೂಷಣನಾಗಿ ನಿಂತಿದ್ದನು. ರಾಮಲಕ್ಷ್ಮಣರಂತೆ ಕಾಣುವ ಈ ತರುಣರು ಆರಿರಬಹುದೆಂದು ರಾಣಿಯವರು ವಿಚಾರಗೊಂಡರು. ದೇವಕೀ ದೇವಿಯು ಆ ಹಿರಿಯ ತರುಣನ ದಿವ್ಯಾಂಗವನ್ನು ಕಂಡು ಚಕಿತಳಾದಳು. ಅವಳ ಮೈಯಲ್ಲಿ ಅನಂಗನ ಸಂಚಾರವಾದಂತಾಗಿ, ವ್ಯಗ್ರಳಾದಳು. ಮೈಯೆಲ್ಲ ಜೋರೆಂದು ಬೆವರಿತು. ಅವಳ ಮುಖದ ಮೇಲೆ ನಿಂತ ಬೆವರ್ಹನಿಗಳ ಸಂತತಿಯು, ಮುತ್ತಿನ ಎಳೆಗಳಿಂದ ಮಾಡಿದ ಮುಖಾವರಣದಂತೆ ಕಂಗೊಳಿಸಿತು.

''ದೇವರ ಮೂರ್ತಿಗಳು ಎಷ್ಟು ಪ್ರಸನ್ನವಾಗಿ ಕಾಣುತ್ತಿವೆ, ನೋಡಿದೆಯಾ, ದೇವಾಜಿ?'' ಎಂದು ರಾಣಿಯವರು ಹೇಳಿದಾಗ, ಆ ಮಾತು ದೇವಕಿಗೆ ಕೇಳಿಬರಲಿಲ್ಲ. ಆಕೆಯ ದೃಷ್ಟಿಯು ಸಚೇತನವಾದ ಮೂರ್ತಿಯಲ್ಲಿ ದೃಢವಾಗಿ ನೆಲಸಿರಲು, ಜಡಮೂರ್ತಿಗಳದೇನು ಲೆಕ್ಕ!

ಇತ್ತ ಸ್ವಾಮಿಗಳು ಫಲಮಂತ್ರಾಕ್ಷತೆ, ಕುಂಕುಮಾದಿಗಳನ್ನು ಅವರಿಬ್ಬರಿಗೂ ಕೊಟ್ಟರು. ಇಬ್ಬರೂ ಸ್ವಾಮಿಗಳವರಿಗ ನಮಸ್ಕಾರ ಮಾಡಬೇಕೆನ್ನುವಷ್ಟರಲ್ಲಿಯೆ ಸ್ವಾಮಿಗಳೇ ರಾಜಮಾತೆಯ ಪಾದಗಳ ಮೇಲೆ ತಮ್ಮ ತಲೆಯನ್ನಿಡಬೇಕೆ? ಮೇಲಕ್ಕೇಳುತ್ತ ಆ ಕೃತ್ರಿಮ ಸ್ವಾಮಿಯು, ''ಮಹಾದೇವಿಯವರೇ, ನಾನು ಬಂಕನಕೆರೆಯ ವಾಸುದೇವಯ್ಯ'' ಎಂದನು.

ಆಗ ಬಳಿಯಲ್ಲಿದ್ದ ಶಿಷ್ಯನೂ ಅವರಿಗೆ ಪಾದಮುಟ್ಟಿ ನಮಸ್ಕರಿಸಿ ''ನಾನು ಮತ್ತಾರೂ ಅಲ್ಲ, ನಂಜರಾಜನು. ತಮ್ಮನ್ನೂ ಆ ದೇವಾಜಿಯನ್ನೂ ಕಾಣಬೇಕೆಂದು ನಾವೆಲ್ಲರೂ ಇದೊಂದು ಸೋಗನ್ನು ಹಾಕಿಕೊಂಡು ಇಲ್ಲಿಗೆ ಬಂದೆವು. ಮಾವುತರೂ, ಬೋಯಿಗಳೂ, ವೈದಿಕರೂ, ಆಚಾರ್ಯರೂ ಎಲ್ಲರೂ ನಮ್ಮವರೇ'' ಎಂದನು.

''ಅಪ್ಪಗಳಿರಾ, ನಮ್ಮ ದರ್ಶನದ ಅಗತ್ಯವಾದರೂ ಏನಿದೆ? ನಾವು ಸತ್ತರೂ ಒಂದೇ ಬದುಕಿದ್ದರೂ ಒಂದೇ. ಈ ಕಂದಮ್ಮನಾದ ದೇವಾಜಿಯ ಚಿಂತೆಯೊಂದಿರದಿದ್ದರೆ, ಮಹಾರಾಜರೊಡನೆ ಆಗಲೇ ಸಹಗಮನ ಮಾಡುತ್ತಿದ್ದೆನು. ಸಾಲದ್ದಕ್ಕೆ ಇವಳನ್ನು ತನಗೆ ಕೊಡಬೇಕೆಂದು ಘಾತಕನಾದ ಮಾರನಾಯಕನು ಪರಿಪರಿಯಿಂದ ನಮ್ಮನ್ನು ಬಾಧಿಸುತ್ತಿರುವನು. ಇವಳ ದೈವದಲ್ಲಿ ಏನಿದೆಯೋ!'' ಎಂದು ಮಹಾರಾಣಿಯವರು ಕಣ್ಣೀರು ಮಿಡಿದರು.

''ದೇವಿಯವರೆ, ಈ ದುರುಳನ ವಿನಾಶಕಾಲವು ಸಮೀಪಿಸಿದೆ. ಸಾಕಷ್ಟು ಜನಸಹಾಯವನ್ನು ಸಂಪಾದಿಸಿದ್ದೇವೆ. ಇನ್ನು ನಾಲ್ಕಾರು ತಿಂಗಳಲ್ಲಿಯೇ ಆ ದುಷ್ಟನನ್ನು ಪರಲೋಕಕ್ಕೆ ಅಟ್ಟಿ, ಈ ರಾಜ್ಯಕ್ಕೆ ಉಂಟಾದ ದುರವಸ್ಥೆಯನ್ನು ಇಲ್ಲದಂತೆ ಮಾಡುವೆವು'' ಎಂದು ವಾಸುದೇವಯ್ಯನು ಹೇಳಿದನು.

ತಾಯಿಯ ಬಳಿಯಲ್ಲಿಯೆ ಕುಳಿತು ಹೂಮಾಲೆಯನ್ನು ಕಟ್ಟುತ್ತಿದ್ದ ದೇವಕೀ ದೇವಿಯು—

''ವಾಸುದೇವಯ್ಯ, ಶಿಖಾಸೂತ್ರಗಳನ್ನು ಹರಿದೊಗದು, ನೀವು ಸಂನ್ಯಾಸಿಗಳಾದಿರಿ, ನೀವಿನ್ನು ನಿಮ್ಮ ಸತೀಸುತರನ್ನು ಕೂಡುವ ಬಗೆ ಹೇಗೆ?'' ಎಂದು ನಗುತ್ತ ಕೇಳಿದಳು.

ದೇವಕಿಯ ಮಂಜಲವಾದ ವಾಣಿಯನ್ನು ಕೇಳಿದಾಕ್ಷಣವೇ, ವಾಸುದೇವಯ್ಯನ ಬಳಿಯಲ್ಲಿ ಚಾಮರವನ್ನು ಹಿಡಿದು ನಿಂತಿದ್ದ ನಮ್ಮ ಯದುರಾಜನ ಎದೆಯಲ್ಲಿ ಅನಂಗನು ಅಲಗಿಕ್ಕಿ ತಿವಿದನೋ ಎಂಬಂತಾಯಿತು. ಮೊದಲಿಗೇ ಅವನು ಆ ಕಾಮಿನಿಯ ಕಟಾಕ್ಷ ಬಾಣಗಳಿಂದ ಹತನಾಗಿದ್ದನು. ಈಗಂತೂ ದೇವಕಿಯ ಕಣ್ಣಲ್ಲಿ ಕಣ್ಣಿಟ್ಟು ನೋಡತೊಡಗಿದನು.

ದೇವಕಿಯು ಹದಿನಾರು ವರುಷ ಪ್ರಾಯದವಳಾಗಿದ್ದಳು. ಸುಖದಿಂದ ಬೆಳೆದ ಆ ರಾಜನಂದಿನಿಯ ಅವಯವಗಳೆಲ್ಲವೂ ತುಂಬಿಕೊಂಡಿದ್ದು ಪ್ರೌಢೆಯಂತೆ ಕಾಣುತ್ತಿದ್ದಳು. ಅವಳ ಕೇತಕೀವರ್ಣದ ಮೈ-ಕಾಂತಿಯೂ, ಪ್ರಶಸ್ತವಾದ ಹಣೆಯೂ, ಕಾಮನ ಶರಾಸನದಂತೆ ಮೆರೆವ ಕುಡಿಯ ಹುಬ್ಬುಗಳೂ, ಸಂಪಗೆಯ ಮೊಗ್ಗೆಯಂತಿರುವ ಮೂಗೂ, ಇಂದ್ರನೀಲ ಮಣಿಗಳಂತೆ ಹೊಳೆಯುತ್ತಿರುವ ಅವಳ ಕಣ್ಣುಗಳೂ ಅವಳ ಚಂದ್ರಬಿಂಬ ಸದೃಶವಾದ ಮುಖಕ್ಕೆ ಅಪೂರ್ವ ಶೋಭೆಯನ್ನಿತ್ತಿದ್ದುವು. ಯದುರಾಜನು ಆ ಶೋಭೆಯನ್ನು ಈಂಟುತ್ತಿರುವಾಗ, ಮದನರಾಜನು ತಾನು ಜಯಿಸಿದ ಸ್ಥಳದಲ್ಲಿ ಕೆಂಪು ಪತಾಕೆಯನ್ನು ನಿಲ್ಲಿಸಿರುವನೋ ಎಂಬಂತೆ ದೇವಕಿಯ ಮುಖವು ಲಜ್ಜೆಯಿಂದ ಕೆಂಪಾಗಿಬಿಟ್ಟಿತು.

''ಈ ಮಹಾನುಭಾವರಾರು?'' ಎಂದು ರಾಣಿಯವರು, ಯದುರಾಜ ಕೃಷ್ಣರಾಜರ ಕಡೆಗೆ ಕೈ ಮಾಡಿ ತೋರಿಸಿ, ನಂಜರಾಜನನ್ನು ಕೇಳಿದರು.

ನಂಜರಾಜನು ಅವರ ಪೂರ್ವೋತ್ತರಗಳನ್ನೂ ಪರಾಕ್ರಮ ವಿಚಾರಗಳನ್ನೂ ಬಣ್ಣಿಸಿದ ಮೇಲೆ, ವಾಸುದೇವಯ್ಯನು ಯದುರಾಜರಿಗೇ ರಾಜಪಕ್ಷದ ಸೇನಾಧಿಪತ್ಯವನ್ನು ಕೊಡತಕ್ಕುದೆಂದು ತಾವು ನಿಶ್ಚಯಿಸಿರುತ್ತೇವೆಂತಲೂ, ಆ ಅಧಿಕಾರಸೂಚಕವಾದ ಶಸ್ತ್ರವನ್ನೂ ಬಹುಮಾನದ ವಸ್ತ್ರಗಳನ್ನೂ ರಾಣಿಯವರೇ ಕೊಡಬೇಕೆಂದೂ ವಿಜ್ಞಾಪನೆ ಮಾಡಿಕೊಂಡನು.

ತುಸು ಹೊತ್ತಿನ ಮೇಲೆ ದಾಸಿಯು ಸುವರ್ಣದ ಹರಿವಾಣದಲ್ಲಿ ಉತ್ತಮ ವಸ್ತ್ರಗಳನ್ನು ಇರಿಸಿ ತಂದಳು. ಮಹಾರಾಜರು ಉಪಯೋಗಿಸುತ್ತಿದ ಖಡ್ಗವನ್ನು ನಂಜರಾಜನು ತೆಗೆದುಕೊಂಡು ಬಂದನು. ಆ ಕ್ಷಣವೇ ದೇವಕಿಯು ತಾನು [illegible]ಂಗಿಸಿದ ಹೂಮಾಲೆಯನ್ನು ಆ ಉಡುಗೊರೆಯ ಹರಿವಾಣದಲ್ಲಿ ಇಟ್ಟು, ಯಾರು ಏನನ್ನುವರೊ ಎಂದು ಬೆದರುಗಣ್ಣುಗಳಿಂದ ನೋಡುತ್ತ ನಿಂತಳು.

ಯದುರಾಜನು ಮಹಾರಾಣಿಯರಿಗೆ ಪ್ರಣಾಮ ಮಾಡಿ, ಅದೆಲ್ಲವನ್ನೂ ಕೃತಜ್ಞತೆಯಿಂದ ಸ್ವೀಕರಿಸಿ, ತನ್ನ ಮನವನ್ನು ಸೂರೆಗೊಂಡ ಆ ಮೋಹನಾಂಗಿಯ ಮುಖವನ್ನು ಇನ್ನೊಮ್ಮೆ ಕದ್ದು ನೋಡಿ, ಮುಂದೆ ಸಾಗಿದನು. ಬಂದ ಕೆಲಸವು ಕೈಗೂಡಿದ್ದರಿಂದ ಚಿದಾನಂದ ಸ್ವಾಮಿಗಳವರ ಸನ್ನಾಹವು ಬೆಳಗಾಗುವದರೊಳಗಾಗಿ ಮುಂದಿನ ಊರಿಗೆ ಸಾಗಿ ಹೋಗಿತ್ತು.

☆ ☆ ☆ ☆

ಅಮಾವಾಸ್ಯೆಯು ಸಮೀಪಿಸುತ್ತಿದ್ದ ಒಂದು ರಾತ್ರಿ, ಒಬ್ಬ ವೇಶ್ಯೆಯು ಪೈಜಣಗಳ ಗಿಲ್ ಗಿಲ್ ಗಿಲ್ ಎಂಬ ಶಬ್ದದೊಂದಿಗೆ ಒಯ್ಯಾರದಿಂದ ಹೆಜ್ಜೆಗಳನ್ನಿಕ್ಕುತ್ತ ಕಾರಾಗೃಹದ ಬೀದಿಗುಂಟ ನಡೆದುಕೊಂಡು ಬರುತ್ತಿದ್ದಳು. ಅವಳ ಹಿಂದೆ ಮೇಳದವರು ಮೃದಂಗ, ವೀಣೆ ಮುಂತಾದ ಸಾಹಿತ್ಯಗಳನ್ನು ಹೊತ್ತುಕೊಂಡು ಬರುತ್ತಿದ್ದರು.

ಆಗ ಕಾರಾಗೃಹದ ಹಿರಿಯ ಕಾವಲುಗಾರನು "ನಿಲ್ಲು! ಹೆಂಗುಸಾದ ನೀನು ಇಷ್ಟು ರಾತ್ರಿಯಲ್ಲಿ ಎಲ್ಲಿಗೆ ನಡೆದೆ?" ಎಂದು ಗದರಿಸಿದನು.

"ಏಕೆ? ಹೆಂಗಸರನ್ನು ಕಾಣುತ್ತಲೇ, ಮೈಯಲ್ಲಿ ಅಧಿಕಾರದರ್ಪ ಉಕ್ಕುತ್ತದಲ್ಲವೆ? ವೀರಭದ್ರನಾಯಕರಲ್ಲವೆ ತಾವು? ನಮ್ಮಂತಹವರ ಗುರುತು ನಿಮಗೇಕೆ ಸಿಕ್ಕೀತು?" ಎಂದಳಾಕೆ.

ನೀರು ತಗುಲಿದ ಕೂಡಲೇ ಸಕ್ಕರೆಯ ಕೋಲು ಮಣಿದು ಹೋಗುವಂತೆ, ವೀರಭದ್ರನ ಅಧಿಕಾರದ ಸೆಟೆಯು ಆ ಒಯ್ಯಾರಿಯ ನುಡಿಯನ್ನು ಕೇಳಿ ಸಡಲಿ ಹೋಯಿತು.

"ಮೀನಾಕ್ಷಿ ಸಾನಿ! ಕತ್ತಲಲ್ಲಿ ಗುರುತೇ ಹತ್ತಲಿಲ್ಲ. ಇಷ್ಟು ರಾತ್ರಿಯಲ್ಲಿ ಎಲ್ಲಿಗೆ ಹೊರಟೀದ್ದಿ?"

"ಎಲ್ಲಿಗಾದರೂ ಹೋಗುತ್ತೇನೆ. ಅದರ ಗೊಡವೆ ನಿಮಗೇಕೆ? ನನ್ನ ಮನೆಗೆ ಬರುವದನ್ನು ಬಿಟ್ಟವರಿಗೆ ನನ್ನನ್ನು ಮಾತಾಡಿಸುವ ಅಧಿಕಾರವೇನಿರುವುದು?"

ವೀರಭದ್ರನು ಅವಳ ಕೈ ಹಿಡಿದು, "ಮೀನಾಕ್ಷೀ, ನನಗೆ ಈ ಕಾರಾಗೃಹವನ್ನು ಕಾಯುವ ಸರತಿ ಬಂದಂದಿನಿಂದ ನಿನ್ನ ಮನೆಗೆ ಬರುವದಾಗಿಲ್ಲ. ತಪ್ಪಾಯಿತು, ನನ್ನಿಂದ, ಆಯಿತೆ? ಈಗ ಎಲ್ಲಿಗೆ ಹೊರಟೀದ್ದಿ, ಹೇಳಲ್ಲ?" ಎಂದು ಅವಳ ಹೆಗಲ ಮೇಲೆ ಕೈ ಹಾಕಲು ಯತ್ನಿಸಿದನು. ಮೀನಾಕ್ಷಿಯು, "ಏನು ಹಾಗೆ ಚೇಷ್ಟೆ, ಬಿಡಿದರೆ?" ಎಂದಳು.

"ಎಲ್ಲಿಗೆ ನಡೆದಿರುವೆಯೆಂಬುದನ್ನು ಹೇಳಲೇ ಇಲ್ಲ. ಪಾತರದವರ ಕಸಬಿಗೆ ಕುಂದು ಬಂದೀತು, ಹೇಳಿಬಿಡು!" ಎಂದು ಅವನು ಹಂಗಿಸಿದನು.

"ಮೇಟೀ ಚನ್ನಬಸಯ್ಯನವರ ಮನೆಯಲ್ಲಿ ಈ ರಾತ್ರಿ ನೃತ್ಯ–ಗಾಯನವಾಗತಕ್ಕುದು. ಅದಕ್ಕಾಗಿ ಹೊರಟಿದ್ದೇನೆ. ವೀರಭದ್ರಾ, ಕೈ ತೆಗೆ, ಸಾಜಿನವರು ಬಂದರು."

ಇನ್ನು ಆಕೆ ಹೋಗಿಬಿಡುವಳಲ್ಲಾ ಎಂಬ ಕಾತರದಿಂದ, "ಮೀನಾಕ್ಷೀ, ತಾಂಬೂಲ ತೆಗೆದುಕೊಂಡು ಹೋಗುವೆಯಂತೆ. ನಿನ್ನ ಸಾಜಿನವರನ್ನೂ ಒಳಗೆ ಕರ" ಎಂದನು.

ಕಾವಲಿನ ದಿಡ್ಡಿ ಬಾಗಿಲಿನಿಂದ ಅವರೆಲ್ಲ ಒಳಗೆ ಬಂದ ಮೇಲೆ, ಮೀನಾಕ್ಷಿಯು ವೀರಭದ್ರನು ಹಾಸಿದ ಕಂಬಳಿಯ ಮೇಲೆ ಕುಳಿತು, ಅವನು ಮುಂಚಾಚಿದ ತಾಂಬೂಲದ ಡಬ್ಬಿಯನ್ನು ಕೈಗೆ ತೆಗೆದುಕೊಂಡು, ಇಬ್ಬರಿಗೂ ವೀಳ್ಯಗಳನ್ನು ಮಾಡತೊಡಗಿದಳು.

ಈಚೆಯ ಬಂಕದಲ್ಲಿ ನಾಲ್ವರು ಕಾವಲುಗಾರರು ಹರಳೆಣ್ಣೆಯ ದೀಪದ ಬೆಳಕಿನಲ್ಲಿ ಹುಲಿಮನೆಯ ಆಟವನ್ನು ನಡೆಸಿದ್ದರು. ಸಾಜಿನವರು ಅವರ ಸುತ್ತುನಿಂತು ನೋಡುತ್ತಿದ್ದರು. ಆಗ ಸಾರಂಗದವನು ಮೆಲ್ಲನೆ ಎದ್ದು, ಗೋಡೆಗೆ ತೂಗುಬಿಟ್ಟ ದೊಡ್ಡ ಕತ್ತಿಗಳಲ್ಲಿ ಒಂದನ್ನು ತೆಗೆದುಕೊಂಡು, "ಅಬ್ಬಬ್ಬ! ಇದನ್ನು ಎರಡೂ ಕೈಗಳಿಂದ ನೆಗಹುವುದೇ ಕಷ್ಟ! ಇಂತಹದನ್ನು ತಿರುವಾಡುವುದು ಹೇಗಣ್ಣಾ?" ಎಂದು ನುಡಿದನು.

"ಸುಮ್ಮನೆ ಇಡಪ್ಪಾ! ವ್ಯರ್ಥವಾಗಿ ಕೈ ಕೊಯ್ದುಕೊಂಡೀ? ಖಡ್ಗವೆಂದರೇನು, ಸಾರಂಗದ ಬಿಲ್ಲೆಯೆಂದು ತಿಳಿದೆಯಾ?" ಎಂದು ಒಬ್ಬ ಕಾವಲುಗಾರನು ಹೇಳಿ, ತನ್ನ ಆಟದಲ್ಲಿ ಮಗ್ನನಾದನು.

ಆಗ ಮದ್ದಲೆಯವನು, "ನಾಗಪ್ಪಾ, ನಿನ್ನ ಕೈಯಲ್ಲಿಯ ಕತ್ತಿಗಿಂತಲೂ ಈ ಕತ್ತಿಯು ಬಲವಾಗಿ ತೋರುತ್ತದೆ" ಎಂದು ತಾನೂ ಒಂದು ಶಸ್ತ್ರವನ್ನು ಹಿಡಿದು ಪರೀಕ್ಷಿಸುತ್ತ ನಿಂತನು.

"ಮೀನಾಕ್ಷಿಸಾನೀ, ನಿನ್ನ ಸಾಜಿನವರು ಖಡ್ಗವನ್ನು ಹಿಡಿಯಲಾರಂಭಿಸಿದರೆ, ನಾವಿನ್ನು ತಂತಿಯನ್ನು ಬಾರಿಸಬೇಕಾಯಿತಲ್ಲ?" ಎಂದು ವೀರಭದ್ರನು ಹಾಸ್ಯ ಮಾಡಿದನು.

ಇಷ್ಟರಲ್ಲಿ ತೆರೆದಿದ್ದ ದಿಡ್ಡಿ ಬಾಗಿಲಿನಿಂದ ೭–೮ ಜನ ಬುದುಬುದು ಒಳ ನುಗ್ಗಿ ಬಂದರು. ವೀರಭದ್ರನು ಎದ್ದು ನಿಲ್ಲುವಷ್ಟರಲ್ಲಿ ಯದುರಾಜನು ಹುಲಿಯಂತೆ ಟಣ್ಣನೆ ಹಾರಿ, ವೀರಭದ್ರನನ್ನು ತನ್ನ ತೆಕ್ಕೆಯಲ್ಲಿ ಹಿಡಿದನು. ಮತ್ತೊಬ್ಬನು ಕ್ಷಣದಲ್ಲಿ ಅವನ ಹೆಡಮುರಿಗೆ ಕಟ್ಟಿದನು. ಉಳಿದ ಕಾವಲುಗಾರರ ಗತಿಯೂ ಅದೇ ಆಯಿತು.

ಆಗ ಯದುರಾಜನು ದಿಡ್ಡಿಯ ಬಾಗಿಲನ್ನು ಭದ್ರವಾಗಿ ಮುಚ್ಚಿ, "ಚತರದ ಭದ್ರನಾಯಕನನ್ನು ಎಲ್ಲಿ ಇಟ್ಟಿರುವಿರಿ?" ಎಂದು ಗದ್ದರಿಸಿ ಕೇಳಿದನು.

ಯಾರೂ ಬಾಯಿಬಿಡಲೊಲ್ಲರು. ಒಬ್ಬ ಕಾವಲುಗಾರನು ಮಾತ್ರ ಅಂಜಿಕೆಯಿಂದ ನಡುಗುತ್ತಿರುವುದನ್ನು ಕಂಡು, ಅವನನ್ನು ಎಳೆದೊಯ್ದು ಇನ್ನೊಮ್ಮೆ ನೂರು ಹೊನ್ನುಗಳನ್ನು ಕೊಡುವೆನೆಂದು ಆಶೆಹಚ್ಚಿ, ಭದ್ರನಾಯಕನನ್ನು ಇಟ್ಟಿರುವ ಕೋಣೆಯನ್ನು ತೋರಿಸಲು ಅವನನ್ನು ಒಪ್ಪಿಸಿದರು. ಆ ಬಳಿಕ ಆರಮೊಗನು ಅವನ ಕಟ್ಟುಗಳನ್ನು ಬಿಚ್ಚಿ, ಬೆಕ್ಕು ಇಲಿಯನ್ನು ತೆಗೆದುಕೊಂಡು ಹೋಗುವಂತೆ ಅವನನ್ನು ತನ್ನ ಕಂಕುಳಲ್ಲಿ ತೆಗೆದುಕೊಂಡು ಹೋದನು.

ಆರಮೊಗನು ಒಂದು ಕೋಣೆಯ ಬಾಗಿಲಿನ ಕಂಬಿಗಳನ್ನು ಹಿಡಿದು ಜಗ್ಗಿ ನೋಡಿ,

ಯದುರಾಜನನ್ನು ಕುರಿತು. ''ದೇವ್ರೂ, ಇದರಲ್ಲಿ ಏನೂ ಹುರುಳಿಲ್ಲ'' ಎಂದು ಆ ಕಂಬಿಗಳನ್ನು ಮಣಿಸಿ ದಂಟುಗಳನ್ನು ಹಿರಿದ ಹಾಗೆ ಹಿರಿದು ತೆಗೆದನು! ಆ ಸಪ್ಪಳವನ್ನು ಕೇಳಿ ಒಳಗಿನ ಬಂದಿಯು ''ಆರವರು?'' ಎಂದು ಕೇಳಿದನು.

''ಅಪ್ಪಾ, ನಾನು ಯಂಕನು. ಇವರೆಲ್ಲರೂ ನಮ್ಮ ಹಿತ್ತೈಷಿಗಳು. ನಿಮ್ಮನ್ನು ಬಿಡಿಸಿಕೊಂಡು ಹೋಗಲು ಬಂದಿದ್ದೇವೆ'' ಎಂದು ಅವನ ಮಗನಾದ ವೆಂಕಟನಾಯಕನು ಹೇಳಿದನು.

ಭದ್ರನಾಯಕನ ಬೇಡಿಗಳನ್ನು ತಾವು ತಂದಿದ್ದ ಅರ್ನಗಳಿಂದ ತಿಕ್ಕಿಹಾಕಿ, ಎಲ್ಲರೂ ದಿಡ್ಡಿಯ ಬಾಗಿಲಿಗೆ ಬರುವಷ್ಟರಲ್ಲಿ, ಎಲ್ಲಿಯೋ ಮೂಲೆಯಲ್ಲಿ ಕುಳಿತಿದ್ದ ಕಾವಲುಗಾರನು, ''ಘಾತವಾಯಿತು'', ಎಂದು ಕೂಗಿ ತನ್ನ ಕೈಯಲ್ಲಿದ್ದ ಕಹಳೆಯನ್ನು ಗಟ್ಟಿಯಾಗಿ ಊದಿದನು. ಯದುರಾಜನ ಪರಿವಾರದವರು ಲಗುಬಗೆಯಿಂದ ಬೀದಿಗೆ ಬರುವಷ್ಟರಲ್ಲಿ, ಕಹಳೆಯ ಸದ್ದಿನಿಂದ ಎಚ್ಚೆತ್ತ ಬೇರೆ ಜನ ಕಾವಲುಗಾರರು ಇತ್ತ ಕಡೆಗೇ ಓಡಿಬರುತ್ತಿದ್ದರು. ಆಗ ಯದುರಾಜನು, ''ಘಾತವಾಯಿತು!'' ಎಂದು ತಾನೂ ಗಟ್ಟಿಯಾಗಿ ಕೂಗುತ್ತ ತನ್ನ ಜನರಿಗೆ ಪಶ್ಚಿಮದ ಅಗಸೆ ಬಾಗಲಿಗೆ ಬರಲು ಸನ್ನೆಮಾಡಿ, ಓಡತೊಡಗಿದನು.

ಮಾರ್ಗದಲ್ಲಿ ಒಬ್ಬನು ''ಏನಯ್ಯಾ? ಘಾತವೇನಾಯಿತು? ಕಹಳೆಯನ್ನೇಕೆ ಊದುತ್ತಿದ್ದಾರೆ ಈ ಮಧ್ಯರಾತ್ರಿಯಲ್ಲಿ?'' ಎಂದು ಕೇಳಿದ್ದಕ್ಕೆ.

''ಘಾತವೆಂದರೆ ಮತ್ತೆಂತಹದಿರಬೇಕಯ್ಯಾ? ಅದಾರೋ ದ್ರೋಹಿಗಳು ಮಾರನಾಯಕನ ಮನೆಹೊಕ್ಕು ಅವರನ್ನು ಕೊಂದುಹಾಕಿದರಂತೆ. ಈ ವರ್ತಮಾನವನ್ನು ಶಾಂತರಾಜರಿಗೆ ತಿಳುಹಲು ಹೊರಟಿದ್ದೇನೆ'' ಎಂದನು.

ಮತ್ತೊಬ್ಬ ಪೃಚ್ಛಕನಿಗೆ, ಕೃಷ್ಣರಾಜನು, ''ಏನು ಹೇಳಲಯ್ಯ! ಸುಲಿಗೆಗಾರರು ವೆಂಕಣ್ಣನಾಯಕನ ಮನೆಹೊಕ್ಕು, ಅವರನ್ನು ತುಂಡುಮಾಡಿ, ದ್ರವ್ಯವನ್ನೆಲ್ಲ ದೋಚಿಕೊಂಡು ಹೋಗಿದ್ದಾರಂತೆ. ನಗರರಕ್ಷಕರು ಎಲ್ಲಿ ಕತ್ತೆ ಕಾಯುತ್ತಿರುವರೋ ಕಾಣೆನು'' ಎಂದು ಹೇಳಿದನು.

ಆರಮೊಗನನ್ನು ಮಾತನಾಡಿಸಿದವನಿಗೆ, ಅವನು ''ಅಲ್ಲಿಯೇನು ಮಣ್ಣಿದೆ? ನಾನೂ ನಿಮ್ಮಂತೆಯೆ ಅಲ್ಲಿಗೆ ಓಡಿಹೋಗಿ ನೋಡುತ್ತೇನೆ. ಏನಿದೆ? ಸೂಳೆಯರು ವ್ಯಾಜ್ಯಮಾಡಿ ಗಲಾಟೆಯಬ್ಬಿಸಿದರು. ಸ್ವಲ್ಪ ನಸ್ಯ ಸಿಕ್ಕೀತೇನು? ಎಂದನು.

ಆ ರಾತ್ರಿ ಮೈಸೂರು ಪಟ್ಟಣದಲ್ಲಿ ವಿಪರೀತ ಗೊಂದಲವೆದ್ದು ಹೋಯಿತು. ದೀವಟಿಗೆ, ಗೊರವೇ ಕಟ್ಟಿಗೆಗಳ ಬೆಳಕುಗಳು ಊರತುಂಬ ಓಡಾಡಿದುವು. ನಗರರಕ್ಷಕರು ಕುದುರೆಗಳನ್ನೇರಿ ಅತ್ತಿತ್ತ ಧಾವಿಸಿದರು. ಇವರೆಲ್ಲರ ಗದ್ದಲಕ್ಕೆ ಊರಲ್ಲಿಯ ನಾಯಿಗಳೆಲ್ಲ ಬೊಗಳಿ ಕೀಸರಿಟ್ಟುವು. ಕೊನೆಗೆ ಮಾರನಾಯಕನು ಸತ್ತದ್ದೂ ಸುಳ್ಳು, ವೆಂಕಣ್ಣನವರ ಮನೆಯು ದರೋಡೆಯಾದದ್ದೂ ಸುಳ್ಳು ಎಂದು ಆ ಸ್ಥಳಗಳಿಗೆ ಹೋದಾಗ ತಿಳಿಯಿತು. ''ಏನಿದ್ದ ವರ್ತಮಾನ ನಾಳೆ ಬೆಳಿಗ್ಗೆ ತಾನೇ ಗೊತ್ತಾಗುವದಲ್ಲ'' ಎಂದು ಎಲ್ಲರೂ ತಂತಮ್ಮ ಮನೆಗೆ ಬಂದು, ಹೆಂಗುಸರ ಕಡೆಯಿಂದ 'ಛೀ' ಮಾಡಿಸಿಕೊಂಡು, ಮಲಗಿಕೊಂಡರು.

☆ ☆ ☆ ☆

ಭದ್ರನಾಯಕನನ್ನು ಸೆರೆಬಿಡಿಸಿ ತಂದಂದಿನಿಂದ ಚತರ ಗ್ರಾಮವು ರಾಜಪಕ್ಷದವರ ಮುಖ್ಯ ಸ್ಥಾನವಾಯಿತು. ಹಿಂದೆ ಹೇಳಿದ ಗುಹಾನಿವಾಸಿಗಳೆಲ್ಲರೂ ತಮ್ಮ ಗುಪ್ತವೇಷಗಳನ್ನು ಹರಿದೊಗೆದು ಚತರದಲ್ಲಿ ಬಂದು ನಿಂತರು. ಒಂದು ದಿನ ಬೆಳಗಿನಲ್ಲಿ ಆ ಊರಿನ ಮುಂದುಗಡೆ ಚಾಮರಾಜೇಂದ್ರರ ಧ್ವಜಪಟವು ಮೇಘಮಂಡಲವನ್ನು ಭಟಭಟನ ಸೆಳೆಯುತ್ತ ನಿಂತಿತು.

ಎರಡು ಸಾವಿರ ಜನ ವೀರರು ಯುದ್ಧಕ್ಕೆ ಸಿದ್ಧರಾಗಿರುವರೆಂದೂ, ಯದುರಾಜನೆಂಬ ಮಹಾವೀರನು ಈ ಜನರಿಗೆ ಯುದ್ಧದ ಶಿಕ್ಷಣವನ್ನು ಕೊಡುತ್ತಿರುವನೆಂದೂ ಕೇಳಿ ಎಷ್ಟೋ ಜನ ಭಟರು ಕತ್ತಿ ಢಾಲುಗಳನ್ನು ತೆಗೆದುಕೊಂಡು ಚತರಕ್ಕೆ ಬಂದು ರಾಜಪಕ್ಷವನ್ನು ಸೇರಲಾರಂಭಿಸಿದರು.

ನಿತ್ಯದಲ್ಲಿಯೂ ತೆರಪಿಲ್ಲದೆ ಬರುವ ಭಟರಿಗೋಸ್ಕರ ಊರಹೊರಗಿನ ದಿನ್ನೆಗಳ ಮೇಲೆ ಗುಡಿಸಲುಗಳನ್ನು ಕಟ್ಟಬೇಕಾಯಿತು, ಹೆಚ್ಚುತ್ತಿರುವ ಜನರಿಗಾಗಿ ಕೊಮ್ಮಟಿಗರು ಕಾಳುಕಡಿಯ, ಚಿಕ್ಕ ತಕ್ಕಡಿಯ ಅಂಗಡಿಗಳನ್ನು ಹಾಕಿಕೊಂಡು ಕುಳಿತರು. ಕಮ್ಮಾರರು, ಬಡಿಗರು, ದಂಡಾಳುಗಳಿಗೋಸ್ಕರ ಶಸ್ತ್ರಗಳನ್ನು ಮಾಡುವುದರಲ್ಲಿ ಅಹೋರಾತ್ರಿ ದುಡಿಯುತ್ತಿದ್ದರು.

ಕ್ರಮೇಣ ರಾಜಪಕ್ಷದ ಸೇನೆಯ ವೆಚ್ಚದ ಭಾರವನ್ನು ಹೊರುವುದು ಬಿರಿಯಾಗತೊಡಗಿತು. ಭದ್ರನಾಯಕನ ಧಾನ್ಯದ ಹಗೇವುಗಳೆಲ್ಲ ಬರಿಯವಾಗುತ್ತ ಬಂದವು. ಕೋಶದಲ್ಲಿಯ ಹಣವೂ ತೀರಿದ್ದಿತು. ಇಂತಹ ಸಂದಿನಲ್ಲಿ ಮಾರನಾಯಕನು ತಮ್ಮ ಮೇಲೆ ದಂಡೆತ್ತಿ ಬಂದರೆ? ಮುಖ್ಯಸ್ಥರ ಸಭೆ ಕೂಡಿದಾಗ, ಶ್ಯಾಮಯ್ಯಂಗಾರರು ಸದ್ಯಃಸ್ಥಿತಿಯನ್ನು ಚೆನ್ನಾಗಿ ವಿವರಿಸಿ ಹೇಳಿದ ಮೇಲೆ ಯದುರಾಜನು—

"ಮಾರನಾಯಕನ ಅಭಿಯೋಗದ ಚಿಂತೆಯನ್ನು ಬಿಡಿರಿ. ಅನ್ನ, ವಸ್ತ್ರ, ಶಸ್ತ್ರಾಸ್ತ್ರಗಳನ್ನು ಪೂರೈಸಿಕೊಡುವ ವಿಚಾರವನ್ನು ಮೊದಲು ಮಾಡಿರಿ" ಎಂದು ಹೇಳಿದನು.

"ಬಾರಯ್ಯಾ ಸೆಟ್ಟೀ, ಇಷ್ಟು ದಿವಸ, 'ದುಡ್ಡಿನ ಚಿಂತೆಯನ್ನೇಕೆ ಮಾಡುತ್ತೀರಿ. ಬೇಕಾದಷ್ಟು ಸುರಿಯುತ್ತೇನೆ' ಎಂದು ಹೇಳುತ್ತಿದ್ದೆಯಲ್ಲ! ಏನು ಹೇಳುತ್ತಾರೆ ನೋಡು, ಈ ಗಂಡಂದಿರು!" ಎಂದು ವಾಸುದೇವಯ್ಯನು ಶ್ರೀ ಶೈಲಶೆಟ್ಟಿಯನ್ನು ಕುರಿತು ಹೇಳಿದನು.

"ವಾಸುದೇವಯ್ಯನವರೇ, ಎಷ್ಟು ಹಣಬೇಕು ಮೊದಲು ಹೇಳಿರಿ. ನನ್ನಿಂದ ಕೊಡುವದಾಗಲಿಲ್ಲವೆಂದರೆ ಮುಂದಿನ ಮಾತು"—ಎಂದು ಸೆಟ್ಟಿಯು ನುಡಿದನು. ಯದುರಾಜನೇ ಅದಕ್ಕೆ ಉತ್ತರವಿತ್ತನು :

"ಕೇಳಿರಿ ಸೆಟ್ಟರೆ, ೧೦ ಸಾವಿರ ಜನಕ್ಕೆ ಒಂದು ವರ್ಷ ಸಾಕಾಗುವಷ್ಟು ಕಾಳುಕಡಿ ಉಗ್ರಾಣದಲ್ಲಿರಬೇಕು. ಒಂದೇ ಅಳತೆಯ ಐದು ಸಾವಿರ ಭಲ್ಲೆಗಳೂ ಉತ್ತಮವಾದ ಖಡ್ಗಗಳೂ ಇನ್ನು ಎಂಟು ದಿನಗಳಲ್ಲಿ ನನ್ನ ಸ್ವಾಧೀನದಲ್ಲಿ ಇರಬೇಕು. ಐದು ಸಾವಿರ ಜನಕ್ಕೆ ಕಂಬಳಿ ಕಾಲ್ಮರೆ ಬೇಕು; ಅಂಗಿ–ಮುಂಡಾಸಗಳು; ಇಷ್ಟೆಲ್ಲ ಸಾಮಗ್ರಿಗಳನ್ನು ನನಗೆ ತೋರಿಸಿ ಆಮೇಲೆ ನನ್ನನ್ನು ನಿಮ್ಮ ಸೇನಾಪತಿಯೆಂದು ಕರೆಯಬೇಕು."

''ಇಷ್ಟೇಯೊ? ಈಗ ನನ್ನ ಹತ್ತಿರವೇ ಐದುಲಕ್ಷ ವರಹಗಳಿವೆ. ಬೇಕಾದರೆ ಬೆಂಗಳೂರಿನ ಅಂಗಡಿಯ ಮೇಲೆ ಮೂರು ಲಕ್ಷ, ವಿಜಯನಗರದ ಅಂಗಡಿಯ ಮೇಲೆ ಐದು ಲಕ್ಷ ವರಹಗಳನ್ನು ಬೇಡಿದಾಗ ಕೊಡಿಸುತ್ತೇನೆ. ಪದಾರ್ಥಗಳನ್ನು ಕೊಂಡುಕೊಳ್ಳುವದು ನಿಮ್ಮ ಕೆಲಸ.''

''ಭಲೆ ಸೆಟ್ಟರೆ! ಇದರಿಂದ ನಮ್ಮ ಕೆಲಸವಾಯಿತು. ಆದರ ನೋಡಿಕೊಳ್ಳಿರಿ! ನಾವು ಮೈಸೂರನ್ನು ಕಾಣುವುದರೊಳಗಾಗಿ, ನಿಮ್ಮ ಹೆಗಲ ಮೇಲೆ ಬೆಳ್ಳುಳ್ಳಿಯ ಚೀಲವು ಬಂದೀತು'' ಎಂದು ನಂಜರಾಜನು ನುಡಿದು ನಕ್ಕನು.

''ಬಿಡಿರಿ. ನಂಜರಾಜ ಒಡೆಯರೇ, ಶ್ರೀಶೈಲ ಪರ್ವತದ ಉದ್ದವಾಗಿ ದುಡ್ಡನ್ನು ಸುರಿಯಬಲ್ಲೆನೆಂದೇ 'ಶ್ರೀಶೈಲ ಸೆಟ್ಟಿ' ಎಂದು ಜನರು ನನ್ನನ್ನು ಕರೆಯುತ್ತಾರೆ, ಸುಮ್ಮನೆ ಅಲ್ಲ! ಬೆಳ್ಳುಳ್ಳಿಯ ಚೀಲದ ಅಂಜಿಕೆಯನ್ನು ಹೇಳುತ್ತಾರೆ ಒಡೆಯರು!'' ಎಂದು ಸೆಟ್ಟರು ನುಡಿದರು.

''ಹಾಗಾದರ ನಾನು ಈಗಲೇ ಕೃಷ್ಣರಾಜನನ್ನು ವಿಜಯನಗರದ ಸೇನಾಪತಿಗಳಾದ ಕೆಂಪೇ ಅರಸರ ಕಡೆಗೆ ಶಸ್ತ್ರಾಸ್ತ್ರಗಳಿಗಾಗಿ ಕಳುಹುವೆನು. ಸೆಟ್ಟರೇ, ನೀವು ಕೃಷ್ಣರಾಜನೊಡನೆ ವಿಜಯನಗರಕ್ಕೆ ಹೋಗಿ ಸಾಕಷ್ಟು ಹಣವನ್ನು ಪೂರೈಸಿರಿ'' ಎಂದು ಯದುರಾಜನು ಹೇಳಿದನು.

ಕೆಲವೇ ದಿನಗಳಲ್ಲಿ ಆವಶ್ಯಕ ಸಾಮಗ್ರಿಯೆಲ್ಲಾ ಬಂದುಬಿಟ್ಟಿತು. ನಂಜರಾಜ, ವೆಂಕಟನಾಯಕ ಮುಂತಾದ ವೀರರು ಬಯಲುಗಳಲ್ಲಿ ನಿಂತು, ಸೈನಿಕರಿಗೆ ನಿತ್ಯವೂ ಯುದ್ಧ ಕಲೆಯನ್ನು ಕಲಿಸತೊಡಗಿದರು.

ಹೀಗೆ ಚತರದ ಸೈನ್ಯದಲ್ಲಿ ಮೂರು ಸಾವಿರ ಚೆನ್ನಾಗಿ ಕಲಿತರಾದ ಕಾಲಾಳುಗಳೂ, ಐನೂರು ಜನ ರಾವುತರೂ, ಅರೆವಾಸಿಯಾಗಿ ಕಲಿತವರಾದ ಮತ್ತೊಂದು ಸಾವಿರ ಕಾಲಾಳುಗಳೂ ಇದ್ದರು.

ಇತ್ತ ಮಾರನಾಯಕ – ಶಾಂತರಾಜರಿಗೆ ಈ ಸನ್ನಾಹವು ತಿಳಿಯದೇ ಇರಲಿಲ್ಲ. ಆದರೆ ತಮ್ಮೊಳಗಿನ ಒಡಕಿನಿಂದಾಗಿ ಅವರು ಯಾವ ನಿರ್ಣಯಕ್ಕೂ ಬೇಗ ಬರಲಿಲ್ಲ. ಸಮಸ್ತ ಸೈನ್ಯವನ್ನು ಕಟ್ಟಿಕೊಂಡು, ಚತರದ ಮೇಲೆ ಅಭಿಯೋಗವನ್ನು ಮಾಡಿ, ರಾಜಪಕ್ಷವನ್ನು ಈಗಲೆ ನಿರ್ಮೂಲವಾಗಿ ಮಾಡಿಬಿಡಬೇಕೆಂದು ಅನುಭವಿಕರು ಹೇಳುತ್ತಿರಲು, ಮಾರನಾಯಕನು ಬೇರೊಂದು ದೂ(ದು)ರಾಲೋಚನೆಯಲ್ಲಿದ್ದನು. ಅದೆಂದರೆ— ಚತರದ ಮೇಲೆ ಶಾಂತ ರಾಜನ ಸೈನ್ಯವನ್ನೇ ಕಳುಹತಕ್ಕದ್ದು. ಅವನು ವಿಜಯಿಯಾದರೆ ಅಯತ್ನವಾಗಿ ರಾಜಪಕ್ಷವು ಮುರಿದಂತಾಯಿತು. ಅವನು ಸೋತನೆಂದರೆ, ಶಾಂತ ರಾಜನೆಂಬ ಮುಳ್ಳು ತಾನಾಗಿ ಮುರಿದಂತಾಯಿತು– ಎಂದು ಅವನ ಲೆಕ್ಕ! ಶಾಂತರಾಜನೂ ಇದಕ್ಕ ಸಿದ್ಧನಾಗೇ ಇದ್ದನು. ಆದರೆ ಅವನ ದುರಾಲೋಚನೆಯೇ ಬೇರೆ. ಚತರದ ಯುದ್ಧದಲ್ಲಿ ತಾನು ವಿಜಯಿಯಾಗುವುದು ಕಟ್ಟಿಟ್ಟ ಮಾತು. ಹಾಗಾದ ಮೇಲೆ ಮೈಸೂರಿನ ರಾಜ್ಯದ ಉತ್ತರ

ಭಾಗವು ಅನಾಯಾಸವಾಗಿ ತನ್ನ ಕೈ ಸೇರಿದಂತಾಗುವುದು. ಅಲ್ಲಿ ಕುಳಿತು ವೀರನಾಯಕನ ಮೇಲೆ 'ಗುರ್' ಎನ್ನಬಹುದಲ್ಲವೆ!

ಶಾಂತರಾಜನ ಸೈನ್ಯವು ತಮ್ಮ ಮೇಲೆ ದಂಡೆತ್ತಿ ಬರುವ ವಿಚಾರವು ಗೂಢಚಾರರ ಮೂಲಕ ೧೫ ದಿನ ಮುಂಚಿತವೇ ಯದುರಾಜನಿಗೆ ತಿಳಿದು ಬಂದಿತು. ಕೂಡಲೇ ಚತರ ಗ್ರಾಮವಾಸಿಗಳಿಗೆ ಇನ್ನೆರಡು ದಿನಗಳಲ್ಲಿ ಊರು ಬಿಟ್ಟುಹೋಗಲು ಆಜ್ಞೆಯಾಯಿತು.

ಊರಿಗೆ ಊರೇ ಎದ್ದು ಹೋದರೂ, ಅಲ್ಲಿಯ ಶಿವಾಲಯದಲ್ಲಿ ಇಳಿದುಕೊಂಡಿರುವ ಶರಣಮ್ಮನೂ ಅವಳ ಶಿಷ್ಯೆಯೂ ಹಿಂದುಳಿದರು. ಶರಣಮ್ಮನು ಚತರಕ್ಕೆ ಬಂದು ಕೆಲವೇ ದಿವಸಗಳಾಗಿದ್ದರೂ ಸಣ್ಣಪುಟ್ಟ ಬೇನೆಗಳಿಗೆ ಔಷಧವನ್ನು ಕೊಟ್ಟು ಎಷ್ಟೋ ಜನರ ಆದರಕ್ಕೆ ಪಾತ್ರಳಾಗಿದ್ದಳು. ಒಕ್ಕಲಿಗರ ಬೆರಳಿಗೆ ಕುಡುಗೋಲು ತಾಕಿರಲಿ, ದ್ವಂದ್ವಯುದ್ಧದಲ್ಲಿ ಗಾಯಗೊಂಡ ಸೈನಿಕರ ಗಾಯಗಳಿರಲಿ, ಆಕೆಯು ಗಿಡಮೂಲಿಕೆಗಳಿಂದ ಬೇಗನೆ ವಾಸಿಮಾಡುವವಳೆಂದು ಹೆಸರು ಗಳಿಸಿದ್ದಳು.

ಎಲ್ಲರೂ ಊರುಬಿಟ್ಟರೂ ಅವಳು ಹೋಗಲೊಲ್ಲಳು. ಆಗ ಭದ್ರನಾಯಕನು ಬಂದು ''ಅಮ್ಮಾ ಶತ್ರುಗಳು ಬಂದು ನಿಮ್ಮ ಮೇಲೆ ಬಲಾತ್ಕಾರ ಮಾಡಿದರೆ, ನಿಮ್ಮ ಜಡೆಯೂ ಮಡಿಯ ಕಂತೆಗಳೂ ಅಡ್ಡಬರಲಾರವು'' ಎಂದು ಉಪದೇಶಿಸಿದನು.

''ಯಜಮಾನರೇ, ಶರಣರಿಗೆ ಶತ್ರುಗಳಾರು, ಮಿತ್ರರಾರು? ನನ್ನ ಗುರುವಿನ ಕೃಪೆಯಿಂದ, ನಾನು ಎಂತಹ ಗಾಯಗಳನ್ನೂ ಮಾಯಿಸಬಲ್ಲೆ ಎಂದು ಶತ್ರುಗಳಿಗೆ ತಿಳಿದರೆ, ಅವರು ನನ್ನೊಡನೆ ಉದ್ಧತರಾಗಿ ವರ್ತಿಸಬಲ್ಲರೆ?''

''ಹಾಗಾದರೆ ನೀನು ನಮ್ಮ ಸೈನ್ಯವಿದ್ದಲ್ಲಿಯೇ ಬರುವಿಯೇನು?'' ಎಂದು ಭದ್ರನಾಯಕನು ಕೇಳಿದ್ದಕ್ಕೆ, ಹಾಗೆಯೇ ಆಗಲೆಂದು ಆಕೆ ತನ್ನ ಜೋಳಿಗೆಯನ್ನು ಎತ್ತಿಕೊಂಡು, ಶಿಷ್ಯೆಯೊಡನೆ ಭದ್ರನಾಯಕನ ಮನೆಗೆ ಹೊರಟು ಬಂದಳು.

ಚತರದ ಸಮೀಪದಲ್ಲಿಯೇ ಹಾಳುಬಿದ್ದ ಒಂದು ಕೋಟೆಯಿದ್ದಿತು. ಅದು ಪರ್ವತದ ಮೇಲೆ ಇದ್ದುದರಿಂದ, ಅಲ್ಲಿ ಕುಳಿತು ನೋಡಿದರೆ ಸುತ್ತಲೂ ನಾಲ್ಕಾರು ಗಾವುದಗಳ ಪ್ರದೇಶವು ಕಾಣುತ್ತಿತ್ತು, ಇತ್ತ ಬಯಲಲ್ಲಿ ನಿಂತು ದೂರದಿಂದ ನೋಡಿದರೆ, ಮರದ ತುದಿಗೆ ಇದ್ದ ಗರುಡನ ಗೂಡಿನಂತೆ, ಆ ಕೋಟೆಯು ಕಾಣುತ್ತಿದ್ದುದರಿಂದ, ಅದಕ್ಕೆ ವಾಡಿಕೆಯಾಗಿ 'ಗರುಡನ ಗೂಡು' ಎಂದೂ, ಅದು ಅಭೇದ್ಯವಾಗಿದ್ದುದರಿಂದ 'ಅಸಾಧ್ಯ ದುರ್ಗ' ಎಂದೂ ಅದನ್ನು ಕರೆಯುತ್ತಿದ್ದರು. ಕೋಟೆಯ ಎತ್ತರವಾದ ಗೋಡೆಗಳಲ್ಲಿಯ ದೊಡ್ಡ ಕಲ್ಲುಗಳು ನೂರಾರು ವರ್ಷಗಳ ಮಳೆಯನುಂಡು ಕಪ್ಪಾಗಿ ಹೋಗಿದ್ದವು. ದೂರದಿಂದ ನೋಡಿದಾಗ, ಆನೆಗಳ ಸಾಲುಗಳ ಮೇಲೆ ಸಾಲುಗಳನ್ನು ನಿಲ್ಲಿಸಿರುವರೊ ಎಂಬಂತೆ ಕಾಣುತ್ತಿದ್ದವು.

ಕೋಟೆಯ ಪೂರ್ವದಿಕ್ಕಿನಲ್ಲಿ ಮಹತ್ತರವಾದ ಹೆಬ್ಬಾಗಿಲು. ಅಲ್ಲಿಂದ ಒಳಗೆ ಪ್ರವೇಶಿಸಿ ನೋಡಿದರೆ ಅಲ್ಲಿ ವರ್ತುಲಾಕಾರದ ಮತ್ತೊಂದು ಕೋಟೆಯಿದ್ದಂತೆ ಕಾಣುತ್ತಿತ್ತು. ಆ ಒಳಕೋಟೆಯಲ್ಲಿಯೆ ಮನೆಗಳೂ ಹೆಮ್ಮರಗಳೂ ಉಗ್ರಾಣ-ಶಸ್ತ್ರಾಗಾರಗಳೂ ಇದ್ದುವು. ಈ

ಒಳಕೋಟೆಯ ಗೋಡೆಗೂ ಹೊರ ಗೋಡೆಗೂ ನಡುವೆ ಹತ್ತು ಮಾರಿನಷ್ಟು ಅಂತರವಿದ್ದಿತು.

ಯದುರಾಜನು ತನ್ನ ಸೇನೆಯನ್ನು ಕಟ್ಟಿಕೊಂಡು, ಈ ಅಸಾಧ್ಯದುರ್ಗದಲ್ಲಿ ಇರಹೋದನು. ಮೈಸೂರು ದಿಕ್ಕಿಗಿದ್ದ ಕೊತ್ತಳದ ಮೇಲೆಯೇ ಅವನು ತನ್ನ ಶಿಬಿರವನ್ನು ಮಾಡಿಕೊಂಡು, ಶತ್ರುಗಳು ಬರುವ ಮಾರ್ಗವನ್ನು ನಿರೀಕ್ಷಿಸುತ್ತಿದ್ದನು. ಸಮಸ್ತವಾದ ಯುದ್ಧದ ಭಾರವು ಅವನ ಮೇಲೆ ಬಿದ್ದಿತ್ತು. ಶಾಂತರಾಜನ ಸೈನ್ಯವು ಮೈಸೂರನ್ನು ಬಿಟ್ಟು ಚತರಕ್ಕೆ ಹೊರಟಿತೆಂಬ ವರ್ತಮಾನವು ರಾಜಪಕ್ಷದವರಿಗೆ ತಿಳಿದ ಕೂಡಲೆ, ಅವರೆಲ್ಲರೂ ಆಲೋಚನೆಯನ್ನು ನಡೆಯಿಸಿದರು. ಅವರ ಸಭೆಯಲ್ಲಿ ನಡೆದ ವರ್ತಮಾನವು ಗೌಪ್ಯವಾಗಿದ್ದುದರಿಂದ ಸದ್ಯಕ್ಕೆ ನಾವು ಏನನ್ನೂ ಹೇಳುವಂತಿಲ್ಲ. ಕಾದಂಬರಿಕಾರನಿಗೆ ಬೇಕಾದಲ್ಲಿ ಪ್ರವೇಶವಿದ್ದರೂ ಆ ಸಭೆಯಲ್ಲಿ ನಡೆದ ವರ್ತಮಾನವನ್ನು ಯಾರಿಗೂ ಹೇಳುವದಿಲ್ಲವೆಂದು ನಾವು ಯದುರಾಜನಿಗೆ ವಚನವನ್ನು ಕೊಟ್ಟಿದ್ದೇವೆ!

ಇತ್ತ ಯುದ್ಧಕ್ಕೆ ಹೊರಟಿದ್ದ ಶಾಂತರಾಜನ ಬಳಿಗೆ ಮಾರನಾಯಕನು ಬಂದು, "ಶಾಂತರಾಜ, ನೀವು ಪರಾಕ್ರಮಿಗಳು, ಸರಿ. ಆದರೂ ಈಗಿನ ಯುದ್ಧದ ಪ್ರಸಂಗವು ಪರರಾಜರೊಡನೆ ನಡೆಸುವ ಯುದ್ಧಗಳಿಗಿಂತಲೂ ಭಿನ್ನವಾದುದು. ಪರರಾಜರ ಸೇನೆಗೆ ನಮ್ಮ ದೇಶದಲ್ಲಿ ಅನುಕೂಲತೆಗಳಿರುವುದಿಲ್ಲ. ಈ ಪ್ರಸಂಗದಲ್ಲಿ ನೋಡಿರಿ, ಶತ್ರುಗಳಿಗೇ ಹೋದಲ್ಲಿ ಅನುಕೂಲತೆ. ನಮಗೆ ಮಾತ್ರ ನಮ್ಮ ಪ್ರಾಂತದಲ್ಲಿಯೇ ಪ್ರತಿಕೂಲತೆ. ಚತರದಲ್ಲಿಯೂ ದೊಡ್ಡ ಸೇನೆಯು ಕೂಡಿದಂತೆ ತಿಳಿಯುತ್ತದೆ. ವಿಜಯನಗರದಿಂದ ಬಂದವನಾದ ಯದುರಾಜನೆಂಬ ಹುಡುಗನು ಶತ್ರುಗಳ ಸೇನಾಪತಿಯಾಗಿದ್ದಾನಂತೆ. ಅವನು ಯುದ್ಧ ಕಲಾಪಟುವೂ ಸಾಹಸಿಯೂ ಆಗಿರುವನೆಂದು ಖ್ಯಾತಿಯಿದೆ. ಪರಿಸ್ಥಿತಿಯನ್ನು ಚೆನ್ನಾಗಿ ಅರಿತುಕೊಂಡು ಯುದ್ಧವನ್ನು ಮಾಡಬೇಕು" ಎಂದು ಹೇಳಿದನು.

"ನಾಯಕರೇ, ನೀವು ಯುದ್ಧದ ಚಿಂತೆಯನ್ನು ಬಿಡಿರಿ. ಬಂಡುಗಾರರ ಸೇನೆಯೆಂದರೇನು ಮಾತು? ಹುಂಬರಾದ ಅನೇಕ ಜನ ಒಕ್ಕಲಿಗರು ರೆಂಟೆ ಹೊಡೆಯುವದನ್ನು ಬಿಟ್ಟು ಯುದ್ಧಕ್ಕೆ ನಿಂತರೆ, ಧುರೀಣರಾದ ಸೈನಿಕರ ಮುಂದೆ ಅವರ ಆಟ ನಡೆದೀತೆ? ಆ ಪಕ್ಷದ ಅಧಿಕಾರಿಗಳಲ್ಲಿ ಯಾರೂ ನನಗೆ ಅರಿಯದವರಲ್ಲ. ಇದ್ದುಬಿದ್ದ ಯದುರಾಜನ ಪ್ರಶಂಸೆಯನ್ನು ಎಲ್ಲರೂ ಮಾಡುತ್ತಾರೆ. ಇತ್ತ ನಾವೇನೂ ಬಳೆಗಳನ್ನಿಟ್ಟು ಕೊಂಡಿಲ್ಲ. ಆದರೂ ನಿಮ್ಮ ಎಚ್ಚರಿಕೆಯ ಮಾತು ಯಥಾರ್ಥವಾದುದೇ" ಎಂದು ಆಢ್ಯತೆಯಿಂದ ಉತ್ತರಿಸಿ, ಹೊರಟು ಬಂದನು.

ಕೆಲವು ದಿನಗಳ ಪ್ರಯಾಣ ಹೊರಟು, ಶಾಂತರಾಜನ ಸೇನೆಯು ಚತರದ ಹತ್ತಿರಕ್ಕೆ ಬಂದಾಗ ರಾತ್ರಿಯಾಗಿದ್ದಿತು. ಪ್ರಾತಃಕಾಲಕ್ಕೆ ಆ ಗ್ರಾಮವನ್ನು ಹೊಕ್ಕು ಸುಲಿದು, ಆಮೇಲೆ ಅಸಾಧ್ಯದುರ್ಗಕ್ಕೆ ಮುತ್ತಿಗೆ ಹಾಕಬೇಕೆಂದು ಶಾಂತರಾಜನು ಯೋಚಿಸುತ್ತ ಮಲಗಿಕೊಂಡನು. ಮರುದಿನ ಸೈನ್ಯದವರು ಚತರಕ್ಕೆ ಬಂದು ನೋಡುತ್ತಾರೆ—ಅಲ್ಲಿ ಒಂದು

ಬೆಕ್ಕಿನ ಪಿಳ್ಳೆಯು ಕೂಡ ಇಲ್ಲ! ಕೊಳ್ಳೆ ಹೊಡೆಯಬೇಕೆಂದಿದ್ದ ಅವರಿಗೆ ಬಹಳೇ ನಿರಾಸೆಯಾಯಿತು. ಇಷ್ಟೇ, ಸೈನಿಕರಿಗೆ ಇರಲಿಕ್ಕೆ ಅನಾಯಾಸವಾಗಿ ಮನೆಗಳಾದುವು.

ಹಾಗಿದ್ದರೆ ಅಸಾಧ್ಯ ದುರ್ಗದ ಕೋಟೆಗೆ ಮುತ್ತಿಗೆಯನ್ನು ಹಾಕಬೇಕು. ಅದನ್ನು ಕೆಡಹುವುದಂತೂ ಶಕ್ಯವಿಲ್ಲ. ಆದ್ದರಿಂದ ವೈರಿಗಳೇ ಮುಂದೆ ಏನು ಮಾಡುತ್ತಾರೆ ಎಂಬುದಾಗಿ ಕಾಯುವುದು ವಾಸಿಯೆಂದು ಶಾಂತರಾಜನ ಸೈನ್ಯಾಧಿಕಾರಿಗಳು ಸೂಚಿಸಿದರು.

ಮೂರು ನಾಲ್ಕು ದಿನ ತಡೆದು ನೋಡಿದರೂ ಶತ್ರುಗಳ ಸುಳಿವೇ ಇಲ್ಲ. ಬಹುಶಃ ಯದುರಾಜನ ಸೈನ್ಯವು ಚಿಕ್ಕದು, ಅದಕ್ಕೇ ಆತ ಕೋಟೆಯೊಳಗೆ ಕುಳಿತಿದ್ದಾನೆ. ಆದ್ದರಿಂದ ಕೋಟೆಯ ಅಗಸೆಯ ಬಾಗಿಲನ್ನಾದರೂ ಕೆಡಹಿ, ತಾವು ಒಳನುಗ್ಗಿ ಅವರನ್ನು ಸದೆಬಡೆಯಬೇಕೆಂದು ಶಾಂತರಾಜನು ಆಲೋಚಿಸಿ, ಕೋಟೆಯತ್ತ ಸಾಗಿಬಂದನು.

ಯದುರಾಜನು ವಜ್ರಾಂಗರಾದ ಐನೂರು ಜನ ಬೇಡಬಂಟರನ್ನು ಕೂಡಿಕೊಂಡು, ಕೋಟೆಗೆ ಬರುವ ಏರಿಕೆಯ ಮಾರ್ಗದಲ್ಲಿದ್ದ ಇಕ್ಕಟ್ಟಿನ ಸ್ಥಳದಲ್ಲಿ ಶತ್ರುಗಳನ್ನು ಎದುರಿಸಲೆಂದು ನಿಂತುಕೊಂಡನು.

ಉಭಯ ಸೇನೆಗಳು ಮೋರೆಗೆ ಮೋರೆ ಹಚ್ಚಿ ನಿಂತಕೂಡಲೇ ಬರ್ಚಿ, ಕೋಲುಗಳ ಭಯಂಕರವಾದ ಚುಚ್ಚಾಟದ ಯುದ್ಧವು ನಡೆಯಿತು. ಆ ಭಯಂಕರವಾದ ಮನುಷ್ಯ ಹಿಂಸೆಯು ಮೂರು ನಾಲ್ಕು ತಾಸು ಅಖಂಡವಾಗಿ ನಡೆಯಿತು. ಕಡೆಗೆ ಯದುರಾಜನು ಮೃಗರಾಜನಂತೆ ಗರ್ಜಿಸಿ, ''ಹೊಡೆ, ಹೊಡೆ'' ಎಂದು ಕೂಗಿ, ಹಿಂದು ಮುಂದು ನೋಡದೆ ವೈರಿಗಳ ಪಡೆಯಲ್ಲಿ ಮುನ್ನುಗ್ಗಿದನು. ಆಗ ಅವನ ಬೇಡಬಂಟರೆಲ್ಲರೂ ರಭಸದಿಂದ ಅವನನ್ನು ಹಿಂಬಾಲಿಸಿದರು. ಉದ್ರಿಕ್ತರಾಗಿದ್ದ ಅವರ ಅಸಹ್ಯವಾದ ಶೂಲಗಳ ಹೊಡೆತಕ್ಕೆ ಅಗಣಿತರಾದ ಶತ್ರುಭಟರು ಬಿದ್ದು ಹೋದರು. ಈ ಹಾನಿಯಲ್ಲದೆ, ತುಸು ದೂರದ ಎತ್ತರದ ಸ್ಥಳದಲ್ಲಿ ನಿಂತಿದ್ದ ರಾಜಪಕ್ಷದ ಬಿಲ್ಲಾಳುಗಳ ಕೂರ್ಗಣೆಗಳಿಂದಲೂ ಶತ್ರುಪಕ್ಷದಲ್ಲಿ ಅನೇಕ ಜನ ವೀರರು ಯಮಪಟ್ಟಣದ ಮಾರ್ಗವನ್ನು ಹಿಡಿದರು. ಬೇರೊಂದು ಬದಿಯಲ್ಲಿದ್ದ ವಾಸುದೇವಯ್ಯನ ಭಟರು ಶತ್ರುಗಳ ಮೇಲೆ ಬಂಡೆಗಳನ್ನು ನೂಕಿದರು.

ಹೀಗೆ ಹಲವು ಪರಿಯಿಂದ ಬಾಧೆಪಟ್ಟು, ಶಾಂತರಾಜನ ಸೇನೆಯವರು ಹಿಂದಕ್ಕೆ ಸರಿದರು. ಆ ವೀರರು ಒಳ್ಳೆಯ ಸಾಹಸದಿಂದ ಕಾದಿದರೂ ತಾನು ಇಳಿವಿನ ಮೇಲೆ ಇದ್ದುದರಿಂದಲೂ, ಬೇರೆ ಬೇರೆ ದಿಕ್ಕುಗಳಿಂದ ಮೂರು ಸೈನ್ಯಗಳು ಮುಗಿಬಿದ್ದುದರಿಂದಲೂ ಶಾಂತರಾಜನು ತನ್ನ ಸೈನಿಕರಿಗೆ ತಡೆದು ನಿಲ್ಲಲು ಆಜ್ಞಾಪಿಸಿದನು.

ಆ ಸಮಯದಲ್ಲಿಯೆ ರಾಜಪಕ್ಷದವರಲ್ಲಿ ಹಾಹಾಕಾರವೆದ್ದಿತು. ನಂಜರಾಜನು ಜೀವದ ಹಂಗುದೊರೆದು ಭಲ್ಲೆಯನ್ನು ಚುಚ್ಚುತ್ತ ಶತ್ರುಸೇನೆಯ ಮೇಲೆ ಸಾಗಿ ಹೋದಾಗ ಅವನ ಎದೆಯ ಬಲಭಾಗದಲ್ಲಿ ಶತ್ರುಗಳ ಬರ್ಚಿಯು ಒಳಿತಾಗಿ ತಗುಲಿದುದರಿಂದ, ಅವನು ನೆಲಕ್ಕೆ ಬಿದ್ದುಬಿಟ್ಟನು. ಸಂಗಡಲೇ ಬೇಡಬಂಟರು ಅವನನ್ನು ಎತ್ತಿಕೊಂಡು ಹಿಂಬದಿಯಲ್ಲಿ ತಂದಿರಿಸಿದರು. ಅದೊಳ್ಳೆಯ ಘಾತಕವಾದ ಪೆಟ್ಟೆಂದು ಬಲ್ಲವರು ಹೇಳಲು ಸೈನಿಕರೆಲ್ಲರೂ

ದುಃಖಿತರಾಗಿ ಹಾಹಾಕಾರವನ್ನೆಬ್ಬಿಸಿದರು. ಅಷ್ಟರಲ್ಲಿ ಯದುರಾಜನು ತನ್ನ ಸೈನ್ಯವನ್ನು ಮರಳಿ ಕೋಟೆಯೊಳಗೆ ತೆಗೆದುಕೊಂಡು ಹೋದನು.

ಯದುರಾಜನು ಅಂಜಿ ಕೋಟೆಯನ್ನು ಸೇರಿಕೊಂಡನೆಂದು ನಂಬಿ, ಶಾಂತರಾಜನು ತನ್ನ ಸೇನೆಯನ್ನು ಕಟ್ಟಿಕೊಂಡು ಕೋಟೆಯ ಕಡೆಗೆ ನಡೆದನು.

ಅಗಸೆಯ ಎರಡೂ ಬಾಗಿಲುಗಳು ಹೆಮ್ಮರಗಳ ದಪ್ಪವಾದ ಹಲಗೆಗಳಿಂದ ಮಾಡಿದುವು. ದಪ್ಪವಾದ ಕಬ್ಬಿಣದ ಕಂಬಗಳನ್ನು ಜಡಿದು, ಅವುಗಳನ್ನು ಬಲಕಟ್ಟಾಗಿ ಮಾಡಿದ್ದರು. ನೂರಾರು ಕೊಡಲಿ, ಹಾರೆ, ಸೂನ್ನೆ ಮುಂತಾದವುಗಳ ಪ್ರಹಾರಕ್ಕೆ ಅವು ಈಡಾಗಲಿಲ್ಲ. ಕಡೆಗೆ ಆ ಭವ್ಯವಾದ ಬಾಗಿಲುಗಳು ಮುರಿದುಹೋಗಿ, ಕೋಟೆಯಲ್ಲಿ ಸೇರಲು ಅವಿಚ್ಛಿನ್ನವಾದ ಮಾರ್ಗವಾಯಿತು. ಕೋಟೆಯಲ್ಲಿದ್ದವರು ಶತ್ರುಗಳಿಗೆ ಎಳ್ಳಷ್ಟಾದರೂ ಪ್ರತಿಬಂಧವನ್ನು ಮಾಡಲು ಯತ್ನಿಸಲಿಲ್ಲ. ಅಲ್ಲದೆ, ಇವರೇನನ್ನು ಮಾಡುತ್ತಿರುವರೆಂಬುದನ್ನು ಒಬ್ಬನಾದರೂ ಹಣೆಯಿಕ್ಕಿ ನೋಡಲಿಲ್ಲ.

ಬಾಗಿಲು ಮುರಿದಕೂಡಲೇ, ಶತ್ರುಗಳು ಜೋರಾಗಿ ಜಯಜಯಕಾರ ಮಾಡಿದರು. ಇನ್ನು ಮೇಲೆ ಕೋಟೆಯಲ್ಲಿ ಹೊಕ್ಕು ಚತರದ ಸೈನ್ಯವನ್ನು ನುಚ್ಚು ನುಚ್ಚಾಗಿ ಕಡಿದು ಹಾಕುವೆನೆಂಬ ಹೆಮ್ಮೆಯಿಂದ ಶಾಂತರಾಜನು ಒಳಹೊಕ್ಕು ನೋಡುತ್ತಾನೆ, ಅಲ್ಲಿ ಮತ್ತೊಂದು ಕೋಟೆ! ಆ ಒಳಕೋಟೆಯ ಬಾಗಿಲು ಚಿಕ್ಕದಿದ್ದುದರಿಂದ, ಅವರು ಬೇಗನೆ ಮುರಿದು ಹಾಕಿ ಅದರೊಳಗೆ ಸೇರಿದರು. ಆದರೆ ಅಲ್ಲೇನಿದೆ? ಮಂಡಲಾಕಾರವಾಗಿ, ಬರಿಯದಾದ ಮನೆಗಳ ಸಾಲುಗಳೂ ರಾತ್ರಿಯ ಮಬ್ಬಿನಲ್ಲಿ ಅಂಜಿಕೆಗೊಳಿಸುವ ಹೆಮ್ಮರಗಳೂ ಕಂಡುವೇ ಹೊರತಾಗಿ, ಮನುಷ್ಯರ ಸುಳಿವೇ ಇಲ್ಲ! ಎರಡು–ಮೂರು ಸಾವಿರ ಜನರು ಒಳಗೆ ಇದ್ದರೂ ಒಬ್ಬನೂ ಕಾಣದಿರುವದರ ಅರ್ಥವು ಶಾಂತರಾಜನಿಗೆ ಕಂಡುಬರಲಿಲ್ಲ. ಕ್ರಮೇಣ ರಾತ್ರಿ ಹೆಚ್ಚಿದುದರಿಂದ ಅಗಸೆಯ ಬಾಗಿಲಿಗೆ ಕಾವಲುಗಾರರು ಕಾಯಲಿಕ್ಕೆಂದು ಬಂದು ನೋಡುತ್ತಾರೆ, ಬಾಗಿಲು ಹೊರಗಿನಿಂದ ಇಕ್ಕಿದೆ!

ಇನ್ನೇನು ಮಾಡುವುದು? ಹೊರಗಿನ ಮಗ್ಗುಲಲ್ಲಿ ಸಾವಿರಾರು ಜನರ ಬಾಯಿ ಕೇಳುತ್ತಲಿತ್ತು. ಹೀಗಿಲ್ಲದಿದ್ದರೆ ಶಾಂತರಾಜನು ಮುಚ್ಚಿದ ಆ ಬಾಗಿಲನ್ನೂ ಮುರಿಯಿಸಿ ಬಿಡುತ್ತಿದ್ದನು. ಸೈನಿಕರೋ ಯುದ್ಧದ ಶ್ರಮದಿಂದ ದಣಿದು ಹೋಗಿದ್ದರು. ಮುಂದಿನ ವಿಚಾರಗಳೆಲ್ಲವನ್ನೂ ಬದಿಗಿರಿಸಿ ಎಲ್ಲರೂ ಮಲಗುವ ಉದ್ಯೋಗಕ್ಕೆ ತೊಡಗಿದರು. ಅಲ್ಲಿದ್ದ ಮನೆಗಳಲ್ಲಿ ಹೊಕ್ಕು, ಹಾಸಿಗೆ ಹೊದಿಕೆ ಯಾವದನ್ನೂ ಗಣನೆಗೆ ತಾರದೇ, ನೆಲದ ಮೇಲೆ ಉರುಳಿದಲ್ಲಿಯೇ ನಿದ್ರಾವಶರಾದರು.

ಶತ್ರುಗಳನ್ನು ಹೀಗೆ ಹಿಡಿದು ಹಾಕುವದೆಂದು ಯದುರಾಜನು ತೂಕ ಹಾಕಿದುದು ಕೈಗೂಡಿಬಿಟ್ಟಿತು. ಶಾಂತರಾಜನನ್ನು ಮೋಸಗೊಳಿಸಿ, ಕೋಟೆಯಲ್ಲಿ ಹೊಕ್ಕಂತೆ ತೋರಿಸಿ, ತಾನು ತನ್ನ ಸೈನ್ಯವೆಲ್ಲವನ್ನೂ ಗುಪ್ತವಾದ ದ್ವಾರದಿಂದ ಹೊರಗೆತೆಗೆದು, ಕಾಯ್ದು ನಿಂತನು. ಒಳಕೋಟೆಗೂ ಒಂದು ಅಗಸೆಯ ಬಾಗಿಲು ಇದ್ದಿತಷ್ಟೆ. ತಲೆಬಾಗಿಲಿನ ಚೌಕಟ್ಟಿನಿಂದ ತುಸು ಅಂತರದ ಮೇಲೆ ಗೋಡೆಗಳಲ್ಲಿ ಒಂದು ಸಣ್ಣ ಸರಿಕನ್ನು ಮಾಡಿ, ಆ ಸರಿಕಿನಲ್ಲಿ ದೊಡ್ಡ

ಬಾಗಿಲಿನ ಪಡಕಿನಂತಹ ಪಡಕುಗಳನ್ನೇ ಒಳಗೆ ನೂಕಿ. ಯದುರಾಜನು ಅದು ಕಾಣದಂತೆ ಮಾಡಿಸಿದ್ದನು. ಮೊದಲಿದ್ದ ಬಾಗಿಲು ಮುರಿದು ಬಿದ್ದರೂ ಈ ಸರಿಕಿನಲ್ಲಿಯ ಕದಗಳನ್ನು ಹೊರಗೆಳೆದರೆ, ಅಗಸೆಯು ಮುಚ್ಚಿಹೋಗುವಂತೆ ಇತ್ತು, ಶತ್ರುಗಳು ಆ ಅಗಸೆಯಿಂದ ಒಳಗ ಹೋದ ಕೂಡಲೇ ಯದುರಾಜನು ಮೇಲೆ ಹೇಳಿದ ಕದಗಳನ್ನು ಜಾಗ್ರತೆಯಿಂದ ಸರಿಯಿಸಿ, ಅಗಸೆಯನ್ನು ಮುಚ್ಚಿಬಿಟ್ಟನು. ಶತ್ರುಗಳು ಹೀಗೆ ಕೋಟೆಯನ್ನು ಗೆದ್ದು ಆಕ್ರಮಿಸಿದೆವು ಎಂಬ ಹಿಗ್ಗಿನಲ್ಲಿರುವಾಗಲೇ, ತಾವು ಬಂದಿಗಳಾಗಿ ಒಳ ಕುಳಿತರು.

ಮುಖ್ಯ ಸೈನ್ಯವು ಹೀಗೆ ಸೆರೆ ಸಿಕ್ಕಮೇಲೆ, ಚತರಗ್ರಾಮದ ಹೊರಗಡೆ ಸಾಮಗ್ರಿಯನ್ನು ಕಾಯುತ್ತ ನಿಂತಿದ್ದ ಚಿಕ್ಕ ಪಡೆಯವರ ಮೇಲೆ ಕೃಷ್ಣರಾಜನು ಪಕ್ಕನೆ ಎರಗಿ, ಅವರನ್ನು ಸೋಲಿಸಿ, ಆ ಸಾಮಗ್ರಿಯೆಲ್ಲವನ್ನೂ ತನ್ನ ವಶಕ್ಕೆ ತೆಗೆದುಕೊಂಡನು ಆಗ ವಿಶೇಷ ಲಾಭವಾದದ್ದೆಂದರೆ ನೂರಾರು ಕುದುರೆಗಳು ದೊರೆತವು. ಗಿಡಗಿಡಗಳಿಗೆ ಕಟ್ಟಿದ ಆನೆಗಳು ಕೃಷ್ಣರಾಜನ ಆನೆಗಳಾಗಿ ಅಲ್ಲಿಯೇ ಯಥೇಚ್ಛವಾಗಿ ಮೇಯುತ್ತಿದ್ದವು.

ಮರುದಿವಸದ ಮುಂಜಾವದಲ್ಲಿ ಕೋಟೆಯಲ್ಲಿದ್ದವರು ಎದ್ದು ತಮ್ಮ ಅವಸ್ಥೆಯೇನಾಗಿದೆ ಎಂಬುದನ್ನು ಕಂಡುಕೊಳ್ಳುವುದಕ್ಕೆ ಕೊತ್ತಲಗಳನ್ನೇರಿ ನೋಡಲು, ಕೋಟೆಯ ಅಗಳತೆಯ ಆಚೆಯ ಮಗ್ಗುಲಿಗೆ ರಾಜಪಕ್ಷದವರು ಜನಜಾತ್ರೆಯಾಗಿ ನೆರೆದಿದ್ದರು. ಅವರಲ್ಲಿ ಮುಂಭಾಗದಲ್ಲಿದ್ದವರು, ಬಿಲ್ಲುಗಳನ್ನು ಹಿಡಿದುಕೊಂಡು ಕೋಟೆಯ ಮೇಲೆ ಕಂಡವರೆಲ್ಲರನ್ನು ಬಾಣಗಳಿಂದ ನೆಲಕ್ಕೆ ಕೆಡಹುತ್ತಿದ್ದರು. ಮಾಳಿಗೆಯ ಕಂಬಿಯ ಮೇಲೆ ಕುಳಿತ ಗುಬ್ಬಿಗಳನ್ನು ಗೊಲ್ಲರು ಹರಳೊಗೆದು ಕೊಲ್ಲುವಂತೆ, ಕೋಟೆಯ ಮೇಲೆ ಏರಿ ಬಂದವರನ್ನು ಈ ಬಿಲ್ಲುಗಾರರು ಕೊಂದರು.

ತಾವು ಮುತ್ತಿಗೆಯಲ್ಲಿ ಸಿಕ್ಕಿದುದು ನಿಶ್ಚಯವೆಂದು ತಿಳಿದ ಬಳಿಕ ಶಾಂತರಾಜನೇ ಮುಂತಾದ ಮಾರನಾಯಕನ ಭಟರು ಕೋಟೆಯ ಸ್ಥಿತಿಯನ್ನು ಶೋಧಿಸಿ ನೋಡಿದರು. ಆದರೆ ಪಾರಾಗಿ ಹೋಗುವ ಮಾರ್ಗವಾವುದೂ ಕಾಣಲಿಲ್ಲ. ಮಧ್ಯಾಹ್ನದ ಹೊತ್ತು, ಸಾವಿನ ಭಯಕ್ಕಿಂತಲೂ ಹೊಟ್ಟೆಯ ವಿಚಾರವು ಅವರ ಎದೆಯ ಮೇಲೆ ಕುಳಿತಿತು. ಎರಡು ಸಾವಿರ ಜನಕ್ಕೆ ಕೂಳು ಎಲ್ಲಿ?

ಸಂಜೆಯಾಗತೊಡಗಿತು. ಚತರದಲ್ಲಿ ತಮ್ಮ ಸಾಮಗ್ರಿಯನ್ನು ಕಾಯುವದಕ್ಕೆ ನಿಯಮಿಸಿದ ಸೈನ್ಯದವರು ಯಾವ ಯುಕ್ತಿಯಿಂದಾದರೂ ತಮಗೆ ಅನ್ನವನ್ನು ಮುಟ್ಟಿಸುವರೆಂದು ಸೆರೆಸಿಕ್ಕವರು ನಂಬಿದರು. ಯಾರೂ ಅವರ ಉಸಾಬರಿಗೆ ಬರಲಿಲ್ಲ. ಇನ್ನೇನು ಗತಿ? ಎಂದು ಒಬ್ಬನ ಮೋರೆ ಇನ್ನೊಬ್ಬನು ನೋಡುತ್ತ, ಅತ್ತಿಯ ಕಾಯಿ, ನೇರಲ ಕಾಯಿಗಳನ್ನೂ, ಗೊರಜಿಪಲ್ಲೆ ಗೋಳಿಪಲ್ಲೆ ಮುಂತಾದವುಗಳ ತೊಪ್ಪಲವನ್ನೂ ತಿಂದು, ಯಥೇಚ್ಛವಾಗಿ ನೀರನ್ನು ಕುಡಿದು ಹೊಟ್ಟೆಗಳನ್ನು 'ಡಮಡಮ' ಮಾಡಿಕೊಂಡು ಕುಳಿತರು.

ಮರುದಿನವೇ ಶಾಂತರಾಜನು ತಾನು ಶರಣಾಗತನಾಗಿರುವೆನೆಂದು ಸೂಚಿಸಲು ಬಿಳಿಯ ಪತಾಕೆಯನ್ನು ಅಗಸೆಯ ಬಾಗಿಲಿಗೆ ಏರಿಸಿದನು. ಅವನ ಇಬ್ಬರು ಅಧಿಕಾರಿಗಳು

ಸೂಲೇಣಿಗಳಿಂದ ಕೆಳಗಿಳಿದು ಬಂದರು. ಯದುರಾಜನು ಹಾಕಿದ ಎಲ್ಲ ಕರಾರುಗಳಿಗೂ ಒಪ್ಪುವದಕ್ಕೆ ಅವರು ಸಿದ್ಧರಾಗಿದ್ದರು.

ಈ ಚಮತ್ಕಾರವಾದ ವಿಜಯದ ಸುದ್ದಿಯು ತನ್ನಿಂದ ತಾನೇ ನಾಲ್ಕೂ ಕಡೆಗೆ ಹಬ್ಬಿತು! ರಾಜಪಕ್ಷದ ಅಭಿಮಾನಿಗಳು ಮೈಸೂರು ಮತ್ತಿತರ ಕಡೆಗಳಲ್ಲಿ ಗುಟ್ಟಾಗಿ ಸಕ್ಕರೆಯನ್ನು ಹಂಚಿದರು. ದೇವರಿಗೆ ಕಾಯಿ ಒಡೆಯಿಸಿ, ಮಂಗಳಾರತಿ ಮಾಡಿಸಿದರು. ಚತರದ ಗ್ರಾಮನಿವಾಸಿಗಳು ಅದೆಲ್ಲೆಲ್ಲಿಗೆ ಹೋಗಿ ಅಡಗಿಕೊಂಡಿದ್ದರೋ, ಕೂಡಲೇ ಮತ್ತೆ ಬಂದುಬಿಟ್ಟರು. ಊರನ್ನು ತಳಿರು–ತೋರಣ, ಸಾರಣೆ–ಕಾರಣೆಗಳಿಂದ ಸಿಂಗರಿಸಿದರು. ವಿಜಯಧ್ವಜವನ್ನು ಮುಂದಿರಿಸಿಕೊಂಡು, ವಿಜಯೋತ್ಸಾಹದಿಂದ ಬರುತ್ತಲಿದ್ದ ವೀರ ಪರಿವಾರಕ್ಕೆ, ಭದ್ರನಾಯಕನ ಪ್ರೌಢೆಯಾದ ಹೆಂಡತಿಯು ಸುವಾಸಿನಿಯರಿಂದೊಡಗೂಡಿ ಆರತಿಯನ್ನು ಬೆಳಗಿದಳು.

☆ ☆ ☆ ☆

ಆದರೆ ರಾಜಪಕ್ಷದ ನಿಯಾಮಕರಲ್ಲಿ ಈ ಆನಂದದ ಜೊತೆಗೆ ವಿಷಾದವೂ ಕೂಡಿತ್ತು. ರಾಜಪಕ್ಷವನ್ನು ಅಸ್ತಿತ್ವದಲ್ಲಿ ತಂದು, ಅವಿಶ್ರಾಂತ ಶ್ರಮದಿಂದ ಅದನ್ನು ಬೆಳೆಯಿಸಿದವನಾದ ನಂಜರಾಜ ಬಹದ್ದರನು ಗಾಯವನ್ನು ತಾಳಿ, ಹಾಸಿಗೆಯನ್ನು ಹಿಡಿದಿದ್ದನು. ಭಯಂಕರವಾದ ಕ್ಷತವಾದುದರಿಂದ ಅವನಿಗೆ ಪ್ರಜ್ಞೆಯಿರಲಿಲ್ಲ. ಅವನನ್ನು ಶರಣಮ್ಮನ ಆಧೀನತೆಗೆ ಕೊಟ್ಟು, ಭದ್ರನಾಯಕನ ತೊಟ್ಟಿಯ ಒಂದು ಭಾಗದಲ್ಲಿ ಇಟ್ಟಿದ್ದರು. ಶರಣಮ್ಮನ ಔಷಧೋಪಚಾರಗಳು ವಿಲಕ್ಷಣವಾದುವುಗಳೆಂದೇ ಅವನು ಇಷ್ಟರವರೆಗೆ ಬದುಕಿ ಉಳಿದಿದ್ದನು.

ಎಂಟು ದಿನಗಳಾದ ಮೇಲೆ ಅವನಿಗೆ ಪ್ರಜ್ಞೆಯು ಬಂದಿತು. ಆದರೂ ಮಾತನಾಡುವ ಶಕ್ತಿಯಿರಲಿಲ್ಲ. ಯುದ್ಧದ ಸಮಾಚಾರವೇನೆಂದು ಅವನು ಕ್ಷೀಣ ಸ್ವರದಲ್ಲಿ ಕೇಳಿದ್ದಕ್ಕೆ, ಅವಳು ರಾಜಪಕ್ಷಕ್ಕೆ ಜಯ ಸಿಕ್ಕು ಶಾಂತರಾಜನು ಬಂದಿಯಾಗಿರುವನೆಂದು ಹೇಳಿದಳು.

''ಶರಣಮ್ಮಾ, ನಿಮ್ಮ ಬಾಯಿಗೆ ಸಕ್ಕರೆ ಬೀಳಲಿ. ಈ ಆನಂದದ ವರ್ತಮಾನವನ್ನು ಹೇಳಿದುದುಕ್ಕೆ ನನ್ನ ಉಂಬಳಿಯ ಗ್ರಾಮುಗಳಲ್ಲಿಯ ಒಂದು ಗ್ರಾಮವನ್ನು ನಿಮಗೆ ಕೊಟ್ಟಿದ್ದೇನೆ. ದಯಮಾಡಿ ಯುದ್ಧದ ಪೂರ್ಣವೃತ್ತಾಂತವನ್ನು ಹೇಳಿರಿ'' ಎನ್ನುತ್ತ ಉದ್ವಿಗ್ನತೆಯಿಂದ ಚಟ್ಟನೆ ಎದ್ದು ಕುಳಿತನು.

ಆಗ ಶರಣಮ್ಮನು ಶಿಷ್ಯೆಯ ಸಹಾಯದಿಂದ ನಂಜರಾಜನನ್ನು ಮತ್ತೆ ಮಲಗಿಸಿ—

''ವೀರ ಶಿರೋಮಣಿಗಳೇ, ನೀವು ಹೀಗೆ ಆಯಾಸ ಮಾಡಿಕೊಳ್ಳತಕ್ಕದ್ದಲ್ಲ. ನೀವು ಎದ್ದು ಕೂಡಲಿಕ್ಕೆ ಇನ್ನೂ ನಾಲ್ಕು ದಿನ ಬೇಕು. ಸದ್ಯಕ್ಕೆ ನೀವು ಸುಮ್ಮನೆ ಮಲಗಿಕೊಂಡೇ ಇರಬೇಕು'' ಎಂದು ನುಡಿದಳು.

''ಒಳ್ಳೆಯದು ವೈದ್ಯರ, ನಿಮ್ಮಾಜ್ಞೆಯನ್ನು ಮೀರಲು ನನಗೆ ಅಧಿಕಾರವಿಲ್ಲ. ಶರಣಮ್ಮಾ ನೀವು ವೃದ್ಧೆಯಂತೆ ಕಾಣುತ್ತಿದ್ದರೂ ನಿಮ್ಮ ಸ್ವರವು ಯುವತಿಯರ ಸ್ವರದಂತೆ

ಮಂಜುಳವಾಗಿದೆಯಲ್ಲ, ನಿಮ್ಮ ದೇಹಪ್ರಕೃತಿಯು ಬಂಧುರವಾಗಿ ಕಾಣುತ್ತದೆ. ಇದು ಹೇಗೆ?''

''ಮಹಾನುಭಾವರೆ, ನಾನು ಆಜನ್ಮವ್ರತಸ್ಥಳಾದುದರಿಂದ, ನನ್ನ ಪ್ರಕೃತಿಯಲ್ಲಿ ವಯಸ್ಸಿನಿಂದ ಉಂಟಾಗತಕ್ಕ ವಿಕಾರಗಳಾಗಿಲ್ಲ. ಇದಲ್ಲದೆ ಹೆಣ್ಣು ಮಕ್ಕಳ ಸ್ವರವು ಜಾತ್ಯಾ ಕೋಮಲವಾದುದಲ್ಲವೆ?''

ಒಂದು ದಿನ ಮಧ್ಯಾಹ್ನದಲ್ಲಿ ನಂಜರಾಜನು ಮಲಗಿಕೊಂಡಾಗ, ಕನಸಿನಲ್ಲಿ ಬಡಬಡಿಸುತ್ತಿದ್ದನು. ಶರಣಮ್ಮನು ತನ್ನ ಕೋಣೆಯಲ್ಲಿ ಕುಳಿತು ಭಸ್ಮವನ್ನು ಲೇಪಿಸಿಕೊಳ್ಳುತ್ತಿದ್ದವಳು, ಅರ್ಧಕ್ಕೆಯೇ ಎದ್ದು ಬಂದಳು.

'ಮತ್ತೇನಾಯಿತೊ' ಎಂಬ ಚಿಂತೆಯಿಂದ, ನಂಜರಾಜನ ಕೈಹಿಡಿದು ನಾಡೀ ಪರೀಕ್ಷೆಯನ್ನು ಮಾಡಿ ಜ್ವರವೇನೂ ಇಲ್ಲವೆಂದು ತಿಳಿದು, ಅವನ ತಲೆಗೂದಲು, ಹಣೆಯ ಮೇಲೆ ಕೈಯಾಡಿಸಿ, ದಿನದಿನಕ್ಕೆ ಆರೋಗ್ಯವನ್ನು ಹೊಂದುತ್ತಿದ್ದ ಅವನ ಮುಖದ ಮೇಲಿನ ಶಾಂತ ಕಳೆಯನ್ನು ನೋಡುತ್ತ ನಿಂತಳು. ನಂಜರಾಜನಿಗೆ ಇನ್ನೂ ನಿದ್ದೆಯ ಗುಂಗು ಇದ್ದಿತು. ಸುಖಮಯವಾದ ಸ್ವಪ್ನದಿಂದ ಅವನ ಮುಖದ ಮೇಲೆ ನಗೆಯ ಜುಳುಕು ಬಂದಿತ್ತು. ತಾಪಸಿಗೆ ಆ ಮುಖದ ಶೋಭೆಯು ಮನೋಜ್ಞವಾಗಿ ಕಂಡುದರಿಂದ, ಅವಳಿಗೆ ಮತಿಭ್ರಮವಾಗಲು ಅತ್ತಿತ್ತ ನೋಡುತ್ತ ಮೆಲ್ಲಗೆ ಅವನ ಗಲ್ಲದ ಮೇಲೆ ಚುಂಬನವನ್ನಿತ್ತಳು.

ಇಂತಹ ಮೃದು ಮಧುರ ಸುಖಸ್ಪರ್ಶಕ್ಕೆ ನಂಜರಾಜನು ಮೆಲ್ಲನೆ ಕಣ್ದೆರೆದು ನೋಡಿದನು. ತತ್‌ಕ್ಷಣವೇ ಆ 'ತಾಪಸಿ'ಯು ಮಿಂಚಿನ ಚಪಲತೆಯಿಂದ ಭರ್ರನೆ ಓಡಿಹೋಗಿ ತನ್ನ ಕೋಣೆಯಲ್ಲಿ ಸೇರಿಕೊಂಡಳು. ಹೌದು. ಅವಳೇ ಇವಳು ಎನ್ನುತ್ತ ನಂಜರಾಜನು ಟಣ್ಣನೆ ಮಂಚದಿಂದ ಕೆಳಗಿಳಿದು ತಾಪಸಿಯನ್ನು ಬೆಂಗೊಂಡು ಅವಳ ಕೋಣೆಯಲ್ಲಿ ಧುಮುಕಿ, ''ಉಮಾ! ನನ್ನ ಮನೋರಮಾ'' ಎನ್ನುತ್ತ ಅವಳ ಕೈ ಹಿಡಿದನು. ಭಸ್ಮವನ್ನು ಲೇಪಿಸಿಕೊಳ್ಳದಿದ್ದುದರಿಂದ ಉಮೆಯ ಬಣ್ಣವೆಲ್ಲ ಬಯಲಾಗಿಬಿಟ್ಟಿದ್ದಿತು.

ವಾಚಕರೇ, ನಂಜರಾಜ–ಉಮೆಯರನ್ನು ಆಪ್ತ–ಕಥಾವಿನೋದದಲ್ಲಿ ಇರಗೊಟ್ಟು ನಾವು ಸ್ವಲ್ಪ ಮೈಸೂರಿಗೆ ಹೋಗಿ ಬರೋಣ ಬನ್ನಿರಿ. ಶಾಂತರಾಜನು ಹೇಗೂ ವಿಜಯಶಾಲಿಯಾಗಿ, ರಾಜಪಕ್ಷದವರನ್ನು ಸದೆಬಡೆದು ಬರುತ್ತಾನೆ. ಆಗ ತಾನು ದೇವಕಿಯನ್ನು ಬಲಾತ್ಕಾರದಿಂದೇ ಆಗಲಿ ಮದುವೆಯಾಗಿಬಿಟ್ಟರೆ ತನ್ನನ್ನು ಕೇಳುವವರು ಯಾರೂ ಇಲ್ಲ, ಮತ್ತು ಅದರಿಂದ ತನ್ನ ಪಟ್ಟವೂ ಭದ್ರವಾಗುವುದು' ಎಂಬ ಸುಖದಾಸೆಯಿಂದ ಮಾರನಾಯಕನು ಚತರದ ವರ್ತಮಾನಕ್ಕಾಗಿ ಕಾಯ್ದುಕೊಂಡು ಕುಳಿತಿದ್ದನು.

ಚತರದಿಂದ ಸುದ್ದಿಯನ್ನು ತೆಗೆದುಕೊಂಡು ರಾವುತನೇನೊ ಧಾವಿಸಿ ಬಂದನು. ಆದರೆ ಆ ಅನಿಷ್ಟ ಸುದ್ದಿಯನ್ನು ಕೇಳಿ ಮಾರನಾಯಕನು ಅತ್ಯಂತ ಸಂತಪ್ತನಾಗಿ, ತನ್ನ ಮುಂಗೈಯನ್ನು ಭರದಿಂದ ಕಚ್ಚಿಕೊಂಡನು. ಸುದ್ದಿಯನ್ನು ತಂದ ರಾವುತನಿಗೆ ನಾಲ್ಕೇಟು ಬಿಗಿದನು. ರಭಸದಿಂದ ಎದ್ದು ಅಡ್ಡಾಡುವಾಗ ಎದುರಿನ ಗೋಡೆಗೆ ಧಕ್ಕನೆ ಹಾಯ್ದನು. ಬಳಿಕ ತನ್ನ

ಶಯನಾಗಾರಕ್ಕೆ ಹೋಗಿ ಮುಸುಕಿಟ್ಟು ಮಲಗಿದನು. ಆಗೂ ಸಮಾಧಾನವಾಗದೇ, ಚತರದ ರಾವುತನನ್ನು ಕರೆಯಿಸಿ ರಂಜಿಸುವ ಎರಡು ಮಾತುಗಳನ್ನು ಹೇಳಿ, ಸಮಗ್ರವಾದ ವೃತ್ತಾಂತವನ್ನು ಕೇಳಿಕೊಂಡನು. ಕೂಡಲೇ ತನ್ನ ಮುಖ್ಯಸ್ಥರೆಲ್ಲರನ್ನು ಕರೆದು ಅವರೊಂದಿಗೆ ವಿಚಾರವಿನಿಮಯದಲ್ಲಿ ತೊಡಗಿದನು.

''ಈ ಕಾವಿನಲ್ಲಿಯೆ ನಾವು ಚತರದ ಮೇಲೆ ಸಾಗಿ ಹೋಗಬೇಕು. ಶತ್ರುಗಳು ಹೇಗೂ ಕೋಟೆಯಲ್ಲಿ ನಿಲ್ಲುವಂತಿಲ್ಲ. ಅಲ್ಲಿ ನಮ್ಮವರನ್ನು ಸೆರೆ ಮನೆಯಲ್ಲಿಟ್ಟಿದ್ದಾರಷ್ಟೆ. ಕಾರಣ ಶತ್ರುಗಳನ್ನು ಬಯಲಲ್ಲಿ ಚೆನ್ನಾಗಿ ಎದುರಿಸಬಹುದು ಎಂದು ಅನುಭವಿಕನಾದ ವೀರನೊಬ್ಬನು ಸೂಚಿಸಿದನು.

''ಜಯಪ್ಪ ಬಹದ್ದರರು ಹೇಳಿದುದು ಸರಿಯಾದ ಆಲೋಚನೆಯೇ. ಆದರೆ ಆಗಲೇ ಚತರದಲ್ಲಿ ನಾಲ್ಕು ಸಾವಿರ ಸೈನ್ಯವಿದ್ದು, ಇಲ್ಲಿಯ ರಾಜಪಕ್ಷದವರು ಒಬ್ಬೊಬ್ಬರೇ ಹೋಗಿ ಅವರನ್ನು ಕೂಡುತ್ತಿದ್ದಾರೆ. ನಮ್ಮಲ್ಲಿದ್ದ ಸೈನ್ಯವಾದರೂ ನಾಲ್ಕೇ ಸಾವಿರ. ಹೀಗಿರುವಾಗ, ಬಯಲಿನ ಯುದ್ಧದಲ್ಲಿ ನಾವು ಗೆದ್ದೇ ತೀರುವವೆಂಬ ಭರವಸೆ ಎಲ್ಲಿದೆ?'' ಎಂದು ಇನ್ನೊಬ್ಬ ಅಧಿಕಾರಿಯು ಹೇಳಿದನು.

''ನಾವು ಸಮಸ್ತ ಸೈನ್ಯವನ್ನು ತೆಗೆದುಕೊಂಡು ಸಾಗಿ ಹೋಗಿದ್ದಾದರೆ, ಮೈಸೂರು ಪಟ್ಟಣವನ್ನು ಕಾಪಾಡುವವರಾರು? ಚತರವನ್ನು ಗೆದ್ದು, ಮೈಸೂರನ್ನು ಕಳಕೊಳ್ಳುವ ಹೊತ್ತು ಬರಬಾರದು!'' ಎದು ಮತ್ತೊಬ್ಬನು ಶಂಕೆಯೆತ್ತಿದನು.

''ಗರುಡನ ಗೂಡಿನಲ್ಲಿ ನಮ್ಮ ಸೇನೆಯು ಸಿಕ್ಕಿದೆ. ಅದರ ವಿಚಾರವೇನು? ನಾವು ದಂಡೆತ್ತಿ ಹೋಗಿ ಚತರವನ್ನು ವಶಪಡಿಸಿಕೊಂಡೆವೆಂದರೆ, ಸೆರೆಸಿಕ್ಕ ನಮ್ಮ ಸೇನೆಗೆ ಅನ್ನಾದಿಗಳನ್ನು ನಿಲ್ಲಿಸಿ ಪೀಡಿಸಬಹುದು.''

ಮಾರನಾಯಕನು ಎಲ್ಲರ ಮಾತನ್ನು ಕೇಳಿಕೊಂಡು, ಶತ್ರುಗಳೇ ಮೈಸೂರಿನ ಮೇಲೆ ಬಂದಾಗ ಅವರ ಪಾರುಪತ್ಯ ಮಾಡುವದೊಳಿತೆಂದು ನಿರ್ಣಯಿಸಿದನು.

☆ ☆ ☆ ☆

ಅರಮನೆಗೆ ನಿತ್ಯಸಾಮಗ್ರಿಗಳನ್ನು ಪೂರೈಸುತ್ತಲಿದ್ದ ಜಂಬುಲಿಂಗನ ಮಗಳು ಕಾಮಾಕ್ಷಿಯು ಒಂದು ದಿನ ಬೆಳಿಗ್ಗೆ, ರಾಣಿಯರಿಗಾಗಿ ತರತರದ ಫಲಗಳನ್ನೂ ಅರಳುಮಲ್ಲಿಗೆ, ಸಂಪಿಗೆ, ಪಾರಿಜಾತ, ಸೇವಂತಿಗೆ, ಬಕುಲ ಮುಂತಾದ ಪುಷ್ಪಗಳನ್ನೂ ದವನ, ಮರಗು ಮುಂತಾದ ದಳಗಳನ್ನೂ ಬುಟ್ಟಿಗಳಲ್ಲಿ ತುಂಬಿ, ಒಬ್ಬ ಮೊಟ್ಟೆಗಾರನ ಮೇಲೆ ಹೊರಿಸಿಕೊಂಡು ರಾಣಿವಾಸದತ್ತ ನಡೆದಳು. ದಿನವೂ ಬಂದು ಹೋಗುತ್ತಿದ್ದ ಅವಳನ್ನು ಕಾವಲುಗಾರರು ತಡೆಯುವ ಪ್ರಶ್ನೆಯೇ ಇರಲಿಲ್ಲ. ಆ ಮೊಟ್ಟೆಗಾರನೋ, ಚೆಂಗಾಳಿಯ ಪಂಜೆಯನ್ನುಟ್ಟು ಕೊಂಗನಾಮ ಹಚ್ಚಿಕೊಂಡು ತಲೆಯ ಮೇಲೆ ಬುಟ್ಟಿಯನ್ನು ಹೊತ್ತುಕೊಂಡು ಅವಳನ್ನು ಹಿಂಬಾಲಿಸಿದನು. ಒಳಗೆ ಹೋದ ಕೂಡಲೇ ಕಾಮಾಕ್ಷಿಯು ಬುಟ್ಟಿಯಲ್ಲಿಟ್ಟುಕೊಂಡು ತಂದ ಒಂದು ವಸ್ತ್ರದ ಗಂಟನ್ನು ಅವನ ಕೈಯಲ್ಲಿಟ್ಟು, ಒಂದು ಕೋಣೆಯೊಳಗೆ ಕಳಿಸಿ, ಬಾಗಿಲನ್ನು ಇಕ್ಕಿಕೊಂಡು ನಿಂತಳು.

ಕೆಲಹೊತ್ತಿನ ಮೇಲೆ, ಆ ಕೋಣೆಯ ಕದ ತೆರೆಯಿತು. ಹೊರಗೆ ಬಂದವನು ಮೊಟ್ಟೆಗಾರನಾಗಿರದೇ, ರೇಶ್ಮೆಯ ಅಂಗಿ-ಚೆಲ್ಲಣಗಳನ್ನು ತೊಟ್ಟು ತಲೆಗೆ ಓರಕಟ್ಟಿನ ಕಲಾಬತ್ತಿನ ಮುಂಡಾಸವನ್ನು ಸುತ್ತಿಕೊಂಡ, ಯದುರಾಜನಾಗಿದ್ದನು!

ಅವನು ರಾಣೀವಾಸಕ್ಕೆ ಬಂದು ರಾಣಿಯವರ ದರ್ಶನಕ್ಕಾಗಿ ಕಾದಿದ್ದಾನೆಂದು ಕಾಮಾಕ್ಷಿಯು ಹೇಳಿದ ಕೂಡಲೆ, ರಾಣಿಯವರು ಗಡಬಡಿಸಿ, ''ಯದುರಾಜರು ಬಂದಿರುವರೆ? ಬೇಗ, ಬೇಗ ಕರೆದುಕೊಂಡು ಬಾ'' ಎಂದು ಹೇಳಿದರು.

ಅಲ್ಲಿಯೆ ಇದ್ದ ದೇವಕೀದೇವಿಯ ಮುಖಕಮಲವು ಯದುರಾಜನ ಹೆಸರು ಕೇಳಿದೊಡನೆಯೆ ಪ್ರಫುಲ್ಲಿತವಾಯಿತು. ಆನಂದಾತಿಶಯದಿಂದ ಹೃದಯವು ಚಂಚಲವಾಯಿತು. ತನ್ನ ಮನೋರಮಣನ ಮುಖವನ್ನು ಯಾವಾಗ ಕಾಣುವೆನೆಂದು ಆತುರದಲ್ಲಿದ್ದರೂ ಲಜ್ಜೆಯಿಂದ ಅವಳು ತಲೆ ಬಾಗಿಸಿಕೊಂಡು ತನ್ನ ತಾಯಿಯ ಹಿಂಬದಿಯಲ್ಲಿಯೇ ನಿಂತುಕೊಂಡಳು.

ಅಷ್ಟರಲ್ಲಿ ಉಪ್ಪರಿಗೆಯ ನೆಲಗಟ್ಟು ಅದಿರುವಂತೆ ಹೆಜ್ಜೆಗಳನ್ನಿಕ್ಕುತ್ತ ಆ ಪುರುಷಸಿಂಹನು ಬಾಗಿಲಲ್ಲಿ ಬಂದನು. ಅವನು ಬಂದನೋ, ತನ್ನ ಹೃದಯದಲ್ಲಿ ಒಮ್ಮೆಲೆ ಸೇರಿಕೊಂಡನೋ ಇದು ದೇವಕಿಗೆ ತಿಳಿಯದಾಯಿತು. ಅವನ ತೇಜೋವಂತ ಮುಖವು ದೇವಕಿಯನ್ನು ಎಷ್ಟೊಂದು ಮೋಹಗೊಳಿಸಿತೆಂಬುದನ್ನು ಅವಳೇ ಹೇಳಬೇಕಲ್ಲದೆ, ಅನ್ಯರು, ಮೇಲಾಗಿ ಪರಪುರುಷರು ಹೇಗೆ ಹೇಳಬಲ್ಲರು?

ರಾಣಿಯವರು ಪರಮಾದರದಿಂದ ಅವನಿಗೆ ಪೀಠವನ್ನು ತೋರಿಸಿ, ''ಯದುರಾಜ, ನೀವು ಒಳ್ಳೆಯ ಪರಾಕ್ರಮವನ್ನು ಮಾಡಿ, ವಿಜಯವನ್ನು ಸಂಪಾದಿಸಿದಿರೆಂದು ಕೇಳಿ, ನನಗೆ ಅತಿಶಯ ಆನಂದವಾಯಿತು. ನಿಮ್ಮನ್ನು ಯಾವಾಗ ಕಂಡೇನೋ ಎಂದು ತವಕಿಸುತ್ತಿದ್ದೆನು. ಅನಾಯಾಸವಾಗಿ ಬಂದು ದರ್ಶನವನ್ನು ಕೊಟ್ಟು ನಮ್ಮ ಮೇಲೆ ಉಪಕಾರವನ್ನು ಮಾಡಿದಿರಿ'' ಎಂದರು.

''ದೇವಿಯವರೇ, ನೀವು ನನ್ನಲ್ಲಿ ವಿಶ್ವಾಸವಿಟ್ಟು, ಸೇನಾಪತಿತ್ವವನ್ನು ಕೊಟ್ಟಿರಿ. ದೇವರ ಕೃಪೆಯಿಂದಲೂ ನಿಮ್ಮ ಆಶೀರ್ವಾದ ಬಲದಿಂದಲೂ ಈ ಸೇವಕನ ಸಾಹಸಕ್ಕೆ ಯಶ ದೊರೆಯಿತು'' ಎಂದು ಯದುರಾಜನು ನುಡಿದನು.

''ಅಮ್ಮಾ, ನಾನು ಅನೇಕ ಯುದ್ಧ-ಸಂಗತಿಗಳನ್ನು ಕೇಳಿದ್ದೇನೆ. ಆದರೆ ಚತರದಲ್ಲಿ ಆದಂತಹ ಚಮತ್ಕಾರದ ಕಾಳಗವನ್ನು ಎಲ್ಲಿಯೂ ಕಾಣಲಿಲ್ಲ!'' ಎಂದು ಹೇಳುತ್ತ ದೇವಕಿಯು ತನ್ನ ಕಡೆಗಣ್ಣಿನಿಂದಲೇ ಸಂಪೂರ್ಣವಾಗಿ ಯದುರಾಜನನ್ನು ನೋಡಿದಳು. ಹೀಗೆ ಕೆಲ ಹೊತ್ತು ಮಾತುಕತೆಗಳು ನಡೆದುವು. ಯದುರಾಜನ ದೃಷ್ಟಿಯೂ ಕಮಲಕೋಶದಲ್ಲಿ ಸಿಲುಕಿದ ಭ್ರಮರನಂತೆ ಆ ಲಲನೆಯ ಮುಖಕಮಲದಲ್ಲಿ ಬದ್ಧವಾಗಿತ್ತು. ಇದರಿಂದಾಗಿ ಆ ವಧೂಮಣಿಯ ದೇಹದಲ್ಲಿ ಕಂಪನ ಹುಟ್ಟಿತು. ಬೆವರ್ಹನಿಗಳಿಂದ ಯುಕ್ತವಾದ ತನ್ನ ಕರಾಂಗುಲಿಗಳನ್ನು ಒರೆಸಿಕೊಂಡಳು. ಇವರಿಬ್ಬರ ಮನೋವೃತ್ತಿಗಳನ್ನು ಮೆಲ್ಲಗೆ ನೋಡುತ್ತ ರಾಣಿಯವರು ಮನಸ್ಸಿನಲ್ಲಿಯೆ ಆನಂದಪಟ್ಟರು. ಪ್ರತಾಪಶಾಲಿಯೂ ರೂಪವಂತನೂ

ಉದಾತ್ತ ಕುಲಪ್ರಸೂತನೂ ಆದ ಮಹಾತ್ಮನು ತನ್ನ ಅಳಿಯನಾಗಬೇಕೆಂದು ಯಾವ ಮಾತೆಯು ಬಯಸಲಿಕ್ಕಿಲ್ಲ?

ರಾಣಿಯವರು ಯದುರಾಜನಿಗೆ ಉಪಾಹಾರವನ್ನು ತೆಗೆದುಕೊಂಡು ಹೋಗಬೇಕೆಂದು ಒತ್ತಾಯ ಮಾಡಿದರು. ಅವನು ಒಪ್ಪಿಕೊಂಡ ಬಳಿಕ, ಕಾಮಾಕ್ಷಿಯೂ ರಾಣಿಯವರೂ ಅವರ ಹಿಂದೆ ದೇವಕೀದೇವಿಯೂ ನಡೆದರು. ದೇವಕಿಯು ತನ್ನ ತುರುಬನ್ನು ಸಮಗೊಳಿಸುವ ಭರದಲ್ಲಿ ಅದಕ್ಕೆ ಹಾಕಿದ ಹೂಮಾಲೆಯಿಂದ ನಾಲ್ಕು ಹೂಗಳು ಉದುರಿದವು. ಯದುರಾಜನು ಲಗುಬಗೆಯಿಂದ ಅವುಗಳನ್ನು ಎತ್ತಿಕೊಂಡು ತನ್ನ ಅಂಗಿಯಲ್ಲಿ ಇಟ್ಟು ಕೊಂಡನು. ಹಿಂದಿನ ಬದಿಯಲ್ಲಿಯೇ ವಿಶೇಷ ಗಮನವಿತ್ತಿದ್ದ ದೇವಕಿಗೆ ಇದು ಗೊತ್ತಾಗದಿರಲಿಲ್ಲ. ತನ್ನ ಮನೋಹರನ ಪ್ರೇಮವು ತನ್ನಲ್ಲಿ ನಿಶ್ಚಿತವಾಗಿ ಇರುವುದನ್ನು ಕಂಡು, ಅವಳು ಆನಂದದ ಭರದಲ್ಲಿ ಯದುರಾಜನ ಮುಖವನ್ನು ನೋಡಿ ವಿಲಾಸದಿಂದ ನಕ್ಕಳು.

ಎಲ್ಲರೂ ಒಂದು ವಿಸ್ತಾರವಾದ ನಡುಮನೆಗೆ ಬಂದರು. ಅಲ್ಲಿ ಬೋನಗಿತ್ತಿಯು ಮಣೆ ಹಾಕಿ, ಬಂಗಾರದ ಹರಿವಾಣವನ್ನು ಇಟ್ಟು, ಬದಿಯಲ್ಲಿ ನಾಲ್ಕು ಬಂಗಾರದ ಬಟ್ಟಲಗಳನ್ನಿಟ್ಟಳು. ಇನ್ನೊಬ್ಬಳು ಅನೇಕ ಪ್ರಕಾರದ ಪದಾರ್ಥಗಳನ್ನು ತಂದು ಬಡಿಸಿದಳು. ಬಳಿಕ ಯದುರಾಜನು ಕಾಲು, ಕೈ, ಮುಖ ತೊಳೆದುಕೊಂಡು, ಜರದ ಪೀತಾಂಬರವನ್ನುಟ್ಟು ಕೊಂಡು ಫಲಾಹಾರಕ್ಕೆ ಕುಳಿತನು.

ಅವನ ಎದುರಿಗೇ ತುಸು ದೂರದಲ್ಲಿ ದೇವಕಿಯು, ಕಾಮಾಕ್ಷಿಯು ತಂದಿದ್ದ ಪುಷ್ಪ, ದವನಾದಿಗಳನ್ನು ತೆಗೆದುಕೊಂಡು ಹೂಮಾಲೆಯನ್ನು ಕಟ್ಟುತ್ತ ಬರಿ ಮೈಯಲ್ಲಿದ್ದ ಯದುರಾಜನ ದಿವ್ಯಾಂಗವನ್ನು ಕಣ್ಣು ತುಂಬಾ ನೋಡುತ್ತಿದ್ದಳು. ಕ್ರಮದಿಂದ ಒಂದು ಹೂವನ್ನು ಮಾಲೆಯಲ್ಲಿಯೂ, ಒಂದು ಪ್ರೇಮ ಕಟಾಕ್ಷವನ್ನು ಯದುರಾಜನಲ್ಲಿಯೂ ಹಾಕುತ್ತ ಆಕೆ ಎದುರಿನಲ್ಲಿ ಕುಳಿತಿರಲು, ಯದುರಾಜನ ಉಪಾಹಾರವಾದರೂ ಸಾಗುವುದು ಹೇಗೆ? ಆ ಚಂದ್ರಮುಖಿಯ ವಿಶಾಲವಾದ ಹಣೆಯ ಮೇಲೆ ಉರುಳಾಡುತ್ತಿರುವ ಮುಂಗುರುಳುಗಳ ಶೋಭೆಯನ್ನು ನೋಡಿದ ಯದುರಾಜನು,

"ಮಲಿನಮಪಿ ಹಿಮಾಂಶೋರ್ಲಕ್ಷ್ಮ ಲಕ್ಷ್ಮೀಂ ತನೋತಿ"

—ಎಂದು ಗಟ್ಟಿಯಾಗಿ ನುಡಿದನು. ಮರುಕ್ಷಣವೇ ಇದೇನಾಯಿತೆಂದು ತಿಳಿದು ನಾಲಗೆಯನ್ನು ಕಚ್ಚಿಕೊಂಡು, ಕೆಳಗೆ ಮೋರೆಯನ್ನು ಹಾಕಿ, ಚಕ್ಕಲಿಯ ಚೂರನ್ನು ಬಾಯಲಿಟ್ಟುಕೊಂಡು ತಿನ್ನಲಾರಂಭಿಸಿದನು. ರಾಣಿಯವರಿಗೆ ಸಂಸ್ಕೃತವು ಚೆನ್ನಾಗಿ ಬರುತ್ತಿದ್ದಿಲ್ಲವಾದುದರಿಂದ ಆ ಕಾಳಿದಾಸೋಕ್ತಿಯ ಭಾವವು ಅವರಿಗೆ ತಿಳಿಯಲಿಲ್ಲ. ಆದರೆ ವಿದುಷಿಯಾದ ದೇವಕಿಯು ಯದುರಾಜನ ಅಂತರ್ಗತವನ್ನು ಅರಿತು, ಬಾಯಿಗೆ ಸೆರಗಿಟ್ಟುಕೊಂಡು ನಕ್ಕಳು.

ಉಪಾಹಾರವನ್ನು ಮುಗಿಸಿ ವೀಳ್ಯವನ್ನು ಕೈಗೆತ್ತಿಕೊಳ್ಳುತ್ತ ಯದುರಾಜನು ರಾಣಿಯವರಿಗೆ ಕೇಳಿದನು :

"ಮಾರನಾಯಕನು ನಿಮ್ಮ ಮಗಳ ಕೈಹಿಡಿಯಲಿಚ್ಛಿಸಿ, ನಿಮಗೆ ವಿಪರೀತ ಬಾಧೆಕೊಟ್ಟನೆಂದು ಕೇಳಿದ್ದೇನಲ್ಲ?"

"ಹೌದು, ಒಂದು ದಿನವಂತೂ ಬಲಾತ್ಕಾರ ಮಾಡಲೆಂದೇ ಬಂದಿದ್ದನು. ಆದರೆ ಅರಮನೆಯ ಮುಖ್ಯಸ್ಥನಾದ ಅಳಸಿಂಗರಾಯನು ಅವನಿಗೆ ಒಳಿತಾಗಿ ಛೀ ಮಾಡಿದನು. ದೇವರೇ ಅಳಸಿಂಗರಾಯನಿಗೆ ಸದ್ಬುದ್ಧಿಯನ್ನು ಕೊಟ್ಟು, ನನ್ನ ಕಂದಮ್ಮನ ಮಾನ ಉಳಿಸಿದನು" ಎಂದು ದೇವಕಿಯ ಹೆಗಲ ಮೇಲೆ ಕೈಹಾಕಿ ರಾಣಿಯವರು ಉತ್ತರ ಕೊಟ್ಟು, ಕಣ್ಣಿಗೆ ನೀರು ತಂದರು.

"ನೀವಿನ್ನು ಯೋಚಿಸಬೇಡಿರಿ. ಆ ದುಷ್ಟನ ಪಾಪದ ಗಳಿಗೆಬಟ್ಟಲವು ತುಂಬಿಬಂದಿದೆ. ಇನ್ನು ಒಂದು ತಿಂಗಳೊಳಗಾಗಿ ಅವನ ಪಾರುಪತ್ಯ ಮಾಡಿಯೆ, ತಮ್ಮ ಬಳಿಗೆ ಬರುವೆನು" ಎಂದು ಯದುರಾಜನು ತಪ್ತಸ್ವರದಿಂದ ನುಡಿದನು.

ಯದುರಾಜನು ಹೊರಟು ನಿಂತಾಗ, ದೇವಕಿಯು ತಾನಾಗಿ ಅವನ ಸಮೀಪಕ್ಕೆ ಬಂದು, "ಯದುರಾಜರಿಗೆ ಹೂಗಳ ಮೇಲೆ ಬಹಳ ಪ್ರೇಮ. ಅವರು ಬಾಡಿದ ಹೂಗಳನ್ನು ಕೂಡಾ ಆದರದಿಂದ ಎತ್ತಿಕೊಳ್ಳುವರೆಂದು ಕೇಳಿದ್ದೇನೆ. ಆದ್ದರಿಂದ ಈ ಮಾಲೆಯನ್ನೇ ದಯವಿಟ್ಟು ಸ್ವೀಕರಿಸಿರಿ" ಎಂದು ಅವನ ಮುಖವನ್ನು ಯಥೇಚ್ಛವಾಗಿ ನೋಡಿ, ಆ ಕುಸುಮಹಾರವನ್ನು ಅವನ ಕೈಯಲ್ಲಿ ಕೊಟ್ಟಳು.

ಯದುರಾಜನು ಮಂದಹಾಸಯುಕ್ತನಾಗಿ, "ನಾನು ಹೊರಡುವ ಸಮಯದಲ್ಲಿ ನೀವು ಈ ಮನೋಹರವಾದ ಮಾಲೆಯನ್ನು ಕೊಟ್ಟುದು ಶುಭ ಶಕುನವೇ ಸೈ. ವಿಜಯಲಕ್ಷ್ಮಿಯೇ ನನ್ನ ಕೊರಳಿಗೆ ಮಾಲೆ ಹಾಕಿದಳೆಂದು ನಾನು ಭಾವಿಸಿಕೊಂಡಿದ್ದೇನೆ" ಎಂದು ಶ್ಲೇಷೆಯಿಂದ ನುಡಿದು, ವೇಷವನ್ನು ಮತ್ತೆ ಬದಲಿಸಿ, ಕಾಮಾಕ್ಷಿಯನ್ನು ಕೂಡಿಕೊಂಡು ಅವಳ ಮನೆಗೆ ಬಂದನು. ಆ ದಿವಸದ ಅವನ ಸಂತೋಷವನ್ನು ಹಿಡಿಯುವವರಾರು? ಒಮ್ಮೆ ನಗುವನು ಮತ್ತೊಮ್ಮೆ ಹಾಡುವನು, ಒಮ್ಮೊಮ್ಮೆ ಮನೋರಥದಲ್ಲಿ ಕುಳಿತು ದಿಗಂತದವರೆಗೆ ಹೋಗಿ ಬರುವನು.

⋆ ⋆ ⋆ ⋆

ರಾಜಪಕ್ಷದವರ ಬಲವು ಸಾಕಷ್ಟಿದ್ದುದರಿಂದ ಅವರಾದರೂ ಮೈಸೂರಿಗೆ ಮುತ್ತಿಗೆ ಹಾಕಬೇಕೆಂದೇ ಕಾದಿದ್ದರು. ಕೋಟೆಯನ್ನು ಮುತ್ತುವ ಅನೇಕವಾದ ರೀತಿಗಳನ್ನು ಯದುರಾಜ—ಕೃಷ್ಣರಾಜರು ಸೈನ್ಯದವರಿಗೆ ನಿತ್ಯದಲ್ಲಿಯೂ ತೋರಿಸಿಕೊಡುತ್ತಿದ್ದರು. ಕೋಟೆಯ ಗೋಡೆಗಳನ್ನು ಜಡಿಯಲಿಕ್ಕೆ ತಕ್ಕುವಾದ ಯಂತ್ರಗಳು ಸಿದ್ಧವಾದುವು. ಶಸ್ತ್ರಾಸ್ತ್ರಗಳ ರಚನೆಯಲ್ಲಿ ನುರಿತವರಾದ ಶಿಲ್ಪಿಗರು ಅಹೋರಾತ್ರಿ ದುಡಿಯುತ್ತಿದ್ದರು. ಆಜ್ಞೆಯ ಮೇರೆಗೆ ತಪ್ಪದೆ ನಡೆದುಕೊಳ್ಳುವಂತೆ ಮಾವುತರು ಆನೆಗಳಿಗೆ ಮಾತುಗಳನ್ನು ಕಲಿಸುತ್ತಿದ್ದರು. ಸೈನಿಕರಿಗೆ ಉತ್ಸಾಹವು ಬರಬೇಕೆಂದೆಣಿಸಿ, ಅವರಿಗೆ ಪಾರಿತೋಷಕಗಳನ್ನು ಕೊಡುವಂತೆ ಸುತ್ತುಮುತ್ತಲಿನ ಊರುಗಳ ಶ್ರೀಮಂತರನ್ನು ಪ್ರಚೋದಿಸಲಾಯಿತು. ಯುದ್ಧದಲ್ಲಿ ಮಡಿದವರ ಹೆಂಡಿರು–ಮಕ್ಕಳ ಸಂರಕ್ಷಣೆಗಾಗಿ ತಕ್ಕಷ್ಟು ಹಣವು ಕೊಡಲ್ಪಡುವುದೆಂಬ ಆಶ್ವಾಸನವು ದೊರೆಯಿತು.

ಎಲ್ಲ ಸಿದ್ಧತೆಗಳಾದ ಮೇಲೆ, ಯದುರಾಜನು ಚತರದ ಮುಂದಿನ ವಿಸ್ತಾರವಾದ ಬಯಲಲ್ಲಿ ಸೈನಿಕರೆಲ್ಲರನ್ನೂ ಕರೆಯಿಸಿ, ತಾನು ಒಂದು ಎತ್ತರವಾದ ಬಂಡೆಯ ಮೇಲೆ ನಿಂತು ಗಟ್ಟಿಯಾಗಿ ಹೇಳಿದನು :

''ಸೈನಿಕರೇ, ಅಧಿಕಾರಿಗಳೇ, ನೀವೆಲ್ಲರೂ ರಾಜ ಷ್ಠೆಯಿಂದ ಪ್ರೇರಿತರಾಗಿ ಪರಾಕ್ರಮದಿಂದ ಕಾದಿ, ವಿಜಯವನ್ನು ತಂದುಕೊಟ್ಟಿದ್ದೀರಿ. ಬಂಡುಗಾರನಾದ ಮಾರನಾಯಕನು ಪರರಾಜರ ಸಹಾಯದಿಂದ ನಮ್ಮೊಡನೆ ಯುದ್ಧವನ್ನು ಮಾಡಬೇಕೆಂದು ಆಲೋಚಿಸಿರುವನು. ಹೊರಗಿನ ಸಹಾಯವು ಬರುವದರೊಳಗಾಗಿ ನಾವೇ ಮೈಸೂರಿನ ಮೇಲೆ ದಂಡೆತ್ತಿ ಹೋಗೋಣ. ನಿಮ್ಮ ಪರಾಕ್ರಮವನ್ನು ಒರೆಗೆ ಹಚ್ಚುವ ಪ್ರಸಂಗ ಈಗ ಬಂದಿದೆ. ಮಾರನಾಯಕನು ಜೀವದ ಹಂಗುದೊರೆದಿದ್ದಾನೆ. ಬೇಟೆಯ ಹುಲಿಯಂತೆ ಅವನು ಉಗ್ರನಾಗಿ ಕಾದುವನು. ಈ ಯುದ್ಧದಲ್ಲಿ ನಮಗೆ ಅಪಜಯ ಬಂದಿತೆಂದರೆ ನಮ್ಮ ದುರವಸ್ಥೆ ಇರಲಿ, ಚಾಮರಾಜರ ಪರಿವಾರವೂ ರಾಜ್ಯದಲ್ಲಿಯ ಯಾವತ್ತೂ ಪ್ರಮುಖ ರಾಜನಿಷ್ಠರೂ ನಾನಾ ವಿಧವಾದ ಶಿಕ್ಷೆಯನ್ನು ಅನುಭೋಗಿಸಬೇಕಾಗುವದು. ಕಾರಣ ನೀವೆಲ್ಲ ಧೈರ್ಯದಿಂದ ಕಾದಾಡಬೇಕು. ಶೂರರೂ ಸಾಹಸಿಗಳೂ ರಾಜಭಕ್ತಿಯುಳ್ಳವರೂ ಆದ ನಿಮಗೆ ನಾನು ಹೆಚ್ಚು ಹೇಳಬೇಕಾಗಿಲ್ಲ. ನಿಮ್ಮ ಸ್ವಾಗತಕ್ಕಾಗಿ ಮೈಸೂರಿನ ಗ್ರಾಮದೇವತೆಯು ಹಾದೀ ನೋಡುತ್ತಿದ್ದಾಳೆ! ನೀವು ಹೋದಲ್ಲಿ ವಿಜಯ. ನೀವು ನಿಂತಲ್ಲಿ ಸುಖಶಾಂತಿಗಳ ನೆಲೆ!'' ಎಂದು ಹೇಳಿ ಚಾಮರಾಜರ ಹೆಸರುಗೊಂಡು ಜಯಘೋಷ ಮಾಡಿದನು. ಆಗ ಸೈನ್ಯದವರು ತಾವೂ ಚಾಮರಾಜರ ಹೆಸರನ್ನು ಉಚ್ಚ ಕಂಠದಿಂದ ಹೇಳಿ, ''ಜಯ ಯದುಮಹಾರಾಜಾ!'' ಎಂದು ಜಯಘೋಷ ಮಾಡಿದರು.

ಅಂದಿನಿಂದ ಮೂರನೆಯ ದಿವಸ ಅರುಣೋದಯದ ವೇಳೆಗೆ ರಾಜಪಕ್ಷದ ಸೈನ್ಯವು ಸಂಭ್ರಮದಿಂದ ಮುನ್ನಡೆಯಿತು. ರಾವುತರ ಮೇಲೆ ಕೃಷ್ಣರಾಜನ ಅಧಿಕಾರ; ಬರ್ಚಿಯವರ ಮೇಲೆನಂಜರಾಜ, ಕಾಲಾಳುಗಳ ಮೇಲೆ ಭದ್ರನಾಯಕ, ಸಾಮಗ್ರಿಗಳ ಮೇಲೆ ವಾಸುದೇವಯ್ಯ— ಹೀಗೆ ಯೋಜನೆಯಾಯಿತು.

ಇತ್ತ ಮಾರನಾಯಕನು ವೈರಿಗಳ ತ್ವರಿತಗತಿಯ ಈ ಅಭಿಯೋಗಕ್ಕೆ ಅಳುಕದೆ, ಪ್ರಸಂಗಕ್ಕೆ ಎದೆಗೊಟ್ಟು ನಿಂತನು. ತನ್ನ ಸೈನ್ಯದವರನ್ನು ಕರೆಯಿಸಿ, ಜಯವಾದ ಪಕ್ಷದಲ್ಲಿ ಅವರಿಗೆ ಧನಕನಕಗಳನ್ನೇ ಸುರಿಯುವುದಾಗಿ ಸಾರಿದನು. ಅವನ ಸೇನೆಯು ಅನೇಕ ಯುದ್ಧಗಳಲ್ಲಿ ದುಡಿದುದು. ಸ್ವತಃ ಮಾರನಾಯಕನಂತೂ ದರಗಂಡ ಸೇನಾಪತಿಯೆಂದು ವಿಖ್ಯಾತನಾಗಿದ್ದವನು. ಹೀಗಿರಲು ತಮಗೆ ಅಪಜಯವಾದೀತೆಂದು ಅವರು ಹೆದರಿದ್ದಿಲ್ಲ.

ಯದುರಾಜನ ಸೇನೆಯು ಮೈಸೂರಿಗೆ ಬಂದು ಮುಟ್ಟಿದಾಗ ಮಧ್ಯಾಹ್ನವಾಗಿದ್ದಿತು. ಆಗೇ ಅವರು ಕೋಟೆಗೆ ಮುತ್ತಿಗೆ ಹಾಕಿಬಿಟ್ಟರು. ಮಾರನಾಯಕನ ಭಟರು ಒಳ್ಳೆಯ ಜಾಣ್ಮೆಯಿಂದ ಹೊರಗಿನವರ ಮೇಲೆ ತೀಕ್ಷ್ಣವಾದ ಬಾಣಗಳ ಮಳೆಗರೆಯಲಾರಂಭಿಸಿದರು. ಕೂಡಲೇ ಯದುರಾಜನ ಸೇನೆಯ ಬಿಲ್ಲಾಳುಗಳೂ ತಮ್ಮ ಧನುಸ್ಸನ್ನು ಟಂಕರಿಸಿ, 'ಟಂವ್ ಭಂವ್' ಎಂಬ ರಭಸದ ಕೂರಂಬಿಗೊಂದು ಹೆಣವನ್ನು ಉರುಳಿಸತೊಡಗಿದರು. ಹೀಗೆ

ಸುಮಾರು ನಾಲ್ಕು ಗಂಟೆಗಳವರೆಗೆ ಯುದ್ಧವಾಯಿತು. ಆದರೆ ವಿಶೇಷ ಹಾನಿಗೊಳಗಾದವರೆಂದರೆ ಯದುರಾಜನ ಸೈನ್ಯದವರೇ. ಕೊನೆಗೆ ಅವನು ತನ್ನ ಸೈನ್ಯವನ್ನು ಶತ್ರುಗಳ ಬಾಣಗಳ ಅಳತೆಯನ್ನು ಬಿಟ್ಟು ಹಿಂಬದಿಗೆ ಸರಿಸಿ ನಿಂತನು. ಕತ್ತಲಾಗುತ್ತ ಬಂದುದರಿಂದ ಮಾರನಾಯಕನೂ ತನ್ನ ಬಿಲ್ಲಾಳುಗಳಿಗೆ ತಡೆಯಾಜ್ಞೆಯಿತ್ತನು.

ಯದುರಾಜನು ಸಂಜೆಯ ಅನಂತರ ನೂರಾರು ಬಂಡೆಗಲ್ಲುಗಳನ್ನೂ ಮರದ ದಿಂಡುಗಳನ್ನೂ ಬಂಡಿಗಳಲ್ಲಿ ಹೇರಿಸಿ, ನಾಲ್ವತ್ತು ಆನೆಗಳಿಂದ ಕೂಡಿಕೊಂಡು ಚತುರದ ವ್ಯಾಧಭಟರ ಸಮೇತವಾಗಿ, ಮಧ್ಯರಾತ್ರಿಯ ಸುಮಾರಿಗೆ ಕೋಟೆಯ ಸಮೀಪಕ್ಕೆ ಬಂದನು. ಮತ್ತು ಅಗಳದಲ್ಲಿ ಕಲ್ಲುಗಳನ್ನೂ ಮರಗಳನ್ನೂ ಚೆಲ್ಲಿಸಿ ಆನೆಗಳು ಒಳಬದಿಯಲ್ಲಿ ಮೆಲ್ಲಗೆ ಇಳಿಯುವಂತೆ ಮಾಡಿದನು.

ಕೋಟೆಯ ಮೇಲಿದ್ದ ಕಾವಲುಗಾರರು ಕೆಳಗೆ ನಡೆಯುತ್ತಿರುವ ಗದ್ದಲವನ್ನು ಕೇಳಿ, ಏನೆಂಬುದು ಸ್ಪಷ್ಟವಾಗಿ ಗೊತ್ತಾಗದೇ ಕಹಳೆಯನ್ನೂದಿದರು. ಅದನ್ನು ಕೇಳಿ ಧಾವಿಸಿ ಬಂದ ಬಿಲ್ಲಾಳುಗಳು ಬಾಣಗಳ ಮಳೆಗರೆಯಲಾರಂಭಿಸಿದರು. ಆದರೆ ಯದುರಾಜನ ಸೇನೆಯವರು ಕೋಟೆಯ ಗೋಡೆಗೆ ಬೆನ್ನು ಆನಿಸಿ ನಿಂತುಬಿಟ್ಟಿದ್ದರು. ಹೀಗೆ ನಿಂತವರ ಮೇಲೆ ಬಾಣಪ್ರಯೋಗವನ್ನು ಮಾಡುವುದು ಹೇಗೆ?

ಕೂಡಲೇ ಯದುರಾಜನು ವಿಶಿಷ್ಟ ಸಂಜ್ಞೆಯ ಕಹಳೆಯನ್ನು ಊದಿಸಿ, ಉಳಿದ ತನ್ನ ಸೇನೆಯನ್ನು ಕೋಟೆಯ ಸಮೀಪಕ್ಕೆ ಕರೆಸಿಕೊಂಡನು. ಆಗ ಕೋಟೆಯ ಮೇಲಿನವರಿಗೂ ಈ ಹೊಸದಾಗಿ ಬಂದ ಯದುರಾಜನ ಸೇನೆಗೂ ಮತ್ತೆ ಬಾಣಯುದ್ಧವು ನಡೆಯಿತು. ಹೊರಗಿನವರು ಗಿಡಗಂಟೆಗಳ ಮರೆಗೆ ಅಡಗಿಕೊಂಡು, ಇಲ್ಲವೆ ಮರಗಳನ್ನೇರಿ ಕುಳಿತು ಬಾಣಗಳನ್ನು ಬಿಡುತ್ತಿದ್ದರು. ಕತ್ತಲೆಯಲ್ಲಿ ಇವರ ಓಡಾಟವು ಕೋಟೆಯಲ್ಲಿ ಇರುವವರಿಗೆ ಚೆನ್ನಾಗಿ ಕಾಣುತ್ತಿದ್ದಿಲ್ಲ, ಮೇಲಿನವರು ಮಾತ್ರ ಮುಗಿಲಿನ ಬೆಳಕಿಗೆ ಕಾಣುತ್ತಿದ್ದರು. ಹೀಗಾಗಿ ರಾತ್ರಿಯ ಯುದ್ಧದಲ್ಲಿ ಕೋಟೆಯಲ್ಲಿರುವವರೇ ಬಲು ಮಂದಿ ಸತ್ತರು.

ಅತ್ತ ಯದುರಾಜನು ಹಾರೆ, ಗುದ್ದಲಿ, ಯಂತ್ರಗಳಿಂದ ಕೋಟೆಯ ಗೋಡೆಯನ್ನು ಕೆಡಹಲಾರಂಭಿಸಿದನು. ಆ ಹೊಡೆತಗಳಿಂದ ಉಚ್ಚಿಬಿದ್ದ ಕಲ್ಲುಗಳನ್ನು ಅಗಳದೊಳಗೆ ಅಲ್ಲಲ್ಲಿ ಒಗೆದು ಮುಚ್ಚ ತೊಡಗಿದ್ದರು. ಅಂತೂ ಬೆಳಗಾಗುವುದರೊಳಗಾಗಿಯೆ ಕೋಟೆಗೆ ನಾಲ್ಕಾರು ಕಡೆಗೆ ದೊಡ್ಡ ದೊಡ್ಡ ಡೊಗರು ಬಿದ್ದವು. ಅಗಸೆಯ ಕಟ್ಟಿಗೆಯ ಬಾಗಿಲಿಗೆ ಕುಳ್ಳು ಉರುವಲಗಳನ್ನು ಒಟ್ಟಿ ಬೆಂಕಿಹಚ್ಚಿದರು.

ಮಾರನಾಯಕನು ನಡುರಾತ್ರಿಯೇ ಎದ್ದು ಬಂದು ತನ್ನ ಸೈನಿಕರಿಗೆ ಆಜ್ಞೆಗಳನ್ನು ಕೊಡುತ್ತಿದ್ದನು. ಡೊಗರುಗಳು ಬಿದ್ದಲ್ಲಿ ನಾಲ್ಕು ದೊಡ್ಡ ಪಥಕಗಳನ್ನು ನಿಲ್ಲಿಸಿ ಒಳಬಂದವರನ್ನು ಸಂಹರಿಸಲು ಸಜ್ಜುಗೊಳಿಸಿದನು. ಯದುರಾಜನ ಭಲ್ಲೆಯವರು ಅದಕ್ಕೆ ಸಿದ್ಧರಾಗೇ ಇದ್ದರು.

ಸೂರ್ಯೋದಯವಾಗುತ್ತಲೆ ಆ ನಾಲ್ಕು ಡೊಗರುಗಳ ಹತ್ತಿರದಲ್ಲಿ ಭೀಕರ ಯುದ್ಧವು ಆರಂಭವಾಯಿತು. ಯದುರಾಜನಿದ್ದ ಭಾಗದಲ್ಲಿ ಶತ್ರುಗಳ ಗುಂಪು ದೊಡ್ಡದಿತ್ತು, ಅವರನ್ನು ಓಂದಕ್ಕ ದೂಡಿ ನಿಲ್ಲಬೇಕಾದರೆ ಆ ವೀರನಿಗೆ ಬಹಳ ಪ್ರಯಾಸವಾಯಿತು. ಅಷ್ಟರಲ್ಲಿ

ನಂಜರಾಜನು ತನ್ನೆದುರಿಗಿದ್ದ ಶತ್ರುಗಳ ಗುಂಪನ್ನು ಕಡಿದು ಚಿಪ್ಪಾಟೆ ಮಾಡಿ, ಕೋಟೆಯಲ್ಲಿ ಹೊಕ್ಕವನೇ ಪತ್ತೆಂಟು ಕಹಳೆಗಳನ್ನು ಊದಿಸಿದನು. ಆ ಧ್ವನಿಯನ್ನು ಕೇಳಿದ ಕೂಡಲೇ ರಾಜಪಕ್ಷದವರ ಉತ್ಸಾಹ ಪುಟಿದೆದ್ದು ನಂಜರಾಜನನ್ನು ಹಿಂಬಾಲಿಸಿ ಒಳಬರತೊಡಗಿದರು.

ಇತ್ತ ಯದುರಾಜನು ಅಂತಹ ಬಿಕ್ಕಟ್ಟಿನ ಸ್ಥಳದಲ್ಲಿ ಯುದ್ಧ ಮಾಡುವುದನ್ನು ಬಿಟ್ಟು ಹಿಂದಕ್ಕೆ ಸರಿದು, ಅಗಳದ ಈಚೆಗೆ ಬಂದುಬಿಟ್ಟನು. ಶತ್ರುಗಳೂ ರಭಸದಿಂದ ಕೋಟೆಯ ಹೊರಗೇ ಬಂದು ಯದುರಾಜನನ್ನು ಬೆನ್ನಟ್ಟಿದರು.

ಯದುರಾಜನಿಗೂ ಅದೇ ಬೇಕಾಗಿದ್ದಿತು. ಅವರನ್ನು ಬಯಲಿಗೆ ತಂದವನೇ, ಹುಲಿಯಂತೆ ತಿರುಗಿಬಿದ್ದು ದಂಟನ್ನು ಕೊಯ್ವಂತೆ ಅವರನ್ನು ತರಿದುಹಾಕತೊಡಗಿದನು. ಉಳಿದ ಕೆಲವೇ ಜನರು ಜೀವಭಯದಿಂದ ಓಡಿ ಹೋದರು. ಕೂಡಲೇ ಯದುರಾಜನು ನಂಜರಾಜನಿದ್ದಲ್ಲಿಗೆ ಧಾವಿಸಿದನು.

ನಂಜರಾಜನು ಒಳಗೆ ಹೋದಕೂಡಲೇ ಭಯಗ್ರಸ್ತರಾದ ವೈರಿ ಸೈನಿಕರು ಒಡಕುಗಳನ್ನು ಕಾಯುವುದನ್ನು ಬಿಟ್ಟು ಮಧ್ಯದಲ್ಲಿ ಒಟ್ಟುಗೂಡಿದರು. ಆಗ ರಾಜಪಕ್ಷದವರೂ ಒಟ್ಟಾಗಿ ಬಂದು ಅವರ ಮೇಲೆ ಎರಗಿದರು. ಆ ಕಾಲದಲ್ಲಿ ಉಂಟಾದ ಮನುಷ್ಯವಧೆಯನ್ನು ವರ್ಣಿಸಲಾಸಲ್ಲ. ಮನುಷ್ಯರ ರುಂಡಗಳೂ ಕೈ ಕಾಲು, ಕಿವಿ ಮೂಗು ಮುಂತಾದ ಅವಯವಗಳೂ ಚರಗ ಚೆಲ್ಲಿದಂತೆ ಆಕಾಶದಲ್ಲಿ ಹಾರಲಾರಂಭಿಸಿದವು. ರಕ್ತದ ರೊಜ್ಜಿನಲ್ಲಿ ಕಡಿದುಕೊಂಡು ಬಿದ್ದ ಸೈನಿಕರ ಮೇಲೆ ಅವರ ಪಕ್ಷದವರೇ ಮೆಟ್ಟಿ ಹೋಗುತ್ತಿದ್ದರು.

ಆ ಸಮಯದಲ್ಲಿ ಮಾರನಾಯಕನು ಕುದುರೆಯನ್ನೇರಿಕೊಂಡು ಯದುರಾಜನನ್ನೇ ಸಂಹರಿಸಿ ಬಿಡಬೇಕೆಂದು ಭರದಿಂದ ಮುನ್ನುಗ್ಗಿದನು. ಭದ್ರನಾಯಕನು ಅವನನ್ನು ಮಧ್ಯದಲ್ಲಿತಡಹಿ, ಅವನೊಡನೆ ಕಾಳಗಕ್ಕೆ ನಿಂತನು. ಆದರೆ ಇಳಿವಯಸ್ಸಿನ ಭದ್ರನಾಯಕನು, ಮಾರನಾಯಕನ ಮುಂದೆ ಬಹುಕಾಲ ತಡೆಯಲಿಲ್ಲ. ಯದುರಾಜನು ಭದ್ರನಾಯಕನ ಸಹಾಯಕ್ಕೆ ಬರುವದರೊಳಗಾಗಿಯೇ, ಮಾರನಾಯಕನು ಆ ವೃದ್ಧ ವೀರನ ಶಿರಚ್ಛೇದವನ್ನು ಮಾಡಿಬಿಟ್ಟನು! 'ದುಷ್ಟಾ, ಘಾತಮಾಡಿದೆಯಾ?' ಎಂದವನೇ ಯದುರಾಜನು ಚಪಲತೆಯಿಂದ ತನ್ನ ಖಡ್ಗವನ್ನೆತ್ತಿ ಮಾರನಾಯಕನ ಕೈಯನ್ನು ಕಡಿದು ಹಾಕಿದನು. ಖಡ್ಗ ಸಹಿತವಾದ ಮಾರನ ಕೈಯು ನೆಲಕ್ಕೆ ಬೀಳುವಾಗಲೇ ನಂಜರಾಜನು ಆ ದುಷ್ಟನ ತಲೆಯನ್ನು ಹಾರಿಸಿಬಿಟ್ಟನು!

ಮಾರನಾಯಕನು ಮಡಿದ ಸುದ್ದಿನ್ನು ಕೇಳಿ ಶತ್ರು—ಸೈನ್ಯದವರು ದಿಕ್ಕೆಟ್ಟು ಓಡಲಾರಂಭಿಸಿದರು. ಕೈಗೆ ಸಿಕ್ಕವರು ತಮ್ಮ ಶಸ್ತ್ರಗಳನ್ನು ಕೆಳಗಿರಿಸಿ ಶರಣಾಗತರಾದರು.

ಆಗ ರಾಜಪಕ್ಷದವರ ಉತ್ಸಾಹದ ಧ್ವನಿಯಿಂದ ಇಡೀ ಮೈಸೂರು ಪಟ್ಟಣವು ಪ್ರತಿಧ್ವನಿಸಿತು. ವಿಜಯೀ ಸೈನಿಕರು ಚಾಮರಾಜನ ಧ್ವಜವನ್ನು ಮುಂದಿಟ್ಟುಕೊಂಡು ಮೆರವಣಿಗೆ ಹೊರಟು, ಅದನ್ನು ಅರಮನೆಯ ಉನ್ನತ ಸ್ಥಳದಲ್ಲಿ ಕಟ್ಟಿದರು. ಬಳಿಕ ಪುರಪ್ರಮುಖರೂ ಸೇನಾನಿಗಳೂ ಅರಮನೆಯಲ್ಲಿ ಪ್ರವೇಶಮಾಡಿ ಮಹಾರಾಜರ ದಿವ್ಯ ಸಿಂಹಾಸನದ ಮೇಲೆ, ಯದುರಾಜನ ಕೈಯಲ್ಲಿದ್ದ ಅವರ ಖಡ್ಗವನ್ನು ಇಟ್ಟು, ಪೂಜಿಮಾಡಿದರು. ಆಗ ಶ್ಯಾಮಯ್ಯಂಗಾರರು ಎಲ್ಲರನ್ನುದ್ದೇಶಿಸಿ—

''ಇಂದಿನಿಂದ ಮೈಸೂರಿನ ರಾಜ್ಯದ ಆಧಿಪತ್ಯವು ಮಹಾರಾಣಿಯರಲ್ಲಿ ಸೇರಿದೆ. ಈ ವಿಜಯಕ್ಕೆ ಕಾರಣರಾದ ವೀರರೂ ಸೇನಾನಿಗಳೂ ದಣಿದಿದ್ದಾರೆ. ಎಲ್ಲರೂ ವಿಶ್ರಾಂತಿ ತೆಗೆದುಕೊಳ್ಳಲಿ. ನಾಳೆ ಪ್ರಾತಃಕಾಲ ಸಭೆ ಸೇರುವುದು. ಎಲ್ಲರೂ ದಯಮಾಡಿಸಬೇಕು'' ಎಂದು ಹೇಳಿದರು.

ಆ ಶುಭಗಳಿಗೆಯೂ ಬಂದಿತು. ಅತಿ ರಮಣೀಯವಾಗಿ ಅಲಂಕರಿಸಿದ ವಿಸ್ತಾರವಾದ ಸಭಾಮಂದಿರದ ಎದುರಿನ ಭಾಗದಲ್ಲಿ ಸಿಂಹಾಸನವಿಟ್ಟಿತು. ಅದರ ಎಡಕ್ಕೂ ಬಲಕ್ಕೂ ಶುಭ್ರವಾದ ಆಚ್ಛಾದನಗಳಿಂದ ಯುಕ್ತವಾದ ನೂರಾರು ಗಾದಿಗಳನ್ನು ಹಾಸಿದ್ದು, ಗಾದಿಗೆ ಒಂದೊಂದು ರೇಶ್ಮೆಯ ದಿಂಬುಗಳಿದ್ದವು. ಎಲ್ಲರೂ ಸಿಂಹಾಸನದ ಮೇಲಿಟ್ಟ ಮಹಾರಾಜರ ಖಡ್ಗಕ್ಕೆ ಪ್ರಣಾಮ ಮಾಡಿ, ಯಥಾ ಪ್ರಕಾರವಾಗಿ ಕುಳಿತುಕೊಂಡರು. ತುಸು ಹೊತ್ತಿನ ಮೇಲೆ ಒಬ್ಬ ವ್ಯವಸ್ಥಾಪಕನು ಬಂದು, ಮಹಾರಾಣಿಯವರ ಆಗಮನದ ವಾರ್ತೆಯನ್ನು ಅರುಹಲು, ಎಲ್ಲರೂ ಎದ್ದು ನಿಂತರು.

ಶುಭ್ರವಾದ ವಸ್ತ್ರವನ್ನುಟ್ಟುಕೊಂಡು, ಕಲಾಬತ್ತಿನ ಬಿಳಿಯ ಶಾಲನ್ನು ಹೊದ್ದುಕೊಂಡು, ಮಹಾರಾಣಿಯವರು ಮೊದಲು ಬಂದರು. ಜರತಾರಿಯ ಕೇಸರಿಬಣ್ಣದ ಸೀರೆಯನ್ನು ಉಟ್ಟುಕೊಂಡು ರತ್ನಖಚಿತವಾದ ಅಲಂಕಾರಗಳನ್ನಿಟ್ಟುಕೊಂಡು, ಶ್ರೀದೇವಿಯಂತೆ ದೇವಕೀದೇವಿಯು ತನ್ನ ತಾಯಿಯನ್ನು ಹಿಂಬಾಲಿಸಿ ಬಂದಳು. ಅವರಿಬ್ಬರೂ ತಮ್ಮ ಆಸನಗಳನ್ನು ಅಲಂಕರಿಸಿದ ಮೇಲೆ ಉಳಿದವರೂ ಕುಳಿತುಕೊಂಡರು.

ಬಳಿಕ ನಂಜರಾಜನು ಎದ್ದು ನಿಂತು, ''ಮಹಾದೇವಿಯರೇ, ವೀರಾಗ್ರೇಸರರೇ, ಪ್ರಜಾಜನರೇ, ಚಾಮುಂಡೇಶ್ವರಿಯ ಅನುಗ್ರಹದಿಂದ ನಾವೆಲ್ಲರೂ ಈ ಸುದಿನವನ್ನು ಕಂಡೆವು. ಇದಕ್ಕಾಗಿ ನಮ್ಮ ಪರಮ ಪೂಜ್ಯರಾದ ಅಮಾತ್ಯರೂ ರಾಜಭಕ್ತಶ್ರೇಷ್ಠರಾದ ವಾಸುದೇವಯ್ಯನವರೂ, ಪ್ರತಿ–ಕುಬೇರರಾದ ನಮ್ಮ ಶ್ರೀಶೈಲ ಶೆಟ್ಟರೂ ಮನೆ–ಮಾರುಗಳ ತ್ಯಾಗಮಾಡಿ ಶ್ರಮಪಟ್ಟು ದುಡಿದು, ಈ ದಿವ್ಯವಾದ ಸಮಾರಂಭವನ್ನು ನಮಗೆ ತೋರಿಸಿದರು. ಇಲ್ಲಿ ನೋಡಿರಿ, ನನ್ನೆದುರಿಗೆ ಕುಳಿತ ನರಶಾರ್ದೂಲರಾದ ಯದುಮಹಾರಾಜರು ಮಾಡಿದ ಪರಾಕ್ರಮಗಳು ಒತ್ತಟ್ಟಿಗೆ, ನಾವೆಲ್ಲರೂ ಕೂಡಿ ಮಾಡಿದ ಕೆಲಸಗಳು ಒತ್ತಟ್ಟಿಗೆ; ಚತರದಲ್ಲಿ ನಾವು ಹೊಂದಿದ ಅಭೂತಪೂರ್ವವಾದ ವಿಜಯದ ಶ್ರೇಯಸ್ಸು ಸರ್ವವಿಧವಾಗಿಯೂ ಇವರದೇ. ಮೊನ್ನೆಯ ರಾತ್ರಿಯಲ್ಲಿ ಸಾಹಸಚಾತುರ್ಯಗಳಿಂದ ಕೋಟೆಯನ್ನು ಒಡೆದು, ಮಾರನಾಯಕನ ಸೈನ್ಯವನ್ನು ಹೊರಗೆಡವಿ, ನುಚ್ಚು ನೂರಾಗಿ ಮಾಡಿದವರು ಇವರೇ. ಕಾರ್ತಿಕೇಯನಂತಹ ಈ ಪರಾಕ್ರಮಶಾಲಿಯನ್ನು ನಾವು ಕಾಣದಿದ್ದರೆ ಮಾರನಾಯಕನಂತಹ ಪುಂಡನನ್ನು ಮುರಿಯುವುದು ನಮಗೆ ಕಷ್ಟವಾಗಿತ್ತು. ಇವರೇ ಈ ರಾಜ್ಯವನ್ನು ಹೊಸದಾಗಿ ಪ್ರತಿಷ್ಠಾಪಿಸಿದರೆಂದು ಹೇಳಿದರೆ ಅಪ್ರಾಸಂಗಿಕವಾಗದು. ಇವರ ವಿಷಯವಾಗಿ ಇನ್ನೊಂದು ಮಹತ್ವದ ಸಂಗತಿಯನ್ನು ಹೇಳುವದಿದೆ. ನಾವೆಲ್ಲರೂ ಈ ಮಹಾಕಾರ್ಯವನ್ನು ಕೈಗೆತ್ತಿಕೊಳ್ಳುವ ಸಮಯದಲ್ಲಿ ಶ್ರೀನಂಜುಂಡೇಶ್ವರನು ನನಗೆ ದೃಷ್ಟಾಂತದಲ್ಲಿ

ಹೇಳಿದ್ದೇನೆಂದರೆ—''ನಂಜರಾಜ, ಚಾಮುಂಡೇಶ್ವರಿಯ ದೇವಾಲಯದಲ್ಲಿ ಶ್ರಾವಣ ಪೂರ್ಣಿಮೆಯ ದಿವಸ ಯದುರಾಜರನ್ನು ಕಾಣುವೆ. ಅವರ ಸಹಾಯವನ್ನು ತೆಗೆದುಕೊಳ್ಳು. ಅವರು ಮಾರನನ್ನು ಸೋಲಿಸಿ ಮೈಸೂರಿನ ರಾಜ್ಯವನ್ನು ಪೂರ್ವಸ್ಥಿತಿಗೆ ತರುವರು. ಮೈಸೂರಿನ ಸಿಂಹಾಸನದಲ್ಲಿ ಅವರನ್ನು ಕುಳ್ಳಿರಿಸು. ಈ ಮಹಾತ್ಮರ ವಂಶದವರು ಚಿರಕಾಲವಾಗಿ ಮೈಸೂರಿನ ರಾಜ್ಯವನ್ನು ಒಳ್ಳೆಯ ರೀತಿಯಿಂದ ಪಾಲಿಸುತ್ತ ಬರುವರು. ಹೀಗೆ ಭಗವಾನ್ ಮಹೇಶ್ವರನು ಶಾಸನಗೆಯ್ದುದು ಇದುವರೆಗಂತೂ ನಿಜವಾಗುತ್ತ ಬಂದಿದೆ. ಇನ್ನು ಮುಂದಿನ ಕೆಲಸ ಮಹಾರಾಣಿಯವರಿಗೂ ಹಿರಿಯರಿಗೂ ಸೇರಿದುದು'' ಎಂದು ನುಡಿದನು.

ಬಳಿಕ ಅಮಾತ್ಯರಾದ ಶ್ಯಾಮಯ್ಯಂಗಾರರು ಎದ್ದು, ''ನಂಜರಾಜರು ಹೇಳಿದ ಅಭಿಪ್ರಾಯವೇ ನನ್ನ ಅಭಿಪ್ರಾಯವು. ಯದುರಾಜರ ಪರಾಕ್ರಮವು ಸರ್ವವಿಶ್ರುತವಾದ ಸಂಗತಿಯೇ ಆಗಿದೆ. ಅವರ ವಿಲಕ್ಷಣವಾದ ಬುದ್ಧಿಮತ್ತೆಯೂ ಸೌಜನ್ಯವಾದ, ನಿರ್ಮಲವಾದ ಆಚರಣೆಯೂ ಅವರ್ಣನೀಯವಾಗಿವೆ. ಇಂತಹ ಗುಣನಿಧಿಗಳಾದ ಇವರು ಸಾಕ್ಷಾತ್ ಯದುವಂಶಸಂಭೂತರು. ಇವರು ನಮ್ಮ ರಾಜರೆಂದು ಮಹಾರಾಣಿಯವರು ಈ ಸಭೆಯಲ್ಲಿ ಒಪ್ಪಿಕೊಂಡು ರಾಜಚಿಹ್ನೆಗಳನ್ನು ಅವರಿಗೆ ಸಮರ್ಪಿಸಬೇಕೆಂದು ನಾನು ವಿನಯದಿಂದ ಪ್ರಾರ್ಥಿಸುತ್ತೇನೆ. ಇನ್ನೊಂದು ಮಾತು. ಕುಮಾರಿ ದೇವಕೀದೇವಿಯವರಿಗೆ ಯದುರಾಜರೇ ತಕ್ಕವರಾದ ಪತಿಯೆಂದು ನಮ್ಮೆಲ್ಲರ ಅಭಿಪ್ರಾಯವಿರುವುದು. ಹೇಗೆ ಮಹಾರಾಣಿಯವರ ಇಚ್ಛೆಯೋ, ಹಾಗೆಯೆ ಆಗಲಿ.'' ಎಂದರು.

ಮಹಾರಾಣಿಯವರು ಉಲ್ಲಾಸದ ನಗೆಮೊಗದಿಂದ ಮಾತನಾಡಲೆಂದು ಎದ್ದು ನಿಂತರು.

''ಸಮಸ್ತ ಮಹನೀಯರೇ, ಯದುರಾಜರು ನಮ್ಮ ರಾಜ್ಯಕ್ಕೆ ಮಾಡಿದ ಉಪಕಾರವು ನಾವು ಅವರಿಗೆ ಏನನ್ನು ಕೊಟ್ಟರೂ ತೀರದು. ಈ ಉದಾರಚರಿತರಿಗೆ ಮೈಸೂರಿನ ರಾಜ್ಯಪದವನ್ನು ಕೊಡಬೇಕೆಂದು ನೀವೆಲ್ಲರೂ ನಮಗೆ ಸೂಚಿಸಿರುವಿರಿ. ಈ ವಿಷಯವನ್ನು ನಾನು ಸಂತೋಷದಿಂದ ಒಪ್ಪಿಕೊಂಡಿದ್ದೇನೆ. ದೇವಾಜಮ್ಮಣ್ಣಿಯೂ ಯದುರಾಜರೂ ಪರಸ್ಪರ ಅನುರಾಗವುಳ್ಳವರಾಗಿರುವರೆಂದು ನಮಗೆ ತಿಳಿದಿದೆ. ಅವರು ದೇವಾಜಿಯ ಪಾಣಿಗ್ರಹಣವನ್ನು ಮಾಡಬೇಕೆಂದು ನಮ್ಮ ಇಚ್ಛೆಯೂ ಇರುವುದು. ಯದುರಾಜರೇ, ಹೀಗೆ ದಯಮಾಡಿಸಬೇಕು. ಈ ರಾಜಚಿಹ್ನೆಗಳನ್ನು ಸ್ವೀಕರಿಸಿರಿ. ಈ ದೇವಕೀ ದೇವಿಯ ಹಸ್ತವನ್ನು ನಿಮ್ಮ ಕೈಯಲ್ಲಿ ಕೊಡುತ್ತೇನೆ.''

ಕೂಡಲೇ ''ಜಯ ಯದುಮಹಾರಾಜ!'' ಎಂದು ಎಲ್ಲರೂ ಜಯಘೋಷವನ್ನು ಮಾಡಿದರು. ಹೊರಗೆ ಮಂಗಲವಾದ್ಯಗಳೂ, ನಗಾರಿ–ನೌಬತ್ತುಗಳೂ, ಕಹಳೆಗಳೂ, ಸೈನಿಕರ ಕೂಗೂ ಒಟ್ಟಿಗೆ ಮಿಳಿತವಾಗಿ, ಸುರಲೋಕಕ್ಕೆ ಯದುರಾಜರ ಆಧಿಪತ್ಯವನ್ನು ತಿಳಿಸಲೆಂದು ಗಗನಮಂಡಲವನ್ನು ಭೇದಿಸಿ ನಡೆದುವು.

೪

ಮೂಕಜ್ಜಿಯ ಕನಸುಗಳು

ಶಿವರಾಮ ಕಾರಂತರ
'ಮೂಕಜ್ಜಿಯ ಕನಸುಗಳು' ಕಾದಂಬರಿಯ ಕಥನ

ಈ ಕಾದಂಬರಿಗೆ ಕಥಾನಾಯಕನಿಲ್ಲ; ನಾಯಕಿಯಿಲ್ಲ. ಮೂಕಜ್ಜಿಯೂ ಇಲ್ಲಿನ ನಾಯಕಿಯಲ್ಲ. ಸಾಂಪ್ರದಾಯಿಕತೆಯಿಂದ ಹೆರೆಗಟ್ಟಿದ ಮನಸ್ಸುಗಳನ್ನು ತುಸು ಕಾಯಿಸಿ ಕರಗಿಸುವ ಕೆಲಸ ಅವಳದ್ದು. ಅಂಥ ಅಜ್ಜಿಯೊಬ್ಬಳು ಇದ್ದಾಳೆಯೇ—ಎಂಬ ಸಂಶಯ ಬಂದರೆ ನಮ್ಮ ಸಂಸ್ಕೃತಿಯ ನಂಬಿಕೆಗಳನೇಕವನ್ನು ಕುರಿತಾದ ಸಂಶಯಪಿಶಾಚಿಯ ರೂಪವೇ ಅವಳೆಂದು ತಿಳಿದರಾಯಿತು. ಆದರೂ ಅವಳು ನಮ್ಮಲ್ಲನೇಕರಲ್ಲಿ—ಪಿಶಾಚಿಯಂತಲ್ಲ, ಪ್ರಾಮಾಣಿಕ ಸಂದೇಹದ ರೂಪದಲ್ಲಿ ಬದುಕಿಕೊಂಡು ಇದ್ದಾಳೆ. (ಮುನ್ನುಡಿಯಿಂದ)

ಮೂಕಜ್ಜಿಯ ಕನಸುಗಳು

ರಾಮಣ್ಣ ಎಣ್ಣೆಮಾರಿ ಜೀವಿಸುವವನು. ಮನೆಯಲ್ಲಿ ಗಾಣವುಂಟು. ಅವನು ಮಾಡಿದ ಒಂದು ತಪ್ಪು ಕೆಲಸವೆಂದರೆ, ಲಕ್ಷಣವಾದ ಒಂದು ಹುಡುಗಿಯನ್ನು ಮದುವೆಯಾಗಿ ಮನೆಗೆ ಕರೆದುತಂದದ್ದು. ಅವಳ ಹೆಸರು ನಾಗಿ. ಯಾರೋ ಅವಳನ್ನು ಹಾರಿಸಿಕೊಂಡು ಹೋದವರು ನಾಲ್ಕು ವರ್ಷಗಳ ಮೇಲೆ ಎಂಜಲೆಲೆಯ ಹಾಗೆ, ಉಂಡು ಎಸೆದರಂತೆ. ಅವಳ ತವರುಮನೆಯವರೇ ಮನೆಗೆ ಬರಹೇಳಿದ್ದರಂತೆ. ಚಿನ್ನ, ಬೆಳ್ಳಿಗಳ ಆಸೆ ತೋರಿಸಿ ಪುಸಲಾಯಿಸಿದರಂತೆ. ನಾಲ್ಕು ದಿನ ಅಲ್ಲೆಲ್ಲೊ ಅಡಗಿಸಿಟ್ಟರಂತೆ. ಆಮೇಲೆ ''ಹೊಳೆಗೆ ಇಳಿದ ಮೇಲೆ ಚಳಿ ಇಲ್ಲ'' ಎಂಬ ಗಾದೆ ಆಯಿತು. ಇಷ್ಟೆಲ್ಲ ಉಪಾಯ ಮಾಡಿದವರು ಅವಳನ್ನು ಇರಿಸಿಕೊಂಡರು. ಒಡವೆ, ಆಭರಣ ಕೊಟ್ಟು ಆ ಬಡವನನ್ನು ಮರೆಯುವ ಹಾಗೆ ಮಾಡಿದರು. ಸಮನಲ್ಲವೆ? ಗಂಡನ ಮನೆಯಲ್ಲಿದ್ದರೆ ಅವಳು ಗಾಣದ ಎತ್ತಾಗಬೇಕಿತ್ತಲ್ಲ! ಎಳೆಯ ಪ್ರಾಯ, ಎಷ್ಟು ಬುದ್ಧಿ ಇದ್ದೀತು–ಅವನನ್ನು ಬಿಟ್ಟು ಓಡಿ ಬರುವುದಕ್ಕೆ. ಸರಿ, ಎರಡು ಮಕ್ಕಳಾದವು. ಆಗ ಅವರ ಮನಸ್ಸು ಮತ್ತೆಲ್ಲೊ ಹರಿಯಿತು. ಒಂದು ದಿವಸ ಅವಳಿಗೆ ಕೊಟ್ಟ ಚಿನ್ನಗಿನ್ನಗಳನ್ನು ಮುರಿಸಿ ಹೊಸತು ಮಾಡುವ ಆಸೆ ತೋರಿಸಿ, ತಂದಿಟ್ಟು ಕೊಂಡರು. ಮತ್ತೆ ಅಲ್ಲಿಗೆ ಹೋಗುವುದನ್ನು ನಿಲ್ಲಿಸಿದರು. ಅವಳಿಗೆ ಊಟಕ್ಕೆ ಕೊಡುವುದನ್ನೂ ನಿಲ್ಲಿಸಿದರು. ಇವಳು ಕಂಗಾಲಗೊಂಡು ಅವರ ಮನೆಯ ಬಾಗಿಲಿಗೂ ಹೋಗಿ ಅತ್ತಳಂತೆ. ಅದಕ್ಕವರು, ''ರಂಡೆ, ನಮ್ಮ ಅಂಗಳಕ್ಕೆ ಕಾಲಿಟ್ಟರೆ ಸೊಂಟ ಮುರಿಸಿಯೇನು'' ಎಂದರಂತೆ. ಅಷ್ಟು ಮಾಡಿಸುವವರೇ. ಇಷ್ಟೆಲ್ಲ ಕತೆ ನಡೆದ ಮೇಲೆಯೂ, ಆ ರಾಮಣ್ಣ ಇವಳ ಹತ್ತಿರ ಹೋಗಿ ''ಬಾ'' ಎಂದು ಬೇಡಿದನಂತೆ. ಅವಳು ನಾಚಿ, ಅತ್ತು ''ಬೇಡ, ನಿಮಗೆ ಈ ಎಂಜಲು ಜೀವ'' ಎಂದು ಮಾತಿಗೂ ನಿಲ್ಲದೆ ಓಡಿದಳಂತೆ.

ಹೆಣ್ಣು ಗಂಡಿನ ಹಿಂದೆಯೋ, ಗಂಡು ಹೆಣ್ಣಿನ ಹಿಂದೆಯೋ ಓಡಿ ಹೋದದ್ದು ಕತೆಗಳಲ್ಲೂ ಉಂಟು. ಬದುಕಿನಲ್ಲೂ ಉಂಟು. ಇದರಲ್ಲಿ ನನಗೆ ಕಾಣಿಸಿದ ವಿಶೇಷವೆಂದರೆ, ಆಕೆಯ ತವರುಮನೆಯ ಪಾತ್ರವೂ ಇರಬಹುದಾದದ್ದು, ಎಳೆಯ ಮಕ್ಕಳನ್ನು ಸಾಕುವ ಭಾರ ತಾನೇ ಹೊತ್ತದ್ದು. ಅಷ್ಟಿದ್ದರೂ ತಾನು ರಾಮಣ್ಣನ ಜೊತೆಗೆ ಹೋಗದೆ, ಅವನ ಗೌರವ ಉಳಿಸಿದ್ದು.

ಒಮ್ಮೆ ನಮ್ಮೂರಿನ ಜಾತ್ರೆಯಲ್ಲಿ ಅವಳನ್ನು ಕಂಡಾಗ ಇದೆಲ್ಲ ವಿಷಯ ತಿಳಿದುಬಂದಿತ್ತು. ನನಗಾಗ ಹದಿನಾರರ ಪ್ರಾಯ. ಅವಳನ್ನು ಹತ್ತಿರದಿಂದ ಮಾತನಾಡಿಸಬೇಕೆಂಬ ಚಪಲ ಮೂಡಿತು. ಅವಳು ಮಕ್ಕಳಿಗಾಗಿ ಅರ್ಧಾಣೆಯ ಬೆಲೆಯ ಮಂಡಕ್ಕಿ ಖರೀದಿ ಮಾಡಿ ಜನರ ಗದ್ದಲವಿಲ್ಲದ ಒಂದು ಮರದ ಕೆಳಗೆ ಕುಳಿತಿದ್ದಳು. ನಾನು ಹಬ್ಬಕ್ಕೆ ತಂದಿದ್ದ ಎರಡಾಣೆ

ಪಾವಲಿಯನ್ನು ಅವಳ ಕಡೆಗೆ ಎಸೆದು, ''ಆ ಮಕ್ಕಳಿಗೇನಾದರೂ ತೆಗೆಸಿಕೊಡು'' ಎಂದೆ. ಅವಳು ಆಗ ಮಾಡಿದ ಕಣ್ಣನ್ನು ನೆನೆದರೆ ಈಗಲೂ ಭಯವಾಗುತ್ತದೆ.

''ನಾನು ನಿಮ್ಮ ನಾಯಿಯಲ್ಲ'' ಎಂದಳು.

''ಏ ಮಹಾರಾಯತಿ, ಈ ಸಣ್ಣ ಮಕ್ಕಳ ಪಾಪ ಕಂಡು ದುಡ್ಡನ್ನೆಸೆದೆ. ಬೇಡವಾದರೆ ಬಿಡು. ನಾನೂ ಈ ಊರಿನವನೇ, ಅಡಿಗಳ ಮನೆಯವನು. ಮೂಕಜ್ಜಿಯ ಮೊಮ್ಮಗ'' ಎಂದೆ.

ಆಕೆ ನನ್ನನ್ನು ಬಿರಬಿರನೇ ನೋಡಿದಳು. ''ಅಯ್ಯಾ, ನಾನು ಮಾಡಿದ ಪಾಪವನ್ನು ನಾನೊಬ್ಬಳೇ ಅನುಭವಿಸಿ ತೀರುತ್ತೇನೆ. ನನಗೆ ಯಾರದ್ದೂ ಕಾಸು ಬೇಡ. ಅದು ನನ್ನ ಮಕ್ಕಳಿಗೂ ಬೇಡ. ನನ್ನ ರಟ್ಟೆ ಗಟ್ಟಿಯಿದೆ. ದುಡಿಯುತ್ತೇನೆ.'' ಅವಳ ಕಣ್ಣುಗಳಲ್ಲಿ ಒಂದು ತೊಟ್ಟು ನೀರು ಹನಿದ ಹಾಗೆ ಕಂಡಿತು. ಆದರೂ ಧಿಮಾಕಿನಿಂದ ಕಣ್ಣರಳಿಸಿ ಮಕ್ಕಳನ್ನು ಎತ್ತಿಕೊಂಡು ಹೊರಟು ನಿಂತಳು. ''ಅಯ್ಯ, ನೀವು ದೊಡ್ಡವರ ಮನೆಯವರು. ನಿಮ್ಮ ಅಜ್ಜಮ್ಮ ದೇವರ ಹಾಗೆ. ಆದರೂ ನನಗೆ ಯಾರ ಹಂಗೂ ಬೇಡವೆಂದು ಹಾಗಂದೆ. ಸಿಟ್ಟು ಮಾಡಬೇಡಿ,'' ಎಂದಳು.

''ನನಗೆ ಯಾತಕ್ಕೆ ಸಿಟ್ಟು? ನಿನ್ನ ಧೈರ್ಯ ಕಂಡರೆ ಮಾತ್ರ ಆಶ್ಚರ್ಯವೇ ಆಗುತ್ತದೆ.''

''ಒಡೆಯ, ಆಟದ ಪ್ರಸಂಗದಲ್ಲಿ ಭೀಷ್ಮಾಚಾರ್ಯರ ಎದುರಿನಲ್ಲಿ ಶಿಖಂಡಿನಿಂತ ಹಾಗೆ, ನನ್ನದೊಂದು ಹಟ. ಈ ಮಕ್ಕಳನ್ನು ದೊಡ್ಡದು ಮಾಡಿ, ನನ್ನ ದುಡಿತದಿಂದಲೇ ದೊಡ್ಡದು ಮಾಡಿ, ಅವರನ್ನು ಆ ಒಡೆಯರ ಮುಂದಕ್ಕೆ ನಿಲ್ಲಿಸಿ. 'ನೋಡಿ ಇವನ್ನು; ನೋಡಿದ ಮೇಲೆ ಬಾವಿಗೆ ಹಾರಿಕೊಳ್ಳಿ' ಎಂದು ಹೇಳಿ ಬರುವಳು, ನಾನು.''

''ನನ್ನ ಹತ್ತರ ಏನು ಪಂಥ ನಿನ್ನದು? ಶಾಲೆಗೆ ಹೋಗುವ ಹುಡುಗ, ನಾನು.''

''ನಿಮಗೆ ಹೇಳಿದ್ದಲ್ಲ ಈ ಮಾತು. ಈ ಮಾತು ನಿಮ್ಮ ಮಾವನ ಕಿವಿಗೆ ಹಾಕಿ,'' ಎಂದು ಹೇಳಿ ಸರಿದೇ ಹೋದಳು.

ಅವಳ ಮಾತಿಂದ ನನ್ನ ಮನಸ್ಸು ಕುದಿಯಿತು. ಜಾತ್ರೆಯೂ ಬೇಡ, ಏನೂ ಬೇಡ ಎಂಬ ಭಯವಾಗಿ ನೆಟ್ಟಗೆ ಮನೆಗೆ ಹೋದೆ. ಮನೆಯ ಮುಂಗಡೆಯ ಅಶ್ವತ್ಥ ಕಟ್ಟೆಯ ಮೇಲೆ ಅಜ್ಜಿ ಕುಳಿತಿದ್ದರು. ಅಜ್ಜಿಗೆ ನಡೆದ ವಿಷಯವನ್ನೆಲ್ಲ ಹೇಳಿದೆ. ''ಅಜ್ಜಿ ನನಗೆ ಎಷ್ಟು ಮಂದಿ ಮಾವಂದಿರು? ನನ್ನ ಅಮ್ಮನಿಗೂ ಅಣ್ಣತಮ್ಮಂದಿರಿಲ್ಲ'' ಎಂದು ಕೇಳುತ್ತ ಆ ಪಾವಲಿಯನ್ನು ಅವರ ಕೈಲಿರಿಸಿದೆ.

''ಈ ಪಾವಲಿಯನ್ನು ಅವಳು ಮುಟ್ಟಿರಬೇಕಲ್ಲವೆ? ಬಿಸಿಯಿಂದ ಕುದಿಯುತ್ತಿದೆ. ನಾಗಿ ಮುಟ್ಟಿದ್ದಾದರೆ ಹಾಗೆಯೇ. ಅವಳ ಜೀವನದ ಕುದಿಯೆಲ್ಲ ಅದಕ್ಕೆ ಬಂದಿತು'' ಎಂದರು.

''ಅವಳ ಮಕ್ಕಳು ಬೆಳೆದು ದೊಡ್ಡದಾದ ಮೇಲೆ ಅವಳು ಹೇಳಿದ ಹಾಗೆ ಮಾಡಿಯಾಳೇ?''

''ಮಾಡಿಯಾಳು. ಒಂದು ಲೆಕ್ಕಕ್ಕೆ ಸತ್ಯವಂತೆ.''

''ಆ ಮಕ್ಕಳಿಂದ ಅವರನ್ನು ಕೊಲ್ಲಿಸದಿದ್ದರೆ ಸಾಕು. ನನಗೆ ಹೆದರಿಕೆ ಬಂದಿದೆ.'' ಎಂದೆ. ಅಜ್ಜಿ ಅದನ್ನು ಕೇಳಿ ನಕ್ಕರು. ''ಮರುಳ ನೀನು, ಸಾವೊಂದು ದೊಡ್ಡದೇ ಮಾನಕ್ಕಿಂತಲೂ''

ಎಂದರು. ಆ ನಂತರ ಆ ಮಾವನ ವಿಚಾರವನ್ನು ಹೇಳಿದರು. ಆತ ನಮ್ಮ ತಂದೆಯ ಮೊದಲನೆಯ ಹೆಂಡತಿಯ ತಮ್ಮ; ನನ್ನ ಖಾಸ ಮಾವನಲ್ಲ ಎಂದು ತಿಳಿದು ಸಮಾಧಾನವಾಯಿತು— ನಾಗಿಯ ಕೋಪ–ತಾಪ ನನ್ನನ್ನು ಬಾಧಿಸಬೇಕಾಗಿಲ್ಲ ತಾನೇ.

ಈ ನಮ್ಮ ಅಜ್ಜಿ ನನಗೆ ನೇರಾದ ಅಜ್ಜಿಯಲ್ಲ. ನನ್ನ ತಂದೆಯ ತಂದೆಯ ತಂಗಿ ಅವರು. ನಮ್ಮ ಮುತ್ತಜ್ಜ ಕೊಲ್ಲೂರು ಮೂಕಾಂಬಿಕೆಯ ನೆನಪಿನಿಂದಲೋ ಏನೋ, ಅವರಿಗೆ ಚಿಕ್ಕಂದಿನಲ್ಲಿ ''ಮೂಕಿ''ಯೆಂದೇ ಹೆಸರಿಟ್ಟು ಕರೆಯುತ್ತಿದ್ದರಂತೆ. ಹತ್ತು ತುಂಬುವ ಮೊದಲೇ ಅವರಿಗೆ ಲಗ್ನವಾಯಿತು. ಗಂಡನಿಗೆ ಹದಿನಾಲ್ಕೊ ಹದಿನೈದೊ, ಅಷ್ಟೆ. ಮದುವೆಯಾಗಿ ಆರೋ ಮೂರೋ ತಿಂಗಳಲ್ಲಿ ಆತ ಸನ್ನಿಪಾತದಿಂದ ತೀರಿಕೊಂಡ. ಇವರಿಗೆ ಹತ್ತು ತುಂಬದೆ ಹೋದರೂ ವಿಪತ್ತು ಮಾತ್ರ ತುಂಬಿಬಂದಿತು. ಈ ವಿಪತ್ತಿನಿಂದಾಗಿ ಅವರ ಹೆಸರು ಅನ್ವರ್ಥವಾಯಿತು. ಮನೆಗೆಲಸಗಳಲ್ಲಿ ಎಂದೂ ಆಲಸ್ಯ ತೋರಿದವರಲ್ಲವಾದರೂ ಯಾರೊಡನೆಯೂ ಮಾತುಕತೆ ಇಚ್ಛಿಸಲಿಲ್ಲವಂತೆ. ಮುಂದೆ ಅವರು ಗ್ರಾಮದ ಗಡಿಯನ್ನು ಬಿಟ್ಟು ಹೋದವರೂ ಅಲ್ಲ, ಎನ್ನುತ್ತಾರೆ.

ನಮ್ಮ ಅಜ್ಜನ ಕಾಲ ಸಂದಿತು. ಅವರ ಸ್ಥಾನದಲ್ಲಿ ಅಜ್ಜಿ ಮನೆಯ ಒಂದು ಗೋಡೆಯಷ್ಟು ಆಧಾರವಾಗಿ ನಿಂತರು. ನನ್ನ ತಂದೆ ಮೂಕಜ್ಜಿಯ ತೊಡೆಯ ಮೇಲೆ ಬೆಳೆದರು. ಸಂಸಾರದಲ್ಲಿ ಇನ್ನೂ ನಾಲ್ಕಾರು ಹುಟ್ಟು–ಸಾವುಗಳಾದವು. ಮುಂದೆ ನಮ್ಮ ತಂದೆ ತೀರಿಕೊಂಡಾಗ ನಾನಿನ್ನೂ ಹುಡುಗ. ಆ ದಿವಸ ಅವರ ಶವದ ಮುಂದೆ ನಿಂತು, ''ನೀನು ಒಂದು ಕೆಲಸ ಒಳ್ಳೆಯದು ಮಾಡಿದ್ದೀಯ. ಅವಳನ್ನು (ಅಂದರೆ ನನ್ನ ತಾಯಿ) ಮೊದಲೇ ಕಳುಹಿಸಿಕೊಟ್ಟೆ. ಈ ಮಕ್ಕಳ ಚಿಂತೆ ಬೇಡ, ನಾನು ನೋಡಿಕೊಂಡೇನು. ಹೋಗಿ ಬಾ'' ಎಂದರು. ಕಂಬನಿಯಿಂದ ಥರಥರಿಸುತ್ತಿದ್ದ ನನ್ನನ್ನು ಕಂಡು, ''ಯಾರು ಶಾಶ್ವತ? ಇದೆಲ್ಲ ಒಂದು ಆಟ–ಕನಸು ಅಂದರೆ ಕನಸು. ಸಂಸಾರವೂ ಹಾಗೆಯೇ, ಸುಖದುಃಖಗಳೂ ಹಾಗೆಯೇ. ದೇವರೂ ಹಾಗೆಯೇ, ದಿಂಡರೂ ಹಾಗೆಯೇ. ಎಲ್ಲವೂ ನಾವು ಕಟ್ಟಿಕೊಂಡ ಹಾಗೆ. ಹೋಗು ಕಳುಹಿಸಿಕೊಟ್ಟು ಬಾ'' ಎಂದರು.

ತಂದೆಯವರು ತೀರಿಕೊಂಡರೂ ಅಜ್ಜಿ ನನ್ನ ಮತ್ತು ನನ್ನ ತಮ್ಮ ನಾರಾಯಣನ ಓದು–ಬರಹಗಳನ್ನು ಹಾಳುಗೆಡೆಯಲು ಅವಕಾಶ ಕೊಡಲಿಲ್ಲ. ಅವರ ಪ್ರೀತಿ, ಆದರ, ಪೋಷಣೆಗಳಲ್ಲಿ ಬೆಳೆದ ನನಗೆ ನಮ್ಮ ಬಾಂಧವ್ಯಗಳು ಬೆಸೆದ ರೀತಿಯೆಂದೂ ಮರವೆಯಾಗುವದಿಲ್ಲ. ಈಗಲೂ ನನಗೆ ನಮ್ಮ ಅಜ್ಜಿಯ ಮುಂದಕ್ಕೆ ನಾನು ದೊಡ್ಡವನಾಗಿದ್ದೇನೆ ಎಂದು ಕಾಣಿಸುತ್ತಲಿಲ್ಲ. ನನಗೀಗ ಮದುವೆಯಾಗಿದೆ. ಇಬ್ಬರು ಚಿಕ್ಕ ಮಕ್ಕಳಿದ್ದಾರೆ. ನಮ್ಮ ಸಣ್ಣದರಲ್ಲಿ ನಮಗೆ ಕತೆ ಹೇಳಿದಂತೆ, ಇವರಿಗೆ ಮಾತ್ರ ಕತೆ ಹೇಳಿದ್ದನ್ನು ಕಾಣೆ. ಸೀತೆ ನಮ್ಮ ಮನೆಯಲ್ಲಿ ಕಾಲಿರಿಸಿದಂದಿನಿಂದ ಅವಳಿಗೇ ಯಜಮಾನಿಕೆಯ ಪಟ್ಟವನ್ನು ಕಟ್ಟಿ, ದೂರ ಉಳಿದಿದ್ದಾರೆ. ಆದರ ನಮ್ಮ ಮನೆಗೆ ಬಂದು ಹೋಗುವ ಯಾರಿಗಾದರೂ ಸರಿಯೆ, ಅದರ ವಿಷಯದಲ್ಲಿ ಆದರ ಇದ್ದಹಾಗೆ ಕಾಣಿಸುವುದಿಲ್ಲ. ಎಂಬತ್ತರ ವಯಸ್ಸಿನ ನಮ್ಮ ಅಜ್ಜಿಗೆ ಅರೆಮರುಳು ಎಂಬ ಅಭಿಪ್ರಾಯ ಊರವರದು.

ಅದಕ್ಕೆ ಇದೊಂದು ಕಾರಣವಿರಬಹುದು. ಅವರ ಕೈಗೆ ಏನಾದರೂ ವಸ್ತು ಒಡನೆ ಬಂದಿತೆಂದರೆ, ಅಥವಾ ಮಕ್ಕಳು ಕೈಗೇನಾದರೂ ಕೊಟ್ಟವೆಂದರೆ, ಎರಡು ನಿಮಿಷ ಕಣ್ಣುಮುಚ್ಚಿ ಕುಳಿತುಕೊಳ್ಳುತ್ತಾರೆ. ಆ ಬಳಿಕ ತಮ್ಮಷ್ಟಕ್ಕೆ ಏನೇನೋ ಕನಸು ಕಂಡವರ ಹಾಗೆ ಗೊಣಗುತ್ತಾರೆ. ಮೂಕಜ್ಜಿಗೆ ಮುಪ್ಪಿನ ಮರುಳು ಎನ್ನುತ್ತಾರೆ ಜನ. ಜನರ ಆ ಭಾವನೆ ಮಾತ್ರ ನನ್ನ ಮನಸ್ಸನ್ನು ತುಂಬಾ ನೋಯಿಸುತ್ತದೆ.

ಇಂಥ ಮನಸ್ಥಿತಿಯಲ್ಲಿ ನಾನೊಮ್ಮೆ ಅವರ ಜೊತೆಯಲ್ಲಿ ಅಶ್ವತ್ಥದ ಕಟ್ಟೆಯ ಮೇಲೆ ಕುಳಿತಿದ್ದೆ. ಅವರು ನನ್ನ ಕಡೆ ದೃಷ್ಟಿ ಹರಿಸದೆಯೇ ಏನೇನೊ ತಮ್ಮಷ್ಟಕ್ಕೆ ಗೊಣಗುತ್ತಿದ್ದರು. ಅದನ್ನು ಕಂಡಾಗ ನನಗೆ, ''ಇಷ್ಟು ಪ್ರಾಯವಾಗುವ ತನಕ ಯಾರೂ ಬದುಕಿರಬಾರದಪ್ಪಾ'' ಎಂಬ ಯೋಚನೆ ಬಂತು. ಮರುಕ್ಷಣಕ್ಕೆ ಅವರು, ''ಮಗು ನಿನ್ನ ಅಜ್ಜಿ ನಿನಗೆ ಭಾರವಾದಳೆ?'' ಎಂದು ಹೇಳಿ ನಕ್ಕುಬಿಟ್ಟರು. ಆಗ ನನ್ನ ಎದೆ ಧಡಲ್ ಎಂದಿತು. ''ಅಜ್ಜಿ ದಮ್ಮಯ್ಯ, ನಿಮ್ಮಷ್ಟಕ್ಕೆ ನೀವು ಗೊಣಗುವುದನ್ನು ಕಂಡು ಒಂದು ಕ್ಷಣಕ್ಕೆ ಹಾಗನಿಸಿದ್ದು ನಿಜ, ಅದು ನೀವು ಬೇಡವಾಗಿಯೂ ಅಲ್ಲ, ಭಾರವಾಗಿಯೂ ಅಲ್ಲ. ಮನಸ್ಸಿನ ಮೇಲೆ ಹತೋಟಿ ಇಲ್ಲದಾಗ ಬದುಕಿ ಫಲವೇನು–ಎಂದು ಕಾಣಿಸಿದ್ದು ನಿಜ. ತಪ್ಪಾಯಿತು ನನ್ನಿಂದ'' ಎಂದೆ.

''ನಿನ್ನ ಮನಸ್ಸು ನನಗೆ ಗೊತ್ತಿಲ್ಲವೆ? ಆದರೂ ಹೇಳಿದೆ ಚೇಷ್ಟಗ.''

''ನಿಮಗೆ ಹೇಗೆ ಗೊತ್ತಾಯಿತಪ್ಪ, ಅದು?''

''ಹೇಗೋ! ನೀನು ಎಣಿಸಿದ್ದೆಲ್ಲ ನಾನೇ ಎಣಿಸಿದಷ್ಟು ಸ್ಪಷ್ಟವಾಯಿತು. ಹೇಳಿದೆ. ನನಗೆ ಏನೇನೊ ಕಾಣಿಸುತ್ತದೆ. ಏನೇನೋ ಅನ್ನುತ್ತೇನೆ. ಅದೂ ಒಂದು ತರ ಕನಸಿದ್ದರೂ ಇದ್ದೀತು. ಅಂದ ಹಾಗೆ ಮಾಣಿ, ನಿನ್ನೆ ರಾತ್ರಿ ಅಷ್ಟು ಹೊತ್ತಿನ ತನಕ ಎಲ್ಲಿ ಹೋಗಿದ್ದೆ? ನೀನು ಬಂದದ್ದು ನನಗೆ ಗೊತ್ತೇ ಆಗಲಿಲ್ಲ'' ಎಂದರು ಅಜ್ಜಿ.

''ಅದೇ? ನಾಗನ ಕಾಲು ಬರೆಯಲ್ಲಿ ಋಷಿಗಳ ಗುಹೆ–ಗಿಹ ಇದೆ ಎನ್ನುತ್ತಾರಲ್ಲ, ಇರುವುದಾದರೆ ಹೌದೇ–ಎಂದು ಜನ್ನನನ್ನು ಕಟ್ಟಿಕೊಂಡು ನೋಡುವುದಕ್ಕ ಹೋದೆ.''

''ಋಷಿಗಳಿಗೆ ತಪಸ್ಸು ಮಾಡಬೇಕೆಂದು ಕಂಡರೆ, ಕಾಡಿಗೆ ಹೋಗಬೇಕೆಂದು ನನಗೆನಿಸುವುದಿಲ್ಲ.''

''ಮನೆಯಲ್ಲಿ ಹೆಂಡತಿ ಮಕ್ಕಳ ಗಲಾಟೆಯಲ್ಲಿ, ಸಂಸಾರದ ತಾಪತ್ರಯದಲ್ಲಿ ತಪಸ್ಸು ಮಾಡಲು ಬಂದೀತೇ ಅಜ್ಜಿ?''

''ನಾನು ಇಷ್ಟು ವರ್ಷವೂ ಇಲ್ಲಿ ಮಾಡಿಕೊಂಡಿದ್ದದ್ದು ಏನು? ಮಕ್ಕಳು ಮರಿಗಳು ನನಗೇನು ಮಾಡಿದುವಂತೆ?- ಕಾಡಿನಲ್ಲಿ ನಮ್ಮ ಜತೆಗೆ ಮಾತನಾಡುವ ಮನುಷ್ಯರೇನೊ ಇರಲಾರರು. ಹುಲಿ, ಕರಡಿ, ಹಕ್ಕಿ, ಮತ್ತೊಂದು ಅಲ್ಲಿ ಕೂಗುವುದಿಲ್ಲವೆ? ಮನೆಯಲ್ಲಿ ಮಲಗಿದ್ದಾಗ ಚಾಪೆಯ ತಗಣೆ ಕಡಿದರೆ ಅಲ್ಲಿ ಕಟ್ಟಿರುವೆ ಕಚ್ಚೀತು. ಗುಹೆಗೆ ಹೋದವರಿಗೆ ಉಪದ್ರ ಕಡಿಮೆ ಎನ್ನುತ್ತೀಯಾ?''

''ಹಾಗಿದ್ದರೆ ಅವರು ಯಾಕೆ ಹೋಗುತ್ತಿದ್ದರು?''

"ನೀನು ಚೇರಟೆ ಹುಳು ಕಂಡಿದ್ದೀಯಲ್ಲ, ಅದನ್ನು ಮುಟ್ಟಿದರೆ ಥಟ್ಟನೆ ಮುರಟಿಕೊಂಡು ಬಿಡುತ್ತದೆ, ಹೊರಗಿನ ಭಯಕ್ಕೆ. ಋಷಿಗಳು ಗುಹೆ ಸೇರುವುದಕ್ಕೆ ಸಂಸಾರದ ಭಯವೇ ಕಾರಣ. ಸಂಸಾರ, ಜಗತ್ತು ಅಂದ ಮೇಲೆ ಸುಖ–ದುಃಖ–ನೋವು–ಮತ್ತೊಂದು ಇದ್ದೇ ಇರುತ್ತವೆ. ಇವರಿಗೆ ಅಂಥ ನೋವುಗಳು ಬೇಡ."

"ಹಾಗಿದ್ದರೆ ಅದನ್ನು ತಪ್ಪಿಸುವ ದಾರಿ ಯಾವುದೆನ್ನುತ್ತೀರಿ?"

"ಒಂದೇ ದಾರಿ. ಹುಟ್ಟದೆಯೇ ಇರುವುದು! ಆದರೆ ದೇವರು ಸಂಸಾರದ ಒಳಗೆ ಅವರನ್ನು ಹುಟ್ಟಿಸಿಯಾಯಿತು. ಏನು ಮಾಡಬೇಕು? ಹಡೆದ ತಾಯಿಯ ಹೊಟ್ಟೆಯನ್ನು ತಿರುಗಿ ಸೇರುವುದು ಅಸಾಧ್ಯವಾದದ್ದಕ್ಕೆ ಗುಹೆ ಹುಡುಕಿಹೋಗುತ್ತಾರೆ. ಸಂಸಾರ ಎಲ್ಲಿಲ್ಲವಂತೆ? ಗುಹೆಯೂ ಸಂಸಾರವೇ. ದೇಹ ಇರುವ ತನಕವೂ ನಾವಾಗಿ ಅದನ್ನು ಬಿಡಲಿಕ್ಕೆ ಬರುವದಿಲ್ಲ."

ನಮ್ಮ ಪರಂಪರೆಯ ಎಲ್ಲರೂ ಸಂಸಾರದ ಮೋಹ ಬಿಡಬೇಕು ಎನ್ನುತ್ತಿರುವಾಗ ನಮ್ಮ ಅಜ್ಜಿ ಮಾತ್ರ ಹೀಗೆ ಹೇಳುತ್ತಿರುವುದನ್ನು ಕೇಳಿ ವಿಸ್ಮಯವಾಯಿತು. ಅವರಿಗೆ ಸ್ವಂತ ಸಂಸಾರದ ಸುಖ ದೊರೆಯಲಿಲ್ಲವೆಂಬುದರಿಂದ ಹೀಗೆ ಅನ್ನುತ್ತಿದ್ದಾರೆಯೇ?

"ಅಜ್ಜಿ, ನಿಮ್ಮಲ್ಲಿ ಕೇಳಲಿಲ್ಲ, ಈ ತನಕ. ಗೊತ್ತಿಲ್ಲದ್ದಕ್ಕೆ ಕೇಳುತ್ತೇನೆ, ನಿಮಗೆ ಸಣ್ಣದರಲ್ಲಿ ಮದುವೆ ಆಯಿತಂತಲ್ಲ?"

"ಉಡುತ್ತ ಇದ್ದೇನಲ್ಲ–ನನ್ನ ಹತ್ತು ವರ್ಷದ ಪ್ರಾಯದಿಂದಲೂ ಇಂಥ ಕೆಂಪು ಸೀರೆಯನ್ನು! ನನಗೆ ಪ್ರಾಯ ತುಂಬಿದಾಗ ನನ್ನಷ್ಟಕ್ಕೆ ನಾನು ಏನೇನೋ ಮಾತನಾಡುತ್ತ ಇದ್ದೆನಂತೆ. ನನಗೆ ಭೂತ ಹಿಡಿದಿದೆ ಎಂದು ಹೆದರಿದರು. ಯಾವನೊ ಒಬ್ಬ ಮಂತ್ರವಾದಿ ಬಂದು ನನ್ನನ್ನು ಹುಣಿಸೆ ಅಡರಿನಿಂದ ಹೊಡೆದೇ ಹೊಡೆದ. 'ಹೋಗು ಹೊರಟುಹೋಗು' ಎಂದು ಕೂಗಿದ. ಅಂತೂ ಹೆದರಿಸಿ ಬಡೆದು ನನ್ನ ಬಾಯಿಂದ 'ಹೋಗುತ್ತೇನೆ'–ಅನ್ನಿಸಿ, 'ಇನ್ನು ಈ ಮನೆಯೊಳಗೆ ಕಾಲಿಡಕೂಡದು' ಎಂದು ತಾಕೀತು ಮಾಡಿದ. ಎಂಟು ದಿನಗಳ ತನಕ ನನ್ನ ಬೆನ್ನಿನಲ್ಲಿ ಬಿದ್ದ ಬಾಸುಂಡೆ ಮಾಯವಾಗಲಿಲ್ಲ. ನಾನು ಮಾತನಾಡಿದ್ದರ ಫಲ ಎನ್ನಿಸಿ ಬಾಯಿ ಮುಚ್ಚಿ ಬದುಕಲು ಕಲಿತೆ. ಆಗ ನನ್ನ ಮನಸ್ಸಿನ ನಮೂನೆಯೇ ಒಂದು ತೆರನಾಯಿತು. ಈ ಮನೆಯನ್ನು ಬಿಟ್ಟು ಹೊರಗೆ ಹೋದರೆ ಸಾಕು. ಅಥವಾ ಗುರುತು ಇರುವವರು ಯಾರಾದರೂ ಬಂದರೆ ಸಾಕು. ಇಲ್ಲವೆ ದೇವಸ್ಥಾನಕ್ಕೆ ಹೋದರೂ ಸರಿಯೇ; ಏನಾದರೂ ಹೊಸತನ್ನು ಮುಟ್ಟಿದರೂ ಸರಿಯೇ–ಒಂದು ಬಾರಿಗೆ ಮೈ ಜುಮ್ಮು ಆಗುತ್ತದೆ. ಯಾಕೆ ಹಾಗಾಗುತ್ತದೆ, ಎಂದು ಕಣ್ಮುಚ್ಚಿ ಯೋಚಿಸಿದರೆ ಏನೇನೆಲ್ಲ ಕಾಣಲಿಕ್ಕೆ ತೊಡಗುತ್ತದೆ. ಹಾಗೆ ಕಾಣಿಸತೊಡಗಿತು–ಅಂದರೆ ನನ್ನ ಬಾಯಿ ಗೊಣಗಲಿಕ್ಕೆ ಶುರು ಮಾಡುತ್ತದೆ" ಎಂದರು.

ನನ್ನ ತಮ್ಮ ನಾರಾಯಣ ನೆರೆಯ ಗ್ರಾಮದ ಮಂಜುನಾಥನ ದೆಸೆಯಿಂದಾಗಿ ಮೈಸೂರಲ್ಲಿ ವಿದ್ಯಾಭ್ಯಾಸ ಮುಗಿಸಿದ. ಶಿವಮೊಗ್ಗೆಯಲ್ಲಿ ಚಾಕರಿ ಹಿಡಿದ. ದೊಡ್ಡ ರಜೆಗೆ ಊರಿಗೆ ಬಂದರೆ ನಾಲ್ಕಾರು ದಿನ ಮಾತ್ರ ಇರುತ್ತಾನೆ. ನಮ್ಮ ಮೂಡೂರಿನ ಮೋಹ ಅವನಲ್ಲಿ

ಉಳಿದಿಲ್ಲ. ನನಗಾದರೂ ಊರಿನ ಜನಗಳ ಮೇಲೆ ಅಷ್ಟು ಆದರ ಬೆಳೆದಿಲ್ಲ. ಏನೇನೊ ಅಲ್ಪತನ, ವಂಚನೆ ನಡೆದದ್ದನ್ನು ಕೇಳಿದಾಗ ಅವರಲ್ಲಿಗೆ ಹೋಗಿಬರುವುದಕ್ಕೆ ಮನಸ್ಸು ಹಿಂಜರಿಯುತ್ತದೆ. ನನಗೆ ಹಿಡಿಸುವ ಸ್ನೇಹಿತ ಜನಾರ್ದನ ಒಬ್ಬನೇ. ನಮ್ಮ ಮನೆಗೆ ಆಗಾಗ ಬರುತ್ತಿರುತ್ತಾನೆ. ಅವನಿಗೂ ಅಜ್ಜಿಯ ಬಗ್ಗೆ ಆದರ ಕಡಿಮೆ. ''ಅವರು ತಮ್ಮಷ್ಟಕ್ಕೆ ಗೊಣಗುವದು ಈಗೀಗ ಹೆಚ್ಚಾಗಿದೆ ಅಂತ ವರ್ತಮಾನ'' ಎಂದೊಮ್ಮೆ ನುಡಿದ.

''ಅವರಷ್ಟಕ್ಕೆ ಗೊಣಗಿದವರಿಗೆ ಬುದ್ಧಿ ಸ್ವಾಯವಿಲ್ಲ ಎಂಬ ಲೆಕ್ಕ ನಿನ್ನದು,'' ಎಂದೆ.

''ಬುದ್ಧಿ ಸ್ವಾಯವಿದ್ದವರು ಹಾಗೆ ಮಾಡುತ್ತಾರೇನಯ್ಯ?''

''ಮನಸ್ಸು ಸುಮ್ಮನೆ ಕುಳಿತಿರಲಾರದೆ ನೂರು ಕಡೆಗೆ ಓಡುವುದಿಲ್ಲವೇ? ನನಗೂ ಹಾಗಾಗುತ್ತದೆ, ನಿನಗೂ. ಅಜ್ಜಿ ಒಳಗಿದ್ದದ್ದನ್ನೆಲ್ಲ ಬಾಯಿ ಬಿಟ್ಟು ಹೇಳುತ್ತಾರೆ. ನಾನು ನೀನೂ ಹೇಳುವುದಿಲ್ಲ, ಅಷ್ಟೇ ವ್ಯತ್ಯಾಸ. ಆಗ ಏನೆಂದ ಹಾಗಾಯಿತು? ಮನಸ್ಸಿಗೆ ಕಂಡದ್ದನ್ನು ಬಾಯಿಯಿಂದ ಆಡಿದರೆ ಮಾತ್ರ ಸ್ವಾಯಗೆಡುವುದು ಎಂದಲ್ಲವೆ?'' ಈ ಮಾತಿಗೆ ನನ್ನ ಸ್ನೇಹಿತ ನಕ್ಕು ಸುಮ್ಮನಾದ.

ಅವರ ಜೀವನದಲ್ಲಿ ಆರಂಭದ ಹತ್ತು ವರ್ಷವನ್ನಷ್ಟೆ ಅವರು ನಿಶ್ಚಿಂತೆಯಿಂದ ಕಳೆದಿರಬಹುದು. ಮುಂದೆ ಕುಂಕುಮ ಅಳಿಸಿದ ಮೇಲೆ, ಕಳೆದಂಥ ಎಪ್ಪತ್ತು ವರ್ಷಗಳ ಬಾಳ್ವೆ, ಯಾರೊಡನೆಯೂ ತೋಡಿಕೊಳ್ಳದ ಜೀವನ–ಅದನ್ನು ನೆನೆದರೇನೇ ನನಗೆ ಭಯವಾಗುತ್ತದೆ. ಆ ಕಾಲದಲ್ಲಿ ಅವರ ಅಣ್ಣ–ನನ್ನ ಅಜ್ಜ–ಒಬ್ಬರೇನೆ ತಮ್ಮ ಮಾತು, ನಡತೆಗಳಿಂದ ಸಮಾಧಾನ ಕೊಟ್ಟವರಂತೆ. ನಮ್ಮ ತಂದೆಯೂ ಅವರನ್ನು ತುಂಬ ಚೆನ್ನಾಗಿಯೇ ಕಂಡುಕೊಂಡರಂತೆ. ನಮ್ಮ ತಾಯಿಗೂ ಅವರ ಮೇಲೆ ಬಹಳ ಗೌರವ ಇತ್ತಂತೆ. ಆದರೆ ನಮ್ಮ ತಾಯಿ ಒಂದು ಸಂಗತಿಯನ್ನು ಹೇಳುತ್ತಿದ್ದುದುಂಟು. ಅದೆಂದರೆ ಅವರಿಗೆ ದೈವಭಕ್ತಿ ಇತ್ತೇ ಇಲ್ಲವೇ ಎಂಬ ವಿಚಾರದಲ್ಲಿನ ಸಂಶಯ. ಮನೆಯಲ್ಲಿ ಅಷ್ಟೆಲ್ಲ ಪೂಜೆ ಪುರಸ್ಕಾರಗಳಾಗುತ್ತಿದ್ದರೂ ಉಳಿದದ್ದರಂತೆ ಯಾವ ನಿಷ್ಠೆಯನ್ನು ತೋರಿಸಿದವರಲ್ಲವಂತೆ, ಅಜ್ಜಿಯ ಕೈಯಲ್ಲಿ ಜಪಸರ ಕಂಡವರಿಲ್ಲ, ಅವರು ತುಟಿ ಅಲುಗಿಸಿ ''ಓಂ ನಮಃ ಶಿವಾಯ'' ಎಂದವರಲ್ಲ, ಇದರಿಂದಾಗಿ ನನ್ನ ತಾಯಿ, ''ಇವರು ತಮಗಾದ ಅನ್ಯಾಯವನ್ನು ನೆನೆದು ದೇವರ ಮೇಲಿನ ವಿಶ್ವಾಸವನ್ನೇ ಕಳೆದುಕೊಂಡಿದ್ದಾರಲ್ಲ'' ಎಂದು ಅರ್ಥ ಮಾಡಿಕೊಂಡದ್ದುಂಟು. ಒಮ್ಮೆ ''ಅಜ್ಜಿ ನಿಮಗೆ ದೇವರಲ್ಲಿ ನಂಬಿಕೆ ಇಲ್ಲವೆ?'' ಎಂದು ನೇರವಾಗಿ ಪ್ರಶ್ನಿಸಿದೆ. ಅವರು ಅಶ್ವತ್ಥ ವೃಕ್ಷಕ್ಕೆ ಒಂದು ಸುತ್ತು ಹಾಕಿ ಅದೇ ಕುಳಿತುಕೊಂಡಿದ್ದರು.

''ದೇವರು ಎಂಬುದು ನಾವು ನಂಬಿದರೆ ಉಂಟು. ನಂಬಿದ್ದಾರೆ ಜನ. ಭೂಮಿಯಲ್ಲಿ ಹುಟ್ಟಿದ ಎಲ್ಲರೂ ಒಟ್ಟುಗೂಡಿ, ಒಂದು ದೇವರನ್ನು ಮಾಡಿಕೊಂಡಿದ್ದಾರೆ. ಅವನ ಚಿಂತೆಯೇ ಇಲ್ಲದ ಪ್ರಾಣಿಗಳಿಲ್ಲವೆ? ಅವುಗಳನ್ನೂ ಬದುಕಿಸಿ ಇರಿಸಿದ್ದಾನಲ್ಲ? ನಾವು ಅವನನ್ನು ಹುಡುಕಿದಂತೆ ಅವನು ನಮ್ಮನ್ನು ಹುಡುಕಿಕೊಂಡು ಬರಬೇಕಾದುದು ಇಲ್ಲ.

ನಮಗೆ ದೇವರ ತಲೆ, ಬುಡ ಗೊತ್ತಿಲ್ಲ. ಸುಮ್ಮನೆ ಗೊತ್ತಿದೆ ಎನ್ನುತ್ತೇವೆ. ಅವನ ಇಚ್ಛೆ ಹಾಗೆ; ಅವನ ಇಚ್ಛೆ ಹೀಗೆ ಎಂತ ಆಡುತ್ತಿರುತ್ತೇವೆ. ಮಕ್ಕಳಾಟಿಕೆ ಮಾತು.''

''ಅಲ್ಲ ಅಜ್ಜಿ, ದೊಡ್ಡವರು ಅನ್ನುತ್ತಾರಲ್ಲ–ಇದೆಲ್ಲ ಪರಮಾತ್ಮನ ಆಟ ಎಂತ?''

''ಆಯಿತು; ಇದು ಆಟ ಅಂತಿಟ್ಟುಕೊ, ಆಮೇಲೆ ಏನು?''

''ನಮ್ಮನ್ನು ಅವನು ಕುಣಿಸುತ್ತಾನೆ.''

''ಅಂತಿಟ್ಟುಕೋ.''

''ಅವನು ಅಂದ ಹಾಗೆ ನಾವು ಕುಣಿಯಬೇಡವೆ?''

''ಅವನು ಏನು ಅಂದ ಅಥವಾ ಅನ್ನುತ್ತಾನೆ— ಎಂಬುದು ನಿನಗೆ ತಿಳಿಯುತ್ತದೆಯೆ, ಹಾಗೆ ಕುಣಿಯುತ್ತೇನೆ ಅನ್ನಲಿಕ್ಕೆ? ಅವನು ಅಂದದ್ದು ಎನ್ನುವುದೆಲ್ಲ ನಾವು ನಮ್ಮ ಮನಸ್ಸಿಗೆ ಕಂಡ ಹಾಗೆ ಅಂದದ್ದು.''

ನನ್ನ ವಿಚಾರಸರಣಿ ಮತ್ತಷ್ಟು ಗೊಂದಲಕ್ಕೆ ಗುರಿಯಾಯಿತು. ''ಹೋಗು ಮನೆಗೆ, ಯಾರೋ ಅಂಗಳದಲ್ಲಿ ಬಂದು ಕುಳಿತಿದ್ದಾರೆ,'' ಎಂದರು.

ನಿಜಕ್ಕೂ ಒಬ್ಬರು ಬಂದು ಕುಳಿತಿದ್ದರು. ಬಂದವನು ಗಾಣದ ರಾಮಣ್ಣ. ತಿಂಗಳೆರಡು ತಿಂಗಳಿಗೊಮ್ಮೆ ಮನೆಗೆ ಬರುತ್ತಿದ್ದ. ಅವನೊಂದಿಗೆ ಸೀತೆಯ ಮಾತುಕತೆ ನಡೆದಿತ್ತು. ''ಅಂತೂ ನಿನ್ನದೊಂದು ಪ್ರತಿಜ್ಞೆ. ಮದುವೆ ಆಗಲೇ ಇಲ್ಲ ತಿರುಗಿ, ಈಗ ಹಳಬನಾದೆ!''

''ಅದೆಲ್ಲ ಹಣೆಬರಹ ಅಲ್ಲವೇ ಒಡತಿ? ಅವನೇ ಅವಳ ಹಣೆಯ ಮೇಲೆ 'ನೀನು ಹೀಗಾಗು, ಹಾದಿಯ ಮೇಲೆ ಬಿದ್ದು ಸಾಯು' ಎಂದು ಬರೆದ. ಅವಳನ್ನು ನೆನೆದಾಗಲೆಲ್ಲ ಸಿಟ್ಟೂ ಬರುತ್ತದೆ. ಆದರೂ ಒಡತಿ, ಪ್ರಮಾಣಕ್ಕೂ ಅಂತೇನೆ, ಇನ್ನೊಂದು ಹೆಣ್ಣಿನ ಕೈಯನ್ನು ಹಿಡಿಯಬೇಕೆಂದು ಆಸೆಯಾಗುವುದಿಲ್ಲ.''

ರಾಮಣ್ಣ ಹೊರಟು ಹೋಗಿ ತುಸು ಸಮಯವಾಗಿರಬೇಕು. ನನ್ನೆರಡು ಮಕ್ಕಳು ಕೂಗುತ್ತ ಕಿರುಚುತ್ತ ಒಂದನ್ನೊಂದು ಅಟ್ಟುತ್ತ 'ಅದು ನನಗೆ ಅದು ನನಗೆ' ಎಂದು ಬೊಬ್ಬಿರಿಯುತ್ತ ನನ್ನ ಮುಂದೆಯೇ ಹಾದು ಹೋದವು. ಅವುಗಳ ಕೈಯಲ್ಲಿ ಏನೋ ಸಿಕ್ಕಿರಬೇಕು. ಅದಕ್ಕೆ ಈ ಬೊಬ್ಬೆ. ನಾನು ಜನಾರ್ದನನ ಮನೆಗೆ ಹೊರಟೆ.

ಜನ್ನ ಮನೆಯಲ್ಲಿರಲಿಲ್ಲ. ಆಚೆ ಈಚೆ ಅಲೆದಾಡಿಕೊಂಡು ಮುಸ್ಸಂಜೆಯ ಹೊತ್ತಿಗೆ ಮನೆಗೆ ಬಂದೆ. ನೆಟ್ಟಗೆ ಬಾವಿಯ ಕಟ್ಟೆಗೆ ಹೋಗಿ ಕಾಲು ತೊಳೆದು ಅಲ್ಲಿಯೆ ಒಂದಿಷ್ಟು ಸಂಧ್ಯಾವಂದನೆಯ ಚಟವನ್ನು ತೀರಿಸಿಕೊಂಡೆ. ಮರಳಿ ಬಂದಾಗ ಅಜ್ಜಮ್ಮ ಮನೆಯ ಚಾವಡಿಯಲ್ಲಿ ಕೈಯಲ್ಲೇನೋ ಹಿಡಿದುಕೊಂಡು ಕಂಬಕ್ಕೊರಗಿಕೊಂಡು ಮಣಮಣ ಮಾಡುತ್ತಿದ್ದರು. ಅವರ ಧ್ವನಿ, ಮಾತುಗಳು ಕಿವಿಯೊಡ್ಡಿ ಕೇಳಿದರೆ ಕೇಳಿಸುವ ಹಾಗಿತ್ತು.

''ಹೌದು. ಇದು ನಿಮಗೆ ಬೇಕು. ಈ ಕರಡಿಗೆ ಮರೆತಿಲ್ಲ ನೀನು! ಅವಳು ಕಾಡಿಗೆ ಹೋಗಿ ಬೆತ್ತ ತಂದು ಸಿಗಿದು ಗೀಸಿ ಹೆಣೆದುಕೊಟ್ಟಳಲ್ಲವೆ— ನಿನ್ನ ವೀಳೆಯಕ್ಕಾಗಲಿ ಎಂದು. ನಿನ್ನ ಮನೆಗೆ ಅವಳು ಒಲಿದೇ ಬಂದಳು. ನೀನೇ ಒಂದು ಲೆಕ್ಕಕ್ಕೆ ಪಡಪೋಷಿ. ಅವಳ ಮುಂದೆ ನಿನ್ನ ಗಂಡುಸುತನದ ಜರ್ಬನ್ನೇ ತೋರಿಸಿದೆ. ಏನೆಂದೆ ನೀನು? ನಿನ್ನ ಚಂದಕ್ಕೆ ನಾನು

ಮರುಳಾದವನಲ್ಲ? ಮತ್ತೆ ಈ ಮಾತು ಅಂದಿಲ್ಲವೆ? 'ಮೈ ಬಿಯಸಾಗಿದ್ದರೇನಂತೆ? ದುಡಿಯದೆ ತಿಂಬ ಮನೆ ಇದಲ್ಲ. ದುಡಿಯುವರಲ್ಲಿ ಕಳ್ಳತನ ಮಾಡಿದರೆ ಗುದ್ದಿ ಗುದ್ದಿ ಹಣ್ಣು ಮಾಡಿಯೇನು' ಅಂದಿಲ್ಲವೇ ನೀನು?

'ಯಾರು ದುಡಿಯುವದಕ್ಕೆ ಹೆದರುತ್ತಾರೆ?' ಅಂದಿಲ್ಲವೇನು ಅವಳು? ಆದರೂ ನೋಡು ರಾಮಣ್ಣ ಮದುವೆಯಾಗಿ ಮೂರು ವರ್ಷ ಸಂದರೂ ಒಂದು ಹೊಸ ಸೀರೆ ತುಂಡನ್ನು ಅವಳ ಮೈ ಮುಚ್ಚಲಿಕ್ಕೆ ನೀನು ಕೊಡಬೇಡವೇ? ಹೆಣ್ಣಲ್ಲವೇ ಅವಳು? ನೀನು ಕೌಪೀನ ತೊಟ್ಟು, ಗಾಣ ತಿರುಗಿಸಿದ ಹಾಗೆ ನಿನ್ನ ಹಿಂದೆ ಅವಳು ಹರಕು ಅರಿವೆಯಲ್ಲಿ ತಿರುಗಬೇಕೆಂದರೆ? ನಿನ್ನನ್ನು ಹೆದರಿಸಲಿಕ್ಕೆ ಓಡಿಹೋದಳು. ದನ ಹೋಗಿ ಹುಲಿಯ ಗವಿಯನ್ನು ಸೇರಿದ ಹಾಗಾಯಿತು. ಅವಳ ಮೇಲೆ ಶೀನಪ್ಪ ಎಂದಿನಿಂದ ನದರು ಇಟ್ಟಿದ್ದನೋ! ನಿನ್ನ ಡೌಲು ಇಳಿದು ಬುದ್ಧಿ ಬರುವಾಗ ಎಲ್ಲವೂ ಮುಗಿದು ಹೋಗಿತ್ತು.

"ಆದರೂ ನಿನ್ನ ಮನಸ್ಸು ದೊಡ್ಡದು, ರಾಮಣ್ಣ. ನಲ್ವತ್ತು ಒಂದು ಹೆಚ್ಚಲ್ಲ ಪ್ರಾಯ. ನಾಗಿ ಹಾಗಿನ ರಂಭೆ ಸಿಗಲಾರಳು. ಬೇಕೆನಿಸಿದರೆ ಮದುವೆ ಆಗು. ಅದೊಂದನ್ನು ಅವನೇ ಮಾಡಿದ್ದಾನಲ್ಲ ಪ್ರಾಕಿನಿಂದ. ಈ ಜಗತ್ತು ದೇವರ ಮಾಯ ಅನ್ನುತ್ತಾರೆ ಎಲ್ಲರೂ. ನಾನು ಅನ್ನುತ್ತೇನೆ–ಗಂಡು ಹೆಣ್ಣಿನ ಮಾಯೆಯಿಂದಲೇ ಜಗತ್ತು, ಅದನ್ನು ಮಾಡಿದ್ದರಿಂದಲೇ ಸಾವಿರ ಸುಖ, ಸಾವಿರ ದುಃಖ ಹುಟ್ಟಿಕೊಂಡಿತು. ಇರಬೇಕು ಈಜಬೇಕು. ಇದ್ದು ಜಯಿಸಬೇಕು– ಎಂಬ ಛಲವೂ ಜೀವಗಳಲ್ಲಿ ಕಾಣಿಸಿಕೊಂಡಿತು...."

ಈಗ ಯಾಕಿಷ್ಟು ಅಜ್ಜಿಯ ಮಾತು? ಏನೇ ಆಗಲಿ, ರಾಮಣ್ಣ, ನಾಗಿಯರ ಜೊತೆಗೆ ನನ್ನ ಮಾವನ ಹೆಸರೂ ನನಗೆ ತಿಳಿದುಬಂತು. ಮುಂದೆ ಆ ನಾಗಿ ಏನಾದಳು, ಅವಳ ಭೀಷ್ಮ ಪ್ರತಿಜ್ಞೆ ಯಾವ ರೀತಿಯಲ್ಲಿ ಕೊನೆಗೊಂಡಿತು– ಎಂಬ ವಿಚಾರಗಳು ನನ್ನಲ್ಲಿ ಮೂಡಿದುವು. ಅಷ್ಟರಲ್ಲಿ ಯಾರದೋ ಬೀಸು ಹೆಜ್ಜೆಯ ಜೋಡಿನ ಧ್ವನಿ ಕೇಳಿಸಿತು. ಅಜ್ಜಿ, "ರಾಮಣ್ಣ ತಿರುಗಿ ಬಂದ ಎಂದು ಕಾಣುತ್ತದೆ. ಮರೆತು ಹೋಗಿದ್ದ, ಈ ಎಲೆ ಅಡಿಕೆ ಚಂಚಿಯನ್ನು" ಎಂದರು.

ಹೌದು, ರಾಮಣ್ಣನೇ.

"ನಿಮ್ಮ ಕೈಯಲ್ಲಿ ಹೇಗೆ ಬಂತಜ್ಜಿ?" ಎಂದು ಹೇಳಿದೆ, ನಾನು.

"ನಿನ್ನ ಮಾಣಿ ಹಿಡಿದುಕೊಂಡು ಬಂದಿತ್ತಪ್ಪ, ಏನಿದು ಅಂತ ಹಿಡಿದುಕೊಂಡೆ. ಒಂದು ರಾಮಾಯಣವೇ ಕಾಣಿಸಿತು."

ಅದೊಂದು ಹಳೆಯ ಲಡ್ಡು ಪೆಟ್ಟಿಗೆ. ರಾಮಣ್ಣನಿಗೆ ಅದನ್ನು ಕೊಟ್ಟು ಕಳಿಸಿದೆ.

"ಅವನು ಸಾಯುವ ತನಕವೂ ಆ ಚಂಚಿಯನ್ನು ಮಗ್ಗುಲಲ್ಲಿಟ್ಟುಕೊಂಡು ಮಲಗಿಯಾನು" ಎಂದರು ಅಜ್ಜಿ.

"ಹೋ. ಅದನ್ನು ನೆನೆದು ನೀವು ಗಂಡು–ಹೆಣ್ಣಿನ ಮಾಯೆ ಅಂಥದು ಎಂದೆಲ್ಲ ನುಡಿದಿರಿ."

"ನಾನು ಹಾಗೆಲ್ಲ ಹೇಳಿದೆನೆ? ಹಾಗೆ ಕಾಣಿಸಿದ್ದು ಹೌದು, ಚಂಚಿಯನ್ನು ಕಂಡು."

“ಅಜ್ಜಿ, ದೇವರು ಯಾಕೆ ಹಾಗೆ ಹೆಣ್ಣು, ಗಂಡು ಅಂತ ಸೃಷ್ಟಿ ಮಾಡಬೇಕು? ಈ ಮಾಯೆಯಲ್ಲಿ ಜಗತ್ತನ್ನು ಯಾಕೆ ಮುಳುಗಿಸಬೇಕು–ಎಂಬ ವಿಚಾರ ಮಾತ್ರ ತಲೆ ಚಚ್ಚಿಕೊಂಡರೂ ನನಗೆ ತಿಳಿಯುವ ಹಾಗೆ ಇಲ್ಲ. ಆದರಿಂದ ‘ ಬಲ್ಲವರು–ಈ ಮಾಯೆ ಕಳಚದೆಯೇ ಮೋಕ್ಷ ಸಿಗಲಾರದು ಅನ್ನುವುದು.”

“ಅನ್ನುತ್ತಾರೆ, ಅನ್ನುತ್ತಾರೆ. ಅಂದು ನಾಲಗೆಯ ತೀಟೆ ತೀರಿಸಿಕೊಂಡದ್ದರಿಂದ ಯಾರೂ ಬುದ್ಧಿವಂತರಾಗುವದಿಲ್ಲ. ಅದೇ ಮಾಯೆಗೆ ರಾಮ, ಶಿವ, ಬ್ರಹ್ಮ–ಎಲ್ಲ ದೇವರನ್ನೂ ಸಿಕ್ಕಿಸಿ ಹಾಕಿದ್ದೇವೆ, ನಾವೇ! ಏನು ಮೋಕ್ಷವೊ! ಒಂದೊಂದು ಸಾರಿ ನಗು ಬರುತ್ತದೆ ಮಗು. ಹೆಂಡತಿ–ಮಕ್ಕಳನ್ನು ಬಿಟ್ಟರು ದಾಸರು. ವಿಠಲನನ್ನು ನಂಬಿ ಹಾಡಿದರು. ಹಾಡಿದ್ದೇ ಹಾಡಿದ್ದು. ಅವರು ತಮ್ಮ ಹೆಂಡಿರನ್ನು ದಾರಿಯ ಮೇಲೆ ಕೆಡೆದು ಹೋದದ್ದೂ ನಿಜ. ಹಾಗೆ ಮಾಡಿ ಬೇಡಿದ್ದು ಯಾರನ್ನು? ತಂತಮ್ಮ ಹೆಂಡಿರೊಡನೆ ಸುಖವಾಗಿ ಇರುವ ವಿಷ್ಣುವನ್ನು, ಶಿವನನ್ನು. ಅವರಿಗೇನೇ ಅವರ ಹೆಂಡಂದಿರಿಂದ ಮುಕ್ತಿ ಸಿಗದೆ ಇರುವಾಗ, ಇವರಿಗೇನು ಕೊಟ್ಟಾರು? ಕನಸು, ಭ್ರಮೆ ಅನ್ನುತ್ತಾರಲ್ಲ, ಮಗು; ಅದು ಇದು. ತಾವೇ ಮೋಹ–ಪಾಶ ಕಡಿದುಕೊಳ್ಳಲಾರದ ದೇವರು ಇವರ ಮೋಹ ಪಾಶ ಕಡಿದು ಉದ್ಧಾರ ಮಾಡುತ್ತಾರೆ, ಎಂಬುದು.”

ಅಜ್ಜಿಯ ಈ ವಿಚಾರಸರಣಿ ನನ್ನನ್ನು ತಬ್ಬಿಬ್ಬಾಗಿ ಮಾಡಿತು. “ಅಂದರೇನಜ್ಜಿ, ಈಗ ದೇವರು ಉಂಟು ಅಂತಲೆ, ಇಲ್ಲ ಅಂತಲೆ?”

“ನಂಬುವವರಿದ್ದರೆ ಮಾತ್ರವೇ ಅವನಿರುವುದು. ಆದರೂ ಒಂದು ಸಂಗತಿ ಉಂಟು. ದೇವರನ್ನು ನಂಬಿದವರೂ, ನಂಬದೆ ಇದ್ದವರೂ ಸಾಯುವುದು ಮಾತ್ರ ತಪ್ಪಿದ್ದಲ್ಲ. ಹುಟ್ಟಿದ ಮೇಲೆ ಸಾವಿದೆ. ಸತ್ತ ಮೇಲೆ ಹುಟ್ಟು ಇದೆ–ಎಂದು ನಂಬಿದರೆ ಸಾಲದೆ? ಅವನು ಯಾಕೆ ಸೃಷ್ಟಿ ಮಾಡಿದ, ಎಂದು ಕೇಳುವುದರ ಬದಲು, ಅವನೇ ಹುಟ್ಟಿಸಿದ ಸೃಷ್ಟಿಯಿದು–ಎಂದು ಇದ್ದದ್ದನ್ನು ನಂಬಿದರೇನಾಗುತ್ತದೆ? ಇರುವ ನಾಲ್ಕು ದಿನ ಚಂದವಾಗಿ ಇರುವದಪ್ಪ, ದೇವರ ಸೃಷ್ಟಿಯಂತೆ! ನನ್ನ ಅಪ್ಪ ನನ್ನನ್ನು ಕೇಳಿ ಹುಟ್ಟಿಸಿದರೇನು? ನಮ್ಮಪ್ಪನನ್ನು ದೇವರೂ ಕೇಳಿ ಹುಟ್ಟಿಸಿರಲಾರರು....”

ನನಗೆ ತಲೆ ಬಿಸಿಯಾಗುತ್ತ ಬಂದಿತು. ನಾನು ನಂಬಿ ಬಂದಿರುವ ಯಾವ ತರ್ಕಸರಣಿಯೂ ನನ್ನ ಅಜ್ಜಿಯಲ್ಲಿ ಕಾಣಿಸಲಿಲ್ಲ. ಅವರ ಈ ಎಲ್ಲ ಮಾತುಕತೆ ಮರುಳತನವಾಗಿಯೂ ಕಾಣಿಸಲಿಲ್ಲ.

☆ ☆ ☆ ☆

ನನ್ನ ತಮ್ಮ ನಾರಾಯಣನಿಗೆ ಪ್ರಾಯ ಆಗಿದೆ. ಬೇಗನೇ ಮದುವೆಯಾಗುವ ಆಸೆ. ಒಂದು ಕನ್ಯೆಯನ್ನು ನೋಡಿದ್ದ. ಊರಿಗೆ ಬಂದಾಗ ತನ್ನ ಭಾವೀಬೀಗ ಅನಂತರಾಯರನ್ನು ಕರೆದುಕೊಂಡು ಬಂದಿದ್ದ. ನಾನು ಶಿವಮೊಗ್ಗೆಗೆ ಹೋಗಿ ಅವನ ಭಾವೀ ಮಾವನ ಹತ್ತಿರ ಮಾತನಾಡಿ ಬಂದಿದ್ದೆ. ಮುಂದಿನ ಎಲ್ಲ ವಿಚಾರಗಳನ್ನು ಗೊತ್ತು ಮಾಡಿಕೊಂಡು ಬರಬೇಕು ಎಂಬುದು ಅವನ ಅಪೇಕ್ಷೆ, ಆದರೆ ಒಂದು ಮದುವೆಗೆ ಏನೇನು ಬೇಕು–ಎಂಬ ವಿಚಾರ

ನನಗೆ ಗೊತ್ತೇ ಇಲ್ಲ. ಮದುವೆ ನಿಶ್ಚಯ ಅಂದರೆ ಏನಪ್ಪ? ಅದರಲ್ಲಿ ತಕರಾರು ಬಂದರ ಗಂಡಿನ ಕಡೆಯವರಿಂದ ಬರಬೇಕು. ಚಿನ್ನ ಎಷ್ಟು, ದಾರಿ ಖರ್ಚಿಗೆ ಎಷ್ಟು, ಬಿಡಾರ ಎಲ್ಲಿ ಎಂತ ನಾವು ಹೇಳಬೇಕು. ನನಗೆ ಅಂಥ ಯಾವ ಆಡಂಬರವೂ ಇಲ್ಲ, ಆದ್ದರಿಂದ ''ಏ ಮಹಾರಾಯಾ, ನೀನೇ ಆ ಕೆಲಸ ಮಾಡಿಬಿಡು'' ಎಂದೆ.

ಆಗ ನನ್ನ ಸೀತೆ ನಾರಾಯಣನ ಪಾರ್ಟಿಯನ್ನು ಸೇರಿಕೊಂಡು, ''ನೀವು ಮನೆಯ ಯಜಮಾನರಾಗಿರುವುದು ಯಾತಕ್ಕೆ?'' ಎಂದಳು.

''ಅದನ್ನೂ ಅವನೇ ವಹಿಸಿಕೊಳ್ಳಲಿ'' ಎಂದೆ ನಾನು.

''ಅಂದರೆ ನೀವು ಇನ್ನೊಂದು ಮದುವೆ ಮಾಡಿಕೊಳ್ಳುತ್ತೀರಿ ಅಂತಲೋ?'' ಎಂದಳು. ಆಗ ನನಗೆ ಕಾಣಿಸಿತು, ನನ್ನ ಸೀತೆ ಪಾತಾಳ ಸೂಜಿ, ಎಂದು.

''ಆಯಿತು ಮಹಾರಾಯಿತಿ. ನಿನ್ನ ಹುಕುಮು ಹೇಗೋ ಹಾಗೆ ನಡೆಯುತ್ತೇನೆ.''

''ನೋಡಿ. ನಾರಾಯಣನಿಗೆ ಆ ಮನೆಯಲ್ಲಿ ಸಣ್ಣವಳ ಮೇಲೆ ಖಾಯಿಸು. ಹಿರಿಯವಳು ಲಗ್ನವಾಗುವ ತನಕ ಅವನು ಕಾಯುವುದು ಬೇಡ. ಅವನಿಗೆ ಈ ವರ್ಷವೇ ಮದುವೆಯ ಯೋಗವಿದೆ.''

''ಈ ವರ್ಷ ಅಂದರೆ? ಇದು ವೈಶಾಖ, ಮುಂದೆ ಮಳೆಗಾಲ. ಈ ತಿಂಗಳೇನೋ ವಾಸಿ. ತಿಂಗಳಿರುವುದು ಮೂವತ್ತು ದಿವಸವಷ್ಟೆ; ಅದರಲ್ಲಿ ಹತ್ತು ಹೊರಟುಹೋಯಿತು. ಚಿನ್ನಗಿನ್ನ, ಮದುವೆ ತಯಾರಿ ಇದಕ್ಕೆಲ್ಲ ದಿನ ಬೇಡವೆ?''

''ಮನಸ್ಸಿದ್ದರೆ ಮೂರು ದಿನದಲ್ಲಿ ಆಗುತ್ತದೆ ಮದುವೆ.''

''ಹಾಗಿದ್ದರೆ ನೀನು ಒಂದಿಷ್ಟು ಹೆಚ್ಚಿಗೆ ಮನಸ್ಸು ಮಾಡಿ ಒಂದೇ ದಿನದಲ್ಲಿ ಮುಗಿಸಿಬಿಡು! ಅವರು ಬರುವಾಗ ಹೆಣ್ಣನ್ನು ಕರೆದು ತಂದಿಲ್ಲ, ಕರೆದು ತರುತ್ತಿದ್ದರ ಸಾಯಂಕಾಲದೊಳಗೇ ದಿಬ್ಬಣ ಹೊರಟು ಹೋಗಿಯೂ ಆಗುತ್ತಿತ್ತು!''

''ಮನಸ್ಸಿದ್ದರೆ ಅದೂ ಸಾಧ್ಯವೇ'' ಎಂದಳು ಅವಳು. ಸೀತೆ ರಾಗವಾಗಿ ಎಲ್ಲವೂ ನಿಶ್ಚಯವಾಗಿಯೇ ಹೋದಂತೆ, ''ನಾವೂ ಒಂದಿಷ್ಟು ಚಿನ್ನ ಮಾಡಿಸಬೇಡವೆ? ಎಂದು ಮಾಡಿಸುವುದು?'' ಎಂದು ಕೇಳಿದಳು.

''ಅದನ್ನೆಲ್ಲ ನಿಂತ ಮೆಟ್ಟಿಗೆ ಮಾಡಲು ಬರುವುದಿಲ್ಲ, ನಿನಗಾದರೆ ಒಂದೇ ದಿನದಲ್ಲಿ ಸಾಧ್ಯ.''

''ಮದುವೆಗೆ ಒಂದು ದಿನ ಸಾಕು ಎಂದದ್ದು, ತಯಾರಿಗಲ್ಲ'' ಎಂದು ನುಡಿದು ನಕ್ಕಳು. ನನ್ನ ಸೀತೆ ಕೊಂಕಿನಿಂದಾಗಲಿ, ಸಿಟ್ಟಿನಿಂದಾಗಲಿ ತನ್ನ ಇಚ್ಛೆಯನ್ನು ಸಾಧಿಸುವವಳು. ಮದುವೆಯಾಗಲು ನಾರಾಯಣನಿಗೆ ಎಷ್ಟು ಆತುರವಿದೆಯೋ, ದಿಬ್ಬಣದ ಯಜಮಾನಿಯಾಗಿ ಮೆರೆಯುವದಕ್ಕೆ ಅವಳಿಗೂ ಅಷ್ಟೇ ಆತುರ.

ಕೊಲ್ಲೂರಿನ ಮೂಕಾಂಬಿಕೆಯ ಸನ್ನಿಧಾನದಲ್ಲಿ ಮದುವೆ ಚೆನ್ನಾಗಿಯೇ ನೆರವೇರಿತು. ಮದುವೆಯಲ್ಲಿ ಸೀತೆ ಒಂದಿಷ್ಟು ಹೆಚ್ಚಾಗಿಯೇ ಮೆರೆದಳು. ಸಂತೋಷಪಟ್ಟಳು. ನನಗಾದ ಒಂದು ಸಮಾಧಾನವೆಂದರೆ ಬಹಳ ದಿನಗಳಿಂದಲೂ ಊರು ಬಿಡದ ನಮ್ಮ ಅಜ್ಜಿ

ಕೊಲ್ಲೂರಿಗೆ ಹೋಗಿ, ಆ ಮದುವೆಗೆ ಸಾಕ್ಷಿಯಾದುದು. ಮದುವೆ ಸಮಾರಂಭ ಮುಗಿದ ಮೇಲೆ, ಮಾಡಲು ಏನೂ ಕೆಲಸವಿಲ್ಲದಾಗ, ಅಜ್ಜಿಯೊಡನೆ ದೇವಸ್ಥಾನದ ಹೊರ ಚಾವಡಿಯಲ್ಲಿ ಕುಳಿತಿದ್ದಾಗ ಕೇಳಿದ,

"ಅಜ್ಜಿ, ಬೇರೆ ಎಲ್ಲಿಯೂ ಅಮ್ಮನವರಿಗೆ ಮೂಕಾಂಬಿಕೆ ಅಂತ ಹೆಸರಿದ್ದುದನ್ನು ಕಾಣೆ. ಏನು ಅವಳು ಮಾತನಾಡದ ಮೂಕಿಯೆಂತಲೋ!"

"ಇವಳು ಮೂಕಾಸುರನನ್ನು ಕೊಂದವಳು ಅಂತ ಇರಬೇಕು."

"ಹಾಗೋ, ಹಿಂದೆ ಈ ಕೊಲ್ಲೂರು ಕಾಡಿನಲ್ಲಿ ಮೂಕಾಸುರ ಎಂತ ಒಬ್ಬ ರಾಕ್ಷಸ ಇದ್ದ ಎಂದು ಲೆಕ್ಕವಲ್ಲವೇ?"

"ಅಂತ ಲೆಕ್ಕ; ಮಹಿಷಾಸುರ ಇದ್ದ ಹಾಗೆಯೇ."

"ಹಾಗೆ ಇರಲಿಲ್ಲ ಅಂತೀರಾ? ದೇವರು ಅವತಾರ ಮಾಡಿದ್ದು, ದುಷ್ಟರನ್ನು ನಾಶ ಮಾಡಿದ್ದು ಸುಳ್ಳು ಅಂತಲೇ?"

"ಏನೋ ಅಪ್ಪ, ದುಷ್ಟರ ನಾಶಕ್ಕೆ ದೇವರು ಅವತಾರವನ್ನು ಎತ್ತಬೇಕೆ? ಒಂದು ಮರ ದೊಡ್ಡದೇ? ಎಲೆಯೇ?"

"ಮರ."

"ಒಂದು ಎಲೆ ಉದುರಿಸಿಕೊಳ್ಳುವುದಕ್ಕೆ ಮರಕ್ಕೆ ಮರವೇ ಕುಣಿದಾಡುವುದನ್ನು ಕಂಡಿದ್ದೀಯಾ? ಅಲ್ಲ, ಈ ಪಾಟಿ ಅವತಾರ ಯಾಕೆ ಅಂತೇನೆ? ಅವನಿಗೆ ಕೆಲಸವಿಲ್ಲವೆಂತಲೇ? ದೇವರು ಎಷ್ಟು ಮಂದಿ? ಒಂದು ದೇವರು ಅವತಾರವನ್ನೆತ್ತುವುದೇ ಮಸ್ತಾಯಿತು. ಅದನ್ನು ಬಿಟ್ಟು, ವಿಷ್ಣುವೂ ಅವತಾರ ಹೊರಡಿಸುವುದೇ, ಶಿವನೂ ಹೊರಡಿಸುವುದೇ, ದುರ್ಗೆಯೂ ಹೊರಡಿಸುವುದೇ? ಪುಣ್ಯಕ್ಕೆ ಬ್ರಹ್ಮನಿಂದ ಹೆಚ್ಚು ಗಲಾಟೆಯಿಲ್ಲ.

"ಮತ್ತೂ ನೋಡು. ಅವನೇ ಹುಟ್ಟಿಸಿದಂಥ ಒಂದು ಹುಳವನ್ನು ಕೊಲ್ಲಲಿಕ್ಕೆ ಒಂದು ಅವತಾರ ಬೇಕೇ? ರಾವಣನನ್ನು ಕೊಲ್ಲುವುದಕ್ಕೆ ರಾಮನ ಅವತಾರ ಎಂದಿಟ್ಟುಕೋ. ದುಷ್ಟರ ಉಪದ್ರ ಶುರುವಾಯಿತು ಎಂದು ದೂರು ಬಂದದ್ದು ಯಾವಾಗ? ಇವನು ದಶರಥರಾಯನ ಹೊಟ್ಟೆಯಲ್ಲಿ ಹುಟ್ಟಿ ೧೭–೧೮ ವರ್ಷಗಳ ಕಾಲ ಬೆಳೆದು, ಮತ್ತೂ ಹದಿನಾಲ್ಕು ವರ್ಷಕಾಲ ವನವಾಸಮಾಡಿ ರಾವಣನನ್ನು ಕೊಲ್ಲುತ್ತಾನೆ. ಅಂದರೆ ಮೂವತ್ತೆರಡು ವರ್ಷಗಳ ಕಾಲ, ಸಿಕ್ಕಿದ ಅನ್ಯಾಯ ಮಾಡಲಿಕ್ಕೆ ರಾವಣನಿಗೆ ಪುರುಸೊತ್ತು ಕೊಡಬೇಕೇ? ಅಲ್ಲಿಯವರೆಗೆ ಅವನನ್ನು ನಂಬಿದ ಶಿಷ್ಟರ ಗತಿಯೇನು? ಅಲ್ಲದೆ ಮಗು, ಯಾರನ್ನೂ ನಾಶಮಾಡುವದಕ್ಕೆ ಮನುಷ್ಯ ರೂಪವನ್ನೋ ಮತ್ತೊಂದನ್ನೊ ತಾಳಬೇಕು ಯಾಕೆ? ಒಂದು ಸಿಡಿಲೆರಗಿಸಿದರೆ ಬೇಕಾದ್ದನ್ನು ಸುಡಬಹುದು. ಅದಕ್ಕೊಂದು ನಾಟಕ ಬೇಕೆ?"

"ಹಾಗಾದರೆ, ಇಷ್ಟೆಲ್ಲ ದೇವರು, ಅವತಾರ ಎಲ್ಲವೂ ಸುಳ್ಳು ಅಂತೀರಾ?"

"ಇದೆಲ್ಲ ಅವನನ್ನು ಕಾಣುವ ನಾವು ಸಾವಿರ ಮಂದಿ, ಸಾವಿರ ಬುದ್ಧಿಯವರಾದುದರಿಂದ. ಅವನು ಒಬ್ಬನೇ. ಸಾವಿರ ಜನರ ಕಣ್ಣು ಕಂಡ ಮಾತ್ರಕ್ಕೆ ಒಂದು ಆಕಾಶ ಸಾವಿರ ಆಗುತ್ತದೆಯೆ?"

ಅಜ್ಜಿಯ ವಾದಕ್ಕೆ ನಾನು ಬೆರಗಾದೆ. ಈ ಅಜ್ಜಿ ಹಳೆಯ ನಂಬಿಕೆಗಳಾವುವನ್ನೂ ಸುಲಭದಲ್ಲಿ ಹೊತ್ತು ಬಂದವರಲ್ಲ ಎನಿಸಿತು.

''ದೇವರು ಗಂಡೋ, ಹೆಣ್ಣೋ?'' ಎಂದು ಕೇಳಿದೆ.

''ಗಂಡೂ ಅಲ್ಲ, ಹೆಣ್ಣೂ ಅಲ್ಲ, ನಾವು ಹಾಗೆಲ್ಲ ಎಣಿಸಿಕೊಂಡವರು. ಮಕ್ಕಳಿಗೆ ತಾಯಿಗಿಂತ ದೊಡ್ಡ ವಸ್ತುವಿಲ್ಲ ತಾನೇ. ಅಪ್ಪನಿಲ್ಲವಾದರೂ ನಡೆಯುತ್ತದೆ. ಅಮ್ಮ ಇಲ್ಲದಿದ್ದರೆ? ಹಾಗಾಗಿ ದೇವರೇ ನಮ್ಮ ಅಮ್ಮ ಎಂದು ತಿಳಿದರೆ ತಪ್ಪೇನಿಲ್ಲ. ಕೆಲವರ ಪಾಲಿಗೆ ಅದೇ ಅಮ್ಮನೆಂಬವಳು ತಂಟೆ ಮಾಡಿದ ಮಕ್ಕಳನ್ನು ಹೊಡೆಯುವ ಅಮ್ಮನಂತೆ ಕಂಡಿರಬೇಕು. ತಮಗೆ ಆಪತ್ತು ಬಂದಾಗ ಅದು ಅಮ್ಮನೇ ಕೊಟ್ಟ ಶಿಕ್ಷೆ ಎಂದು ನಂಬಿದರು. ಕಾಳಿ, ದುರ್ಗೆ ಅಂಥ ಅಮ್ಮಂದಿರಾದರು. ಶಿರ್ಶಿ ಮಾರಿಯಮ್ಮ ಅಂಥ ಇನ್ನೊಂದು ಅಮ್ಮ. ಆದರೆ ಈ ಊರಿನ ಅಮ್ಮ ಮೂಕಮ್ಮ; ನಾವು ಇವಳನ್ನು ಹೊಗಳಿದರೂ ಅಷ್ಟೆ, ಬೈದರೂ ಅಷ್ಟೆ, ಇವಳಲ್ಲಿ ಬೇಡಿದರೂ ಫಲವಿಲ್ಲ; ಕಾಡಿದರೂ ಫಲವಿಲ್ಲ.''

''ದೇವರಲ್ಲಿ ಏನನ್ನಾದರೂ ಬೇಡುವುದು ತಪ್ಪು ಎನ್ನುತ್ತೀರಾ?''

''ಸಣ್ಣವರಾದರೆ ಒಂದು ಲೆಕ್ಕ. ಬುದ್ಧಿ ಬಂದ ಮೇಲೆಯೂ ಸಣ್ಣ ಮಕ್ಕಳ ಹಾಗೆ 'ಅಮ್ಮ ತೊಡುವಾಗುತ್ತದೆ, ಬೆಲ್ಲ ಕೊಡು; ಚಾಚಿ ಮಾಡಿದೆ, ಪುಕಳಿ ತೊಳೆಸು' ಅಂದರೆ ಹ್ಯಾಗಾದೀತು? ಅವನೇ ನಮ್ಮನ್ನು ಹುಟ್ಟಿಸಿದ್ದಾನೆ ಎಂದ ಮೇಲೆ ಕೊಡುವಷ್ಟನ್ನು ಕೊಟ್ಟೇ ಹುಟ್ಟಿಸಿದ್ದಾನೆ ಎಂತ ತಿಳಿಯಬೇಕಪ್ಪ. ನಮ್ಮ ಹಾಗೆಯೇ ಸಾವಿರ, ಸಾವಿರ ಅಲ್ಲ, ಕೋಟಿ ಪ್ರಾಣಿಗಳಿದ್ದಾವೆ. ಅವು ಯಾವದಾದರೂ ಯಾರನ್ನಾದರೂ ಬೇಡುವುದನ್ನು ಕಂಡಿದ್ದೀಯಾ? ಹುಲಿ, ಎದುರಿಗೆ ಬಂದರೆ ಹುಲ್ಲೆ 'ಸಹಾಯ ಮಾಡು' ಎಂತಲೂ ಬೇಡುವುದಿಲ್ಲ. ಬುದ್ಧಿ ಬಂದ ಮನುಷ್ಯ ಅದಕ್ಕಿಂತಲೂ ಕಳಪೆಯಾದರೆ ಹೇಗೆ, ಮಾಣಿ? ಸಂಕಟ ಬಂದಾಗಲೆಲ್ಲ ದೇವರ ಹತ್ತಿರ ಹೋಗಿ, 'ಅದನ್ನು ಕೊಡು; ಇದನ್ನು ಕೊಡು' ಎಂದು ಬೇಡುತ್ತೇವೆ. ಸಮಾಧಾನ ಬಂದರೆ ಆಗ ಅವನು ಕೊಟ್ಟ ಎನ್ನುವುದು. ನಮ್ಮ ಭಕ್ತಿಗೆ ಪರಮಾತ್ಮ ಒಲಿದು ಬಿಟ್ಟ ಅನ್ನುವುದು, ಸಮಾಧಾನ ಸಿಗದೇ ಹೋದರೆ ಅದು ಅವನ ಮನಸ್ಸಿಗೆ ಬರಲಿಲ್ಲ, ಅವನು ಕೊಡಲಿಲ್ಲ' ಎನ್ನುವುದು. ನಮಗೆ ಕೊಟ್ಟಿದ್ದರ ಬಿಟ್ಟಿದ್ದರ ಮೇಲಿಂದ ಅವನನ್ನು ಅಳೆಯುವವರು ನಾವು.''

''ಇನ್ನೊಂದು ಸಂಗತಿಯಿದೆ, ಅಜ್ಜಿ, ನಿಮಗೆ ಭಕ್ತರ ಕತೆಗಳು ಗೊತ್ತಿವೆಯಲ್ಲ. ಪುರಂದರದಾಸರಂಥವರು, ದೇವರನ್ನು ನೀವು ಹೇಳುವ ಹಾಗೆ, 'ಹೊಟ್ಟೆಗೆ ಕೊಡು, ಬಟ್ಟೆಗೆ ಕೊಡು' ಎಂದು ಬೇಡಿದವರೇ ಅಲ್ಲ, ವೈರಾಗ್ಯ ಜೀವನ ಅವರದ್ದು. ಅವರು ಕೇಳಿದ್ದೇನು? 'ಏ ವಿಠ್ಠಲ, ನನ್ನನ್ನು ನಿನ್ನ ಹತ್ತಿರ ಕರೆದುಕೋ' ಎಂದಲ್ಲವೆ?''

''ಕರೆದುಕೊಳ್ಳುವವ ಅವನಾದರೆ, ಹೊತ್ತು ಬಂದಾಗ ಅವನೇ ಕರೆಯುತ್ತಾನೆ. ಹಾಗೆ ಕರೆಯಲಿಲ್ಲ, ಅಂತಲೇ ನಾನಿಲ್ಲಿ ಇರುವುದು.''

''ಅಲ್ಲ ಅಜ್ಜಿ, ಸಂಸಾರ ದುಃಖಮಯ ಎಂಬ ಭಾವನೆ ಇದ್ದಿತಲ್ಲ. ಮನುಷ್ಯ ದೇಹವನ್ನು ನೆನೆದರೇನೆ ಅವರಿಗೆ ಜಿಗುಪ್ಸೆ ಬರುತ್ತಿತ್ತು, ಒಂಬತ್ತು ತೂತಿನ ದೇಹ ಅಂದಿದ್ದರು, ಅವರು.''

ಅಜ್ಜಿ ನಕ್ಕರು.

''ನಿನ್ನ ದಾಸರಿಗೆ ದೇಹದ ತೂತುಗಳನ್ನು ಕಂಡು ಬೇಸರ ಬಂದಿದ್ದಾದರೆ, 'ದೇವರೇ, ಇನ್ನೊಂದು ಜನ್ಮದಲ್ಲಿ ತೂತೆಲ್ಲ ಹೊಲಿದು, ಬರಿ ಒಂದು ಚೀಲದ ಹಾಗೆ ಮಾಡಿ ನನ್ನನ್ನು ಹುಟ್ಟಿಸು' ಎಂದು ಬೇಡಲಿ. ದೇವರ ಹತ್ತಿರ ಹೋಗಿ ಅಲ್ಲೇ ಇದ್ದು ಬಿಡುವ ಪಂಚಾತಿಕೆ ಮಾತ್ರ ನನಗೆ ಅರ್ಥವಾಗುವದಿಲ್ಲ, ಮಗು, ಸಹಜಕ್ಕೂ ಹೇಳುತ್ತೇನೆ. ಎಲ್ಲೆಲ್ಲಿಯೂ ಅವನು ಇದ್ದಾನೆ–ಎನ್ನುವ ಬಾಯಿಯಿಂದಲೇ, ಅವನದ್ದು ಒಂದು ಬೇರೆ ಬಿಡಾರವಿದೆಯೆಂದು ಹೇಳುವ ರೀತಿ ಇದು.''

''ಹಾಗಿದ್ದರೆ ನೀನು ಹೇಳುವುದೇನು?''

''ನನ್ನ ಲೆಕ್ಕಾಚಾರ ಇದು. ಹುಟ್ಟಿದ್ದೇವೆ; ಬದುಕಿದ್ದೇವೆ, ಯಾಕೆ ಅಂತ ನಮಗೆ ಗೊತ್ತಿಲ್ಲ. ಇರುವಷ್ಟು ದಿವಸ ನಮಗೂ ಹಿತವಾಗಿ, ನಾಲ್ಕು ಜನರಿಗೂ ಹಿತವಾಗಿ ಬಾಳುವುದು. ಪರರಿಗೆ ಸುಖ ಕೊಡಲು ಬಾರದೆ ಹೋದರೆ, ದುಃಖ ಕೊಡದೆ ಇರುವದಪ್ಪ.''

ಅಲ್ಲಿಂದ ಮುಂದೆ ನನ್ನ ಮನಸ್ಸು, ಅನೇಕ ಆದಿ ಅಮ್ಮಗಳ ಕಲ್ಪನೆಗೆ ಜೋತುಕೊಂಡು ವಿಹರಿಸತೊಡಗಿತು. ಈ 'ಬಹುಧಾ ವದಂತಿ' ಅಮ್ಮಗಳ ಒಂದೊಂದು ಕಲ್ಪನೆಗೂ ಕಾರಣವಾದ ಮನೋಧರ್ಮ ಯಾವ ತೆರನದು–ಎಂಬ ವಿಚಾರ ಮಾಡತೊಡಗಿದೆ. ಅಜ್ಜಿಯು ನನ್ನೀ ಯೋಚನೆಗಳ ಕೋಲಾಹಲವನ್ನು ಕೊನೆಗೊಳಿಸಲೆಂಬಂತೆ, ''ಬೆಳಗಿನ ಜಾವಕ್ಕೆ ಗಾಡಿ ಕಟ್ಟಿಸಿ ಊರಿಗೆ ಮರಳಬೇಕಲ್ಲವೆ?'' ಎಂದರು.

ನಾವು ಮೂಡೂರಿನ ಮನೆ ಸೇರಿದಾಗ ಇನ್ನೂ ಎರಡು ದಿನ ಮದುವೆಯ ಗದ್ದಲದಿಂದ ತುಂಬಿಕೊಂಡಿತ್ತು. ಜತೆಯಲ್ಲಿ ಬೀಗರೂ ಬಂದಿದ್ದರು. ಸೀತೆಗೆ ಮಾತ್ರ ಮದುವೆಯ ಮಗಳ ವಿಷಯದಲ್ಲೇ ಅಸಮಾಧಾನ. ಅವಳೊಡನೆ ಸೀತೆ, ''ನೋಡು, ಒಂದು ನಾಲ್ಕು ದಿವಸ ಈ ಊರು ಬಿಡುವತನಕ ನಿನ್ನ ಗಂಡನೊಡನೆ ಎಲ್ಲರ ಇದಿರಿನಲ್ಲೇ ಕಿಟಿಪಿಟಿ ಮಾತನಾಡಬೇಡ. ಈ ಊರು ಜನ 'ಏನು ಲಜ್ಜೆಗೇಡಿ ಹೆಣ್ಣು' ಅಂದಾರು!'' ಎಂದಳಂತೆ. ಅವಳು ಅದಕ್ಕೆ, ''ಅದೆಲ್ಲ ನಿಮ್ಮ ಕಾಲಕ್ಕಾಯಿತು'' ಎಂದಳಂತೆ. ಈ ಓದಿದ ಹರಕು ಬಾಯಿ ಹೆಣ್ಣನ್ನು ನಾರಾಯಣ ಮದುವೆಯಾದದ್ದು ಮೂರ್ಖತನ ಎಂದೇ ಅವಳಿಗೆ ಕಂಡಿತು. ಅದಕ್ಕೆ ಕಾರಣವೂ ಇದೆ. ಸೀತೆ ಮದುವೆಯಾಗಿ ನಮ್ಮ ಮನೆಗೆ ಬಂದ ಒಂದು ವರ್ಷ ತನಕವೂ ತುಟಿಗಳ ಎಡೆಯಲ್ಲಿ ಕಡ್ಡಿ ಹಾಕಿದರೂ ಪಿಟ್ಟೆಂದವಳಲ್ಲ. ನನ್ನ ಸೀತೆಯನ್ನು ನೆನೆದರೆ–ಅವಳಿಂದಲೇ ಶ್ರೀರಾಮಚಂದ್ರನ ಹೆಂಡತಿಗೆ ಆ ಹೆಸರು ಬಂದಿರಬೇಕು ಎನಿಸುತ್ತದೆ. ಈಗ ನಾನೇ ಅವಳಿಗೆ ಸಮಾಧಾನ ಹೇಳಿದೆ.

ರಜೆ ಮುಗಿಯುತ್ತಲೂ ಅವರು ಶಿವಮೊಗ್ಗೆಗೆ ಹೊರಟು ಹೋದರು. ಅದರ ಮರುದಿನ ಯಾತಕ್ಕೋ ಅಜ್ಜಿಯ ಪ್ರಸ್ತಾಪ ಬಂತು. ನಾವಿಬ್ಬರೇ ಇದ್ದೆವು. ಸೀತೆ, ''ನಿಮ್ಮ ಅಜ್ಜಿಯಾದರೆ ಚಿಂತೆಯಿಲ್ಲ'' ಅಂದಳು.

''ಏನು ಬಂತಪ್ಪ?''

''ಬೀಗರ ಮಗ ಅನಂತಯ್ಯ ಮಾತನಾಡಿಸಲಿಕ್ಕೆ ಬಂದರೆ ಅವರ ಮದುವೆ ವಿಷಯದಲ್ಲಿ ಪಿಸುಕಿಪಿಸುಕಿ ಹೇಳಿದರು. 'ಪಾರಮಾರ್ಥದ ಕಡೆಗೆ ನನ್ನ ಒಲವು ಹೆಚ್ಚು, ಮದುವೆ ಒಂದು ಬಂಧನ' ಎಂದು ಅವರೆಂದರೆ, ಅಜ್ಜಿ – 'ಮದುವೆ ಬೇಡ ಬೇಡ ಎಂಬ ನಾಟಕವಾಡಿ

ಕೆಲವರು ಒಳಗಿಂದೊಳಗೆ ಹೇಗೆ ಹೇಗೋ ಇದ್ದದ್ದನ್ನು ಕಂಡಿದ್ದೇನೆ. ಮದುವೆ ಮನೆಯಲ್ಲಿ ನಿನ್ನ ಓಡಾಟ ಕಂಡ ನನಗೆ ಅಂಥ ಪಾರಮಾರ್ಥವೇನೂ ಕಾಣಿಸಲಿಲ್ಲ. ಹೆಣ್ಣು ಗಂಡಿಗೆ ಬಂಧನ; ಅದೇ ಪಾರಮಾರ್ಥಕ್ಕೆ ಕುಂದು– ಎಂದು ನೀನು ಕಟ್ಟಿಕೊಂಡ ಆ ದೇವರಿಗೂ ಅನಿಸಿದ್ದರೆ, ಹೆಣ್ಣನ್ನು ಸೃಷ್ಟಿಸುತ್ತಲೇ ಇರಲಿಲ್ಲ. ಪುರಾಣಗಳಲ್ಲೇ ಹತ್ತಾರು ಋಷಿಗಳು ಸಂಸಾರ ಕಟ್ಟಿಕೊಂಡು ಇದ್ದ ಕತೆ ಬರುತ್ತದೆ. ದೇವರನ್ನು ಪ್ರೀತಿ ಮಾಡುವುದಕ್ಕೆ ಸಂಸಾರ ಬಾಧಕವಲ್ಲ. ನೀನು ಬ್ರಹ್ಮಚರ್ಯದ ನಿರ್ಧಾರ ಮಾಡಬೇಕಾದುದು ಯಾವಾಗ, ಗೊತ್ತೆ? ಹೆಣ್ಣಿನ ರೂಪ ಹಗಲೂ ರಾತ್ರಿಯೂ ಕನಸಿನಲ್ಲಿ ಸುಳಿದಾಡುವುದು ನಿಂತ ಮರುದಿನ' ಹೀಗೆಲ್ಲ ಮಾತನಾಡಿದರೆ ಹೇಗೆ?'' ''ಅಜ್ಜಿ ಬರಿದೆ, ಹಾಗೆ ಹೇಳುವವರಲ್ಲ'' ಎಂದೆ ನಾನು. ಆಗ ಒಳಗಿನಿಂದ ಅಜ್ಜಿಯ ದನಿ ಕೇಳಿಸಿತು. ''ಮಾಣಿ ನನ್ನ ಮರುಳಿಗಾಗಿ ನೀನು ಸೀತೆಯ ಹತ್ತಿರ ಜಗಳ ಮಾಡಬೇಡ.''

ಬೀಗರು ನಮ್ಮಲ್ಲಿಗೆ ಬಂದಿದ್ದ ಸಮಯದಲ್ಲಿ ಮಂಜುನಾಥ, ಅವನ ಹೆಂಡತಿ ಶ್ರೀದೇವಮ್ಮ ನನ್ನ ಮೇಲೆ ಬಿದ್ದ ಯಾವತ್ತೂ ಹೊರೆಯನ್ನು ಹೊತ್ತರು. ಅವರ ಸಹಾಯವಿಲ್ಲದಿದ್ದರೆ ನಾನಂತು ಕಂಗಾಲಾಗುತ್ತಿದ್ದೆ. ಸೀತೆ, ಎಲ್ಲವನ್ನೂ ಮೂಕಾಂಬಿಕೆ ನಡೆಸಿಕೊಟ್ಟಳು– ಎನ್ನುತ್ತಾಳೆ. ನಮ್ಮ ಮಂಜುನಾಥನನ್ನು ಕೇಳಿದರೆ, ತಾನು ನಂಬಿದ ಹಿಂಡುಗಾನದ ಕೋಟಳಮ್ಮನೇ ನಡೆಸಿದ್ದಳಂತೆ. ಹಿಂಡುಗಾನವು ನಮ್ಮೂರಿನಿಂದ ಎರಡು ಮೈಲು ದೂರದಲ್ಲಿದ್ದರೂ ನಾನು ಅಲ್ಲಿಗೆ ವಿಶೇಷ ಹೋದುದಿಲ್ಲ. ಮಂಜುನಾಥ, ಶ್ರೀದೇವಮ್ಮರ ಉಪಕಾರವನ್ನು ಸ್ಮರಿಸಲೆಂದು ನಾನು ಅವರ ಮನೆಗೆ ಹೊರಟು ನಿಂತಾಗ ಅಜ್ಜಿ ಹೇಳಿದರು, ''ಮಾಣಿ, ನೀ ಹೋಗುವುದಾದರೆ, ನನ್ನ ಓರಗಿತ್ತಿ ತಿಪ್ಪಕ್ಕನನ್ನು ನೋಡಿಕೊಂಡು ಬಾ. ಅವಳಿಗೆ ಕಣ್ಣು ಕಾಣಿಸುವುದಿಲ್ಲ.''

ಮಂಜುನಾಥನ ಮಗನನ್ನು ಕರೆದುಕೊಂಡು ಆ ಮನೆಗೆ ಹೋದೆ. ನನ್ನ ಅಜ್ಜಿಗಿಂತಲೂ ತುಸು ಹಿರಿಯರಾಗಿದ್ದ ಅವರ ದೇಹವು ಕುಗ್ಗಿ ಅರ್ಧಕ್ಕರ್ಧವಾಗಿರಬೇಕು. ಮೈಯ ಅಂಗುಲಂಗುಲವೂ ನಿರಿಗೆಗಳೇ. ಅವರನ್ನು ಕಂಡು ನನಗೆ ತುಂಬ ಆದರ ಹುಟ್ಟಿಕೊಂಡಿತು.

''ಸುಬ್ಬಣ್ಣ, ನಿನ್ನನ್ನು ಸಣ್ಣದರಲ್ಲಿ ಕಂಡಿದ್ದೆನಪ್ಪ. ಕಣ್ಣು ಕಾಣುವ ತನಕವೂ ನಿಮ್ಮಲ್ಲಿಗೆ ಬರುತ್ತಿದ್ದೆನಲ್ಲವೆ. ಈಗ ಮೂಲೆಯನ್ನು ಹಿಡಿದು ಇಪ್ಪತ್ತೋ ಮೂವತ್ತೋ ವರ್ಷವಾಯಿತು. ನಿನ್ನ ಅಜ್ಜಿಯೂ ನನ್ನ ಹಾಗೇ ಆಗಿರಬೇಕು.

''ಇಲ್ಲ, ಅವರ ಕಣ್ಣು ಸಾಫಾಗಿದೆ.''

''ಹೌದೆ? ಮೂಕಿ ಒಯಿಸಾಗಿದ್ದಾಳಲ್ಲ, ನಾನು ನೋಡದೆ ವರ್ಷ ಎಷ್ಟಾಯಿತೊ?''

''ಅಜ್ಜಿ, ನಿಮಗೆ ಅವರನ್ನು ಕಾಣುವ ಆಸೆಯಾಗಿದ್ದರೆ ನೋಡುವ. ನಮ್ಮ ಮಂಜುನಾಥ ಅವರನ್ನು ಕೋಟಳಮ್ಮನವರ ಸಂತರ್ಪಣೆಗೆ ಕರೆಯಿಸುವ ಅಂತಿದ್ದಾನೆ.''

''ಸುಬ್ಬಣ್ಣ, ಅದು ಒಂದು ಕೆಲಸ ಬೇಡ'' ಎಂದರು ಗಾಬರಿಯಿಂದ.

''ಏನಜ್ಜಿ ಗಾಬರಿ?''

''ಅವಳು ಈಗ ಹುಷಾರಾಗಿದ್ದಾಳೆ ಅನ್ನುತ್ತೀ, ಹಾಗೆ ಇರಲಿ. ಮೊದಲು ಸಾರಿ ಅವಳು ಈ ಗುಡಿಗೆ ಬಂದಾಗ ಮೈಮೇಲೆ ಬಂದಿತ್ತು. ಅದೇ ಮಂಜುನಾಥನ ಅಜ್ಜಯ್ಯ ದೊಡ್ಡ ಪೂಜೆ ಮಾಡಿಸಿದ್ದರು. ನೂರಾರು ಜನ ಇದ್ದರು. ದೇವರಿಗೆ ಮಂಗಳಾರತಿ ತೊಡಗುತ್ತಲೇ ಹೆಮ್ಮಕ್ಕಳ ಎಡೆಯಲ್ಲಿ ಕುಳಿತಿದ್ದ ಆಕೆ ಕಿರುಚಿ ಆರ್ಭಟಿಸಿದಳು. ನಾನಿದ್ದೆ ಆ ದಿವಸ. ನಾಚಿಕೆಯಿಂದ ಕಂಗಾಲಾದೆ. ಆ ಪ್ರಾಯದಲ್ಲಿ ಮೈಯ ಅರಿವೆಯನ್ನೇ ಕಿತ್ತೆಸೆದು ಉಡು ನೂಲಲ್ಲಿ ತಲೆ ಕೆದರಿ ನಿಂತದ್ದು! ಆಗ ನಿನ್ನ ಅಜ್ಜನೂ ಮತ್ಯಾರೋ ಸೇರಿ ಅವಳನ್ನು ಹಿಡಿದುಕೊಂಡು, ತಲೆಯ ಮೇಲೆ ತಣ್ಣೀರು ಸುರಿದು ಆಚೆಯ ಹಾಡಿಗೆ ಕರದೊಯ್ದರು. ಆಗ ಅವಳ ಮೈಗೆ ಬಂದಿದ್ದ ತ್ರಾಣವೆಂದರೆ ಹುಲಿಗೆ ಸಮ. ಅಂಥ ಸ್ಥಿತಿಯಲ್ಲೇ ಅವಳ ಕೈಕಾಲನ್ನು ಕಟ್ಟಿ, ಒಂದು ಕೋಣೆಯಲ್ಲಿ ಹಾಕಿದರು. ಅವಳು ಕೂಗುತ್ತಲೇ ಇದ್ದಳು : 'ಓಹೋ ನನ್ನ ಈ ರೂಪ ಬೇಡವೇ ನಿಮಗೆ?' ಅಂತ. ಆಮೇಲೆ ಯಾರ್‍ಯಾರ ಒಡನಾಟವೂ ಬೇಡವೆಂಬಂತೆ ಮೂಲೆ ಹಿಡಿದುಬಿಟ್ಟಳು. ಈಗ ಒಯಿನಾಗಿದ್ದಾಳಲ್ಲ, ಸಾಕು ನನ್ನ ಮೂಕಿಗೆ ಹೇಳು. ತಿಪ್ಪಜ್ಜಿ ಚೆನ್ನಾಗಿದ್ದಾಳೆ. ಕೇಳಿದೆ ಅವಳನ್ನು–ಎನ್ನು'' ಎಂದರು.

ಹಿಂಡುಗಾನ ಅಮ್ಮನವರ ಉತ್ಸವವನ್ನು ಮಂಜುನಾಥ ಬಹಳ ವೈಭವದಿಂದಲೇ ನಡೆಸಿದ. ತಿಪ್ಪಜ್ಜಿಯಿಂದ ಹಳೆಯ ಪ್ರಕರಣವನ್ನು ಕೇಳಿದಂಥ ನನಗೆ ನಮ್ಮ ಆಜ್ಜಿಯನ್ನು ಕರೆದೊಯ್ಯುವ ಇಷ್ಟವಿಲ್ಲದಿದ್ದರೂ ಅವರು ಹೊರಟು ಬಂದೇಬಿಟ್ಟರು. ಮಧ್ಯಾಹ್ನ ಸಮಾರಾಧನೆಯ ಕೆಲಸ ಮುಗಿದೊಡನೆ, ''ಮಾಣಿ, ನನ್ನನ್ನು ತಿಪ್ಪಕ್ಕನ ಮನೆಗೆ ಕರೆದುಕೊಂಡು ಹೋಗು'' ಎಂದು ಆಜ್ಞೆ ಮಾಡಿದರು.

ಅವರ ಅಂಗಳಕ್ಕೆ ಹೋದಾಗ ತಿಪ್ಪಜ್ಜಿ ಚಾವಡಿಯಲ್ಲಿ ಜಪಸರ ಹಿಡಿದು ಕುಳಿತಿದ್ದು ಕಾಣಿಸಿತು. ನನ್ನ ಅಜ್ಜಿ ''ತಿಪ್ಪಕ್ಕ. ಇಂದೀಗ ನಿನ್ನನ್ನು ಕಾಣುವ ಯೋಗ ಬಂದಿತು. ನನಗೆ' ಎಂದು ಹೇಳುತ್ತ ಅವರನ್ನು ಸಮೀಪಿಸಿ ಕುಳಿತರು. ಅವರ ಬೆನ್ನನ್ನು ಮೆಲ್ಲಗೆ ಸವರಿದರು. ಗಲ್ಲವನ್ನು ಎತ್ತಿ ಅವರ ಕಣ್ಣುಗಳನ್ನು ಇಣಿಕಿ ನೋಡಿದರು. ತಮ್ಮ ಹಸ್ತಗಳಿಂದ ಅವರ ಮುದುಡಿದ ಕೈಗಳನ್ನು ಹಿಡಿದುಕೊಂಡರು. ಆಕೆ ಕಣ್ಣೀರನ್ನು ಸುರಿಸುತ್ತ ''ಮೂಕಿ, ನೀನು ಇಲ್ಲಿಗೆ ಬಾರದೆಯೇ, ನಾನು ನಿನ್ನ ಹತ್ತಿರ ಬರುವುದಕ್ಕುಂಟೆ?'' ಎಂದರು.

''ತಿಪ್ಪಕ್ಕ, ಬರಬಹುದಿತ್ತು ಈ ಮೊದಲೂ. ಒಂದು ಸಾರಿ ನನಗೆ ಇಲ್ಲಿಗೆ ಬಂದು ಅನುಭವಿಸಿ ಸಾಕಾಗಿತ್ತು. ಆ ಅಮ್ಮನವರ ಮುಖವನ್ನೇ ನೋಡುವುದಿಲ್ಲ ಎಂದುಕೊಂಡಿದ್ದೆ. ನನ್ನನ್ನು ಮರುಳು ಮಾಡಿ ಆ ದಿನ ಕರೆಸಿಕೊಂಡದ್ದು ಅವಳೇ ಅಲ್ಲವೆ. 'ನನಗೂ ಅರಿವೆಯಿಲ್ಲ, ನಿನಗೂ ಬೇಡ, ನೀನು ನನ್ನ ಮಗು' ಎಂದು ಹೇಳಿದಳು. ಅವಳ ಮಾತನ್ನು ನಂಬಿ 'ನಿನ್ನ ಹಾಗೆಯೇ ನಾನು' ಎಂದು ಕುಣಿದಾಡಿದೆ. ನನ್ನ ಒಬ್ಬಳ ಮರುಳಿಗೆ ಊರಿನ ಮೂರು ಮರುಳುಗಳು ಸೇರಿ, ಸಾವಿರ ಬಗೆಯಿಂದ ಕಾಡಿದರು. ಹೊಡೆದು, ಬಡಿದು ನನ್ನ ಜೀವ ತಿಂದರು. ನನಗೆ ಯಾವುದೂ ಮರೆತುಹೋಗಿಲ್ಲ, ಅದಕ್ಕೇನೆ ಅಮ್ಮನವರ ಹತ್ತಿರ ಹೋಗಿ 'ನಿನ್ನ ಆಟವೇ! ದಿನಕ್ಕೆ ನಿನ್ನದು ಒಂದೊಂದು ವೇಷವೇ' ಎಂದಂದೂ ಬಂದೆ. ಅದರಲ್ಲಿಯೂ ತಿಪ್ಪಕ್ಕ, ಈ ಹಿಂಡುಗಾನ ಅಮ್ಮ ಮಾಯಾವಿ ಅಂದರೆ ಮಾಯಾವಿ. ಲೋಕವನ್ನು

ಹುಟ್ಟಿಸಿದಳು. ಅವಳೇ ಮಕ್ಕಳಿಂದ ಕಪ್ಪಕಾಣಿಕೆ ಕೇಳಿದಳು. ರಕ್ತಬಲಿ ಬೇಡಿದಳು. ಅವಳನ್ನು ಭಕ್ತರೂ ನಂಬಿದರು; ಕಳ್ಳಕಾಕರೂ ನಂಬಿದರು. ಮಂತ್ರವಾದಿಗಳೂ ನಂಬಿದರು ಹೆಣ್ಣೇ ಸರ್ವಸ್ವ. ಹೆಣ್ಣಿದ್ದರೇ ಗಂಡು ಎಂತ ಮಾಯೆಯನ್ನು ಹೂಡಿದಳು, ಭಗವತಿ ಆದಳು. ಭಗವೇ ತಾನು ಎಂದಳು. ನಾನಿದ್ದರೆ ಪುರುಷ; ಇಲ್ಲವಾದರೆ ಏನುಂಟು? ಎಂದಳು; ದೇವರ ಗುಡಿಯ ಎದುರು ನಿಂತ ಕ್ಷಣದಲ್ಲಿ ಅವಳ ಈ ಸಾವಿರ ಆಟವೂ ಕಾಣಿಸಿತು ನನಗೆ.''

ನನ್ನ ಅಜ್ಜಿ ತುಂಬ ಭಾವತಲ್ಲೀನರಾಗಿ ನುಡಿಯುತ್ತಿದ್ದರು. ತುಟಿ ಬಿಗಿ ಹಿಡಿದು ಆಲಿಸುತ್ತಿದ್ದ ತಿಪ್ಪಕ್ಕ ಚೇತನ ಬಂದವರಂತೆ, ''ನೀನೊಬ್ಬಳು ಪುಣ್ಯಾತ್ಗಿತ್ತಿ ಅಮ್ಮ ನಿನ್ನನ್ನು ಒಲಿದಿದ್ದಾಳೆ. ಆದರೆ ಮೂಕಿ, ನನ್ನಂಥವಳು ಇದ್ದು ಏನು ಆಗಬೇಕಿನ್ನು? ಅವನೂ ಕೊಂಡು ಹೋಗುವುದಿಲ್ಲ.''

''ಅಯ್ಯೋ ತಿಪ್ಪಕ್ಕ. ಅದೆಂಥ ಯೋಚನೆ? ಅವನು ಸಾಗಿಸುವ ಕತೆ! ಇರುತ್ತೀಯಾ ಇನ್ನೊಂದು ಅಷ್ಟು ದಿವಸ. ನಿನ್ನ ಈ ಅಂಗಿ ಇನ್ನೂ ನಾಲ್ಕು ವರ್ಷಕ್ಕೆ ಸಾಕು.''

''ಇನ್ನೂ ನಾಲ್ಕು ವರ್ಷ ಇರಬೇಕು ಅನ್ನುತ್ತೀಯಾ?''

''ಅಂದೆ ಒಂದು ಮಾತಿಗೆ, ಇರುವ ಜೀವ ಇಲ್ಲಿದ್ದರೇನು, ಎಲ್ಲಿದ್ದರೇನು? ಅದಕ್ಕೆ ನಾಶವಿಲ್ಲ ಅನ್ನುತ್ತಾರೆ. ಯಾವತ್ತೂ ಲೋಕವೇ ಕರಗುವಾಗ ಅದೂ ಕರಗುತ್ತದೆಯೋ ಏನೋ. ಆಗ ಅಮ್ಮನೂ ಇಲ್ಲ, ಅವಳಿರುವ ತನಕ ನಾವು; ನಾವಿರುವ ತನಕ ಅವಳು. ಎರಡೂ ಇರುವ ತನಕ ಲೋಕ.''

''ಅಷ್ಟೇ ಅಂತೀಯಾ?''

''ಅಷ್ಟಲ್ಲದೆ ಮತ್ತೇನು? ಜೀವಿಗಳು ಕುಣಿದಾಡಲಿ–ಅಂತ ಈ ಸೃಷ್ಟಿ, ಕುಣಿದಾಟ ಮುಗಿದ ಮೇಲೆ, ಅದೆಲ್ಲ ಯಾತಕ್ಕೆ ಹೇಳು.''

ತಿಪ್ಪಕ್ಕನನ್ನು, ಅನಂತರ ಮಂಜುನಾಥರನ್ನು ಬೀಳ್ಕೊಂಡು ಊರ ಮನೆಯ ಕಡೆಗೆ ಹೊರಟಾಗ ಕತ್ತಲಾಗತೊಡಗಿದ್ದಿತು. ಸೀತೆ ಮಕ್ಕಳನ್ನು ಕಟ್ಟಿಕೊಂಡು ಮುಂದಕ್ಕೆ ಹೋಗಿಯೇ ಬಿಟ್ಟಳು. ಮನೆಗಿರುವ ದೂರ ಸ್ವಲ್ಪವಾದರೂ ಅದು ಅಗಲ ಕಿರಿದಾದ ದಾರಿ; ಅಂಕುಡೊಂಕಿನದು ಬೇರೆ. ಅರ್ಧ ಹಾದಿಯ ಬಳಿಕ ಕವಲೊಡೆಯುವಲ್ಲಿ ನಾವು ಬಲಗಡೆಗೆ ತಿರುಗಬೇಕು. ಅದನ್ನು ಮರೆತು ಎಡಕ್ಕೆ ತಿರುಗಿದೆವು, ದಾರಿ ತಪ್ಪಿದ್ದು ಇಬ್ಬರ ಗಮನಕ್ಕೂ ಬಂದಿರಲಿಲ್ಲ, ಆದರೆ ಸ್ವಲ್ಪ ಮುಂದಕ್ಕೆ ಹೋಗುತ್ತಲೇ ಅವರು ಥಕ್ಕನೆ ನಿಂತುಕೊಂಡರು– ದೊಡ್ಡ ಪಾರೆಕಲ್ಲಿನ ಮಗ್ಗುಲಿಗೆ. ''ಮಾಣಿ, ಸಾಪಾಗಿ ಕೇಳಿಸುತ್ತದೆ. ಬ್ರಾಹ್ಮಣರ ಧ್ವನಿ–ಓಂ ಇಂದ್ರಾ ಇದನ್ನಮಃ; ಓಂ ವರುಣಾ ಇದನ್ನಮಃ; ಓಂ ಮಿತ್ರಾ ಇದನ್ನಮಃ....''

''ಎಲ್ಲಿ ಅಜ್ಜಿ? ಈ ಕಾಡಿನಲ್ಲಿ ಯಾತಕ್ಕೆ ಮಂತ್ರ ಹೇಳುತ್ತಾರೆ?''

''ಓ, ಅಲ್ಲಿ ನೋಡು, ಯಾರೋ ಯಜ್ಞವನ್ನು ಮಾಡುತ್ತಿದ್ದಾರೆ. ಮೂರು ನಾಲ್ಕು ಮಂದಿ ಗಡ್ಡದ ಬ್ರಾಹ್ಮಣರು ಕಾಣಿಸುತ್ತಾರೆ, ಮಂತ್ರವನ್ನು ಹೇಳುತ್ತಿದ್ದಾರೆ. ತುಪ್ಪ, ಸಮಿತ್ತು ಎರೆಯುತ್ತಿದ್ದಾರೆ. ಅಯ್ಯೋ ನಿಮ್ಮ ಪಾಡೇ, ಯಾರು ಈ ಕಾಲದಲ್ಲಿ ನಿಮ್ಮನ್ನು ಮೂಸುವವರು? ಮೆರೆದಿರಿ ನಾಲ್ಕು ದಿನ; ಬ್ರಾಹ್ಮಣರು ಮೆರೆಯಿಸಿದರು ನಿಮ್ಮನ್ನು

ನಿಮ್ಮಿಂದ ಅವರು ಬದುಕಿಕೊಂಡರು. ಆಗ ಎಲ್ಲದಕ್ಕೂ ಇಂದ್ರನೇ, ವರುಣನೇ. ಎಲ್ಲದಕ್ಕೂ ಮಿತ್ರನೇ. ಅಗ್ನಿ ಕುಂಡದಲ್ಲಿ ತುಪ್ಪ ಸುರಿದದ್ದೇ ಸುರಿದದ್ದು ಆಯಿತು. ಅದೊಂದು ಕಾಲ. ಈಗ ನಿಮ್ಮನ್ನು ಯಾರು ಕೇಳುತ್ತಾರೆ, ಅಗ್ನಿ, ನೀನಾದರೆ ಚಿಂತೆಯಿಲ್ಲ, ಇಂದ್ರ ಹೋದ ಮೇಲೆಯೂ ನೀನು ಉಳಿದುಕೊಡೆ. ನಿನ್ನ ಇಂದ್ರನ ಹಾಗೆಯೇ ನನ್ನ ಅಮ್ಮನ ಗತಿಯಾಗಲಿಲ್ಲ. ಅವಳು ಜೀವಗಳನ್ನು ಹಡೆದಳು. ಕಾಯುವವಳು. ಬಯ್ದರೆ ಅವಳೇನೇ ಬಯ್ಯುವವಳು. ಅವಳಿಗೆ ಯಾವತ್ತು ಕಾಲಕ್ಕೂ ಮರ್ಯಾದೆ ಉಂಟು. ಅವಳಿಂದ ಅವನು ಎಂಬುವನಿಗೂ ಉಂಟು.''

''ಅವನಿಗೆ ಎಂದರೆ ಯಾರಿಗೆ, ಅಜ್ಜಿ?''

''ಅವನಿಗೆ ಅಂದರೆ ಅವನಿಗೆ. ಹೆಣ್ಣು ಬಾಯಿಂದ ಹೇಳುವ ಮಾತಲ್ಲ, ಅನ್ನುತ್ತಾರೆ. ಹೇಳದೇ ಏನು? ಲಿಂಗಕ್ಕೆ! ಅವರಿಬ್ಬರೂ ಕೂಡಿಯೇ ಸೃಷ್ಟಿ. ಮಾಣಿ, ಅವೆರಡನ್ನು ಬಿಟ್ಟರೆ ಏನುಂಟಂತೆ? ಅಷ್ಟು ಗೊತ್ತಿದ್ದರೂ ನಮಗೆ ಸತ್ಯವನ್ನು ಕಂಡರೆ ನಾಚಿಕೆ.

''ಅಲ್ಲದಿದ್ದರೂ ಮಗು, ಈ ನರಮನುಷ್ಯರ ಬುದ್ಧಿ ಚಪಲ. ಇಂದಿದ್ದದ್ದು ನಾಳೆಗೆ ಹಳಸುತ್ತದೆ. ಅಲ್ಲದೆ ಹೋದರೆ ಇಂದ್ರ, ವರುಣ, ಅಷ್ಟದಿಕ್ಪಾಲಕರು ಮತ್ತೊಂದು– ಎಂದವರು ಅವರೆಲ್ಲರನ್ನೂ ಮರೆತುಬಿಟ್ಟು ಎಷ್ಟು ಹೊಸ ದೇವರುಗಳನ್ನು ಪೂಜಿಸುವುದಂತೆ? ಬೇರೆ ಬೇರೆ ಕಾಲಕ್ಕೆ ಬೇರೆ ಬೇರೆ ಊರಿನ ಜನ ಅಷ್ಟೇ ದೇವರನ್ನೂ, ಹೆಸರನ್ನೂ ಮಾಡಿಕೊಂಡಿರಬೇಕು.''

''ಆದರೂ ಒಬ್ಬನಿಗೆ ಹೇಳುವುದಲ್ಲವೆ, ಅಷ್ಟೆಲ್ಲ?''

''ಅಂಥ ಜ್ಞಾನವಿರುತ್ತಿದ್ದರೆ–ಇಂದ್ರ, ವರುಣ, ಅಗ್ನಿ, ಮಿತ್ರ ಅಂತ ನಾಲ್ಕು ನಾಲ್ಕು ಪ್ರತ್ಯೇಕ ಹೆಸರುಗಳನ್ನು ಹೇಳಿ, ಅವರಿಗೆ ನಾಲ್ಕು ನಾಲ್ಕು ಸಾರಿ ಹವಿಸ್ಸನ್ನು ಕೊಡುತ್ತಾರೆಯೇ? ದೇವರು–ಅವನೋ, ಅವಳೋ ಎಂಬಾಗಲೇ ಎರಡು ಹೆಸರಾಗಿ ಬಿಟ್ಟಿತು. ಎಲ್ಲವೂ ಅಜ್ಞಾನದ ಆಟ! ಅಲ್ಲದೇ ಹೋದರೆ, ಮಗು, ಅಮ್ಮನ ಗುಡಿಯ ಮುಂದೆ ಅವಳೇನೆ ಹುಟ್ಟಿಸಿದ ಕುರಿ, ಕೋಣ ಕಡಿಯುತ್ತಾರೆಯೆ, ಅದು ಅಮ್ಮನಿಗೆ ಪ್ರೀತಿ–ಅಂತ. ಅಜ್ಞಾನದ ಬೆನ್ನಿಗೆ ಅನ್ಯಾಯವೂ ನಡೆಯುತ್ತದೆ.''

ಅಜ್ಜಿಯ ಬುದ್ಧಿ ಪಾದರಸದಂತೆ ಯಾವ ದಿಕ್ಕಿನಿಂದ ಯಾವ ದಿಕ್ಕಿಗೂ ಹರಿದೀತು. ಅವರ ಮಾತಿನಲ್ಲಿ ನನಗೆ ಅಸಂಗತವೇನೂ ಕಾಣದೇ ಹೋದರೂ ಮಾತಿನ ಬಿಡು ತುಣುಕುಗಳನ್ನು ಒಂದು ಪೂರ್ಣ ಚಿತ್ರವಾಗಿ ಎಣಿಸಿಕೊಳ್ಳುವ ತಾಕುತ್ತು ನನ್ನಲ್ಲಿರಲಿಲ್ಲ.

ಮರುದಿನ ಸಂಜೆ ಹಗಲಿನಲ್ಲಿ, ಅಜ್ಜಿಗೆ 'ಇಂದ್ರಾಯ ಸ್ವಾಹಾ' ಕೇಳಿ ಬಂದ ತಾಣವನ್ನು ಅರಸಿಕೊಂಡು ಹೊರಟೆ. ನೂರು ಮಾರು ಸರಿಯುತ್ತಲೇ ವಿಶಾಲವಾದ ಆ ಪಾರೆ ಜೊತೆಗೆ ಒಂದು ಕಲ್ಲು ಮರಿಗೆಯೂ ಕಾಣಿಸಿತು. ಅದರ ಮಗ್ಗುಲಲ್ಲೇ ಒಂದು ಕಂಬ. ಆದರೆ ಆ ಕಲ್ಲು ಮರಿಗೆ ಯಾತಕ್ಕಿದ್ದೀತು? ಉತ್ತರ ಸ್ಪಷ್ಟವಾಗಿತ್ತು–ಬಾಯಾರಿದ ದನಗಳಿಗಾಗಿ, ನೀರು ತುಂಬಿಸಲೆಂದು. ಅಂದಮೇಲೆ ಸಮೀಪದಲ್ಲಿ ಒಂದು ಬಾವಿಯೂ ಇದ್ದಿರಬೇಕೆಂಬ ವಿಚಾರ ಹುಟ್ಟಿ ಅಲ್ಲೆಲ್ಲ ಸುತ್ತಾಡತೊಡಗಿದೆ. ಅಜ್ಜಿಗೆ 'ಇಂದ್ರಾಯ ಸ್ವಾಹಾ' ಮಂತ್ರ ಕೇಳಿಸಬೇಕಾದರೆ ಪೂರ್ವಕಾಲದಲ್ಲಿ ಇಲ್ಲೇನಾದರೂ ಋಷ್ಯಾಶ್ರಮ ಇದ್ದಿತ್ತೆ? ಇದ್ದರೆ ಅವರ ವಸತಿಯ ಮುಂದೆ

ಯಜ್ಞ ಕುಂಡವೂ ಇದ್ದೀತು. ಇದ್ದರೂ ಈಗ ಅದು ಇನ್ನೂ ಉಳಿದುಕೊಂಡಿರಲು ಸಾಧ್ಯವೇ?—ಎಂದು ತೋಚುತ್ತಲೇ ನಕ್ಕೆ. ಅಜ್ಜಿಗೆ ಅಂಥ ಪುರಾತನ ಕಾಲದ ಸಂವೇದನೆಯುಂಟಾಗಿ ಅವರು ಗೊಣಗಿದರು. ನಾನು ನಮ್ಮ ಅಜ್ಜಿ ಅಲ್ಲವಲ್ಲ.

ಅಷ್ಟು ಹೊತ್ತಿಗೆ ಅದೇ ದಾರಿಯಾಗಿ ಇಬ್ಬರು ಹುಡುಗರು ಏನನ್ನೋ ಹೊತ್ತುಕೊಂಡು ಆ ಕಡೆಗೇ ಬಂದರು. ಅವರ ಹಿಂದೆ ಒಬ್ಬ ಹೆಂಗಸು ಮತ್ತೊಂದು ಹೊರೆ ಹೊತ್ತುಕೊಂಡು ಬರುವುದೂ ಕಾಣಿಸಿತು. ದಣಿದು ಬಂದ ಅವರು ಹೊರೆಗಳನ್ನಿಳಿಸಿ ಸುರಿಯುತ್ತಿದ್ದ ಬೆವರನ್ನು ಉಜ್ಜಿಕೊಂಡರು. ನಾನಾಗಿಯೇ ಅವರನ್ನು ಸಮೀಪಿಸಿದಾಗ 'ಇವಳನ್ನು ಎಂದೋ ಒಂದು ದಿನ ಕಂಡಿದ್ದೇನಲ್ಲ' ಎನಿಸಿತು, ನನಗೆ. ''ಮೂಕಮ್ಮನವರು ಅಂತ ಒಬ್ಬರಿದ್ದಾರಲ್ಲ, ಅವರ ಮನೆ ಯಾವುದು ಒಡೆಯ?'' ಎಂದು ಅವಳು ಕೇಳಿದಳು. ''ಅದು ನಮ್ಮ ಮನೆಯೇ, ಬನ್ನಿ'' ಎಂದು ಅವರನ್ನು ಕರೆತಂದೆ. ನಮ್ಮ ಮನೆಯ ಮುಂದಿನ ಅಶ್ವತ್ಥದ ಕಟ್ಟೆಯನ್ನು ಕಂಡಾಗ ಆಕೆಗೆ ಒಂದು ಛತ್ರವೇ ಸಿಕ್ಕಿದಷ್ಟು ಸಂತೋಷವಾಯಿತು. ಬೆಲ್ಲ, ನೀರು ತಂದುಕೊಟ್ಟೆ. ''ಈಗ ಅಡುಗೆಯಾಗುತ್ತದೆ ಉಂಡು ಹೋಗಿ'' ಎಂದೆ. ''ಬೇಡ, ಒಡಯ.'' ಎಂದು ಹೊರಡಲು ಚಡಪಡಿಸಿದಳು. ನಮ್ಮ ಚಾವಡಿಯಲ್ಲಿ ಲಾಟೀನು ಉರಿಯುತ್ತಿತ್ತು, ಅದರ ಬೆಳಕಿನಲ್ಲಿ ಆಕೆಯ ಮುಖವೂ ಸೊಂಪಾಗಿ ಕಾಣುತ್ತಿತ್ತು. ಸುಮಾರು ಹದಿನೈದು ವರ್ಷಗಳ ಹಿಂದೆಯೇ ಜಾತ್ರೆಯಲ್ಲಿ ಕಂಡಂಥ ನಾಗಿಯ ನೆನಪು ತಿರುಗಿ ಹೊಳೆಯಿತು. ಆಗ ಇವಳಿಗೆ ಇನ್ನೂ ಹೆಚ್ಚಿನ ಚೆಲುವಿತ್ತು, ಆದರೂ ಕಟ್ಟುಮಸ್ತಾದ ಜೀವ. ಕಂಗಾಲು ಜೀವಿಯಲ್ಲ, ಅವಳ ಮಕ್ಕಳಲ್ಲಿ ಈಗ ಯೌವನ ತುಂಬಿ ಕಾಣುತ್ತಿತ್ತು, ಅಷ್ಟು ಹೊತ್ತಿಗೆ ಅಜ್ಜಿ ಅಲ್ಲಿಗೇ ಬಂದರು.

''ಯಾರು ನಾಗಿಯೆ? ನಮ್ಮೂರಿನ ನಾಗಿಯೇ?'' ಎಂದರು.

ಆಕೆಯ ಮುಖ ಪೆಚ್ಚಾಯಿತು. ''ದೊಡ್ಡೊಡತಿ, ಈ ಊರಿನ ಋಣ ಮುಗಿದದ್ದು ಎಂದೋ ಏನೊ. ನಾವಿನ್ನು ಹೊರಡುತ್ತೇವೆ'' ಎಂದಳು. ಅವರು, ''ಚಿಂತೆಯಿಲ್ಲ ನೀನು ನಿನ್ನ ಹಟವನ್ನು ಸಾಧಿಸಿದೆ'' ಎಂದು ನಕ್ಕರು. ''ನಾಗಿ, ನಿನ್ನ ದೌಲತ್ತೆಲ್ಲ ಸಾಕು. ಮೂಕಜ್ಜಿ ಮನೆಯಲ್ಲಿ ಒಂದು ತುತ್ತು ಅನ್ನವನ್ನು ಉಂಡುಹೋದರೆ ನಿನಗೇನೂ ಕೇಡು ಬರಲಾರದು'' ಎಂದರು.

''ನನ್ನ ದೇವರು ಹೇಳಿದ ಮೇಲೆ....'' ಎಂದಳು ಆಕೆ.

''ಹಾಗೆ ಹೇಳು ಮತ್ತೆ ಯಾಕೋ ಏನೋ, ನಿನ್ನ ನೆನಪು ಸಣ್ಣದರಿಂದಲೂ ಉಳಿದುಕೊಂಡಿದೆ, ನನ್ನ ಮನಸ್ಸಿನಲ್ಲಿ. ನೀನು ಬಂದದ್ದು ಭಾರೀ ಒಳಿತಾಯಿತು. ಇವು ನಿನ್ನೆರಡು ಮಕ್ಕಳಲ್ಲವೇ?''

''ಹೌದು ಒಡತಿ, ಅವು ಮುಂದೆ ಬೆಳೆದು ಸಂಸಾರ ಮಾಡಿಕೊಂಡಿರುವದನ್ನು ನಾನು ಕಂಡರೆ ಸಾಕು. ಈ ಮಕ್ಕಳದ್ದೇ ಚಿಂತೆ. ಅವುಗಳ ಹಣೆಯ ಮೇಲೆ ಏನೇನು ಬರೆದಿದೆಯೋ'' ಎನ್ನುತ್ತಲೇ ನಾಗಿಯ ದನಿ ದುಃಖಪೂರಿತವಾಗುತ್ತ ಬಂದಿತು.

''ಸಾಕು. ನೀನು ಅದನ್ನು ಹೇಳುವುದು ಬೇಡ, ನಿಮ್ಮ ಊಟ ಮುಗಿಯಲಿ. ಆಮೇಲೆ ಒಂದು ಮಾತು ಹೇಳುತ್ತೇನೆ–ನಾಲ್ಕು ಹೊಟ್ಟೆ ತಂಪಾಗುವ ಮಾತನ್ನೇ ಹೇಳುತ್ತೇನೆ'' ಎಂದಂದು ತಮ್ಮ ಕೊಟಡಿಗೆ ಹೋದರು.

ನಮ್ಮೆಲ್ಲರ ಊಟ ಮುಗಿದು, ಮಕ್ಕಳು ನಿದ್ದೆ ಹೋದವು. ನನಗೂ ತೂಕಡಿಕೆ. ಆಗ ಸೀತೆ ''ಎಷ್ಟು ಹೊತ್ತು ಮಾತುಕತೆ! ಯಾವ ಊರಿನವಳೋ ಏನೋ, ಇನ್ನೂ ಮುಗಿಸಿದ ಹಾಗಿಲ್ಲ'' ಎಂದು ಗೊಣಗಿದಳು. ಮರುದಿನ ನನಗೆ ಬೆಳಿಗ್ಗೆ ಎಚ್ಚರಾದಾಗ ನಾಗಿ ತನ್ನ ಮಕ್ಕಳೊಡನೆ ಹೊರಟು ಹೋಗಿದ್ದಳು.

ಕೆಲ ದಿನಗಳ ಮೇಲೆ ರಾಮಣ್ಣ ಮಳೆಯಲ್ಲಿ ನೆನೆದು, ನಮ್ಮ ಮನೆಗೆ ಬಂದಾಗ ಅಜ್ಜಿ ಅವನೊಡನೆ ದೀರ್ಘ ಸಂಭಾಷಣೆಯನ್ನು ನಡೆಸಿದರು. ನಾಗಿಯ ವಿಷಯದಲ್ಲಿ ಅವನಿಗೆ ಅದೆಷ್ಟು ಮೋಹ! ಅಜ್ಜಿ ಅನ್ನುತ್ತಿರುವ ಹಾಗೆ, ಗಂಡು–ಹೆಣ್ಣಿನ ಮೋಹ ದೊಡ್ಡದು. ದೇವರು ಮೇಲಿಂದ ಮೇಲೆ ಅವತಾರ ತಾಳಿದರೂ–ಪ್ರತಿ ಜನ್ಮದಲ್ಲಿಯೂ 'ಅವನೇ ಗಂಡ, ಅವಳೇ ಹೆಂಡತಿ' ಆಗಿ ಮದುವೆಯಾಗಿ ಬಾಳಿದರು. ಲಕ್ಷ್ಮಿ ಜನಕರಾಯನ ಮಗಳಾಗಿ, ವಿಷ್ಣು ದಶರಥರಾಯನ ಮಗನಾಗಿ ಹುಟ್ಟಬಹುದು. ಸೀತೆಗೆ ಸ್ವಯಂವರ ನಿರ್ಣಯವಾಗಿ, ಸಾವಿರಾರು ಜನ ಅರಸು ಮಕ್ಕಳು ಬಂದರೂ ಸೀತೆ ಮಾತ್ರ ರಾಮನದೇ ಹೆಂಡತಿಯಾಗುವುದು ಸಾಧ್ಯ. ಉಳಿದವರಿಗೆ ಸಾಧ್ಯವೆ? ನನ್ನ ಹೆಂಡತಿಯ ಹೆಸರೂ ಸೀತೆಯಷ್ಟೆ. ಇವಳೂ ಹೀಗೆ ಜನ್ಮಜನ್ಮಾಂತರದಿಂದಲೂ ನನ್ನನ್ನು ಬೆನ್ನಟ್ಟಿ ಬಂದವಳಿರಬಹುದೇ? ಹಿಂದೆಯೂ ಇವಳು ನನ್ನನ್ನು ಸ್ವಲ್ಪ ಮಟ್ಟಿಗಾದರೂ ಹೆದರಿಸಿಕೊಂಡೇ ಇದ್ದಳು! ಈ ಪುನರ್ಜನ್ಮವೆಂಬುದು ನಿಜವಾದರೆ ನಮ್ಮ ರಾಮಣ್ಣನಿಗೆ ಈ ಜನ್ಮದಲ್ಲಿ ನಾಗಿ ಸಿಗದೇ ಹೋದರೂ, ಇನ್ನೊಂದು ಜನ್ಮದಲ್ಲಾದರೂ ಅವನಿರಿಸಿದ ಪ್ರೀತಿಗೆ ಬಹುಮಾನವಾಗಿ ದೇವರು ಅದೇ ನಾಗಿಯನ್ನು ಅವನಿಗೆ ಕೊಡಿಸಲಾರನೇ? ಒಂದು ವೇಳೆ ಸಿಕ್ಕರೂ ಕೂಡ ಏನು ಪ್ರಯೋಜನ? ಇನ್ನೊಂದು ಜನ್ಮದಲ್ಲಿ ರಾಮಣ್ಣ ಗಾಣದ ರಾಮಣ್ಣನಾಗಿ ಹುಟ್ಟುತ್ತಾನೆಯೇ ಅಥವಾ ನಾಗಿ ನಾಗಿಯಾಗಿಯೇ ಹುಟ್ಟುತಾಳೆಯೆ? ಮುಂದಾದರೂ ಅವರು ಕೂಡಿ ಬಾಳಬೇಕೆಂಬ ಅವರು ನನ್ನ ಆಶಯವನ್ನು ಅಜ್ಜಿಗೆ ಹೇಳಿದಾಗ ಅವರು, ''ಹಾಗೆ ಗಂಡಹೆಂಡಿರಾಗಿ ಬದುಕುವುದಾದರೆ ಇಂದೇ ಬದುಕಿದರೆ ಪಸಂದ. ಮುಂದಿನ ಜನ್ಮವಿದ್ದರೂ, ಅವನು ಕಾಗೆ, ಇವಳು ಗುಬ್ಬಚ್ಚಿಯಾದರೂ ಆದರೇ'' ಎಂದು ನುಡಿದರು.

ಮಳೆಗಾಲದಲ್ಲಿ ಒಂದು ದಿವಸ ಅನಿರೀಕ್ಷಿತವಾಗಿಯೇ ನಾಗಿಯು ನಮ್ಮ ಮನೆಯ ಮುಂದೆ ಕಾಣಿಸಿಕೊಂಡಳು. ಒಳ್ಳೆದೊಂದು ಬೆತ್ತದ ಪೆಟ್ಟಿಗೆಯನ್ನು ಹೆಣೆದು ತಂದು ನಮ್ಮ ಮನೆಯ ಚಾವಡಿಮೇಲಿರಿಸಿ ''ಸಣ್ಣೊಡತಿಯರೇ'' ಎಂದು ಕರೆದಳು. ಸೀತೆ ಒಳಗಿನಿಂದ ಬಂದು ನಾಗಿಯನ್ನು ಕುರಿತು ''ಇದಕ್ಕೆ ಎಷ್ಟು ಹಾನೆ ಅಕ್ಕಿ?'' ಎಂದು ಪ್ರಶ್ನಿಸಿದಳು.

''ನಿಮಗೆ ಚಂದ ಕಾಣಿಸುತ್ತದೆಯೇ, ಇಲ್ಲವೆ? ಬೆತ್ತದ್ದು. ಸೀರೆಗೀರೆ ಹಾಕಿಡಲು ಒಯಿನಾಗಿದೆ. ಒಳಕ್ಕೆ ತೆಗೆದಿರಿಸಿ.''

''ನೀನು ಕ್ರಯ ಹೇಳಲಿಲ್ಲವಲ್ಲ, ವಾಜ್ಮಿ ಕ್ರಯ ಹೇಳಿದರೆ, ಇನ್ನೂ ಸ್ವಲ್ಪ ಸಾಮಾನು ಬೇಕಾಗಿದೆ; ಒಂದೆರಡು ಸಿಬ್ಬಲು, ಇರಿಕೆಗಳು ಬೇಕು.''

"ನೀವು ಮೊದಲು ಇದನ್ನು ತೆಗೆದಿರಿಸಿ, ಒಡತಿ. ನಾನು ಮಾರಾಟಕ್ಕೆ ತಂದವಳಲ್ಲ" ಎಂದಳು ನಾಗಿ. ಹತ್ತು ಮಾರು ಆಚೆ ಹಸಿ ತೆಂಗಿನ ಸೋಗೆಯೊಂದನ್ನು ಹಿಡಿದು ನಾನು ಮಡಲನ್ನು ಹೆಣೆಯುತ್ತಿದ್ದೆ. ಎದ್ದು ಹೋಗಿ, ಆ ಪೆಟ್ಟಿಗೆಯನ್ನೆತ್ತಿ ನೋಡಿದೆ, ಒಳ್ಳೆಯ ಹೆಣಿಗೆಯ ಕೆಲಸ. ಆಗ ನೆನಪಿಗೆ ಬಂದಿತು. ರಾಮಣ್ಣನ ಕೈಯಲ್ಲಿದ್ದ ಎಲೆ ಅಡಿಕೆ ಪೆಟ್ಟಿಗೆಯ ಚಿತ್ರ! ನಾನು, "ಇಷ್ಟು ಒಳ್ಳೆಯ ಪೆಟ್ಟಿಗೆಗೆ ನಿನಗೆ ಹದಿನೈದು ದಿನಗಳ ಕೆಲಸವಾದರೂ ಹಿಡಿದಿರಬಹುದು. ದಾಕ್ಷಿಣ್ಯ ಮಾಡಬೇಡ. ಎಷ್ಟು ಹಾನೆ ಅಕ್ಕಿ ಎಂದು ಹೇಳು" ಎಂದು ಕೇಳಿದೆ.

"ಅಯ್ಯೋ, ಅದೊಂದು ಸುದ್ದಿಯನ್ನು ಮಾತನಾಡಬೇಡಿ. ನಾನು ಅದಕ್ಕೆಂದೇ ಬಂದವಳೂ ಅಲ್ಲ, ಅಜ್ಜಮ್ಮನನ್ನು ಮಾತಾಡಿಸಿ ಹೋಗೋಣ ಎಂದು ಬಂದೆ. ಬರಿಗೈಯಲ್ಲಿ ದೊಡ್ಡವರನ್ನು ಕಾಣಬಾರದು–ಎಂಬುದರಿಂದ ಇದನ್ನು ತಂದೆ. ಚಿತ್ತಕ್ಕೂ ದುಡ್ಡು ಕೊಟ್ಟವಳಲ್ಲ; ಇದಕ್ಕೂ ಕೇಳುವವಳಲ್ಲ" ಎಂದಳು.

ಅಷ್ಟರಲ್ಲಿ ಒಳಕೋಣೆಯಿಂದ ನಮ್ಮ ಅಜ್ಜಿಯ ಧ್ವನಿ ಕೇಳಿಸಿತು. "ಮಗು, ನಾಗಿಯಲ್ಲವೇ ತಂದದ್ದು? ಅದನ್ನು ಒಳಗೆ ತೆಗೆದಿಡು ಅವಳು ನನ್ನದೊಂದು ತಬ್ಬಲಿ ಕರುವಿದ್ದ ಹಾಗೆ" ಎಂದರು. ಅವರ ಧ್ವನಿಗೆ ನಾಗಿಯ ಮುಖ ಅರಳಿತು. ಸೀತೆ, "ಇನ್ನು ಮೇಲೆ ನನ್ನ ಮಾತಿಲ್ಲ, ಮಧ್ಯಾಹ್ನ ಉಂಡು ಹೋಗು. ಹಾಗೇ ಹೋಗಬೇಡ" ಎಂದು ನುಡಿದು ಪೆಟ್ಟಿಗೆಯನ್ನು ಒಳಗಿರಿಸಿದಳು. ನಾನು ತೋಟಕ್ಕೆ ಹೋಗಿಬಂದೆ. ಮಧ್ಯಾಹ್ನದ ಊಟ, ನಿದ್ರೆಗಳನ್ನು ಮುಗಿಸಿದೆ. ಒಂದು ಜಾವ ಹೊತ್ತಿನ ಮೇಲೆ ಕಟ್ಟೆಯಲ್ಲಿ ಅಜ್ಜಿಯೊಬ್ಬರೇ ಕುಳಿತದ್ದು ಕಾಣಿಸಿತು. ಆ ಕಡೆಗೆ ನಾನು ಸರಿದಾಗ "ಮಾಣಿ ಬಾ" ಎಂದು ಅವರಾಗಿಯೇ ನನ್ನನ್ನು ಕರೆದು ಹೇಳಿದರು.

"ಮಾಣಿ, ನಾನು ಒಂದು ಕೆಲಸವನ್ನು ಮಾಡಿದೆ. ತಪ್ಪೋ ಒಪ್ಪೋ, ಗೊತ್ತಿಲ್ಲ, ಅಂದು ನಾನು ಈ ನಾಗಿಗೆ ಏನನ್ನೋ ಹೇಳಿದ್ದೆ. ಮತ್ತೆರಡು ದಿನಗಳಲ್ಲಿ ರಾಮಣ್ಣನೂ ಬಂದಿದ್ದನಲ್ಲ, ಅವನೂ ಒಂಟಿಯೇ ಮೊನ್ನೆಯ ತನಕ. ಅಕ್ಕನೋ ತಂಗಿಯೋ ಹತ್ತಿರ ಇರುತ್ತಿದ್ದರಂತೆ, ಈಗ ಅವರೂ ಬಿಟ್ಟು ಹೋದರು. ಆದ್ದರಿಂದ ರಾಮಣ್ಣನಿಗೆ ನಾನೆಂದೆ, 'ನಾಗಿಯು ಕೆಟ್ಟಿದ್ದು ನಿಜ, ಆಮೇಲೆ ಮನುಷ್ಯರ ಮುಖವನ್ನು ಕಂಡವಳಲ್ಲ, ಅವಳಿನ್ನೂ ಹೆಣ್ಣಾಗಿಯೇ ಉಳಿದಿದ್ದಾಳೆ. ಅವಳ ಮಕ್ಕಳಿಂದ ನಿನಗೇನೂ ಅಪಚಾರವಾಗಲಿಕ್ಕಿಲ್ಲ, ಅವು ದೊಡ್ಡದಾದವು. ಬಡಾ ಘಟ್ಟಕ್ಕೆ ಹೋಗಿ ಎಲ್ಲಾದರೂ ದುಡಿದುಕೊಂಡಿರಲಿ. ಹೇಳುವುದಕ್ಕೊಂದು ಅಪ್ಪನ ಹೆಸರಿದ್ದರೆ, ನಿನಗೆ ಅದು ನಾಚಿಕೆ ಎಂದು ಕಾಣಿಸದಿದ್ದರೆ, ಅವುಗಳ ಹಣೆಯ ಮೇಲೆ ಸಂಸಾರದ ಋಣ ಬರೆದಿದ್ದರೆ, ಯಾರಾದರೂ ಅವಕ್ಕೆ ಹೆಣ್ಣು ಕೊಟ್ಟಾವು' ಎಂದೆನಪ್ಪ."

"ಅಜ್ಜಿ, ನೀವು ಹಣೆ ಬರಹ, ಗಿರಹ ನಂಬುತ್ತೀರೊ?"

"ಹೇಳಿದೆ ಅಪ್ಪ, ಒಂದು ಮಾತಿಗೆ. ಆ 'ಅಮ್ಮ' ಗಂಡು ಅಂತ ಆ ಮಕ್ಕಳನ್ನು ಹುಟ್ಟಿಸಿದ್ದಕ್ಕೆ, ಅವಕ್ಕೆ ಬೇಕಾದ ಹೆಣ್ಣನ್ನು ಇನ್ನೆಲ್ಲಾದರೂ ಹುಟ್ಟಿಸಿಯೆ ಇರುತ್ತಾನೆ."

"ಹೋ, ನೀವು ಇಷ್ಟೆಲ್ಲ ಪಂಚಾತಿಕೆ ಮಾಡಿದ್ದೀರಿ! ಮತ್ತೇನಾಯಿತು?"

‘‘ನಾನು ಎಣಿಸಿದ ಹಾಗೆಯೇ ರಾಮಣ್ಣ ಅವಳ ಮನೆಯ ಬಾಗಿಲಿಗೇ ಹೋದ.’’

‘‘ರಾಮಣ್ಣ ಮೊದಲು ಕರೆದಾಗ ಅವಳಾಗಿಯೇ ತಾನು ಎಂಜಲಾದೆ–ಎಂದು ಹೇಳಿರಲಿಲ್ಲವೆ?’’

‘‘ಅದು ಅವಳ ದೊಡ್ಡಸ್ತಿಕೆ. ಆದರೆ ನೋಡು, ಗಂಡು–ಹೆಣ್ಣಿಗೂ, ಎಂಜಲು–ಮುಸುರೆಗೂ ಜೋಡಿಯಲ್ಲ. ಇವರು, ಇಬ್ಬರೊಳಗೂ ಕುದಿಯುತ್ತಿರುವ ಸಂಕಟ ಏನು, ಎಂಥದು ಅಂತ ನಿನಗೇನು ಗೊತ್ತಾಗುತ್ತದೆ? ಇರಲಿ, ಇವತ್ತು ನಾಗಿ ಬಂದಳು. ತಾವು ಚೆನ್ನಾಗಿದ್ದೇವೆ. ‘ಬಡಾ ಘಟ್ಟಕ್ಕೆ ಹೋದ ಮಕ್ಕಳನ್ನು ಬಿಟ್ಟಿರಲು ಕಷ್ಟವಾಗುತ್ತದೆ. ಎಲ್ಲರೂ ಊರಲ್ಲೇ ಇದ್ದರೆ, ಯಾರಾದರೂ ಏನಾದರೂ ಅಂದದ್ದು ಕೇಳಿ, ಅವಕ್ಕೆ ಹೆಣ್ಣು ಸಿಗದೇ ಹೋದೀತು’ ಎಂದಳು. ‘ಅಬ್ಬೆಯ ನೆನಪಾದಾಗ ಬಂದು ನೋಡುತ್ತವೆ, ಬಿಡು. ಅವಕ್ಕೆ ದುಡಿಯುವ ತ್ರಾಣವಿದೆ; ಅವಾಗಿ ಎಲ್ಲಾದರೂ ತಮಗೆ ಒಗ್ಗುವ ಹೆಣ್ಣುಗಳನ್ನು ಹುಡುಕಿಕೊಳ್ಳುತ್ತವೆ. ಒಂದು ಜಾತಿಯಲ್ಲಲ್ಲ, ಮತ್ತೊಂದು ಜಾತಿಯಲ್ಲಿ, ಎಂದು ಹೇಳಿದೆ.’’

‘‘ಈ ರೀತಿಯ ಮದುವೆ ಸಮವೇ?’’

‘‘ನೀನು ಮರುಳ, ದೇವರು ಮಾಡಿಟ್ಟ ಜಾತಿ. ಎರಡೇ ಎರಡು; ಗಂಡು, ಹೆಣ್ಣು. ನಾವು ನೀವು ಮಾಡಿಕೊಂಡದ್ದು ನೂರು, ಸಾವಿರ ಜಾತಿ. ಈ ಪಾಟಿ ಜಾತಿ ಯಾವ ಜೀವಿಗಳಲ್ಲೂ ಇಲ್ಲ. ಗಂಡು ಗಂಡನ್ನು ಮದುವೆಯಾಗುವುದಿಲ್ಲ. ಹೆಣ್ಣು ಹೆಣ್ಣನ್ನು ಮದುವೆಯಾಗುವುದಿಲ್ಲ. ಈ ಎರಡು ಜಾತಿಗಳ ಕೂಡಿಕೆ ಹುಟ್ಟಿಸಿದ ದೇವರಿಗೆ ಇಷ್ಟದ್ದೇ,’’ ಎಂದರು.

೫

ಮಾತಂಗಿ

ಎಸ್. ಎಲ್. ಭೈರಪ್ಪನವರ 'ದಾಟು' ಕಾದಂಬರಿಯ ಕಥನ

'ವಂಶವೃಕ್ಷ'ದ ಭೈರಪ್ಪನವರ ಲೇಖನಿಯಿಂದಲೇ ಮೂಡಿ ಬಂದ ಇನ್ನೊಂದು ಮಹತ್ವದ ಕೃತಿ 'ದಾಟು'. ಭಾರತೀಯ ಸಮಾಜ ವ್ಯವಸ್ಥೆಯ, ವರ್ಣಗಳ, ಜಾತಿ–ಉಪಜಾತಿಗಳ ಸಮಸ್ಯೆಯನ್ನು ಸಮಗ್ರ ದೃಷ್ಟಿಯಿಂದ ನೋಡಿ, ಅದರ ಹತ್ತಾರು, ನೂರಾರು ಮುಖಗಳನ್ನು ಎಳೆ ಎಳೆಯಾಗಿ ಬಿಡಿಸಿ ತೋರಿಸುವ ಈ ಕಾದಂಬರಿಯಲ್ಲಿ ಕಾದಂಬರಿಕಾರನ ಲೇಖನಿಯ ಸತ್ವವನ್ನು ಪೂರ್ತಿ ಅರಗಿಸಿಕೊಂಡು ಮೂಡಿರುವ ಪಾತ್ರ – ಮಾತಂಗಿ.

ಮಾತಂಗಿ

ವೆಂಕಟೇಶಯ್ಯನವರ ಹೆಂಡತಿ ಸತ್ತಾಗ ಮಗ ವೆಂಕಟೇಶನಿಗೆ ಎಂಟು ವರ್ಷ, ಸತ್ಯಳಿಗೆ ನಾಲ್ಕು. ಅವರಿಗಿದ್ದ ಆಸ್ತಿಯಲ್ಲಿ ಮತ್ತೆ ಹೆಣ್ಣು ಕೊಡುವವರಿಗೆ ಕಡಿಮೆ ಇರಲಿಲ್ಲ. ಇನ್ನೂ ಮೂವತ್ತುವರ್ಷದ ಪ್ರಾಯ. ಆದರೂ ಅವರು ಎರಡನೇ ಮದುವೆ ಮಾಡಿಕೊಳ್ಳಲಿಲ್ಲ.

ಎರಡು ವರ್ಷ ಕಳೆದಿತ್ತು. ಬೇರೆ ಮದುವೆಯಾಗುವದಿಲ್ಲವೆಂದು ಕೇಳಿದವರಿಗೆಲ್ಲ ಅವರು ಖಡಾಖಂಡಿತವಾಗಿ ಹೇಳಿಬಿಟ್ಟಿದ್ದರು. ಆದರೆ ಪತ್ನೀ ವಿಯೋಗದ ದುಃಖದ ಹೊಸತರಲ್ಲಿ ಮನಸ್ಸನ್ನು ಆವರಿಸಿದ್ದ ವೈರಾಗ್ಯ ದಿನಗಳೆದಂತೆ ಇಳಿಯುತ್ತಿತ್ತು. ಶರೀರದ ಕಾಮನೆಗಳು ಕರಳಿ ಮನಸ್ಸು ಎತ್ತೆತ್ತಲೋ ಹೋಗುತ್ತಿತ್ತು. ತಿರುಮಲ ದೇವಸ್ಥಾನದಲ್ಲಿ ಪೂಜೆ ಮಾಡುವಾಗ ಸಹ ಕಲ್ಪನೆಯು ಬೇರ ಕಡೆಗೆ ಎಳೆದುಕೊಂಡು ಹೋಗುತ್ತಿತ್ತು. ತಮಗೆ ಆಗುತ್ತಿರುವದರಲ್ಲಿ ಅಸಹಜವಾದುದೇನೂ ಇಲ್ಲವೆಂಬುದು ಅವರಿಗೆ ಗೊತ್ತು. ಇನ್ನೊಂದು ಮದುವೆಯೇ ಇದಕ್ಕೆ ಮದ್ದು ಎಂಬುದೂ ತಿಳಿಯುತ್ತಿತ್ತು. ಆದರೆ ಮಕ್ಕಳಿರುವಾಗ ಎರಡನೆಯ ಮದುವೆಯಾದರೆ ಅವುಗಳು ತಮ್ಮ ಮನೆಯಲ್ಲೇ ಹೊರಗಿನವಾಗುತ್ತವೆ ಎಂಬ ಭಯವೂ ಜಾಗ್ರತವಾಗಿರುತ್ತಿತ್ತು. ಇದಕ್ಕಿರುವುದು ಒಂದೇ ಉಪಾಯ. ಯಾರನ್ನಾದರೂ ಇಟ್ಟುಕೊಳ್ಳುವುದು. ಅದೇನು ಯಾರೂ ಮಾಡದ ಕೆಲಸವಲ್ಲ. ಪುಟ್ಟೇಗೌಡರ ಸೂಳೆ, ಗುಂಡ್ಯೆಯ್ಯಂಗಾರರು ಇಟ್ಕಂಡೋಳು ಎಂದು ಕೆಲ ಹೆಂಗಸರನ್ನು ಕರೆಯುತ್ತಿದ್ದರೂ, ಇದರಿಂದ ಆ ಯಜಮಾನರುಗಳಿಗಾಗಲಿ ಹೆಂಗಸಿಗಾಗಲಿ ಕೀಳು ಭಾವನೆ ತೋರಿಸುತ್ತಿರಲಿಲ್ಲ. ತಾವೂ ಒಬ್ಬಳನ್ನು ಇಟ್ಟುಕೊಳ್ಳಬಹುದು. ವರ್ಷಕ್ಕೆ ಒಂದಿಷ್ಟು ರಾಗಿ, ಕಾಳು, ತೆಂಗಿನಕಾಯಿ, ಎರಡು ಸೀರೆ ಕೊಟ್ಟರೆ ಸಾಕು. ಹೆಚ್ಚು ಹೊಣೆ ಏನೂ ಇರುವುದಿಲ್ಲ ಎಂಬ ಯೋಚನೆ ಹಲವು ಸಲ ಬಂದಿತ್ತು.

ಇಂಥದೇ ಯೋಚನೆಯಲ್ಲಿ ನಾಲ್ಕೈದು ತಿಂಗಳು ಕಳೆಯಿತು. ಆದರೆ ಯಾವ ಹೆಂಗಸೂ ಸಿಕ್ಕಲಿಲ್ಲ. ಶ್ರೀನಿವಾಸದೇವರ ಅರ್ಚಕತನವೊಂದಿಲ್ಲದಿದ್ದರೆ ಅವರು ಏನು ಮಾಡುವುದಕ್ಕೂ ಹೆದರಬೇಕಾಗಿರಲಿಲ್ಲ. ಹಾಗೆ ನೋಡಿದರೆ ದೇವರ ಜಮೀನು ಇಲ್ಲದಿದ್ದರೂ ಅವರ ಜೀವನಕ್ಕೆ ತೊಂದರ ಇಲ್ಲ. ಸ್ವಂತದ್ದೇ ಮುನ್ನೂರು ತೆಂಗಿನ ಮರ, ಆರು ಎಕರೆ ಹೊಲ, ಎರಡು ಎಕರೆ ಗದ್ದೆಗಳಿವೆ. ಆದರೆ ಯಾವ ಕಷ್ಟವೂ ಇಲ್ಲದೆ, ಹಿಂದಿನಿಂದ ಬಂದ ಹತ್ತೆಂಟು ಎಕರೆ ಇನಾಮನ್ನು ಯಾಕೆ ಕಳೆದುಕೊಳ್ಳಬೇಕು ಎಂಬ ವ್ಯವಹಾರಜ್ಞಾನ.

ಇದೇ ದಿನಗಳಲ್ಲಿ ಒಂದು ದಿನ ಮಾತಂಗಿ ಇವರ ಕಣ್ಣಿಗೆ ಬಿದ್ದಳು. ಅವಳೇನೂ ಇವರು ಅದುವರೆಗೆ ಕಾಣದ ಹೆಂಗಸಲ್ಲ. ಮಾದಿಗ ಕೇರಿಯವಳು. ಸ್ವಂತ ಗುಡಿಸಲನ್ನು ಬಿಟ್ಟರೆ ಬೇರೆ ಆಸ್ತಿ ಇಲ್ಲ. ಇಪ್ಪತ್ತಾರು–ಇಪ್ಪತ್ತೇಳು ವಯಸ್ಸಿನ ವಿಧವೆ. ಯಾರಾದರೂ ಎರಡನೆಯ ಮದುವೆ

ಮಾಡಿಕೊಳ್ಳುವವರು ಸಿಕ್ಕಿದರೆ ಸಿದ್ಧಳಾಗಿದ್ದಳು. ಅವಳ ಬಣ್ಣ ಕಪ್ಪಿರಬಹುದು. ಆದರೆ ಹೊಸ ಮಳಕದಂತೆ ಮೋಪಾಗಿದ್ದಳು.

ಸಂಜೆಯ ಮಬ್ಬು ಕವಿಯುತ್ತಿತ್ತು. ಇವರು ತಮ್ಮ ಗದ್ದೆಯ ನೀರು ನೋಡಿಕೊಂಡ ಮೇಲೆ ತೋಟಕ್ಕೆ ಹೋದರು. ಅವಳು ಇವರ ತೋಟದಲ್ಲಿ ಸೋಗೆ ಕಟ್ಟಿಕೊಳ್ಳುತ್ತಿದ್ದಳು. ಹಿಂದಿನಿಂದ ಬಂದ ಇವರು ಅವಳಿಗೆ ಕಾಣಲಿಲ್ಲ. 'ಏನೇ ಇದು?' ಎಂದದ್ದಕ್ಕೆ ಹೆದರಿಬಿಟ್ಟಳು.

'ಇಟ್ ಬೇಸಾಕೆ ಸದ್ಯ ಪುಳ್ಳೆ ಇರ್ನಿಲ್ಲ ಕಣಯ್ಯಾ' ಎಂದು ಹೆದರುತ್ತಾ ನಿಂತುಕೊಂಡಳು. ಅವಳ ಮೈಕಟ್ಟು ಇವರಿಗೆ ಬೇಕಾದುದನ್ನು ಸೂಚಿಸಿ ಬಿಟ್ಟಿತು. ಆದರೆ ಹೇಗೆ ಮಾತನಾಡ ಬೇಕೆಂಬುದು ತಕ್ಷಣ ತಿಳಿಯದು.

'ತಗ, ತಗ, ನಾನೇನ್ ಬ್ಯಾಡ ಅನ್ಲಿಲ್ಲ. ರೊಟ್ಟಿಗ್ ಕಾಯಿಗೀಯಿ ಬೇಕಾ?'

'ಕೊಟ್ರೆ, ಬಡವರಂಡೆ ಕಡ್ಕಂಡ್, ತಿಂತೀನಿ.'

ಮುಂದೆ ಮಾತಾಡಲು ಇವರಿಗೂ ತಿಳಿಯಲಿಲ್ಲ. ಇವರ ಆಶಯ ಅವಳಿಗೂ ತಿಳಿಯಲಿಲ್ಲ. ಸೋಗೆಯ ಹೊರೆಯನ್ನು ಎತ್ತಿ ತಲೆಯ ಮೇಲೆ ಇಟ್ಟುಕೊಂಡಳು.

'ಅದ್ಯಾಕ್ ಹ್ವಂಟೆ ಇರು'—ಇವರೆಂದರು.

'ಕತ್ಲಾತು ಕಣ್ರಯ್ಯಾ'—ಎಂದು ಅವಳು ಹೊರೆ ಹೊತ್ತುಕೊಂಡಳು. ಈಗ ಮಾತಾಡಲೇಬೇಕು. ಇಲ್ಲದಿದ್ದರೆ ಅವಳು ಹೊರಟು ಹೋಗುತ್ತಾಳೆ, ಎಂದು ಯೋಚಿಸಿದ ಅವರು, 'ಹ್ವರೆ ಇಳ್‌ಸು. ಕಾಯಿ ಕೊಡ್ತೀನಿ,' ಎಂದರು. ಅವಳು ಕೆಳಗೆ ಇಳಿಸಿ ನಿಂತಳು.

ಇನ್ನು ಮುಂದೆ ಹೇಗೆ ಮಾತನಾಡಬೇಕೆಂಬುದು ತಿಳಿಯದೆ ಇವರು ಹೆಣಗುತ್ತಿದ್ದರು. ಕೊನೆಗೆ 'ಇದ್ಯಾಕಿಂಥ ಹರಕು ಸೀರೆ ಉಟ್ಕಂಡಿದೀಯ?' ಎಂದರು.

'ಬಡ ಮುಂಡೆಗೆ ಯಾರ್‍ರಯ್ಯಾ ತಂದ್ ಕೊಡಾರು?'

'ನಾನು ದುಡ್ ಕೊಡ್ತೀನಿ. ಸಂತೇಲಿ ತಗ.'

ಅವಳು ಸುಮ್ಮನೆ ನಿಂತಳು. ಇವರೇ 'ತಿಳೀಲಿಲ್ವೇನೇ?' ಎಂದರು.

ಅವಳಿಗೆ ಅರ್ಥವಾಯಿತು. ಈ ಅಯ್ಯನವರ ಹೆಂಡತಿ ತೀರಿ ಮೂರು ವರ್ಷವಾಗಿದೆ. ಅವರು ಕೇಳುವುದರಲ್ಲಿ ತಪ್ಪೇನೂ ಇಲ್ಲ. ತಮ್ಮ ಕೇರಿಯ ತನ್ನಂಥ ಹೆಂಗಸರನ್ನು ಕೆಲವು ಹಾರುವರು ಮುಟ್ಟಿಸಿಕೊಳ್ಳುವುದು ಅವಳಿಗೆ ತಿಳಿಯದ ಮಾತಲ್ಲ. ಆದರೆ ಇವರು ದೇವರ ಪೂಜಾರಿಗಳು. ಇವರ ದೇವರು ತಮ್ಮ ಮಾರಮ್ಮನಿಗಿಂತ ಗಟ್ಟಿಯಾದುದೆಂದು ಅವಳಿಗೆ ಗೊತ್ತು. ಅದರ ಪೂಜೆ ಮಾಡುವವರು ತನ್ನನ್ನು ಮುಟ್ಟಿದ್ದರೆ, ದೇವರು ತನಗೆ ತನ್ನ ಕೇರಿಗೆ ಏನಾದರೂ ಮಾಡಿದರೆ ಗತಿ ಏನು. ಎಂಬ ಭಯ ಅವಳದು.

'ಯಾಕೆ? ಏನಂತೀಯ?'—ಅವರು ಮತ್ತೆ ಕೇಳಿದರು.

'ನೀವು ಗುಡಿ ಪೂಜೆ ಮಾಡ್ತೀರಲ್ರಯ್ಯ?'

ಅವರಿಗೆ ಮುಖಕ್ಕೆ ಹೊಡೆದಂತಾಯಿತು. ಯಾವ ಕಸಬು ತಮ್ಮನ್ನು ಇಷ್ಟು ದಿನ ತೊಳಲಿ ಓಂತೆಗೆಯುವಂತೆ ಮಾಡಿತೋ, ಅದನ್ನು ಇವಳೇ ಹೇಳುತ್ತಿದ್ದಾಳೆ. ಇವಳಿಗೆ ಏನೆಂದು ಸಮಾಧಾನ ಹೇಳುವುದು? ಮಾತಂಗಿ ಸುಮ್ಮನೆ ತಲೆ ತಗ್ಗಿಸಿ ನಿಂತಿದ್ದಳು. ಸುತ್ತ ಚೆನ್ನಾಗಿ ಕತ್ತಲು

ಕವಿಯುತ್ತಿತ್ತು. 'ಯಾರು ಕಾಣಾಕ್ ಬತ್ತಾರೆ ಅಂತ ಹೆದರ್ಕತ್ತೀಯೇ?' ಎಂದು ಮುಂದೆ ಹೋಗಿ ಮುಟ್ಟಿಯೇ ಬಿಟ್ಟರು.

ಬೇಲಿಯ ಸಂದಿಯಿಂದ ನುಸಿದ ಅವಳಿಗೆ ಇವರೇ ಸೊ...ಯ ಹೊರೆಯನ್ನು ಕೊಟ್ಟರು. ಅವಳು ಹೋದ ಮೇಲೆ ತಾವು ಕತ್ತಲಲ್ಲಿ ನಡೆದು ಮನೆಗೆ ಬಂದ...

ಪಡಸಾಲೆಯಲ್ಲಿ ಲಾಟೀನಿನ ಮುಂದೆ ಕೂತು ವೆಂಕಟೇಶ, ಸತ್ಯರು ಓದಿಕೊಳ್ಳುತ್ತಿದ್ದುದು ಕಣ್ಣಿಗೆ ಬಿತ್ತು. ತಾವು ಇನ್ನೇನು ಹೊಸಲು ದಾಟಬೇಕೆನ್ನುವಾಗ ಮಾದಿಗಿತ್ತಿಯನ್ನು ಮುಟ್ಟಿಸಿಕೊಂಡಿದ್ದ ನೆನಪಾಯಿತು. ಹೀಗೆ ಹ್ಯಾಗೆ ಒಳಗೆ ಹೋಗುವುದು? ಹಾಗೆಯೇ ಹಿಂತಿರುಗಿ ತೋಟದ ಕಡೆಗೆ ನಡೆದರು. ತೋಟದಲ್ಲಿಯೇ ಒಂದು ಸಣ್ಣ ಕೊಳವಿದೆ. ಉಟ್ಟ ಪಂಚೆ, ತೊಟ್ಟ ಅಂಗಿ ಮತ್ತು ಹೆಗಲಿನ ಚೌಕಗಳ ಸಮೇತ ನೀರಿನಲ್ಲಿ ಇಳಿದು, ತಲೆಗೂ ಮುಳುಗು ಹಾಕಿ ಮೇಲೆ ಬಂದರು. ಅನಂತರ ಅದೇ ಬಟ್ಟೆಗಳನ್ನು ಹಿಂಡಿ ಉಟ್ಟುಕೊಂಡು ಮನೆಗೆ ಹಿಂತಿರುಗಿದರು. ಕಾಲಿಗೆ ಮೆಟ್ಟಿಕೊಳ್ಳುವ ಚಕ್ಕಳದ ಎಕ್ಕಡ ಮಾದಿಗರು ಮಾಡಿದುದಾದರೂ ಅದಕ್ಕೆ ಮೈಲಿಗೆ ಇಲ್ಲ.

ಏಳು ವರ್ಷದ ಹುಡುಗಿ ಸತ್ಯ ಕೇಳಿದಳು : 'ಅಪ್ಪ, ಇಷ್ಟು ಹೊತ್ನಲ್ಲಿ ಒದ್ದೆ ಬಟ್ಟೆ ಉಟ್ಕಂಡು ನೆಂದ ತಲೇಲಿ ಬಂದಿದೀಯಲ್ಲ, ಯಾಕೆ?'

'ಸ್ನಾನ ಮಾಡ್ದೆ ಪುಟ್ಟೀ ಕೆರೇಲಿ'

'ಅದ್ಯಾಕ್ ಮಾಡ್ದೆ ತಣ್ಣೀರಲ್ಲಿ? ಮನ್ಲಿ ಬಿಸಿ ನೀರು ಕಾಯ್ಸಕ್ಕಾಗ್ತಿರಲಿಲ್ವೆ?'

ಚುರುಕು ಬುದ್ಧಿಯ ಈ ಹುಡುಗಿಗೆ ಏನು ಹೇಳಬೇಕೆಂಬುದು ತಕ್ಷಣ ತಿಳಿಯಲಿಲ್ಲ. 'ದೂರದ ಒಬ್ಬ ನೆಂಟರು ಸತ್ತ ಸಮಾಚಾರ ತಿಳೀತು. ಹಾಗೇ ಸ್ನಾನ ಮಾಡಿ ಬೆಂದೆ' ಎಂದರು. ಅವರಿಗೆ ಒಳಗಿನಿಂದ ಒಣಗಿದ ಪಂಚೆ, ಅಂಗಿಗಳನ್ನು ತಂದುಕೊಟ್ಟ ಸತ್ಯಭಾಮೆಯೇ ಕೇಳಿದಳು, 'ಅಪ್ಪ ಸೂತಕದ ಸ್ನಾನ ಮಾಡಿದ ಮೇಲೆ ಬೇರೆ ಜನಿವಾರ ಹಾಕ್ಕಾಬ್ಯಾಡವೇ?'

ಹೌದು. ಬ್ರಹ್ಮಗಂಟು ಹಾಕಿರುವ ಜನಿವಾರ ಬರೀ ನೆನೆದರೆ ಶುದ್ಧವಾಗುವುದಿಲ್ಲ. ಮಾದಿಗಿತ್ತಿಯನ್ನು ಮುಟ್ಟಿಸಿಕೊಂಡ ಮೇಲೆ ಅದನ್ನು ಬದಲಾಯಿಸಲೇಬೇಕು. ಇಲ್ಲದೆ ನಾಳೆ ದೇವಸ್ಥಾನದಲ್ಲಿ ಪೂಜೆ ಮಾಡುವುದು ಹ್ಯಾಗೆ ಎನಿಸಿ, ರೇಶ್ಮೆಯ ಮಕುಟ ಉಟ್ಟು, ಮನೆಯಲ್ಲೆ ಇದ್ದ ಹೊಸ ಜತ ಜನಿವಾರವನ್ನು 'ಯಜ್ಞೋಪವೀತಂ ಪರಮಂ ಪವಿತ್ರಂ' ಹೇಳುತ್ತ ಹಾಕಿಕೊಂಡರು.

ಅಡಿಗೆಯ ಅಜ್ಜಿ ಬಡಿಸಿತು. ಇಬ್ಬರು ಮಕ್ಕಳೊಡನೆಯೂ ಕೂತು ಇವರು ಊಟ ಮಾಡಿದರು. ಅನಂತರ ಎಂದಿನಂತೆ ಮೂರು ಹಾಸಿಗೆ ಹಾಸಿಕೊಂಡರು ಒಂದು ಪಕ್ಕಕ್ಕೆ ವೆಂಕಟೇಶ ಆ ಇನ್ನೊಂದು ಪಕ್ಕಕ್ಕೆ ಸತ್ಯ ಮಲಗಿಕೊಂಡರು. ಆ ದಿನ ಮನಸ್ಸಿಗೇನೋ ನೆಮ್ಮದಿ ಎನಿಸಿತ್ತು. ಹೀಗಾಗುತ್ತದೆಂಬ ಕಲ್ಪನೆ ಬರುವುದೂ ಸಾಧ್ಯವಿರಲಿಲ್ಲ. ಅಷ್ಟು ಅನಿರೀಕ್ಷಿತವಾಗಿ, ಅಷ್ಟು ಬೇಗ ಎಲ್ಲವೂ ನೆರವೇರಿ ಹೋಯಿತು. ಯುಗ ಯುಗಾಂತರವಾಗಿತ್ತೇನೋ ಆ ಸುಖ ಕಂಡು ಎನಿಸಿತ್ತು. ಕತ್ತಲಲ್ಲಿ ಏನನ್ನೋ ತಡಕಾಡುತ್ತಿದ್ದಾಗ, ಆಕಸ್ಮಾತ್ ಸುಖವೇ ಮೈ ತಳೆದು ಕೈಗೆ ಸಿಕ್ಕಿದಂತೆ ಆಗಿತ್ತು ಇವತ್ತು. 'ಆದರೆ ಎಲ್ಲ ಬಿಟ್ಟು ತಾನು ಮಾದಿಗಿತ್ತಿಯನ್ನು ಮುಟ್ಟಿದೆನಲ್ಲ;

ಸಾಮಾನ್ಯ ಲೌಕಿಕ ಗೃಹಸ್ಥನಾಗಿದ್ದರೆ ಬೇರೆ ಮಾತು. ದೇವರ ಅರ್ಚನೆ ಮಾಡುವ ತಾನು ಹೀಗೆ ಮಾಡಿದುದು ನ್ಯಾಯವೇ' ಎಂಬ ಯೋಚನೆ ಮನಸ್ಸನ್ನು ಕೊರೆಯುತ್ತಲೇ ಇತ್ತು. ಇವತ್ತು ಆದದ್ದು ಆಯಿತು, ಇನ್ನು ಮೇಲೆ ಅವಳನ್ನು ತಿರುಗಿ ನೋಡಬಾರದೆಂಬ ಯೋಚನೆ ಎರಡು ಸಲ ಮನಸ್ಸಿನಲ್ಲಿ ಬಂತು. ಆದರೆ ಅದು ಸಾಧ್ಯವಿಲ್ಲವೆಂದು ಅದೇ ಮನಸ್ಸು ಆ ಯೋಚನೆಯ ಜೊತೆಗೇ ಶ್ರುತಿಯಂತೆ ನುಡಿಯಿತು.

ಮರುದಿನವೂ ಅವರು ಸಂಜೆಯಾಗಿ ಕತ್ತಲಾದ ಮೇಲೆ ತೋಟಕ್ಕೆ ಹೋದರು. ಸ್ವಲ್ಪ ಹೊತ್ತಿಗೆ ಮಾತಂಗಿ ಬಂದಳು. ಸೋಗೆಯ ಒಟ್ಟಲಿನ ಸಂದೆಯಲ್ಲಿ ಅವಳನ್ನು ಮುಟ್ಟಿಕೊಳ್ಳುವ ಮೊದಲು, ಇವರು ತಮ್ಮ ಪರಜೆ ಅಂಗಿಗಳನ್ನು ಬಿಚ್ಚಿ ಒಂದು ಕಡೆ ಇಟ್ಟು, ಹೆಗಲ ಮೇಲೆ ಹಾಕಿಕೊಳ್ಳುವ ಚೌಕವನ್ನು ಸುತ್ತಿಕೊಂಡರು. ನೆನ್ನೆ ಅವರು ಪರಸ್ಪರ ಹೆಚ್ಚು ಮಾತೇ ಆಡಿರಲಿಲ್ಲ. ಈ ದಿನ ಸ್ವಲ್ಪ ವಿರಾಮವಾಗಿ ಆಡಿದರು. ತಮ್ಮ ಕೈಲಿ ಮಡಿಸಿ ಇಟ್ಟುಕೊಂಡಿದ್ದ ಹತ್ತುರೂಪಾಯಿಯನ್ನು ಅವಳು ಇಸಿದುಕೊಂಡು ಬಾಳೆಕಾಯಿಗೆ ಗಿಡಿಗಿಕೊಂಡಳು.

'ದುಡ್ಡು ಏನು ಮಾಡ್ತಿಯ?'

'ಮಡೀಕಣ್ತೆನಿ'

'ಶಾಲೆ (ಸೀರೆ) ತಗಾಳಾಕುಲ್ವ?'

'ನೀವು ಕೊಟ್ರಿ ಅಂತ ತಗಂಡ್ರೆ ಅಟ್ಟಿಯೋರ್ಗೆ ಶಂಕೆ ಬರಾಕಿಲ್ವ? ಮಾರಮ್ಮನ ಅಬ್ಬಕ್ಕೆ ತಗಾತೀನಿ.'

ಅವಳ ಸೂಕ್ಷ್ಮ ಬುದ್ಧಿಯನ್ನು ಕಂಡು ಅವರಿಗೆ ಮೆಚ್ಚುಗೆಯಾಯಿತು. ಮನಸ್ಸಿಗೆ ಧೈರ್ಯವೂ ಬಂತು. 'ನೋಡು ಮಾತಂಗಿ, ಯಾರಿಗೂ ಗೊತ್ತಾಗಾಕಾದು.'

'ಐ, ಅದ್ಯಾಕ್ ಯೇಚ್ನೆ ಮಾಡ್ತೀರ ಬುದ್ರಯ್ಯ? ಮಾತಂಗಿ ಅಂದ್ರೆ ನಿಯತ್ತಿನ ಎಣ್ಣು.'

ಅವಳು ಹೋದ ಮೇಲೆ ಅವರು ಕೊಳದ ನೀರಿನಲ್ಲಿ ಮುಳುಗಿ ಸ್ನಾನ ಮಾಡಿದರು. ಮನೆಗೆ ಬಂದು ಒದ್ದೆ ಚೌಕವನ್ನು ಗಳುವಿಗೆ ಒಣಗಹಾಕಿದ ನಂತರ ನೆನಪು ಬಂತು : ಇವತ್ತೂ ಜನಿವಾರ ಮೈಲಿಗೆಯಾಗಿದೆ ಅಂತ. ಇದಕ್ಕೇನು ಮಾಡುವುದು? ತುಂಬಾ ಯೋಚಿಸಿದ ನಂತರ ಒಂದು ಉಪಾಯ ಹೊಳೆಯಿತು. ಮನೇಲಿ ಹ್ಯಾಗೂ ರೇಶ್ಮೆಯ ಉತ್ತರೀಯ ಇದೆ. ಅವಳನ್ನು ಮುಟ್ಟಿಸಿಕೊಳ್ಳುವಾಗ ಜನಿವಾರವನ್ನು ಸೊಂಟಕ್ಕೆ ಸುತ್ತುಕೊಳ್ಳಬೇಕು.

ಮರುದಿನ ಸಂಜೆ ಮಾತಂಗಿ ಪಿಸುಮಾತಿನಲ್ಲಿ ಕೇಳಿದಳು : 'ದಿನಾ ಬತ್ತಿದ್ರೆ ಯಾರೂ ಕಾಣಾಕಿಲ್ವ?'

'ಯಾರು ಕಾಣ್ತಾರ್ರೆ?'

'ಕಳ್ ನನ್ಮಕ್ಳು ಈ ಊರೋರು. ಅಮಾಸೆ ಮದ್ಲು ಕತ್ಲಿರ್ತೈತೆ. ದಿನಾ ಬರಾನ. ತಿಂಗಳ ಬೆಳಕು ಇರುವಾಗ ಬರಾದೆ ಬ್ಯಾಡ.'

'ಅಂದ್ರೆ ತಿಂಗ್ಳಿಗೆ ಹದಿನೈದು ದಿನ ಇಲ್ದೆ ಇರಬೇಕಲ್ಲ?'

'ತೆವಲು ಶಾನೆ ಮಾಡ್ಕ್ಯಬಾಡ್ದು ಕಣ್ರಯ್ಯ'

ಇವಳು ತನಗೆ ಬುದ್ಧಿ ಹೇಳುವುದನ್ನು ಕಂಡು ಅವರಿಗೆ ನಗುವೂ ಬಂತು, ಸಿಟ್ಟೂ ಬಂತು. ಅವಳೇ ಎಂದಳು, 'ತ್ವಾಟದ ಬೇಲಿ ಬಂದೋಬಸ್ತ್ ಮಾಡಿ. ಕತ್ಲಾದ ಮ್ಯಾಲೆ ಒಳಕ್ಕೆ ಬಂದ ಮ್ಯಾಗೆ ತದ್ದಲ ಸಂದೀಲಿ ಕೈ ಹಟ್ಟಿ ಬೀಗ ಅಮಿಕ್ಕಂಡ್ ಬಂದ್ರೆ ಬದ್ರಿಕೆಯಾಗಾಕುಲ್ಲ.'

ಅವಳ ತಿಳಿವಳಿಕೆಯನ್ನು ಕಂಡು ಇವರಿಗೆ ಮೆಚ್ಚುಗೆಯಾಯಿತು. ಮಾರು ದಿನವೇ ಆಳುಗಳನ್ನು ಗೊತ್ತುಮಾಡಿ ಬಿದಿರು ಮುಳ್ಳು ಕಡಿಸಿದರು. ತೋಟದ ಸುತ್ತ ಇದ್ದ ಬೇಲಿಯ ಮೇಲೆ ಎರಡು ಛೋಡಿ ಹಾಕಿಸಿದರು. ಹೊಳೆ ಬಾಗಿಲಿಗೆ ಹೊಸ ಬೀಗ ತಂದರು.

ಒಂದು ದಿನ ಮಾತಂಗಿ ಕೇಳಿದಳು : 'ಅಯ್ಯಾರ, ನೀವು ಗುಡಿ ಪೂಜೆ ಮಾಡ್ತಿರಲ್ಲ, ನಂಗೆ ಏನೂ ಆಗಾಕುಲ್ವ?'

'ನಿಂಗೇನಾಗುತ್ತೆ?'

'ದೇವರು ಕ್ವಾಪ ಮಾಡ್ಕಂಡು ಬಡ್ದು ಬುಟ್ರೆ?'

'ಏನೂ ಆಗುಲ್ಲ. ರೇಷ್ಮೆಚೌಕ ಸುತ್ತಿಕಂಡಿಲ್ವಾ ನಾನು? ಎದ್ದ ಮ್ಯಾಲೆ ಕೊಳದಲ್ಲಿ ಮುಳುಗಿ ಮಡಿ ಉಟ್ಕತೀನಿ.'

ಆ ಉತ್ತರದಿಂದ ಅವಳಿಗೆ ಸಮಾಧಾನವಾಯಿತೋ ಇಲ್ಲವೋ! ಆದರ ಅವರ ಮನಸ್ಸಿನಲ್ಲಿ ಶಂಕೆ ಹುಟ್ಟಿತು. ಮರುದಿನ ಗುಡಿಯಲ್ಲಿ ಪೂಜೆ ಮಾಡಿ ಮಂತ್ರ ಹೇಳಿಕೊಂಡು ಮಂಗಳಾರತಿ ಎತ್ತುವಾಗ, ಒಂದು ನಿಮಿಷ ಮೈ ಜುಂ ಎಂದಂತಾಗಿ ಭಯವಾಯಿತು. ದೇವರ ಕಣ್ಣಿನ ಬೆಳ್ಳಿಯ ಕಟ್ಟು, ಹಣೆಯ ನಾಮ, ತಲೆಯ ಕಿರೀಟಗಳು ಆದರ ಬೆಳಕಿನಲ್ಲಿ ಥಳಥಳಿಸುತ್ತವೆ. 'ಸಾಮ್ರಾಜ್ಯಂ ಭೋಜ್ಯಂ' ಹೇಳುತ್ತ ಆರತಿಯ ಹಲಗೆಯನ್ನು ದೇವರ ಮುಖದ ಹತ್ತಿರ ಹಿಡಿದುಕೊಂಡಾಗ, ನಿನ್ನೆ ಮಾತಂಗಿ ಕೇಳಿದ ಪ್ರಶ್ನೆಯು ತಲೆಯಲ್ಲಿ ಹೊಡೆಯಲು ಶುರುವಾಯಿತು. ಮಂಗಳಾರತಿಯನ್ನು ಬೇಗ ಮುಗಿಸಿದರು. ದೇವರ ಬೆಳ್ಳಿಯ ಕಣ್ಣು ಕಟ್ಟಿನ ಪ್ರಕಾಶ ಕಡಿಮೆಯಾದ ಮೇಲೆ ಅವರ ಭಯವೂ ಹಿಡಿತಕ್ಕೆ ಬಂತು. ಆದರ ಆ ದಿನದಿಂದ ಮಂಗಳಾರತಿ ಹಲಗೆಯನ್ನು ಹತ್ತಿರ ಹಿಡಿದಿದ್ದಾಗ ಅವರು ದೇವರ ಮುಖವನ್ನು ಸರಿಯಾಗಿ ನೋಡುವುದನ್ನೇ ಬಿಟ್ಟರು.

ಮಾತಂಗಿಯ ಜೊತೆ ಮೂರು ವರ್ಷ ಕಳೆದಿತ್ತು, ಮನೆಯಲ್ಲಿ ಅಡಿಗೆ ಮಾಡುತ್ತಿದ್ದ ಅಜ್ಜಿ ಒಂದು ತಿಂಗಳ ಹಿಂದೆ ತುಮಕೂರಿಗೆ ತನ್ನ ಮಗನ ಮನೆಗೆ ಹೊರಟು ಹೋಗಿತ್ತು. ಹತ್ತು ವರ್ಷದ ಸತ್ಯಭಾಮೆ ಮತ್ತು ಹದಿನಾಲ್ಕರ ವೆಂಕಟೇಶ ಮನೆಯಲ್ಲಿದ್ದರೂ ಹುಡುಗರಿಗೆ ಕಷ್ಟ ಕೊಡದೇ ಅವರೇ ಅಡಿಗೆ ಮಾಡುತ್ತಿದ್ದರು.

ಒಂದು ರಾತ್ರಿ ಮಾತಂಗಿ ಕೇಳಿದಳು : 'ಯಡವಟ್ಟಾಗ್ಯತಲ್ರಯ್ಯ?'

'ಏನೇ ಅದು?'

'ನಾನು ಬಿಮುಸ್ನಿಯಾಗಿರಬೈದು.'

'ಇದೇನೇ ಹೀಗಂತೀಯ?'—ಅವಳು ಬಸುರಿಯಾಗಿರುವುದರಲ್ಲಿ ಅಸಹಜವಾದುದೇನೂ ಇರಲಿಲ್ಲವಾದರೂ ಅವರು ಗಾಬರಿಯಿಂದ ಕೇಳಿದರು.

'ಒಂದು ತಿಂಗಳಿಂದ ಸೀರೆಯಾಗಿಲ್ಲ, ಬಿದಿರ ಕಳವೆ ಮಾಡ್ಕ್ಯಂಡ್ ಕುಡ್ದೆ. ಸೀರೆ ಹ್ವಂಡಲೆಯಿಲ್ಲ.'

ಆ ದಿನ ಅವರು ಅವಳನ್ನು ಸರಿಯಾಗಿ ಮುಟ್ಟಲಿಲ್ಲ. ತಲೆಯ ಮೇಲೆ ಕೈ ಹೊತ್ತು ಸೋಗೆ ಅಟ್ಟಿನ ಸಂದಿಯಲ್ಲಿ ಅವಳ ಪಕ್ಕದಲ್ಲಿ ಕುಳಿತುಬಿಟ್ಟರು. ಅವರು ಎಷ್ಟಾದರೂ ದುಡ್ಡು ಕೊಡಲು ಸಿದ್ಧರಿದ್ದರು. ಆದರೆ ತಮಕೂರಿನಂಥ ದೊಡ್ಡ ಊರಿಗೆ ಹೋಗಿ, ಸರಿಮಾಡಿಸಿಕೊಂಡು ಬರುವ ಜವಾಬ್ದಾರಿ ಹೊರುವವರು ಯಾರು? ಇಂಥದ್ದೆಲ್ಲ ಅವರು ಕೇಳಿದ್ದರೇ ಹೊರತು ಕಂಡಿಲ್ಲ, ನೇರವಾಗಿ ತಿಳಿದಿಲ್ಲ.

'ನಿಮ್ಮ ಕೇರೀಲಿ ಕೇಳಿದರೆ ಇನ್ಯಾರ ಹೆಸರೂ ಹೇಳಕ್ಕಾಗುಲ್ವೇನೆ?'

'ನಿಮ್ಮ ಪಾದ ಮುಟ್ಟಿದ ಮೇಲೆ ಎಂಜಲಿಗೆ ಕಣ್ಣು ಆಯ್ಸಿಲ್ಲ.'

ಅದು ಅವರಿಗೂ ಗೊತ್ತು. ಆದರೆ ಈಗ ಬಂದಿರುವ ಕುತ್ತಿನಿಂದ ಪಾರಾಗುವುದು ಹೇಗೆ?

ಮಾತಂಗಿ ವ್ಯವಹಾರದಲ್ಲಿ ತುಂಬ ಎಚ್ಚರಿಕೆಯ ಹೆಣ್ಣು ಇವರು ಕೊಡುತ್ತಿದ್ದ ದುಡ್ಡಿನಲ್ಲಿ ಹೊಸ ಬಟ್ಟೆ ಬರೆಗಳನ್ನು ಕೊಳ್ಳುತ್ತಿರಲಿಲ್ಲ. ಕೂಲಿ ಮಾಡುವುದನ್ನು ಬಿಡಲಿಲ್ಲ. 'ದಿಮ್ಮನೆ ಇರಾಕ್ ಹ್ವಂಟ್‌ರೆ ಇವ್ಳಿಗೆಲ್ಲಿ ಬಂತು ಅಂತ ಸಂಕೆ ಬರಾಕಿಲ್ವೇನ್ರಯ್ಯ ಕೇರಿಯೋರಿಗೆ?' ಎಂದು ಅವಳೇ ಹೇಳಿದ್ದಳು. ಹಗಲು ಹೊತ್ತು ಹೊಲ, ಗದ್ದೆ, ತೋಟಗಳಲ್ಲಿ ಕೂಲಿ ಮಾಡುವಾಗ ಆಕಸ್ಮಾತ್ ಇವರು ಆ ಕಡೆ ಬಂದರೂ ಕತ್ತೆತ್ತಿ ನೋಡದೆ, ತನ್ನ ನೆರಳು ಹತ್ತು ಮಾರಿಗಿಂತ ಹತ್ತಿರ ಬೀಳದಂತೆ ಜಾತಿ–ಧರ್ಮವನ್ನು ಕಾಯ್ದುಕೊಂಡಿರುತ್ತಿದ್ದಳು. ಎಂದೂ ತಾನಾಗಿಯೇ ದುಡ್ಡು ಕೇಳಿಲ್ಲ. ಇವರು ತಾವಾಗಿಯೇ ಕೊಟ್ಟಿದ್ದನ್ನು ತನ್ನ ಗುಡಿಸಲಿನಲ್ಲಿ ಜೋಪಾನವಾಗಿ ಇಟ್ಟುಕೊಂಡಿರುತ್ತಾಳೆ ಗುಡ್ಡೆ ಹಾಕಿ ಇವರ ಕೈಲೇ ಕೊಟ್ಟು, ತಾವರೆ ಕೈಯಿಂದ ಒಡವೆ ಮಾಡಿಸಿಟ್ಟುಕೊಂಡಿದ್ದಾಳೆ. ಈಗಾಗಲೇ ಅವಳ ಹತ್ತಿರ ಸುಮಾರು ಒಂದು ಸಾವಿರ ರೂಪಾಯಿಯ ನಗವಿದೆ. ಆದರೆ ಅದನ್ನು ಒಂದು ದಿನವೂ ಮೈಮೇಲೆ ಇಟ್ಟುಕೊಂಡಿಲ್ಲ.

ಮರುದಿನ ಸಂಧಿಸಿದಾಗಲೂ ಅವರು ಇದೇ ವಿಷಯ ಮಾತನಾಡಿಕೊಂಡರು. ಇವರು ಅವಳ ಕೈ ಹಿಡಿದು, 'ಮಾತಂಗಿ, ನಾನು ಯಾವತ್ತೂ ನಿನ್ನ ಕೈಮೇಲೆ ಹೊಡೆದಿಲ್ಲ, ನನ್ನ ಮರ್ಯಾದೆ ಕಾಪಾಡೋದು ನಿನ್ನ ಕೈಲಿದೆ' ಎಂದರು.

'ಅಯ್ಯಾ, ನಿಮ್ಮ ಪಾದ ಬ್ಯಾರೆಯಾ? ಕ್ಯರೆ ಕೆಳಗಿನ ಗುಡಿ ತಿಮ್ಮಪ್ಪನ ಪಾದ ಬ್ಯಾರೆಯಾ? ಮರ್ವಾದಿ ಕಳೆಯೂ ಮುಂಡೆಯಲ್ಲ ನಾನು' ಎಂದು ಅವರ ಕಾಲನ್ನು ಮುಟ್ಟಿ ಅವಳು ಹೇಳಿದಳು.

ಮರುದಿನ ಸಂಜೆ ಕಳೆದ ಮೇಲೆ ಅವರು ಎಂದಿನಂತೆ ತೋಟ ಕಾಯಲು ಹೋದರು. ಕತ್ತಲಾಯಿತು. ಅವಳು ಬರಲಿಲ್ಲ, ರಾತ್ರಿಯಾಯಿತು ಅವಳು ಬರಲಿಲ್ಲ. ರಾತ್ರಿ ಏರಿತು, ಅವಳು ಬರಲೇ ಇಲ್ಲ. ಮರುದಿನ ಸಂಜೆಯೂ ಹೀಗೆಯೇ ಆಯಿತು. ಅವಳು ಬರಲಿಲ್ಲ. ಅವಳ ಹತ್ತಿರ ತೋಟದ ಒಂದು ಬೀಗದ ಕೈ ಕೊಟ್ಟಿದ್ದರು. ಒಬ್ಬರಿಲ್ಲದ ವೇಳೆಯಲ್ಲಿ ಒಬ್ಬರು ಬಂದು ಕಾದು ಹೋಗಿದ್ದರೆ ಇನ್ನೊಬ್ಬರಿಗೆ ತಿಳಿಯಲಿ ಎಂದು ಸೋಗೆಯ ಅಟ್ಟಿನ ಸಂದಿಯಲ್ಲಿ ಇರುವ ಸನ್ನೆಯ ಹೆಡೆದಿಬ್ಬಿಯನ್ನು ನೋಡಿದರು. ಅವಳು ಬಂದಿದ್ದ ಗುರುತಿರಲಿಲ್ಲ.

ಅವರು ಯೋಚಿಸಲು ಪ್ರಾರಂಭಿಸಿದರು. ತಾವರೆ ಕೆರೆಯ ಆಚೆ ಹೆಗ್ಗಟ್ಟದಲ್ಲಿ ಅವಳ ನೆಂಟರಿದ್ದಾರೆ ಎಂಬುದಷ್ಟು ಅವರಿಗೆ ಗೊತ್ತಿತ್ತು. 'ನಮ್ಮ ಚಿಗವ್ವ ಅವ್ಳೆ' ಎಂದು ಅವಳು ಹೇಳಿದುದೆಷ್ಟೋ ಅಷ್ಟು. ಅವಳು ಅಲ್ಲಿಗೆ ಹೋಗಿರಬಹುದು. ಮತ್ತೆಲ್ಲಿಗಾದರೂ ಹೋಗಿರಬಹುದು. ಕೂತಿರುವ ಗರ್ಭವನ್ನು ತೆಗೆಸಿಕೊಂಡ ಬರುವದಕ್ಕೇ ಹೋಗಿದ್ದಾಳೆ. ತೆಗೆಯುವಾಗ ಅವಳ ಜೀವಕ್ಕೆ ಏನೂ ತೊಂದರೆಯಾಗದಿದ್ದರೆ ಸಾಕು ಎಂದು ಮನಸ್ಸಿನಲ್ಲೇ ಕೇಳಿಕೊಳ್ಳುತ್ತಿದ್ದರು.

ಹದಿನೈದು ದಿನವಾದರೂ ಅವಳ ಸುದ್ದಿ ಹತ್ತಲಿಲ್ಲ. ಇಪ್ಪತ್ತು ದಿನ ಕಳೆದರೂ ತಿಳಿಯಲಿಲ್ಲ. ಮಾದಿಗರ ಕೇರಿ, ಹೊಲೆಗೇರಿಗಳವರು ಎಷ್ಟೋ ಜನ ಹೊಲಗದ್ದೆಗಳಲ್ಲಿ ಕೂಲಿ ಮಾಡುತ್ತಿದ್ದರು. ಇವರು ಯಾವುದಕ್ಕಾದರೂ ಮಾತನಾಡಿಸಿದರೆ, 'ನಿಂತಲ್ಲಿಂದ ತುಸು ದೂರ ಹೋಗಿ ನೆಲ ನೋಡುತ್ತ ಉತ್ತರ ಹೇಳುತ್ತಿದ್ದರು. ಉಳಿದವರ ವಿಷಯದಲ್ಲಿ ಇಂತಹ ಕಟ್ಟನ್ನು ಹೆಚ್ಚಾಗಿ ಪಾಲಿಸುತ್ತಿರಲಿಲ್ಲ. ಆದರೆ ಇವರು ಗುಡಿಯ ಪೂಜಾರರು ಎಂಬ ವಿಶೇಷ ಭಯವಿತ್ತು. 'ನಿಮ್ಮ ಕೇರಿಯ ಮಾತಂಗಿ ಎಲ್ಲಿ ಕಾಣಾಕೇ ಇಲ್ಲ. ಕೂಲಿ ದುಡ್ಡು ತಗಾಬೇಕಿತ್ತು' ಎಂದು ಯಾರನ್ನಾದರೂ ಕೇಳುವ ಮನಸ್ಸಾಯಿತು. ಆದರೆ ಇದರಿಂದ ಯಾರಿಗಾದರೂ ಅನುಮಾನ ಬರಬಹುದೆಂದು ಕೇಳಲಿಲ್ಲ. ಈ ಪಾಪದ ಹೆಂಗಸು ಏನಾದರೂ ಪ್ರಾಣಗೀಣ ಕಳೆದುಕೊಂಡಳೋ ಎಂಬ ದಿಗಿಲೂ ಆಯಿತು. ಅಂಥದೇನಾದರೂ ಆಗಿದ್ದರೆ ಇಷ್ಟು ಹೊತ್ತಿಗೆ ಸುದ್ದಿ ಹಬ್ಬುತ್ತಿತ್ತು, ಎಂದು ಸಮಾಧಾನ ತಂದುಕೊಂಡರು.

ಒಂದು ತಿಂಗಳು ಕಳೆದ ಮೇಲೆ ತಿಳಿಯಿತು. ಶಿವಗೆರೆಯ ಕೊಪ್ಪಲಿನಲ್ಲಿ ಅವಳ ಜಾತಿಯವನೇ ಒಬ್ಬ, ಹೆಂಡತಿ ಸತ್ತವನಿದ್ದ. ಸೀರುಡಿಕೆ ಮಾಡಿಕೊಂಡು ಅವಳು ಈಗ ಅಲ್ಲಿ ಇದ್ದಾಳಂತೆ. ಹೆಗ್ಗಟ್ಟದ ಅವಳ ಚಿಗವ್ವ ಗೊತ್ತುಮಾಡಿದ ಈ ಕೂಡಿಕೆ ಈಗ ಹದಿನೈದು ದಿನದಲ್ಲಿ ಆಯಿತಂತೆ. ಮಾತಂಗಿ ತಿಮ್ಲಾಪುರದ ತನ್ನ ಕೇರಿಯನ್ನು ಬಿಟ್ಟೇಬಿಟ್ಟಳು.

ಅವಳು ಬಸುರಿಯಾದ ಸಮಸ್ಯೆ ಇಷ್ಟು ಹಗುರವಾಗಿ ಬಗೆಹರಿದಿದ್ದಕ್ಕೆ ಅವರಿಗೆ ಸಮಾಧಾನವಾಯಿತು. ಎರಡು ದಿನ ಹಾಯಾಗಿದ್ದರು. ಆದರೆ ಅವಳು ಊರನ್ನೇ ಬಿಟ್ಟು ಹೊರಟುಹೋಗಿ ಇನ್ನು ಎಂದೆಂದಿಗೂ ಅವಳ ಸಂಪರ್ಕವಿಲ್ಲದಂತಾದುದಕ್ಕೆ ವ್ಯಸನವಾಯಿತು. ಎರಡು ಮೂರು ದಿನದಲ್ಲಿ ಅವಳ ಹುಚ್ಚೇ ಹಿಡಿಯಿತು. ತೋಟಕ್ಕೆ ಹೋಗಿ, ತೆಂಗಿನ ಒಟ್ಟಲಿನ ಸಂದಿಯಲ್ಲಿ ತಾವು– ಅವಳು ಕೂಡುತ್ತಿದ್ದ ಜಾಗವನ್ನು ನೋಡುತ್ತಾ ನಿಲ್ಲುತ್ತಿದ್ದರು. ಒಂದೊಂದು ದಿನ, ಉಟ್ಟಬಟ್ಟೆಯ ಸಮೇತ ಕೊಳದಲ್ಲಿ ಸ್ನಾನಮಾಡಿ ಏಳುತ್ತಿದ್ದರು. ಆಮೇಲೆ, 'ನಾನ್ಯಾಕೆ ಸುಮ್ಮಸುಮ್ಮನೆ ನೀರಿಗಿಳಿದು ಮೈ ನೆನೆಸಿಕೊಂಡೆ,' ಎಂದು ಬಟ್ಟೆ ಒಣಗಿಸಿಕೊಂಡು, ಉಟ್ಟು ಮನೆಗೆ ಬರುತ್ತಿದ್ದರು.

ಮಾತಂಗಿ ಇದ್ದು, ಹೆಚ್ಚು ಕಡಿಮೆ ದಿನವೂ ಸಂಧಿಸುತ್ತಿದ್ದಾಗ ಅವರಿಗೆ ಅವಳ ವೈಶಿಷ್ಟ್ಯವು ಅರಿವಿಗೆ ಬಂದಿರಲಿಲ್ಲ. ಒಂಭತ್ತು ವರ್ಷ ಅವರು ತಮ್ಮ ಹೆಂಡತಿಯೊಡನೆ ಸಂಸಾರ ಮಾಡಿದ್ದರು. ಮಾತಂಗಿಯನ್ನು ಮುಟ್ಟಿಕೊಳ್ಳುತ್ತಿದ್ದುದು ಸುಮಾರು ಮೂರು ವರ್ಷ. ಎರಡನ್ನೂ ಹೋಲಿಸಿಕೊಂಡಾಗ ಮಾತಂಗಿಯಲ್ಲಿ ತಾವು ಕಂಡ ಹೆಣ್ಣುತನವನ್ನು ತಮ್ಮ

ಹೆಂಡತಿಯಲ್ಲಿ ಕಂಡಿರಲಿಲ್ಲವೆಂಬುದು ಅವರಿಗೇ ತಿಳಿಯಿತು. ಅವಳು ಏನನ್ನೂ ಕೇಳದೆಯೇ ಇವರ ಮನಸ್ಸನ್ನೆಲ್ಲ ಹೀರಿಕೊಂಡು ಹೋಗಿದ್ದಳು.

ಅವರು ತೋಟಕ್ಕೆ ಹೆಚ್ಚಾಗಿ ಹೋಗುವುದನ್ನೇ ಬಿಟ್ಟು ಬಿಟ್ಟರು. ವೆಂಕಟೇಶನಿಗೆ ಹದಿನೈದು ನಡೆಯುತ್ತಿತ್ತು, ಜಮೀನು ಮತ್ತು ಮನೆಯ ಆದಾಯ ವೆಚ್ಚದಲ್ಲಿ ಅವನು ಆಗಲೇ ತುಂಬ ಬುದ್ಧಿವಂತನಾಗಿದ್ದ. ಆದ್ದರಿಂದ ತಾವು ಹೆಚ್ಚು ಹೆಚ್ಚಾಗಿ ದೇವರ ಪೂಜೆ ಮಾಡತೊಡಗಿದ್ದರು. ದಿನವೂ ಸಹಸ್ರನಾಮ ಹೇಳುವರು. ಉಪವಾಸ, ಮಡಿ ಮೊದಲಾದ ನಿಷ್ಠೆಗಳನ್ನೂ ಹೆಚ್ಚು ಮಾಡಿದರು. ಆದರೆ ಕಣ್ಣಿಗೆ ಕಟ್ಟು ಹಾಕಿಕೊಂಡ ದೇವರ ಮುಖವನ್ನು ದಿಟ್ಟಿಸಿ ನೋಡಲು ಮಾತ್ರ ಭಯವಾಗುತ್ತಿತ್ತು. ಮಂಗಳಾರತಿ ಮಾಡುವಾಗ ವಿಗ್ರಹದ ಪಾದ–ಮೈಗಳನ್ನು ನೋಡುವರು. ಮುಖದ ಕಡೆಗೆ ಮಾತ್ರ ತಮ್ಮ ದೃಷ್ಟಿಯನ್ನು ಏರಿಸುತ್ತಿರಲಿಲ್ಲ.

☆ ☆ ☆ ☆

ಇದೇ ಸಮಯದಲ್ಲಿ ಊರಿನಲ್ಲಿಯೂ ಹೊಲೆ ಮತ್ತು ಮಾದಿಗರ ಕೇರಿಯಲ್ಲೂ ಕೆಲವು ಸಂಗತಿಗಳು ನಡೆದುವು. ಮಾದಿಗರ ಕೇರಿಯ ಬೆಟ್ಟಯ್ಯ ಹೆಂಡತಿ–ಮಕ್ಕಳನ್ನು ಬಿಟ್ಟು ಹೋಗಿದ್ದವನು, ಗಾಂಧೀ ಆಶ್ರಮದಲ್ಲಿದ್ದುಕೊಂಡು ಖಾದಿಧಾರಿಯಾಗಿ ಹಿಂತಿರುಗಿ ಬಂದನು. ಆಮೇಲೆ ವೆಂಕಟರಮಣಯ್ಯನವರು ಕಾಣದ ಕೇಳದ ಸಂಗತಿಗಳೆಲ್ಲ ನಡೆದುವು. ಮಾದಿಗರ ಕೇರಿ, ಹೊಲೆಗೇರಿಗಳಿಗೆ ಹರಿಜನ ಕಾಲೋನಿ ಅಂತ ಹೆಸರಿಟ್ಟು ಬೋರ್ಡ್ ಹಾಕಿದರು. ಆ ಜಾತಿಯ ಹೆಸರನ್ನೇ 'ಹರಿಜನ' ಅಂತ ಬದಲಾಯಿಸಿದರು. ಇವರೆಲ್ಲ ಹೇಳುವ ಗಾಂಧಿಮಹಾತ್ಮ ಇಟ್ಟ ಹೆಸರಂತೆ ಅದು. ಹರಿಜನ ಅಂದರೆ ದೇವರಿಗೆ ಸೇರಿದವರು. ಹಾಗಾದರೆ ನಾವೆಲ್ಲ ದೇವರಿಗೆ ಸೇರದವರೋ....? ಎಂದು ಊರಿಗೆ ಊರೇ ಪ್ರಶ್ನಿಸಿತು. ಚಳವಳಿ, ಮೆರವಣಿಗೆ ಮುಂತಾದ್ದನ್ನು ಮಾಡಿದವರೇ ಮಂತ್ರಿಗಳಾದ ಮೇಲೆ, ಈ ಹೊಲೆ–ಮಾದಿಗರೆಲ್ಲ ಮನೆ ಕಟ್ಟಿಕೊಳ್ಳಲು ಖಜಾನೆಯಿಂದ ದುಡ್ಡು ಕೊಟ್ಟರು. ಅವರು ಮೂರಂಕಣದ ಮಂಗಳೂರು ಹೆಂಚಿನ ಮನೆ ಕಟ್ಟಿಸಿಕೊಂಡರು. ಈಗ ಕೆರೆ ಏರಿಯ ಆಚೆ ಕೋಡಿಯ ಹತ್ತಿರ ನಿಂತು ನೋಡಬೇಕು. ಅದನ್ನು ಮಾದಿಗರ ಕೇರಿ ಅನ್ನಬಹುದೆ? ಶಿವಸ್ವಾಪುರದ ತಲೆಯ ಮೇಲೆ ಹೊಡೆಯುವ ಹಾಗಿದೆ. ಸರ್ಕಾರ ಇನ್ನು ಮೇಲೆ ದರ್ಖಾಸ್ತಿನಲ್ಲಿ ಅವರಿಗೆ ಭೂಮಿ ಕೊಡುತ್ತದಂತೆ. ಅವರೂ ಒಕ್ಕಲುವಂತರಾಗುತ್ತಾರಂತೆ. ಇತ್ತ ಊರಿಗೆ ಹೈಸ್ಕೂಲು ಬಂದಿತು. ಊರಿನ ದೊಡ್ಡ ಗೌಡರ ಮಗ ಮೇಲಗಿರಿ ಲಾಯರು ಅಸೆಂಬ್ಲಿ ಮೆಂಬರಾದ.

ಇದೇ ಸಮಯಕ್ಕೆ ಮಾತಂಗಿ ಊರಿಗೆ ಹಿಂತಿರುಗಿದಳು. ಇಲ್ಲಿಂದ ಹೋದ ಅವಳು ಗಂಡನ ಮನೆಯಲ್ಲಿ ಗಂಡು ಮಗು ಹೆತ್ತಳು. ಮಗುವಿಗೆ ಎರಡನೆಯ ವರ್ಷ ನಡೆಯುತ್ತಿರುವಾಗ ತನ್ನ ಹಳೆಯ ಗುಡಿಸಲನ್ನು ಸೇರಿದಳು. ಅವಳ ಗಂಡ ಅತಿ ಕುಡುಕನಂತೆ. ಅಲ್ಲೂ ದುಡಿದು ತಿನ್ನುತ್ತಿದ್ದಳು. ಆ ಸಂಪತ್ತಿಗೆ ಆ ಕುಡುಕನ ಸಂಗಡ ಯಾಕೆ ನರಳಬೇಕು? ಎಂದು ಊರಿಗೆ ಬಂದು ಬಿಟ್ಟಳಂತೆ. ಮಗು ಹೆತ್ತ ಮೇಲೆ ಅವಳು ಒಮ್ಮೆ ಶಿವಸ್ವಾಪುರಕ್ಕೆ

ಬಂದಿದ್ದಳು, 'ಗದ್ದೆ ತ್ಯಾವವಾಗಿತ್ತು ಮದುವೆಯಾದ ಪಟ್ಲೇಗೆ ಬಸುರಾದ್ಲು ಮಾತಂಗಿ' ಎಂದು ಅವಳ ಕೇರಿಯ ಕೆಲವು ಹೆಂಗಸರು ತಮಾಷೆ ಮಾಡಿ, ಗೆಲುವಾಗಿದ್ದ ಮಗುವನ್ನು ಎತ್ತಿ ಹೊಗಳಿದ್ದರು. ಈಗ ಸರ್ಕಾರದವರು ಮನೆ ಕಟ್ಟಿಕೊಳ್ಳಲು ದುಡ್ಡು ಕೊಡುವ ಸುದ್ದಿ ತಿಳಿಯಿತು. ಗೇಯಲು ನಾಲ್ಕೆಕರೆಪಾಳು ಜಮೀನು ಕೊಡುತ್ತಾರಂತೆ. ಅಂತೂ ಅವಳು ಇಲ್ಲಿಗೇ ಬಂದಳು.

ಬಂದ ನಂತರ ಜೀವನಕ್ಕೆಂದು ಕೂಲಿ ಮಾಡಲು ಪ್ರಾರಂಭಿಸಿದಳು. ಕೂಲಿಗೆ ಹೋಗುವಾಗ ತನ್ನ ಜಾತಿಯ ಇತರ ಹೆಂಗಸರಂತೆ ಮಗುವನ್ನೂ ಕಟ್ಟಿಕೊಂಡು ಹೋಗಿ ಬದುವಿನ ಮೇಲೆ ಕೂರಿಸುತ್ತಿದ್ದಳು. ಒಂದೊಂದು ದಿನ ಬೆಟ್ಟಣ್ಣನ ಹೆಂಡತಿ ಸುಂಕವ್ವನ ಕೈಗೆ ಕೊಟ್ಟು ಬರುತ್ತಿದ್ದಳು.

ಗುಡಿಗೆ ಪೂಜೆಗೆ ಹೋಗುವಾಗ, ಬಲಭಾಗದ ಗದ್ದೆಯಲ್ಲಿ ಮಾತಂಗಿ ಕಳೆ ಕೀಳುತ್ತಿರುವುದನ್ನು ಮೊದಲ ಸಲ ಕಂಡ ವೆಂಕಟರಮಣಯ್ಯನವರಿಗೆ ಮುಂದೆ ಹೆಜ್ಜೆ ಇಡುವುದೇ ಕಷ್ಟವಾಯಿತು. ಒಳಮನಸ್ಸಿನಿಂದ ಒಂದು ತರನಾದ ಸಂಭ್ರಮ ಉಕ್ಕಿತು. ಇವಳು ಎಲ್ಲಿಂದ ಬಂದಳು? ಯಾವಾಗ ಬಂದಳು? ಕೂಲಿ ಮಾಡಬೇಕಾದರೆ ಇಲ್ಲೇ ಇರಬೇಕು. ನನಗೆ ಸುಳಿವು ಕೊಡಲೇ ಬ್ಯಾಡವೆ? ಅವಳು ತಮ್ಮ ಕಡೆ ನೋಡಿಯಾಳೆಂದು ಐದು ನಿಮಿಷ ನಿಂತರು. ಬೆನ್ನು ಬಗ್ಗಿಸಿ ಕಳೆ ಕೀಳುತ್ತಿದ್ದ ಅವಳು ಸೊಂಟವನ್ನು ನೆಟ್ಟಗೆ ಮಾಡಲಿಲ್ಲ. ಉಳಿದ ಕೂಲಿಯವರೂ ಹಾಗೆಯೇ ಕೆಲಸ ಮಾಡುತ್ತಿದ್ದರು. ಹಾಗೆಯೇ ಹೆಚ್ಚು ಹೊತ್ತು ನಿಲ್ಲಲು ಸಂಕೋಚವಾಗಿ ಅವರು ದೇವಸ್ಥಾನಕ್ಕೆ ಹೊರಟು ಹೋದರು. ಪೂಜೆ ಮಾಡುವಾಗಲೆಲ್ಲ ಅವಳದೇ ಧ್ಯಾನ; ಪೂಜೆ ಮುಗಿಸಿ ಹಿಂತಿರುಗುವಾಗಲೂ ಅವಳು ಕಳೆ ಕೀಳುತ್ತಿದ್ದಳು. ಆಗಲೂ ಈ ಕಡೆಗೆ ನೋಡಲಿಲ್ಲ.

ಆ ದಿನದಿಂದ ಅವರು ಮನಸ್ಸಿನಲ್ಲೇ ಕೇಳಿಕೊಳ್ಳುತ್ತಿದ್ದರು. ಇಲ್ಲೇ ಇದ್ದರೆ ತಾನು ಬಂದಿರುವ ಸೂಚನೆಯನ್ನು ಯಾಕೆ ಕೊಡಲಿಲ್ಲ? ಅಥವಾ ಇವನ ಸುಡುಗಾಡು ಸಂಬಂಧ ಬ್ಯಾಡ ಅಂತ ಹೀಗೆ ಮಾಡ್ತಿದಾಳೊ? ಅವಳಿಗೇ ಬ್ಯಾಡವಾದರೆ ನಾನ್ಯಾಕೆ ಹೀಗೆ ಧಾವಂತಪಡಬೇಕು ಎಂಬ ಉದಾಸೀನವನ್ನು ಸೃಷ್ಟಿಸಿಕೊಂಡು ಸಮಾಧಾನಮಾಡಿಕೊಳ್ಳಲು ಯತ್ನಿಸಿದರಾದರೂ, ಅದು ಹೆಚ್ಚು ಹೊತ್ತು ನಿಲ್ಲುತ್ತಿರಲಿಲ್ಲ. ಒಂದು ಸಂಜೆ ತೋಟದ ಕಡೆಗೆ ಹೋದಾಗ ಮಾದಿಗರ ಕೇರಿಯ ಜುಟ್ಟಿಗ ಸಿಕ್ಕಿದ. ಮಾತಂಗಿಯ ಸುದ್ದಿಯೂ ಮಾತಿನಲ್ಲಿ ಬಂದಿತು. ಅವಳು ಊರಿಗೆ ಬಂದು ಎರಡು ತಿಂಗಳಾಯಿತಂತೆ. ಮಗುವಿನ ಜೊತೆ ಇನ್ನು ಮೇಲೆ ಇಲ್ಲೇ ಇರುತ್ತಾಳೆ. ಸ್ವಂತ ಮನೆ ಮತ್ತು ದರ್ಖಾಸ್ತಿನ ಜಮೀನಿಗೆ ಬೆಟ್ಟಯ್ಯ ಅರ್ಜಿ ಹಾಕಿದ್ದಾನೆ.

ಈಗ ಸರ್ಕಾರದ್ದೋರ್ ಅವರಿಗೆ ಇಷ್ಟೆಲ್ಲ ಮಾಡ್ತಿದಾರೆ. ಹಿಟ್ಟು ಬಟ್ಟೆಗೆ ಅನುಕೂಲವಾಯ್ತು, ಅವಳು ಇನ್ಯಾಕೆ ಬಂದಾಳು? ಆದರೆ ಬರೀ ಹಿಟ್ಟು ಬಟ್ಟೆಗಾಗಿ ಅವಳು ತಮ್ಮ ಹತ್ತಿರಕ್ಕೆ ಬರುತ್ತಿದ್ದಳೆಂಬುದನ್ನು ಅವರ ಮನಸ್ಸೇ ಒಪ್ಪಲಿಲ್ಲ. ಅವಳಾಗಿಯೇ ಎಂದೂ ಇವರನ್ನು ದುಡ್ಡು ಕೇಳಿರಲಿಲ್ಲ. ಇವರು ಕೊಟ್ಟಿದ್ದನ್ನು ಹಿಟ್ಟು ಬಟ್ಟೆಗೆಂದು ಖರ್ಚು ಮಾಡಿ

ತಿನ್ನಲಿಲ್ಲ. ಆಗಲೂ ಕೂಲಿ ಮಾಡುತ್ತಿದ್ದಳು. ಈಗಲೂ ಮಾಡುತ್ತಿದ್ದಾಳೆ. ಈಗ ಯಾಕೆ ಹೀಗೆ ನನ್ನನ್ನು ತಪ್ಪಿಸುತ್ತಾಳೆ? ಮತ್ತೆ ಬಸುರಿಯಾದೇನೆಂಬ ಹೆದರಿಕೆಯೆ? ಹೆಂಗಸರಿಗೆ ಈ ಒಂದು ಹಾಳು ಇಲ್ಲದಿದ್ದರೆ– ಎಂದು ಪ್ರಕೃತಿಯನ್ನೇ ಬೈದರು.

ಸುಮಾರು ಒಂದು ತಿಂಗಳು ಹೀಗೆಯೇ ಕಳೆಯಿತು. ವೆಂಕಟೇಶ ಹೈಸ್ಕೂಲಿಗೆ ಹೋಗುತ್ತಿದ್ದ. ಹನ್ನೆರಡು ವರ್ಷದ ಸತ್ಯಭಾಮ ಮಿಡಲ್ ಸ್ಕೂಲಿನಲ್ಲಿ ತುಂಬ ಬುದ್ಧಿವಂತೆಯಾಗಿ ಓದುತ್ತಿದ್ದಳು. ಅಡಿಗೆ, ತಿಂಡಿಯನ್ನು ಮಕ್ಕಳೇ ಹೇಗೋ ಮಾಡಿಕೊಂಡು ಹೋಗುತ್ತಿದ್ದವು. ಮಾತಂಗಿಯಿಂದ ಮನಸ್ಸನ್ನು ಎಳೆದಿಡುವುದು ವೆಂಕಟರಮಣಯ್ಯನವರಿಗೆ ಸಾಧ್ಯವೇ ಆಗಲಿಲ್ಲ. ಇತ್ತೀಚೆಗೆ ಅವರು ದಿನಾ ಸಂಜೆಯ ಹೊತ್ತು ತೋಟಕ್ಕೆ ಹೋಗುತ್ತಾರೆ. 'ಸಂಜೆ ಎಲ್ಲೂ ಹೋಗಬೇಡ, ಕೂತುಕೊಂಡು ಓದಿಕೋ'— ಎಂದು ಮಗನಿಗೆ ಹೇಳುತ್ತಾರೆ.

ಒಂದು ದಿನ ತೋಟಕ್ಕೆ ಹೋಗಿ ಬರುವಾಗ ಅದೃಷ್ಟವೆಂಬಂತೆ ಮಾತಂಗಿ ಎದುರಿಗೆ ಸಿಕ್ಕಿದಳು. ಮತ್ತೆ ಯಾರೂ ಇರಲಿಲ್ಲ. ಅವಳನ್ನು ಕಂಡ ಇವರಿಗೆ ಎದೆ ಡವಗುಟ್ಟಿತು. ಅವಳು ತಲೆ ತಗ್ಗಿಸಿಕೊಂಡು ಇವರಿಗೆ ದಾರಿ ಬಿಟ್ಟು ಬದುವಿನ ಕಡೆಗೆ ತಿರುಗಿದಳು. ಇವರೇ, 'ಮಾತಂಗಿ, ತುಸು ನಿಂತ್ಕೋ' ಎಂದರು. ಅವಳು ನಿಲ್ಲಲಿಲ್ಲ. ನಡಿಗೆ ನಿಧಾನ ಮಾಡಿದಳು. 'ನಿನ್ನ ಕೈಲಿ ಮಾತಾಡಬೇಕು. ವಸಿ ತ್ವಾಟಕ್ಕೆ ಬಾ' ಎಂದರು. 'ಬ್ಯಾಡಿ ಕಣ್ರಯ್ಯ' ಎಂದು ಅವಳು ಹೆಜ್ಜೆಯನ್ನು ಜೋರು ಮಾಡಿದಳು. 'ನೀನು ಬರದೆ ಇದ್ದರೆ ನೋಡು, ದೇವರಾಣೆ ಇಟ್ಟು ಹೇಳ್ತಿದೀನಿ,' ಎಂದು ಹೇಳಿ ಅವರು ತೋಟಕ್ಕೆ ಹೋದರು. ಅದು ತನಗೆ ಕೇಳಲೇ ಇಲ್ಲವೆಂಬಂತೆ ಅವಳು ಹೊರಟುಹೋದಳು. ಇವರು ತೋಟದಿಂದ ಹೊರಡಲಿಲ್ಲ. ಅವಳು ಬರುತ್ತಾಳೆಂಬ ನಂಬಿಕೆಯನ್ನು ಕೈ ಬಿಡಲು ಮನಸ್ಸು ಒಲ್ಲೆನೆನ್ನುತ್ತಿತ್ತು.

ಆದರೆ ಅವಳು ಬಂದೇಬಿಟ್ಟಳು. ಇವರು ಸುಮಾರು ಒಂದು ಗಂಟೆಗೂ ಮೀರಿ ಕಾದಿದ್ದರು. ಕತ್ತಲು ಕವಿದು ಹೊಲ–ಗದ್ದೆಗಳಲ್ಲಿ ಒಂದು ದನವೂ ಇಲ್ಲದಂತಾಗಿತ್ತು. ಅವಳೊಬ್ಬಳೇ ಬಂದು ಅಷ್ಟು ದೂರದಲ್ಲಿ ನಿಂತಳು. ಇವರ ಎದೆ ದುಡಿದು ದೇಗುತ್ತಿತ್ತು. ಹತ್ತಿರ ಬಂದು ಕೈ ಹಿಡಿಯಹೋದರು. 'ಮುಟ್ಟಬ್ಯಾಡ ಕಣ್ರಯ್ಯ' ಎನ್ನುತ್ತಾ ಅವಳು ನಾಲ್ಕು ಹೆಜ್ಜೆ ಹಿಂದೆ ಸರಿದಳು. 'ಕ್ಯಾಪವೇನೇ?'

'ನಿಮ್ಮ ಮ್ಯಾಗೆಂತಾ ಕ್ವಾಪವಯ್ಯ,' ಇವರು ಹೋಗಿ ತೊಟ್ಟ ಬಟ್ಟೆಯಲ್ಲೇ ಅವಳ ಕೈ ಹಿಡಿದಾಗ ಗೊತ್ತಾಯಿತು; ಅವಳು ಸಣ್ಣಗೆ ಬಿಕ್ಕಿ ಬಿಕ್ಕಿ ಅಳುತ್ತಿದ್ದಳು.

'ಅಳಬ್ಯಾಡ. ಅದ್ಯಾಕ್ ಹಂಗ್ ಹೇಳದೆ ಕೇಳದೆ ಹ್ವಂಟ್ ಹೋಗಿ ಬಿಟ್ಟೆ?'

'ಏನ್ಮಾಡಾದು' ಎಂದು ಅವಳೇ ಸೆರಗಿನಿಂದ ಕಣ್ಣು ಒರೆಸಿಕೊಂಡಳು.

'ನಾನ್ ನಿನ್ನ ಏಟೊಂದು ತರ ಗ್ಯಾಪಿಸ್ಕತಿದ್ದೆ ಗೊತ್ತಾ?' ಅವಳು ಉತ್ತರ ಹೇಳಲಿಲ್ಲ. ಅವರೇ ಕೇಳಿದರು, 'ಇನ್ ಮ್ಯಾಲೆ ಇಲ್ಲೇ ಇರ್ತೀಯ?'

'ಊಂ'

'ಗಂಡನ್ನ ಯಾಕ್ ಬಿಟ್ ಬಂದೆ?'

'ನಾನಿನ್ನ ಯಾವನ ಕುಟ್ಟೂ ಇರಾಕಿಲ್ಲ.'

'ನನ್ ಕುಟ್ಟೆ?'

'ಆಕ್ಲಾಸ್ ಮಾಡಬ್ಯಾಡ ಕಣ್ರಯ್ಯ'—ಎನ್ನುವಾಗ ಅವಳಿಗೆ ಮತ್ತೆ ಅಳು ಬಂದದ್ದು ಅವರಿಗೆ ಕೇಳಿಸಿತು. ಅವಳನ್ನು ಸಮಾಧಾನ ಮಾಡಿ ಕೈ ಹಿಡಿದು ಕರೆದರು.

'ಎಲ್ಗೆ?'

'ಸ್ವಾಗೆ ಒಟ್ಟಲಿನ ಮರಗ.'

ಅವಳು ಮೊದಲು ಎರಡು ಹೆಜ್ಜೆ ಪಾಲಿದರೂ ಅನಂತರ ದೃಢವಾಗಿ ನಿಂತು ಹೇಳಿದಳು. 'ಅದ ಮಾಡಬ್ಯಾಡ್‌ದು ಕಣಯ್ಯ.'

'ಯಾರೇ ನಿಂಗ್ ಹೇಳ್ಗೋರು ಹಂಗಂತ.'

''ಸುಂಕವ್ವ ಅಂದ್ಲು. ಬೆಟ್ಟಣ್ಣ ಗಾಂಡಿ ಗುಡಿಯಿಂದ ಬಂದವ್ಯಾಗ ಅವಳನ್ನ ಮುಟ್ಟಲ್ವಂತೆ. ಮಕ್ಳಾದ ಮ್ಯಾಲೆ ಗಂಡ ಎಂಡ್ತಿ ಜೋಡೀಲಿ ಮನಿಕಾ ಬ್ಯಾಡ್‌ದಂತೆ.'

'ಅವಳಿಗೆ ತವಲಾಗಾಕಿಲ್ವ?'

'ಗಂಡ ವಲ್ಲದಿದ್ರೆ ನಾನೂ ವಲ್ಲೆ. ಅದರಾಗೇನೈಯ್ತೆ ಅಂತಾಳೆ ಸುಂಕವ್ವ ಅಂದ್ರೆ ಸಲೀಸುಗಾರ ಎಣ್ಣು.'

'ಅವ್ರೇನೊ ಗಂಡ ಹೆಂಡ್ತಿ, ಹೆಂಗೆ ಬೇಕಾದ್ರೂ ಮಾಡ್ಕಳ್ಳಿ, ಈಗ ನೀನು ಬಾ'—ಎಂದು ಅವಳನ್ನು ತಬ್ಬಿಕೊಂಡು ಮುಂದೆ ಹೆಜ್ಜೆ ಹಾಕಿಸಿದರು.

ಮೊದಲು ಹೆಜ್ಜೆಗೇ ಮತ್ತೆ ತಡೆದು ನಿಂತು ಅವಳು ಕೇಳಿದಳು. 'ಹಂಗಾರೆ ನಾನ್ ನಿಮ್ಮ ಸೂಳೆ ಏನ್ರಯ್ಯ?'

ಅವರಿಗೆ ಬೆಚೆಬ್ಬೆಪ್ಪೆ ಎನ್ನುವಂತಾಯಿತು. ಇವಳೆಂಥ ಸೆಡವಿನ ಮಾತನಾಡುತ್ತಿದ್ದಾಳೆ ಎನ್ನಿಸಿತು. ಆದರೆ ಧ್ವನಿಯಲ್ಲಿ ಸೆಡವಿನ ಛಾಯೆಯೂ ಇರಲಿಲ್ಲ. ಮುಂದೆ ಏನೂ ಮಾತನಾಡಲಾರದೆ ಅದೃಶ್ಯ ಗೋಡೆ ಒಂದರಿಂದ ತಡೆಯಲ್ಪಟ್ಟವರಂತೆ ನಿಂತರು. ಅವಳು ಮೈತುಂಬ ಮಾತನ್ನು ಸೂಸುವ ಕರಿಯ ಕಲ್ಲಿನ ವಿಗ್ರಹದಂತೆ ನಿಂತಿದ್ದಳು. ಹತ್ತು ನಿಮಿಷವಾದರೂ ಹೀಗೆ ಸರಿದಿರಬೇಕು. ಕೊನೆಗೆ ಅವಳೇ 'ನಾನ್ ಓಯ್ತೀನಿ ಕಣ್ರಯ್ಯ' ಎಂದಳು. ಹೋಗಬೇಡ ಇರು ಎನ್ನಲು ಇವರಿಗೆ ನಾಲಗೆ ಬರಲಿಲ್ಲ. ಎರಡು ನಿಮಿಷ ಕಾಯ್ದು, 'ಮದ್ಯಾನವೇ ರೊಟ್ಟಿ ಕೊಟ್ಟು ಬಿಟ್ ಬಂದದ್ದು. ಉಡುಗ ನಮ್ಮವ್ವ ಎಲ್ಲಿ ಅಂತ ಬಡಕತ್ತೈತೆ, ಓಯ್ತೀನಿ' ಎಂದು ಹೊಳೆ ಬಾಗಿಲಿನ ಕಡೆಗೆ ಹೊರಟು ಹೋದಳು. ಆಗೂ ಇವರು ಸುಮ್ಮನೆ ಆ ಕಡೆ ನೋಡುತ್ತಾ ನಿಂತಿದ್ದರು. ಆದರೆ ಹೋದ ತುಸು ಹೊತ್ತಿನ ನಂತರ ಅವಳೇ ಹಿಂತಿರುಗಿ ಬಂದು, 'ಹಾದೀಲಿ ಅಡ್ಡಾದ್ರೂ ಇನ್ಯಾವತ್ತೂ ಮಾತಾಡುಸ್ ಬ್ಯಾಡಿ ಕಣ್ರಯ್ಯ. ನಿಮ್ಮ ಮರ್ವಾದಿ ಹ್ವಾಗಬ್ಯಾಡ್‌ದು' ಎಂದು ಹೇಳಿ ತಿರುಗಿ ಹೊರಟು ಹೋದಳು.

ವೆಂಕಟರಮಣಯ್ಯನವರು ಮನೆ ಸೇರುವ ಹೊತ್ತಿಗೆ ರಾತ್ರಿ ಒಂಭತ್ತು ಗಂಟೆ ಕಳೆದಿತ್ತು. ಬಿಸಿಯಾಗಿ ಅನ್ನ ಮಾಡಿಟ್ಟು ಮಕ್ಕಳಿಬ್ಬರೂ ಅವರನ್ನು ಕಾಯುತ್ತಕೊಂಡಿದ್ದರು. ಕೈಕಾಲು ತೊಳೆದು ಎರಡು ಆಚಮನದ ಶಾಸ್ತ್ರ ಮಾಡಿ ಮಕ್ಕಳೊಡನೆ ಊಟಮಾಡಿ

ಮಲಗಿಕೊಂಡರು. ಮಕ್ಕಳಿಬ್ಬರಿಗೂ ಬೇಗ ಬೇಗ ನಿದ್ದೆ ಬಂತು. ಅವರಿಗೆ ಬರಲಿಲ್ಲ. 'ಹಂಗಾರ್ ನಾಸ್ ನಿಮ್ಮ ಸೂಳೆ ಏನ್ರಯ್ಯ?' ಎಂಬ ಅವಳ ಪ್ರಶ್ನೆ ಅಂತರಂಗವನ್ನು ಕೊರೆಯುತ್ತಿತ್ತು. ಅವಳ ಮತ್ತು ತಮ್ಮ ಸಂಬಂಧ ಬರೀ ದುಡ್ಡಿಗೆ ನಡೆಯುತ್ತಿರಲಿಲ್ಲವೆಂಬುದು ಅವರಿಗೆ ಸ್ಪಷ್ಟವಾಗಿ ಗೊತ್ತಿತ್ತು. ಇದೊಂದು ತರಹ ಸ್ನೇಹಸಂಬಂಧ! ಆದರೆ ತಮ್ಮಿಂದ ಅವಳಿಗೆ ಒಂದು ಮಗುವೂ ಆಗಿದೆ. ಅಲ್ಲಿಂದ ಬರೀ ಸ್ನೇಹಸಂಬಂಧವಾಗಿರೋದು ಹೇಗೆ? ಹಾಗಾದರೆ ಇದು ದಾಂಪತ್ಯವೆ? ಅಲ್ಲ. ಶಾಸ್ತ್ರದಲ್ಲಿ ಎಷ್ಟೋ ರೀತಿಯ ವಿವಾಹಗಳನ್ನು ಹೇಳಿದೆ, ಅಂಗಸಂಗವಾಗಿ, ಗರ್ಭಿಣಿಯಾಗಿ ಶಿಶುವಿನ ಜನನವಾಗಿದ್ದರೂ ಅಜ್ಞಾತವಾಗಿರುವುದು ಯಾವ ರೀತಿಯ ವಿವಾಹದ ಲಕ್ಷಣದಲ್ಲೂ ಹೇಳಿಲ್ಲ. ನನ್ನ—ಅವಳ ಸಂಬಂಧ ಎಂಥದು? ಯೋಚಿಸಿ, ಯೋಚಿಸಿ ಅವರು ಅದನ್ನು ಕೈಬಿಟ್ಟರು. ಆದರೆ ಇದರಲ್ಲಿ ಅವಳೇ ಪ್ರಧಾನಳಾಗಿ ತಾವು ಗೌಣರಾಗಿರುವಂತೆ ಅನುಭವವಾಗುತ್ತಿತ್ತು.

ನಡುರಾತ್ರಿ ಕಳೆದರೂ ನಿದ್ರೆ ಬರಲಿಲ್ಲ. ಬೆಳಿಗ್ಗೆ ಎಚ್ಚರವಾದಾಗ ಹೊತ್ತು ಎರಡಾಳುದ್ದ ಏರಿತ್ತು. ಅವತ್ತು ಶನಿವಾರ. ಊರಿನ ಪಟೇಲ ತಿರುಮಲೇಗೌಡರು ದೇವಸ್ಥಾನಕ್ಕೆ ಬಂದು ಸ್ವತಃ ಪೂಜೆ ಮಾಡಿಸುವ ದಿನ. ಗಡಿಬಿಡಿಯಿಂದ ಸ್ನಾನಮಾಡಿ ಮಕುಟ ಉಟ್ಟು, ರೇಶ್ಮೆಯ ಚೌಕ ಹೊದೆದು, ಸತ್ಯ ಹಿತ್ತಿಲಿನಲ್ಲಿ ಕುಯ್ದಿಟ್ಟಿದ್ದ ಮಲ್ಲಿಗೆಯ ಹೂವು, ವೆಂಕಟೇಶ ಮಾಡಿಟ್ಟಿದ್ದ ನೈವೇದ್ಯ ಮತ್ತು ಪೂಜಾಸಾಮಗ್ರಿಗಳನ್ನು ತೆಗೆದುಕೊಂಡು ದೇವಸ್ಥಾನಕ್ಕೆ ಹೋದರು. ಇವರು ಹೋಗುವ ಹೊತ್ತಿಗೆ ದೊಡ್ಡ ಗೌಡರು ಬಂದು ಜಗುಲಿ ಮೇಲೆ ಕಾಯುತ್ತಾ ಕುಳಿತಿದ್ದರು. ಶನಿವಾರವಾದುದರಿಂದ ಇನ್ನೂ ಕೆಲವು ರೈತರೂ ಬ್ರಾಹ್ಮಣರೂ ಬಂದಿದ್ದರು.

ಇವರು ಮಂತ್ರ ಹೇಳಿಕೊಂಡು ಪೂಜೆ ಮಾಡುವಾಗ ಗೌಡರು ಗರ್ಭ ಗುಡಿಯ ಬಾಗಿಲಿನಲ್ಲಿ ಪ್ರಥಮ ಸ್ಥಾನದಲ್ಲಿ ನಿಂತಿದ್ದರು. ಅನಂತರ ಬ್ರಾಹ್ಮಣರು, ಅವರ ಹಿಂದೆ ಉಳಿದ ಗೌಡರು, ಇತರರು. ಹತ್ತಿರವೇ ನಿಂತಿದ್ದ ಕುಪ್ಪಣ್ಣಯ್ಯಂಗಾರರು ದೊಡ್ಡ ಗೌಡರನ್ನು ಕೇಳಿದರು: 'ಎಲ್ಲೆಲ್ಲೂ ಹೊಲೇರು ಮಾದಿಗರನ್ನ ದೇವಸ್ಥಾನದೊಳಗೆ ನುಗ್ಗುಸ್ತಾ ಇದಾರಂತಲ್ಲ.'

'ನಮ್ಮೂರಲ್ಲಿ ನುಗ್‌ಸಾಕ್ ಬಂದ್ರೆ ಒನಕೆ ತಗಾತೇವಿ' ಗೌಡರು ನಿಶ್ಚಯವನ್ನೇ ಹೇಳಿದರು. ಊರವರು ಕೂಡ ಅದೇ ನಿಶ್ಚಯ ಮಾಡಿದ್ದರು. ಹಾಗೆ ನೋಡಿದರೆ ಗುಡಿಗೆ ಪ್ರವೇಶ ಮಾಡಲು ಊರಿನ ಹೊಲೆಯ–ಮಾದಿಗರು ಮುಂದೆ ಬಂದೇ ಇಲ್ಲ. ಬೆಳಿಗ್ಗೆ ಎದ್ದರೆ ಕೋಟೆಯೊಳಗಿನವರ ಜಮೀನಿನಲ್ಲಿ ದುಡಿದೇ ಮಧ್ಯಾಹ್ನದ ಮುದ್ದೆಯನ್ನು ಸಂಪಾದಿಸಬೇಕಾದ ಸ್ಥಿತಿ ಅವರಲ್ಲಿ ಬಹು ಪಾಲು ಜನರಿಗೆ ತಪ್ಪಿರಲಿಲ್ಲ. ದೇವಸ್ಥಾನ ಪ್ರವೇಶಕ್ಕೆ ಹರಿಜನರಿಗೆ ಸಮಾನಾವಕಾಶ ಬೇಕೆಂಬ ತೀರ್ಮಾನ ಸರಕಾರದಿಂದಲೇ ಆಗಿ, ಅನೇಕ ಕಡೆ ಅದರ ಕಾರ್ಯಾನ್ವಯವು ಸರ್ಕಾರೀ ನಾಯಕರ ಮುಂದಾಳ್ತನದಲ್ಲೇ ಆಗುತ್ತಿತ್ತು.

ಆದರೆ ತಿರುಮಲಾಪುರದ ದೇವಸ್ಥಾನದ ಪ್ರವೇಶಕ್ಕೆ ಒತ್ತಾಸೆ ಸರ್ಕಾರದ ಅಮಲ್ದಾರರಿಂದ ಬರಲಿಲ್ಲ; ಹಾಲಿ ಅಸೆಂಬ್ಲಿ ಮೆಂಬರಾದ ಲಾಯರ್ ಮೇಲಗಿರಿ ಗೌಡರಿಂದ ಬಂತು; ಗ್ರಾಮದ ಯಜಮಾನ ತಿರುಮಲೇಗೌಡರ ಮಗನಿಂದಲೇ ಬಂತು. 'ನಮ್ಮ ಗೌಡಿಕೆ

ಮರ್ಯಾದಿ ಹಾಳು ಮಾಡ್ಬೆ ನನ್ ಮಗನೇ' ಎಂದು ದೊಡ್ಡ ಯಜಮಾನರು ಮಗನನ್ನು ದಾಕ್ಷಿಣ್ಯವಿಲ್ಲದೆ ಖಂಡಿಸಿದರು. ವೆಂಕಟರಮಣಯ್ಯನವರಂತೂ ಸ್ವಲ್ಪವೂ ಸಮ್ಮತಿಸಿರಲಿಲ್ಲ. ತಮ್ಮ ಹಿಂದಿನ ಸಹಪಾಠಿಯೇ ಆಗಿದ್ದ ಮೇಲಗಿರಿಗೌಡರನ್ನು ಪ್ರತ್ಯೇಕ ಕಂಡು, 'ಮಾಡಬಾರದ್ದು ಮಾಡಿದರೆ ಊರಿಗೆ ಆಗಬಾರದ್ದು ಆಗುತ್ತೆ. ನೀನೇನೋ ತುಮಕೂರು ಬೆಂಗಳೂರಲ್ಲಿರ್ತಿ. ಇಲ್ಲಿರುವ ನಾವು, ನಿನ್ನ ತಂದೆ ತಾನೇ ನರಳಬೇಕಾದೋರು?' ಎಂದು ವಾದ ಮಾಡಿದ್ದರು.

'ಚೀಫ್ ಮಿನಿಸ್ಟರಿಂದಲೇ ಬಂದದೆ. ತಾಲೂಕಿನ ಎಂ.ಎಲ್.ಎ. ಅಂತ ನನ್ನನ್ನ ಮುಂದೆ ಬಿಟ್ಟಿದ್ದಾರೆ. ನಾನು ವಲ್ಲೆ ಅಂದ್ರೆ ಮಿಲಿಟ್ರಿ ಕರುಸ್ತಾರೆ. ಗುಡಿ ಪೂಜಾರಿಯಾಗಿ ನೀವು ಬ್ಯಾಡ್ ಅಂದ್‌ರೆ ಪೂಜಾರಿಕೆ ಕಿತ್ತುಹಾಕ್ತಾರೆ. ಕಾಲ ಬದಲಾಯಿಸಿದೆ. ಏನು ಮಾಡೂದು?'

ಅಂತೂ ವೆಂಕಟರಮಣಯ್ಯನವರು ಮತ್ತೆ ಏನೂ ಮಾಡಲಿಲ್ಲ. ಪಾಪಪುಣ್ಯ ಏನಿದ್ದರೂ ಮಾಡಿದವರಿಗೆ ಮಾಡಿಸಿದವರಿಗೆ ಎಂದುಕೊಂಡು ಆ ದಿನ ಪೂಜೆಗೆ ಬಂದರು. ಬೆಂಗಳೂರಿನಿಂದ ಬಂದಿದ್ದ ಪೇಪರಿನವರು ಝಲಕ್ ಝಲಕ್ ಅಂತ ಬೆಳಕು ಎರಚಿ, ಮುಂದಿದ್ದ ತಮ್ಮನ್ನು ಸೇರಿಸಿ ದೇವರ ಫೋಟೋ ತೆಗೆದರು. ಅವತ್ತಿನ ವಿಶೇಷ ಪೂಜೆಯ ಖರ್ಚೆಲ್ಲ ಮೇಲಗಿರಿಗೌಡರದು.

ಅನಂತರ ಒಬ್ಬೊಬ್ಬರಾಗಿ ಎಲ್ಲ ಹರಿಜನರ ಪ್ರವೇಶ. ಅವರಿಗೆಲ್ಲ ಒಂದೊಂದು ಉದ್ಧರಣೆ ತೀರ್ಥ ಕೊಡುತ್ತ ನಿಂತರು. ಒಬ್ಬೊಬ್ಬರ ಮುಖದ ಮೇಲೆ ಒಂದೊಂದು ಥರದ ಭಾವ. ಸಾಲಾಗಿ ಒಬ್ಬರ ಹಿಂದೆ ಒಬ್ಬರು ಬರುತ್ತಿರುವಾಗ ಮಾತಂಗಿ ವೆಂಕಟರಮಣಯ್ಯ ನವರ ಕಣ್ಣಿಗೆ ಬಿದ್ದಳು. ಹಳದಿ ಅಂಚಿನ ಕರಿ ಬಣ್ಣದ ಸೀರೆ ಉಟ್ಟಿದ್ದಾಳೆ. ನನ್ನ ಜಾತಿಯ ಉಳಿದ ಎಷ್ಟೋ ಜನ ಹೆಂಗಸರಂತಲ್ಲದೆ ರವಿಕೆಯನ್ನೂ ತೊಟ್ಟಿದ್ದಾಳೆ. ಕಂಕುಳಲ್ಲಿ ಗಂಡು ಮಗು. ಹುಡುಗನಿಗೆ ಷರಟು ಹಾಕಿಲ್ಲ. ಅದರ ಮೈಗೂ ಬರುವಂತೆ ತನ್ನ ಸೀರೆಯ ಸೆರಗನ್ನು ಹೊದ್ದಿಸಿ ಕೊಂಡಿದ್ದಾಳೆ. ಸ್ವಲ್ಪ ಹೊತ್ತಿಗೆ ಮುಂಚೆ ಸ್ನಾನ ಮಾಡಿದ್ದರಿಂದ ಅವಳ ಮತ್ತು ಹುಡುಗನ ತಲೆಯ ಕೂದಲು ಒದ್ದೆಯಾಗಿದೆ. ಆದರೆ ಅದರ ಮುಖಕಟ್ಟು, ವೆಂಕಟೇಶ ಮೂರು ವರ್ಷ ಮಗುವಾಗಿದ್ದಾಗ ಇದ್ದಂತೆಯೇ ಇದೆ. ವೆಂಕಟರಮಣಯ್ಯನವರ ಮೈ ಬೆವರಿತು. ಮಾತಂಗಿಗಿಂತ ಹಿಂದೆ ಮುಂದೆ ಬರುವವರೆಲ್ಲ ದೇವರನ್ನು ನೋಡುತ್ತಾ ಹೆಜ್ಜೆ ಇಡುತ್ತಿದ್ದರೆ ಅವಳ ದೃಷ್ಟಿ ನೆಲದ ಕಡೆ ಇದೆ. ವೆಂಕಟರಮಣಯ್ಯನವರಿಗೆ ತಮ್ಮ ದೃಷ್ಟಿಯನ್ನು ಮಾತಂಗಿ ಮತ್ತು ಮಗುವಿನಿಂದ ಬೇರ್ಪಡಿಸುವುದು ಸಾಧ್ಯವಾಗಲಿಲ್ಲ. ಮಾತಂಗಿ ಸುಮ್ಮನೆ ತನ್ನ ಬಲಗೈ ನೀಡಿ ದೋಣಿಯಂತೆ ಮಡಿಸಿದಳು. ಉದ್ಧರಣೆ ಹಿಡಿದಿದ್ದ ಅವರ ಕೈ ನಡುಗುತ್ತಿತ್ತು. ತೀರ್ಥ ಹಾಕಿದರು. ಅವಳು ಮುಂದೆ ಹೆಜ್ಜೆ ಹಾಕುವದರಲ್ಲಿದ್ದಳು. ಆದರೆ ಹಿಂದಿದ್ದ ಹೆಂಗಸು, 'ಉಡುಗ್ಗೆ ಒಸಿ ಬಿಡಿಷ್ಕಳೆ' ಎಂದಳು. ಜ್ಞಾಪಕ ಬಂದವರಂತೆ ಅವರು ಅವಳ ಕೈಗೆ ಇನ್ನೊಂದು ಉದ್ಧರಣೆ ಹಾಕಿದರು. ಒಂದು ನಿಮಿಷದಲ್ಲಿ ಅವಳು ಗರ್ಭಗುಡಿಯಿಂದ ಹೊರಟು ಹೋದಳು.

ಅವರ ಮನಸ್ಸು ಈಗ ಮಾತಂಗಿಯ ನೆನಪಿನಿಂದ ತುಂಬಿಹೋಯಿತು. ಬರೀ ಅವಳ ನೆನಪಲ್ಲ, ಅವಳ ಸೊಂಟವನ್ನು ಏರಿ ಬಂದು ತಮಗೆ ದರ್ಶನ ಕೊಟ್ಟ ಹುಡುಗನ ಚಿತ್ರವು ಮನಸ್ಸನ್ನು ಕಲಕಿಬಿಟ್ಟಿತು.

☆ ☆ ☆ ☆

ಇದು ನಡೆದು ಹತ್ತು ವರ್ಷಗಳಾಗಿವೆ. ಈ ಅವಧಿಯಲ್ಲಿ ಎಷ್ಟೋ ಬದಲಾವಣೆಗಳು ನಡೆದಿವೆ. ಮೇಲಗಿರಿಗೌಡರು ಈಗ ಮಂತ್ರಿಗಳಾಗಿದ್ದಾರೆ. ಬೆಟ್ಟಯ್ಯನವರ ಮಗ ಮೋಹನದಾಸ ಬಿ.ಎ. ಫೇಲಾಗಿ ತುಮಕೂರಿನಲ್ಲಿ ಬೂಟು ಅಂಗಡಿಯ ಮಾಲಿಕನಾಗಿದ್ದಾನೆ. ಅವನ ತಂಗಿ ಮೀರಾ ಹೈಸ್ಕೂಲು ಓದುತ್ತಿದ್ದಾಳೆ. ವೆಂಕಟೇಶ ಇಂಟರ್ ಓದಿ, ಬಿಟ್ಟು, ಅವನಿಗೆ ಮದುವೆಯಾಗಿ ಈಗ ಗಂಡು ಮಗುವಾಗಿದೆ. ಸತ್ಯ ಇತಿಹಾಸದಲ್ಲಿ ಎಂ.ಎ. ಓದಿ, ಬೆಂಗಳೂರಲ್ಲಿ ಲೆಕ್ಚರರ್ ಆಗಿದ್ದಾಳೆ.

ತಾವು ಕಲಿತಿದ್ದ ಸಂಸ್ಕೃತ, ಮಂತ್ರ, ವೇದಾಂತಗಳನ್ನು ವೆಂಕಟರಮಣಯ್ಯನವರು ತಮ್ಮ ಇಬ್ಬರು ಮಕ್ಕಳಿಗೂ ಸಮಾನವಾಗಿ ಹೇಳಿಕೊಟ್ಟಿದ್ದರು. ವೆಂಕಟೇಶನಿಗೂ ಅವಳಿಗೂ ವ್ಯತ್ಯಾಸವಿತ್ತು: ಅವನು ಹೇಳಿ ಕೊಟ್ಟದ್ದನ್ನು ಬಾಯಿಪಾಠ ಮಾಡಿತ್ತಿದ್ದ. ಅವಳು ಅದರ ಅರ್ಥ ಕೇಳಿ ಪ್ರಶ್ನಿಸುತ್ತಿದ್ದಳು. ಹೈಸ್ಕೂಲಿನಲ್ಲಿದ್ದಾಗ ಆಕೆಗೆ ವೆಂಕಟರಮಣಯ್ಯನವರು ಚತುರ್ವರ್ಣಗಳು ಹುಟ್ಟಿದ ಬಗೆಯನ್ನು ಹೇಳತೊಡಗಿದರು :

'ಬ್ರಾಹ್ಮಣೋಸ್ಯ ಮುಖಮಾಸೀತ್ ಬಾಹೂ ರಾಜಾನ್ಯಃ ಕೃತಃ ಊರೂತದಸ್ಯ ಯದ್ವೈಶ್ಯಃ ಪದ್ಭ್ಯಾಂ ಶೂದ್ರೋ ಅಜಾಯತ' ಅಂದರೆ ಬ್ರಾಹ್ಮಣರು ಬ್ರಹ್ಮನ ಬಾಯಿಯಿಂದಲೂ, ಕ್ಷತ್ರಿಯರು ಅವನ ತೋಳುಗಳಿಂದಲೂ, ವೈಶ್ಯರು ತೊಡೆಯಿಂದಲೂ ಶೂದ್ರರು ಕಾಲುಗಳಿಂದಲೂ ಹುಟ್ಟಿದರು ಎಂದು ಅವರು ಹೇಳಿದಾಗ ಸತ್ಯಭಾಮೆ ಕೇಳಿದಳು : 'ಹಾಗಾದರೆ ಸಾಬರು ಕ್ರಿಶ್ಚಿಯನ್ನರು ಎಲ್ಲಿಂದ ಹುಟ್ಟಿದರು?'

ಈ ಪ್ರಶ್ನೆಗೆ ವೆಂಕಟರಮಣಯ್ಯನವರಿಗೆ ತಕ್ಷಣ ಉತ್ತರ ಹೊಳೆಯಲಿಲ್ಲ. ಮುಂದೊಮ್ಮೆ 'ಚಾತುರ್ವರ್ಣ್ಯಂ ಮಯಾ ಸೃಷ್ಟಂ' ಎಂಬುದನ್ನು ಹೇಳುವಾಗಲೂ ಇದೇ ಪ್ರಶ್ನೆಯನ್ನು ಆಕೆ ಕೇಳಿದ್ದಳು. ಪ್ರಶ್ನಿಸುವುದು ಅವಳಿಗೆ ಸಹಜವಾಗಿಯೇ ಬಂದಿತ್ತು. ಹಾಗೆಂದು ದೇವರು, ಮಂತ್ರ, ಪೂಜೆ–ಪುನಸ್ಕಾರಗಳ ಬಗೆಗೆ ಅವಳು ಅಶ್ರದ್ಧೆ ಪಡುತ್ತಿರಲಿಲ್ಲ; ತಮಾಷೆ ಮಾಡುತ್ತಿರಲಿಲ್ಲ.

ಮೈಸೂರಿನಲ್ಲಿ ಕಾಲೇಜು ಓದುವಾಗ ಅವಳು ಪ್ರತಿ ರಜಕ್ಕೂ ಊರಿಗೆ ಬರುತ್ತಿದ್ದಳು. ಬಂದಾಗ ಅಡಿಗೆಮನೆಯ ಕೆಲಸವನ್ನು ತಾನೇ ಮಾಡುತ್ತಿದ್ದಳು. ಅವಳು ಏನೇನು ಓದುತ್ತಿದ್ದಾಳೆಂದು ಅವರು ಕೇಳುತ್ತಿದ್ದರು.

ಒಂದು ದಿನ ಹೇಳಿದಳು : 'ಭಗವದ್ಗೀತೆಲಿ ಜ್ಞಾನಯೋಗ, ಕರ್ಮಯೋಗ, ಭಕ್ತಿಯೋಗಗಳ ಸಮನ್ವಯ ಇದೆಯಲ್ಲ; ಅದರ ನಿಜವಾದ ಕಾರಣ ಬೇರೆ ಇದೆ.'

'ಅದೇನು?'

'ಆಗ ದೈಹಿಕ ಕೆಲಸ ಮಾಡ್ತಿದ್ದ ಶೂದ್ರರು, ''ನಮ್ಮದು ಕೀಳು ಕೆಲಸ, ನಿಮ್ಮದಾದರೆ ಮೇಲು ಕೆಲಸ. ನಾವು ಇದನ್ನ ಮಾಡುಲ್ಲ, ಹೊಲ ಗದ್ದೇಲಿ ಗೇಯಲ್ಲ''—ಅಂತಿದ್ದರಂತೆ. ''ನಿಮ್ಮ ಕೆಲಸ ಮಾಡಿದೋರಿಗೂ ಸಮಾನ ಮುಕ್ತಿ ಸಿಕ್ಕುತ್ತೆ; ಇದು ಮೇಲು ಇದು ಕೀಳು ಅಂತ ಯಾವ ಕಸಬನ್ನೂ ಬಿಡಬಾರದು'' ಎಂದು ತಿಳಿಸಿದಂತೆ. ಅದೆಲ್ಲ ಆಗಿನ ಸಮಾಜರಚನೆಯ ರೂಪವಷ್ಟೆ.' ಅವಳು ಹೇಳುತ್ತಿದ್ದ ಅರ್ಥವನ್ನು ಒಪ್ಪಲು ಅವರ ಬುದ್ಧಿಯೂ ನಿರಾಕರಿಸುತ್ತಿತ್ತು, ಒಪ್ಪಲು ಹೋದರೆ ಅಂತರಂಗದಲ್ಲಿ ತಳಮಳವಾಗುತ್ತಿತ್ತು.

ಕಳೆದ ಹತ್ತು ವರ್ಷಗಳಲ್ಲಿ ಅವರು ಮಾತಂಗಿಯನ್ನು ಹೆಚ್ಚು ಕಡಿಮೆ ಮರೆತೇಬಿಟ್ಟಿದ್ದಾರೆ. ಅವಳ ಹುಡುಗ ಹೊನ್ನೂರೇಶನನ್ನು ತುಮಕೂರಿನಲ್ಲಿ ಅವರ ಜಾತೀಯ ಹುಡುಗರಿಗೇ ಮಾಡಿರುವ ಹಾಸ್ಟೆಲಿನಲ್ಲಿ ಬಿಟ್ಟಿದ್ದಾರೆ. ಹುಡುಗ ಚೆನ್ನಾಗಿ ಓದುತ್ತಂತೆ. ಅವಳಿಗೆ ನಾಲ್ಕೆಕರೆ ಸ್ವಂತ ಭೂಮಿ ಇದೆ. ಮೂರಂಕಣದ ಮನೆ ಇದೆ. ಈಗ ಈ ಕಡೆಗೆ ಬೇರೆಯವರ ಭೂಮಿಯಲ್ಲಿ ಕೂಲಿ ಮಾಡಲು ಬರುವುದಿಲ್ಲ. ಹೀಗಾಗಿ ಅವಳನ್ನು ನೋಡದೆ ವರ್ಷಗಳೇ ಆಗಿವೆ. 'ಜೀವನದಲ್ಲಿ ಇಂಥವು ನಡೆಯುವವೇ. ಕಾಮತೃಷೆಯಾದಾಗ ಚಂಡಾಳಿಯೇ ಆಗಬಹುದು. ಋಷಿಮುನಿಗಳೇ ಹಾಗೆ ಮಾಡಿದ್ದಾರೆ. ಅನಂತರ ಸಿದ್ಧಿ ಪಡೆದು ಜಗದ್ವಂದ್ಯರಾಗಿದಾರ' ಎಂದುಕೊಂಡು ಅವರು ಆ ಘಟನೆಯನ್ನು ಮರೆಯತೊಡಗಿದರು.

ಆದರೆ ಈಗ ಸತ್ಯ ಮಾಡಿರುವ ಒಂದು ಕೆಲಸದಿಂದ ಅದು ಮತ್ತೆ ಅಂತರಂಗವನ್ನು ಕಲಕಲು ಮೊದಲು ಮಾಡಿದೆ. ಅಂದು ವೆಂಕಟೇಶನ ಮಗುವಿನ ನಾಮಕರಣ. ಸತ್ಯ ಬಂದಿರಲಿಲ್ಲ, ಬದಲಾಗಿ ಅವಳ ಪತ್ರ ಬಂದಿತ್ತು. ಬ್ರಾಹ್ಮಣರೆಲ್ಲ ಊಟಕ್ಕೆ ಕುಳಿತಿದ್ದರು. ಅಲ್ಲಿಯೇ ಕವರನ್ನು ಒಡೆದು ಓದಿದರು; ತನಗೆ ಬೆಂಗಳೂರಿನ ದೇಶಿಯ ಕಾಲೇಜಿನಲ್ಲಿ ಲೆಕ್ಚರರ್ ಕೆಲಸ ಸಿಕ್ಕಿದೆ, ಸೇರಿದ್ದೇನೆ—ಎಂಬ ತಾತ್ಪರ್ಯದ ಮೊದಲ ಪ್ಯಾರಾ ಓದಿ ಮನಸ್ಸಿಗೆ ಸಮಾಧಾನವಾಯಿತಾದರೂ ಇವಳ್ಯಾಕೆ ನೌಕರಿ ಮಾಡಬೇಕೆಂಬ ತುಸು ಅಸಮಾಧಾನವೂ ಉಂಟಾಯಿತು. ಎರಡನೆಯ ಪ್ಯಾರಾ ಓದುವಾಗ ಮನಸ್ಸಿಗೆ ಕಸಿವಿಸಿಯುಂಟಾಯಿತು. ಕಣ್ಣುಗಳನ್ನು ಓಡಿಸಿಕೊಂಡು ಹೋದರು. ಮಂತ್ರಿಯಾಗಿರುವ ಮೇಲಗಿರಿಗೌಡರ ಮಗ ಶ್ರೀನಿವಾಸ ಮತ್ತು ತಾನು ಮದುವೆಯಾಗಲು ನಿಷ್ಕರ್ಷಿಸಿರುವುದಾಗಿಯೂ ತಾವು ಆಶೀರ್ವದಿಸಬೇಕೆಂದೂ ಬರೆದಿದ್ದಳು.

ತಾವು ಯಾವುದನ್ನು ಕಲ್ಪಿಸಿಕೊಳ್ಳಲು ಸಹ ಅಸಮರ್ಥರಾಗಿದ್ದರೊ ಅಂಥದನ್ನು ತಮ್ಮ ಮಗಳು ನಿಶ್ಚಯಿಸಿದ್ದಾಳೆ. ಅದನ್ನು ನಂಬುವುದು ಒಂದು ನಿಮಿಷ ಕಷ್ಟವಾಯಿತು. ಆದರೆ ಮಗಳ ಹಟದ ಸ್ವಭಾವವನ್ನು ಅರಿತಿದ್ದುದರಿಂದ ಅದು ಅಪರಿಹಾರ್ಯ ಘಟನೆಯಾಗುತ್ತದೆಂದು ಅವರ ಅಂತಃಪ್ರಜ್ಞೆಯೇ ಹೇಳಿತು. ತಲೆ ಸುತ್ತಿ ಬಂದಂತೆ ಆಯಿತು.

'ಯಂಕ್‌ಟೇಶಾ, ಬಾ ಇಲ್ಲಿ ಒಂದಿಷ್ಟು' ಎಂದು ಯಜಮಾನರು ಹಿತ್ತಿಲ ಕಡೆಗೆ ಹೋದರು. ಅವರ ಮುಖವನ್ನು ನೋಡಿಯೇ ಗಾಬರಿಯಾದ ಮಗ ಹಿಂದೆ ಹಿಂದೆ ಬಂದ. ಅವರು ಕಾಗದವನ್ನು ಮಗನ ಕೈಲಿ ಕೊಟ್ಟರು. ಅವನು ಓದಿಕೊಳ್ಳುತ್ತಿದ್ದ : 'ಜಾತಿ ಕುಲಗಳ

ಬಗೆಗೆ ನನ್ನ ಅಭಿಪ್ರಾಯ ನಿಮಗೆ ಗೊತ್ತೇ ಇದೆ. ನೀವು ಮತ್ತು ಊರಿನ ಇತರರು,' ಇದನ್ನು ಅನೀತಿ ಎನ್ನಬಹುದು. ಆದರೆ ಇದು ಅತ್ಯಂತ ನೀತಿಯುತ ನಿರ್ಣಯ ಎಂದು ನನ್ನ ಶುದ್ಧ ನಂಬಿಕೆ....'

ತಂದೆ ಮಾತನಾಡಿದರು : 'ಬೆಂಗಳೂರಿಗೆ ಹೋಗಿ ಈ ಕತ್ತೆ ಲೌಡಿಗೆ ನಾಲ್ಕು ಒದ್ದು ಎಳಕೊಂಡು ಬಾ ಹೋಗು.'

'ಅಪ್ಪ, ಈಗ ನೀನು ತಾಳ್ಮೆ ತಂದುಕೊಳ್ಳದೆ ಇದ್ರೆ ನಮ್ಮ ಮರ್ಯಾದೆಯೇ ಹೋಗುತ್ತೆ.'

'ನಮ್ಮ ಮರ್ಯಾದೆ ಕಳೆಯೊಕ್ಕೆ ತಾನೆ ಈ ಮುಂಡೆ ಹುಟ್ಟಿರೋದು. ತಾಳ್ಮೆಯಂತೆ ಗೀಳ್ಮೆ' ಎಂದು ಅಲ್ಲಿದ್ದ ಬಿದಿರುದಡಿಯನ್ನು ಎಳೆದುಕೊಂಡರು. 'ಈ ಮುಂಡೆ ಹೀಗೆ ಮಾಡ್ತೀನಿ ಅಂತ ಬರೆದಿರುವಾಗ ಹ್ಯಾಗೆ ಸುಮ್ಮನಿರೂದು?'' ಎಂದು ಮಗನನ್ನು ಜಬರಿಸಿ ಕೇಳುವಾಗ ಅವರ ಕಣ್ಣಿನಲ್ಲಿ ನೀರು ಬಂದುಬಿಟ್ಟಿತು. 'ತಾಯಿ ಇಲ್ಲದ ಹುಡುಗಿ ಅಂತ ನಾನೇ ತಾಯಿಯಾಗಿ ಸಾಕಿದೆ. ಪಾಪಿ ಲೌಡಿ.....' ಎಂದು ಬಿಕ್ಕಿಬಿಕ್ಕಿ ಅಳಲು ಪ್ರಾರಂಭಿಸಿದರು.

ಮರುದಿನ ವೆಂಕಟರಮಣಯ್ಯನವರು ತಾವೇ ಬೆಂಗಳೂರಿಗೆ ಹೊರಟರು. ಬಸ್ಸಿನಲ್ಲಿ ಕುಳಿತಾಗ, ಮಗಳು ತನ್ನ ಕೈ ಬಿಟ್ಟಳು; ತಾನು ಒಂಟಿಯಾದೆ ಎಂಬ ಭಾವನೆ ಅವರ ಮನಸ್ಸನ್ನು ತುಂಬಿಬಿಟ್ಟಿತ್ತು. ಹೆಂಡತಿ ಸತ್ತಾಗ ಬಂದಿದ್ದ ಶೂನ್ಯ ಭಾವನೆಯು ಆಗಲೂ ಕವಿದಿತ್ತು.

ಆಕಸ್ಮಾತ್ ಅದೇ ಬಸ್ಸಿನಲ್ಲಿದ್ದ ಬೆಟ್ಟಯ್ಯನವರನ್ನು ಕರೆದುಕೊಂಡು ಬಸವನ ಗುಡಿಯಲ್ಲಿದ್ದ ಅವಳ ರೂಮಿಗೆ ಬಂದರು. ಒಳಗೆ ಬಂದದ್ದೇ ತಡ, ಅವಳ ಕಾಗದವನ್ನು ತೆಗೆದು ಮಂಚದ ಮೇಲೆ ಎಸೆದು ಕೇಳಿದರು :

'ಇದೇನು ಬರೆದಿರೂದು?'

ಅವಳು ಉತ್ತರ ಹೇಳಲಿಲ್ಲ. ಅವರಿಗೆ ಮುಖ ಕೊಡದೆ ಬೇರೆ ಕಡೆ ತಿರುಗಿ ನಿಂತಳು. 'ಇದೇನು ಬರೆದಿರೋದು ಬಗುಳೇ'— ಎಂದು ತಂದೆ ಧ್ವನಿ ಏರಿಸಿದರು.

'ಅಪ್ಪ, ಆಡೊ ಮಾತನ್ನು ಮೆಲ್ಲಗೆ ಆಡು, ಪಟ್ಟಣವಾಸದಲ್ಲಿ ಎಲ್ಲ ಹತ್ತಿರ ಹತ್ತಿರ ಮನೆಗಳು.'

'ನೀನು ಮಾಡೂ ಕೆಲ್ಸಕ್ಕೆ ಮರ್ಯಾದೆಯೊಂದು ಕೇಡು, ಹೊಲೆ ಮುಂಡೆ' ಎಂದು ಬಾಗಿ, ತಮ್ಮ ಎಕ್ಕಡವೊಂದನ್ನು ತೆಗೆದುಕೊಂಡು ಅವಳ ನೆತ್ತಿ, ಬೆನ್ನು, ಭುಜಗಳ ಮೇಲೆ ಎತ್ತಿ ಎತ್ತಿ ಬಾರಿಸಿಬಿಟ್ಟರು. ಹೊರಗೆ ನಿಂತಿದ್ದ ಬೆಟ್ಟಯ್ಯನವರಿಗೆ ಏನು ಮಾಡಲೂ ತೋಚದು. ಮಗಳು ಮಾತ್ರ ಸ್ವಲ್ಪವೂ ವಿರೋಧಿಸದೆ ತನ್ನನ್ನು ಪೂರ್ತಿಯಾಗಿ ಅವರ ಶಿಕ್ಷೆಗೆ ಸಮರ್ಪಿಸಿಕೊಂಡು ತಲೆಬಾಗಿ ನಿಂತಿದ್ದಳು. 'ಮಾತಾಡೇ' ಎಂದು ಅವರು ಅರಚಿದರೂ ತುಟಿ ಪಿಟಕ್ ಎನ್ನಲಿಲ್ಲ. ಅವಳ ಭುಜ ಬೆನ್ನುಗಳಲ್ಲಿ ಸಣ್ಣಗೆ ರಕ್ತ ಬಂದು ರವಿಕೆ ಮತ್ತು ಸೀರೆಯ ಸೆರಗು ನೆನೆಯುತ್ತಿತ್ತು. ವೆಂಕಟರಮಣಯ್ಯನವರು ಅಷ್ಟಕ್ಕೆ ನಿಲ್ಲಿಸದೆ ಆವೇಶ ಬಂದವರಂತೆ ಬಾಗಿ ಇನ್ನೊಂದು ಎಕ್ಕಡವನ್ನೂ ಕೈಗೆ ತೆಗೆದುಕೊಂಡು ಎರಡೂ ಕೈಗಳಿಂದ ಹುಯ್ಯಲು ಪ್ರಾರಂಭಿಸಿದರು. ಮಗಳ ಭುಜದಿಂದ ಈಗ ಇನ್ನೂ ಹೆಚ್ಚು ರಕ್ತ ಹನಿಯಲು ಪ್ರಾರಂಭವಾಯಿತು.

ಅಷ್ಟರಲ್ಲಿ ಮಹಡಿಯ ಮೇಲಿದ್ದ ಸಂಸಾರದ ಹೆಂಗಸು ಓಡಿ ಬಂದಳು. ಬೆಟ್ಟಯ್ಯನವರೇ, 'ಅಮ್ಮಾ ಒಳಗೆ ಹೋಗಿ ಹಸಿ ಬಿಡಿಸ್ಕಳಿ' ಎಂದು ಆಕೆಗೆ ಅಂಗಲಾಚಿದರು. ಬಿಡಿಸಿಕೊಳ್ಳದಿದ್ದರ ಈ ಹುಡುಗಿ ಉಳಿಯುವುದಿಲ್ಲವೆಂಬ ಭಯ ಅವರಿಗೆ. ಆದರೆ ಅಷ್ಟರಲ್ಲಿ ವೆಂಕಟರಮಯ್ಯನವರೇ ಇದ್ದಕ್ಕಿದ್ದ ಹಾಗೆ ಕೆಳಗೆ ಬಿದ್ದು ಬಿಟ್ಟರು. ಅವರ ಹೊಡೆತಕ್ಕೆ ಬೆನ್ನು ಕೊಟ್ಟು ನಿಂತಿದ್ದ ಸತ್ಯಳಿಗೆ ಅದು ತಿಳಿದಿರಲಿಲ್ಲ. ಬೆಟ್ಟಯ್ಯನವರೇ, 'ಅಯ್ಯಾರು ಗ್ಯಾನ ತಪ್ಪಿ ಬಿದ್ದವ್ರೆ ನೋಡವ್ವ' ಎಂದಾಗ ತಿರುಗಿ ನೋಡಿದಳು. ಪ್ರಾಣ ಹೋದಂತೆ ಅವರು ಬಿದ್ದಿದ್ದಾರೆ. ಎರಡು ಕಾಲೂ ಒಂದೊಂದು ಕಡೆಗೆ ಚಾಚಿವೆ. ಬಲಗೈ ಮಂಚದ ಕೆಳಗೆ ಹೋಗಿದೆ. ಮುಖವೆಲ್ಲ ಬೆವೆತು, ಹನಿಗಳು ಹಣೆ, ಕೆನ್ನೆ, ಮೂಗುಗಳ ಮೇಲೆ ಕೂಡಿ ನಿಂತಿವೆ.

ಸತ್ಯ ಗಾಜಿನ ಜಾಡಿಯಲ್ಲಿದ್ದ ನೀರನ್ನು ತೆಗೆದುಕೊಂಡು ಬೇಗ ಅವರ ತಲೆಗೆ ತಟ್ಟಿದಳು. ಗಾಳಿ ಹಾಕತೊಡಗಿದಳು. ಇನ್ನೊಂದು ಸಲ ನೀರು ತಟ್ಟಿ, ಅವರ ತಲೆಯನ್ನು ತನ್ನ ತೊಡೆಯ ಮೇಲಿಟ್ಟುಕೊಂಡಳು. 'ಬೆಟ್ಟಯ್ನೋರೆ, ಇವರು ಬೇಕಾದರೆ ಮತ್ತೆ ಸ್ನಾನ ಮಾಡ್ತಾರೆ. ನೀವು ಒಳಗೆ ಬನ್ನಿ ಗಾಳಿ ಹಾಕಿ' ಎಂದಳು.

ತುಸು ಹೊತ್ತಿನಲ್ಲಿಯೇ ಯಜಮಾನರಿಗೆ ಪ್ರಜ್ಞೆ ತಿಳಿಯಿತು. ಕಣ್ಣು ಬಿಟ್ಟರು. ಎದ್ದು ಗೋಡೆಯನ್ನೊರಗಿ ಮಂಚದ ಮೇಲೆ ಕುಳಿತರು. ಅವರ ಕೋಪ ಎಳ್ಳಷ್ಟೂ ಆರಿರಲಿಲ್ಲ.

'ಅದೇನು ಮಾತನಾಡೇ.'

'ನಾನು ಎಲ್ಲಾನೂ ಕಾಗದದಲ್ಲಿ ಬರೆದಿದ್ದೇನೆ.'

'ನೀನೊಬ್ಬೇ ಅಲ್ಲ ಬರವಣಿಗೆ ಕಂಡಿರೋಳು. ನನ್ನೆದುರಿಗೆ ಬಾಯಿ ಬಿಟ್ಟು ಬಗುಳು.'

'ಕಾಗದದಲ್ಲಿ ಬರದಿರೋದ ಮತ್ತೆ ನನ್ನ ಬಾಯಲ್ಲಿ ಹೇಳಿಸಬೇಕು ಅಂತ ನೀವು ಹಟ ಮಾಡಿದ್ರೆ ಹೇಳ್ತೀನಿ ಕೇಳಿ. ನನಗೆ ಜಾತಿಮತದಲ್ಲಿ ನಂಬಿಕೆ ಇಲ್ಲ. ಶ್ರೀನಿವಾಸ ನನ್ನ ಮಾಡ್ಕಂಡ್ರೆ ತಪ್ಪಿಲ್ಲ.'

'ಜಾತಿಮತ ಸುಳ್ಳೆ? ಧರ್ಮ ಸುಳ್ಳೆ?'

'ಧರ್ಮ ಸುಳ್ಳು ಅಂತ ಯಾರೂ ಅನ್ನುಕ್ಕಾಗುಲ್ಲ. ಆದರೆ ಜಾತಿ ಮತ ಅಧರ್ಮ, ಅದು ಸುಳ್ಳು.'

'ಜಾತಿ ಮತ ಸುಳ್ಳೆ? ನಾನು ಬ್ರಾಹ್ಮಣನಾಗಿರೂದು, ನೀನು ನನ್ನ ಹೊಟ್ಟೇಲಿ ಹುಟ್ಟಿದ್ದು, ಆ ಚಾಂಡಾಲ ಶೂದ್ರನಾಗಿರೂದು ಸುಳ್ಳೆ? ತಿರುಮಲೇ ಗೌಡ ಅಂತ ಅವನ ಹುಟ್ಟು ಹೆಸರು. ಶ್ರೀನಿವಾಸಮೂರ್ತಿ ಅಂತಲೋ ಶ್ರೀನಿವಾಸರಾವ್ ಅಂತಲೋ ಹೆಸರು ಬದಲಾಯಿಸ್ಕಂಡ್ರೆ ಅವನು ಬ್ರಾಹ್ಮಣನಾಗ್ತಾನೆಯೆ?'

'ನಿಮ್ಮ ಕಷ್ಟ ನನಗೆ ಅರ್ಥವಾಗುತ್ತೆ. ತುಂಬ ದಿನದಿಂದ ಪದ್ಧತಿ ಬೆಳೆದು ಬಂದಿದೆ. ಮಧ್ಯ ಯಾರೇ ಮುರಿಯಲಿ, ಮುರಿದೋರಿಗೂ ಕಷ್ಟವಾಗುತ್ತೆ, ಉಳಿದೋರಿಗೂ ಆಗುತ್ತೆ. ಒಂದು ಸಲ ಕಷ್ಟ ಅನುಭವಿಸುಕ್ಕೆ ಯಾರೂ ತಯಾರಿಲ್ಲದಿದ್ರೆ ರೂಢಿ ಮುರಿಯೂದು ಹ್ಯಾಗೆ? ನೀವು ಯಾವುದನ್ನ ಧರ್ಮ ಅಂತೀರೊ ಅದೆಲ್ಲ ರೂಢಿ. ಈ ವ್ಯತ್ಯಾಸದ ಮೂಲತತ್ವ ಯಾವುದು? ಜನಾಂಗವೇ, ಬಣ್ಣವೇ, ರೂಪಲಕ್ಷಣವೇ? ನೋಡಿ, ಬೆಟ್ಟಯ್ಯನೋರ ಬಣ್ಣ ಕಪ್ಪು. ನಿಮ್ಮ

ಬಣ್ಣವೂ ಕಪ್ಪು. ನನ್ನ ಬಣ್ಣ ನೋಡಿ. ನಾನು ಕಪ್ಪಗಿದೀನಿ. ಇವರ ಮಗಳಿದಾಳಲ್ಲ ಅವಳ ಹೆಸರೇನು?'—ಎಂದು ಬೆಟ್ಟಯ್ಯನವರ ಕಡೆ ತಿರುಗಿದಳು.

ಅವರು, 'ಮೀರಾ' ಎಂದರು.

'ಹೂಂ. ಮೀರಾ. ಅವಳಿಗೂ ನನಗೂ ಬಣ್ಣ ರೂಪ, ನಿಲುವಿನಲ್ಲಿ ವ್ಯತ್ಯಾಸವಿಲ್ಲ' ಎಂದು ಏನೋ ಜ್ಞಾಪಿಸಿಕೊಂಡು ಹೇಳಿದಳು : 'ಬೆಟ್ಟಯ್ಯನೋರ ಕೇರೀಲೇ ಇದಾಳಲ್ಲ ಮಾತಂಗಿ. ನಿಮ್ಮ ಕೇರೀಲೇ ಒಬ್ಬರಿಗೆ ಕೊಟ್ಟು ಚಿಕ್ಕ ವಯಸ್ಸಿನಲ್ಲೇ ಗಂಡ ಸತ್ತು ಹೋಗಿದ್ದ. ಅವಳು ಒಂದು ದಿನ.....'

'ನಿಂಗೆ ಇನ್ನೊಂದು ಸಲ ಯಕ್ಕಡ ತಗಂಡು ಹೊಡಿಬೇಕೇನು?' ಎಂದು ತಂದೆ ನಡುವೆಯೇ ಕೋಪದಿಂದ ಕೇಳಿದರು. 'ನಿನ್ನ ಭಾಷಣ ಬೆಳುಸ್ತಾ ಇದೀಯ. ನಮ್ಮೆಲ್ಲರ ಬಣ್ಣವೂ ಕಪ್ಪು, ನಿಜ. ಕಸ್ತೂರಿಯೂ ಕಪ್ಪು, ಇದ್ದಿಲೂ ಕಪ್ಪು, ಇದ್ದಿಲು ಕಸ್ತೂರಿಯಾಗುತ್ತೆಯೆ?'

'ಸ್ವಾಮಿಗಳಿಗೆ ಹೊಟ್ಟೆ ಹಸೀದೈತೆ, ಸಿಟ್ಟು ಬತ್ತದೆ. ಮಡಿಗ ನೀರು ಕೊಟ್ಟು ಅವರಿಗ ಏನಾದರೂ ಊಟಕ್ಕೆ ಮಾಡ್ಸಿ, ನಾನು ಹೋಯ್ತೀನಿ' ಎಂದು ಬೆಟ್ಟಯ್ಯನವರು ಎದ್ದರು.

ಸತ್ಯ ಹೇಳಿದಳು, 'ಏಳಬೇಡಿ ಕೂತ್ಕಳಿ, ಈ ವಿಷಯ ಎಷ್ಟು ಆಡಿದ್ರೂ ಹತ್ತುಲ್ಲ, ಹರಿಯುಲ್ಲ, ನನ್ನ ವಿಚಾರ ತಿಳ್‌ಕುಳುಕ್ಕೆ ಅವರು ಪ್ರಯತ್ನಾನೇ ಮಾಡುಲ್ಲ. ನಾನು ಹೇಳ್ತಿದ್ದೇನಲ್ಲ, ನನಗೆ ಎಂಟು ವರ್ಷವಾಗಿತ್ತು, ಒಂದು ದಿನ ಸಂಜೆ ತೋಟಕ್ಕೆ ಹೋಗಿದ್ದೆ—ಅಪ್ಪನ್ ಹುಡಿಕ್‌ಕಂಡು ಅಪ್ಪ ಇರ್‌ಲಿಲ್ಲ. ಮಾತಂಗಿ ನಮ್ಮ ತೋಟದಲ್ಲಿ ಸೋಗೆ ಕುರುಂಬಾಳೆ ಕಟ್ಟಿಕತಿದ್ಲು. ನನ್ನ ಮಾತಾಡಿಸಿದ್ಲು. ಮಾದಿಗರು ಅಂತ ಗೊತ್ತಿದ್ರೂ ನಾನು ಹತ್ರ ಹೋದೆ ಅವಳದ್ದು. ಮೊದಲಿನಿಂದ ಕ್ಲೀನು'.

'ಹೌದವ್ವ. ಅವಳು ಈಗ್ಲೂ ದಿನಾ ಮಡಿ ಉಟ್ಕಂತಳೆ.'

'ನಾನು ಅವಳ ಹತ್ತಿರ ನಿಂತಿದ್ದೆ. ಅದೇ ಅದೇ ದಾರೀಲಿ ಬತ್ತಿದ್ದ ಯಾವುದೋ ಊರಿನವರು, ಅವಳೇ ತೋಟದ ಯಜಮಾಂತಿ ಅಂತ ತಿಳ್‌ಕಂಡು ಕುಡಿಯುಕ್ಕೆ ಎಳ ನೀರು ಕೇಳಿದರು. ತಾನು ಯಜಮಾಂತಿಯಲ್ಲ ಅಂತ ಅವಳು ಹೇಳಿದರೆ ಕೇಳಲೇ ಇಲ್ಲ, ಕೊನೆಗೆ ನನ್ನ ತೋರಿಸಿ, 'ಏನವ್ವಾ, ನಿಮ್ಮ ಮಗಳೇ?' ಅಂತ ಕೇಳಿದರು. 'ಅಲ್ಲ, ತ್ವಾಟದ ಯಜಮಾನರ ಮಗಳು' ಅಂದ್‌ಳು. ಆದರೆ ಅವರು, 'ಎಳ್ನೀರು ಕೊಟ್ರೆ ಖರ್ಚಾಯ್ತದೆ ಅನ್ನೂ ಹಂಗಿದ್ರೆ ಇಲ್ಲ ಅನ್ನವ್ವ. ಹೊಟ್ಟೇಲಿ ಹುಟ್ಟಿದ ಮಗಳನ್ನ ಯಾಕೆ ಅಲ್ಲ ಅಂತೀಯ?' ಅಂದು ಮುಂದೆ ಹೋದರು. ನಾನು ಹೋದ ಸಲ ಊರಿಗೆ ಹೋದಾಗ ಕೆರೆ ಏರಿ ಮೇಲೆ ಅವಳನ್ನ ನೋಡಿದೆ. ಈ ಮಾತು ಜ್ಞಾಪಕಕ್ಕೆ ಬಂತು. ಯಾಕಂದ್ರೆ ಅವಳ ಮುಖ, ಮೂಗು, ಬಣ್ಣ ಎಲ್ಲ ನನ್ನ ಹಾಗೇ ಇದೆ. ನಾನು ಹ್ಯಾಗೆ ಬ್ರಾಹ್ಮಣಿತಿಯಾದೆ? ಅವಳು ಹ್ಯಾಗೆ ಮಾದಿಗಿತ್ತಿಯಾದಳು? ಹಿಂದುಸ್ಥಾನದಲ್ಲಿರೂ ಒಂದೊಂದು ಪ್ರದೇಶದ ಜನರನ್ನೂ ನೋಡಿ, ಜಾತಿಯ ವ್ಯತ್ಯಾಸ ಕಾಣೂದೇ ಇಲ್ಲ, ಒಂದೇ ಚಹರೆ ಇರತ್ತೆ.'

ಇವೆಲ್ಲ ಬೆಟ್ಟಯ್ಯನವರು ಕೇಳದ ಮಾತಲ್ಲ. ಆದರೆ ಮೊದಲ ದರ್ಜೆಯಲ್ಲಿ ಎಂ.ಎ. ಪಾಸು ಮಾಡಿರುವ ಈ ಬ್ರಾಹ್ಮಣ ಹುಡುಗಿಯು ಗ್ರಾಮದೇವರ ಅರ್ಚಕರಾದ ತನ್ನ

ತಂದೆಯೊಡನೆ ಆಡುತ್ತಿರುವುದನ್ನು ಕೇಳಿ ಅವರಿಗೆ ಆಶ್ಚರ್ಯವೂ ಆಯಿತು, ಸಂತೋಷವೂ ಆಯಿತು. ಅವಳ ತಂದೆ ಮಾತ್ರ ಮೌನವಾಗಿದ್ದರು. ಇದುವರೆಗೂ ಉರಿಯುತ್ತಿದ್ದ ಸಿಟ್ಟು ಈಗ ಮುಖದಲ್ಲಿ ಕಡಿಮೆಯಾದಂತೆ ಕಾಣುತ್ತಿತ್ತು.

ಐದು ನಿಮಿಷದ ನಂತರ ಸತ್ಯವೇ ಮಾತಾಡಿದಳು. 'ವ್ಯತ್ಯಾಸವೆಲ್ಲ ಸುಳ್ಳು ಅಂತ ವೇದಾಂತವೂ ಹೇಳುತ್ತೆ. ದಾಸರೆಲ್ಲ ಅದನ್ನೇ ಅಂದ್‌ರು. ನಮ್ಮ ನಮ್ಮ ಅಂತರಂಗವೇ ನಿಜ ನುಡಿಯುತ್ತೆ, ನಮ್ಮ ನಮ್ಮ ಅನುಭವವೇ ದಿಕ್ಕು ತೋರಿಸುತ್ತೆ. ಆದರೆ ರೂಢಿ ಅಂತರಂಗಾನ ಮುಚ್ಚಿ ಹಾಕುತ್ತೆ. ಅನುಭವದ ಅರ್ಥವನ್ನು ಕೈತಪ್ಪಿಸುತ್ತೆ. ಧೈರ್ಯವಿದ್ದೋರು ರೂಢೀನ ಗೆಲ್ತಾರೆ, ಗೆದ್ದು ಬದುಕ್ತಾರೆ. ಹೇಡಿಗಳು ಮನಸ್ಸಿನ ಮೇಲೆ ಮಣ್ಣು ಮುಚ್ಚಿಕೊಂಡು ಮಣ್ಣು ಹುಳುವಿನ ಹಾಗೆ ಜೀವನ ಮಾಡ್ತಾರೆ. ಹೋಗಲಿ ಅಪ್ಪಾ. ನನಗೆ ತಿಳಿದ ಹಾಗೆ ನಾನು ಮಾಡೋಳೇ. ನನ್ನ ಹೊಡೆದದ್ದಕ್ಕೆ ನೊಂದುಕೋಬ್ಯಾಡ. ನನ್ನ ಹೊಡೆಯುಕ್ಕೆ ನೀನಲ್ಲದೆ ಮತ್ತೆ ಯಾರು ಬಾಧ್ಯರು?'

ಕೊನೆಯ ಮಾತನ್ನು ಹೇಳುವಾಗ ಅವಳ ಕಣ್ಣು ಹನಿಗೂಡಿತು. ಅದನ್ನು ಕಟ್ಟಬೇಕೆಂದು ಎಷ್ಟು ಪ್ರಯತ್ನಪಟ್ಟರೂ ಸಾಧ್ಯವಾಗಲಿಲ್ಲ. ರಕ್ತದ ಕಲೆಗಳಿಂದ ಕೂಡಿದ ಸೀರೆಯ ಸೆರಗನ್ನು ಕಣ್ಣಿಗೆ ಕಟ್ಟಿಕೊಂಡಳು.

'ಅಪ್ಪಾ, ನೀವೆದ್ದು ಆಸ್ಪತ್ರೆಗೂ ಶಾಪಿಗೊ ಹ್ವಾಗಿ ಗಾಯಕ್ಕೆ ಔಸ್ದ ಆಕಸ್ಕಳಿ. ಗಾಯ ಕೀತ್ ಗೀತ್ ಕಂಡಾತು'— ಬೆಟ್ಟಯ್ಯನವರೆಂದರು.

'ಇದು ಪಟಿನಿಂದಲೇ ಆದ ಗಾಯ ಅಂತ ತಕ್ಷಣ ಗೊತ್ತಾಗುತ್ತೆ. ಯ್ಯಾರು ಹೊಡೆದರು ಅಂತ ಕೇಳಿದರೆ ನಮ್ಮಪ್ಪ ಅಂತ ಹೇಳಲೆ? ಇಷ್ಟು ಪ್ರೀತಿಯಿಂದ ಸಾಕಿದ ನಮ್ಮಪ್ಪ ಇವತ್ತೊಂದು ದಿನ ಸಿಟ್ಟಿನಲ್ಲಿ ಹೊಡೆದಿದ್ದಾರೆ. ನಾನು ಯಾವ ಡಾಕ್ಟರ ಹತ್ತಿರಕ್ಕೂ ಹೋಗುಲ್ಲ. ಅದೇ ವಾಸಿಯಾಗುತ್ತೆ' ಎಂದಳು.

ಮತ್ತೆ ಮೌನ ಬಿಸಿಯೇರಿತು. ಗಂಭೀರವಾಗಿ ಅಂತರ್ಮುಖಿಯಾಗಿ ಕುಳಿತಿದ್ದ ತಂದೆ ಇದ್ದಕ್ಕಿದ್ದ ಹಾಗೆ ಮೇಲೆ ಎದ್ದು, 'ಎಷ್ಟೊತ್ತಾಯ್ತೋ ಏನೋ. ಬೆಟ್ಟಯ್ಯಾ, ನನ್ನ ಮೋಟಾರ್ ಸ್ಟ್ಯಾಂಡಿಗೆ ತಲುಪಿಸಿ ಬಿಟ್ಟು ಹೋಗಪ್ಪ' ಎನ್ನುತ್ತ ತಮ್ಮ ಚೀಲವನ್ನು ಕೈಲಿ ಹಿಡಿದು ದಾಪುಗಾಲು ಹಾಕಿ ಹೊಸಲನ್ನು ದಾಟಿಬಿಟ್ಟರು.

☆ ☆ ☆ ☆

ಮಗಳನ್ನು ಎಕ್ಕಡದಲ್ಲಿ ಹೊಡೆದು ಬಂದ ನಂತರವೂ ವೆಂಕಟರಮಣಯ್ಯನವರ ಕೋಪ ಆರಲಿಲ್ಲ. ಈ ಅಪಮಾನ ಊರಿನಲ್ಲಿ ಹಬ್ಬುವ ಮೊದಲೇ ಅವಳು ಏನಾದರೂ ರೋಗ ಬಂದು ಸತ್ತಿದ್ದರೆ ಚೆನ್ನಾಗಿತ್ತು ಎಂದುಕೊಳ್ಳುತ್ತಿದ್ದರು. ಈ ಮದುವೆ ಹೇಗಾದರೂ ತಪ್ಪಲಿ ಎಂದು ದಿನವೂ ಪೂಜೆ ಮಾಡುವಾಗ ತಿರುಮಲಸ್ವಾಮಿಯನ್ನು ಅನನ್ಯ ಭಕ್ತಿಯಿಂದ ಬೇಡಿಕೊಳ್ಳುತ್ತಿದ್ದರು. ಕೋಪ, ಅಪಮಾನ ಮತ್ತು ನಿಸ್ಸಹಾಯಕತೆಗೆ ಸಿಕ್ಕಿ ಅವರಿಗೆ ಊಟದಲ್ಲಿ ರುಚಿ ಹೊರಟುಹೋಗಿತ್ತು, ರಾತ್ರಿಯ ನಿದ್ರೆ ಹಾರಿಹೋಗಿತ್ತು.

ಅವರ ಪ್ರಾರ್ಥನೆ ಹದಿನೈದು ಹದಿನೆಂಟು ದಿನಗಳಲ್ಲೇ ನೆರವೇರಿತು. ಅವಳನ್ನು ಮದುವೆಯಾಗುವುದಿಲ್ಲವೆಂದು ತಿರುಮಲೇಶನು ತನ್ನ ಅಜ್ಜ ಮತ್ತು ತಾಯಿಯ ಕೈ ಮುಟ್ಟಿದನಂತೆ. ಈ ಖಚಿತ ಸುದ್ದಿಯನ್ನು ವೆಂಕಟೇಶನೇ ತಂದಿದ್ದ. ಇನ್ನು ರಾತ್ರಿ ನಿಶ್ಚಿಂತೆಯಿಂದ ನಿದ್ದೆ ಮಾಡಬಹುದು. ಆದರೆ ಅವರಿಗೆ ಆ ರಾತ್ರಿಯೂ ಕಣ್ಣು ಹೊತ್ತಲಿಲ್ಲ. 'ಬುದ್ಧಿವಂತೆಯಾಗಲಿ ಅಂತ ಸ್ಕೂಲಿಗೆ ಕಳಿಸಿದೆ. ಫಸ್ಟ್ ಕ್ಲಾಸಿನಲ್ಲಿ ಪಾಸು ಮಾಡಿತು, ಹೆಡ್ಮಾಸ್ತರೇ ಹೇಳಿದರು ಅಂತ ಕಾಲೇಜಿಗೆ ಕಳಿಸಿದೆ. ಇದು ವಿದ್ಯಾ ಕಲೀತು. ಏನು ಸಾರ್ಥಕ? ಜಾತಿ ಮತ ಸುಳ್ಳು. ಮೊದಲು ಹಾಗಿತ್ತು ಆಮೇಲೆ ಹೀಗಾಯ್ತು, ಭಗವದ್ಗೀತೇಲಿ ಹೇಳಿರೂ ಅರ್ಥ ಬೇರೆಯೇ ಇದೆ– ಅಂತ ರಜದಲ್ಲಿ ಬಂದಾಗ ನನ್ನ ಕೈಲೇ ವಾದ ಮಾಡ್ತಿತ್ತು. ಏನೋ ಹೆಣ್ಣು ಹುಡುಗಿ, ಮಾತಾಡ್ಕಳಿ ಅಂತ ಸುಮ್ಮನಿದ್ದೆ. ಕೊಂಬೆ ಬೆಳೆದು, ಕೊಡಲಿ ಕಾವಾಗಿ ಬುಡಕ್ಕೇ ಮೃತ್ಯುವಾಯ್ತು.'

ನಾಲ್ಕಾರು ದಿನಗಳಲ್ಲಿ ಅವರು ನಿರೀಕ್ಷಿಸಿದ ಹಾಗೆಯೇ ಊರಿನವರು ಮಾತಾಡಿಕೊಳ್ಳಲು ಶುರು ಮಾಡಿದರು 'ಎಂಜಲಾಸೆಗೆ ಹೋದ ಇದೇ ಕೆಟ್ಟಿತು,' ಎಂಬ ಮಾತು ವೆಂಕಟೇಶನ ಕಿವಿಗೆ ಬಿದ್ದು ಅವನು ದಿನಾ ತಂದು ಹೇಳುತ್ತಿದ್ದ. ಅದನ್ನು ಕೇಳಿ ಕೇಳಿ ಅವರಿಗೆ ಶ್ರೀನಿವಾಸನ ಮೇಲೆ ಕೋಪ ಬಂತು. ಎರಡೂ ಕೈ ಸೇರಿದರ ಚಪ್ಪಾಳೆ. ಇವನು ಜೊತ ಸೇರಿ ಗದ್ದಲಾನೂ ಮಾಡಿಸಿದ. ಈಗ ಪೆಟ್ಟಿಗೆ ಸಿಕ್ಕದೆ ತಪ್ಪಿಸಿಕೊಂಡು ಬಿಟ್ಟ. ಏಟಿಗೆ ಗುರಿಯಾದದ್ದು ಇದೇ. ಇದಕ್ಕೆ ಅಗಾಧ ಬುದ್ಧಿ ಇದೆ. ದಪ್ಪ ದಪ್ಪ ಪುಸ್ತಕ ಓದಿದೆ. ಇಷ್ಟೆಲ್ಲ ಆದರೂ ಈ ಹುಚ್ಚು ಯಾಕೆ ಬಂತು? ತಮ್ಮಿಂದ ಏಟು ತಿಂದ ಮೇಲೂ ಸಮಾಧಾನವಾಗಿಯೇ ಹೇಳಿತು. ಜಾತಿ ಮತ ವ್ಯತ್ಯಾಸವೆಲ್ಲ ಸುಳ್ಳು ಅಂತ ಎಲ್ಲ ವೇದಾಂತವೂ ಹೇಳುತ್ತೆ, ಅಂದಳಲ್ಲ. ಇನ್ನೊಂದು ಹೇಳಿದಳಲ್ಲ– ಯಾರೋ ಪರ ಊರಿನವರು ಇವಳನ್ನೂ ಮಾತಂಗಿಯನ್ನೂ ಜೊತೆಯಾಗಿ ನೋಡಿ ತಾಯಿ–ಮಗಳು ಅಂತ ತಿಳ್ಕಂಡ್ರಂತೆ....

ಈ ಯೋಚನೆ ಬಂದಂದಿನಿಂದ ಅವರ ಅಂತರಂಗವು ಕದಡಿತು. ಮಾತಂಗಿಯ ನೆನಪೇ ತುಂಬಿಕೊಂಡು, ಮಗಳು ಈಗ ಮಾಡಿರುವ ಹಲ್ಲಂಡೆ ಮರೆಗೆ ಸರಿಯಿತು. ಮಾತಂಗಿಯ ನೆನಪು ವಿವರ ವಿವರವಾಗಿ ಬರಲು ಆರಂಭವಾಯಿತು! ರಾತ್ರಿ ಮಲಗಿದಾಗ, ಸ್ನಾನ ಮಾಡುವಾಗ, ಯಜ್ಞೋಪವೀತದ ಬ್ರಹ್ಮ ಗಂಟನ್ನು ಕೈಲಿ ಹಿಡಿದು ಓಂ ತತ್ ಸವಿತ್ರ ವರೇಣ್ಯಂ ಹೇಳುವಾಗ, ದೇವಸ್ಥಾನಕ್ಕೆ ಹೋಗಿ ಪೂಜೆ ಮಾಡಿ ಮಂಗಳಾರತಿ ಹಲಗೆಯನ್ನು ಎತ್ತಿ ದೇವರ ಮುಖಕ್ಕೆ ಹಿಡಿಯುವಾಗ.

ಮಗಳು ಮತ್ತು ತಿರುಮಲೇಶನ ವಿಷಯದಲ್ಲಿ ಜನರಲ್ಲೆಲ್ಲ ಗುಲ್ಲೋ ಗುಲ್ಲು. ತಮ್ಮ ವಂಶ. ಮನೆ, ಜಾತಿಯ ಮರ್ಯಾದೆ ಹೋದದ್ದಕ್ಕೆ ಅವರು ಹಿಂಡಿ ಹೋಗಿದ್ದಾರೆ. ಯಾರ ಕೈಲೂ ಮಾತನಾಡುವುದಿಲ್ಲ, ತೋಟಕ್ಕೂ ಹೋಗುವುದಿಲ್ಲ, ತಮ್ಮಲ್ಲಿ ತಾವೇ ಹಲುಬುತ್ತಾ ಮನೆಯಲ್ಲಿರುತ್ತಾರೆ. ರಾತ್ರಿಯ ನೀರವತೆಯಲ್ಲಿ ಈ ಮನೆಗ ಅಪರೂಪವಾಗಿದ್ದ ಚಿಕ್ಕ ಮೊಮ್ಮಗುವನ್ನು ಸಹ ಎತ್ತಿ ಮಾತನಾಡಿಸಲು ಹೋಗುತ್ತಿಲ್ಲ. ಬೆಳಿಗ್ಗೆ ಎದ್ದು ಸ್ನಾನ ಮಾಡಿ ದೇವಸ್ಥಾನದ ಪೂಜೆಗೆ ಹೋಗುತ್ತಾರೆ.

ಒಂದು ದಿನ ಗರ್ಭಗುಡಿಯಲ್ಲಿ ನಿಂತು ಮಂತ್ರ ಹೇಳಿಕೊಂಡು ದೇವರ ಪಾದಕ್ಕೆ ಒಂದಾದ ಮೇಲೆ ಒಂದರಂತೆ ಹೂವು ಹಾಕುತ್ತಿದ್ದರು. ಯಾರೋ ಇಬ್ಬರು ಬಂದಂತಾಯಿತು. ಅವರ ಕಡೆಗೆ ಗಮನ ಕೊಡದೆ ಪೂಜೆ ಮಾಡುತ್ತಿದ್ದರು. ತಾ. ತಂದಿದ್ದ ಬಾಳೆ ಹಣ್ಣುಗಳ ತೊಟ್ಟು ಮುರಿದು ಮಂಗಳಾರತಿ ಹಚ್ಚುವಾಗ, 'ನಮ್ಮ ಹಣ್ಣು ಕಾಯಿನೂ ಮಾಡಿ' ಎಂಬ ಹೆಂಗಸಿನ ಧ್ವನಿಯಾಯಿತು. ತಿರುಗಿ ನೋಡಿದರೆ ಮಂತ್ರಿ ಮೇಲಗಿರಿಗೌಡರ ಹೆಂಡತಿ ರಂಗಮ್ಮ ಮತ್ತು ಮಗ ತಿರಮಲೇಶ. ಅವರು ಹಣ್ಣುಕಾಯಿಗಳನ್ನು ಮಾಡಿ ಕೊಟ್ಟರು. ಆದರೆ ಮಾತನಾಡಿಸಲಿಲ್ಲ. ಮಂಗಳಾರತಿ ಹಚ್ಚಿ ಎಡಗೈಲಿ ಎಂಟೆ ಬಾರಿಸತೊಡಗಿದರು. ಮಂಗಳಾರತಿ ಮಾಡುವಾಗ ಅವರು ದೇವರು ಮುಖವನ್ನು ನೋಡಿ ಹತ್ತು ಹನ್ನೆರಡು ವರ್ಷದ ಮೇಲೆ ಆಗಿದೆ. ಆ ದಿನ ಅನ್ಯಮನಸ್ಕರಾಗಿ ತಲೆ ಎತ್ತಿ ಆ ಕಡೆ ನೋಡಿದರು. ಎದ್ದು ಕಾಣುವ ಜರಿಯ ಪಂಚೆ ಹೊಳೆಯುವ ಭುಜಕೀರ್ತಿ, ಎದೆಯ ಮೇಲೆ ಇಳಿ ಬಿದ್ದಿರುವ ಮೂರು ಹಾರಗಳು. ಕಪ್ಪು ಮುಖದ ಕಣ್ಣುಗಳನ್ನು ಥಳಥಳನೆ ಮುಚ್ಚಿರುವ ಬೆಳ್ಳಿಯ ಕಟ್ಟುಗಳು. ಹಣೆಯ ಮೇಲೆ ಹೊಳೆಯುವ ನಾಮ. ಕಣ್ಣು ಕೊರೆಸುವಂತಹ ಕೆಂಪು, ಬಿಳುಪು, ನೀಲಿ, ಹಸರು, ಹಳದಿ ಮಣಿಗಳ ಕಿರೀಟ. ಮುಖದ ಹತ್ತಿರ ಬಂದ ಮಂಗಳಾರತಿ ಹಾಗೆಯೇ ನಿಂತಿತು. ಅವರ ಕಣ್ಣು ದೇವರ ಮುಖದಲ್ಲಿ ನೆಟ್ಟಿತು. ಗಂಟೆ ಮಾತ್ರ ಒಂದೇ ಲಯದಲ್ಲಿ ನಿಂತಂತ ನುಡಿಯುತ್ತಿತ್ತು. ನಿಂತ ಮಂಗಳಾರತಿ ನಿಂತಲ್ಲಿಯೇ ಇತ್ತು. ಅವರ ಧ್ಯಾನವು ದೇವರ ಮುಖದಲ್ಲಿ ನೆಟ್ಟು, ತಾನೂ ಧ್ಯಾನದಿಂದ ಬದ್ಧವಾದಂತೆ ಬಲಗೈಯು ಮಂಗಳಾರತಿಯ ಹಲಗೆಯನ್ನು ಚಲಿಸದೆ ಹಿಡಿದುಬಿಟ್ಟಿತ್ತು. ನೋಡು ನೋಡುತ್ತಾ ಅವರು ಕಣ್ಣು ಮುಚ್ಚಿದರು. ಒಂದು ಕ್ಷಣ ತಲೆಯಲ್ಲಿ ಏನೋ ಪ್ರಜ್ವಲಿಸಿದಂತ ಆಗಿ ಅನಂತರ ಸರಿಯಾಯಿತು. ಇದ್ದಕ್ಕಿದ್ದ ಹಾಗೆಯೇ ಮನಸ್ಸಿಗ ಎನಿಸಿಬಿಟ್ಟಿತು–ಇದು ಕಲ್ಲು–ಬರೀ ಕರಿಯ ಕಲ್ಲು; ಇದಕ್ಕೆ ಪೂಜೆ ಮಾಡೂದು ವ್ಯರ್ಥ.

ಮಂಗಳಾರತಿಯನ್ನು ಮುಗಿಸಿ, ರಂಗಮ್ಮ ಒಬ್ಬಳ ಮುಂದೆ ಹಿಡಿದರು. ಭಕ್ತಿಯಿಂದ ಆಕೆ ನಾಲ್ಕಾಣೆಯನ್ನು ಹಾಕಿ ಕೈಯಾಡಿಸಿ ಕಣ್ಣಿಗೆ ಒತ್ತಿಕೊಂಡಳು. ಅವರು ತಿರುಮಲೇಶನ ಮುಂದೆ ಮಾತ್ರ ಹಿಡಿಯಲಿಲ್ಲ. ಒಳಗ ಹೊರಟು ಹೋದರು ಅನಂತರ ಅವಳಿಗೆ ತೀರ್ಥ ಕೊಟ್ಟರು. ಅವನ ಇರುವನ್ನೇ ಅಲಕ್ಷಿಸಿದವರಂತ ಒಳಗ ಹೋದರು.

ಅವನ ತಾಯಿಯೇ, 'ಅಯ್ನೋರೇ, ಅದು ಹುಡುಗು ಬುದ್ಧಿ. ನೀವು ಕ್ಷಾಪ ಮಾಡ್ಬ್ಯಾಡಿ. ಅದ್ಕೂ ತೀರ್ಥಕೂಡಿ', ಎಂದಳು. ಅವರು ಮಾತೂ ಆಡಲಿಲ್ಲ, ತೀರ್ಥವನ್ನೂ ಕೂಡಲಿಲ್ಲ. ಒಂದು ನಿಮಿಷ ಕಾದು ಅವಳೆ, 'ಅದರ ಮಕ ನೋಡಬ್ಯಾಡಿ. ನಾವೆಲ್ಲ ಇರುವಾಗ ಈ ಮದುವೆ ಆಗಾಕ್ ಬುಡಾಕಿಲ್ಲ, ನೀವು ತೀರ್ತ ಕೂಡಿ' ಎಂದಳು.

ಅವರು ಒಳಗಿನಿಂದ ತೀರ್ಥ ಪಾತ್ರ ಹಿಡಿದುಕೊಂಡು ಬಂದರು. ಆದರೆ ಅವನು ಕೈ ನೀಡಲಿಲ್ಲ.

'ದೇವರ ಮುಂದಲ್ಲ ನಿನ್ನ ಜಂಬ, ಕೈ ನೀಡೋ' ಎಂದು ತಾಯಿ ಸಿಟ್ಟಿನಿಂದ ಕಿರುಚಿ, ಅವನ ಕೈಗೆ ಒಂದು ಪಾವಲಿಯ ನಾಣ್ಯ ತುರುಕಿದರು.

ಅವನಿಗೆ ತೀರ್ಥ ಕೊಡಿಸಿದ ಮೇಲೆ ಅವಳು ತಮ್ಮ ಕೈಲಿ ಮಾತನಾಡ ಬಯಸುತ್ತಿರುವಂತೆ ತೋರಿತು. ಆದರೆ ಇವರು ಎರಡು ಕಡೆಯೂ ಉರಿಯುತ್ತಿದ್ದ ಕಂಬದ ಬೆಳಕಿನಲ್ಲಿ ವಿಗ್ರಹದ ಮುಖವನ್ನೇ ದಿಟ್ಟಿಸುತ್ತ ನಿಂತರು. ಐದು ನಿಮಿಷ ಕಾದು ಅವರು ಹೊರಟು ಹೋದ ಮೇಲೆಯೂ ಇವರು ವಿಗ್ರಹದ ಮುಖವನ್ನು ದಿಟ್ಟಿಸುತ್ತಿದ್ದರು.

ಮಗ ಸಲೀಸಾಗಿ ತಮ್ಮ ಜಾತಿಯದೇ ಕನ್ಯೆಯನ್ನು ಮದ್ವೆಯಾದ್ರೆ ದೇವಸ್ಥಾನಕ್ಕೆ ಗ್ವಾಡೆ ಕಟ್ಟುಸ್ತಿನಿ ಅಂತ ರಂಗಮ್ಮ ಹರಕೆ ಹೊತ್ತಿದ್ದಳು. ಅವಳ ಹರಕೆ ಸಂದಿತು. ಮಂಡ್ಯದ ಕೆಂಪಣ್ಣನವರ ಮಗಳೊಡನೆ ಮದುವೆ ಅದ್ದೂರಿಯಿಂದ ನಡೆಯಿತು. ಮುಂದಿನ ಮೂರು ತಿಂಗಳಲ್ಲಿಯೇ ದೇವಸ್ಥಾನದ ಹಿಂಭಾಗದ ಗೋಡೆಗೆ ಒತ್ತಾಸೆಯಾಗಿ, ಮುಜರಾಯಿ ಇಲಾಖೆಯ ಇಂಜನಿಯರುಗಳು ಸಿಮೆಂಟಿನ ಕೆಲಸ ಮುಗಿಸಿದರು. ನಾಲವತ್ತು ಸಾವಿರ ರೂಪಾಯಿಯ ಸರಕಾರೀ ಖರ್ಚಿನಲ್ಲಿ ಕೆಲಸವಾಗಿ ರಂಗಮ್ಮನ ಹರಕೆ ಸಂದಿತ್ತು. ಅದಕ್ಕೋಸ್ಕರ ದೇವರಿಗೆ ವಿಶೇಷ ಪೂಜೆ–ಅಭಿಷೇಕಾದಿಗಳು ನಡೆಯಬೇಕಾಗಿತ್ತು. ಅದಕ್ಕೆ ಮಂತ್ರಿಗಳು, ರಂಗಮ್ಮ ಅವರ ಹೊಸ ಬೀಗರು, ಮಗ, ಸೊಸೆ ಎಲ್ಲರೂ ಬರುತ್ತಾರೆ.

ಅಭಿಷೇಕ ನಾಳೆ ಎನ್ನುವಾಗ ವೆಂಕಟರಮಣಯ್ಯನವರು ಮಗನನ್ನು ಕರೆದರು : 'ಬಾ ಇಲ್ಲಿ, ಒಂದಿಷ್ಟು ಮಾತನಾಡಬೇಕು'.

ಸುಮಾರು ಆರು ತಿಂಗಳಿನಿಂದ ವೆಂಕಟರಮಣಯ್ಯನವರು ಯಾರ ಕೈಲೂ ಮಾತನಾಡುತ್ತಿರಲಿಲ್ಲ. ದೇವಸ್ಥಾನಕ್ಕೆ ಹೋಗಿ ಪೂಜೆ ಮಾಡಿಕೊಂಡು ಬರುತ್ತಿದ್ದರು. ಈಗ ಅಪ್ಪ ಮಾತನಾಡುವದನ್ನು ಕಂಡ ಅವನಿಗೆ ಸಂಭ್ರಮವಾಯಿತು. ಅಡಿಗೆಮನೆಯಲ್ಲಿ ದೋಸೆ ಹಿಟ್ಟು ತಿರುವುತ್ತಿದ್ದ ಹೆಂಡತಿಯ ಹತ್ತಿರ ಕೂತು ಮಗುವನ್ನು ಆಡಿಸುತ್ತಿದ್ದ ಅವನು, ಅದನ್ನು ಎತ್ತಿಕೊಂಡೇ ನಡುಮನೆಗೆ ಬಂದು ಅಪ್ಪನ ಎದುರು ನಿಂತ.

'ನೋಡು, ನಾನು ತುಂಬ ಯೋಚನೆ ಮಾಡಿದೀನಿ. ಈ ದೇವರು ಅನ್ನೋದೊಂದು ಕಲ್ಲು. ಅದನ್ನು ಪೂಜೆ ಮಾಡಬಾರ್ದು. ಅದೊಂದು ಸುಳ್ಳು ಕಸಬು. ನಾಳೆಯಿಂದ ನಾನು ಆ ಚಾಕ್ರಿ ಮಾಡುಲ್ಲ! ಎಂದು ತಮ್ಮ ಜನಿವಾರಕ್ಕೆ ಕಟ್ಟಿಕೊಂಡಿದ್ದ ಗುಡಿಯ ಬೀಗದ ಕೈಯನ್ನು ಬಿಚ್ಚಿ ಅವನ ಕಾಲಿನ ಹತ್ತಿರ ಎಸೆದರು. 'ಅಲ್ಲ ಕಣಪ್ಪಾ....' ಎಂದು ಅವನು ಮಾತನಾಡುತ್ತಿದ್ದುದಕ್ಕೆ ಇನ್ನೇನೂ ಆಡಬೇಡವೆಂದು ಸೂಚನೆ ಕೊಟ್ಟು, ಹೆಗಲ ಮೇಲೆ ಒಂದು ಚೌಕ ಹಾಕಿಕೊಂಡು ಹೊರಗೆ ಹೋದರು.

ಅಪ್ಪನ ಈ ವರ್ತನೆ ವೆಂಕಟೇಶನಿಗೆ ಅರ್ಥವಾಗಲಿಲ್ಲ. ದೇವರು ಅನ್ನೋದೆ ಸುಳ್ಳು ಎಂಬಂತೆ ಮಾತನಾಡಿದನಲ್ಲ, ಇವನಿಗೆ ಬುದ್ಧಿಗಿದ್ಧಿ ವಿಕಲ್ಪವಾಗಿದೆಯೇ? ಈಗ ಆರು ತಿಂಗಳಿಂದ ಒಂದು ಥರಾ ಇದಾನೆ. ಸತ್ಯನ ವಿಷಯದಲ್ಲಿ ಏನಾದರೂ ಹರಕೆ ಮಾಡಿಕೊಂಡಿರಬೌದು. ಅದರಂತೆ ಆಗದೆ ಇರೂದ್‌ರಿಂದ ಅವನಿಗೆ ಈ ದೇವರ ಮೇಲೆ ಅಪನಂಬಿಕೆ ಬಂದಿದೆಯೇ? ಮಾಡಿಕೊಂಡ ಹರಕೇನೆಲ್ಲ ಯಾವ ದೇವರೂ ಪೂರೈಸೊಲ್ಲ, ಹಾಕಿಕೊಂಡ ಅರ್ಜೀನೆಲ್ಲ ಯಾವ ಸರ್ಕಾರವೂ ಮಾಡುಲ್ಲ, ಅಪ್ಪನಿಗೆಲ್ಲೋ ಭ್ರಾಂತು ಎಂದುಕೊಂಡ.

ಮರುದಿನ ಅವರೆಲ್ಲ ದೇವಸ್ಥಾನಕ್ಕೆ ಹೋದ ಸ್ವಲ್ಪ ಹೊತ್ತಿಗೆ ವೆಂಕಟರಮಣಯ್ಯನವರು ಮನೆಯ ಆಳಿನ ಕೈಲಿ ಹಾರೆ, ಗುದ್ದಲಿಗಳನ್ನು ತೆಗೆಸಿಕೊಂಡು ತೋಟಕ್ಕೆ ಹೋದರು. ಸೋಗೆ ಒಟ್ಟಲಿದ್ದ ಜಾಗವನ್ನು ತೋರಿಸಿ ಹೇಳಿದರು. 'ನೋಡು, ಇದೆಲ್ಲ ತೆಗೆದು ಇನ್ನೊಂದು ಕಡೆ ಒಟ್ಟು, ಈ ಜಾಗದಲ್ಲಿ ಒಂದು ಗುಡಿಸಲು ಕಟ್ಟಬೇಕು.'

'ಈಗ ಯಾಕ್ರಯ್ಯ ಗುಡಸಲು?'—ಆಳು ಕೆರಗ ಕೇಳಿದ.

'ನಾನು ಇನ್ ಮ್ಯಾಲೆ ಇಲ್ಲೇ ವಾಸಮಾಡ್ತೀನಿ.'

ಆ ದಿನ ಸಂಜೆ ವೆಂಕಟೇಶ ಮನೆಯಲ್ಲಿ ಅಪ್ಪನನ್ನು ಕೇಳಿದ : 'ಈಗ್ಯಾಕಪ್ಪ ತ್ವಾಟದಲ್ಲಿ ಗುಡುಸ್ಲು ಕಟ್ಟುಕ್ ಹೇಳಿದೆಯಂತೆ?'

'ಇನ್ ಮ್ಯಾಲೆ ಅಲ್ಲೇ ನನ್ನ ವಾಸ.'

'ಮನ್ಲಿ ಏನಾಗಿದೆ ನಿನಗೆ ಕಷ್ಟ?'

'ಕಷ್ಟವೇನಿಲ್ಲ, ಅಲ್ಲಿರಬೇಕು ಅನ್ನಿಸಿದೆ. ದೇವರ ವಿಷಯ ನೆನ್ನೆ ಹೇಳಿದೆನಲ್ಲ. ಇನ್ನು ಮ್ಯಾಲೆ ಗೃಹಕೃತ್ಯವೆಲ್ಲ ನಿಂದು. ಯಾವುದಕ್ಕೂ ನನ್ನ ಕೇಳಬ್ಯಾಡ.'

ಹಾಗೆ ನೋಡಿದರೆ ಗೃಹಕೃತ್ಯದ ವಿಷಯ ಅವರು ನೋಡಿಕೊಳ್ಳುತ್ತಿದ್ದುದು ಇತ್ತೀಚೆಗೆ ಕಡಿಮೆಯೇ ಆಗಿತ್ತು. ಎಂಟು ದಿನದಲ್ಲಿ ಗುಡಿಸಲು ಸಿದ್ಧವಾಯಿತು. ಮನೆಯಿಂದ ಎರಡು ಚರುಕಲು, ಒಂದು ಸೌಟು, ಚೊಂಬು, ಒಂದೆರಡು ಪುಡಿಪಾತ್ರೆ, ಹಾಸಲು ಗೋಣಿ ಚೀಲ, ಹೊದೆಯಲು ಒಂದು ದುಪ್ಪಟಿಯನ್ನು ತೆಗೆದುಕೊಂಡು ಅವರು ಅಲ್ಲಿಗೆ ಹೊರಟುಹೋದರು. 'ಅಪ್ಪ' ನಿಂಗೆ ಬೇಕಾದ್ರೆ ತ್ವಾಟದಾಗಿರು. ಊಟ–ತಿಂಡಿ ಮನೆಯಿಂದ ಕಳುಸ್ತೀವಿ' ಎಂದು ಮಗ ಹೇಳಿದರೆ ಕೇಳಲಿಲ್ಲ. ವೆಂಕಟೇಶನೇ ಒಂದು ಕುಕ್ಕೆಯಲ್ಲಿ ಅಕ್ಕಿ, ಬೇಳೆ, ಮೆಣಸಿನಪುಡಿಗಳನ್ನು ಇರಿಸಿ ಆಳಿನ ತಲೆಯ ಮೇಲೆ ಕಳಿಸಿದ. ಅಪ್ಪ ಹೋದ ಮೊದಲನೆಯ ದಿನ ಅವನಿಗೆ ಮನೆ ಬಿಕೋ ಎನಿಸುತ್ತಿತ್ತು. ಏನೋ ಆಯಿತು, ಹೋಯಿತು. ಅವಳೊಬ್ಬ ಕತ್ತೆ ಲೌಡಿ ಹೀಗೆ ಮಾಡಿದಳು ಅಂತ, ಇವನು ಇಷ್ಟೊಂದು ಯಾಕೆ ಹಚ್ಚಿಕೋಬೇಕು? ಅವರ ತಲೆಯ ಮೇಲೆ ಮೆಟ್ಟಿ ಹಾರಿದ ಹಾಗೆ, ಇವಳಿಗೆ ಒಂದು ಒಳ್ಳೇ ಗಂಡು ನೋಡಿ ಮದುವೆ ಮಾಡಿದರೆ ಮುಗೀತು, ಎಂದು ರಾತ್ರಿ ಎಲ್ಲ ಯೋಚಿಸಿದ. ಅವನ ಹೆಂಡತಿ ಜಯಲಕ್ಷ್ಮಿಯೂ ಮಾವನ ಬಗೆಗೆ ಕೊರಗಿದಳು.

ವೆಂಕಟೇಶ ಬೆಳಗ್ಗೆ ಎದ್ದವನೇ ತೋಟಕ್ಕೆ ಹೋದ. ಅಪ್ಪ ಕೊಳದಲ್ಲಿ ಮುಳುಗಿ ಸ್ನಾನ ಮಾಡುತ್ತಿದ್ದರು. ಅವರ ಜನಿವಾರ ಕೊರಳಲ್ಲಿರದೆ ಕೊಳದ ಕಟ್ಟೆಯ ದಡದಲ್ಲಿತ್ತು. ಅವನೇ ಕೇಳಿದ : 'ಇದೇನಪ್ಪ, ಹೀಗೆ ಜನಿವಾರ ತೆಗೆದಿಟ್ಟಿದಿಯ? ಹೀಗೆ ಮಾಡಭೌದೆ?'

'ಅದರಲ್ಲೇನಿದೆ, ಆರೆಳೆ ನೂಲಿನ ದಾರ.'

'ಶಾಸ್ತ್ರಸಂಬಂಧ, ದೇವರು, ಮಡಿ, ಮೈಲಿಗೆ ಆಚಾರಗಳಲ್ಲಿ ಅವರು ಎಂದಿಗೂ ಕಟ್ಟು ನಿಟ್ಟು. ಅಂಥವರು ಜನಿವಾರವನ್ನು ಬರೀ ನೂಲಿನ ದಾರ ಎನ್ನುತಿದ್ದಾರಲ್ಲ? ಶಾಸ್ತ್ರಕರ್ಮಗಳನ್ನು ಹೀಗೆ ತಿರಸ್ಕರಿಸುವವರು ಎರಡೇ ರೀತಿಯ ಜನ : ಬುದ್ಧಿ ಭ್ರಮಣೆಯಾಗಿರುವವರು ಅಥವಾ ಸನ್ಯಾಸಿಗಳು. ಪೂರ್ತಿ ಸನ್ಯಾಸಿಯೇ ಆಗಿದ್ದರೆ ನಮ್ಮ ತೋಟದಲ್ಲೇಕೆ ಇರುತ್ತಿದ್ದರು?' ಅವರು

ಸ್ನಾನ ಮುಗಿಸಿ ಸ್ವಲ್ಪ ಎಳೆ ಬಿಸಿಲಿನಲ್ಲಿ ನಿಂತಿದ್ದು, ನಿನ್ನೆ ಉಟ್ಟಿದ್ದ ಆ ಪಂಚೆಯನ್ನೆ ಉಟ್ಟು ಕೊಂಡರು. ಕಟ್ಟೆಯ ಮೇಲಿದ್ದ ಜನಿವಾರ ತೆಗೆದುಕೊಂಡು, ಎರಡು ಕೈಲೂ ಬಿಡಿಸಿ ಹಿಡಿದುಕೊಂಡು ಹೊಸತನ್ನು ಧರಿಸುವವರಂತೆ 'ಯಜ್ಞೋಪವೀತಂ ಪರಮಂ ಪವಿತ್ರಂ' ಹೇಳುತ್ತಾ ಕೊರಳಿಗೆ ಹಾಕಿಕೊಂಡು, ಮತ್ತೆ ಕೊಳಕ್ಕೆ ಇಳಿದು ಆಚಮನ ಮಾಡಲು ಪ್ರಾರಂಭಿಸಿದರು.

ಇದು ಬುದ್ಧಿ ಭ್ರಮಣೆಯೇ ಎಂದು ವೆಂಕಟೇಶನಿಗೆ ಅನಿಸಿತು. ಅವರು ಸಂಧ್ಯಾವಂದನೆ ಮುಗಿಸಿ ಬಂದ ಮೇಲೆ ಹೇಳಿದ, 'ಅಪ್ಪ, ವಾರಕ್ಕೊಂದು ದಿನ ತಲೆಗೆ ಎಣ್ಣೆ ತಿಕ್ಕಿಕೊಂಡು ನೀರು ಹಾಕ್ಕೊ ಅಂದೆ : ಕೇಳ್ತಿಯ? ನಿಂಗೆ ಎಷ್ಟು ಉಷ್ಣವಾಗಿದೆ ಗೊತ್ತಾ?' ಅವರು ಮಾತಾಡಲಿಲ್ಲ. ಅವರ ಹಿಂದೆಯೇ ಗುಡಿಸಲಿಗೆ ಹೋದ : 'ತುಂಬ ಉಷ್ಣವಾದೋರು ತಲೆಗೆ ನಿಂಬೆಹಣ್ಣು ತಿಕ್ಕಿ ಕೊಂಡು ಸ್ನಾನ ಮಾಡಬೇಕು. ಹೀಗೆ ಮುಳುಗಬಾರದು, ಯಾರಾದರೂ ತುಂಬಿ ತುಂಬಿ ಹಾಕಬೇಕು,' ಎಂದನು.

ಅವರು ಈಗಲೂ ಮಾತನಾಡಲಿಲ್ಲ. ಮತ್ತೆ ಏನು ಹೇಳುವುದಕ್ಕೂ ತಿಳಿಯದೆ ಅವನು ಸುಮ್ಮನೆ ನಿಂತಿದ್ದ. ಐದು ನಿಮಿಷದ ನಂತರ ಅವರು ಹೇಳಿದರು : 'ನಿಂಬೆಹಣ್ಣು ತಿಕ್ಕಿ ಕಣ್ಣೀರು ಹೊಯ್ಯೋದು ಹುಚ್ಚು ಹಿಡಿದೋರಿಗೆ. ನಂಗೆ ಏನೂ ಆಗಿಲ್ಲ. ಸುಮ್ಮನೆ ನಿನ್ನ ಕೆಲಸಕ್ಕೆ ಹೋಗು. ಹೀಗೆ ಬಂದು ನನ್ನ ಕಾಡಿಸಬ್ಯಾಡ.'

☆ ☆ ☆ ☆

ವೆಂಕಟೇಶಯ್ಯನವರು ಊರೊಳಕ್ಕೆ ಬರುವುದೇ ಇಲ್ಲ. ತೋಟಕ್ಕೆ ಆಳುಗಳು ಬಂದು ಕೆಲಸ ಮಾಡಿ ಹೋಗುತ್ತಾರೆ. ಅವರು ಮಾತ್ರ ಯಾವ ಸಂಪರ್ಕವೂ ಇಲ್ಲದೆ ಇದ್ದು ಬಿಟ್ಟಿದ್ದಾರೆ. ಒಂದೊಂದು ದಿನ ಕಾಲುವೆಯ ಏರಿಯ ಮೇಲೆ ನಡೆದು ದೇವಸ್ಥಾನಕ್ಕೆ ಹೋಗುತ್ತಾರೆ. ಇಡೀ ದೇವಸ್ಥಾನವನ್ನು ಪ್ರದಕ್ಷಿಣೆ ಹಾಕಿದಂತೆ ಒಂದೆರಡು ಸುತ್ತು ಹಾಕುತ್ತಾರೆ. ಮಂತ್ರಿಗಳು ಕಟ್ಟಿಸಿದ ಗೋಡೆಯನ್ನು ಪರೀಕ್ಷಿಸುವವರಂತೆ ನೋಡುತ್ತಾ ನಿಲ್ಲುತ್ತಾರೆ. ಸುಮಾರು ಮೂವತ್ತು ವರ್ಷಕ್ಕೂ ಮಿಕ್ಕಿ ಪೂಜಿಸಿದ್ದ ದೇವರ ಗುಡಿಯ ಬಾಗಿಲಿಗೆ ಸಹ ಕೈ ಮುಗಿಯುವುದಿಲ್ಲ. ವಿಧರ್ಮಿ, ವಿದೇಶೀಯ ಪ್ರಾಚ್ಯ ಸಂಶೋಧಕನೊಬ್ಬನು ಈ ದೇಶದ ದೇವಾಲಯವನ್ನು ಗಮನಿಸಿ ನೋಡುವಂತೆ ಅದರ ಹೊರಗೋಡೆಯ ಮೇಲಿನ ದೇವದೇವತೆಯರು, ಯಕ್ಷ–ಯಕ್ಷಿಣಿಯರು, ನರ್ತಕಿ ನರ್ತಕಿಯರು, ಯುದ್ಧದ ಕಾಲಾಳುಗಳ ಕೆತ್ತನೆಯನ್ನು ನೋಡುತ್ತಾ ನಿಲ್ಲುತ್ತಾರೆ. ಅನಂತರ ನಡೆದು, ಸೂತಕ ತಳೆದವರಂತೆ ತೊಟ್ಟ ಬಟ್ಟೆಯಲ್ಲೇ ಪಕ್ಕದಲ್ಲಿ ಹರಿಯುವ ಕಾಲುವೆಯಲ್ಲಿ ಮುಳುಗಿ, ಸ್ನಾನ ಮಾಡಿ ತಮ್ಮ ತೋಟಕ್ಕೆ ಹೋಗುತ್ತಾರೆ. ಅವರಿಗೆ ಹುಚ್ಚು ಹಿಡಿದಿದೆಯೆಂದು ಊರಿಗೆ ಊರೇ ನಂಬಿದೆ. ಆದರೆ, ಸದಾ ತೋಟದಲ್ಲೇ ಇರುವ ಅವರು ಒಂದು ಸೋಗೆಯ ಗರಿ ಸರ್ ಎಂದರೂ ಗುಡಿಸಲಿನಿಂದ ಹೊರಗೆ ಬಂದು ಸುತ್ತ ನೋಡುತ್ತಾರೆ ಎಂದು ಎಲ್ಲರೂ ತಮ್ಮಲ್ಲಿ ಮಾತನಾಡಿಕೊಳ್ಳುತ್ತಾರೆ. ಹೀಗಾಗಿ ಊರಿನ ಇತರ ತೋಟಗಳಲ್ಲಿ ಆಗೀಗ ಕಳ್ಳತನವಾದರೂ ಅವರ ತೋಟದಲ್ಲಿ ಒಂದು ಕುರುಂಬಾಳೆಯನ್ನು ಸಹ ಯಾರೂ ಎತ್ತುವುದಿಲ್ಲ.

ಒಂದು ರಾತ್ರಿ ಹತ್ತು ಗಂಟೆಯಾಗಿತ್ತು. ಅವರು ತಮ್ಮ ಗುಡಿಸಲು ಬಾಗಿಲು ಹಾಕಿಕೊಂಡು ತೋಟದಿಂದ ಹೊರಗೆ ಬಂದರು. ಅಮಾವಾಸ್ಯೆಯ ಮುಂದಿನ ದಿನಗಳಾದ್ದರಿಂದ ಕತ್ತಲೆ ಮುಚ್ಚಿಕೊಂಡಿತ್ತು. ಗದ್ದೆಗಳ ಬದುವಿನ ಮೇಲೆ ಏರಿ ನಡೆದುಕೊಂಡು ಮುಂದೆ ಸಾಗಿದರು. ತೋಟದ ಸಂದಿಯ ಓಣಿಯಲ್ಲಿ ನಡೆದು ಮುಂದೆ ಹೋದರು. ಅಲ್ಲೇ ಹೊಸದಾಗಿ ಮಂಗಳೂರು ಹೆಂಚು ಹಾಕಿ ಕಟ್ಟಿರುವ ಹರಿಜನ ಕಾಲೊನಿ. ಅಲ್ಲಿಯ ಜನರೆಲ್ಲ ಎಚ್ಚರವಾಗಿದ್ದಂತೆ ಕಂಡಿತು. ಬೀದಿಯ ಮಧ್ಯೆ ಬೆಂಕಿ ಉರಿಸುತ್ತಿದ್ದರು. ಕೆಲವು ಮನೆಗಳ ಜಗುಲಿಯ ಮೇಲೆ ಲಾಟೀನು ಉರಿಯುತ್ತಿದ್ದುವು. ಇವರು ಹತ್ತಿರ ಹೋದರು. ಏಳೆಂಟು ನಾಯಿಗಳು ಭೌವ್ ಎಂದವು. 'ಥೂ ಮುಂಡೇವು' ಎಂದುಕೊಂಡು, ಕೇರಿಯ ಮಧ್ಯಕ್ಕೆ ಬಂದಾಗ ತಿಳಿಯಿತು. ಬೆಂಕಿಯ ಹತ್ತಿರ ಗುಂಪು ಕಟ್ಟಿ ಕುಳಿತು ಗಂಡಸರು, ಹೆಂಗಸರು ಕುಡಿಯುತ್ತಿದ್ದಾರೆ. ಅವನ ಕಣ್ಣುಗಳಿಲ್ಲ ಕೆಂಪಗೆ ತುಂಬಿ ತೇಲುತ್ತಿರುವುದು ಬೆಂಕಿಯ ಬೆಳಕಿನಲ್ಲಿ ಕಂಡಿತು.

'ಅದ್ಯಾರಪ್ಪಯ್ಯಾ?' ಎಂದು ಒಬ್ಬ ಕೂಗಿ ಕೇಳಿದ.

'ಗುಡಿ ಹಾರವಯ್ಯ ಕಣ್ಲೇ' ಎಂದು ಒಬ್ಬ ಗುರುತು ಹಿಡಿದ. ತಕ್ಷಣ ಎಲ್ಲರೂ ಎದ್ದು ನಿಂತರು.

'ಉಚ್ಚು ನಾಯಿ ಕೇರೀಗ್ ಬಂದದೆ ಲಕ್ಷ್ಮೀಕದಿಯಾಕೆ. ಮಡಗು ತೊಪ್ಪೆಯಾಗೆ' ಎಂದು ಒಬ್ಬ ಕಿರುಚಿದ.

ಅವರೆಲ್ಲ ಎದ್ದು ಎತ್ತೆತ್ತಲೋ ಹೋದರು. ಒಂದು ನಿಮಿಷದಲ್ಲಿ ಸಂದಿಗೊಂದಿಗಳಿಂದ ಬಂದವರು ಸಗಣಿ ತೊಪ್ಪೆಗಳನ್ನು ಬೀಸಿ ಬೀಸಿ ಇವರಿಗೆ ಹೊಡೆದರು. ಒಬ್ಬ ಹೆಂಗಸಂತೂ ತನ್ನ ಮನೆಯ ಹಿಂಬಾಗದಲ್ಲಿದ್ದ ತಿಪ್ಪೆಯಲ್ಲಿ ಒಂದು ಮಂಕರಿ ಸಗಣಿ ತುಂಬಿ ತಂದಳು. ನಾಲ್ಕು ಜನ ಗಂಡಸರು ಅದನ್ನು ತೆಗೆದುಕೊಂಡು ಗುರಿ ಇಟ್ಟು ಇವರ ಮುಖ–ಮೈಗಳಿಗೆ ಬೀಸಿ ಹೊಡೆದರು. ಹಸಿ ಸಗಣಿಯು ಬೀಸಿ ಬಂದು ಬಿದ್ದ ರಭಸಕ್ಕೆ ಮೈ ಕೈಗಳಿಗೆ ನೋವೂ ಆಯಿತು. ಅವರು ಹಿಂತಿರುಗಿ ಹೊರಟರು. ಆದರೆ ಬೆನ್ನಿನ ಮೇಲೆ ಸುಯ್ ಸುಯ್ ಎಂದು ಸಗಣಿ ಉಂಡೆಗಳು ಬಂದು ಬೀಳುತ್ತಲೇ ಇದ್ದುವು. ಯಾರೊ ಒಬ್ಬ 'ಗ್ಯಾ ಗ್ಯ ಗ್ಯ' ಎಂದು ಕೂಗಿ ಸಿಳ್ಳು ಹಾಕಿದ. ದೂರದಲ್ಲೇ ನಿಂತು ಬಗಳುತ್ತಿದ್ದ ನಾಯಿಗಳು ಈಗ ನುಗ್ಗಿ ಬಂದವು. ಒಂದು ನಾಯಿ ಮೇಲೆ ಬಿದ್ದು ಇವರ ಮೊಣಕಾಲಿನ ಮೀನಖಂಡಕ್ಕೆ ಹಲ್ಲು ಹಾಕಿಬಿಟ್ಟಿತು. 'ಅಯ್ಯಯ್ಯಪಾಪಿ' ಎಂದು ಇವರು ಬಡಿದುಕೊಂಡರು. ಕುಡುಕರ ಪೈಕಿಯೇ ಒಬ್ಬ ನಾಯಿಗಳಿಗೆ ಮಪ್ಪಿರಿದು ಕರೆದಾಗ ಅವು ಹಿಂತಿರುಗಿದವು.

ಅವರು ತೋಟದ ಓಣಿಯಲ್ಲಿ ಹಿಂತಿರುಗಿದರು. ನಾಯಿಯು ಹಲ್ಲು ಊರಿದ ಜಾಗದಲ್ಲಿ ರಕ್ತ ಬರುತ್ತಿತ್ತು. ಕತ್ತಲೆಯಲ್ಲಿ ಯಾವುದೂ ಸರಿಯಾಗಿ ಕಾಣುತ್ತಿಲ್ಲ. ಬೇಗ ಬೇಗ ಹೆಜ್ಜೆ ಹಾಕಿ, ಸಿಕ್ಕಿದ ಗದ್ದೆಗಳನ್ನು ದಾಟಿ, ಸಣ ಕಾಲುವೆಯೊಂದರಲ್ಲಿ ಇಳಿದು ದಾಟುವಾಗ ಮೀನುಖಂಡದ ಗಾಯ ಉರಿಯ ಹತ್ತಿತು. ಅದನ್ನು ಲೆಕ್ಕಿಸದೆ ಮುಂದೆ ನಡೆದು ಗದ್ದೆಗಳನ್ನು ಏರಿ ತಮ್ಮ ತೋಟದ ಹೊಳೆಬಾಗಿಲನ್ನು ತೆಗೆದುಕೊಂಡು ಒಳಗೆ ಹೋದರು. ಉರಿಯುತ್ತಿದ್ದ

ಲಾಟೀನಿನಲ್ಲಿ ಕಾಲನ್ನು ನೋಡಿಕೊಂಡರು. ರಕ್ತವೀಗ ಹೆಪ್ಪು ಗಟ್ಟಿದ್ದುದು ಕಾಣಿಸುತ್ತಿತ್ತು. ಕೈಕಾಲು, ಭುಜ, ಬೆನ್ನಿಗೆಲ್ಲ ಸಗಣಿಯ ತೊಪ್ಪೆ ಮೆತ್ತಿಕೊಂಡಿತ್ತು. ಆದರೂ ಒಂದು ತಾಸು ಸುಮ್ಮನೆ ಕುಳಿತುಬಿಟ್ಟರು. ಅನಂತರ ಎದ್ದು ಕೊಳಕ್ಕೆ ಹೋಗಿ ಸ್ನಾನ ಮಾಡಿದರು. ಸಗಣಿಯಾದ ಬಟ್ಟೆಗಳನ್ನು ಕುಕ್ಕಿ ಒಣಹಾಕಿದರು. ಉಡಲು ಬೇರೆ ಬಟ್ಟೆ ಇಲ್ಲದ್ದರಿಂದ ಒಂದು ಚೌಕ ಸುತ್ತಿಕೊಂಡು ಮೈಗೆ ದುಪಟ ಹೊದೆದರು.

ಅಷ್ಟರಲ್ಲಿ ಯಾರೋ ತೋಟದೊಳಗೆ ನಡೆದು ಇವರ ಗುಡಿಸಲು ಕಡೆಗೆ ಬಂದಂತೆ ಶಬ್ದವಾಯಿತು. ಲಾಟೀನನ್ನು ಹೊರತಂದು ನೋಡುತ್ತಾರೆ. ಮಾತಂಗಿ ಬರುತ್ತಿದ್ದಾಳೆ. ಕರಿ ಸೀರೆಯುಟ್ಟು ಹಸಿರು ರವಿಕೆ ತೊಟ್ಟಿದ್ದಾಳೆ, ಎಣ್ಣೆ ತಿಕ್ಕಿ ಕೂದಲು ಬಾಚಿದ್ದಾಳೆ. ಹಣೆಯಲ್ಲಿ ಅಗಲವಾದ ಕುಂಕುಮವಿದೆ. ಆದರೆ ಹತ್ತಿರಕ್ಕೆ ಬಂದಾಗ ಭಟ್ಟಿ ಮದ್ಯದ ಗಬ್ಬು ವಾಸನೆ ಹೊಡೆಯುತ್ತಿತ್ತು. ಅವರು ಅವಳನ್ನೇ ನೋಡುತ್ತಾ ನಿಂತುಬಿಟ್ಟರು. ಮಾತಂಗಿ ಕೇಳಿದಳು :

'ನೀವ್ಯಾಕೆ ಬಂದಿದ್ರುಯ್ಯ ನಮ್ ಅಟ್ಟಿಗೆ?'

ಅವರು ಉತ್ತರ ಹೇಳಲಿಲ್ಲ. ಅವಳ ಪ್ರಶ್ನೆ ಅರ್ಥವಾಗದಂತೆ ನೋಡಿದರು. ಅವಳೇ ಕೇಳಿದಳು : 'ಈಟು ವರ್ಸದ ಮ್ಯಾಗೆ ಮಾತಂಗಿ ಗ್ಯಾನ ಬಂತಾ? ಮರ್ರು ಹ್ವಲೇರ ಅಟ್ಟಿಗೆ ನುಗ್ಗಿ ಬಿಟ್ರಾ? ಆರುವರು ಹ್ವಲೇರ ಅಟ್ಟಿಗೆ ಬಂದ್ರೆ ಮಹಾಲಕ್ಷ್ಮಿ ಹ್ವಂಟ್ ಹೋಯ್ತಳೆ ಅಂತ ಗೊತ್ತಿರ್ನಿಲ್ವಾ?'

ಹಾರುವರು ತಮ್ಮ ಹಟ್ಟಿಗೆ ಬಂದರೆ ಲಕ್ಷ್ಮಿ ಮುನಿಸಿಕೊಂಡು ಹೋಗುತ್ತಾಳೆ. ಆದುದರಿಂದ ಅವರಿಗೆ ಸಗಣಿಯಲ್ಲಿ ಹೊಡೆದು ಓಡಿಸಬೇಕೆಂಬ ಶಾಸ್ತ್ರ ಹೊಲೆಯರಲ್ಲಿದೆ. ಇದು ವೆಂಕಟರಮಣ್ಯನವರಿಗೆ ಗೊತ್ತಿದ್ದುದೇ. ಆದರೆ ತಮಗೆ ಇತ್ತೀಚೆಗೆ ಯಾವುದೂ ಸರಿಯಾಗಿ ಜ್ಞಾಪಕಕ್ಕೆ ಬರುತ್ತಿಲ್ಲ.

ಮಾತಂಗಿ ಕೇಳಿದಳು : 'ಅಯ್ಯಾ ಯಾಕ್ ಬಂದಿದ್ರಿ ಏಳಿ?'

'ಸುಮ್ಕೆ ಬಂದಿದ್ದೆ.'

'ಹಂಗಾದ್ರೆ ನಾನು ಹ್ವಂಟೋಯ್ತಿನಿ'— ಎಂದು ಅವಳು ಹಿಂತಿರುಗಿ ನಡೆದಳು.

ಅವಳು ಹತ್ತು ಹೆಜ್ಜೆ ಹಾಕಿದ್ದಳು. ಅವರು, 'ಲೇ ನಿಂತ್ಕ' ಎಂದು ಕೂಗಿ, ಹೇಳಿದರು, 'ನಿನ್ನ ನೋಡಬೇಕು ಅನಸ್ತು ಅದಕ್ಕೆ ಬಂದೆ.'

ಅವಳು ಹಿಂತಿರುಗಿ ಬಂದಳು. ಯಾವ ಸಂಕೋಚವೂ ಇಲ್ಲದೆ ಇವರ ಕೈ ಹಿಡಿದುಕೊಂಡು, 'ಹಂಗ ಏಳ್ರಯ್ಯಾ. ಮಾಂತಂಗಿಗ್ ನಿಮ್ಮ ನೆನಪು ಬತ್ತೈತೆ. ನಿಮ್ಮ ಮರ್ವ್ಯಾದಿಗ್ ಅಂಜಿ ನಾನು ನಿಮ್ಹತ್ಕೆ ಬರಾಕಿಲ್ಲ...' ಎಂದು ಚಾಪೆ ಮೇಲೆ ಅವರನ್ನು ಕೂರಿಸಿ ಗುಡಿಸಲಿನ ಬಾಗಿಲು ಮುಚ್ಚಿ ತಾನೂ ಕೂತಳು. ಅವಳ ಮುಖ ಅಮಲಿನಿಂದ ಉಬ್ಬಿಕೊಂಡು ಜ್ವರ ಬಂದವಳಂತೆ ಆಗಿತ್ತು. ಕೇಳಿದಳು; 'ನಾಯಿ ಕಡೀತಾ!'

ಅವರು ತಮ್ಮ ಬಲಗಾಲು ನೀಡಿದರು. ಅದನ್ನು ತೆಗೆದು ತನ್ನ ತೊಡೆಯ ಮೇಲಿಟ್ಟುಕೊಂಡು ನೋಡಿದಳು 'ಕಳ್ಳ ನನ್ಮ್ ಹೆಡ್ತಿ ಮಗನ ನಾಯಿ ಹ್ಯಂಗ್ ಕಚ್ಚದೆ! ಅದರವ್ವುನ್ನಾ?' ಎಂದು ನುಡಿದು ಅವರ ಕಾಲನ್ನು ಕೆಳಗೆ ಇಟ್ಟು, ಲಾಟೀನನ್ನು ಕೈಲಿ ಹಿಡಿದು

ಅವಳು ಹೊರಗೆ ಹೋದಳು. ಬೇಲಿಯ ಹತ್ತಿರ ಹೋಗಿ ಹುಡುಕಿ ಏಳೆ ಚದುರಂಗದ ಸೊಪ್ಪು ತಂದು, ಅದರ ರಸ ಹೊರಡಿಸಿ ಗಾಯದ ಮೇಲೆ ಒಂದು ಸಲ ಹಿಂಡಿದಳು. ತೊಟತೊಟನೆ ಬಿದ್ದ ಹಸುರು ರಸದಿಂದ ಉರಿಹತ್ತಿ ಅವರು 'ಹಾಂ' ಎಂದರು. 'ಉರೀತೈತ. ಬ್ಯಾಗ ಮಾಯ್ತದೆ. ನಾಯಿ ಅಲ್ಲು, ನನ್ ಮಗಂದು ಇಸ—' ಎಂದ ಅವಳು. ಹೊಸಗಿದ್ದ ಸೊಪ್ಪನ್ನು ಗಾಯಕ್ಕೆ ಮೆತ್ತಿ ತನ್ನ ಸೀರೆಯ ಸೆರಗನ್ನು ಹಲ್ಲಿನಿಂದ ಕಚ್ಚಿ ಒಂದು ಪಟ್ಟೆ ಹರಿದು ಕಟ್ಟಿದಳು.

ಸ್ವಲ್ಪ ಹೊತ್ತಿನ ನಂತರ ಕೇಳಿದಳು : 'ನನ್ ಯಾಕ ಉಡಿಕ್ಕಂಡ್ ಬಂದಿದ್ರಯ್ಯ?'

'ಸುಮ್ಕೆ'

'ಸುಮ್ ಸುಮ್ಕೆ ಯಾಕ್ ಬತ್ತೀರಯ್ಯ? ನಿಜ ಏಳಿ. ಈಟು ವರ್ಸ ಮಾತಂಗಿ ನೆಪ್ಪು ಅತ್ಲಿಲ್ವಾ?'

'ನನ್ ಕಂಡ್ರೂ ನೀನೇ ಕಾಣದ ಹಂಗೆ ಹೋಗ್ತಿದ್ಯಲ್ಲೇ?'

'ಶಿಟ್ ಮಾಡ್ಕಬ್ಯಾಡಿ. ಬರಬೇಕು ಅಂತಿದ್ದೆ, ಧೈರ್ಯವಾಗ್ತಿರ್ನಿಲ್ಲ. ನಿಮ್ಮ ಉಡ್ರೂ ದೊಡ್ಡವರಾಗಿಯವ್ರೆ. ನನ್ನ ಮಗನೂ....' ಎಂದು ತಡೆದಳು.

'ನಿನ್ನ ಮಗ ಏನ್ಮಾಡ್ತನೆ?'

'ನಿನ್ನ ಮಗ ಅಂತ ಯಾಕಂತೀರಯ್ಯ?'—ಎಂದು ಅವಳು ಕೇಳಿದಾಗ ಅವರಿಗೆ ಕಸಿವಿಸಿಯಾಯಿತು. ಅವಳೇ ತಕ್ಷಣ ಹೇಳಿದಳು : 'ಹ್ಯದರ್ಕಬ್ಯಾಡಿ. ನಿಮ್ಮ ಮರ್ವಾದಿ ನಂದು ಅಂತ ಏಳ್ಲಿಲ್ಲಾ ಅವತ್ತೇ? ನಾನು ಯಾರ ಕುಟ್ಲೂ ಏಳಾಕಿಲ್ಲ. ಮಣ್ಣೊಳಿಕ್ ಬೀಜ ಬಿದ್ ಮುಚ್ಚಿದ ಮ್ಯಾಗೆ ಯಾವ ಅಕ್ಕಿ ಕಚ್‌ಕಂಡ್ ತಂದ್ ಆಕ್ತು ಅಂತ ಭೂಮ್ತಾಯಿ ಬಾಯಿ ಬುಟ್ಟಾಳಾ? ನೀನು ಗುಬ್ಬಚ್ಚಿ ಕಣ್ರಯ್ಯ. ಗುಬ್ಬಚ್ಚಿ ಬೀಜ ಗುಬ್ಬಚ್ಚಿಯಾಯ್ತದೆ. ಮಾತಂಗಿ ಏಂತೋಳು?'

ಅವಳ ಗಮನ ಬೇರೆ ಕಡೆ ಹೋಯಿತು. ಹಿಂಭಾಗದ ಗೋಡೆಯ ದಡದಲ್ಲಿ ಮೂರು ಕಲ್ಲುಗಳನ್ನಿಟ್ಟು ಒಲೆ ಹೂಡಿದ್ದರು. ಅದರಲ್ಲಿ ಬೂದಿ ಇರಲಿಲ್ಲ. 'ಇವತ್ತು ನೀವು ಉಂಡಿದ್ರಸಯ್ಯಾ?' ಅವಳು ಕೇಳಿದಳು.

'ನಾನು ದಿನಾ ಅಡಿಗೆ ಮಾಡ್ಕಳುಲ್ಲ.'

'ಹಂಗಾರೆ ನಾನು ಈಗ ಮಾಡಿ ನೀಡ್ತಿನಿ. ಉಣ್ತೀರೇನ್ರಯ್ಯ?'

ಅವರು ಕುತೂಹಲದಿಂದ ಅವಳ ಮುಖವನ್ನು ದಿಟ್ಟಿಸಿ ನೋಡಿದರು. ಅವಳ ಬುದ್ಧಿ ಉತ್ತೇಜಿತವಾಗಿದ್ದುದು ಸ್ಪಷ್ಟವಾಗಿತ್ತು. ಅವರು ಮತ್ತೆ ಸುಮ್ಮನೆ ಕುಳಿತರು. ಅವಳೇ ಕೇಳಿದಳು : 'ಈಗ ಬೋನ ಬೇಯಿಸ್ಲೇನ್ರಯ್ಯ?'

ಅವಳು ಅದೇ ಮಾತನ್ನು ಎರಡನೇ ಸಲ ಕೇಳುತ್ತಿದ್ದಾಳೆ. ಯೋಚಿಸುತ್ತಾ ಕೂತರು. ಅವಳೇ, 'ನಮ್ಮ ತಾವ ಮನಿಕತ್ತೀರ. ನಾವು ಮಾಡಿದ್ದು ಯಾಕ್ ಉಣ್ಣಾಕಿಲ್ರಯ್ಯ?' ಎಂದಳು. ಈ ಮಾತನ್ನು ಕೇಳಿ ಅವರು ಬೆಚ್ಚಿದರು. ಹಣೆ ಮತ್ತು ಕುತ್ತಿಗೆಗಳು ಬೆವೆತುವು. ಮಾತಂಗಿ ಈಗ ಕುಡಿದಿದ್ದಾಳೆ.

ಅವಳೇ ಅಂದಳು : 'ಮೈ ತೊಕ್ಕಂಡು ಬಂದು ಬೋನ ಬೇಯಿಸ್ತಿನಿ ಕಣ್ರಯ್ಯ, ಅವತ್ತು ಗುಡಿಗೆ ಬರುವಾಗ ತೊಕ್ಕೊಂಡಿದ್ವಲಾ, ಹಂಗೆ.'

ಮಾತಂಗಿ ಹಟವನ್ನೆ ಮಾಡುತ್ತಿದ್ದಾಳೆ. ಉಣ್ಣುವುದಿಲ್ಲವೆಂದರ ಏನು ಮಾಡಬಹುದು? ಅಳಬಹುದು. ಅದು ಅವರಿಗೆ ಸಹಿಸಲಿಲ್ಲ. ಉಣ್ಣುತ್ತೇನೆಂದರ ಇವತ್ತು ಮಾಡಿ ಹಾಕುತ್ತಾಳೆ. ಅದರಂತೆ ದಿನಾ ಮಾಡಿ ಬಡಿಸುತ್ತೇನೆಂದರೆ ಏನು ಮಾಡುವುದು? ಊರಿನವರಿಗೆಲ್ಲ ಗೊತ್ತಾಗುತ್ತೆ. ಗೊತ್ತಾದರೆ ಏನು? ಅವರಿಗೆ ತಕ್ಷಣ ಸಿಟ್ಟು ಬಂತು. ಎದ್ದು ಹೊರಗೆ ಹೋಗಿ ಈ ಗುಡಿಸಲಿಗೆ ಬೆಂಕಿ ಹಾಕಿ ಸುಟ್ಟು ಊರೊಳಗಿನ ಮನೆಗೆ ಹೊರಟು ಹೋಗಬೇಕೆನಿಸಿತು.

ಮಾತಂಗಿ ಹತ್ತಿರದ ಕೊಳದ ನೀರಿನಲ್ಲಿ ಇಳಿದ ಲಪಲಪ ಸದ್ದು ಕೇಳಿಸಿತು. ಅವರಿಗೆ ಮತ್ತೊಮ್ಮೆ ಅಗಾಧವಾದ ಸಿಟ್ಟು ಬಂತು. ಈ ಮಾದಿಗಿತ್ತಿಯ ಕೈಯ ಅನ್ನವನ್ನು ಇವತ್ತು ತಿಂದರ ಮುಗಿಯಿತು. ನಾಲಿಗೆಯನ್ನು ಏಳುಸಲ ದರ್ಭೆಯಲ್ಲಿ ಸುಡಿಸಿಕೊಂಡರೂ ಪಾಪ ಹರಿಯುವುದಿಲ್ಲ.

ಆದರೆ ಇವತ್ತು ತಾವು ಅವಳನ್ನು ಹುಡುಕಿಕೊಂಡು ಹೋದದ್ದೇಕೆ? ಕಾಮತೃಪ್ತಿಗೆ? ಇತ್ತೀಚೆಗೆ ಎಂಟು, ಹತ್ತು ವರ್ಷದಿಂದ ಆ ಆಶೆಯೇ ಆಗುತ್ತಿಲ್ಲ. ಇಷ್ಟೂ ಹೊತ್ತು ಅವಳು ಎದುರಿಗೆ ಕೂತಿದ್ದರು ಆ ಆಶೆಯಾಗಲಿಲ್ಲ. ಈಗಲೂ ಇಲ್ಲ. ಹಾಗಿದ್ದೂ ನಾನು ಅವಳನ್ನು ಯಾಕೆ ಹುಡುಕಿಕೊಂಡು ಹೋದೆ?

ಅವರಿಗೆ ಉತ್ತರ ಹೊಳೆಯಲಿಲ್ಲ. ಹೊರಗೆ ಅವಳು ಸ್ನಾನ ಮಾಡುತ್ತಿರುವ ಸದ್ದು ಕೇಳಿಸಿತು. ಸ್ಸ್ಸ್ ಎಂದು ನಾಲಿಗೆಯಲ್ಲಿ ನುಡಿದುಕೊಂಡು ಛಪ್ ಛಪ್ ಎಂದು ಶಬ್ದವಾಗುವಂತೆ ತೋಳು–ಮೈಗಳನ್ನು ಜೋರಿನಿಂದ ತಿಕ್ಕಿಕೊಳ್ಳುತ್ತಾಳೆ. ಮತ್ತೆಮತ್ತೆ ಮುಳುಗಿ ಏಳುತ್ತಿದ್ದಾಳೆ. ಈ ರಾತ್ರಿಯ ಚಳಿಯಲ್ಲಿ ಅದೆಷ್ಟು ಸ್ನಾನ ಮಾಡುತ್ತಿದ್ದಾಳೆ? ಮಾದಿಗತ್ವ ಕಳೆದು ಬ್ರಾಹ್ಮಣತ್ವ ಬರಬೇಕಾದರೆ ಅದೆಷ್ಟು ಮುಳುಗು ಹಾಕಬೇಕೊ! ಈ ಮಾತಂಗಿಯನ್ನು ಬ್ರಾಹ್ಮಣಿಯಾಗಿ ಮಾಡಲು ಸಾಧ್ಯವಿಲ್ಲವೇ? ಎಂಬ ಯೋಚನೆ ಇದ್ದಕ್ಕಿದ್ದ ಹಾಗೆಯೇ ಮನಸ್ಸಿನಲ್ಲಿ ಹುಟ್ಟಿತು. ಯಾಕೆ ಸಾಧ್ಯವಿಲ್ಲ? ಜಾತ ಬ್ರಹ್ಮರ್ಷಿ ವಸಿಷ್ಠರು ಮಾದಿಗಿತ್ತಿ ಅರುಂಧತಿಯನ್ನೇ ಮದುವೆಯಾಗಿ, ಪರಮ ಬ್ರಾಹ್ಮಣಿಯಾಗಿ ಮಾಡಿದರಲ್ಲ. ವಸಿಷ್ಠರ ತಪಶ್ಶಕ್ತಿ ಅಂಥದು. ನಾನು ಈ ಮಾತಂಗಿಯನ್ನು ಮದುವೆಯಾಗಬೇಕು. ಆಗಿದ್ದೇನೆ ಅಂತ ಪ್ರಪಂಚದ ಜನರೆದುರಿಗೆ ಘೋಷಿಸಬೇಕು. ದಿನಾ ಹೋಮ ಮಾಡಬೇಕು. ಅದರಲ್ಲಿ ಸಹಧರ್ಮಿಣಿಯಾಗಿ ಅವಳನ್ನೂ ಕೂಡಿಸಬೇಕು. ಅವಳಿಗೂ ಯಜ್ಞೋಪವೀತ ಧಾರಣೆ ಮಾಡಿಸಿ ಗಾಯತ್ರಿಯನ್ನು ಉಪದೇಶಿಸಬೇಕು. ನಾನು ಊರಲ್ಲಿಲ್ಲದ ದಿನ ಹವಿಸ್ಸನ್ನು ಅರ್ಪಿಸುವ ಅಧಿಕಾರ ಅವಳಿಗೆ ಪ್ರಾಪ್ತವಾಗಬೇಕು. ಈ ಗುಡಿಸಲೇ ಪರ್ಣಶಾಲೆಯಾಗಬೇಕು.

ಈ ಯೋಚನೆಯಿಂದ ಅವರಿಗೆ ತುಂಬಾ ಸ್ಥೈರ್ಯ ಮೂಡಿತು. ಮಾತಂಗಿಯ ಸದ್ದು ಕೇಳುತ್ತಿಲ್ಲ. ಉಡಲು ಬೇರೆ ಸೀರೆ ಇಲ್ಲದೆ ಅವಳು ಸಂಕೋಚದಿಂದ ಹೊರಗೇ ನಿಂತಿರಬಹುದು. ಒದ್ದೆ ಬಟ್ಟೆಯೇ ಬ್ರಾಹ್ಮಣಿಗೆ ಶ್ರೇಷ್ಠ ಉಡುಗೆ. ಅದಕೆಂತಹ ಸಂಕೋಚ

ಎಂದು ಅವರು ಲಾಟೀನನ್ನು ಕೈಲಿ ಹಿಡಿದು ಹೊರಗೆ ಬಂದರೆ ಕೊಳದ ಹತ್ತಿರ ಮಾತಂಗಿ ಇಲ್ಲ. ಆದರೆ ತುಸು ದೂರದಲ್ಲಿ ಹೋಗುತ್ತಿರುವ ಅವಳ ಅಸ್ಪಷ್ಟ ಆಕೃತಿ ಕಾಣಿಸಿತು. 'ಮಾತಂಗೀ' ಎಂದು ಕೂಗುತ್ತಾ, ದಾಪುಗಾಲು ಹಾಕಿ ಹಿಂಬಾಲಿಸಿ ಅವಳ ಒದ್ದೆ ಸೆರಗನು ಹಿಡಿದು ನಿಲ್ಲಿಸಿದರು.

'ನನ್ನ ಬಿಡ್ರಯ್ಯಾ,' ಅವಳು ಕೊಸರಿಕೊಂಡಳು.

'ಯಾಕೆ ಇದ್ದಕ್ಕಿದ್ದ ಹಂಗೆ ಹ್ವಂಟೆ?'

'ಕುಡ್ಡು ಮನ್ಗಿದೋಳನ್ನ ಹಿಂಗ್ ತ್ವಾಟದ ಗುಡ್ಲಿಗೆ ಕರ್ಕಂಡ್ ಬರಬೌದೇನ್ರಯ್ಯಾ? ಜಾತಸ್ಥುರು ಕಂಡ್ರೆ ಏನಂತಾರ? ನಿಮ್ಮ ಜಾತಿಯೋರು ಸುಮ್ಕಿರ್ತಾರಾ?'

'ಜಾತಿ–ಹೆದರಿಕೆ ಬ್ಯಾಡ, ನಿನ್ನ ಬ್ರಾಹ್ಮಣೆ ಮಾಡ್ತೀನಿ. ಬಾ'

ಅವಳು ಗೊಳ್ಳೆಂದು ನಕ್ಕಳು. ಸ್ನಾನ ಮಾಡಿದ ಮೇಲೆ ಅವಳ ಬಾಯಿಂದ ವಾಸನೆ ಹೊರಡುತ್ತಿರಲಿಲ್ಲ. ಕಣ್ಣಿನ ಕೆಂಪೂ ಇಳಿದಿತ್ತು.

'ಮಾದಿಗಿತ್ತೀನ ಹಾರುವಗಿತ್ತಿ ಮಾಡಾಕ್ ಆಯ್ತದೇನ್ರಯ್ಯ? ಒಯ್ತೀನಿ–' ಎಂದು ಮುಂದೆ ನಡೆದುಬಿಟ್ಟಳು. ಇವರು ಗರಬಡಿದವರಂತೆ ನಿಂತು ಅವಳು ಹೋದ ದಿಕ್ಕನ್ನೇ ನೋಡುತ್ತಿದ್ದರು.

❀ ❀ ❀ ❀

೬

ಬಿ. ಸಿ. ನಂ. ೨೦೮

*

ಶ್ರೀ. ನಾ. ಪೇಂಡಸೆಯವರ
ಪ್ರಸಿದ್ಧ ಮರಾಠಿ ಕೃತಿಯ ಕಥನ

*

ಬಿ. ಸಿ. ನಂ. ೨೦೮

ನಾನು ಕೆಲಸ ಮಾಡುತ್ತಿರುವ ಟ್ರಾನ್ಸ್‌ಪೋರ್ಟ್ ಕಂಪನಿಯ ಕಚೇರಿಯು ಆ ಅವಾಢವ್ಯ ಮೂರು ಅಂತಸ್ತಿನ ಕಟ್ಟಡವನ್ನೆಲ್ಲಾ ವ್ಯಾಪಿಸಿತ್ತು. ಕೆಳ ಅಂತಸ್ತಿನಲ್ಲಿ ಇರುವುದು ಟ್ರಾಫಿಕ್ ಖಾತೆ. ನೂರಾರು ಜನರ ಕಲಕಲಾಟ ಅಹೋರಾತ್ರಿ ಅಲ್ಲಿ ನಡೆದಿರುತ್ತದೆ. ಒಂದು ಕಡೆಗೆ, ಇಡಿಯ ದಿನದ ಕೆಲಸದಿಂದ ಬೆವೆತು ಕೊಳೆಯಾದ ಕಂಡಕ್ಟರ್ ಜನರು ಕೌಂಟರ್ ಮೇಲೆ ಜಮೆ ಮಾಡಬೇಕಾದ ಹಣವನ್ನು ಎಣಿಸುತ್ತಿರುತ್ತಾರೆ. ಇನ್ನೊಂದೆಡೆಗೆ ಬೆಂಚುಗಳ ಮೇಲೆ ತೂಕಡಿಸುತ್ತಿರುವ ಡ್ರೈವರ್ ಜನರು ಕಾಣುತ್ತಾರೆ.

ಕಂಡಕ್ಟರ್, ಡ್ರೈವರ್ ಜನಕ್ಕೆ ಕೆಲಸದ ವಿತರಣೆಯಾಗುವ ಸ್ಥಳದಲ್ಲಿಯ ಗದ್ದಲವನ್ನಂತೂ ಹೇಳಲಾಸಲ್ಲ. ಜಾಳಿಗೆಯಿಂದ ಮುಚ್ಚಿದ ಕೋಣೆಯೊಳಗೆ, ಕೆಲಸವನ್ನು ಹಂಚುತ್ತಿರುವ ಕಾರಕೂನರು ಒಂದೇ ಸಮನೆ ಒದ್ದಾಡುತ್ತಿರುತ್ತಾರೆ. ಊರಲ್ಲಿಯ ಬೇರೆ ಬೇರೆ ಚೌಕಿಗಳಿಂದ ಫೋನು ಬರುತ್ತವೆ; ಹೋಗುತ್ತವೆ. ನನ್ನ ಆಫೀಸಿನ ಸ್ಥಳವಿರುವ ಮೇಲಂತಸ್ತಿಗೆ ಹೋಗಬೇಕಾದರೆ ನಾನು ಈ ಗದ್ದಲದಲ್ಲಿ ಮೈ ತುರಿಸಿಕೊಳ್ಳುತ್ತಲೇ ಹೋಗಬೇಕಾಗುತ್ತದೆ. ಈ ಜಿನೆಯ ಪಾವಟಿಗೆಗಳೂ ಸಹ ಖಾಲಿ ಇದ್ದಾವೆಂಬ ನಿಯಮವಿಲ್ಲ. ನಾಲ್ಕಾರು ಜನ ಡ್ರೈವರರು ಮೊಳಕಾಲಿಗೆ ಟೊಪ್ಪಿಗೆಯನ್ನು ತೊಡರಿಸಿಕೊಂಡು ಹರಟೆ ಕೊಚ್ಚುತ್ತ ಕುಳಿತಿರುವ ಸಂಭವವೇ ಹೆಚ್ಚು.

ಈ ಜಗತ್ತಿನಲ್ಲಿ ಬಿ. ಸಿ. ನಂ. ೨೦೮ ಒಂದು ಬಿಂದು ಮಾತ್ರ.

ಒಂದು ಕ್ಷುಲ್ಲಕ ಜಗಳದಿಂದ ನನ್ನ ಅವನ ಪರಿಚಯದ ಜನ್ಮವಾಯಿತು. ಬೇರೆ ವೇಳೆಯಲ್ಲಿ ಅವನು ಬಂದಿದ್ದರೆ ಜಗಳವಾಗುತ್ತಿತ್ತೋ ಇಲ್ಲವೊ. ಅದು ತಿಂಗಳ ಕೊನೆಯ ವಾರ. ಈ ವಾರದಲ್ಲಿ ನಾವು ಕೆಲಸದ ಕುರುಡು ತೇರಿನ ಗಾಲಿಗೆ ಸಿಕ್ಕು ನುಚ್ಚುನುರಿಯಾಗಿ ಹೋಗುತ್ತೇವೆ. ಸಂಬಳದ ಬಗ್ಗೆ ಅನೇಕ ಕಾಗದಗಳು ಬಂದಿರುತ್ತವೆ. ಸಂಬಳಪತ್ರಿಕೆಗಳಲ್ಲಿ ಇವುಗಳನ್ನು ಸೇರ್ಪಡಿಸಿ ಜಮಾಖರ್ಚಿನ ತಾಳೆ ಹಾಕಬೇಕು. ಸಾವಿರಾರು ಜನ ಕೆಲಸಗಾರರ ಸಂಬಳ ಪತ್ರಿಕೆ ಸಿದ್ಧಪಡಿಸಬೇಕು. ಒಂದಲ್ಲ, ಎರಡು–ಮೂರು ಕಡೆಗೆ ಅವುಗಳನ್ನು ನೋಂದಾಯಿಸಬೇಕು.....

ಅವನು ಬಂದು ನನ್ನ ಮೇಜಿನ ಮುಂದೆ ನಿಂತ. ನಾನಾಗಿಯೇ ಅವನು ಬಂದ ಕಾರಣ ಕೇಳಬಹುದೆಂದೂ, ನನ್ನ ಕೈಯಲ್ಲಿಯ ಕೆಲಸ ಮುಗಿಯಲೆಂದೂ ಹಾಗೇ ನಿಂತ. ಅಲ್ಲಿಂದ ತಾನಾಗಿಯೇ ಮೆಲುದನಿಯಲ್ಲಿ—

''ಮಾಸ್ತರ ಸಾಬ್'' ಎಂದ.

"ಹೂಂ. ಬೋಲೊ. ನಂಬರ್ ಕ್ಯಾ ಹೈ?"

"ದೋಸೌ ಆಠ."

"ನಾಮ ಕ್ಯಾ ಹೈ?"

"ರಾಮಶರಣ ಲಲಿತಾಪ್ರಸಾದ ಶರ್ಮಾ."

"ಕ್ಯಾ ಮಂಗತಾ ಹೈ?"

"ಮುಝೇ ಐಸಾ ಪೂಛನೇಕಾ ಹೈ—" ಇಷ್ಟು ನುಡಿದು ಸುಮ್ಮನೆ ನಿಂತ. ಅಲ್ಲಿಂದ "ಊಪರ ತೋ ದೇಖಿಯೇ ಸಾಬ್" ಎಂದ.

"ನಹೀ."

"ಕ್ಯಾ ನಹೀ?" ಒಂದಿಷ್ಟು ಉಚ್ಚ ಸ್ವರದಲ್ಲಿ ಆತ ಕೇಳಿದ.

"ಊಪರ ದೇಖನೇಕೊ ಟಾಯಿಮ್ ನಹೀ."

"ಆಪ ಮುಝೆ ಕ್ಯಾ ಸಮಝತೇ ಹೈಂ?"

"ಕಂಡಕ್ಟರ ನಂ. ದೋ ಸೌ ಆಠ್." ಡ್ರೈವರ್ ನಂ. ೧೧೫ಳ ರ ಧಾನ್ಯ ಖರೀದಿಯ ನೋಂದನ್ನು ಸಂಬಳ ಪತ್ರಿಕೆಯಲ್ಲಿ ಮಾಡುತ್ತ ನಾನು ಹೇಳಿದೆ.

"ಮಾಸ್ಟರ ಸಾಬ್."

"ಕ್ಯಾ ಮಂಗತಾ ಹೈ?"

"ಚಾರ ಬರಸಕಾ ಹಮಾರಾ ರಜಾ."

"ಚಾರ ದಿನಕೆ ಬಾದ ಆವ್."

ಆದರೆ ನಂ. ೨೦೮ ಅಲ್ಲೇ ನಿಂತಿದ್ದ. ಅವನ ಉಪಸ್ಥಿತಿಯಿಂದ ನನ್ನ ಕೆಲಸದ ಮೇಲಿನ ಲಕ್ಷ್ಯ ಹಾರತೊಡಗಿತು. ಕೈಯಲ್ಲಿಯ ಲೆಕ್ಕಣಿಕೆಯನ್ನು ಮೇಜಿನ ಮೇಲೆ ಅಪ್ಪಳಿಸಿ ಅವನ ಮೇಲೆ ಹರಿಹಾಯ್ದೆ.

"ಹಟ್ ಜಾವ್ ಇಧರ್‌ಸೇ, ಖಾಲೀ ಪೀಲೀ ಸಾಲಾ ಸತಾತಾ ಹೈ"

"ನಹೀ ಹಟೇಗಾ! ಕ್ಯಾ ಕರೇಗಾ?" ಅವನ ದೊಡ್ಡ ಧ್ವನಿಯನ್ನು ಕೇಳಿ ನನ್ನ ಸಹೋದ್ಯೋಗಿಗಳು ಇತ್ತ ನೋಡಿದರು. ಅವನು ಇಷ್ಟು ಗಮಜು ತೋರಿಸಿದ ನಂತರ ನಾನು ಸುಮ್ಮನಿರಲೇ? ಕುರ್ಚಿಯನ್ನು ಬಿಟ್ಟೆದ್ದು ಮೊದಲಿನ ಉಚ್ಚ ಧ್ವನಿಯಲ್ಲಿಯೇ—

"ಕ್ಯಾ ಕರೇಗಾ? ತುಮಕೊ ದೇಖನೇಕಾ ಹೈ" ಎಂದೆ.

"ಹಾ, ಹಾ, ದೇಖನೇಕಾ ಹೈ? ಬತಾವ್. ಔರ್ ಧ್ಯಾನ ಮೇ ರಖಿಯೇ ಫಿರ್ ಗಾಲೀ ಬೋಲೇಗಾ ತೊ ಜಾನಸೇ ಕಾಟ್ ದೇಗಾ."

ಇಷ್ಟರಲ್ಲಿ ನಮ್ಮ ಸಾಹೇಬರು ತಮ್ಮ ಕ್ಯಾಬಿನ್ ಬಿಟ್ಟು ಹೊರಗೆ ನಿಂತುಕೊಂಡು "ನಂಬರ್ ದೋ ಸೌ ಆಠ್, ಇಧರ್ ಆವ್" ಎಂದರು.

"ದೇಖೋ ಸಾಬ್, ಇನ್‌ಸಾನ್ ಕೀ ಕೋಯಿ ಇಜ್ಜತ್ ಹೈ ಯಾ ನಹೀ?"

"ಇಧರ್ ತೋ ಆವ್ ಪಹಿಲಾ."

ಬಿ.ಸಿ.ನಂ. ೨೦೮ ಭಿರಿಭಿರಿ ಸಾಹೇಬರ ಹತ್ತಿರಕ್ಕೆ ಹೋದ. ನಾನು ಏನೂ ಆಗಿಲ್ಲವೆನ್ನುವವರಂತೆ ನನ್ನ ಕೆಲಸದಲ್ಲಿ ತೊಡಗಿದೆನಾದರೂ, ನನ್ನ ಕಿವಿ ಸಾಹೇಬರ ಕೋಣೆಯತ್ತ ತಿರುಗಿದ್ದವು. ರಾಮಶರಣನ ಉತ್ತರ ಪ್ರದೇಶದ ಹಿಂದೀ ನನಗೆ ಸಂಪೂರ್ಣ ಅರ್ಥವಾಗಿರದಿದ್ದರೂ, ನಾನು ಸಹಜದಲ್ಲಿ ಅಂದ 'ಸಾಲಾ' ಶಬ್ದದ ದುರ್ಲಾಭವನ್ನು ಪಡೆಯುತ್ತಿದ್ದುದು ಕಂಡುಬಂತು. ತುಸು ಹೊತ್ತಿನ ಮೇಲೆ ಅವನ ದನಿ ತಗ್ಗಿತು. ಅವನು ಹೊರಟ ನಂತರ ಸಾಹೇಬರು ನನ್ನನ್ನು ಕರೆಸಿದರು. ನಾನು ಆ ದಿನಗಳಲ್ಲಿ ಎಷ್ಟೊಂದು ಕೆಲಸದಲ್ಲಿ ತೊಡಗಿರುವೆನೆಂಬುದನ್ನು ಅವರು ಬಲ್ಲರು. ಅದನ್ನೇ ನಾನು ಮತ್ತೆ ವಿವರಿಸುತ್ತಿದ್ದಾಗ—

''ಅದಲ್ಲರೀ, ನಿಮ್ಮ ಹರಕು ಹಿಂದಿಯಿಂದಾಗಿ ಈ ಜಗಳವೆದ್ದಿತು'' ಎಂದರು.

''ಇದಕ್ಕೇನೂ ಬೈಗಳೆಂದು ಅನ್ನುವುದಿಲ್ಲ, ಸಹಜಾಸಹಜೀ ಎಲ್ಲರೂ ಉಪಯೋಗಿಸುತ್ತಾರೆ'' ಎಂದೆ ನಾನು.

''ಹಾಗ ಅನ್ನುವುದಕ್ಕಾದರೂ ಎಂಥಾ ರತ್ನವನ್ನ ಹುಡುಕಿ ತೆಗೆದಿರಿ!''

''ಯಾಕೆ?''

''ನಿಮಗ ಇವನ ಬಗ್ಗೆ ಗೊತ್ತಿಲ್ಲವೇನು? ಮಹಾ ತಲೆತಿರುಕ. ಹಾಗೆ ಕೇಳಿದರೆ ಸಂಭಾವಿತ. ರೇಗಿದರ ಮಾತ್ರ ಇನ್ನೊಬ್ಬರ ಜೀವ ತೆಗೆಯಲಿಕ್ಕೂ ಹಿಂದುಮುಂದೆ ನೋಡುವವರಲ್ಲ.''

ಮರುದಿನ ನಾನು ಅವನ ರಜೆಯ ಫೈಲನ್ನು ತಿರುವಿ ಹಾಕುತ್ತಿದ್ದೆ. ಇಡೀ ನಾಲ್ಕು ವರ್ಷದ ಅವಧಿಯಲ್ಲಿ ಅವನು ಒಂದು ಸಲವೂ ರಜೆ ತೆಗೆದುಕೊಂಡಿರಲಿಲ್ಲ, ರವಿವಾರ ಅಥವಾ ಅವರ ಬಿಡುವಿನ ದಿನ ಕಂಡಕ್ಟರ್ ಜನರು ಕೆಲಸ ಮಾಡಿದರೆ, ಅರ್ಧ ಪಗಾರವನ್ನೂ ಒಂದು ದಿನದ ರಜೆಯನ್ನೂ ಅವರ ಹೆಸರಿಗೆ ಜಮಾ ಹಿಡಿಯುತ್ತೇವೆ. ಅವನ ರಜೆಯ ಶಿಲ್ಕಿನ ಸಂಖ್ಯೆ ಒಟ್ಟುಗೂಡಿಕೆಯ ಮಿತಿಯನ್ನು ಮೀರಿದ್ದರಿಂದ ೪೦ ದಿನಗಳ ರಜೆ ''ಖೋತಾ'' ಆಗಿತ್ತು. ನಾಲ್ಕೈದು ವರ್ಷಗಳ ಅವಧಿಯಲ್ಲಿ ದೂರದ ತನ್ನ ಊರಿಗೆ ಒಮ್ಮೆಯೂ ಹೋಗಿರದ ಅದ್ಭುತ ಕಂಡಕ್ಟರ್ ಅಂದೇ ಮೊದಲ ಸಲ ನನ್ನ ದೃಷ್ಟಿಗೆ ಬಿದ್ದಿದ್ದ.

ಒಂದು ವಾರದ ನಂತರ ಬಿ.ಸಿ. ನಂ. ೨೦೮ ಮೆಟ್ಟಿಲನ್ನೇರಿ ನನ್ನ ಕಡೆಗೇ ಬರುವುದು ಕಂಡಿತು. ಅವನನ್ನು ತುಚ್ಛತೆಯಿಂದ ಕಾಣುವ ಸಿದ್ಧತೆಯಲ್ಲಿ ನಾನಿದ್ದೆ. ಅವನೋ ಎರಡೂ ಕೈ ಜೋಡಿಸಿಕೊಂಡು ನನ್ನೆದುರು ನಿಂತಿದ್ದ. ಅವನೇ ಮೊದಲು ಮಾತನಾಡಿಸಿದ. ತನ್ನನ್ನು ಕ್ಷಮಿಸಬೇಕೆಂದು ಅವನು ಹೇಳಿಕೊಳ್ಳುತ್ತಿದ್ದ. ಆ ದಿನ ಒಬ್ಬ ಪ್ಯಾಸೆಂಜರ್ ಕೂಡ ಜಗಳವಾಗಿದ್ದ ಕಾರಣ, ಅವನ ಚಿತ್ತ ಅಸ್ಥಿರವಾಗಿತ್ತಂತೆ!

ಬಹಳ ಹೊತ್ತು ಹೀಗೆ ಅನುನಯಿಸಿದ ಮೇಲೆ ನಾನು ಮಾತನಾಡುವ ಉಪಕಾರ ಮಾಡಿದೆ. ''ರಜಾ ಬೇಕಾಗಿತ್ತೇನು?'' ಎಂದು ಕೇಳಿದೆ. ''ಹಾಂ ಸಾಬ್'' ಎಂದನು. ಬನಾರಸ್ ಕಡೆಯಿಂದ ಒಬ್ಬ ಸಾಧು ಮುಂಬೈಗೆ ಬರಲಿದ್ದು ಅವನಿಂದ ಉಪದೇಶ ಪಡೆಯಲು ರಜೆ ಬೇಕಾಗಿದೆ ಎಂದು ತಿಳಿಸಿದನು.

ಬದಿಯಲ್ಲಿಯ ವಿಭಾಗಕ್ಕೆ ಹೋಗಿ ಒಂದು ಫಾರ್ಮು ತೆಗೆದುಕೊಂಡು ಬಂದು, ಅದರ ವಿವರಗಳನ್ನು ತುಂಬಿ ಪೂರ್ಣ ಮಾಡಿದೆ. ಅವನ ಸಹಿ ಮಾಡಿಸಿದೆ. ನಮ್ರಭಾವದಿಂದ ಆಭಾರ ಮನ್ನಿಸಿ ಅವನು ಹೊರಟುಹೋದ.

ರಜೆ ತಡವಿಲ್ಲದೇ ಮಂಜೂರಾಯಿತು. ಇನ್ನು ಕೆಲ ದಿನ ಅವನನ್ನು ಕಾಣುವ ಪ್ರಸಂಗವಿಲ್ಲವಲ್ಲ ಎಂದುಕೊಂಡೆ. ಒಂದು ದಿನ ಕಚೇರಿಯ ಕೆಲಸ ಮುಗಿಸಿ ಹೊರಡುವ ಬೇತಿನಲ್ಲಿದ್ದೆ. ಇತರ ಸಹೋದ್ಯೋಗಿಗಳು ಆಗಲೇ ಹೋಗಿದ್ದರು. ಅಷ್ಟರಲ್ಲಿ ನಂ. ೨೦೮ ಲಗುಬಗೆಯಿಂದ ನನ್ನ ಹತ್ತಿರ ಬಂದ ತುಸು ಹೊತ್ತು ಏನೂ ಮಾತಾಡಲಿಲ್ಲ.

"ಯಸ್! ಏನು ಬೇಕಾಗಿತ್ತು? ನೀ ರಜೆಯ ಮೇಲೆ ಇದ್ದೀಯಲ್ಲವೇನು?"

ಅವನು ಮಾತನಾಡದೇ ಕಿಸೆಯಲ್ಲಿಯ ಎರಡು ಕಾಗದದ ಪುಡಿಕೆಗಳನ್ನು ತೆಗೆದು ನನ್ನ ಕೈಯಲ್ಲಿ ಇರಿಸಿದ.

"ಇದೇನೊ?"

"ಗುರುಮಹಾರಾಜರ ಪ್ರಸಾದ ಸಾಹೇಬ."

ನಾನು ಒಂದು ಪುಡಿಕೆ ಬಿಚ್ಚಿ ಅದರಲ್ಲಿಯ ಗುಲಾಲನ್ನು ಹಣೆಗೆ ಹಚ್ಚಿಕೊಂಡೆ. ಇನ್ನೊಂದರಲ್ಲಿಯ ಎರಡು ಪುಠಾಣಿ ಕಾಳು, ಸಕ್ಕರೆ ಬಾಯಲ್ಲಿ ಹಾಕಿಕೊಂಡು ಅವನಿಗೆ ಪುಡಿಕೆಗಳನ್ನು ಹಿಂತಿರುಗಿ ಕೊಡಲು ಹೋದೆ.

"ನಿಮ್ಮ ಕಡೆಗೇ ಇರಲಿ ಸಾಹೇಬ, ತಮಗಂತೇ ತಂದೆ."

ಇದಾದ ನಂತರ ಪ್ರತಿನಿತ್ಯ ಅವನ ಭೆಟ್ಟಿಯಾಗುತ್ತಿತ್ತು. ನನ್ನ ದಾರಿಯನ್ನು ಕಾಯುತ್ತಲೇ ಕುಳ್ಳಿರುತ್ತಿದ್ದನೆಂದರೂ ಸರಿ. ನಾನು ಬರುವುದೇ ತಡ, ಅವನು ಲಗುಬಗೆಯಿಂದ ಎದ್ದು ಸಲಾಮು ಸಲ್ಲಿಸಿ ನನ್ನ ಕಡೆ ಬರುತ್ತಿದ್ದ. ನಿತ್ಯ ಅವನ ಕೂಡ ಏನು ಮಾತಾಡುವುದು? ಹೀಗೇ ನಾಲ್ಕಾರು ದಿನ ಕಳೆದವು. ಒಂದು ಸಲ ಅವನು ತೀರ ನನ್ನ ಹತ್ತಿರ ಬಂದು ಪಿಸುದನಿಯಲ್ಲಿ—

"ಸಾಹೇಬ್, ಕಳೆದ ಎರಡು ಮೂರು ದಿನದಲ್ಲಿ ಏನೂ ಆಗಿಲ್ಲವೇನು?" ಎಂದು ಕೇಳಿದ.

ನಾನು ಪ್ರಶ್ನಾರ್ಥಕವಾಗಿ ಅವನ ಕಡೆಗೆ ನೋಡಿದೆ. "ಏನರೆ ಶುಭ ಆಗಲೇಬೇಕು. ಅನೇಕರಿಗೆ ಪ್ರಸಾದದ ಫಲ ಕಂಡುಬಂದಿದೆ."

"ಹೇಳಿಕೊಳ್ಳುವಂತಹದೇನೂ ಆಗಿಲ್ಲ."

ನಿಜವೆಂದರೆ, ಅವನ ಪ್ರಸಾದವನ್ನು ಸ್ವೀಕರಿಸಿದ ಮರುದಿನವೇ ನನಗೆ ತಾತ್ಪೂರ್ತಿಕವಾಗಿ ಮುಖ್ಯ ಗುಮಾಸ್ತನ ಸ್ಥಾನ ದೊರಕಿತ್ತು, ಆ ಸ್ಥಾನವು ನನಗೆ ದೊರೆಯುವುದು ಎಂದೋ ನಿಶ್ಚಿತವಾಗಿತ್ತು, ನಾನು ಅಸತ್ಯವನ್ನು ಆಡಿದುದ್ದಕ್ಕೆ ಅದೇನು ಕಾರಣವಾಗಿರಲಿಲ್ಲ, ಆದರೆ ಆ ಸತ್ಯವನ್ನು ಹೇಳಿದ್ದರೆ, ತನ್ನಂತೆ ನಾನೂ ಒಬ್ಬ ಭಾವಿಕ ಭಕ್ತನೆಂದು ರಾಮಶರಣನ ಖಚಿತ ಕಲ್ಪನೆಯಾಗುವ ಸಂಭವವಿತ್ತು.

"ನನಗೆ ಏನೂ ಆಗಿಲ್ಲ, ಅಂಗಾರ, ಗುರು ಮಹಾರಾಜ ಇವರ ಮೇಲೆ ನನಗೆ ವಿಶ್ವಾಸವಿಲ್ಲ" ಎಂದೆ.

ನಾನು ಹೀಗೆ ಮಾತನಾಡಬಹುದೆಂದು ಅವನಿಗೆ ಅನಿಸಿರಲಿಲ್ಲ. ಚಕಿತನಾಗಿ ನನ್ನ ಕಡೆ ನೋಡುತ್ತ—

''ಸಾಬ, ಪ್ರಭು ರಾಮಚಂದ್ರನ ಪ್ರಸಾದ ಮು ನೀವು ದೇವರಿಗೆ ನಮಸ್ಕಾರವಾದರೂ ಮಾಡುತ್ತೀರಿಲ್ಲೊ?''

''ಜಗತ್ತಿನಲ್ಲಿ ದೇವರೇ ಇಲ್ಲ. ನಮಸ್ಕಾರ ಯಾರಿಗೆಂದು ಮಾಡುವುದು?''

''ಎಲ್ಲರೂ ಹೀಗೇ ಅನ್ನುತ್ತಾರೆ ಸಾಹೇಬ್. ಸಂಕಟ ಬಂತೆಂದರೆ ಮಾತ್ರ ದೇವರ ನೆನಪು ಆಗುತ್ತದೆ.''

''ಅದರ ಅರ್ಥ ದೇವರು ಇದ್ದಾನೆ ಅಂತ ಅಲ್ಲ. ಅದೆಲ್ಲಾ ಅಂಜುಬುರುಕರ ವಿಚಾರ. ಮನುಷ್ಯ ತನ್ನ ವಿನಾ ಯಾರನ್ನೂ ಅವಲಂಬಿಸಿ ನಿಲ್ಲಬಾರದು. ಈ ದೇವರ ಹುಚ್ಚಿಗೆ ಬಿದ್ದು ಯಾರ ಕಲ್ಯಾಣವೂ ಆಗಿಲ್ಲ. ನೀನೂ ಈ ಹುಚ್ಚು ನಾದವನ್ನು ಬಿಟ್ಟು ಬಿಡು'' ಎಂದೆ.

ದಿನಗಳೆದಂತೆ, ಅವನು ನನ್ನನ್ನು ತನ್ನ ಶ್ರದ್ಧೆಯತ್ತ ತಿರುಗಿಸುವ ಯತ್ನದಲ್ಲಿ ತೊಡಗಿದ. ಗಿಡದ ಬೀಜ ಎಲ್ಲಿಂದ ಬಂದಿತು? ನೀವು ಮಾತನಾಡುವುದು ಹೇಗೆ? ಗಾಳಿ ಹೇಗೆ ಬೀಸುತ್ತದೆ? ನೀವು ಜನ್ಮಧಾರಣೆ ಮಾಡಿದ್ದು ಹೇಗೆ? ಇತ್ಯಾದಿ ಪ್ರಶ್ನೆಗಳನ್ನು ಕೇಳುತ್ತಿದ್ದ. ಕ್ಯಾಂಟೀನಿನಲ್ಲಿ ಚಹ ಕುಡಿಯುತ್ತ ನಾನು ಕುಳಿತಿರುತ್ತಿದ್ದಾಗ ಅಲ್ಲಿಗೂ ಒಮ್ಮೊಮ್ಮೆ ಬರುತ್ತಿದ್ದ. ಆಗ ಅವನ ಇಂಥ ಪ್ರಶ್ನೆಗಳಿಗೆ ಉತ್ತರ ಹೇಳುವಾಗ, ಅವನನ್ನು ಒಂದು ಹೊತ್ತುಗಳೆಯುವ ಸಾಧನವಾಗಿ ನಾನು ಉಪಯೋಗಿಸುತ್ತಿದ್ದೇನೆ ಎಂಬ ಕಲ್ಪನೆ ಅವನಿಗೆ ಹೊಳೆದಿರಲಿಲ್ಲ.

೨

ಕಳೆದ ಎರಡು ಮೂರು ದಿನಗಳಿಂದ ನಂ. ೨೦೮ ತನ್ನ ಠರಾವಿಕ ಸ್ಥಾನದಲ್ಲಿ ಕಾಣುತ್ತಿರಲಿಲ್ಲ. ಆ ಬಗ್ಗೆ ವಿಚಾರಿಸಬೇಕೆಂದೆನಿಸಿತಾದರೂ ನನ್ನ ಸ್ಥಾನ, ಪ್ರತಿಷ್ಠೆಯ ನನ್ನ ಮನಸ್ಸಿಗೆ ಒಪ್ಪಿತವಾಗಿರಲಿಲ್ಲ. ಎರಡು ದಿನದ ನಂತರ ಕಾರಣ ತಿಳಿದುಬಂದು ಅವಾಕ್ಕಾದೆ. ಅವನನ್ನು ಆರು ದಿನದ ಮಟ್ಟಿಗೆ ಸಸ್ಪೆಂಡ್ ಮಾಡಲಾಗಿತ್ತು. ಕನ್ನಡಿಯಂತೆ ಕಲಕಿಸುವ ಸರ್ವಿಸ್ ರಕಾರ್ಡ್ ಇರುವ ವ್ಯಕ್ತಿಯು ಸಸ್ಪೆಂಡ್ ಆಗುವಂಥದೇನು ಮಾಡಿರಬೇಕು? ನನಗೆ ತಡೆಯಲಾಗಲಿಲ್ಲ. 'ಸಾರ್ಜರ್'ನಿಗೆ ಫೋನ್ ಮಾಡಿದೆ.

''ಹಲೋ! ಬಿ. ಸಿ. ನಂ. ೨೦೮ ಸಸ್ಪೆಂಡ್ ಆಗಿದ್ದಾನಂತಲ್ಲ?''

''ಯಸ್ ಸರ್.''

''ಅವನು ಬಂದರೆ ಒಂದಿಷ್ಟು ನನ್ನ ಕಡೆ ಕಳಿಸಿಕೊಡು'' ಎಂದೆ.

ಆಗಿನಿಂದ ನಾನು ಅವನ ಬರವಿನ ದಾರಿಯನ್ನೇ ಉತ್ಸುಕತೆಯಿಂದ ಕಾಯುತ್ತಿದ್ದೆ. ಅಂತೂ ಒಮ್ಮೆ ಬಂದ. ಅವನ ಮೋರೆಯ ಮೇಲೆ ವಿಷಾದದ, ಚಿಂತೆಯ ಯಾವ

ಲಕ್ಷಣಗಳೂ ಮೂಡಿರಲಿಲ್ಲ. ಸಸ್ಪೆಂಡ್ ಆದದ್ದರ ನಿಜವಾದ ಕಾರಣವನ್ನು ಕೆದರಿ ಕೇಳಿದೆ. ಸರಿಯಾಗಿ ಉತ್ತರ ಹೇಳಲಿಲ್ಲ. ಈ ಶಿಕ್ಷೆಯ ವಿರುದ್ಧ ಅಪೀಲು ಮಾಡಿದುದಾಗಿಯೂ ಅದರಲ್ಲಿ ತಾನು ಗೆದ್ದೇ ತೀರುವುದಾಗಿಯೂ ಹೇಳಿದ, ಹೊರಟುಹೋದ.

ಅವನ ಅರ್ಧಮರ್ಧ ಸುದ್ದಿಯಿಂದ ನನಗೆ ಸಮಾಧಾನವಾಗದೇ ಕೋರ್ಟ್‌ಕಾರಕೂನನ ಕಡೆಗೆ ಹೋಗಿ, ಈ ಪ್ರಕರಣದ ಫೈಲನ್ನು ಇಸಿದುಕೊಂಡೆ. ಕಂಪನಿಯ ಅಪಾಧವ್ಯ ವ್ಯವಹಾರದಲ್ಲಿ ಇಂಥ ಕೇಸುಗಳು ಎಷ್ಟೋ ಏನೋ! ಈ ಪ್ರಕರಣದಲ್ಲಿ ಆದದ್ದೆಂದರೆ, ಒಬ್ಬ ಫಾರಸೀ ಹೆಣ್ಣು ಮಗಳು ತನ್ನ ಸಂಗಡ ಒರಟುತನದಿಂದ ಮಾತನಾಡಿದನೆಂದು, ಅವನ ಮೇಲೆ ಫಿರ್ಯಾದು ಮಾಡಿದ್ದಳು. ನನಗೆ ಕಾದಿದ್ದ ಆಶ್ಚರ್ಯವೆಂದರ, ನನಗೂ ಅವನಿಗೂ ಜಗಳವಾದ ದಿನವೇ ಈ ಘಟನೆ ನಡೆದಿತ್ತು.

ಅಪೀಲು ಮಾಡಿದಂದಿನಿಂದ ರಾಮಶರಣನಲ್ಲಿ ಭಾರೀ ಬದಲಾವಣೆಯಾಗಿತ್ತು. ಮೂಲೆಯಲ್ಲಿಯ ಬೆಂಚಿನ ಮೇಲೆ ಕುಳಿತುಕೊಂಡು, ತುಳಸೀ ಮಣಿಯ ಮಾಲೆಯನ್ನು ತಿರುಗಿಸುತ್ತಿದ್ದ. ತನ್ನೆಲ್ಲ ವೇಳೆಯನ್ನು ರಾಮಧ್ಯಾನದಲ್ಲಿಯೇ ಕಳೆಯುತ್ತಿದ್ದನೆಂದರೂ ಸರಿ. ಅವನ ಪ್ರಭು ರಾಮಚಂದ್ರಜಿಯ ಸತ್ವ ಪರೀಕ್ಷೆಯಾಗಲಿತ್ತು.

ಅಫೀಲಿನ ನಿರ್ಣಯ ಹೊರಬೀಳುವವರೆಗೂ ಅತ್ಯಂತ ನಿಶ್ಚಿಂತ ಮುದ್ರೆಯಿಂದ ಇದ್ದ ರಾಮಶರಣ, ಅಂದು ಹೊರಬೀಳುತ್ತಲೂ ಕುಸಿದು ಹೋದನು. ಆ ದಿನ ಸಂಜೆ, ಜಿನೆಯ ಪಾವಟಿಗೆಯ ಮೇಲೆ ಮೊಣಕಾಲಿನಲ್ಲಿ ಮುಖವನ್ನು ಹುದುಗಿಸಿ ಕುಳಿತ ಅವನ ಮೈದಡವಿ 'ರಾಮಶರಣ' ಎಂದೆ. ಆತ ಸುಮ್ಮನಿದ್ದ. ನಾನೇ ಬಲವಂತದಿಂದ ಅವನ ಮುಖವನ್ನೆತ್ತಿದಾಗ ಅವನು ಅಳುತ್ತಿದ್ದುದು ಕಂಡು ಬಂತು. ಅವನನ್ನು ಕೈ ಹಿಡಿದು ಎಬ್ಬಿಸಿ, ಗದ್ದಲವಿಲ್ಲದಲ್ಲಿ ಕರೆದುಕೊಂಡು ಬಂದೆ.

''ನನಗೆ ನಾಚಿಕೆ ಅನಿಸ್ತದೆ ಸಾಹೇಬ್. ನನ್ನ ರಿಕಾರ್ಡಿಗೆ ಮಶಿ ಬಳೀತು''

''ಆ ಹೆಣ್ಣುಮಗಳಿಗೆ ಬೈಯುವಾಗ ನಾಚಿಕೆ ಅನಿಸಲಿಲ್ಲೇನು?''

ರಾಮಶರಣ ತಟ್ಟನೇ ಮುಖವೆತ್ತಿ ತೀಕ್ಷ್ಣವಾಗಿ ನೋಡುತ್ತ—

''ನೀವು ಈ ಮಾತು ಅಂದಿರೆಂದು ಸುಮ್ಮನಿದ್ದೇನೆ. ಇನ್ನಾರಾದರೂ ಅಂದಿದ್ದರೆ ಚಪ್ಪಲಿಯನ್ನೇ ತೆಗೆಯುತ್ತಿದ್ದೆ.''

''ಅಂದರೆ ಆಕೆ ಮಾಡಿದ ಆರೋಪ ಸುಳ್ಳೇನು? ಆದದ್ದಾದರೂ ಏನು?''

''ಐದು ವರ್ಷದ ಹುಡುಗನ ಟಿಕೀಟು ತೆಗೆಸಿದ್ದಿಲ್ಲ. ಕೇಳಿದರೆ ಎರಡೂವರೆ ವರ್ಷ ಎಂದಳು.''

''ಬಿಟ್ಟು ಬಿಡಬೇಕಿತ್ತು.''

''ಅಲ್ಲಿಂದ ಇನಸ್ಪೆಕ್ಟರರು ನನ್ನನ್ನು ಬಿಡುತ್ತಿದ್ದರೆ? ಪಾಪಾಣಗೆ ಸುಳ್ಳು ಹೇಳುವುದೆ? ನಾನು ಹುಡುಗನ ಟಿಕೆಟ್ ತೆಗೆಯಲೇಬೇಕೆಂದು ಹೇಳಿ ಹಣ ವಸೂಲ್ ಮಾಡಿದೆ.''

''ಹೂಂ. ಅದಕ್ಕೆ ಆಕೆ ಹೀಗೆ ದ್ವೇಷ ಸಾಧಿಸಿದಳೇನು? ಮತ್ತೆ ಯೂನಿಯನ್ನಿನ ಕಡೆ ಈ ಪ್ರಕರಣವನ್ನು ಒಯ್ಯಬಹುದಿತ್ತಲ್ಲ?''

"ಯೂನಿಯನ್? ಹಂ. ಯೂನಿಯನ್ ಬರೇ ಚಂದಾ ಪಿರಿಯಲಿಕ್ಕೆ ಇದೆ ಸಾಹೇಬ್."

ಇಷ್ಟು ನುಡಿದು ರಾಮಶರಣ ಮೇಲೆದ್ದ. ಅವನು ಚಹ ತೆಗೆದುಕೊಳ್ಳಲು ಅನುಗ್ರಹಪಡಿಸಿದರೂ ಒಪ್ಪಲಿಲ್ಲ.

ಒಂದು ವಾರದ ಶಿಕ್ಷೆಯನ್ನು ಅನುಭವಿಸಿ ರಾಮಶರಣನು ಮತ್ತೆ ತನ್ನ ಡ್ಯೂಟಿಗೆ ಹಾಜರಾದ. ಡ್ಯೂಟಿ ಇಲ್ಲದಾಗ ತನ್ನ ಆ ನಿರ್ದಿಷ್ಟ ಸ್ಥಳದಲ್ಲಿ ಬಂದು ಕುಳಿತ. ಅವನ ಮೋರೆ ಸಣ್ಣದಾಗಿತ್ತು, ಕಾಯ ಅಟ್ಟಿಸಿತ್ತು, ಕಣ್ಣು ಒಳಸಟ್ಟಿದ್ದವು.

ತಿಂಗಳ ಕೊನೆಯ ವಾರ ಮತ್ತೆ ಬಂದಿತು. ದೈನಂದಿನಿಯ ಕಡೆಗೆ ನೋಡಿದೆ. ಇಂದು ನಮ್ಮ ಜಗಳದ ಹುಟ್ಟಿದ ದಿನವಿತ್ತು: ಅಲ್ಲ, ಮೊದಲನೆ ಮಾಸಿಕ ಶ್ರಾದ್ಧ. ರಾಮಶರಣ ಬಂದರೆ ಅವನಿಗೆ ಅದರ ನೆನಪು ಮಾಡಿ ಕೊಡಬೇಕೆಂದಿದ್ದೆ. ಅವನು ಮರುದಿನ ನನ್ನ ಟೇಬಲ್ಲಿಗೇ ಬಂದ. ಸಸ್ಪೆಂಡ್ ಆಗಿದ್ದರಿಂದ ಸಂಬಳದಲ್ಲಿ ಎಷ್ಟು ಕಡಿತವಾಗಬಹುದೆಂಬ ಲೆಕ್ಕ ಅವನಿಗೆ ಬೇಕಾಗಿತ್ತು, ಅವನ ಸಂಬಳ–ಭತ್ತೆಯ ಗುಣಾಕಾರ ಹಾಕಿದೆ. ಶ್ವಾಸ ನಿರೋಧಿಸಿ ರಾಮಶರಣ ನನ್ನ ಕಡೆಗೆ ನೋಡುತ್ತಿದ್ದ. ಅವನ ಮೂಲ ಪಗಾರವಲ್ಲದೇ ಇತರ ಬಾಬುಗಳಲ್ಲಿಯೂ ಕಡಿತವಾಗುತ್ತಿದ್ದುದರಿಂದ ಕಡಿತದ ಒಟ್ಟು ಮೊತ್ತ ಅವನ ಪಾಲಿಗೆ ದೊಡ್ಡದಾಗಿತ್ತು, ಆ ಅಂಕಿಯನ್ನು ಹೇಗೋ ಹೇಳಿದವನೇ ಅವನ ಮನಸ್ಸನ್ನು ಸಮಾಧಾನಪಡಿಸಲಿಕ್ಕೆಂದು ನಾಲ್ಕಾರು ಜನ ಕಂಡಕ್ಟರರ ಹಳೆಯ ಕಾರ್ಡುಗಳನ್ನು ಹುಡುಕಿ ಆಯ್ದು ಅವನ ಮುಂದೆ ಒಗೆದೆ.

"ಏನಿದು?" ಎಂದು ರಾಮಶರಣ ಕೇಳಿದ,

"ಸಸ್ಪೆಂಡ್ ಆದ ಕಂಡಕ್ಟರ್ ಜನರ ಕಾರ್ಡ್."

"ಪ್ರತಿ ತಿಂಗಳು ಎಷ್ಟು ಮಂದಿ ಸಸ್ಪೆಂಡ್ ಆಗತಾರ ಸಾಹೇಬರ?"

"ಬಹಾಳ ಮಂದಿ. ನಿನಗಿಂತ ಹೆಚ್ಚು ದಿವಸ ಸಸ್ಪೆಂಡ್ ಆದವರು ಎಷ್ಟೋ ಮಂದಿ ಇದ್ದಾರ."

"ಏನು ಮಾಡಿದ್ದರು ಇವರು?"

"ಹೀಗೇ ಏನಾದರೂ. ಯಾರು ಚೌಕಶಿ ಮಾಡುತ್ತಾರ?"

"ನಮಗೆ ಯಾರೂ ತ್ರಾತಾ ಇಲ್ಲವೇ?"

"ನಿಮ್ಮ ತ್ರಾತಾ ಪ್ರಭು ರಾಮಚಂದ್ರಜೀ."

ನಾನು ಆ ಕೂಡಲೇ ತುಟಿ ಕಚ್ಚಿಕೊಂಡೆ. ಹಾಗೆ ಹಂಗಿಸಬಾರದಿತ್ತು, ನನ್ನ ಉಪರೋಧಕ ಉತ್ತರದಿಂದ ಅವನು ಕಂಗಡಲಿಲ್ಲ.

"ಮಾಸ್ತರ್ ಸಾಬ್. ಪ್ರಭು ರಾಮಚಂದ್ರಜೀ ಇದ್ದೇ ಇದ್ದಾನೆ. ಆದರ ನಾವು ಕೈಕಾಲು ಅಲುಗಾಡಿಸದೇ—"

"ಅದನ್ನೇ ಹೇಳುತ್ತೇನೆ. ನಮ್ಮ ಅನ್ಯಾಯದ ನಿವಾರಣೆ ಒಬ್ಬನಿಂದ ಇಬ್ಬರಿಂದ ಆಗುವದಿಲ್ಲಾಂತ. ಒಬ್ಬ ಕಂಡಕ್ಟರನಿಗೆ ಕುಳಿತ ಹೊಡೆತ—ಆಂ, ನಡಿ. ಕ್ಯಾಂಟೀನಿಗೆ ಹೋಗೋಣ."

ಕ್ಯಾಂಟೀನಿನಲ್ಲಿ ರಾಮಶರಣ ಅಧೀರನಾಗಿ ಕೇಳಿದ :

"ಏನಂತಿದ್ದಿರಿ, ಮಾಸ್ಟರ್ ಸಾಬ್?"

"ಒಬ್ಬ ಕಂಡಕ್ಟರನಿಗೆ ಕೂತ ಹೊಡೆತ ಐದು ಸಾವಿರ ಮಂದಿ ಕಂಡಕ್ಟರ್ ಡ್ರೈವರರಿಗೆ ಕೂತಿತು ಅಂದರೆ, ಒಂದು ಶಕ್ತಿನಿರ್ಮಾಣ ಆಗುತ್ತದೆ."

"ನೀವನ್ನುವುದು ಬರೋಬರಿ. ರಾಮಪ್ರಭು ಸರ್ವತ್ರ ಇದ್ದಾನೆ ಅಂತ ನಾವು ಬರೇ ಬಾಯಿಂದ ಹೇಳಿ ಏನು ಪ್ರಯೋಜನ? ನಾವೂ ಕಾರ್ಯ ಮಾಡಬೇಕು."

ಚಹ ತೆಗೆದುಕೊಂಡ ಮೇಲೆ ರಾಮಶರಣ ಎದ್ದ.

"ಹೋಗತ್ತೇನೆ ಸಾಹೇಬ್, ಡ್ಯೂಟಿ ವೇಳೆ ಆಯಿತು."

"ಎಂಟು ದಿನದಲ್ಲಿ ಎಷ್ಟು ಸೊರಗಿರುವಿ!"

"ಬರೇ ಹಾಲಿನ ಮೇಲಿದ್ದೆ, ಸಾಹೇಬ್, ಇಡೀ ವಾರ,"

"ವ್ಯರ್ಥ ತ್ರಾಸ ಮಾಡಿಕೊಂಡಿ."

"ವ್ಯರ್ಥ ಹೇಗಂತೀರಿ ಮಾಸ್ಟರ ಸಾಬ್? ಒಳಗೊಳಗೆ ಕುದಿಯಲಿಕ್ಕೆ ಹತ್ತಿದ್ದೇನೆ. ನನ್ನ ರಿಕಾರ್ಡಿಗೆ ಮಸಿ ಹತ್ತಿತು. ನನ್ನ ಹಾಗೆ ಇನ್ನೂ ಎಷ್ಟೋ ಜನರಿಗೆ ಅನ್ಯಾಯ ಆಗಿದೆ ಅಂತ ಹೊಟ್ಟೆಯೊಳಗೆ ತಳಮಳ ಆಗುತ್ತದೆ."

೩

ಈ ಘಟನೆ ನಡೆದು ಒಂದು ವರ್ಷ ಸರಿಯಿತು. ಈ ವರ್ಷವೂ ಘಟನೆಗಳು ನಡೆದುಹೋದವು. ನನ್ನ ಮುಖ್ಯ ಮುನೀಮನ ಸ್ಥಳ ಕಾಯಂ ಆಗಿ ಹಳೆಯ ಮಾತಾಗಿದ್ದಿತು. ನನಗೆ ಇಡೀ ಆಫೀಸಿನ ಚೀಫ್ ಕ್ಲಾರ್ಕನ ಹುದ್ದೆ ದೊರೆಯಲಿದೆಯೆಂಬ ಸುದ್ದಿ ಕೇಳಬರುತ್ತಿತ್ತು, ಒಂದು ದಿನ, ಅದಕ್ಕಾಗಿ ಸಾಹೇಬರಿಂದ ಕರೆ ಬಂದಾಗ, ಎಲ್ಲರೂ ನನ್ನನ್ನು ಅಭಿನಂದಿಸುವವರೇ.

ನಾನು ಒಳಗೆ ಹೋದಕೂಡಲೇ ಸಾಹೇಬರು ತಾವು ಮಾಡುತ್ತಿದ್ದ ಕೆಲಸವನ್ನು ಬದಿಗಿರಿಸಿ, 'ಕೂಡ್ರಿ! ನಿಮಗೆ ಒಂದು ಆನಂದದ ಸುದ್ದಿಯನ್ನು ಹೇಳುವುದಿದೆ. ನೀವು ಈ ಇಡೀ ಆಫೀಸಿನ ಚೀಫ್ ಕ್ಲಾರ್ಕ್ ಆದಿರೆಂದರೆ—ಬೇಗ ಆಗುವವರೇ ಇದ್ದೀರಿ. ನಿಮ್ಮ ನೇಮಕದ ಆರ್ಡರ್ ಟಿ.ಎ. ಓನ ಕಡೆಗೆ ಹೋಗಿದೆ. ಒಂದೆರಡು ದಿನದಲ್ಲಿ ಬರಬಹುದು."

ಇಷ್ಟು ನುಡಿದು ಸಾಹೇಬರು ಮತ್ತೆ ಕೆಲಸದಲ್ಲಿ ತೊಡಗಿದರು.

''Thank you, Sir'' ಎಂದು ಹೇಳಿ ನಾನು ಹೊರಡಹತ್ತಲು, ಅವರು ಸನ್ನೆ ಮಾಡಿ ಕೂಡ್ರಿಸಿದರು.

''ನಿಮ್ಮ ಸಂಗತೀ ಒಂದಿಷ್ಟು ಖಾಸಗೀ ವಿಷಯ ಮಾತನಾಡುವುದಿದೆ. ನಾನೀಗ ಆಫೀಸರ್ ಎಂದಲ್ಲ, ನಿಮ್ಮ ಒಬ್ಬ ಹಿತಚಿಂತಕನೆಂಬ ನಾತೆಯಿಂದ ಹೇಳುತ್ತಿದ್ದೇನೆ. ಒಂದಿಷ್ಟು ಸಾರಾಸಾರ ವಿಚಾರ ಇಚಾರ ಇಟ್ಟುಕೊಂಡಿರೆಂದರ, ನನ್ನ ಈ ಕುರ್ಚಿಯ ಮೇಲೆ ಕೂಡ್ರುವ ಯೋಗವೂ ನಿಮಗೆ ಬಂದೀತು. ಆಫೀಸರ್ ಆಗಲಿಕ್ಕ ಬೇಕಾಗುವ ಚಾಲಾಖ್ ಬುದ್ಧಿ, ಕರ್ತೃತ್ವಶಕ್ತಿ ಇವು ನಿಮ್ಮಲ್ಲಿ ಇವೆ. ಆದರ ಇವುಗಳ ಜೊತೆಗೆ ಮುಂಧೋರಣೆಯೂ ಬೇಕಾಗುತ್ತದೆ. ಉದಾಹರಣಾರ್ಥ ನೀವು ಮೇಲೆ ಹೋದಹಾಗೆಲ್ಲ ಯೂನಿಯನ್ನಿನ ಸಂಬಂಧ ಬಿಡಬೇಕಾಗುತ್ತದ.''

''ಈಚೆಗೆ ನಾನು ಯೂನಿಯನ್ನಿನ ಸಂಗಡ ಏನೂ ಸಂಪರ್ಕವನ್ನಿಟ್ಟು ಕೊಂಡಿಲ್ಲ. ಯಾಕೆ, ನನ್ನ ಮಾತಿನ ಮೇಲೆ ವಿಶ್ವಾಸವಿಲ್ಲವೆ?''

''ಹಾಗೇನಿಲ್ಲ. ಶಬ್ದಶಃ ಅರ್ಥ ಮಾಡಿದರ ನಿಮ್ಮ ಅಂಬೋಣ ಸತ್ಯವಿರಬಹುದು. ಆದರೆ....''

''ಹೇಳ್ರಿ ಸಾಹೇಬರೇ, ಸಂಕೋಚ ಮಾಡಿಕೊಳ್ಳಬೇಡಿರಿ.''

''ಬಿ.ಸಿ. ನಂ. ೨೦೮ ಹೊತ್ತುಗೊತ್ತು ಇಲ್ಲದೆ ನಿಮ್ಮ ಕಡಗೆ ಬರುತ್ತಾನೆ.''

''ಹೌದು''

''ನಿಮ್ಮನ್ನು ಕ್ಯಾಂಟೀನಿಗೂ ಕರಕೊಂಡು ಹೋಗುತ್ತಾನೆ. ಇದು. ನೋಡ್ರಿ. ಅವ ಯೂನಿಯನ್ನಿನೊಳಗೆ ಸೇರಿಕೊಂಡ ಹೊಸಾ ರಿಕ್ರೂಟ್. ಹುಷಾರ್ ಇದ್ದಾನೆ. ಯೂನಿಯನ್ನಿನೊಳಗ ಅವನ ಪ್ರಸ್ತ ಬಹಳ ಬೆಳೆದಿದೆ. ಇಂಥಾ ವ್ಯಕ್ತಿ ಮೇಲಿಂದ ಮೇಲೆ ನಿಮ್ಮ ಕಡೆ ಬರುವುದು....''

''ಅವ ಯೂನಿಯನ್ನಿನ ಮುಖ ಸಹಿತ ನೋಡದಿದ್ದ ಕಾಲದಿಂದ ನನ್ನ ಕಡ ಬರುತ್ತಾನೆ....''

''ನನಗೆ ಗೊತ್ತಿದೆ, ನಾನೇ ಅಲ್ಲೇನು ನಿಮ್ಮ ಅವತ್ತಿನ ಜಗಳ ಬಿಡಿಸಿದವ? ಅದೇ ವ್ಯಕ್ತಿ ಇಂದು ನಮ್ಮ ಮುಂದ ಎಂಥೆಂಥಾ ಮುದ್ದೆಗಳನ್ನು ಚಾಚುತ್ತಾನೆ. ಅವು ಅವನ ತಿಳಿವಳಿಕೆಗೆ ಮೀರಿದವಾಗಿವೆ. ೯೧೦ ಡ್ರೈವರನ ಕೇಸು ನಿಮಗೆ ಗೊತ್ತಿರಬೇಕು. ತುಂಬಿದ ಸಭೆಯೊಳಗ ನಿಮ್ಮ ೨೦೮ ಹೇಳಿದ— '೯೧೦ ನಂಬರಿನವನ ಬಡತಿ, ಆರು ತಿಂಗಳು ಮುಂದೂಡೋ ವಿಚಾರವನ್ನು ಕಂಪನಿಯವರು ಮೊದಲೇ ಮಾಡಿದ್ದರು ಅಂತ; ಚೌಕಶಿಯ ನಾಟಕ ಮಾಡಿದರು ಅಂತ' ಇಂಥಾ ಆರೋಪದಿಂದ ಕಂಪನಿಗೆ ಏನೂ ಆಗೋದಿಲ್ಲ, ನಿಜ. ಆದರೆ ಆಫೀಸಿನ ಒಳಗಿನ ಈ ಸುದ್ದಿ ೨೦೮ ಗೆ ಹೇಗೆ ಗೊತ್ತಾಗುತ್ತದೆ ಅಂತ 'ಟಿ.ಸಿ.' ಯವರು ಮೀಟಿಂಗಿನಲ್ಲಿ ಪ್ರಸ್ತಾಪಿಸಿ ಅದನ್ನು ಕಂಡುಹಿಡಿಯಲಿಕ್ಕೆ ಹೇಳಿದರು.''

''ಇದರಲ್ಲಿ ನಂದೇನೂ ಸಂಬಂಧ ಇಲ್ಲ.''

"ನನಗೆ ವಿಶ್ವಾಸ ಇದೆ. ಆದರೆ ನಿಮ್ಮ ಅವನ ಸಂಬಂಧ ಎಲ್ಲರಿಗೂ ಗೊತ್ತಿರುವಾಗ, ಉಳಿದವರು ಅವನ್ನು ನಂಬಲಿಕ್ಕಿಲ್ಲ. ಇನ್ನೂವರೆಗಂತೂ ನಿಮ್ಮ ಹೆಸರು ಏನೂ ಬಹಿರಂಗಕ್ಕೆ ಬಂದಿಲ್ಲ, ವಿಚಾರ ಮಾಡಿರಿ. ಇಂಥಾ ಜನರು, ಇಲ್ಲೇ ಯಾಕೆ, ಇತರ ರೀತಿಯಿಂದಲೂ ನಿಮ್ಮ ಸಂಬಂಧದೊಳಗೆ ಬರುವುದು ನಿಮ್ಮ ಮುಂದಿನ ಶ್ರೇಯಸ್ಸಿನ ದೃಷ್ಟಿಯಿಂದ ಒಳ್ಳೆಯದಲ್ಲ."

"ನನಗೆ ಅವನೊಡನೆ ಬರೇ ಸ್ನೇಹ ಇದೆ."

"ಬಸ್ ಕಂಡಕ್ಟರನ ಜೋಡಿ?"

"ನೋಡಲಿಕ್ಕೆ ವಿಚಿತ್ರ ಅನಿಸಬಹುದು. ನಾನು ಅಂದರೆ ಅವನು ಜೀವ ಬಿಡತಾನೆ. ಆದರ ದಿಂದ ಕಾಣುತಾನೆ. ಆದರೆ ಕಂಪನಿಯ ಗುಪ್ತ ಸುದ್ದಿಯನ್ನು ಅವನ ಮುಂದ ಹೇಳುವಷ್ಟು ಬೇಜವಾಬ್ದಾರಿತನ ನಾ ಮಾಡಬಹುದೆ?"

"ಅಲ್ಲರೀ, ಇದು ನನಗೆ ಒಪ್ಪಿಗೆ ಇದೆ ಅಂತ ಹೇಳಿದೆನಲ್ಲ. ಆದರೆ ಅನ್ಯರಿಗೆ ಏನು ಹೇಳುವುದು? ಇದು ನೋಡ್ರಿ. ನಿಮ್ಮ ಖಾಸಗಿ ವಿಷಯದೊಳಗೆ ಇದಕ್ಕೂ ಹೆಚ್ಚು ಕೈಹಾಕುವ ಇಚ್ಛೆ ನನಗಿಲ್ಲ. ಇಷ್ಟೇ, ನಿಮ್ಮ ಭವಿಷ್ಯದ್ದು, ನಿಮ್ಮ ಕುಟುಂಬದ್ದು— ಈ ದೃಷ್ಟಿಯಿಂದಲೂ ವಿಚಾರ ಮಾಡಿ ನಿಮಗೆ ಸರಿಕಂಡಂತೆ ನಡೆದುಕೊಳ್ಳಿರಿ. ನೀವು ಹೋಗಬಹುದು."

ಕಳೆದ ವರುಷದಿಂದ ರಾಮಶರಣ ಯೂನಿಯನ್ನಿನಲ್ಲಿ ಕೆಲಸ ಮಾಡಹತ್ತಿದ್ದ. ಆ ಅಲ್ಪಾವಕಾಶದಲ್ಲಿ ಅವನು ಆ ಸಂಘಟನೆಯ ಮುಖವನ್ನೇ ಬದಲಿಸಿ ಬಿಟ್ಟಿದ್ದ. ಯೂನಿಯನ್ ಎಂದರೆ ಈಗ ಸಾಮರ್ಥ್ಯಶಾಲಿ ಸಂಘಟನೆಯಾದದ್ದರ ಸಾಕ್ಷಾತ್ಕಾರ ಕಾರ್ಮಿಕರಿಗೆ ಬರತೊಡಗಿತು. ಅದರ ಎಲ್ಲ ಶ್ರೇಯಸ್ಸು ರಾಮಶರಣನದು. ಆದರೆ ರಾಮಶರಣನನ್ನು ಯಾರು ನಿರ್ಮಾಣ ಮಾಡಿದರು? ವಾಸ್ತವಿಕವಾಗಿ ಕಂಪನಿಯೇ ನಿರ್ಮಾಣ ಮಾಡಿತ್ತು.

ಸಸ್ಪೆಂಡ್ ಆದದ್ದರಿಂದ ತನಗೆಷ್ಟು ಹಾನಿಯಾಗಿದೆಯೆಂದು ಕೇಳಿಕೊಂಡು ಹೋದ ಒಂದು ವಾರದ ನಂತರ ರಾಮಶರಣ ಒಂದು ದಿನ ಅಕಸ್ಮಾತ್ತಾಗಿ ನನ್ನ ಮನೆಗೇ ಬಂದ. ಮಲಮಲ್ ಅರಿವೆಯ ಜುಬ್ಬಾ, ಹುರಿ ಹಾಕಿದ ಮೀಸೆ, ವ್ಯವಸ್ಥಿತವಾಗಿ ಬಾಚಿದ ಕೂದಲು, ಓಂಬದಿ ತೂಗಾಡುತ್ತಿದ್ದ ಚಂಡಿಕೆ— ಈ ವೇಷಭೂಷಣದಲ್ಲಿ ಬಂದ ರಾಮಶರಣ ಇಡೀ ನಮ್ಮ ಚಾಳಿನಲ್ಲಿ ಚರ್ಚೆಯ ವಿಷಯವಾದ.

ಮನೆಯ ಒಳಕ್ಕೆ ಬಂದ ಮೇಲೆ, ಕೂಡ್ರಲು ಹೇಳಿದರೂ ನಿಂತುಕೊಂಡೇ ಮಾತಾಡಬಯಸಿದ. ನಾನು ಅವನನ್ನು ಒತ್ತಾಯದಿಂದ ಕೂಡ್ರಿಸಿದೆ.

"ಇದು ನೋಡು. ನೀನೇನು ಆಫೀಸಿಗೆ ಬಂದಿಲ್ಲ, ತಿಳೀತೆ? ಏನು ಕೆಲಸವಿತ್ತು ಹೇಳು."

"ಸಾಹೇಬ್, ನಮ್ಮ ಸಂಬಳದಲ್ಲಿ ಒಂದಿಲ್ಲೊಂದು ರೀತಿಯಿಂದ ರೊಕ್ಕ ಹೇಗೆ ಕತ್ತರಿಸುತ್ತಾರೆ, ಇದರ ಪತ್ತೆಯೇ ಆಗುವುದಿಲ್ಲ. ಹೋದ ಸಂಬಳದಲ್ಲಿ ೩೦೫ ಜನ ಬಸ್ ಡ್ರೈವರ್‌ದು ರೂ. ೨೫ ರಂತೆ ಕಟ್ ಆಗಿದೆ."

"ಈಗ ಎಚ್ಚರ ಬಂತು ಕಾಣಿಸ್ತದೆ ನಿಮಗ!" ಎಂದು ನುಡಿದು, ಸ್ವಲ್ಪದರಲ್ಲಿ ಆ ಕಡಿತದ ಬಗೆಯನ್ನು ವಿವರಿಸಿದೆ. ಅವನ ಕೈಯಲ್ಲಿ ಒಂದು ನೋಟ್ ಬುಕ್ ಕಂಡಿತು.

"ಅದೇನು? ಯಾತರ ಪಟಿ ತಂದಿದ್ದಿ?"

"ಎಲ್ಲಾ ಕಾಯದೆ, ನಿಯಮ ಬರೆದು ತೆಗಿಯಬೇಕೆಂದು ಮಾಡಿದ್ದೇನೆ."

ಪ್ರಭು ರಾಮಚಂದ್ರನ ಚಿಂತನದಲ್ಲಿ ವ್ಯಯಿಸುತ್ತಿದ್ದ ಎಲ್ಲ ವೇಳೆಯನ್ನು ಈಗ ರಾಮಶರಣ ಕಂಪನಿಯ ಕಾನೂನು, ನಿಯಮಗಳನ್ನು ತಿಳಿದುಕೊಳ್ಳುವುದರಲ್ಲಿ ವ್ಯಯಿಸುತ್ತಿದ್ದ. ಸರ್ವೀಸ್ ಕಂಡೀಶನ್ ಕೋಡನ್ನು ಮುಖೋದ್ಗತವಾಗಿ ಮಾಡಿಕೊಂಡ. ಇಂಗ್ಲಿಷ್ ಅಭ್ಯಾಸಕ್ಕೂ ತೊಡಗಿದ.

ಪ್ರತಿ ತಿಂಗಳು ತಕರಾರಿನ ಅರ್ಜಿಗಳನ್ನು ತೆಗೆದುಕೊಂಡು ರಾಮಶರಣ ಆಫೀಸಿಗೆ ಬರುವುದು ನಿತ್ಯಕ್ರಮವಾದಂತಾಯಿತು. ಅವನು ಶೋಧಿಸಿ ತೆಗೆಯುವ ಶಂಕೆಗಳನ್ನು ಕುರಿತು ಗಂಭೀರವಾಗಿ ವಿಚಾರ ಮಾಡಬೇಕಾಗುತ್ತಿತ್ತು. ರಾಮಶರಣನ ವೇಷ ಮುಂಚಿನಂತೆಯೇ ಇತ್ತು. ಹಣೆಗೆ ಗಂಧವಿರುತ್ತಿತ್ತು. ಕೊರಳಲ್ಲಿ ತುಳಸಿಯ ಮಾಲೆಯೂ ಇತ್ತು. ಒಂದೇ ಬದಲಾವಣೆಯೆಂದರೆ, ಅವನ ಕಣ್ಣಲ್ಲಿ ಆತ್ಮವಿಶ್ವಾಸದ ದೀಪ್ತಿ ಬೆಳಗುತ್ತಿತ್ತು. ಪ್ರತಿ ತಿಂಗಳು ಅವನ ರಜೆಯ ಕಾರ್ಡಿನ ಮೇಲೆ ನಾಲ್ಕು ನಾಲ್ಕು ದಿನದ ರಜೆಯು ನಮೂದಿತವಾಗಿರುತ್ತಿತ್ತು. ಸ್ಟಾರ್ಟರ್, ಇನ್‌ಸ್ಪೆಕ್ಟರ್, ಸುಪರ್‌ವೈಸರ್ ಜನ ಒಳಗೊಳಗೆ ಅವನಿಗೆ ಅಂಜತೊಡಗಿದರು.

೪

ಕಂಪನಿಯ ಇತಿಹಾಸದಲ್ಲೇ ಅಂಥ ದೊಡ್ಡ ಸಂಪು ಆಗಿರಲಿಲ್ಲ : ತಾಸೆರಡು ತಾಸಿನ ಅವಧಿಯಲ್ಲಿ ನಗರದಲ್ಲಿಯ ಎಲ್ಲ ಬಸ್ಸುಗಳು ನಿಂತಲ್ಲಿ ನಿಂತು ಬಿಟ್ಟವು. ಸಾವಿರಾರು ಕಂಡಕ್ಟರ್, ಡ್ರೈವರ್ ಜನರು "ಗೋಲ್ ನಾಕೆ"ಯ ಹತ್ತಿರ ಗುಂಪುಗೂಡಿದ್ದರು. ಉನ್ಮತ್ತ ವಿಶ್ವಾಸದಿಂದ ಕೂಡಿದವರಾಗಿ ಚರ್ಚೆ ನಡೆಸಿದ್ದರು.

ಊರಲ್ಲಿ ಹೊಡೆದಾಟ, ರಕ್ತಪಾತ, ಲಾಠೀಚಾರ್ಜ್, ಕೈಸೆರೆಗಳ ಸತ್ರ ಆರಂಭವಾಗಿದೆಯೆಂದು ಸುದ್ದಿ ಬರತೊಡಗಿತು. ಬೆಳಗಿನ ಎಂಟಕ್ಕೆ ಮೊದಲಾದ ಸಂಪು ಅಪರಾಹ್ನ ಇಳಿದು ಹೋದರೂ ಮುಕ್ತಾಯವಾಗುವ ಚಿಹ್ನೆ ತೋರಲಿಲ್ಲ. ಬಸ್ ವರ್ಕ್‌ಶಾಪಿನ ಜನರೂ ಸಂಪಿನಲ್ಲಿ ಭಾಗವಹಿಸುವ ವಿಚಾರದಲ್ಲಿದ್ದರು. ನಾಲ್ಕು ಗಂಟೆಯ ಹೊತ್ತಿಗೆ, ರಾಮಶರಣನನ್ನೂ ಇತರ ಐದಾರು ಜನರನ್ನೂ ಬಂಧಿಸಿದ ವರ್ತಮಾನ ಬಂದಿತು. ಬಂಧನಸತ್ರದಿಂದ ಪರಿಸ್ಥಿತಿ ಇನ್ನಷ್ಟು ಉಗ್ರವಾಯಿತು.

ಐದೂವರೆ ಗಂಟೆಗೆ ಕಚೇರಿ ಮುಗಿದೊಡನೆ ನಾನು ಗೋಲ್ ನಾಕೆಗೆ ಧಾವಿಸಿದೆ. ತುಸು ಹೊತ್ತಿನಲ್ಲಿ ರಾಮಶರಣ ಹಾಗೂ ಇನ್ನಿತರರ ಬಿಡುಗಡೆಯಾಗಿದೆಯೆಂದೂ, ಅವರು ಇತ್ತ ಕಡೆಗೇ ಬರಹೊರಟಿದ್ದಾರೆಂದೂ ವಾರ್ತೆ ಬಂತು. ಮಾಲಕ–ಕೆಲಸಗಾರರಲ್ಲಿ ಒಪ್ಪಂದವಾಗಿದ್ದು, ಬೇಗನೇ ಬಸ್ ಓಡಾಟ ಸುರುವಾಗುವುದೆಂದೂ ಸುದ್ದಿ ಬಂತು.

ತುಸು ಹೊತ್ತಿನ ಮೇಲೆ ರಾಮಶರಣನು ನಾಲ್ಕೈದು ಜನ ಸಹಕಾರಿಗಳೊಡನೆ ಬಂದನು. ಜನ ಅವನನ್ನು ಸುತ್ತುಗಟ್ಟಿ ನಿಂತಿತು. ಅವರಿಂದ ದಾರಿ ಬಿಡಿಸಿಕೊಂಡು, ಗೋಲ್ ನಾಕೆಯ ಎತ್ತರದ ಕಟ್ಟೆಯ ಮೇಲೆ ನಿಂತು, ರಾಮಶರಣ, ತಮ್ಮ ಬೇಡಿಕೆಗಳನ್ನು ಬಹುಮಟ್ಟಿಗೆ ಮಾನ್ಯಮಾಡಿದ್ದಾಗಿಯೂ, ಬಸ್ಸುಗಳನ್ನು ಮೊದಲಿನಂತೆ ಆರಂಭಿಸಬೇಕೆಂದೂ ಹೇಳಿ ಕೆಳಗಿಳಿದನು. ಐದೇ ಮಿನಿಟಿನ ಭಾಷಣ. ಆದರೂ ಜನ ತವಕದಿಂದ ಕೇಳುತ್ತಲಿದ್ದಿತು. ಅಲ್ಲಿಂದ ''ಯೂನಿಯನ್ ಝಿಂದಾಬಾದ್'', ''ರಾಮಶರಣ ಝಿಂದಾಬಾದ್'' ಎಂಬ ಜಯಜಯಕಾರದಿಂದ ನಮ್ಮೆಲ್ಲರ ಕಿವಿ ಗಡಚಿಕ್ಕಿದುವು.

ಆ ಗದ್ದಲದಲ್ಲೇ ನಾನು ದಾರಿ ಮಾಡಿಕೊಂಡು, ಅವನ ಹತ್ತಿರ ಹೋಗಿ, ಅವನ ಹೆಗಲಮೇಲೆ ಕೈಯಿರಿಸಿದೆ.

''ಸಾಬ್! ಆಪ್?'' ಅವನು ಬೆಚ್ಚಿ ನುಡಿದ. ಇಬ್ಬರೇ ತುಸು ದೂರ ನಡೆದು ಬಂದೆವು.

''ರಾಮಶರಣ, ನಿನ್ನ ಜಯಜಯಕಾರ ನಡೆದಿದೆ'' ಎಂದೆ ನಾನು.

ರಾಮಶರಣ ನಕ್ಕು, ಸಂಪಿನ ಕಾರಣವನ್ನು ನನಗೆ ವಿವರಿಸತೊಡಗಿದ. ಫಾಸ್ಟ್ ಡ್ರೈವಿಂಗ್ ಮಾಡಿದ್ದಕ್ಕೆ ಒಬ್ಬನನ್ನು ಸಸ್ಪೆಂಡ್ ಮಾಡಲಾಗಿತ್ತು. ಎಲ್ಲ ಉಪಾಯ ಯೋಜನೆಯನ್ನು ಕೈಕೊಂಡ ಮೇಲೆ ಯೂನಿಯನ್ನಿನವರು ಸಂಪಿನ ಅಸ್ತ್ರವನ್ನು ಹಿರಿದಿದ್ದರು. ಸಂಪಿನ ಪ್ರಯುಕ್ತ ಸಂಘಟನೆಯ ನಿಮಿತ್ತ ರಾಮಶರಣ ಹಗಲಿರುಳೆನ್ನದೆ ಶ್ರಮಿಸಿದ್ದ. ಸಂಪಿನಲ್ಲಿ ಭಾಗ ವಹಿಸಲು ಅಳುಕಿದ ಒಬ್ಬ ಡ್ರೈವರನ ಬಸ್ಸಿನ ದಾರಿಯಲ್ಲಿ ಅಡ್ಡ ಬಿದ್ದು ಹೇಳಿದ್ದ : ''ಎಚ್ಚರಿರಲಿ! ರಾಮಶರಣನ ಹೆಣದ ಮೇಲಿಂದ ಬಸ್ಸು ಒಯ್ಯಬೇಕಾದೀತು'' ಎಂದು. ಆ ಬಸ್ಸಿನ ಬೆನ್ನಿಗೆ ಇತರ ಬಸ್ಸುಗಳೂ ಸಾಲುಗಟ್ಟಿ ನಿಂತವು.

ರಾಮಶರಣನ ಜೀವನದಲ್ಲಿ ಈ ಸಂಪು ಮಹತ್ವದ ಘಟನೆಯಾಯಿತು. ಇಪ್ಪತ್ತುನಾಲ್ಕು ಗಂಟೆಯಲ್ಲಿ ಅವನು ವಿರಾಟ್ ರೂಪಧಾರಣ ಮಾಡಿದ. ಅವನಿಂದಾಗಿ ಯೂನಿಯನ್ ಭೀಮಬಲದಿಂದ ಬೆಳೆಯಹತ್ತಿತ್ತು. ಸಾವಿರ ಜನಕ್ಕಿಂತ ಎತ್ತರವಾದ ವ್ಯಕ್ತಿತ್ವವನ್ನು ಬೆಳೆಸಿಕೊಂಡ ರಾಮಶರಣ ನನ್ನ ಮನೆಗೆ ಆಗಾಗ ಬರುತ್ತಿದ್ದ. ಅದೇ ಆದರ ಭಾವದಿಂದ ನಡೆದುಕೊಳ್ಳುತ್ತಿದ್ದ. ಕಾಯದೆ–ಕಾನೂನುಗಳನ್ನು ಚರ್ಚಿಸುತ್ತಿದ್ದ. ಈಗಂತೂ ಕಾರಕೂನರನ್ನು ಯೂನಿಯನ್‌ನಲ್ಲಿ ಸೇರಿಸಿಕೊಳ್ಳುವ ಮಹಾ ಸಾಹಸಕ್ಕೆ ತೊಡಗಿದ್ದ. ಹೀಗೆ ಎಲ್ಲರೂ ಸೇರಿದರೆಂದರೆ, ಸಂಬಳದ ಗ್ರೇಡಿನ ಹೆಚ್ಚಳ, ಬೋನಸ್, ಇತರ ಸೇವಾಸೌಲಭ್ಯಗಳಿಗಾಗಿ ಪ್ರಚಂಡ ಸಮರ ಹೂಡುವ ವಿಚಾರವಿತ್ತು ಅವನದು.

ಕೇಳಲಿಕ್ಕೆ ಇದೆಲ್ಲ ರಮ್ಯವಾಗಿತ್ತು. ಆದರೆ ನನಗೂ ಇದಕ್ಕೂ ಏನು ಸಂಬಂಧ? ನನ್ನ ದಾರಿ ಬೇರೆ, ಅವನದು ಬೇರೆ. ಸಾಲದ್ದಕ್ಕೆ ಸಾಹೇಬರು ನನ್ನನ್ನು ಇನ್ನೊಮ್ಮೆ ಕರೆಸಿದರು. ಮತ್ತೆ ನನ್ನ ಬಡತಿಯ ವಿಷಯವನ್ನು ಮುಂಚಾಚಿ ನನ್ನ – ರಾಮಶರಣನ ಅತಿ ಪರಿಚಯದ ಹಗರಣ ಮಾಡಿದರು. ಆಫೀಸಿನಲ್ಲಿರುವ ತನಕ ನನಗೆ ನನ್ನ ಸಾಹೇಬರ ಮೇಲೆ ಸಿಟ್ಟು ಬಂದಿತ್ತು.

ಮನಸ್ಸಿನಲ್ಲಿಯೆ ಅವರ ವಿಚಾರಸರಣಿಯನ್ನು ಉಗ್ರವಾಗಿ ಪ್ರತಿಭಟಿಸಿದೆ. ಮನೆಗೆ ಬಂದ ಮೇಲೆ ಅನಿಸಿತು. ನಿಜಕ್ಕೂ ರಾಮಶರಣನ ಸ್ನೇಹದಿಂದ ನನಗೆ ಏನು ಪ್ರಯೋಜನವಾಗಬೇಕಾಗಿದೆ? ಆಗುವುದಾದರೆ ಹಾನಿಯೇ ಆಗಬೇಕು. ಅದೂ ನನ್ನ ಮುಂದಿನ ಜೀವನಮಾರ್ಗಕ್ಕೆಯೆ ತಾಗುವಂಥ ಹಾನಿ. ಇಲ್ಲ, ಅವನ ಸಂಬಂಧವನ್ನು ಕಡಿದುಕೊಳ್ಳುವುದೇ ಲೇಸು.

ಅಂದರ ಹೇಗೆ?.... ಛೀ, ಅವನೆದುರಿಗೆ, ನಾನೊಬ್ಬ ನೀಚನಾಗಿ ಕಾಣಲಾರನೆ?

ಆದರೆ ಇದರಲ್ಲಿ ತಪ್ಪೇನು ಬಂತು? ನಾನೊಬ್ಬ ಸಾಮಾನ್ಯ ಸಂಸಾರವಂದಿಗ. ಒಂದು ನಿಶ್ಚಿತ ಮರ್ಯಾದೆಯನ್ನು ಮೀರಿ ಹೋಗುವ ಕುವ್ವತ್ತು ನನ್ನಲ್ಲಿಲ್ಲ. ಹಾಗೆಂದು ವಿಷಾದ ಪಡಬೇಕಾದ ಕಾರಣವೂ ಇಲ್ಲ. ಯಾವ ಅಧರ್ಮವನ್ನೂ ಮಾಡದೆ, ನೌಕರಿಯಲ್ಲಿ ಬಡತಿಯನ್ನು ಪಡೆಯುವುದು ಪಾಪವಲ್ಲ. ರಾಮಶರಣನ ಸಂಬಂಧವನ್ನು ಕಡಿದುಕೊಳ್ಳುವುದೂ ಪಾಪವಲ್ಲ.

ನನ್ನ ನಿರ್ಣಯವನ್ನು ರಾಮಶರಣನಿಗೆ ಬಾಯಿಬಿಟ್ಟು ಹೇಳಲಿಲ್ಲ. ಬದಲಿಗೆ ನಾನು ೧೦–೧೫ ತಾಸು ಮನೆ ಬಿಟ್ಟು ಹೊರಗೇ ಇರುತ್ತಿದ್ದೆ. ಅವನು ಒಂದೆರಡು ಬಾರಿ ಮನೆಗೆ ಬಂದು ಕೇಳಿ ಹೋಗಿದ್ದ. ಆಫೀಸಿನಲ್ಲಿ, ರಾಮಶರಣ ಬಂದುದರ ಸುಳಿವು ತಿಳಿದೊಡನೆ ನಾನು ಕೆಲಸದ ವಿಪರೀತ ಅವಸರವನ್ನು ತೋರ್ಪಡಿಸುತ್ತಿದ್ದೆ. ರಾತ್ರಿ ಒಂಬತ್ತರ ನಂತರ ಆಫೀಸ್ ಬಿಡುವುದು, ಹಿಂದಿನ ಬಾಗಿಲಿನಿಂದ ಹೊರಟು, ಕಾಲು ದಾರಿಯನ್ನು ಕಡಿಯುತ್ತ ಸಾಗುವುದು, ನನ್ನ ದೈನಂದಿನ ಕ್ರಮವೇ ಆಯಿತು.

ಆದರೆ ಎಷ್ಟು ದಿನ ತಾನೇ ನಾನು ಹೀಗೆ ಮಾಡಬಲ್ಲೆ? ಒಂದಿಲ್ಲ ಒಂದು ದಿನ ಅವನ ಭೆಟ್ಟಿಯಾಗದೇ ಹೋಗದೆಂಬ ಸಹಜ ಸಾದಾ ವಿಚಾರವೂ ನನಗೇಕೆ ಬರಲಿಲ್ಲ? ಇದಕ್ಕಿಂತ ನೇರವಾಗಿ ರಾಮಶರಣನನ್ನು ಕಂಡು ಇದ್ದ ಸಂಗತಿಯನ್ನು ಮುಕ್ತಮಾನಸನಾಗಿ ಬಿಚ್ಚಿ ಹೇಳಿದ್ದರ, ಅಂಜುಗುಳಿತನದ ವಿನಃ ಅನ್ಯ ದೋಷಗಳಾದರೂ ನನಗೆ ತಟ್ಟುತ್ತಿರಲಿಲ್ಲವಲ್ಲ! ನಾನು ಎಷ್ಟು ಕೀಳುಮಟ್ಟಕ್ಕೆ ಇಳಿದೆನಲ್ಲ! — ಎಂದು ಅನಿಸಿತು.

ಕೊನೆಗೊಮ್ಮೆ ಆ ಭೆಟ್ಟಿಯ ಪ್ರಸಂಗ ಬಂತು. ನಿರ್ಧಾರ ಮಾಡಿಕೊಂಡೇ ಅಂದು ರಾಮಶರಣ ಆಫೀಸಿಗೆ ಬಂದಂತಿತ್ತು. ನನ್ನ ಮೇಜಿನ ಮುಂದೆ ಬಂದು ನಿಂತವ ಒಂದು ಗಂಟೆಯಾದರೂ ಸರಿದಿರಲಿಲ್ಲ. ನಾನೂ ಒಂದರ ಮೇಲೊಂದು ಫೈಲನ್ನು ತೆಗೆದು, ಓದುತ್ತ, ಕೆಳಗಿಡುತ್ತ, ಅವನು ಯಾವಾಗ ಹೋದಾನೊ ಎಂದು ಕಾಯುತ್ತ ನಿಂತಿದ್ದೆ. ಹೀಗೆ ನಾನು ಮೂರು ತಾಸು ನಾಟಕ ಮಾಡಿದರೂ ಅವನು ಜಾಗ ಬಿಟ್ಟು ಸರಿಯಲಿಲ್ಲ. ಆಗ ನನ್ನ ಸಹನೆಯ ಕಟ್ಟೊಡೆದು—

''ನಾ ಕೆಲಸದಲ್ಲಿ ಇದ್ದೇನೆ. ನೋಡುತ್ತೀಯಲ್ಲ'' ಎಂದು ಕೇಳಿದೆ.

''ನಿಮ್ಮ ಭೆಟ್ಟಿ ಆಗುವುದಾದರೂ ಹೇಗೆ?''

''ಏನು ಮಾಡಲಿ? ಈ ಚೀಫ್ ಕ್ಲಾರ್ಕನ ಕೆಲಸ ಯಾಕಾದರೂ ಹಿಡಿದೆನೊ ಅನಿಸ್ತದೆ.''

"ಹಾಗೆ ಅನ್ನಬೇಡಿ, ನೀವು ಇಲ್ಲಿ ಇದ್ದೀರಂತ ಇದೆಲ್ಲಾ ಸರಿ ನಡೆದಿದೆ. ನಮಗೆಲ್ಲಾ ಆಧಾರವಿದೆ."

"ತಪ್ಪು ಕಲ್ಪನೆ ನಿನ್ನದು. ಮನುಷ್ಯ ಮೇಲೇರಿದಂತೆ ಬಂಧನ ಜಾಸ್ತಿ ಆಗುತ್ತದೆ. ಮುಂದಿಗೆ ಆಧಾರ ಆಗೋದು ಕಡಿಮೆ ಆಗುತ್ತದೆ."

"ಮಹತ್ವದ ಕೆಲಸ ಇದೆ ನನಗೆ."

"ಈಗಂತೂ ಶಕ್ಯ ಇಲ್ಲ, ನೋಡುತ್ತೀಯಲ್ಲ."

"ಇಂದು ಆಗಲಿಕ್ಕೇ ಬೇಕು! ಅದಕ್ಕಾಗಿ ರಜಾ ತೆಗೆದುಕೊಂಡಿದ್ದೇನೆ."

"ಆಗಲಿಕ್ಕೆ ಬೇಕು ಅಂದರೆ? ಮೇಜಿನ ಮೇಲೆ ಏನು ಫೈಲು ಇವೆ ಅಲ್ಲ; ಅವೂ ಇಂದೇ ಆಗಲಿಕ್ಕೆ ಬೇಕು"—ಎಂದು ಹೇಳಿ ಮತ್ತೆ ನಾನು ಫೈಲ್ ತಿರುವಿ ಹಾಕತೊಡಗಿದೆ. ಅರ್ಧ ತಾಸು ತಡೆದು ಅವನು ಮತ್ತೆ ನುಡಿದನು—

"ಸಾಹೇಬ, ಈ ಕೇಸಿನ ಕಾಗದ ನಿಮ್ಮ ಕಡೆಗೇ ಇದೆ. ಬಿ.ಸಿ.ನಂ. ೪೮೯ ರವನ ಸಸ್ಪೆನ್ಶನ್ ಪೀರಿಯಡ್—"

"ನನಗೆ.... ಈಗ ವೇಳೆಯಿಲ್ಲ."

"ನಾಳೆಯೇ ಈ ಕೇಸಿನ ಹಿಯರಿಂಗ್ ಇದೆ, ಸಾಹೇಬ."

"ಈಗಂತೂ ಹೊರಗೆ ಹೋಗು. ನಿಮಗೆ ಏನು ಅನಬೇಕು ರಾಮಶರಣ? ನೀವು ತಿಳಿದವನು, ನೀವೇ ಹೀಗೆ ಮಾಡಿದರೆ ಹೇಗೆ? ಹೊರಗೆ ನಡೀರಿ. ನನಗೆ ಅವಕಾಶ ಸಿಕ್ಕರೆ ಹೇಳಿ ಕಳಿಸ್ತೇನೆ."

"ಈಗ ಐದು ಆಗಿದೆ. ಐದೂವರೆಗೆ ಹೇಳುತ್ತಿರೇನು?"

"ಹೀಗೆ ಟೈಮು ಹಚ್ಚಿದರೆ ಶಕ್ಯವಿಲ್ಲ."

"ಅದು ಶಕ್ಯ ಇಲ್ಲ ಸಾಹೇಬರೇ. ನನ್ನ ಕೆಲಸ ಆಗದೇ ನಾ ಈ ಜಾಗ ಬಿಡುವುದಿಲ್ಲ."

"ರಾಮಶರಣ!"

"ನಾ ರಾಮಶರಣ ಅಲ್ಲಾ, ಯೂನಿಯನ್ನಿನ ಅಧಿಕೃತ ಪ್ರತಿನಿಧಿ ಇದ್ದೇನೆ! ಈ ಮಾಹಿತಿ ಕೊಡುವದರಿಂದ ನೀವೇನೂ ನನ್ನ ಮೇಲೆ ಮೆಹರ್ಬಾನಿ ಮಾಡಿದಂತೆ ಆಗುವುದಿಲ್ಲ. ಅದು ನಿಮ್ಮ ಕರ್ತವ್ಯವಾಗಿದೆ."

"ನನ್ನ ಕರ್ತವ್ಯ ಏನಿದೆ ಅನ್ನೋದನ್ನ ಇನ್ನೊಬ್ಬರಿಂದ ಕಲಿಯೋ ಅಗತ್ಯವಿಲ್ಲ. ತಿಳೀತೇ? ಮಾಹಿತೀ ಕೊಡದಿದ್ದರೆ?"

"ಹಾಗೆ ಲೇಖೀ ಕೊಡಿರಿ. ಮುಂದಿನದು ಮುಂದೆ. ಖುರ್ಚಿಯ ನೀರು ಹತ್ತಿದ ಹಾಗೆ ಕಾಣುತ್ತದೆ."

"ರಾಮಶರಣ! Get out from here."

"ಅಚ್ಛಾ! ಹಮ್ ದೇಖ ಲೇಗಾ!"

ದನಿ ಎತ್ತರಿಸಿ ನಾನು ಯಾವಾಗ ಮಾತನಾಡ ಹತ್ತಿದೆನೋ ನನಗೇ ಗೊತ್ತಿಲ್ಲ. ಇಡಿಯ ಕಚೇರಿ ಗದಗಮಿಸಿ ಹೋಯಿತು. ರಾಮಶರಣನೂ ಅದೇ ಎತ್ತರದಲ್ಲಿ ಕೂಗಿ

ಹೊರಟುಹೋದ. ಏನಿದ್ದರೂ ನನಗೆ ಭಾರೀ ವಿಜಯವಾಯಿತೆಂದೇ ಎಲ್ಲರ ಅಭಿಪ್ರಾಯವಾಯಿತು. ಕದಡಿದ ಮನಃಸ್ಥಿತಿಯನ್ನು ಸಾವರಿಸಿಕೊಳ್ಳಲು ಕನ್ನಡಕ ತೆಗದು ಒರೆಸಹತ್ತಿದೆ ನಾನು ಯೂನಿಯನ್ನಿನ ಅಧಿಕೃತ ಪ್ರತಿನಿಧಿಯನ್ನು ನಡೆಸಿಕೊಂಡ ರೀತಿ ಅಸಭ್ಯತನದ್ದಾಗಿತ್ತಲ್ಲದೆ, ಬೇಕಾಯದೇಶೀರ್ ಆಗಿತ್ತೆಂದು ತಿಳಿಯುವ ಮಟ್ಟಿಗೆ ನನ್ನ ಮೈಮೇಲೆ ಎಚ್ಚರವಿತ್ತು.

ಆದರೆ ಆದದ್ದು ಬೇರೆಯೇ. ರಾಮಶರಣನು ಐದು ಮಿನಿಟಿನ ನಂತರ ಪುನಃ ನನ್ನ ಕಡೆಗೆ ಬಂದ.

''ಸಾಹೇಬ್, ಮಾಫ್ ಮಾಡಿರಿ ನನ್ನನ್ನು'' ಎಂದ!

''ಆಂ! ಯಾಕೆ?'' ಎಂದು ನಾನು ತಡವರಿಸಿದೆ.

''ಮರ್ಯಾದೆಯನ್ನು ಬಿಟ್ಟು ಮಾತಾಡಿದೆ. ನಿಮ್ಮ ಖರ್ಚಿಯ ವಿಷಯ ಎತ್ತಿದೆ. ಹಾಗೆ ನಾ ಅನ್ನಬಾರದಿತ್ತು'' ಆತ ಹೇಳಿದ.

''ನನ್ನದೂ ಒಂದಿಷ್ಟು ಜೋಲಿ ಹೋಯಿತು. ಒಮ್ಮೊಮ್ಮೆ ಸ್ವಭಾವ ದೋಷ ಕೈಕೊಡುತ್ತದೆ'' ಇಳಿದನಿಯಲ್ಲಿ ನಾನು ಪಿಸುಗುಟ್ಟಿದೆ. ಅಲ್ಲಿಂದ ಅವನಿಗೆ ಬೇಕಾದ ಮಾಹಿತಿಯನ್ನು ಪೂರೈಸಿದೆ. ಅವನು ಹೊರಟುಹೋದ.

ಕಚೇರಿಯಲ್ಲಿ ಇನ್ನೂ ಹಾಗೇ ಕುಳಿತಿದ್ದೆ. ಆಕಸ್ಮಾತ್ ಸಾಹೇಬರು ಕರೆಕಳುಹಿದರು.

''ಸ್ವಲ್ಪ ಹೊತ್ತಿಗೆ ಮುಂಚೆ ಬಿ.ಸಿ.ನಂ. ೨೦೮ ನಿಮ್ಮ ಕಡೆಗೆ ಬಂದಿದ್ದ?''

''ಹೌದು.''

''ನಾನೆಲ್ಲ ಕೇಳಿದ್ದೇನೆ. ಅವ ಬಹಳ ಉದ್ಧಟ ತನದಿಂದ ಮಾತಾಡಿದ.''

''ಆದರೆ ಮತ್ತೆ ಬಂದ ಕ್ಷಮಾ ಕೇಳಿಕೊಂಡ.''

''ಸುಳ್ಳು ಹೇಳಬೇಡ್ರಿ.''

''ಇಲ್ಲ, ಎಲ್ಲರ ಸಮಕ್ಷಮವೇ ಹೇಳಿದ.''

''ಮುಖ್ಯ ಮುದ್ದೆ ಅದಲ್ಲ. ನಿಮ್ಮ ಸಂಗಡ ಅವ ಉದ್ಧಟ ರೀತಿಯಿಂದ ಮಾತನಾಡಿದ್ದು ಅಂತೂ ನಿಜ. ಹೌದಲ್ಲೊ?''

''ನನಗೇನು ಹಾಗೆ ಅನಿಸುವುದಿಲ್ಲ.''

''ಹಮ್ ದೇಖ ಲೇಗಾ! ಇದರ ಅರ್ಥವೇನು ಹಾಗಾದರೆ?''

''ಅದರ ಸಲುವಾಗೇ ಅವ ಕ್ಷಮಾ ಕೇಳಿದ್ದು.''

''ಅವನನ್ನು ಉಳಿಸುವುದಕ್ಕಾಗಿ ನೀವು ಪ್ರಯತ್ನ ಮಾಡುತ್ತಿದ್ದೀರಿ. ನನಗೆ ತಿಳಿಯಿತು. ಇಷ್ಟೇ ಹೇಳಿರಿ. ಅವ ನಿಮಗೆ ಬೆದರಿಕೆ ಹಾಕಿದನೊ ಇಲ್ಲವೊ?''

''ಬೆದರಿಕೆ— ಅಂ. ಇದ್ದ ಸಂಗತಿ ಹೇಳತೇನೆ. ನನಗೂ ಅವನಿಗೂ ಸಂಬಂಧ ಉಳಿದಿಲ್ಲ. ನನ್ನ ಅವನ ಭೆಟ್ಟಿ ಸಹಿತ ಆಗೋದಿಲ್ಲ. ಮಾತುಕಥೆ ಅಂತೂ ಇಲ್ಲೇ ಇಲ್ಲ.''

''೨೦೮ ರ ಮಾತು ಹೊರಟತೆಂದರೆ ನಿಮ್ಮ ತಲೆ ಜಾಗದಲ್ಲಿ ಇರುವುದಿಲ್ಲ. ನಿಮ್ಮ ಸ್ಥಾನದ ವಿಷಯವಾಗಿ ಅವ ಹಂಗಿಸಿದ. ಮತ್ತೆ ಹಮ್ ದೇಖ ಲೇಗಾ ಅಂತ ಹೆದರಿಕೆ ಹಾಕಿದ. ಅವ ಹಾಗೆ ಅಂದದ್ದು ನಿಜ ಹೌದಲ್ಲೊ. ಇಷ್ಟೇ ಹೇಳಿರಿ.''

''ಅಂ....ಹೂಂ. ಅಂದರೆ—''

''O.K. ಹಾಗಂತ ನನಗೆ ಲೇಖೀ ರಿಪೋರ್ಟ್ ಕೊಡಿರಿ.''

''ಲೇಖೀ ರೀಪೋರ್ಟು?''

''ಕೊಡಲಿಕ್ಕೆ ಏನಡ್ಡಿ? ನಡೆದ ಸಂಗತಿ ತಾನೆ!''

''ಅದರ ಪರಿಣಾಮ....''

''ಅದನ್ನ ಕಂಪನಿಯವರು ನೋಡಿಕೊಳ್ಳತಾರೆ.''

''ಆದರೆ....''

''ನನಗೆ ರಿಪೋರ್ಟು ಬೇಕು! ಕೊಡಬಾರದು ಅಂತ ಇದ್ದರೆ ನಿಮ್ಮ ಮರ್ಜಿ.''

''ವಿಚಾರ ಮಾಡತೇನೆ. ವೇಳೆ ಕೊಡಿರಿ.''

''ಎಷ್ಟು?''

''ನಾಕಾರು ದಿವಸ.''

''ಊಂಹು! ಕೂತ ಮೆಟ್ಟಿನ ಮೇಲೆ ಎಷ್ಟು ವೇಳೆ ಬೇಕೊ ಅಷ್ಟು ತಗೊಳ್ಳಿರಿ. ಇವತ್ತಿಂದು ಇವತ್ತೇ ರಿಪೋರ್ಟು ಹೋಗಬೇಕು! ನನ್ನ ಆಫೀಸಿನಲ್ಲಿ ಇಂಥಾ ಗ್ಯರ್‌ಶಿಸ್ತು ನಡೆಯುವುದು ನನಗೆ ಸರಿ ಬರುವುದಿಲ್ಲ. ಆಫೀಸೆಂದರೆ ಕಾಮದಾರ ಮೈದಾನ ಅಲ್ಲ ಅನ್ನುವುದು ಅವರಿಗೆ ತಿಳಿಯಲಿ.''

ಪರಿಸ್ಥಿತಿ ನನ್ನ ಸುತ್ತು ಹಿಡಿತವನ್ನು ಬಿಗಿ ಮಾಡುತ್ತ ನಡೆದಿತ್ತು. ಹೇಗೋ ಏನೋ, ರಿಪೋರ್ಟು ಗೀಚಿಕೊಂಡು ಸಾಹೇಬರ ಕಡೆಗೆ ಹೋದೆ. ಅವರು ಅದನ್ನು ನೋಡಿ ಹಣೆಗೆ ಗಂಟು ಹಾಕಿ, ಅದನ್ನು ನನ್ನ ಕಡೆಗೆ ಎಸೆದರು.

''ಇದು ನಡೆಯುವುದಿಲ್ಲ. ಇದರಲ್ಲಿ ನೀವು ಬರೆದ ಯೂನಿಯನ್ನಿನ ಅವನ ಕೆಲಸದ ಮತ್ತು ಕ್ಷಮಾಪಣೆಯ ಉಲ್ಲೇಖ ತೆಗೆದುಹಾಕಿರಿ.''

ಸಾಹೇಬರು ನಿರ್ಧಾರ ಮಾಡಿಯೇ ಕುಳಿತಂತಿತ್ತು. ನನಗೂ ವಿಚಾರ ಮಾಡುವ ಶಕ್ತಿಯೇ ಉಡುಗಿಹೋಗಿತ್ತು. ಭ್ರಮಿಷ್ಠ ಮನಃಸ್ಥಿತಿಯಲ್ಲಿಯೇ ಯೂನಿಯನ್ನಿನ ಅಧಿಕೃತ ಪ್ರತಿನಿಧಿಯ ಉಲ್ಲೇಖವನ್ನು ತೆಗೆದುಹಾಕಿದೆ. ಕ್ಷಮೆಯ ಉಲ್ಲೇಖವನ್ನು ಬಹು ಪ್ರಯಾಸದಿಂದ ದುಂಡು ಸುತ್ತಿ ಹೇಳಿ, ಉಳಿಸಿಕೊಂಡೆ. ಹೊರಗೆ ಹೊರಡುತ್ತ ಸಾಹೇಬರು ನನ್ನ ಹೆಗಲ ಮೇಲೆ ಕೈಯಿರಿಸಿ—

''ಯಂಗ್ ಮ್ಯಾನ್, ಭಾವನಾವಶನಾಗಬೇಡ ಮುಂದ ಮರುಗಬೇಕಾದೀತು'' ಎಂದರು.

ಮರುದಿನ ಸರಿಯಾಗಿ ಹತ್ತು ಗಂಟೆಗೆ, ನಾನು, ನಮ್ಮ ಸಾಹೇಬರು, ರಾಮಶರಣ, ಅವನ ವಕೀಲರು, ಜನರಲ್ ಮ್ಯಾನೇಜರರ ಕೋಣೆಯಲ್ಲಿ ಕೂಡಿದೆವು.

ನನಗೆ ರಾಮಶರಣನನ್ನು ನೇರವಾಗಿ ನೋಡುವ ಧೈರ್ಯವಾಗಲಿಲ್ಲ. ಆದರೆ ಅವನ ಮಾತಿನ ರೀತಿ ಎಂದಿನಂತೆಯೇ ಇತ್ತು. ಆತ್ಮವಿಶ್ವಾಸದಿಂದ ಕೂಡಿತ್ತು. ಕಂಪನಿಯವರು ಎಬ್ಬಿಸಿದ ಈ ರಗಳೆಯ ಕಡೆಗೆ ತುಚ್ಛತೆಯಿಂದ ನೋಡುತ್ತಿರಬೇಕೆಂದು ನನಗನಿಸಿತು. ಅಚಾನಕವಾಗಿ ನನ್ನ ಅವನ ದೃಷ್ಟಾದೃಷ್ಟಿಯಾಯಿತು. ಅವನು ನಕ್ಕ, ನಾನೂ ನಕ್ಕೆ.

ವಿಚಾರಣೆ ಆರಂಭವಾಗಲು ಇನ್ನೂ ಅವಕಾಶವಿತ್ತು. ಅಷ್ಟರಲ್ಲಿ ಹೊರಗೆ ಕೂಗಾಟ ನಡೆದದ್ದು ಕೇಳಬಂತು. ಕಚೇರಿಯ ದಿಕ್ಕಿನಲ್ಲಿ ಕಂಡಕ್ಟರ್, ಡ್ರೈವರ್ ಜನರ ದೌಡು ಹೊರಟಿತ್ತು. ರಾಮಶರಣನ ಹೆಸರಿನ ಜಯಜಯಕಾರ ನಡೆದಿತ್ತು. ಹೊರಗಿನ ಕೂಗಾಟವನ್ನು ಕೇಳುತ್ತ ನಾನು ಇದ್ದಾಗ, ನನ್ನ ಹೆಸರಿನ ಉಚ್ಚಾರಣೆಯೂ ಕೇಳಬಂತು. ಹೌದು, ಯಾರೋ ಉಚ್ಚ ಕಂಠದಲ್ಲಿ ನನ್ನ ನಾಮನಿರ್ದೇಶ ಮಾಡಿದರು. ಅದರ ಬೆನ್ನಿಗೇ ಸಹಸ್ರ ಮುಖದಿಂದ ''ಮುರ್ದಾಬಾದ''ದ ಜೋಡಣೆ ದೊರೆಯಿತು. ನಾನು ಜನರಲ್ ಮ್ಯಾನೇಜರರನ್ನೊಮ್ಮೆ ನೋಡಿದೆ, ರಾಮಶರಣನನ್ನೂ ನೋಡಿದೆ. ಅವನು ಅಸ್ವಸ್ಥನಾಗಿದ್ದಂತೆ ಕಂಡಿತು. ತುಸು ಹೊತ್ತಿನ ಮೇಲೆ ಮತ್ತೆ ಅದೇ ಘೋಷಣೆಯಾಯಿತು.

ಗಡಿಬಿಡಿಯಿಂದ ಎದ್ದವನೇ ರಾಮಶರಣ ಹೊರಗೆ ಹೋದನು. ಅವನು ಸಮೂಹದೊಡನೆ ಚರ್ಚೆ ನಡೆಸಿದ ಹಾಗೆ ಕಂಡಿತು. ಕೊನೆಗೆ ಕೂಗಾಟ ನಿಂತಿತು. ರಾಮಶರಣ ಒಳಗೆ ಬಂದ. ಆ ದಿನ ಪ್ರಾಥಮಿಕ ವಿಚಾರಣೆ ನಡೆದು, ಕೇಸು ಸ್ಥಗಿತವಾಯಿತು.

ಆ ದಿನ ರಾಮಶರಣ ಮತ್ತೆ ನನ್ನ ಕಡೆ ಬರಬಹುದೆಂಬ ಅಂದಾಜು ಇದ್ದೇ ಇತ್ತು. ಅವನನ್ನು ತಪ್ಪಿಸುವ ಪ್ರಯತ್ನ ಫಲ ಕೊಡಲಿಲ್ಲ. ಹತ್ತಿರ ಯಾರೂ ಇಲ್ಲದಾಗ, ಹೇಳಿದ :

''ಸಾಹೇಬ ನಿಮ್ಮ ಹೆಸರು ತೂಗೊಂಡು ಜನ ಕೂಗದ ಹಾಗೆ ವ್ಯವಸ್ಥೆ ಮಾಡಿದ್ದೇನೆ.''

''ಕದಾಚಿತ್ ನನ್ನ ಯೋಗ್ಯತೆ ಅದೇ ಇರಬೇಕು, ರಾಮಶರಣ.''

''ಛೇ. ಎಂದಿಗೂ ಇಲ್ಲ. ನಿಮ್ಮ ಕೈಯಿಂದ ಒಳ್ಳೆಯದೇ ಆಗಿದೆ.''

''ಆಂ?''

''ನೀವು ರಿಪೋರ್ಟು ಬಹಳ ಕೌಶಲ್ಯದಿಂದ ಬರೆದಿದ್ದೀರಿ ಅಂತ ವಕೀಲರು ಹೇಳಿದರು.''

''ನೀ ಏನೇ ಹೇಳು, ನಾ ಮಾತ್ರ ಈ ನಾಟಕ ನಿಮಿತ್ತ ಆಗಬಾರದಿತ್ತು.''

ರಾಮಶರಣ ನಿರ್ದೋಷಿಯಾಗುವನೆಂದು ಎಲ್ಲ ಕಡೆಗೂ ಸುದ್ದಿ ಇತ್ತು. ಮೊದಲನೇ ದಿನದ ಕಾರ್ಯಕಲಾಪದ ನಂತರ ನನಗೂ ಹಾಗೇ ಅನಿಸಿತು. ಮ್ಯಾನೇಜರರು ಸಹಾನುಭೂತಿಯಿಂದ ನಡೆದುಕೊಳ್ಳುತ್ತಿದ್ದರು. ನಗೆ ವಿನೋದ ಮಾಡುತ್ತಿದ್ದರು. ಆದರದು ಕಂಪನಿಯ ಹಂಚಿಕೆಯಾಗಿತ್ತು. ವಾತಾವರಣ ಕಾಯಬಾರದು, ಪ್ರದರ್ಶನ ಇತ್ಯಾದಿ ನಡೆಯಬಾರದೆಂದು ಎಚ್ಚರಿಕೆಯನ್ನು ತೆಗೆದುಕೊಳ್ಳಲಾಗಿತ್ತು.

ವಿಚಾರಣೆಯ ನಾಟಕ ಮುಗಿದ ನಂತರ ರಾಮಶರಣನನ್ನು ಕೆಲಸದಿಂದ ತೆಗೆದುಹಾಕಲಾಯಿತು. ರಾಮಶರಣ ನನ್ನ ಕಡೆಗೆ ಬರುವುದೇನು, ಇಬ್ಬರಲ್ಲೂ ಒಂದೆರಡು

ಮಾತು ಆಗುವುದೆಂದರೇನು, ಅಷ್ಟರ ಮೇಲಿಂದ ಅವನನ್ನು ನೌಕರಿಯಿಂದ ತೆಗೆಯುವುದೆಂದೇನು, ಎಲ್ಲವೂ ವಿಚಿತ್ರವಾಗಿತ್ತು.

ನಿರ್ಣಯ ಹೊರಬಿದ್ದ ದಿನ ನಮ್ಮ ಕಚೇರಿಗೆ ಪೊಲೀಸರ ಸರ್ಪಗಾವಲಿತ್ತು. ಊರಲ್ಲಿಯ ಡಿಪೋಗಳ ಮೇಲೆಯೂ ಪೊಲೀಸರ ಕಾವಲಿತ್ತು. ಬಸ್ಸುಗಳ ಸಂಪು ಆಗದಂತ ಸರ್ವ ಮುಂಜಾಗ್ರತೆಯನ್ನು ಆಫೀಸರ್ ಜನರು ಕೈ ಕೊಂಡಿದ್ದರು.

ನಾನು ನನ್ನ ಜಾಗದಲ್ಲಿ ಶೂನ್ಯಮನಸ್ಕನಾಗಿ ಕುಳಿತಿದ್ದೆ. ಸಾಹೇಬರಿಂದ ತ್ವರಿತದ ಕರೆ ಬಂತು. ಹೋದೊಡನೆಯೆ ಒಂದು ಕಾಗದದ ಕಟ್ಟನ್ನು ನನ್ನ ಕೈಗಿತ್ತರು.

''ಇದು ನಂ. ೨೦೮ ರ ಫೈನಲ್ ಬಿಲ್ಲಿನ ಕಾಗದ. ಇವನ್ನು ಇಂದೇ ಪೂರ್ಣಮಾಡಿ ಆಡಿಟ್ ಸೆಕ್ಶನ್ನಿಗೆ ಕಳಿಸಿಬಿಡ್ರಿ. ಇದು ನೋಡ್ರಿ. ಈ ಕೆಲಸವನ್ನು ಬೇರ ಯಾರಿಗೂ ಒಪ್ಪಿಸಬೇಡಿರಿ. ಜವಾಬ್ದಾರೀ ಕೆಲಸ ಮತ್ತೆ ಬೇಗ ಮುಗಿಯಬೇಕಾಗಿದೆ.''

''ನಾನೇ ಈ ಕೆಲಸ ಮಾಡಬೇಕು ಅನ್ನುವ ಆಗ್ರಹವೇನು ತಮ್ಮದು? ನನ್ನ ಕಡೆಯಿಂದ ಈಗಾಗಲೇ ಒಂದು ಪಾಪ ಘಟಿಸಿದೆ.''

''ಪಾಪ!'' ಸಾಹೇಬರು ಒದರಿದರು. ''ಇದು ನೋಡ್ರಿ. ನಿಮ್ಮ ಭಾವನಾದ ಹುಚ್ಚುಚ್ಚಾರವನ್ನು ಕಾಯಲಿಕ್ಕೆ ಕಂಪನಿ ಈ ವ್ಯಾಪಾರ ನಡಿಸಿಲ್ಲ. ನೀವೇ ಈ ಕೆಲಸ ಮಾಡಬೇಕು ಮತ್ತು ಎರಡು ತಾಸಿನೊಳಗೆ ಮುಗಿಸಿಕೊಡಬೇಕು. ಆಡಿಟ್‌ಸವರಿಗೆ ಹೇಳಿಬಿಟ್ಟಿದೆ.''

''ಇಷ್ಟು ಸ್ವಲ್ಪ ವೇಳೆಯಲ್ಲಿ ನನ್ನ ಕಡೆಯಿಂದ....''

''ಆಗಲಿಕ್ಕೇ ಬೇಕು. ಅದು ಹೇಗೆ ಮುಗಿಸುವುದು ಅನ್ನೋದನ್ನ ನೀವೇ ನೋಡಿಕೊಳ್ಳಬೇಕು.''

''ಕ್ಷಮಿಸಿರಿ, ಸಾಹೇಬರೇ. ನಾನು ಈ ಕೆಲಸ ಮಾಡುವುದಿಲ್ಲ.''

ಚಟ್ಟನೇ ಕುರ್ಚಿಯನ್ನು ಸರಿಸಿ ಸಾಹೇಬರು ಎದ್ದು ನಿಂತು–

''ಮಾಡುವುದಿಲ್ಲ? ನಿಮಗೆ ಅಂತ ಇನ್ನೊಂದು ಚಾನ್ಸ್ ಕೊಡತೇನೆ! ಎತ್ತಿರಿ ಆ ಕಾಗದ. ಪೂರ್ಣ ಮಾಡಿ ತಂದುಕೊಡಿರಿ. ಇಲ್ಲದಿದ್ದರೆ ಪರಿಣಾಮ ಬಹಳ ಗಂಭೀರ ಆದೀತು! ಹಾಗೇನಾದ್ರೂ ಆದರೆ ನನ್ನಿಂದ ಏನೂ ಅಪೇಕ್ಷಾ ಮಾಡಬೇಡಿರಿ.''

ಕಾಗದ ತೆಗೆದುಕೊಂಡು ಹೋಗಿ ಎರಡು ತಾಸಿನಲ್ಲಿ ಕೆಲಸ ಮುಗಿಸಿ ಅವರ ಕಡೆಗೆ ಕಳಿಸಿಕೊಟ್ಟೆ. ರಾಮಶರಣನ ಹೆಸರಿನಲ್ಲಿ ನಾಲ್ಕು ತಿಂಗಳ ರಜೆಯ ಬಾಕಿ ಇತ್ತು. ಕಂಪನಿ ಅವನಿಗೆ ಈ ಸಂಬಳವನ್ನು ಕೊಟ್ಟಿತು. ಪ್ರಾವಿಡೆಂಟ್ ಫಂಡಿನ ತನ್ನ ಪಾಲನ್ನು ಕೊಟ್ಟಿತು. ಸಂಪೂರ್ಣ ಗ್ರ್ಯಾಚುಯಿಟಿಯನ್ನೂ ಕೊಡಲಾಯಿತು. ಮಾನಸನ್ಮಾನದಿಂದಲೇ ಅವನ ಸರ್ವೀಸಿನ ಮೇಲೆ ಹೂ.ಪತ್ರೆ ಏರಿಸಲಾಗಿತ್ತು.

೫

ಕಳೆದ ಎರಡು ದಿನಗಳಿಂದ ನಾನೇ ರಾಮಶರಣನ ಭೆಟ್ಟಿಗೆ ಚಡಪಡಿಸುತ್ತಿದ್ದೆ. ಅವನು ಭೆಟ್ಟಿಯಾಗಬೇಕು; ಅನುಚಿತ ಶಬ್ದದಿಂದ ನನ್ನ ನಿರ್ಭರ್ತ್ಸನೆಯನ್ನು ಮಾಡಬೇಕು. ನಾನು ಮುಚ್ಚುಮರೆಇಲ್ಲದೆ ಅವನ ಕ್ಷಮೆ ಕೇಳಬೇಕು ಎಂಬ ಧ್ಯಾಸ ಹಿಡಿದಿತ್ತು. ಆಫೀಸಿನ ಕೆಲಸದಲ್ಲಿ ನನ್ನ ಲಕ್ಷವೇ ಇರಲಿಲ್ಲ.

ಸಂಜೆಯ ಮುಂದೆ ಕಚೇರಿ ಬಿಟ್ಟ ಕೂಡಲೆ ಕಾಲು ಎಳೆದಲ್ಲಿಗೆ ಹೊರಟು ಬಿಡುತ್ತಿದ್ದೆ. ಕ್ವಚಿತ್ ಯಾವನಾದರೂ ಒಬ್ಬ ಕಂಡಕ್ಟರ್ ತನ್ನ ಸಹಕಾರಿಗೆ ನನ್ನನ್ನು ಬೊಟ್ಟುಮಾಡಿ ತೋರಿಸಿ, ನನ್ನ ಲಕ್ಷ್ಯ ಸೆಳೆಯುತ್ತಿದ್ದ. ನನ್ನ ಬಗ್ಗೆ ಎಲ್ಲ ಕಡೆಗೂ ವಾತಾವರಣವು ಕಲುಷಿತವಾಗಿದೆಯೆಂಬ ಸುದ್ದಿ ಕಿವಿಗೆ ಬಿದ್ದಿತ್ತು. ನಾನೇ ಅವರ ಮುಂದಾಳಿನ ಬಡತರ್ಫಿಗೆ ಕಾರಣನೆಂದು ಎಲ್ಲರೂ ಆಡಿಕೊಳ್ಳುತ್ತಿದ್ದರು.

ಆದರೆ ನನ್ನ ವಿನಾ ರಾಮಶರಣನ ಬಡತರ್ಫಿ ಏನಾದರೂ ನಿಲ್ಲವಂತಿದ್ದಿತೇನು? ಎಂದಾದರೊಮ್ಮೆ ಅವನ ನೌಕರಿಯ ಇತಿಶ್ರೀ ಆಗುತ್ತಿತ್ತೆಂಬುದು ಖಚಿತ! ಅದು ರಾಮಶರಣನಿಗೂ ಗೊತ್ತಿತ್ತು. ಅದು ಇಷ್ಟು ಬೇಗ, ಮತ್ತು ಅದಕ್ಕೆ ನಾನು ನಿಮಿತ್ತನಾಗುವುದು ಮಾತ್ರ ಬೇಡವಾಗಿತ್ತು.

ನೌಕರಿ ಹೋದ ಮೇಲೆಯೂ ರಾಮಶರಣ ನಿಶ್ಚಿಂತ ಮನುಷ್ಯನಂತೆಯೇ ಕಂಡನು. ಮತ್ತೊಂದು ಸಾರ್ವತ್ರಿಕ ಸಂಪು ಆಗದಿದ್ದುದಕ್ಕೆ ಅಧಿಕಾರಿಗಳು ಅಚ್ಚರಿಪಟ್ಟರು. ಆದರೆ ಅದಕ್ಕೆ ರಾಮಶರಣನ ವಾಣಿಯೇ ಕಾರಣವಾಗಿತ್ತು. "ನನ್ನ ನೌಕರಿಗಿಂತ ಹಿರಿದಾದ ಧ್ಯೇಯವನ್ನು ನಾವು ಸಾಧಿಸಬೇಕಾಗಿದೆ. ಇರುವಾಗ ಸಾಮರ್ಥ್ಯವನ್ನು ಕಳೆದುಕೊಳ್ಳುವುದು ಬೇಡ" ಎಂದು ಅವನು ಎಲ್ಲರಿಗೂ ತಿಳಿಸಿ ಹೇಳಿದ್ದ. ಜನ ಅದನ್ನು ಅಕ್ಷರಶಃ ಪಾಲಿಸಿದರು. ಈ ಪ್ರಕರಣದಿಂದ ಅವನಿಗೆ ಅಂಥ ಅಭೇದ್ಯ–ಅಸಾಮಾನ್ಯ ಸಾಮರ್ಥ್ಯವು ಪ್ರಾಪ್ತವಾಗಿತ್ತು. ಆ ಪ್ರಕರಣವನ್ನು ಕುರಿತು ಹಳಹಳಿಸುವುದರಂತಿರಲಿ, ರಾಮಶರಣನು ತನ್ನ ಮನಸ್ಸಿನಲ್ಲಿ ಕಂಪನಿಗೆ ಅಭಾರಿಯೇ ಆಗಿರಬೇಕು.

ಇದೆಲ್ಲವನ್ನು ಮಾತನಾಡಲು ರಾಮಶರಣನ ಭೆಟ್ಟಿಯ ಅಗತ್ಯವಿತ್ತು. ನಾನಾಗಿ ಅವನು ಇದ್ದಲ್ಲಿಗೆ ಹೋಗಲು ಧೈರ್ಯ ನನ್ನಲ್ಲಿರಲಿಲ್ಲ. ಕಾಯುತ್ತಲಿದ್ದೆ. ಅವನಂತೂ ಆಫೀಸಿನ ಕಡೆಗೆ ಹಾಯ್ದಿರಲೇ ಇಲ್ಲ.

ಅಂದು ರವಿವಾರ ಹನ್ನೆರಡೂವರೆ ಗಂಟೆಯಾದರೂ ಊಟಮಾಡಲು ಮನಸ್ಸೇ ಆಗಿದ್ದಿಲ್ಲ. ಸಿಗರೇಟಿನ ಹೊಗೆಯನ್ನು ಉಗುಳುತ್ತ ಕುಳಿತಿದ್ದೆ. ಬಾಗಿಲು ತಟ್ಟಿದ ಸದ್ದಾಯಿತು. ಮಕ್ಕಳು ಹೊರಚಿಲಕ ಹಾಕಿದ್ದರು.

"ಯಾರವರು?" ಎಂದೆ.

"ನಾನು ರಾಮಶರಣ."

"ಚಟ್ಟನೇ ಕುರ್ಚಿ ಬಿಟ್ಟು ಎದ್ದೆ. ಅವನ ಭೀಮ ಕಾಯ ನನ್ನೆದುರು ನಿಂತಿತ್ತು. ಕೈಗೆ ಸುತ್ತಿದ ಒಂದು ಹಾರವಿತ್ತು. ಇನ್ನೇನು ಮಾತನಾಡಬೇಕೋ ತಿಳಿಯದೆ ನಿಂತಿದ್ದೆ. ಅಷ್ಟರಲ್ಲಿ ರಾಮಶರಣ ನನ್ನ ಕಾಲು ಹಿಡಿದುಕೊಂಡ.

"ಏ, ಏ ರಾಮಶರಣ, ಇದೇನು? ಎನ್ನುತ್ತ ನಾನು ಅವನನ್ನು ಹಿಡಿದು ಎಬ್ಬಿಸಿದೆ. ದಿಙ್ಮೂಢನಂತೆ ನಾನು ಅವನ ಕಡೆಗೆ ನೋಡುತ್ತ ನಿಂತಾಗ, ಆ ಹಾರವನ್ನು ತೆಗೆದು ನನ್ನ ಕೊರಳಿಗೆ ಹಾಕಬಂದ.

"ಛೇ ಇದೇನು ನಡೆಸಿದ್ದೀ ರಾಮಶರಣ?'' ಎಂದು ದೂರ ಸರಿದೆ.

"ಇಲ್ಲ ಸಾಹೇಬರೆ, ಹಾಗೆ ಮಾಡಬೇಡ್ರಿ'' ಎಂದ. ಅವನ ಕಂಠ ತುಂಬಿ ಬಂದಿತ್ತು. ಅವನು ಜುಲುಮೆಯಿಂದ ಹಾಕಿದ ಹಾರವನ್ನು ತೆಗೆದು ಅವನಿಗೇ ಒಪ್ಪಿಸುತ್ತ,

"ನನ್ನದು ನನಗೇ ನಾಚಿಕೆಯಾಗುವ ಹಾಗೆ ಮಾಡುತ್ತೀಯಲ್ಲ'' ಎಂದೆ.

"ನಿನ್ನೆ ಯೂನಿಯನ್ನಿನ ಸಭೆಯಲ್ಲಿ ನನ್ನನ್ನು ಒಮ್ಮತದಿಂದ ಅಧ್ಯಕ್ಷ ಅಂತ ಆರಿಸಿದರು. ನನ್ನ ಜೀವನವನ್ನು ಯಾರು ಬೆಳಗಿಸಿದರು, ವ್ಯಕ್ತಿತ್ವವನ್ನು ಯಾರು ಅರಳಿಸಿದರು ಅನ್ನುವುದು ಹೊರಗಿನವರಿಗೆ ಹೇಗೆ ತಿಳಿಯಬೇಕು? ನನಗೆ ಇಲ್ಲಿಯವರಗೆ ದೊರತ ಶ್ರೇಯಸ್ಸು ತಮ್ಮದೇ'' ಹಾಗೆನ್ನುವಾಗಲೇ ನಾನು ಅವನನ್ನು ಬಿಗಿಯಾಗಿ ಅಪ್ಪಿಕೊಂಡೆ.

"ರಾಮಶರಣ, ನಿನ್ನ ದಾರಿಯನ್ನೇ ನಾ ಕಾಯುತ್ತಿದ್ದೆ.''

"ಏನು, ಹೇಳ್ರಿ.''

"ನೀ ನಿನ್ನ ಸಂಬಳದ ಹಣ ತೆಗೊಂಡಿಲ್ಲ?''

"ಮುದ್ದಾಂ ತೊಗೊಂಡಿಲ್ಲ. ಲೇಬರ್ ಕೋರ್ಟಿಗೆ ಕೇಸ್ ಒಯ್ಯೋದಿದೆ. ಸಾಹೇಬರೇ, ನೀವೇ ಹೇಳಿರಿ. ನಾ ಅಂದು ನಿಮ್ಮ ಅಪಮಾನ ಮಾಡಿದೆನೆ?''

"ರಿಪೋರ್ಟಿನೊಳಗೆ ನಾ ಹಾಗೇನಾದರೂ ಉಲ್ಲೇಖ ಮಾಡಿದ್ದೇನೆಯೆ?''

"ನಾನೂ ಅದನ್ನೆ ಹೇಳತಿದ್ದೆ. ನಾನು ನಿಮ್ಮ ಅಪಮಾನ ಮಾಡಿದ ಅಂತೇ ಇಟ್ಟುಕೊಳ್ಳಿ. ಅದೇ ಕ್ಷಣಕ್ಕೆ ಕ್ಷಮಾನೂ ಕೇಳಿದೆ.''

"ಅದರ ಉಲ್ಲೇಖ ಮಾಡಿದೆ. ಅದನ್ನ ತೆಗೆದು ಹಾಕಬೇಕಂತ ಸಾಹೇಬರು ಬಹಳ ಒದರಾಡಿದರು. ನಿನ್ನನ್ನು ಕೆಲಸದಿಂದ ತೆಗೆದು ಹಾಕುವ ವಿಚಾರ ಇತ್ತೇ ಇತ್ತು ಅವರದು. ಅದಕ್ಕೆ ನಾ ನಡುವೆ ಸಿಕ್ಕೆ.''

"ಏನೂ ಕೆಡಕು ಆಗಲಿಲ್ಲ. ನೀವು ಇದ್ದಿರಿ ಅಂತ ಹೀಗೆ ರಿಪೋರ್ಟು ಆಯಿತು. ಲೇಬರ್ ಕೋರ್ಟಿಗೆ ಹೋಗೋದಕ್ಕೆ ಬಲಾ ಬಂತು.''

"ರಾಮಶರಣ, ನೀನು ನಿಜವಾಗೇ ದೊಡ್ಡ ಮನುಷ್ಯ.''

"ಇದ್ದದ್ದೇ ಸತ್ಯ ಇದ್ದರೆ ನೀವು ಮಾಡಿದವರು! ಹೋಗಲಿ ಬಿಡಿರಿ. ಒಂದು ಸೂಕ್ಷ್ಮ ಕೆಲಸದ ಸಲುವಾಗಿ ನಾನು ನಿಮ್ಮ ಕಡೆ ಬಂದಿದ್ದೇನೆ.''

"ಏನು?''

"ಕೇಸ್ ನಡೆಯಿತು ಅಂದರ ನೀವು ಆಜಾರಿ ಆಗಿ, ಅಥವಾ ಊರಿಗೆ ಹೋಗಿ, ಕೋರ್ಟಿನೊಳಗೆ ಗೈರ್‌ಹಾಜರ್ ಉಳಿಯಲಿಕ್ಕ ಸಾಧ್ಯ ಇದೆ ೀನು?"

ನಾನು ಏನು ಉತ್ತರ ಹೇಳಬೇಕೆಂಬುದು ತಿಳಿಯ ೀ ಸುಮ್ಮನಿದ್ದೆ. ಅದರಿಂದ ಉತ್ಸುಕನಾದ ಅವನು,

"ಸಾಹೇಬ್, ಐದು ಸಾವಿರ ಮಂದಿ ಕೆಲಸಗಾರರು ನಿಮ್ಮನ್ನ ಹರಸಿ ಹಾಡತಾರೆ. ನಮ್ಮ ಪ್ರತಿಷ್ಠೆ, ಮಾನಾ ಅಪಮಾನಾ, ಈ ಕೇಸನ್ನು ಅವಲಂಬಿಸಿದೆ—ನೀವು ಮನಸ್ಸಿನ ಮೇಲೆ ತೆಗೊಂಡರ..."

"ನನ್ನ ಗೈರ್‌ಹಾಜರಿ ಎಷ್ಟು ದಿವಸ ನಡೆದೀತು? ಈ ಪರಿಸ್ಥಿತಿಯೊಳಗೆ ಸುಳ್ಳು ಕಾರಣ ಹೇಳುವುದು, ಖೊಟ್ಟಿ ಸರ್ಟಿಫಿಕೇಟು ಕೊಡೋದು ಇವು ದಕ್ಕುವುದು ಕಠಿಣ."

"ಅದು ನಮಗ ಹತ್ತಿತ್ತು. ನಿಮಗ ಬೇಕಾದಂಥ ಸರ್ಟಿಫಿಕೇಟ್ ತಂದು ಕೊಡತೇನೆ."

"ಒಂದಿಷ್ಟು ವಿಚಾರ ಮಾಡಲಿಕ್ಕ ಪುರಸೊತ್ತು ಕೊಡು. ನಿಮಗ ಸಹಾಯ ಮಾಡೋದರೊಳಗ ನಾ ಸಿಗಬೀಳದಂತ ಆಗಬೇಕಲ್ಲ."

"ಅದು ಹೌದು. ಇನ್ನೂ ಮತ್ತ ಬೇರೇ ಉಪಾಯ ಇವೆ. ನಾ ಯಾವಾಗ ಬರಲಿ?"

"ನಾ ಹೇಳಿ ಕಳಿಸ್ತೇನೆ. ಅಲ್ಲದೇ ನಿನ್ನ ಲಕ್ಷ್ಯದೊಳಗ ಇರಲಿ. ನಾನು ನಿನ್ಹಂಗೆ ದೊಡ್ಡ ಮನುಷ್ಯ ಅಲ್ಲ."

"ಏನಾದರೂ ಅಂತೀರಿ ಆಯಿತು."

"ನಿಜ. ನಿನ್ನ ಹಾಗೆ ಲಟ್ಟನೇ ನಿರ್ಣಯ ತಗೊಳ್ಳುವ ಯೋಗ್ಯತೆ ನನ್ನದಲ್ಲ."

ರಾಮಶರಣ ಎದ್ದು ಹೋದ.

ಆದರ ಈ ಸಮಸ್ಯೆಯನ್ನು ನಾನು ಆಗಲೇ ಬಿಡಿಸಿದಂತಾಗಿತ್ತು. ನನ್ನ ಹಿತವನ್ನು ಕಡೆಗಣಿಸಿ ಐದು ಸಾವಿರ ಜನ ಕಾರ್ಮಿಕರ ಕಲ್ಯಾಣದ ಭಾರವನ್ನು ಹೊತ್ತುಕೊಳ್ಳುವಷ್ಟು ನಾನೇನು ವ್ಯವಹಾರಶೂನ್ಯನಿರಲಿಲ್ಲ. ಕಂಪನಿಯಲ್ಲಿಯ ೧೫೦೮ ಕಾರಕೂನರಲ್ಲಿ ನಾನೂ ಒಬ್ಬನಾಗಿದ್ದೆ. ನಾನು ಹುತಾತ್ಮನಲ್ಲವೆಂಬ ಮಾತನ್ನು ನನ್ನ ಮನಸ್ಸು ಒಂದೇ ಸಮನೆ ಹೇಳುತ್ತಿದ್ದಿತು. ಆದ್ದರಿಂದ ನಾನು ಅವನಿಗೆ ನೆರವಾಗುವ ವಿಚಾರವನ್ನು ಅವನಿದ್ದಾಗಲೇ ತೆಗೆದುಹಾಕಿದ್ದೆ. ಕೇವಲ ರಾಮಶರಣನ ಹಿತಸಂಬಂಧ ಈ ಸಮಸ್ಯೆಯಲ್ಲಿ ತೊಡಗಿದ್ದರೆ ಇಷ್ಟು ತ್ವರೆಯಾಗಿ ನಿರ್ಣಯಕ್ಕೆ ಬರಲು ಸಾಧ್ಯವಾಗುತ್ತಿದ್ದಿಲ್ಲ.

ರಾಮಶರಣ ನನ್ನ ಹುಟ್ಟಿನ ಹನ್ನೆರಡನೆಯ ದಿನದ ಗುಗ್ಗರಿಯನ್ನು ಮುಕ್ಕಿ ಕುಳಿತಿದ್ದ. ಎರಡನೆಯ ದಿನವೇ ಮತ್ತೆ ಬಂದ.

"ಸಾಹೇಬರೇ, ನಿಮ್ಮ ಕ್ಷಮಾ ಕೇಳಲಿಕ್ಕೆ ಬಂದೇನಿ, ಮೊನ್ನೆ ನಾ ನಿಮಗೆ ಸುಳ್ಳು ಹೇಳಿದೆ."

"ಅಂದರ?"

"ಈ ಅಪೀಲಿಗೂ ಕಾಮಗಾರರ ಕಲ್ಯಾಣಕ್ಕೂ ಏನೂ ಸಂಬಂಧ ಇಲ್ಲ. ನಿಜ ಅಂದರೆ, ಇದರೊಳಗ ನನ್ನದೇ ಸ್ವಾರ್ಥ ಇದೆ."

''ಹೌದೆ? ಸುಳ್ಳು ಯಾಕೆ ಹೇಳಿದಿ?''

''ನಿಮ್ಮ ಮುಂದೆ ದಿಮಾಕು ತೋರಿಸಲಿಕ್ಕೆ ಹೋದೆ. ಮನೆಗೆ ಹೋದಮೇಲೆ ಕಸಿವಿಸಿ ಆಯಿತು. ನಿದಾನ ನಿಮ್ಮ ಮುಂದೆ ಸುಳ್ಳು ಆಡಬಾರದಿತ್ತು ಅಂತ ಅನಿಸಿತು.''

''ಹೋಗಲಿ, ಮತ್ತೇನಾದರೂ ಉಪಾಯ ಇದ್ದರ ಹೇಳು. ನೋಡೋಣ.''

''ಅದನ್ನೇ ಹೇಳತೇನೆ. ನಮ್ಮ ಜನಕ್ಕೆ ಊರಿನ ಸೆಳೆತ ಎಷ್ಟು ಇರುತ್ತದೆ ಅನ್ನುವುದು ನಿಮಗೆ ಗೊತ್ತಿದೆ. ನಾನು ನೌಕರಿಗೆ ಬಂದಂದಿನಿಂದ, ಅಂದರೆ ಎಂಟು ವರ್ಷದಿಂದ ನಾನು ಊರ ಕಡೆಗೆ ಹೋಗಿಲ್ಲ.''

''ಹೌದು. ನನಗೂ ಇದು ಸಮಸ್ಯಾನೇ ಆಗಿತ್ತು.''

''ಪ್ರವಾಸ ಅಂದರೆ ಖರ್ಚು ಆಗುವುದೇ. ಹೇಳಿಕೇಳಿ ನಾನು ಒಬ್ಬನೇ ಇರುವವ. ಶಕ್ಯ ಇದ್ದಷ್ಟು ಹಣ ಉಳಿಸಿ ಊರಿಗೆ ಹಣ ಕಳಿಸುತ್ತಿದ್ದೆ. ಹಿಂದಕ್ಕೆ ನಾನು ಒಬ್ಬ ಸಾಧುವಿನ ನಾದಕ್ಕೆ ಬಿದ್ದಿದ್ದೆ. ನಿಮಗೆ ನೆನಪು ಇದೆ ಅಲ್ಲ?''

''ಹೌದು ಅಂದ್ಹಂಗೆ ನಾನೂ ನಿನಗೆ ಸುಳ್ಳು ಹೇಳಿದ್ದೆ. ನೀ ಅವನ ಅಂಗಾರಾ— ಪ್ರಸಾದಾ ತಂದು ಕೊಟ್ಟ ಮೂರನೆಯ ದಿನವೇ ನನಗೆ ಮೊದಲನೇ ಬಡತಿ ಸಿಕ್ಕಿತ್ತು ಮತ್ತು ಈ ಸಾಧೂ ಏನಾದರೂ.....''

''ಯಾತಕ್ಕೆ ಸಾಹೇಬರೇ, ಇದರ ನಾದಕ್ಕೇನೇ ಬೀಳಬೇಡಿರಿ. ಅಂಗಾರಕ್ಕೆ, ನಿಮ್ಮ ಬಡತಿಗೆ ಏನೂ ಸಂಬಂಧ ಇಲ್ಲಾ, ನಿಮ್ಮ ಹುಷಾರಿಗೂ ಇಡೀ ಆಫೀಸಿನೊಳಗೇ ವಾಹವ್ವಾ ಇದೆ. ಇನ್ನು ನನ್ನಂಥವನ ಇಚ್ಛೆ ಪೂರ್ಣ ಆಗಿದ್ದರೆ ನನಗೂ ಇದು ಪಟಾಯಿಸುತ್ತಿತ್ತು.''

''ನಿಂದೇನು ಇಚ್ಛೆ ಇತ್ತು?''

''ನನಗೆ ಹಣದ ಅಗತ್ಯ ಇತ್ತು. ಅದಂತೂ ಸಿಗಲಿಲ್ಲ, ತಿರುಗಿ ನನ್ನ ಕಿಸೆಯಿಂದೇ ಐವತ್ತು ರೂಪಾಯಿ ಹೋದವು.''

''ನಿನಗೆ ಎಷ್ಟು ಹಣ ಬೇಕಾಗಿತ್ತು?''

''ಐದು ಸಾವಿರ.''

''ಯಾತರ ಸಲುವಾಗಿ?''

''ಅದೊಂದು ದೊಡ್ಡ ಇತಿಹಾಸವೇ ಇದೆ. ನಮ್ಮ ಊರೊಳಗೆ ಒಂದು ಕಾಲಕ್ಕೆ ನಾವು ಬಹಳ ಆಸ್ತಿವಂತರಾಗಿದ್ದೆವು. ಆದರೆ ಪರಿಸ್ಥಿತಿ ತಿರುಗಿ ಬಿತ್ತು. ಎಷ್ಟು ಅಂತೀರಿ? ಒಂದು ಸ್ವಲ್ಪವೂ ಆಸ್ತಿ ಉಳಿಯದಿದ್ದಾಗ, ಎಲ್ಲಾ ಒತ್ತೆ ಬಿದ್ದಿತು. ನಮ್ಮ ತಂದೆ ಸಾಯುವಾಗ ಅವರಿಗೆ ವಚನ ಕೊಟ್ಟೆ. ಒತ್ತೇ ಹಾಕಿದ ಆಸ್ತಿ ಬಿಡಿಸಿಕೊಳ್ಳುವ ತನಕ ಲಗ್ನ ಆಗುವುದಿಲ್ಲ ಅಂತ, ರಕ್ತಾ ಅಟ್ಟಿಸಿ ಎರಡು ಸಾವಿರ ಕೂಡಿಸಿದೆ. ಇನ್ನೂ ಮೂರು ಸಾವಿರ ಕೂಡಿಸಬೇಕಾಗಿದೆ. ನನ್ನ ನೌಕರಿ ಮುಂದುವರಿಯೋದು ಈಗ ಅಗತ್ಯ ಇದೆ.''

''ಹಾಗಿದ್ದರೆ ಈ ಯೂನಿಯನ್ನಿನ ಉಪದ್ವ್ಯಾಪ ಯಾರು ಹೇಳಿದ್ದರು ನಿನಗೆ?''

''ನಾನೂ ಈ ವಿಷಯದಲ್ಲಿ ಬಹಳ ಯೋಚನೆ ಮಾಡಿದೆ ಸಾಹೇಬ, ಈ ಯೂನಿಯನ್ನಿನೊಳಗೆ ನಾ ಯಾಕೆ ಬಿದ್ದೆ–ಅಂತ. ಹೇಗೋ ಆ ಸೆಳವಿನಲ್ಲಿ ಸಿಕ್ಕೆ,

ಬಿಡಬೇಕೆಂದರೆ.... ಈಗ 'ರಾಮಶರಣ ಜಿಂದಾಬಾದ'ದ ಸವಿ ಹತ್ತಿದೆ!''—ಇಷ್ಟು ನುಡಿದು ರಾಮಶರಣ ದೊಡ್ಡದಾಗಿ ನಕ್ಕು ಮತ್ತೆ ಕನಿಕರದ ದನಿಯಲ್ಲಿ ಹೇಳಿದ :

''ಈಗ ಸಾಹೇಬ, ಈ ಕೇಸಿನಿಂದ ಪಾರಾಗಬೇಕಾದರೆ ಇನ್ನೊಂದು ಉಪಾಯ ಇದೆ. ಅದೆಂದ್ರೆ.... ನೀವು ಕೋರ್ಟಿನಲ್ಲಿ ಸಾಕ್ಷಿ ಅವಶ್ಯ ಹೇಳಿರಿ. ಆದ್ರೆ ಒಂದು ಮಾಡಿರಿ. ನನಗೆ ಬೇಕಾದ ಕಚ್ಚಾ ಪಾಯಿಂಟ್ ಅದರಲ್ಲಿ ತರ್‍ರಿ.''

''ಅಂದರೆ? ವಕೀಲರ ಕೆಲಸ ನನಗೆ ಹೇಳಲಿಕ್ಕೆ ಹತ್ತಿದ್ದಿಯಲ್ಲ?''

''ನಾ ವಕೀಲರನ್ನ ಕರಕೊಂಡೇ ಬಂದೇನಿ.''

''ಕಮಾಲ್ ಮಾಡಿದಿ! ಯಾರವರು?''

ಗ್ಯಾಲರಿಯಲ್ಲಿ ಯಾರಾದರೂ ನಿಂತಿರಬೇಕೆಂಬ ಸಂಶಯ ನನಗೆ ಆಗಿನಿಂದಲೇ ಬಂದಿತ್ತು. ರಾಮಶರಣ ಹೊರಗೆ ಹೋಗಿ ಯೂನಿಯನ್ನಿನ ವಕೀಲರನ್ನು ಕರೆದುಕೊಂಡು ಬಂದನು. ಈ ಎರಡನೆಯ ಉಪಾಯದಲ್ಲಿಯೂ ರಾಮಶರಣನ ಮನಸ್ಸನ್ನು ನೋಯಿಸಲಾಗದೆ ಉಳಿದೆ.

ಔಪಚಾರಿಕ ಮಾತು ಮುಗಿದು, ಕೋರ್ಟಿನಲ್ಲಿಯ ನನ್ನ ಸಾಕ್ಷಿಯ ತರಬೇತಿ ಸುರುವಾಯಿತು. ಈ ತಯಾರಿ ಎರಡು ತಾಸಿನವರೆಗೆ ನಡೆಯಿತು. ವಕೀಲರು ನಾನು ಸಾಕ್ಷಿಯಲ್ಲಿ ಏನು ಹೇಳಬೇಕು, ಯಾವುದನ್ನು ಹೇಳಬಾರದು ಎನ್ನುವುದನ್ನು ಕಲಿಸಿಕೊಟ್ಟರು. ಅವರಿಗೆ ಸಂಪೂರ್ಣ ಸಮಾಧಾನವಾದ ನಂತರ ಈ ನಾಟಕ ಮುಗಿಯಿತು. ರಾಮಶರಣ ನನ್ನನ್ನು ಮನಸಾ ವಂದಿಸಿ ತನ್ನ ವಕೀಲರೊಂದಿಗೆ ಹೊರಟುಹೋದನು.

ಮುಂದಿನ ಕೆಲ ದಿನಗಳಲ್ಲಿ ವಾತಾವರಣಕ್ಕೆ ಮತ್ತೆ ಕಾವೇರತೊಡಗಿತು. ಈ ಕೇಸಿನ ವಿಷಯ ಬಿಟ್ಟರೆ ಕಾರ್ಮಿಕರಿಗೆ, ಕಾರಕೂನ ಜನರಿಗೆ ಚರ್ಚೆಗೆ ಅನ್ಯ ವಿಷಯವೇ ಇಲ್ಲವಾಗಿತ್ತು. ರಾಮಶರಣ ಚಾಕರಿಯ ಪ್ರಶ್ನೆ ಎಂದೋ ಲುಪ್ತವಾಗಿತ್ತು. ಕೋರ್ಟು ಕಚೇರಿಯ ವ್ಯಾಪದಲ್ಲಿ ಯೂನಿಯನ್ನಿನ ಕೆಲಸವೂ ಹಿಂದುಳಿದಿದ್ದಿತು. ಈ ಕೇಸಿನ ಭವಿತವ್ಯವು ನನ್ನ ಸಾಕ್ಷಿ, ಹೇಳಿಕೆಗಳ ಮೇಲೆಯೆ ಅವಲಂಬಿಸಿದೆ ಎಂಬುದು ಎಲ್ಲರಿಗೂ ನಿಶ್ಚಿತವಾಗಿತ್ತು.

ಅಂದು ನನ್ನ ಸಾಕ್ಷಿ ಮೊದಲಾಗಿ ಮುಗಿಯಿತು. ಮುಗಿದೊಡನೆಯೆ ಯಾರ ಕೂಡವೂ ಮಾತನಾಡದೇ ಕಂಪನಿಯ ಮೋಟಾರಿನಲ್ಲಿ ಕುಳಿತು ಮನೆಗೆ ಬಂದೆ. ಕೋರ್ಟಿನ ಭಯಾನಕ ವಾತಾವರಣವು ಮನೆಗೆ ಬಂದರೂ ಕಣ್ಣಿಂದ ಮರೆಯಾಗದಾಯಿತು. ಸಾಕ್ಷಿಯು ಮುಗಿಯುತ್ತ ಬಂದಾಗ ರಾಮಶರಣನ ಹಾಗೂ ಅವನ ವಕೀಲರ ಮುಖಮುದ್ರೆ ಬಿದ್ದು ಹೋಗಿದ್ದುದನ್ನು ನನಗೆ ನೋಡಲಾಗಿರಲಿಲ್ಲ.

ಆದರೆ ಇಂಥ ಸ್ಥಿತಿಯಲ್ಲಿಯೂ ನನ್ನಿಂದ ಪ್ರಮಾದ ಘಟಿಸಿದೆ ಎಂದು ಮಾತ್ರ ಅನಿಸುತ್ತಿರಲಿಲ್ಲ, ಇಂದಿಗೂ ಅನಿಸುವುದಿಲ್ಲ. ನಾನು ಎಂದೂ ದೊಡ್ಡ ಮನುಷ್ಯನಿರಲಿಲ್ಲ. ಇಲ್ಲದ ಅಪೇಕ್ಷೆಯನ್ನು ರಾಮಶರಣ ನನ್ನಿಂದ ಏಕೆ ಮಾಡಬೇಕಾಗಿತ್ತು? ಹಾಗಿದ್ದರೆ, ನಾನು

ಸರಿಯಾದುದನ್ನೇ ಮಾಡಿದ್ದರೆ ಕೋರ್ಟಿನಲ್ಲಿ ನನ್ನ ಸರ್ವಸಾಮರ್ಥ್ಯ ಉಡುಗಿತೇಕೆ? ಸ್ವಂತದ ಸ್ವಾರ್ಥಕ್ಕೆ ಅಂಟಿಕೊಂಡು ನಾನು ಈ ಕೆಲಸ ಮಾಡಿದೆನೆಂಬ ಶಂಕೆ ಯಾವ ವಾಯೆಯಿಂದಲೋ ಮನಸ್ಸಿನಲ್ಲಿ ಸೇರಿಕೊಂಡು ಬಿಟ್ಟದ್ದು, ಏನು ಮಾಡಿದರೂ ಹೋಗಲೊಲ್ಲದಾಯಿತು.

ನಾಳೆ ಕಚೇರಿಗೆ ಹೋಗುವುದಿದೆ ಎಂಬ ನೆನಪು ಬಂದಿತಷ್ಟೇ—ಮೈಯಲ್ಲಿ ಭೀತಿಯ ಚಳಕು ಆರುಪಾರಾಗಿ ಹೋಯಿತು. ಯಾವನಾದರೂ ಒಬ್ಬ ತಲೆ ತಿರುಕ ಡ್ರೈವರ್ ನನ್ನನ್ನು ಹೊಡೆಯಲಿಕ್ಕಿಲ್ಲವಲ್ಲ! ಈ ವಿಚಾರ ಬಂದೊಡನೆಯೇ ಕಾಗದ ಲೇಖನಿಯನ್ನು ತೆಗೆದುಕೊಂಡು ರಜೆಗೆ ಅರ್ಜಿ ಹಾಕಿದೆ.

ಮೂರು ದಿನ ಹೀಗೆಯೇ ಕಳೆದೆ. ಒಂದಿಷ್ಟು ಶಾಂತಿ ಮೂಡಿತ್ತು. ಇನ್ನೂ ಕೆಲ ದಿನ ಹೋದ ಮೇಲೆ, ಎಲ್ಲವೂ ಮರೆವಿಗೆ ಬೀಳಬಹುದು, ವಾತಾವರಣ ತಿಳಿಯಾಗಬಹುದು ಎಂಬ ಆಶೆಯನ್ನು ಕಟ್ಟಿಕೊಂಡಿದ್ದೆ. ಆದರೆ ಹಾಗಾಗಬಾರದೆಂದು ವಿಧಿ ಸಂಕಲ್ಪಿಸಿತ್ತೇನೊ.

ನನ್ನ ಭೆಟ್ಟಿಗೆ ಮುಸ್ಸಂಜೆಯ ವೇಳೆಯನ್ನು ಆರಿಸಿಕೊಂಡು ರಾಮಶರಣ ಬಂದ. ಅವನ ಕೆದರಿದ ಕೂದಲು, ಹಿಗ್ಗಿದ ಕಣ್ಣು ಅಷ್ಟೇ ನನಗೆ ಮೊದಲು ಕಂಡವು. ತುಸು ಹೊತ್ತಿನ ನಂತರ ಅವನ ಒಂದು ಕೈ ಮಡಿಚಿದ್ದುದು ಕಂಡಿತು. ಅವನ ಕೈಯಲ್ಲಿ ಚಾಕು ಇದ್ದಿರಬಹುದೆ? ಸಾಹೇಬರು ರಾಮಶರಣನ ಬಗ್ಗೆ ಮೊದಲ ಸಲ ಹೇಳುವಾಗ ಅಂದಿದ್ದರು—ರೇಗಿದರೆ ಅವನು ಇನ್ನೊಬ್ಬರ ಜೀವ ತೆಗೆಯುವುದಕ್ಕೂ ಹಿಂಜರಿಯುವವನಲ್ಲ—ಎಂದು.

ನಡುಗುತ್ತ ನಾನು ಅವನ ಕಾಲಿಗೆ ಬಿದ್ದೆ. ಅವನು ನನ್ನನ್ನು ಅನಾಮತ್ತಾಗಿ ಮೇಲಕ್ಕೆ ಎತ್ತಿ ಕುರ್ಚಿಯಲ್ಲಿ ಕುಕ್ಕರಬಡಿದ.

ತುಸು ಹೊತ್ತು ಇಬ್ಬರೂ ಮೌನ. ನನ್ನ ಮುಖ ರಾವು ಹೊಡೆದಿತ್ತು, ಅವನದು ವಿಚಾರಮಗ್ನವಾಗಿತ್ತು. ಅವನ ಬಾಯಿಂದ ಏನು ಬರುವುದೊ ಎಂದು ಕಾದಿದ್ದೆ.

"ಇದೇನು ಮಾಡಿದಿರಿ ಸಾಹೇಬರೆ?" ಅಂದ.

"ರಾಮಶರಣ, ಹೊಟ್ಟೆಯ ದೆಸೆಯಿಂದ ಮನುಷ್ಯ ನೀಚ ಆಗತಾನೆ."

"ಆದರ ಇಷ್ಟು?"

"ರಾಮಶರಣ, ಹಾಗೆ ಸಾಕ್ಷಿ ಹೇಳದೇ ನನಗೆ ಗತ್ಯಂತರನೇ ಇದ್ದಿಲ್ಲ."

"ಸಾಕ್ಷೀ ಬಗ್ಗೆ ಅಲ್ಲರೀ ಸಾಹೇಬ್, ನಾ ಅನ್ನುವುದು. ನಿಮಗ ಆಫೀಸರ್ ಜಾಗಾ ಸಿಕ್ಕಾಗೇ ನಾವು ಅದನ್ನು ತಿಳಕೊಂಡಿದ್ದೆವು. ಆದರ ನಿದಾನ, ನೀವು ಮುಂಚೇ ಹೀಗೆ ಸಾಕ್ಷಿ ನುಡಿಯುವವರು ಅಂತ ನಮಗೆ ಹೇಳಬೇಕಾಗಿತ್ತು."

"ಧೈರ್ಯಾ.... ಧೈರ್ಯಾ ಸಾಲಲಿಲ್ಲ ಅನ್ನು."

"ಅದು ಹೋಗಲಿ ಬಿಡಿರಿ. ಆದರ ಇದನ್ನೇನು ಮಾಡಿದಿರಿ?"

ರಾಮಶರಣ ತನ್ನ ಕೈಮುಷ್ಟಿಯಿಂದ ಒಂದು ಪಾಕೀಟನ್ನು ಹೊರ ತೆಗೆದ. ನಾಲ್ಕು ದಿನಗಳ ಕೆಳಗೆ ನಾನು ಅವನಿಗೆ ಕಳಿಸಿದ್ದ ೩,೦೦೦ ದ ಚೆಕ್ಕು ಇದ್ದಂತೆಯೇ ಇತ್ತು.

“ನಿಮ್ಮ ಚೆಕ್ಕು ತಗೊಳ್ಳಿರಿ. ನಿಮ್ಮ ಕಿಸೆಗೆ ಯಾಕೆ ಕತ್ತರಿ ಹಾಕತೀರಿ? ನನ್ನ ಬಡಿದಾಟ ಕಂಪನಿಯ ಜೋಡಿ ಇದೆ.”

“ನನಗೆ.... ನನಗೆ ಇಷ್ಟೂ ಸಮಾಧಾನ ಇರಬಾರದು ಅಂತೀಯಾ?”

“ನಿಮ್ಮದು ಯಾಕ, ನಿಮ್ಮ ಅಪ್ಪನ ಸಮಾಧಾನಕ್ಕ ಸಹಿತ ನನಗೆ ಇದನ್ನ ಸ್ವೀಕರಿಸುವುದು ಶಕ್ಯ ಇಲ್ಲ, ಇದು ವ್ಯಭಿಚಾರ. ಒಳ್ಳೇದು, ನಾ ಹೋಗತೇನಿ.”

“ನಿನ್ನ ಈ ಶಾಂತ ಮಾತಿನಿಂದ ನನಗೆ ಸಂಕಟ ಆಗತದೆ. ಒಂದೆರಡು ಬೈದಾದರೂ ಬೈಯಿ.”

“ಅದಕ್ಕೂ ಒಂದಿಷ್ಟು ಯೋಗ್ಯತಾ.... ಮಾಫ್ ಮಾಡಿರಿ ಸಾಹೇಬ್. ನಿಮಗ ಹೆಚ್ಚು ಕಡಿಮೆ ಏನೂ ಆಡೋಹಾಗಿಲ್ಲಂತ ನಿಶ್ಚಯ ಮಾಡಿದ್ದೇನೆ.”

“ನೀನು ನನ್ನ ಖೂನಿ ಮಾಡಲಿಕ್ಕೆ ಬಂದಿರಬೇಕು ಅಂತ ಅನಿಸಿತ್ತು. ನಿಲ್ಲು, ರಾಮಶರಣ....!”

ರಾಮಶರಣ ಏನೂ ಮಾತನಾಡಲಿಲ್ಲ, ಬರೇ ನಕ್ಕು ಹೊರಟುಬಿಟ್ಟ.

❀ ❀ ❀ ❀

೭

ಡಾ. ಜೆಕಿಲ್ ಮತ್ತು ಮಿ. ಹೈಡ್

ರಾಬರ್ಟ್ ಲುಯಿ ಸ್ಟೀವನ್‌ಸನ್
ಅವರ ಕಾದಂಬರಿಯ ಕಥನ

ರಾಬರ್ಟ್ ಲುಯಿ ಸ್ಟೀವA

ನ್‌ಸನ್ ಈ ಪುಸ್ತಕವನ್ನು ತಾನು ಕನಸಿನಲ್ಲಿ ಕಂಡ ಕಥೆಯೊಂದರ ಆಧಾರದ ಮೇಲೆ ಬರೆದರು. ಅತ್ಯಂತ ಭೀಕರವಾಗಿದ್ದರೂ ಆ ಸ್ವಪ್ನ ಒಂದು ಸತ್ಯವನ್ನು ಒಳಗೊಂಡಿತ್ತು, ಮನುಷ್ಯನಲ್ಲಿ ಒಳ್ಳೆಯ ಮತ್ತು ಕೆಟ್ಟ ಗುಣಗಳೆರಡೂ ಇರುತ್ತವೆ ಎಂಬ ಮಾತನ್ನು ಅತ್ಯಂತ ಮನೋವೇಧಕ ರೀತಿಯಲ್ಲಿ ಚಿತ್ರಿಸುವ 'ಡಾ. ಜೆಕಿಲ್ ಮತ್ತು ಮಿ. ಹೈಡ್' ಪುಸ್ತಕ ಅದ್ಭುತರಮ್ಯವಾಗಿದೆ.

ಡಾ. ಜೆಕಿಲ್ ಮತ್ತು ಮಿ. ಹೈಡ್

ಚುಮುಚುಮು ನಸುಕಿನ ವೇಳೆ. ಹೊರಗೆ ಕೆಟ್ಟ ಚಳಿ. ಲಂಡನ್ ನಗರಕ್ಕೆ ಆಗಿನ್ನೂ ವಿದ್ಯುದ್ದೀಪಗಳು ಬಂದಿರಲಿಲ್ಲ. ರಸ್ತೆಯ ದೀಪಗಳ ಮಂಕು ಬೆಳಕಿನಲ್ಲಿ ಓಡಾಡುತ್ತಿದ್ದವರು ವಿರಳ.

ಅಂಥ ಸಮಯದಲ್ಲಿ ನಗರದ ಒಂದು ದೊಡ್ಡ ಬೀದಿಯಲ್ಲಿ ಏಳೆಂಟು ವರ್ಷದ ಬಾಲಿಕೆ ಓಡೋಡಿ ಬರುತ್ತಿದ್ದಳು. ಅವಳ ಹಿಂದೆಯೇ ಒಬ್ಬನು ಬೆನ್ನಟ್ಟಿಕೊಂಡು ಬಂದನು. ಆ ಬಾಲಿಕೆ ಒಂದು ಸಂದಿಯಲ್ಲಿ ತಿರುಗಬೇಕೆನ್ನುವಷ್ಟರಲ್ಲಿಯೆ ಆ ಮನುಷ್ಯ ಅವಳನ್ನು ಸಮೀಪಿಸಿ, ಕೆಳಕ್ಕೆ ಕೆಡವಿದವನೇ ರಭಸದಿಂದ ತುಳಿಯತೊಡಗಿದ, ಭಯದಿಂದ ಆ ಮಗು ಚೀರಿತು. ಅದನ್ನು ಕೇಳಿದ ಜನ ಅಲ್ಲಿಲ್ಲಿಂದ ಓಡಿ ಬಂದಾಗಲೇ ಆ ದುಷ್ಟನು ಅವಳನ್ನು ಬಿಟ್ಟು ಓಡಿಹೋದುದು.

ಅದೇ ವೇಳೆಗೆ ನಮ್ಮ ಎನ್‌ಫೀಲ್ಡ್, ಎದುರು ಬದಿಯಿಂದ ಬರುತ್ತಿದ್ದವ, ಆ ಮನುಷ್ಯನ ಬೆನ್ನು ಹತ್ತಿ ಅವನನ್ನು ಹಿಡಿದೇ ಬಿಟ್ಟನು. ಆತ ಆ ದುರ್ಘಟನೆಯ ಸ್ಥಳಕ್ಕೇನೇ ಅವನನ್ನು ಎಳೆದುಕೊಂಡು ಬಂದನು. ಅಷ್ಟರಲ್ಲಿ ಆ ಹುಡುಗಿಯ ತಂದೆತಾಯಿಗಳೂ ಅಲ್ಲಿಗೆ ಬಂದಿದ್ದರು. ಸುದೈವಕ್ಕೆ ಅವಳಿಗೆ ಗಾಯಗಳೇನಾಗಿರಲಿಲ್ಲ. ಆದರೆ ಭಯದಿಂದ ತತ್ತರಿಸಿ ಹೋಗಿದ್ದಳು.

ಇತ್ತ ಆ ರಕ್ಕಸನೋ ಯಾವ ವಿಶೇಷವೂ ಜರುಗದಿದ್ದಂತೆ, ನಿರ್ಭಾವದಿಂದ ನಿಂತಿದ್ದನು. ನೆರೆದ ಜನ ಬಿಡುತ್ತಾರೆಯೇ? ನಿಷ್ಪಾಪ ಮಗುವಿನ ಮೇಲೆ ಇಂಥ ಅತ್ಯಾಚಾರ ಮಾಡಿದ ಅವನನ್ನು ಕೊಂದೇಬಿಡುವಷ್ಟು ತಪ್ತರಾಗಿದ್ದರು. ಆದರೆ ನಾಗರಿಕ ಜಗತ್ತಿನಲ್ಲಿ ಬಾಳುವವರಾಗಿದ್ದವರು, ನಾಗರಿಕ ಜಗತ್ತಿನಲ್ಲಿ ಹಾಗೆ ಮಾಡಲಾದೀತೆ? ಕೊನೆಗೆ ಪೊಲೀಸರಿಗೆ ಒಪ್ಪಿಸಬೇಕೆಂದು ಅವರೆಲ್ಲ ನಿರ್ಧರಿಸಿದರು.

ಆಗ ಆ ಮನುಷ್ಯ ಹೇಳಿದ : ''ಆದದ್ದಾಯಿತು. ನನ್ನನ್ನು ಪೊಲೀಸರಿಗೆ ಒಪ್ಪಿಸಿದರೆ ಅದರಿಂದ ನಿಮಗೆ ಏನು ಬಂದಂತಾಯಿತು? ಆದ ತಪ್ಪಿಗೆ ಏನಾದರೂ ಪರಿಹಾರ ಬೇಕಿದ್ದರೆ ಕೊಡಲು ಸಿದ್ಧನಿದ್ದೇನೆ.''

''ಆಗಲಿ. ಒಂದು ನೂರು ಪೌಂಡು ಕೊಡಬೇಕು. ಸಿದ್ಧನಿದ್ದೀಯಾ?''

ನೂರು ಪೌಂಡು! ಅದು ಹೆಚ್ಚಾಯಿತೆಂದು ಯಾರೂ ಹೇಳಿಯಾರು. ಆದರೆ ನಡೆದ ಘಟನೆಯ ಕಾವು ಇನ್ನೂ ಆರಿರಲಿಲ್ಲವಾದ್ದರಿಂದ ಸಂಬಂಧಪಟ್ಟವರು ಆ ಅಂಕೆಯಿಂದ ಹಿಂದೆ ಸರಿಯಲು ಎಳ್ಳಷ್ಟೂ ಸಿದ್ಧರಿರಲಿಲ್ಲ : ಹೀಗಾಗಿ ನಿರ್ವಾಹವಿಲ್ಲದೆ ಆ ತಪ್ಪಿತಸ್ಥನು ಒಪ್ಪಬೇಕಾಯಿತು.

''ಬನ್ನಿ ಹಾಗಿದ್ದರೆ, ಹೋಗೋಣ. ಹಣ ಕೊಡುವೆ'' ಎಂದು ಅವರನ್ನು ತನ್ನ ಮನೆಗೆ ಕರೆದುಕೊಂಡು ಹೋದನು....

ನನ್ನ ಆಪ್ತನಾದ ರಿಚರ್ಡ್ ಎನ್‌ಫೀಲ್ಡ್ ಮತ್ತು ನಾನು ಒಂದು ಸಂಜೆ ತಿರುಗಾಡುತ್ತ 'ಆ ಮನೆ'ಯ ಮುಂದೆಯೆ ಸಾಗಿದ್ದೆವು. ಅದರ ಮುಚ್ಚಿದ ಬಾಗಿಲನ್ನು ಕಂಡಾಗ ಎನ್‌ಫೀಲ್ಡ್‌ನಿಗೆ ಒಂದು ತಿಂಗಳ ಹಿಂದೆ ನಡೆದ ಆ ದುರ್ಘಟನೆಯ ನೆನಪಾಗಿ ನನಗೆ ಅದರ ವಿವರಗಳನ್ನು ಹೇಳುತ್ತಲಿದ್ದ...

''ಆಮೇಲೆ ಏನಾಯಿತು? ಆ ಮನುಷ್ಯ ಹಣವನ್ನು ನಿಜವಾಗಿಯೂ ಕೊಟ್ಟನೆ?'' ಎಂದು ನಾನು ರಿಚರ್ಡನನ್ನು ಪ್ರಶ್ನಿಸಿದೆ.

''ಹೇಳುತ್ತೇನೆ ಕೇಳು. ಅವನು ಈ ಬಾಗಿಲನ್ನು ತೆರೆದು ಒಳಗೆ ಹೋದ. ಆಮೇಲೆ ಹೊರಬಂದು, ೧೦ ಪೌಂಡು ನಾಣ್ಯಗಳನ್ನೂ ಉಳಿದ ಹಣಕ್ಕೆ ಒಂದು ಚೆಕ್ಕನ್ನೂ ಬರೆದು ನಮ್ಮ ಕೈಗಿತ್ತನು. ಅಷ್ಟು ದೊಡ್ಡ ಮೊತ್ತದ ಹಣಕ್ಕೆ ಚೆಕ್ಕನ್ನು ಕೊಡುವುದೆ? ಅಲ್ಲದೆ, ಆ ಚೆಕ್ಕಿನ ಮೇಲೆ ಬೇರೊಬ್ಬರ ಹೆಸರು; ಅವನದಲ್ಲ! ಖಂಡಿತವಾಗಿ ಇದು ನಮ್ಮನ್ನು ಮೋಸಗೊಳಿಸುವ ಉಪಾಯವೇ ಎಂದು ನಮಗನಿಸಿತು.''

''ಖೊಟ್ಟಿ ಸಹಿ ಇದು – ಎಂದು ಆಗೇ ಹೇಳಬೇಕಿತ್ತು!''

''ಓಹೋ! ಅದಕ್ಕೆ ಅವನು ಏನೆಂದು ಉತ್ತರ ಕೊಟ್ಟ ಗೊತ್ತೆ? ಬೆಳಕು ಹರಿದು, ಬ್ಯಾಂಕಿನ ಬಾಗಿಲು ತೆರೆಯುವವರೆಗೆ ನಾನು ನಿಮ್ಮ ಜೊತೆಗೇ ಇರುತ್ತೇನೆ, ಎಂದು! ಆಗೂ ನಮಗೆ ನಂಬಿಕೆ ಹುಟ್ಟಲಿಲ್ಲ. ಅಂತೇ ನಾವೆಲ್ಲ— ಅಂದರೆ ನಾನು, ಆ ಹುಡುಗಿಯ ತಂದೆ, ಮತ್ತೊಬ್ಬರು ಹಾಗೂ ಆ ಭಂಡ–ಇಷ್ಟು ಜನ ನಮ್ಮ ಮನೆಗೆ ಬಂದು ಹೊತ್ತೇರುವ ತನಕ ಕಾಯ್ದೆವು. ಅಲ್ಲಿಂದ ಬ್ಯಾಂಕಿಗೆ ಹೋಗಿ ಚೆಕ್ಕನ್ನು ನಾನೇ ಹಾಜರು ಮಾಡುತ್ತ 'ಇದು ಖೊಟ್ಟಿ ಸಹಿಯದಾಗಿ ತೋರುತ್ತದೆ' ಎಂದು ಹೇಳಿದೆ. ಬ್ಯಾಂಕಿನವರು ಅದನ್ನು ಪರೀಕ್ಷಿಸಿ, 'ಸರಿಯಿದೆಯಲ್ಲ' ಎಂದರು. ೯೦ ಪೌಂಡು ನಗದು ಹಣವನ್ನು ಕೊಟ್ಟು ಬಿಟ್ಟರು.''

''ಆಶ್ಚರ್ಯವೇ ಸೈ! ಅಲ್ಲ, ಯಾರ ಹೆಸರಿನಲ್ಲಿ ಆ ಚೆಕ್ಕಿನ ಮೇಲೆ ಸಹಿಯಿದ್ದಿತೊ ಅವನನ್ನು ವಿಚಾರಿಸಿದಿರಾ?''

''ಹೆಚ್ಚಿನ ಉಸಾಬರಿ ನಮಗೇಕೆ ಬೇಕು? ನಮಗೆ ಅದರ ಅಗತ್ಯವೂ ಅನಿಸಲಿಲ್ಲ.''

''ಸರಿ. ಆ ದುಷ್ಟನ ಹೆಸರಾದರೂ ಏನು?''

''ಅವನ ಹೆಸರು ಮಿಸ್ಟರ್ ಹೈಡ್'' ಎಂದು.

ಹೈಡ್? ಪರಿಚಿತವಿದ್ದ ಹೆಸರಿನ ಹಾಗಿದೆ— ಎಂದು ಒಂದು ಕ್ಷಣ ಧೇನಿಸಿದೆ, ಹೌದು. ನನ್ನ ಪರಮ ಮಿತ್ರ ಜೆಕಿಲ್ ಬರೆದ ಮೃತ್ಯುಪತ್ರದಲ್ಲಿ ಉಲ್ಲೇಖಗೊಂಡಿದ್ದ ಹೆಸರದು...

ತಿರುಗಾಟವನ್ನು ಮುಗಿಸಿ ಮನೆಗೆ ಬಂದ ಮೇಲೆ, ನಾನು ಅವಸರದಲ್ಲಿ ರಾತ್ರಿ ಊಟವನ್ನು ಮುಗಿಸಿ, ನನ್ನ ಅಭ್ಯಾಸ ಕೋಣೆಗೆ ಬಂದೆ. ತಿಜೋರಿಯ ಕೀಲಿಯನ್ನು ತೆಗೆದು ಡಾ. ಹೆನ್ರಿ ಜೆಕಿಲ್, ಎಂ.ಡಿ.ಡಿ.ಸಿ.ಎಲ್., ಎಲ್.ಎಲ್.ಡಿ.ಎಫ್.ಆರ್.ಎಸ್. ಎಂದು ಮೇಲೆ ಬರೆದಿದ್ದ ಪಾಕೀಟನ್ನು ಹೊರತೆಗೆದು ಆ ಮೃತ್ಯುಪತ್ರವನ್ನು ಇನ್ನೊಮ್ಮೆ ಓದಿದೆ. ತಾನು ಒಂದು ವೇಳೆ ತೀರಿಕೊಂಡರೆ, ಅಥವಾ ೩ ತಿಂಗಳುಗಳಿಗಿಂತ ಹೆಚ್ಚು ಕಾಲ, ಅದೆಂತೊ ಕಣ್ಮರೆಯಾದದ್ದಾದರೆ, ತನ್ನೆಲ್ಲ ಚರಾಚರ ಆಸ್ತಿಯು ಮಿ. ಎಡ್ವರ್ಡ್ ಹೈಡ್ ಇವನಿಗೆ ಸಲ್ಲತಕ್ಕದ್ದು— ಎಂದು ಅದರಲ್ಲಿ ಸ್ಪಷ್ಟವಾಗಿ ಬರೆಯಲಾಗಿತ್ತು.

ವಕೀಲನಾದವನು ತನ್ನ ಕಕ್ಷಿಗಾರರ ಮೃತ್ಯು ಪತ್ರವನ್ನು ಬರೆಯುವುದರಲ್ಲಿ ಸಹಾಯ ಮಾಡಬೇಕು; ಮಾಡುತ್ತಾನೆ. ಅದರಲ್ಲಿಯೂ ಡಾ. ಜೆಕಿಲ್ ನನ್ನ ಆತ್ಮೀಯ ಗೆಳೆಯರಲ್ಲಿ ಒಬ್ಬ. ಅವನು ತನ್ನೀ ಮೃತ್ಯುಪತ್ರವನ್ನು ಬರೆಯುವಾಗ ನನ್ನ ಅಭಿಪ್ರಾಯ, ಸಹಾಯಗಳನ್ನು ಕೇಳಿರಲೆ ಇಲ್ಲ. ಮೇಲಾಗಿ '೩ ತಿಂಗಳ ಕಣ್ಮರೆ– ಎಂದರೇನಯ್ಯಾ?' ಎಂದು ಕೇಳಿದ್ದಕ್ಕೆ ಅವನು ಸರಿಯಾದ ಉತ್ತರವನ್ನು ಹೇಳಿರಲಿಲ್ಲ. ಅಲ್ಲದೆ ಈ 'ಹೈಡ್' ಯಾರು, ಎಲ್ಲಿಯವ, ನಿನಗೆ ಇಷ್ಟೊಂದು ಕೇವಲನಾದ, ಅವನ ಪರಿಚಯ ನನಗೆ ಅದ್ಹೇಗೆ ಇಲ್ಲ? ಎಂದು ಕೇಳಿದ್ದಕ್ಕೂ ಅವನು ಸಮರ್ಪಕವಾದ ಉತ್ತರವನ್ನು ಕೊಟ್ಟಿರಲಿಲ್ಲ. ''ನಾನೆಲ್ಲ ಯೋಚಿಸಿಯೇ ಈ ಉಯಿಲನ್ನು ಬರೆದಿದ್ದೇನೆ'' ಎಂದಿದ್ದ.

ಆದರೆ ಈ ಹೈಡ್! ಎಳೆಯ ಮಗುವನ್ನು ನಿಷ್ಕಾರಣವಾಗಿ ಬೆನ್ನಟ್ಟಿ, ಕಚಪಚನೆ ತುಳಿಯುವಷ್ಟು ದೌರ್ಜನ್ಯವುಳ್ಳ ಈ ವ್ಯಕ್ತಿ, ಡಾ. ಜೆಕಿಲ್ಲನಂಥ ಸುಸಂಸ್ಕೃತ ಮನುಷ್ಯನ ಆಸ್ತಿಗೆ ವಾರಸುದಾರನಾಗಬೇಕೆ? ಅವರಿಬ್ಬರ ನಡುವಿನ ಸಂಬಂಧವಾದರೂ ಏನಿದ್ದೀತು? ನನಗೆ ತಿಳಿದಿದ್ದ ಮಟ್ಟಿಗೆ ಜೆಕಿಲ್ಲನ ಸಂಬಂಧಿಕರಲ್ಲಿ ಹೈಡ್ ಎಂಬುವವರಾರೂ ಇರಲಿಲ್ಲ. ನಮ್ಮ ಸಾಮಾಜಿಕ ವರ್ತುಲದಲ್ಲಿ ಡಾ. ಜೆಕಿಲ್‌ನಿಗೆ ಸಮಾನ ಸ್ಥಾನದಲ್ಲಿದ್ದವನೂ ಅಲ್ಲ; ಯಾರು ಈ ಹೈಡ್?

ಡಾ. ಲೆನ್ಯನ್, ಜೆಕಿಲ್ಲನಂತೆಯೇ ವೈದ್ಯಕೀಯ ವೃತ್ತಿಯಲ್ಲಿದ್ದವ. ಅವರಿಬ್ಬರೂ ಕಾಲೇಜಿನಲ್ಲಿ ಸಹಪಾಠಿಗಳು. ಲೆನ್ಯನ್ ನನಗೂ ನಿಕಟ ಪರಿಚಯವಿದ್ದವನೇ. ಅವನನ್ನು ಕೇಳಿದರೆ ಹೈಡನ ವಿಷಯ ತಿಳಿದೀತೆಂದು ಒಂದು ರಾತ್ರಿ ಅವನ ಮನೆಗೆ ಹೋದೆ.

ಅವನು ದವಾಖಾನೆಯಿಂದ ಅದೇ ತಾನೇ ಮರಳಿ ಬಂದಿದ್ದನು. ಅದು, ಇದು ಮಾತನಾಡಿದ ಮೇಲೆ,

''ಡಾ. ಜೆಕಿಲ್ಲನ ಪೈಕಿ ಹೈಡ್ ಎಂಬವನ ಹೆಸರನ್ನು ಕೇಳಿದ್ದೀಯಾ?'' ಎಂದೆ.

''ಇಲ್ಲವಲ್ಲ. ಯಾರು ಆತ? ಅಂದ ಹಾಗೆ ಜೆಕಿಲ್ಲನ ಭೆಟ್ಟಿ ಕೂಡಾ ಈಗ ಅಪರೂಪವಾಗಿ ಬಿಟ್ಟಿದೆ'' ಎಂದನಾತ.

''ನೀನು ಅವನ ಹಳೆಯ ಗೆಳೆಯನಲ್ಲವೆ?''

''ಆದರೇನಂತೆ? ೧೦–೧೨ ವರ್ಷಗಳ ಲಾಗಾಯ್ತು ಅವನ ತಲೆಯಲ್ಲಿ ಯಾವುದೊ ವೈಜ್ಞಾನಿಕ ಪ್ರಯೋಗದ ಹುಚ್ಚು ಹೊಕ್ಕು ಬಿಟ್ಟಿದೆ. ವಿಚಿತ್ರವಾದ ವೈದ್ಯಕೀಯ ತತ್ವಗಳನ್ನು ನನ್ನೊಡನೆ ಮೊದಲಿನಿಂದಲೂ ಪ್ರಸ್ತಾಪಿಸುತ್ತಿದ್ದ. ನಾನೇನೂ ಹಚ್ಚಿಕೊಳ್ಳಲಿಲ್ಲ. ಕೆಲವು ಬಾರಿ ಅದಕ್ಕಾಗಿ ನಾನು ಬೈದುದೂ ಉಂಟು. ಹೀಗಾಗಿ ಈಚೆಗೆ ನನ್ನ ಅವನ ಸಂಪರ್ಕವೇ ಇಲ್ಲದಾಗಿದೆ'' ಎಂದ.

ವಿಜ್ಞಾನದಲ್ಲಿ ನನಗಿರುವ ಆಸಕ್ತಿ ಅಷ್ಟಕ್ಕಷ್ಟೆ. ಆದ್ದರಿಂದ ಅವರಲ್ಲಿಯ ವೈಜ್ಞಾನಿಕ ತಿಕ್ಕಾಟದ ಮಾತನ್ನು ಬೆಳಸದೆ, ಬೇರೆ ಮಾತುಗಳನ್ನಾಡಿ ಮನೆಗೆ ಮರಳಿದೆ.

ಆದರೆ ಹೈಡನ ವಿಷಯ ತಿಳಿಯದೇ ಹೋಯಿತಲ್ಲ! ಅದನ್ನು ತಿಳಿದಕೊಳ್ಳಲೇಬೇಕೆಂಬ ಹಟ ಮೂಡಿತು. ಜೆಕಿಲ್ಲನ ಆಸ್ತಿಯನ್ನೆ ನುಂಗುವವನಾದ ಅವನ ವ್ಯಕ್ತಿತ್ವ, ಬದುಕು

ಹೇಗಿದ್ದಿರಬೇಕು? ಇನ್ನೊಬ್ಬರಿಗೆ ದೈಹಿಕ ಯಾತನೆಯನ್ನು ಕೊಟ್ಟು ಅದರಿಂದ ಸಂತೋಷಪಡುವ ಅವನ ಮುಖದ ಕಳೆ ಅದೆಂಥದೊ? ಬಹುಶಃ ಅವನ ಮನೆಗೆ ಹೋಗಿ, ಅವನನ್ನು ಕಂಡು ಮಾತನಾಡಿಸಿಬಿಟ್ಟರೆ, ಆ ಮರಣಶಾಸನದ ಇಂಗಿತವನ್ನು ಗ್ರಹಿಸುವುದು ಸುಲಭವಾದೀತಲ್ಲವೆ?

ಈ ಹೈಡನ ಬಗ್ಗೆ ನಿಜಸಂಗತಿ ತಿಳಿಯಬೇಕೆನ್ನುವ ಆತುರದಲ್ಲಿ, ಅವನನ್ನು ಪತ್ತೆಹಚ್ಚಿಯೆ ತೀರಬೇಕೆಂದು ಆ ಮನೆಯನ್ನು ಹುಡುಕಿಕೊಂಡು ಹೊರಟೆ. ಹಾಗೆ ನಾನು ಹೋದಾಗಲೆಲ್ಲ ಅದು ಮುಚ್ಚಿರುತ್ತಿದ್ದಿತು. ಹಲವಾರು ಸಲ ಆ ಬೀದಿಗೆ ಹೋಗಿ, ಆ ಮನೆಯ ಬಾಗಿಲು ತೆರೆಯುವದೇನೊ ಎಂದು ದಾರಿ ಕಾಯ್ದೆ.

ಕೊನೆಗೊಮ್ಮೆ ನನ್ನ ಪ್ರಯತ್ನಕ್ಕೆ ಫಲ ದೊರೆಯಿತು. ಆ ದಿನ, ಸಂಜೆಯಾಗಿ ೨–೩ ತಾಸು ಮಾತ್ರ ಕಳೆದಿರಬಹುದು. ಮನೆ ಮನೆಗಳಲ್ಲಿ ಸಾಲಾಗಿ ದೀಪಗಳು ಬೆಳಗುತ್ತಿದ್ದುವು. ಅಂಥ ಸಮಯದಲ್ಲಿ, ಆ ಮನೆಯ ಕೀಲಿ ತೆರೆದು ಒಬ್ಬ ವ್ಯಕ್ತಿ ಒಳಗೆ ಹೋಗುವುದನ್ನು ಅನತಿದೂರದಿಂದ ಕಂಡೆ. ಕಂಡವನೇ ಆ ಸ್ಥಳಕ್ಕೆ ಧಾವಿಸಿ, ಅವನ ಬೆನ್ನು ತಟ್ಟಿ,

''ನೀ—ನಿಮ್ಮ ಹೆಸರು ಮಿ. ಹೈಡ್ ಅಲ್ಲವೆ?'' ಎಂದು ಕೇಳಿದೆ.

''ಆಂ? ಹೌದು. ನಿನಗೆ ಹೇಗೆ ಗೊತ್ತಾಯಿತು?'' ಎಂದು ಗಡಸು ಧ್ವನಿಯಿಂದ ಕೇಳಿದ. ನನ್ನ ಕಡೆ ಹೊರಳಿ ಕೂಡ ನೋಡದೇ ಕೀಲಿಕೈಯನ್ನು ಹೊರತೆರೆದು ಕೀಲಿ ತೆರೆಯತೊಡಗಿದ.

''ನೋಡು. ಡಾ. ಜೆಕಿಲ್ ನಿನಗೆ ಹೇಗೋ ನನಗೂ ಹತ್ತಿರದವ. ನನ್ನ ಹೆಸರು ಅಟರ್ಸನ್ ಎಂದು. ಅವನ ಲಾಯರ್''

ಹೀಗೆ ನನ್ನ ಹೆಸರು ದೆಸೆ ತಿಳಿದಮೇಲೆ, ಡಾ. ಜೆಕಿಲ್ಲನ ಮೃತ್ಯುಪತ್ರದ ನೆನಪಾಗಿ, ಆತನು ನನ್ನನ್ನು ಆದರದಿಂದ ಮಾತನಾಡಿಸಬಹುದೆಂದು ಭಾವಿಸಿದೆ. ಆದರೆ—

''ಅದಾಯ್ತು, ನನ್ನ ಹೆಸರನ್ನು ನಿಮಗಾರು ಹೇಳಿದರು?'' ಎಂದು ಆತ ಬಿರುಸಾಗಿಯೇ ಕೇಳಿದನು.

''ನಮ್ಮಿಬ್ಬರ ಮಧ್ಯದ ಗೆಳೆಯರು.''

''ಯಾರವರು?''

ಅವನ ಒರಟುತನಕ್ಕೆ ಸಿಟ್ಟುಗೊಳ್ಳದೇ ನಾನು ''ಉದಾಹರಣೆಗೆ, ಡಾ. ಜೆಕಿಲ್'' ಎಂದೆ.

''ಸುಳ್ಳು! ಡಾ. ಜೆಕಿಲ್ ನನ್ನ ಹೆಸರನ್ನು ನಿಮಗೆ ಹೇಳಿರಲು ಶಕ್ಯವೇ ಇಲ್ಲ'' ಎಂದು, ಅಕ್ಕಸತನದಿಂದ ಆತ ನುಡಿದ. ಮರುಕ್ಷಣವೇ, ಡಾ. ಜೆಕಿಲ್ ತನ್ನ ಹೆಸರನ್ನು ಎಂದಾದರೂ ಹೇಳುವುದು ಶಕ್ಯವಿದೆಯೇ ಎಂಬಂತೆ ಗಹಗಹಿಸಿ ನಗುತ್ತ ಮನೆಯೊಳಗೆ ಕಾಲಿಟ್ಟು ಧಢಾರನೆ ಬಾಗಿಲನ್ನು ಹಾಕಿಕೊಂಡ.

ನನಗೆ ಅವಮಾನವಾಗಿತ್ತಾದರೂ ಅವನನ್ನು ಕಣ್ಣಾರೆ ನೋಡಬೇಕೆಂಬ ನನ್ನ ಆಸೆ ಕೈಗೂಡಿತ್ತು. ನಿಲುವಿಕೆಯಲ್ಲಿ ಕುಳ್ಳನಾದ ಅವನು ನೋಡುವುದಕ್ಕೆ ಅತ್ಯಂತ ಕುರೂಪಿಯಾಗಿದ್ದನು. ಆದರೆ ಅವನ ಕುರೂಪಿತನಕ್ಕೆ ಇಂಥದೇ ಒಂದು ಕಾರಣ ಎಂದು ಎತ್ತಿ ಹೇಳುವಹಾಗಿರಲಿಲ್ಲ. ಅವನು ಮಾತನಾಡಿದಾಗ, ಅಥವಾ ನಕ್ಕಾಗಲಂತೂ ಅವನ ಹತ್ತಿರವೇ

ನಿಲ್ಲಲಾಗದೆನ್ನುವಷ್ಟು ಜುಗುಪ್ಸಾಭಾವ ನನ್ನಲ್ಲಿ ಮೂಡಿತು. ನಮ್ಮ ನಿಮ್ಮಂಥ ಒಬ್ಬ ಸಾದಾ—ಸೀದಾ ಮನುಷ್ಯನ ಹಾಗೆ ಸಹ ಅವನು ತೋರಿಬರಲಿಲ್ಲ.

ಇಂಥ ದುಸ್ವರೂಪನು ಡಾ. ಜೆಕಿಲ್ಲನ ಉತ್ತರಾಧಿಕಾರಿಯಾಗುವುದೇ? ನನಗೆ ಆ ವಿಚಾರ ಸಹಿಸದಾಯಿತು. 'ಆ ಮನುಷ್ಯನ ಸಹವಾಸ ಒಳ್ಳೆಯದಲ್ಲ' ಎಂಬುದಾಗಿ ಗೆಳೆತನದ ಸಲುಗೆಯಿಂದ ಜೆಕಿಲ್ಲನಿಗೆ ಹೇಳಿಬಿಡಬೇಕು; ಸಕಾಲದಲ್ಲಿಯೆ ಅವನನ್ನು ಎಚ್ಚರಿಸಬೇಕು ಎಂದುಕೊಳ್ಳುತ್ತ ಆಗೇ, ಡಾ. ಜೆಕಿಲ್ಲನ ಮನೆಗೆ ಹೊರಟುಬಿಟ್ಟೆ. ಬಾಗಿಲನ್ನು ತಟ್ಟಿದೆ.

ಡಾ. ಜೆಕಿಲ್ ಆಗರ್ಭ ಶ್ರೀಮಂತ, ಮೇಲೆ ಒಳ್ಳೆಯ ಪ್ರ್ಯಾಕ್ಟೀಸೂ ಇದ್ದಿತು. ಅವನ ಮನೆಯ ಮುಖ್ಯಸೇವಕನಾದ ಪೂಲ್, ಹತ್ತಿಪ್ಪತ್ತು ವರ್ಷಗಳಿಂದ ಆ ದೊಡ್ಡ ಮನೆಯನ್ನು ತೂಗಿಸಿಕೊಂಡು ಬಂದಿದ್ದ. ನನ್ನನ್ನು ಆತ ಚೆನ್ನಾಗಿ ಬಲ್ಲವ.

ಪೂಲ್ ಬಾಗಿಲನ್ನು ತೆರೆಯುತ್ತಲೂ, ''ಡಾಕ್ಟರರು ಮನೆಯಲ್ಲಿ ಇದ್ದಾರೆಯೇ?'' ಎಂದು ಕೇಳಿದೆ.

ದಿವಾನ್‌ಖಾನೆಯಲ್ಲಿ ನನ್ನನ್ನು ಬರಮಾಡಿಕೊಂಡು, ''ಅವರು ಮನೆಯಲ್ಲಿ ಇಲ್ಲ ಸಾರ್. ಇಲ್ಲಿ ದಯಮಾಡಿಸಬೇಕು'' ಎಂದನಾತ.

ಅವನು ತೋರಿಸಿದ ಆರಾಮ ಕುರ್ಚಿಯ ಮೇಲೆ ಕುಳಿತುಕೊಳ್ಳುತ್ತ ''ಮಿಸ್ಟರ್ ಹೈಡ್ ಎಂಬಾತನ ಗುರುತಿದೆಯೇನೊ ನಿನಗೆ?'' ಎಂದು ಪ್ರಶ್ನಿಸಿದೆ.

''ಹೌದು ಸಾರ್.''

''ಆದರೆ ನಾನು ಒಮ್ಮೆಯೂ ಈ ಮನೆಯಲ್ಲಿ ಅವನನ್ನು ನೋಡಲಿಲ್ಲವಲ್ಲ?''

''ಅವರು ನಮ್ಮಲ್ಲಿ ಊಟಪಾಟಕ್ಕೆಂದೇನೂ ಬರುತ್ತಿಲ್ಲ, ಸಾರ್. ಆದರೆ ಅವರಿಗೆ ಈ ಮನೆಗೆ ಬೇಕಾದಾಗ ಬಂದು ಹೋಗುವ ಸ್ವಾತಂತ್ರವಿದೆ''

''ಹೂಂ. ಅವನ ಮೇಲೆ ಡಾಕ್ಟರರ ವಿಶ್ವಾಸ ಬಹಳವೆಂದು ಕಾಣುತ್ತದೆ!''

''ಹೌದು. ಅವರ ಹತ್ತಿರ ಡಾಕ್ಟರ್ ಸಾಹೇಬರ ಮಲಗುವ ಕೋಣೆಯ ಪ್ರತ್ಯೇಕ ಕೀಲಿ ಕೈ ಇದೆ. ನಮ್ಮ ದಿವಾನ್‌ಖಾನೆಯ ಬಲಬದಿಗೆ ಇರುವ ಲೆಬೋರೇಟರಿಗೆ ಪ್ರತ್ಯೇಕವಾದ ಹೊರ ಬಾಗಿಲು ಇದೆಯಷ್ಟೆ. ಆ ಬಾಗಿಲಿನಿಂದ ಒಳ ಬರುತ್ತಾರೆ. ಯಾವಾಗ ಬರುವರೋ, ನಮಗೆ ತಿಳಿಯುವುದೇ ಇಲ್ಲ. ಅವರಿಗೆ ಯಾವುದೇ ಅಡ್ಡಿಮಾಡಬಾರದು, ಅವರ ಮಾತು ಮೀರಬಾರದು ಎಂದು ಡಾಕ್ಟರ್ ಸಾಹೇಬರ ಕಟ್ಟಪ್ಪಣೆಯಾಗಿದೆ.''

ನನಗೆ ವಿಸ್ಮಯ, ಬೇಸರ ಎರಡೂ ಏಕಕಾಲಕ್ಕೆ ಉಂಟಾದವು. ತುಸು ಹೊತ್ತು ಕುಳಿತರೂ ಡಾಕ್ಟರರು ಬರಲಿಲ್ಲವೆಂದು ನಾನು ನಿರಾಶೆಯಿಂದ ಮನೆಗೆ ಮರಳಿದೆ. ಆದರೂ ಯೋಗ್ಯ ಪ್ರಸಂಗ ಬಂದು ಡಾ. ಜೆಕಿಲ್ಲನ ಭೆಟ್ಟಿಯಾದದ್ದಾದರೆ, ಅವನಿಗೆ ಸ್ಪಷ್ಟ ಹೇಳಿಬಿಡಬೇಕೆಂದು ಗೊತ್ತುಮಾಡಿಕೊಂಡೆ.

ಆ ಪ್ರಸಂಗವೂ ಬಲು ಬೇಗ ಒದಗಿಬಂತು. ವಾಡಿಕೆಯಂತೆ ಒಂದು ಬಿಡುವಿನ ದಿನ, ನಾವು ಐದಾರು ಜನ ಹಳೆಯ ಮಿತ್ರರನ್ನು ಡಾ. ಜೆಕಿಲ್ ಊಟ–ಹರಟೆಗಳಿಗೆ ಕರೆದಿದ್ದನು.

ಸಮೀಚೀನ ಊಟ ಮುಗಿಸಿ ಇತರರು ಹೊರಟು ಹೋಗುವವರೆಗೂ ನಾನು ಕಾಯ್ದು, ಅವನಿಗೆ ಹೇಳಿದೆ:

''ಜೆಕಿಲ್, ನಿನ್ನ ಮೃತ್ಯುಪತ್ರದ ಬಗ್ಗೆ ನನಗೆ ಸ್ವಲ್ಪ ಮಾತನಾಡುವುದಿದೆ.''

''ಓ ಅದೇ ಹೌದಲ್ಲೊ? ಬರೆದಿಟ್ಟಾಗಿದೆಯಲ್ಲ?''

ನಗೆಯಲ್ಲಿ ವಿಷಯವನ್ನು ತೇಲಿಸಲಿಕ್ಕೆ ಬಿಡದೇನೆ ನಾನು ಹೇಳಿದೆ,

''ನಿನ್ನ ಆ ದಾಖಲೆಯ ಬಗ್ಗೆ ನನ್ನ ಅಸಮಾಧಾನವನ್ನು ಹೇಳಿಯೇ ಇದ್ದೇನೆ. ಈಗಂತೂ ಆ ಹೈಡನ ಬಗ್ಗೆ ನನಗೆ ಹೆಚ್ಚಿನ ಸಂಗತಿಗಳು ತಿಳಿದು ಬಂದಿರುವುದರಿಂದ....''

''ನನ್ನ ಪರಿಸ್ಥಿತಿ ನಿನಗೆ ಗೊತ್ತಿಲ್ಲ, ಅಟರ್ಸನ್. ಹಾಗೆ ನಾನು ಉಯಿಲ್ ಮಾಡುವುದು ಅನಿವಾರ್ಯವೇ ಆಗಿದ್ದಿತು.''

''ನೋಡು, ನಾನು ನಿನ್ನ ವಿಶ್ವಾಸಿಕ ಗೆಳೆಯ. ಅಂಥ ಅನಿವಾರ್ಯ ಪರಿಸ್ಥಿತಿ ಏನಿದೆಯೆಂಬುದನ್ನು ನನ್ನೆದುರೂ ಹೇಳಲಾರೆಯಾ? ಅದರಿಂದ ಪಾರಾಗಲಿಕ್ಕೆ ನಾ ನಿನಗೆ ಅವಶ್ಯವಾಗಿ ನೆರವಾಗುವೆ.''

''ಅಟರ್ಸನ್, ನಿನ್ನ ಸದ್ಭಾವನೆಯನ್ನು ನಾನು ಬಲ್ಲೆ. ಆದರೆ ನಾನಾಗಿಯ—ಹೈಡನಿಗೆ ನನ್ನೆಲ್ಲ ಆಸ್ತಿಯನ್ನು ನೀಡುತ್ತಲಿದ್ದೇನೆ. ನನ್ನನ್ನು ನಂಬು. ನೀನು ತಿಳಿದಂತೆ ಅದರಲ್ಲಿ ಬೇರಾವ ತೊಡಕೂ ಇಲ್ಲ. ನಿನಗೆ ಹೈಡನನ್ನು ಕಂಡರೆ ಆಗುವುದಿಲ್ಲವಷ್ಟೆ. ನಿನಗೆ ಒಂದು ಆಶ್ವಾಸನೆಯನ್ನು ಕೊಡುತ್ತೇನೆ. ನನಗೇನೆ ಅವನು ಬೇಡವೆಂದು ಅನಿಸಿದ ಮರುಗಳಿಗೆಗೇ ಅವನನ್ನು ಬಿಟ್ಟುಕೊಡಬಲ್ಲೆ. ದಯವಿಟ್ಟು ಇನ್ನು ಇದಕ್ಕೂ ಹೆಚ್ಚು ಅವನ ಬಗ್ಗೆ, ಈ ಉಯಿಲಿನ ಬಗ್ಗೆ ಮಾತು ಬೇಡ. ಇದು ತೀರ, ತೀರ ಖಾಸಗಿ ವಿಷಯ.''

ಅವನಾಡಿದ ಮಾತುಗಳಿಗೆಲ್ಲ ನನ್ನ ಒಪ್ಪಿಗೆಯಿರದಿದ್ದರೂ ಅದರ ಹಿಂದಿನ ಕಳಕಳಿಯ ಕಾರಣದಿಂದ ನಾನು ಸುಮ್ಮನಿರಲೇಬೇಕಾಯಿತು. ''ಹಾಗೇ ಆಗಲಪ್ಪ'' ಎಂದೆ.

''ಇಷ್ಟೇ ಅಲ್ಲ, ನೀನು ನನ್ನದೊಂದು ಮಾತನ್ನು ನಡೆಸಬೇಕು. ಹೈಡ್ ಹೇಗೇ ಇರಲಿ, ನನ್ನ ಮರಣದ ಅಥವಾ ಗೈರುಹಾಜರಿಯ ನಂತರ, ಅವನಿಗೆ ಅವಶ್ಯವಾಗಿ ನನ್ನ ಆಸ್ತಿ ದೊರೆಯುವಂತೆ ನೀ ನೋಡಿಕೊಳ್ಳಲೇಬೇಕು. ನನಗಾಗಿ, ಕೇವಲ ನನಗಾಗಿ ಅಷ್ಟು ಮಾಡುವಿಯಾ? ಹಾಗೆಂದು ವಚನಕೊಡುತ್ತೀಯಾ?''

''ಕೊಡುವೆ'' ಎಂದು ಸಂಕ್ಷಿಪ್ತದಲ್ಲಿ ಹೇಳಿ ಅವನ ಕೈಮೇಲೆ ಕೈಯಿರಿಸಿದೆ.

೨

ಆ ಮುಂದಿನ ಹಲವಾರು ತಿಂಗಳುಗಳವರೆಗ ನಾನು ಹೈಡನ ಉಸಾಬರಿಗೆ ಹೋಗಿರಲಿಲ್ಲ, ಅಂಥ ಕಾರಣವೂ ಇರಲಿಲ್ಲ. ಅನಂತರ ಸರ್ ಡೆನ್ವರ್ಸ್ ಕೆರ್ರ್ಯೂ ಅವರ ಕಗ್ಗೊಲೆಯ ಪ್ರಸಂಗದಲ್ಲಿ ಹೈಡನು ಮತ್ತೆ ನನ್ನ ತಲೆನೋವಿಗೆ ಕಾರಣನಾದನು.

ಒಂದು ದಿನ ಬೆಳಿಗ್ಗೆ ಪೊಲೀಸರು ನನ್ನ ಮನೆಗೆ ಬಂದು ಓರ್ವ ಮುದುಕನ ಕೊಲೆಯಾಗಿದೆಯೆಂದೂ, ಅವನ ಕಿಸೆಯಲ್ಲಿ ನನ್ನ ವಿಳಾಸವನ್ನು ಬರೆದಿದ್ದ ಒಂದು ಪತ್ರ ಸಿಕ್ಕಿತೆಂದೂ, ಅದಕ್ಕಾಗಿ ನನ್ನಲ್ಲಿಗೆ ಬಂದುದಾಗಿಯೂ ಹೇಳಿದರು.

ನಾನು ಬಟ್ಟೆ ಹಾಕಿಕೊಂಡವನೆ, ಪೊಲೀಸರೊಂದಿಗೆ ಆ ಹತ್ಯೆ ನಡೆದ ಸ್ಥಳಕ್ಕೆ ಹೋಗಿ ನೋಡುತ್ತೇನೆ—ತೀರಿಕೊಂಡ ಮುದುಕರು ಇನ್ನಾರೂ ಅಲ್ಲ, ಸರ್ ಡೆನ್ವರ್ಸ್, ಲಂಡನ್ ನಗರದ ಗಣ್ಯ ನಾಗರಿಕರು, ವಯೋವೃದ್ಧರು, ನನ್ನ ಪಕ್ಷಕಾರರೂ ಹೌದು. ಒಂದು ಮಹತ್ವದ ಕಾಗದವನ್ನು ನನಗಾಗಿ ಅಂಚೆಯ ಡಬ್ಬಿಯಲ್ಲಿ ಹಾಕುವುದಕ್ಕಾಗಿ ತೆಗೆದುಕೊಂಡು ಹೊರಟಿದ್ದರೆಂದು ಕಾಣುತ್ತದೆ. ಆಗ ಯಾರೋ ಅವರ ಅಮಾನುಷ ಕೊಲೆ ಮಾಡಿಬಿಟ್ಟಿದ್ದರು.

ನಮ್ಮ ಸುದೈವಕ್ಕೆ ಆ ಕಗ್ಗೊಲೆಯನ್ನು ಕಣ್ಣಾರೆ ಕಂಡವಳೊಬ್ಬಳಿದ್ದಳು.

ಆಕೆ ಅದೇ ಬೀದಿಯಲ್ಲಿರುವ ಒಂದು ಮನೆಯ ಸೇವಕಿ. ತನ್ನ ನಿತ್ಯದ ಕೆಲಸವನ್ನು ಮುಗಿಸಿ ಮಲಗುವ ಮುಂಚೆ ಕಿಟಕಿಯಲ್ಲಿ ಸುಮ್ಮನೆ ನಿಂತು ನೋಡುತ್ತಿದ್ದಳಂತೆ. ಆ ವೇಳೆಗೇ ಸರ್ ಡೆನ್ವರ್ಸ್ ಬೀದಿಯಲ್ಲಿ ಹೊರಟಿದ್ದುದು. ಬಿಳಿಗೂದಲಿನ, ಸೌಜನ್ಯಪೂರ್ಣ ಮುಖದ ಆ ಮುದುಕರನ್ನು ದೂರದಿಂದ ಕಂಡಾಗಲೇ, ಈ ಸೇವಕಿಯಲ್ಲಿ ಅವರ ಬಗ್ಗೆ ಆದರಭಾವ ಮೂಡಿತು.

ಅದೇ ಸಮಯಕ್ಕೆ ಅವರು ಹೊರಟಿದ್ದ ಎದುರು ಬದಿಯಿಂದ ಒಬ್ಬ ಕುಳ್ಳ ವ್ಯಕ್ತಿ ಬಂದ. ತುಸು ಸಮಯ ಅವರಿಬ್ಬರು ಮಾತನಾಡುತ್ತಿದ್ದುದನ್ನೂ ಆಕೆ ಕಂಡಳು. ನಗೆಮೊಗದಿಂದ ಆ ವೃದ್ಧನು ಏನನ್ನೋ ಹೇಳಹೇಳುತ್ತಿರುವಾಗಲೇ ಆ ಕುಳ್ಳ ವ್ಯಕ್ತಿ ತನ್ನ ಕೈಯಲ್ಲಿಯ ದಪ್ಪನ್ನ ಬಡಿಗೆಯನ್ನು ಮೇಲೆತ್ತಿದನು. ಅದರಿಂದ ಅವಾಕ್ಕಾದ ವೃದ್ಧನು ಒಂದು ಹೆಜ್ಜೆ ಹಿಂದೆ ಸರಿದನು. ಆದರೆ ಆ ವ್ಯಕ್ತಿ ಬಡಿಗೆಯಿಂದ ಅವರ ತಲೆಗೆ ಜೋರಾಗಿ ಅಪ್ಪಳಿಸಿಬಿಟ್ಟನು. ಇಷ್ಟೇ ಅಲ್ಲ, ಕೆಳಗೆ ಬಿದ್ದ ಅವರ ಮೇಲೆ ರಪರಪನೆ ಬಡಿದನು.

ಆ ಭೀಕರ ದೃಶ್ಯವನ್ನು ನೋಡಲಾಗದೆ ಸೇವಕಿಗೆ ಎಚ್ಚರತಪ್ಪಿಬಿಟ್ಟಿತು. ಅದರಿಂದ ಚೇತರಿಸಿಕೊಂಡು ಆಕೆ ಪೊಲೀಸರಿಗೆ ತಿಳಿಸುತ್ತಲೂ ಅವರು ಧಾವಿಸಿ ಬಂದರು.

ಕೊಲೆಗಡುಕನು ಅಲ್ಲಿಂದ ಹೋಗಿ ಮೂರು ನಾಲ್ಕು ತಾಸುಗಳಾದರೂ ಕಳೆದಿರಬೇಕು. ಆ ಮುಪ್ಪಿನ ದೇಹವು ನಡುರಸ್ತೆಯಲ್ಲಿ, ರಕ್ತದ ಮಡುವಿನಲ್ಲಿ ಹಾಗೇ ಬಿದ್ದುಕೊಂಡಿದ್ದಿತು. ಮೃತನ ದೇಹದ ಮೇಲೆ ಒಂದು ಬಂಗಾರದ ಚೈನಿನ ವಾಚ್ ಮತ್ತು ಒಂದು ಪರ್ಸ್ ಬಿಟ್ಟರೆ ಇನ್ನೇನೂ ಇರಲಿಲ್ಲ. ಎಂದರೆ, ಕೊಲೆಗಡುಕನು ಹಣಕ್ಕಾಗಿ ಅವರ ಕೊಲೆಮಾಡಿರಲಿಲ್ಲ.

ತುಸು ಅಂತರದಲ್ಲಿ ಗಟಾರದೊಳಗೆ ಆ ದೊಣ್ಣೆಯಂತಹ ಬಡಿಗೆಯ ಕೆಳ ಅರ್ಧಭಾಗವು ಬಿದ್ದಿತ್ತು. ಅರ್ಥಾತ್ ಆ ದಪ್ಪವಾದ ಬಡಿಗೆ ಎರಡು ತುಂಡಾಗುವಷ್ಟು ರಭಸದಿಂದ ಆತ ಹೊಡೆದಿದ್ದನು.

ಆ ಸೇವಕಿಯು ಕೊಟ್ಟಿದ್ದ ಕೊಲೆಗಡುಕನ ಆಕಾರ-ರೂಪಗಳ ವರ್ಣನೆಯನ್ನು ಇನಸ್ಪೆಕ್ಟರರ ಬಾಯಿಂದ ಕೇಳಿದಾಗ ನನಗೆ ಬೇರಾರೂ ಅಲ್ಲ, ಹೈಡನದೇ ನೆನಪಾಯಿತು.

ಯಾವಾಗ ಆ ಮುರಿದ ಬಡಿಗೆಯ ತುಂಡನ್ನು ನೋಡಿದೆನೊ, ನನಗೆ ಹೈಡನೇ ಆ ಕೊಲೆಗಡುಕನೆಂಬುದು ಸ್ಪಷ್ಟವಾಯಿತು. ಯಾಕೆಂದರೆ ಹಲವಾರು ವರ್ಷಗಳ ಹಿಂದೆ ಡಾ. ಜೆಕಿಲ್ಲನಿಗೆ ನಾನೇ ಆ ಬಡಿಗೆಯನ್ನು ಕಾಣಿಕೆಯಾಗಿ ಕೊಟ್ಟಿದ್ದೆ. ಜೆಕಿಲ್‌ನಿಂದ ಹೈಡನಿಗೆ ಅದು ಬಂದುದರಲ್ಲಿ ಏನಾಶ್ಚರ್ಯ!

ಹೈಡನ ಬಗ್ಗೆ ನನ್ನ ಸಂತಾಪ ಮಿತಿಮೀರಿತು. ಇನಸ್ಪೆಕ್ಟರ್‌ರನ್ನು ಕರೆದುಕೊಂಡು, ಗಾಡಿಯಲ್ಲಿ ಕುಳಿತು ನಾವು ಹೈಡನ ಆ ಮನೆಗೆ ಹೊರಟುಬಿಟ್ಟೆವು.

ಕೊಲೆಯಾದ ಸ್ಥಳದಿಂದ ದೂರದಲ್ಲಿದ್ದ ಆ ಸಣ್ಣ ಬೀದಿಗೆ ಬರುವಾಗ, ಬೆಳಗಿನ ಒಂಭತ್ತು ಗಂಟೆಯ ಸಮಯವಾಗಿದ್ದಿತು. ಅದೊಂದು ಹೊಲಸು ಬೀದಿ, ಕೆಳ ದರ್ಜೆಯ ನಿವಾಸಿಗಳ ಹರಕು ಮನೆ–ಅಂಗಡಿಗಳನ್ನು ದಾಟಿಕೊಂಡು ಅಲ್ಲಿಗೆ ಬಂದೆವು.

ಯಥಾಪ್ರಕಾರ ಆ ಬಾಗಿಲಿಗೆ ಕೀಲಿ, ಆ ಮನೆಯ ಯಜಮಾನತಿಯನ್ನು ಭೆಟ್ಟಿಯಾಗಿ, ಹೈಡನ ಬಗ್ಗೆ ವಿಚಾರಿಸಿದೆವು.

"ಅವನೆ? ನಿನ್ನೆ ರಾತ್ರಿ ಹೊತ್ತಾಗಿ ಬಂದಿದ್ದ. ಆದರೆ ಹೆಚ್ಚು ಹೊತ್ತು ನಿಲ್ಲದೆ ಹಾಗೇ ಹೊರಟುಹೋದ" ಎಂದಳಾಕೆ. ಅವನ ಬರ–ಹೋಗುಗಳು ಅತ್ಯಂತ ಅನಿಯಮಿತವೆಂದೂ, ತಿಂಗಳುಗಟ್ಟಳೆ ಬಾರದಿದ್ದ ದಿನಗಳೂ ಇವೆಯೆಂದೂ, ಮುಂದಿನ ಅವಳ ಮಾತಿನಿಂದ ತಿಳಿಯಿತು.

"ಸರಿ, ನಾವು ಅವನ ಕೋಣೆಯನ್ನು ನೋಡಬೇಕೆಂದಿದ್ದೇವೆ. ಇವರು ಸ್ಕಾಟ್‌ಲಂಡ್ ಯಾರ್ಡಿನ ಇನಸ್ಪೆಕ್ಟರರು," ಎಂದೆ ನಾನು.

"ಓ. ಹಾಗಿದ್ದರೆ ಅವನು ಏನೋ ಗಲಾಟೆಯಲ್ಲಿ ಸಿಕ್ಕಿಬಿದ್ದಾನೆಂದು ಕಾಣುತ್ತದೆ. ಬನ್ನಿ" ಎನ್ನುತ್ತ ಅವಳು ತನ್ನಲ್ಲಿಯ ಇನ್ನೊಂದು ಬೀಗದ ಕೈಯಿಂದ ಅದರ ಬಾಗಿಲನ್ನು ತೆರೆದಳು.

ಅವಳು ಹೀಗೆ ಸಂತೋಷದಿಂದ ನೆರವಾಗುತ್ತಿದ್ದುದನ್ನು ಕಂಡು ನಮಗೆ ಹೈಡ್ ಒಬ್ಬ ಕೆಟ್ಟ ಹಾಗೂ ಅಪ್ರಿಯ ವ್ಯಕ್ತಿಯಾಗಿ ಇಲ್ಲಿ ವಾಸಿಸುತ್ತಿದ್ದಾನೆಂಬುದು ಸ್ಪಷ್ಟವಾಯಿತು.

ಅವನ ಕೋಣೆಯನ್ನು ನೋಡುವಾಗ ಅಲ್ಲಿ ಬೆಲೆಬಾಳುವ ಫರ್ನಿಚರ್, ಹಾಸಿಗೆಗಳು ಕಂಡವು. ಗೋಡೆಗೆ ಒಂದು ದೊಡ್ಡ ವರ್ಣಚಿತ್ರವನ್ನು ತೂಗು ಹಾಕಲಾಗಿದ್ದಿತು. ಕಲಾಚಿತ್ರಗಳನ್ನು ಕೊಂಡುಕೊಳ್ಳುವ ಪ್ರವೃತ್ತಿಯವನಾದ ಡಾ. ಜೆಕಿಲ್ ತನ್ನೀ ಭಂಡ ಮಿತ್ರನಿಗೆ ಅದನ್ನು ಕೊಟ್ಟಿರಬೇಕು ಎಂದುಕೊಂಡೆ.

ಆದರೆ ಅಲ್ಲಿರುವ ಪುಸ್ತಕ, ಬಟ್ಟೆ ಬರೆಗಳೆಲ್ಲ ಅಸ್ತವ್ಯಸ್ತನಾಗಿ ಹರಡಿದ್ದುವು. ಕೆಲವು ಕಾಗದಪತ್ರಗಳನ್ನು ಸುಡಲಾಗಿದ್ದಿತು. ಇನ್‌ಸ್ಪೆಕ್ಟರನು ಅದನ್ನು ಕೆದರಿ ನೋಡುತ್ತಿದ್ದಾಗ ಸುಡದೇ ಉಳಿದ ಚೆಕ್ ಬುಕ್ಕಿನ ತುಣುಕು ಕಂಡು ಬಂದಿತು. ಅದನ್ನು ತಿರುವಿಹಾಕುತ್ತ "ನೋಡಿದಿರಾ? ಬ್ಯಾಂಕಿನಲ್ಲಿ ಇವನ ಹೆಸರಿನಲ್ಲಿ ಸಾಕಷ್ಟು ಹಣವಿದ್ದಂತೆ ಕಾಣುತ್ತದೆ. ಸರಿ, ಅದನ್ನು ತೆಗೆದುಕೊಳ್ಳಲಿಕ್ಕೆ ಎಲ್ಲಿದ್ದರೂ ಅವನು ಬರಬೇಕಲ್ಲ.... ನೀವೇನೂ ಚಿಂತಿಸಬೇಡಿರಿ. ಈ ಕೇಸು ಹಿಡಿತದಲ್ಲಿದೆ. ಅವನನ್ನು ಅರೆಸ್ಟ್ ಮಾಡಿದ ಕೂಡಲೇ ನಿಮಗೆ ಸುದ್ದಿ ಮುಟ್ಟಿಸುವೆ" ಎಂದು ಅಭಿಮಾನದಿಂದ ಹೇಳಿದನು.

ಇತ್ತ ನಾನು ಕೋಣೆಯ ಸಂದು ಮೂಲೆಗಳನ್ನು ಪರಿಶೀಲಿಸುತ್ತಿರುವಾಗ ಆ ಬಡಿಗೆಯ ಮೇಲ್ಭಾಗವು ಒಂದೆಡೆ ಬಿದ್ದುದನ್ನು ಕಂಡೆ. ಅದನ್ನು ನೋಡಿದ ಮೇಲಂತೂ ಹೈಡ್‌ನ ಮೇಲಿನ ಸಂಶಯ ಸಂಪೂರ್ಣ ದೃಢವಾಯಿತು. ನಾನು ಡಾ. ಜೆಕಿಲ್ಲನಿಗೆ ಕೊಟ್ಟದ್ದು.... ಸರಿ. ಈ ಗದ್ದಲದಲ್ಲಿ ಡಾ. ಜೆಕಿಲ್ ಸಿಕ್ಕಿಬೀಳಬಹುದು ಎಂಬ ಹೆದರಿಕೆ ನನ್ನನ್ನು ಆವರಿಸಿತು. ಇನ್‌ಸ್ಪೆಕ್ಟರನ ಎದುರು ಅದನ್ನು ಆಡದೇ, ಅವನನ್ನು ಬೀಳ್ಕೊಂಡವನೆ ಡಾ. ಜೆಕಿಲ್ಲನ ಮನೆಗೆ ಓಡಿದ.

ಎಂದಿನಂತೆ ಆದರಭಾವದಿಂದ ಒಳಗೆ ಬರಮಾಡಿಕೊಂಡ ಪೂಲನು, ''ಇದ್ದಾರೆ. ಬನ್ನಿ ಸಾರ್'' ಎನ್ನುತ್ತ ನನ್ನನ್ನು ದಿವಾಣಖಾನೆಯ ಬಲಬದಿಗೆ— ಕರೆದೊಯ್ದನು.

ನಾನಾತರಹದ ಗಾಜಿನ ಸೀಸೆ–ಕೊಳವೆಗಳಿಂದಲೂ ರಸಾಯನದ ಬಾಟಲಿಗಳಿಂದಲೂ ಕೂಡಿದ ಆ 'ಲೆಬೊರೇಟರಿ'ಯಲ್ಲಿ ನಾನು ಕಾಲಿರಿಸಿದುದು ಅದೇ ಮೊದಲನೇ ಸಲ. ಸ್ವಚ್ಛವಾದ ಗಾಳಿ ಕೂಡಾ ಬರದಂತೆ ಕಿಟಕಿಯ ಬಾಗಿಲುಗಳನ್ನು ಮುಚ್ಚಿಬಿಟ್ಟಿದ್ದರಿಂದ ಆ ಕೋಣೆಯು ಗಬ್ಬುವಾಸನೆಯಲ್ಲಿ ಮುಳುಗಿದಂತಾಗಿತ್ತು. ಪರಮಾವಧಿ ಅಸ್ತವ್ಯಸ್ತತೆ ಇರುವ ಆ ಕೋಣೆಯಲ್ಲಿ ಪೂಲ್ ಅಥವಾ ಯಾವ ಸೇವಕನನ್ನೂ ಬಿಟ್ಟಿರಲಿಲ್ಲವೆಂದೆನಿಸಿತು.

ಆದರೆ, ಇದೆಲ್ಲದರ ಮಧ್ಯದಲ್ಲಿ ನನ್ನ ಗೆಳೆಯನನ್ನು ನೋಡಿದ ಮೇಲೆ ನಾನು ಅನುತಾಪಯುಕ್ತನಾದೆ. ಅಷ್ಟು ಮಟ್ಟಿಗೆ ಅವನ ಮುಖ ನಿಸ್ತೇಜಗೊಂಡಿತ್ತು. ನನ್ನನ್ನು ಕಂಡೊಡನೆ ಸಲುಗೆಯಿಂದ, ಸುಹಾಸದಿಂದ ಎದ್ದು ಕೈ ಕುಲುಕಲು ಬರುತ್ತಿದ್ದವ ಜಾಗಬಿಟ್ಟು ಏಳದಷ್ಟು ನಿರ್ವಿಣ್ಣನಾಗಿದ್ದನು.

ಪೂಲನು ಬಾಗಿಲನ್ನು ಇಕ್ಕಿಕೊಂಡು ಹೋದ ಕೂಡಲೇ ನಾನೇ ಮಾತೆತ್ತಿದೆ.

''ಸುದ್ದಿ ಕೇಳಿದಿಯಷ್ಟೆ?''

''ಹೂಂ. ಪೇಪರು ಮಾರುವ ಹುಡುಗ ಒದರುತ್ತಿದ್ದ....'' ನನ್ನ ಕಡೆ ಮುಖವನ್ನೆತ್ತಿ ನೋಡದೇನೆ, ಆತ ಉತ್ತರಿಸಿದ.

''ನೋಡು, ಸರ್ ಡೆನ್ವರ್ಸ್ ಕೂಡಾ ನಿನ್ನ ಹಾಗೆ ನನ್ನ ಮಿತ್ರರಾಗಿದ್ದವರೇ. ನನಗೀಗ ನಿಜ ಸಂಗತಿ ಬೇಕಾಗಿದೆ. ಹೈಡನ ಮನೆಗೂ ನಾವು ಹೋಗಿ ಬಂದೆವು. ಸದ್ಯ ಅವನು ನಾಪತ್ತೆ, ಹೇಳು, ಅವನನ್ನು ಅಡಗಿಸಿಡಲಿಕ್ಕೆ ಪ್ರಯತ್ನಿಸುತ್ತಿದ್ದೀ, ಅಲ್ಲವೇ?''

''ಇಲ್ಲ, ಅಟರ್ಸನ್. ಆಣೆಮಾಡಿ ಹೇಳುವೆ. ನಾ ಇನ್ನು ಮೇಲೆ ಅವನ ಉಸಾಬರಿಗೆ ಹೋಗುವುದಿಲ್ಲ. ನನ್ನ ಅವನ ಸಂಬಂಧವನ್ನು ನಾನಾಗಿ ಕಳಚಿ ಒಗೆದಿದ್ದೇನೆ. ಮುಗಿಯಿತಿನ್ನು ಆದರೆ.... ನಾನು ಅವನನ್ನು ಬಚ್ಚಿಡುವ ಆಗತ್ಯವೇ ಇಲ್ಲ. ಅವನಿಗೆ ಈ ವಿಷಯದಲ್ಲಿ ನನ್ನ ಸಹಾಯವೂ ಬೇಕಿಲ್ಲ.''

ನಾನು ಅವನ ಮಾತುಗಳನ್ನು ಅರೆನಂಬಿಕೆಯಿಂದ ಕೇಳಿಕೊಂಡೆ.

''ಇರಬಹುದಯ್ಯ. ನಾಳೆ ವಿಚಾರಣೆ ನಡೆಯಿತೆಂದರೆ ನಿನ್ನ ಹೆಸರು ಅದರಲ್ಲಿ ಬರುವುದು ಖಂಡಿತ.''

''ಹೀಗೆನ್ನುತ್ತೀಯಾ? ಆದರೆ ಒಂದು ಮಾತು. ನನಗೆ ಆ ದುಷ್ಟನಿಂದ ಒಂದು ಪತ್ರ ಬೇರೆ ಬಂದಿದೆ. ಅದನ್ನು ಪೊಲೀಸರ ಕಡೆಗೆ ಕೊಡಲೇ ಬೇಡವೇ ಎಂದು ಯೋಚಿಸುತ್ತಿದ್ದೇನೆ. ಅಥವಾ ನಿನ್ನ ಕೈಯಲ್ಲಿಯೆ ಕೊಟ್ಟು ಬಿಡುವೆ.... ಯೋಗ್ಯವೆನಿಸಿದಂತೆ ಮಾಡು. ಅತ್ಯಂತ ಆಪ್ತ ಗೆಳೆಯನಾದ ನಿನ್ನಲ್ಲಿ ವಿಶ್ವಾಸವಿಡದೆ ಇನ್ನಾರಲ್ಲಿಡಲಿ?'' ಎಂದು ಡಾ. ಜೆಕಿಲ್ ದನಿಯೆಳೆದನು.

''ಓಹೊ, ಆ ಪತ್ರದಿಂದ ಅವನ ಗೊತ್ತು ಗುರಿ ತಿಳಿದು, 'ಅರೆಸ್ಟ್' ಆದಾನೆಂಬ ಭಯವೇ?''

''ಛೇ. ಅದೇನಿಲ್ಲ. ಅವನಿಗೆ ಏನಾದರೇನಂತೆ? ನಾನಂತೂ ಅವನ ಪರಲನ್ನು ಹರಿದುಕೊಂಡೆ—ಎಂದು ಹೇಳಿದೆನಲ್ಲ. ಇಷ್ಟಕ್ಕೂ ಪಾರಾಗುವ ವಿಷಯದಲ್ಲಿ ಅವನು ಸಮರ್ಥನೇ ಇದ್ದಾನೆ. ಅವನಿಗಾಗಿ ಯೋಚನೆಯಿಲ್ಲ. ಇಷ್ಟೇ, ಈ ಕೇಸಿನಲ್ಲಿ ನನ್ನ ಹೆಸರು ಕೆಡದಂತೆ ಅದರಿಂದ ಪ್ರಯೋಜನವೇನಾದರೂ ದೊರೆತೀತೆ ಎಂದು ನನ್ನೆಣಿಕೆ.''

ಹೀಗೆ ಹೇಳುತ್ತ ಡಾ. ಜೆಕಿಲ್ ಆ ಪತ್ರವನ್ನು ನನ್ನ ಕೈಗಿತ್ತನು.

ಅದನ್ನು ಬಿಡಿಸಿ, ಅಲ್ಲಿಯೇ ಓದಿದೆ. ಪತ್ರದ ಅಕ್ಷರ ಮತ್ತು ಸಾಲುಗಳು, ಹೈಡನ ಸ್ವಭಾವಕ್ಕೆ ಅನುಗುಣವೆಂಬಂತೆ ಸೊಟ್ಟ–ಡೊಂಕಾಗಿದ್ದುವು. ಬರೆದ ವಿಷಯವಿಷ್ಟೆ : 'ನನ್ನ ಹಿತಚಿಂತಕರಾದ ನೀವು ನನ್ನ ಸಂರಕ್ಷಣೆಯ ಬಗ್ಗೆ ಏನೂ ಯೋಚನೆ ಮಾಡಬಾರದು. ಅದರ ಹೊಣೆ ನಿಮ್ಮ ಮೇಲೆ ಹಾಕುವುದಿಲ್ಲ—' ಇತ್ಯಾದಿ.

ಹೈಡನ ಈ ಪತ್ರ ಜೆಕಿಲ್ಲನ ಕೈಸೇರಿದುದು ಹೇಗೆ ಎಂದು ನನಗೆ ಆಶ್ಚರ್ಯವಾಯಿತು.

''ಇದರ ಪಾಕೀಟು ಎಲ್ಲಿದೆ?'' ಎಂದು ನಾನು ಕೇಳಿದೆ.

''ಪಾ— ಪಾಕೀಟೆ? ಇಲ್ಲವಲ್ಲ? ಅದೇನು ಮಹತ್ವದಲ್ಲವೆಂದು ಸುಟ್ಟು ಬಿಟ್ಟೆ. ಇಷ್ಟಕ್ಕೂ ಅದು ಟಪಾಲಿನಿಂದ ಬಂದದ್ದಲ್ಲ. ಯಾರೋ ತಂದು ಕೊಟ್ಟದ್ದು.'' ಎಂದು ಡಾ. ಜೆಕಿಲ್ ಹೇಳಿದ.

''ಸರಿ. ಈ ಪತ್ರದ ಬಗ್ಗೆ ಯೋಚಿಸಿ ಆಮೇಲೆ ಹೇಳುವೆ.''

''ಎಲ್ಲವೂ ನಿನ್ನನ್ನೆ ಕೂಡಿದೆ. ನನಗಂತೂ ಒಂದೂ ತಿಳಿಯದಾಗಿದೆ.''

ರಾವುಹೊಡೆದಂತಿದ್ದ ಅವನ ಮುಖ, ನಡುಗುತ್ತಿರುವ ದನಿ–ಇವುಗಳಿಂದ ನನ್ನ ಪೂರ್ವದ ಒಂದ ಸಂಶಯವನ್ನು ದೃಢೀಕರಿಸಿಕೊಂಡೆ. ಅದನ್ನು ಅವನಿಗೆ ಕೇಳಿಯೆ ಬಿಟ್ಟೆ.

''ನಿಜ ಹೇಳು ಜೆಕಿಲ್. ನಿನ್ನ ಮೃತ್ಯುಪತ್ರವನ್ನು ಅವನೇ ಬೆನ್ನು ಹತ್ತಿ ಒತ್ತಾಯದಿಂದ ಆ ರೀತಿ ಬರೆಸಿರಬೇಕು. ಹೌದಲ್ಲೊ?''

ಡಾ. ಜೆಕಿಲ್ ಹೌದೆನ್ನುವಂತೆ ಗೋಣು ಹಾಕಿದ.

''ಇಷ್ಟೇ ಅಲ್ಲ; ಅವನು ನಿನ್ನನ್ನು ಕೊಂದು ಬಿಡುವವನೇ ಇದ್ದ. ಸದ್ಯ ಪಾರಾಗಿದ್ದೀಯೆ. ಇನ್ನಾದರೂ ಎಚ್ಚರದಿಂದ ಇರುವೆಯೆಂದು ನಂಬುವೆ.'' ನನ್ನ ಈ ಮಾತಿಗೆ ನೇರವಾಗಿ ಉತ್ತರ ಕೊಡದೆ, ಆತ ಗಂಟಲಲ್ಲಿಯೆ ನರಳುತ್ತ, ಎರಡೂ ಕೈಗಳಿಂದ ತನ್ನ ತಗ್ಗಿದ ಮುಖವನ್ನು ಮುಚ್ಚಿಕೊಂಡನು.

ಅವನನ್ನು ಅಲ್ಲಿಯೆ ಬಿಟ್ಟು ಹೊರಬಾಗಿಲಿಗೆ ಬಂದಾಗ ಪೂಲನನ್ನು ಕೇಳಿದೆ, ''ಇಂದು ಬೆಳಿಗ್ಗೆ ಯಾರಾದರೂ ಪತ್ರ ಕೊಡಲು ಬಂದಿದ್ದರೊ?''

''ಇಲ್ಲ, ಖಂಡಿತ ಇಲ್ಲ'' ಎಂದನಾತ.

ಹಾಗಿದ್ದರೆ, ಲೆಬೊರೇಟರಿಯ ಇನ್ನೊಂದು ಬಾಗಿಲಿನಿಂದಲೇ ಆ ಪತ್ರ ಬಂದಿರಬೇಕು. ಅಂತೂ ಡಾ. ಜೆಕಿಲ್ ತನ್ನ ಹಿತಶತ್ರುವನ್ನು ಹೇಗಾದರೂ 'ಬಚಾವು' ಮಾಡಬೇಕು; ತಾನೂ ಪಾರಾಗಬೇಕು ಎಂಬ ಹವಣಿಕೆಯಲ್ಲಿದ್ದಾನೆಂಬುದು ನನಗೆ ನಿಚ್ಚಳವಾಯಿತು.

ಅಂದು ಮುಸ್ಸಂಜೆಯಲ್ಲಿ ನಾನು ನನ್ನ ಆಫೀಸಿನ ಕೆಲಸದಲ್ಲಿ ತಲ್ಲೀನನಾಗಿದ್ದಾಗ, ನನ್ನ ಕಾರಕೂನನು ಒಂದು ಚೀಟಿಯನ್ನು ಹಿಡಿದುಕೊಂಡು ಒಳಬಂದನು. ''ಯಾರದದು? ಏನು ವಿಷಯ?'' ಎಂದು ಕೇಳಿದಾಗ ''ಡಾ. ಜೆಕಿಲ್ಲರದು, ಎಂದಿನಂತೆ ತಮ್ಮನ್ನು ಊಟಕ್ಕೆ ಕರೆದಿದ್ದಾರೆ'' ಎಂದನಾತ.

ಡಾ. ಜೆಕಿಲ್ಲನ ಪ್ರಸ್ತಾಪ ಬಂದುದರಿಂದ ನಮ್ಮ ಕಾರಕೂನನ ಸಂಗಡ ನಿನ್ನೆಯ ಕೊಲೆಯ ಬಗ್ಗೆ ಮಾತನಾಡಬೇಕೆನಿಸಿತು. ಅವನು ೧೫–೨೦ ವರ್ಷಗಳಿಂದ ನನ್ನಲ್ಲಿದ್ದವ. ನಾನಾ ತರಹದ ಕೇಸುಗಳನ್ನು, ಕಕ್ಷಿಗಾರರನ್ನು ಕಂಡ ಅನುಭವಸ್ಥ. ಆದ್ದರಿಂದ ನಾನಾಗಿ ಆ ವಿಷಯವನ್ನೆತ್ತಿದೆ.

''ನಿಜವಾಗಿಯೂ ಇದೊಂದು ಭೀಕರ ಹತ್ಯೆ. ಆ ಕೊಲೆಪಾತಕಿಯು ನಿಜವಾಗಿಯೂ ತಲೆ ಕೆಟ್ಟವನಿರಬೇಕು'' ಎಂದನಾತ.

''ಹೀಗೆನ್ನುವಿಯಾ? ಅಂದಹಾಗೆ ನನ್ನ ಹತ್ತಿರ ಅವನ ಪತ್ರವಿದೆ, ಹಾಗೆಂದು ಅದನ್ನು ಬಹಿರಂಗಪಡಿಸುವಂತಿಲ್ಲ. ಕೇವಲ ನಿನಗೊಬ್ಬನಿಗೆ ತೋರಿಸುತ್ತಿದ್ದೇನೆ. ಓದಿ ನಿನ್ನ ಅಭಿಪ್ರಾಯ ಹೇಳುವಿಯಾ? ಹೈಡ್ ಇಂದು ನಸುಕಿನಲ್ಲಿ ಬರೆದ ಪತ್ರವಿದು'' ಎನ್ನುತ್ತ ಕಿಸೆಯಿಂದ ಅದನ್ನು ಹೊರತೆಗೆದು, ಅವನ ಕೈಗಿತ್ತೆ.

ಅದರ ಮೇಲೆ ಚೆನ್ನಾಗಿ ಕಣ್ಣಾಡಿಸಿ ಓದಿಯಾದ ಮೇಲೆ ಅವನು ಹೇಳಿದ :

''ಇಲ್ಲ ಸಾರ್. ಹೈಡ್ ತಲೆಕೆಟ್ಟು ಕೊಲೆ ಮಾಡಿದವನೇನಲ್ಲ, ಬುದ್ಧಿ ಸ್ತಿಮಿತದಲ್ಲಿದ್ದಾಗಲೇ ಬರೆದ ಪತ್ರವಿದು. ಆದರೆ.... ಬರವಣಿಗೆ ಮಾತ್ರ.... ಬೇಕೆಂದೇ.... ನಿಲ್ಲಿ, ಸಾರ್'' ಎಂದು ಹೇಳುತ್ತ, ಅದೀಗ ಬಂದಿದ್ದ ಜೆಕಿಲ್ಲನ ಚೀಟಿಯನ್ನೂ ಆ ಪತ್ರವನ್ನೂ ಅಕ್ಕಪಕ್ಕದಲ್ಲಿಯೆ ಇಟ್ಟುಕೊಂಡು, ಸಣ್ಣ ರಾವುಗನ್ನಡಿಯಿಂದ ಎರಡರ ಹಸ್ತಾಕ್ಷರಗಳನ್ನೂ ಸೂಕ್ಷ್ಮವಾಗಿ ಪರಿಶೀಲಿಸತೊಡಗಿದನು.

ಒಂದು ಮಾತು ಹೇಳಬೇಕು, ಪರರ ಹಸ್ತಾಕ್ಷರದ ಬಗೆಯನ್ನು ಕಂಡು ಹಿಡಿಯುವದರಲ್ಲಿ ನಮ್ಮ ಕಾರಕೂನನು ಒಳ್ಳೇ ಪರಿಣತಿಯನ್ನು ಪಡೆದಿದ್ದ.

''ಸರ್, ನನಗೊಂದು ಸಂಶಯ ಬರುತ್ತದೆ. ಹೇಳಲೆ? ಈ ಪತ್ರದ ಒಕ್ಕಣೆಕೆಯು ಅಂಕು ಡೊಂಕಾಗಿದ್ದರೂ ಎರಡರ ಬರವಣಿಗೆಯ ಅಕ್ಷರವಿನ್ಯಾಸದಲ್ಲಿ ಸಾಕಷ್ಟು ಸಾಮ್ಯವಿದೆ. ಎರಡೂ ಪತ್ರಗಳನ್ನು ಒಬ್ಬನೇ ಬರೆದಂತೆ ನನಗಂತೂ ಅನಿಸುತ್ತದೆ.''

ಹೈಡನ ಪತ್ರವು ಜೆಕಿಲ್ಲನ ಕೈ ಸೇರಿದ ಬಗೆ, ಅದನ್ನು ನನಗೆ ಕೊಡುವಾಗ ಜೆಕಿಲ್ ನಡೆದುಕೊಂಡ ರೀತಿ ಇವುಗಳಿಂದಾಗಿ ನನಗೂ ಅದು ನಿಜವೆಂದೇ ಕಂಡಿತು.

ಅಂತೂ, ತನ್ನ ಭಂಡ ಗೆಳೆಯನನ್ನು ಕಾಪಾಡುವದರ ಸಲುವಾಗಿ, ಜೆಕಿಲ್ ಖೊಟ್ಟಿ ಕಾಗದ ಬರೆಯುವುದಕ್ಕೂ ಹೇಸಲಿಲ್ಲವಲ್ಲ? ಇಷ್ಟರ ಮಟ್ಟಿಗೆ ನನ್ನ ಗೆಳೆಯ ಕೆಟ್ಟುಹೋದನೆ? ಮುಂದೆ ಇನ್ನೇನೂ ಮಾಡಿಯಾನಲ್ಲವೆ?—ಎಂಬ ಚಿಂತೆ ಮೂಡಿತು.

ತಿಂಗಳೊಪ್ಪತ್ತುಸರಿಯಿತು. ಹೈಡನ ಪತ್ತೆಯೇ ಇಲ್ಲ! ಎಲ್ಲಿಗೆ ಹೋಗಿರುವ? ಅದು ಹೇಗೆ ಅಡಗಿಕೊಂಡಿರುವ? ಆ ಮನೆ, ಬ್ಯಾಂಕು ಮತ್ತು ಇತರ ಕಡೆಗಳಲ್ಲಿ, ಪೋಲೀಸರ ಕಾವಲು ಇದ್ದಿತಾದರೂ ಅವನು ಸಿಕ್ಕಿರಲಿಲ್ಲ. ಇಷ್ಟರಲ್ಲಿ ಪೊಲೀಸರು ಅವನ ಬಗ್ಗೆ ಹಲವಾರು ಸಂಗತಿಗಳನ್ನು ಕಲೆಹಾಕಿದ್ದರು. ಆ ಸಂಗತಿಗಳೆಲ್ಲವೂ ಅವನ ಕೆಟ್ಟ ನಡತೆಯನ್ನು ಸೂಚಿಸವಂಥವಾಗಿದ್ದವಲ್ಲದೆ, ಒಂದಾದರೂ ಒಳ್ಳೆಯ ಮಾತು ಅವನ ಬಗ್ಗೆ ಕೇಳಬಂದಿರಲಿಲ್ಲ.

ಆದರೆ ಅವನ ಕುಟುಂಬದ ಜನರಾರೆಂಬುದಾಗಲೀ, ಅವನ ಬಾಲ್ಯ, ಶಿಕ್ಷಣ ಸೌಕರಿ—ಮುಂತಾದ ಪೂರ್ವೋತ್ತರಗಳಾಗಲೀ ಎಳ್ಳಷ್ಟೂ ತಿಳಿದು ಬಂದಿರಲಿಲ್ಲ. ಅವನ ಛಾಯಾಚಿತ್ರವಾದರೂ ಸಿಕ್ಕಿದ್ದರೆ, ಇಂಗ್ಲಂಡಿನ ತುಂಬೆಲ್ಲ ಸುದ್ದಿಯನ್ನು ಪಸರಿಸಬಹುದಿತ್ತು. ಅವನನ್ನು ಹಿಡಿದು ಕೊಟ್ಟವರಿಗೆ, ಸಾವಿರಾರು ಪೌಂಡುಗಳ ಬಹುಮಾನವಿದ್ದರೂ ಅವನನ್ನು ಕಣ್ಣಾರೆ ಕಂಡವರು ತೀರ ಕಡಿಮೆ ಜನರಾದ್ದರಿಂದ, ಅದೂ ಸಾಧ್ಯವಾಗಿರಲಿಲ್ಲ. ಅಂತೂ ಸರ್ ಡೆನ್ವರ್ಸನ ಕೊಲೆಗಡುಕನ ಹೆಸರು, ದೆಸೆಗಳು ಗೊತ್ತಿದ್ದರೂ ಅವನನ್ನು ಹಿಡಿದು ವಿಚಾರಣೆಗೆ ಗುರಿಪಡಿಸುವುದು ಕೈಗೂಡದೇ ಹೋಯಿತು!

ಒಂದು ದೃಷ್ಟಿಯಿಂದ ಅದು ಒಳ್ಳೆಯದೇ ಆಯಿತನ್ನಬೇಕು. ಯಾಕೆಂದರೆ ರಾಹುವಿನಂತೆ ನನ್ನ ಡಾಕ್ಟರ್ ಮಿತ್ರನನ್ನು ಅವನು ತಗುಲಿಕೊಂಡಿದ್ದನಷ್ಟೆ. ಆ ಪೀಡೆ ತೊಲಗಿ ಹೋಗಿದ್ದರಿಂದ ಡಾ. ಜೆಕಿಲ್ಲನ ಮನಸ್ಸಿನ ಮೇಲಿನ ಒಂದು ದೊಡ್ಡ ಭಾರವನ್ನೆ ಹೊರದೂಡಿದಂತಾಯಿತು.

ಡಾ. ಜೆಕಿಲ್ ಬಲು ಬೇಗ ಆ ಘಟನೆಯಿಂದ ಚೇತರಿಸಿಕೊಂಡು ಮೊದಲಿನಂತಾದನು. ತನ್ನ ವೃತ್ತಿಯಲ್ಲಿ ಹೆಚ್ಚು ಉತ್ಸಾಹವನ್ನು ತೋರಿದನು. ಮೇಲಿಂದ ಮೇಲೆ, ಪ್ರತಿನಿತ್ಯವೆಂದೂ ಸರಿ, ನಾವು ಭೆಟ್ಟಿಯಾಗುತ್ತಿದ್ದೆವು. ನಮ್ಮ 'ಡಿನರ್' ಕಾರ್ಯಕ್ರಮದಲ್ಲಿ ಈಚೆಗೆ ಡಾ. ಲೆನ್ಯನ್ ಸಹಿತ ಕೂಡಿಕೊಳ್ಳುವಂತಾಯ್ತು.

೭

ಅಂದು ಜನೆವರಿ ೧೫ನೆಯ ತಾರೀಖು ಎಂದು ಕಾಣುತ್ತದೆ. ನಾನು ಜೆಕಲ್‌ನ ಮನೆಗೆ ಹೋದಾಗ, ಪೂಲನು ಬಾಗಿಲನ್ನು ತೆರೆಯುತ್ತ, ''ಡಾಕ್ಟರರು ಮನೆಯಲ್ಲಿ ಇದ್ದಾರೆ. ಆದರೆ ಯಾರನ್ನೂ ಭೆಟ್ಟಿಯಾಗೋದಿಲ್ಲ, ಅಂತಾರೆ. ಬಾಗಿಲಿಕ್ಕಿಕೊಂಡು ಕುಳಿತಿದ್ದಾರೆ'' ಎಂದನು.

''ನನ್ನನ್ನೂ ಭೆಟ್ಟಿಯಾಗಲಿಚ್ಛಿಸುವುದಿಲ್ಲವೆ?''

''ಕ್ಷಮಿಸಬೇಕು ಸಾರ್. ಯಾರನ್ನೂ ಭೆಟ್ಟಿಯಾಗುವುದಿಲ್ಲವಾಗಿ ಹೇಳುತ್ತಿದ್ದಾರೆ'' ಪೂಲನು ವಿನೀತನಾಗಿ ನುಡಿದ.

ನನ್ನ ಮಿತ್ರನ ಈ ವರ್ತನೆ ತೀರ ಅನುಚಿತವೆನಿಸಿತು. ಎರಡು ದಿನ ಬಿಟ್ಟು ನೋಡೋಣ—ಎಂದುಕೊಂಡು ೧೪ನೆಯ ತಾರೀಖಿಗೆ ಹೋದೆ. ಅವತ್ತೂ ನನ್ನ ಪಾಲಿಗೆ ಅವನ ಕೋಣೆಯ ಬಾಗಿಲು ಇಕ್ಕಿದ್ದಿತು. ಕಳೆದ ಎರಡು ತಿಂಗಳಿಂದ ನಾವು ದಿನವೂ ಭೆಟ್ಟಿಯಾಗುತ್ತಿದ್ದೆವು. ಈಗವನು ಹೀಗೆ ನಡೆದುಕೊಳ್ಳುವುದರ ಕಾರಣ ತಿಳಿಯದೆ ದಿಗ್ಭ್ರಮೆಗೊಂಡೆ.

ಮತ್ತೆರಡು ದಿನ ಬಿಟ್ಟು ಹೋದರೂ ಅದೇ ಸ್ಥಿತಿಯೇ–ನಾನು ಕೂಡಲೇ ಡಾ. ಲೆನ್ಯನನ ಮನೆಗೆ ಬಂದೆ. ಈ ಡಾಕ್ಟರನ ಮನೆಯೊಳಗೆ ಪ್ರವೇಶ ದೊರತರೂ ನನ್ನ ಪಾಲಿಗೆ ಇದಕ್ಕೂ ಹೆಚ್ಚಿನ ವಿಚಿತ್ರ ಕಾದಿದ್ದಿತು. ಅವನ ಮುಖ ಝಳ್ಳನೆ ಇಳಿದು ಹೋಗಿದ್ದಿತು; ಕಣ್ಣುಗಳು ಒಳಸೇರಿದ್ದುವು; ಆತನು ನಿದ್ರೆಯನ್ನೆ ಮಾಡದಿದ್ದವನಂತೆ ಕಂಡನು.

''ಯಾಕಯ್ಯಾ? ಮೈಯಲ್ಲಿ ಸರಿಯಿಲ್ಲವೆ?'' ಎಂದು ಕೇಳಿದೆ.

''ಹಾ, ಅಟರ್ಸನ್. ನನ್ನ ಬದುಕಿನಲ್ಲಿಯೇ ಅತಿ ದೊಡ್ಡ ಆಘಾತವಾಗಿದೆ. ಅದು ನನ್ನ ಜೀವನವನ್ನೆ ಸಣ್ಣಾಗಿ ದಹಿಸುತ್ತಲಿದೆ. ನನ್ನ ಚೇತನೆಯೇ ಉಡುಗಿ ಹೋದಂತಾಗಿದೆ. ನಾನು ಹೆಚ್ಚು ದಿನ ಬದುಕುತ್ತೇನೊ ಇಲ್ಲವೊ?'' ಎಂದು ನಿರ್ವಿಣ್ಣನಾಗಿ ನುಡಿದನು.

''ಆದದ್ದಾದರೂ ಏನು? ಜೆಕಿಲ್ಲನಿಗೂ ಜಡ್ಡಾಗಿದೆ, ಅವನನ್ನು ಕಂಡಿದ್ದೆಯಾ?'' ಎಂದು ಕೇಳಿದೆ.

''ಅವನನ್ನು ಕಂಡೇ ನನಗೆ ಹೀಗಾದದ್ದು. ಅವನ ಹೆಸರನ್ನೇ ಎತ್ತಬೇಡ. ನನ್ನ ಪಾಲಿಗೆ ಅವನು ಸತ್ತಂತೆಯೇ.''

''ತ್ಸು! ಹಾಗೆಲ್ಲ ಹೇಳಬೇಡ. ನಿಮ್ಮ ಈ ವೈಮನಸ್ಸಿಗೆ ಕಾರಣವಾದರೂ ಏನು? ಹಲವು ವರ್ಷಗಳಿಂದ ಮಿತ್ರರಾಗಿರುವ ನಾವು ಹೀಗೆ ಸಿಡಿದುನಿಲ್ಲುವುದು ತರವಲ್ಲ. ನಾನೇನಾದರೂ ಸಹಾಯ ಮಾಡುವ ಹಾಗಿದ್ದರೆ....''

''ಪ್ರಯೋಜನವಿಲ್ಲ, ಬೇಕಾದರೆ ಅವನನ್ನೇ ಹೋಗಿ ಕೇಳು.''

''ಕೇಳಬೇಕೆಂದರೆ, ಅವನು ಭೆಟ್ಟಿಯಾಗಲಿಕ್ಕೇ ನಿರಾಕರಿಸುತ್ತಿದ್ದಾನಲ್ಲ.''

''ಅದರಲ್ಲೇನೂ ಆಶ್ಚರ್ಯವಿಲ್ಲ. ಅಂಥ ಕಾರುಭಾರವನ್ನು ಮಾಡಿದ್ದಾನೆ. ಇದರಲ್ಲಿ ಯಾರದು ಸರಿ, ಯಾರದು ತಪ್ಪು ಎಂಬುದು ಆಮೇಲೆ ನಿನಗೇ ತಿಳಿದೀತು. ಅಥವಾ ಯೋಗ್ಯ ಪ್ರಸಂಗದಲ್ಲಿ ನಾನೇ ನಿನಗೆ ತಿಳಿಸುವೆ. ಆದರೆ.... ಈಗ ಮಾತ್ರ, ಅದರ ಸುದ್ದಿ ಬೇಡ. ಬೇಡ ಅಂದರೆ ಬೇಡ! ಬೇರೇ ನನ್ನಾದರೂ ಮಾತನಾಡುವ ಹಾಗಿದ್ದರೆ, ಇಕೋ, ಹೇಳು. ಇಲ್ಲವಾದರೆ ನಿನ್ನ ದಾರಿಹಿಡಿದು ಸುಮ್ಮನೆ ಹೋಗು.''

ಇಂಥ ಮಾತಿಗೆ ನಾನೇನು ಹೇಳಲಿ? ಅಲ್ಲಿಂದ ಮನೆಗೆ ಬಂದವನೇ, ಇಷ್ಟು ದಿನ ನನ್ನನ್ನು ಕಾಣಲು ನಿರಾಕರಿಸಿದ್ದಕ್ಕೂ, ಡಾ. ಲೆನ್ಯನ್‌ನೊಟ್ಟಿಗೆ ವಿರಸ ಬೆಳೆಸಿದ್ದಕ್ಕೂ, ಜೋರಾಗಿ ಬೈದು ಜೆಕಿಲ್ಲನಿಗೆ ಪತ್ರ ಬರೆದೆ.

ಮರುದಿನವೇ ಜೆಕಿಲ್ಲನ ಉತ್ತರ ಬಂತು.

''ಮಿತ್ರಾ, ನೀನು ಸಿಟ್ಟಿಗೇಳುವುದು ಸಹಜವೇ. ಲೆನ್ಯನ್ ಮತ್ತು ನನ್ನ ಗೆಳೆತನ ಸಂಪೂರ್ಣ ಮುಳುಗಡೆಯಾದಂತೆಯೇ. ಅದರಲ್ಲಿ ಅವನ ತಪ್ಪೇನೂ ಇಲ್ಲ. ಆದರೆ ನಮ್ಮಿಬ್ಬರ ವಿಷಯದಲ್ಲಿ ನನ್ನ ಸ್ನೇಹಭಾವಕ್ಕೆ ಯಾವ ಚ್ಯುತಿಯೂ ಇಲ್ಲವೆಂದು ಅದ್ಹೇಗ ಮನವರಿಕೆ ಮಾಡಿಕೊಡಲಿ? ಈ ವಿಷಯದಲ್ಲಿ ಬುದ್ಧಿ–ಪೂರ್ವ್ವಕವೇ ನಾನು ತಪ್ಪು ಮಾಡಿದ್ದೇನೆ. ಹೌದು. ಆದರೆ ಅಷ್ಟೇ ಗುರುತರವಾದ ಶಿಕ್ಷೆಯನ್ನೂ ಅನುಭವಿಸುತ್ತಿದ್ದೇನೆ. ನನ್ನ ಭಯ, ನನ್ನ ದುಃಖ ಈ ಗಳಿಗೆಗೆ ಅಪಾರವಾಗಿವೆ. ನನ್ನ ಮೇಲೆ ಕರುಣೆಯಿಟ್ಟು, ಉಪಕರಿಸಬಲ್ಲೆಯಾದರ ನೀನು ಮಾಡಬೇಕಾದದ್ದು ಒಂದೇ : ಅದೆಂದರೆ ನನ್ನನ್ನು ನನ್ನಷ್ಟಕ್ಕೆ ಬಿಟ್ಟು ಬಿಡು.''

ಕೆಲಕಾಲ ನಾನು ಜೆಕಿಲ್ಲನ ಉಸಾಬರಿಗೆ ಹೋಗದಿದ್ದರೂ ಡಾ. ಲೆನ್ಯನ್‌ನ ಮನೆಗೆ ಎಡತಾಕಬೇಕಾಯಿತು. ಆ ಆಘಾತದ ಮಾನಸಿಕ ಬೇನೆಯಿಂದ ಅವನು ಹಾಸಿಗೆಯನ್ನೇ ಹಿಡಿದಿದ್ದ. ಅದು ಅವನ ದೇಹವನ್ನು ಕೃಶಗೊಳಿಸಿ, ಕೊನೆಗೊಮ್ಮೆ ಅವನ ಜೀವವನ್ನೆ ನುಂಗಿಬಿಟ್ಟಿತು!

ವಿಧಿಯ ಈ ದುರ್ವಿಲಾಸವನ್ನು ಹಳಿಯುತ್ತ ಇರುವಾಗಲೇ ಬದುಕಿ ಉಳಿದ ಇನ್ನೊಬ್ಬ ಗೆಳೆಯನ ಬಗ್ಗೆ ನನ್ನ ಅನುಕಂಪ ಉಕ್ಕಿ ಬಂತು. ಮತ್ತೊಮ್ಮೆ ಅವನ ಮನೆಗೆ ಧಾವಿಸಿದೆ. ಆಗೂ ಅವನ ಹತಾಶ ವೃತ್ತಿ ಹೋಗಿರಲಿಲ್ಲ. ಡಾಕ್ಟರರು ಈಗಲೂ ತಮ್ಮ ಲೆಬೊರೇಟರಿ ಕೋಣೆಯಲ್ಲಿಯೆ ಹೆಚ್ಚಾಗಿ ಇರುವರೆಂದೂ ಒಮ್ಮೊಮ್ಮೆ ಅಲ್ಲಿಯೆ ಊಟ ತರಿಸಿ, ಉಂಡು, ಅಲ್ಲಿಯೇ ಮಲಗುವರೆಂದೂ ಪೂಲ್ ಹೇಳಿದ.

ಇದಕ್ಕೂ ಹೆಚ್ಚು ಇನ್ನೇನು ಮಾಡಲಾದೀತು?

''ಹಾಳಾಗಲಿ ಇವನ ಸಹವಾಸ'' ಎಂದುಕೊಳ್ಳುತ್ತ ಅಲ್ಲಿಂದ ಹೊರಟು ಬಂದೆ.

ಅದಾಗಿ ಕೆಲ ದಿನಗಳು ಸಂದಿರಬೇಕು, ಅಷ್ಟೆ. ಒಂದು ಸಂಜೆ ಪೂಲನೇ ನನ್ನ ಕೋಣೆಗೆ ಬಂದನು. ದುಗುಡದಿಂದ ಕೂಡಿದ ಅವನ ಮುಖವನ್ನು ಕಂಡು,

''ಯಾಕೊ? ಏನಾಯಿತು? ಡಾಕ್ಟರರು ಕ್ಷೇಮ ತಾನೇ?'' ಎಂದು ಕೇಳಿದೆ.

''ಸರ್ ಅನಾಹುತವಾಗಿದೆ.''

''ಏನು? ಏನಾಯಿತು?''

''ನಿಮಗೆ ಗೊತ್ತೇ ಇದೆಯಲ್ಲ, ಸಾರ್. ಅವರು ತಮ್ಮ ಕೋಣೆಯಲ್ಲೇ ಹೆಚ್ಚಾಗಿ ಇರುತ್ತಿದ್ದರೂ ಆಗೀಗ ಹೊರಗೆ ಬರುತ್ತಿದ್ದರು. ಕಳೆದ ಒಂದು ವಾರದಿಂದ ಆ ಕೋಣೆಯನ್ನು ಬಿಟ್ಟು ಹೊರಗೇ ಬಂದಿಲ್ಲ. ನಾವು ಅವರ ಮುಖವನ್ನೇ ಕಂಡಿಲ್ಲ.''

''ಎಲ್ಲಿ ಹೋದರು ಮತ್ತೆ?''

''ಅಲ್ಲೇ ಇದ್ದಾರೆ. ಅಂದರೆ....ಆ....ನೀವು ದಯಮಾಡಿ ಮನೆಗೆ ಬರ್ತೀರಾ? ಅವರಿಗೆ ಏನಾಗಿದೆಯೆಂಬುದು ತಾನೇ ತಿಳೀತದೆ. ನಾನಂತೂ ಹೆದರಿಬಿಟ್ಟಿದ್ದೇನೆ.''

ತಡಮಾಡದೇ ನಾನು ಅವನೊಂದಿಗೆ ಹೊರಟೆ. ಆ ಮನೆಯ ದಿವಾಣಖಾನೆಯಲ್ಲಿ ಇತರ ಸೇವಕರು ಒಂದೆಡೆ ನೆರೆದು ಅದೇ ವಿಷಯವನ್ನು ಕುರಿತು ಗುಜುಗುಜು

ಮಾತನಾಡುತ್ತಿದ್ದರು. ಪೂಲನು ತನ್ನ ಅಧಿಕಾರ ಚಲಾಯಿಸಿ ಅವರನ್ನು ಸುಮ್ಮನಿರಿಸಿ, ನನ
ಹೇಳಿದ,

''ಸರ್, ನಾವೀಗ ಲೆಬೊರೇಟರಿಗೆ ಹೋಗೋಣ. ನಾನು ಅವರನ
ಮಾತನಾಡಿಸುತ್ತೇನೆ. ಆಗ ನೀವು ಬಾಗಿಲಿಗೆ ಕಿವಿಹಚ್ಚಿ ಕೇಳಬೇಕು. ನೀವು ಏನನ್
ಮಾತನಾಡಬೇಡಿರಿ.''

ನಾವು ಮೆಲ್ಲಗೆ ಮುಂದರಿದು ಡಾ. ಜೆಕಿಲ್ ಒಳಗೆ ಕುಳಿತಿದ್ದ ಲೆಬೊರೇಟರಿಯ
ಬಾಗಿಲಿಗೆ ಬಂದೆವು. ನನಗೆ ಅದರ ಬಾಗಿಲಿಗೆ ಕಿವಿ ಹಚ್ಚ ಹೇಳಿ, ಪೂಲ್ ಬಾಗಿಲನ್
ಬಡಿದನು. ಮತ್ತು ''ಅಟರ್ಸನ್ ಸಾಹೇಬರು ಬಂದಿದ್ದಾರೆ; ನಿಮ್ಮನ್
ಭೆಟ್ಟಿಯಾಗಬೇಕೆನ್ನುತ್ತಾರೆ.'' ಎಂದು ಗಟ್ಟಿಯಾಗಿ ಹೇಳಿದನು.

ಒಳಗಿನಿಂದ ದನಿ ಕೇಳಬಂತು. ''ಇಲ್ಲ, ನಾನು ಯಾರನ್ನೂ ಭೆಟ್ಟಿಯಾಗುವುದಿಲ್ಲ ಅಂ
ಹೇಳು.''

''ಆಗಲಿ ಸರ್'' ಎಂದು ನುಡಿದು, ಪೂಲನು ಗೆಲುವಿನ ಮುಖದಿಂದ, ನನ್ನ ಕೈಹಿಡಿದ
ಈಚೆಗೆ ಕರೆದುಕೊಂಡು ಬಂದನು.

''ಕೇಳಿದಿರಾ ಸರ್? ಅವರು ಮಾತಾಡಿದ್ದು ಚೆನ್ನಾಗಿ ಕೇಳಿಸಿತಲ್ಲವೆ?''

''ಕೇಳಿಸಿತು. ಆದರೆ ಡಾಕ್ಟರರ ಧ್ವನಿ ಯಾಕೊ ಬದಲಾದಂತೆನಿಸಿತು.'' ಎಂದೆ ನಾನು.

''ಬದಲಾದಂತೆ? ಏನು ಹೇಳುತ್ತೀರಿ? ಇಪ್ಪತ್ತು ವರುಷಗಳಿಂದ ನಾನು ಅವರ ಸ್ವರವನ್
ಕೇಳಿದ್ದೇನೆ. ಇದು ಅವರ ಸ್ವರವೇ ಅಲ್ಲ.... ಡಾಕ್ಟರ್ ಸಾಹೇಬರು ಅಲ್ಲಿ ಇಲ್ಲವೆ ಇಲ್ಲ! ಈ
ಸ್ವರದಿಂದ ಮಾತನಾಡುವ ವ್ಯಕ್ತಿ ಅಲ್ಲಿದ್ದು ಇವತ್ತಿಗೆ ಎಂಟು ದಿನಗಳಾದುವು. ಆತ ಯಾರು
ಇಲ್ಲೇಕೆ ಇದ್ದಾನೆ ಎಂಬುದು ತಿಳಿಯದೇ, ಗಾಬರಿಗೊಂಡು ನಿಮ್ಮನ್ನು ಕರೆದೆ.''

ಪೂಲ್ ಹೀಗೆ ಹೇಳುತ್ತಿದ್ದಂತೆ ನನಗೂ ಕಿಂಚಿತ್ ಗಾಬರಿಯಾಯಿತು.

''ಇದು ನಿಜವಾಗಿಯೂ ಅತ್ಯಾಶ್ಚರ್ಯದ ಸಂಗತಿ. ಅಲ್ಲ, ನೀ ಹೇಳಿದಂತೆಯೇ ಡಾ
ಜೆಕಿಲ್ ಅಲ್ಲಿ ಇಲ್ಲವಾಗಿದ್ದರೆ....ಅಂದರೆ ಅವರ ಕೊಲೆ....ಹೂಂ. ಆಗಿದ್ದರೆ, ಕೊಲೆಗಡುಕನ
ಅಲ್ಲೇ ಏಕೆ ಉಳಿಯುವ? ಪಲಾಯನ ಹೇಳಬಹುದಿತ್ತಲ್ಲ?''

''ನೀವು ಸುಲಭವಾಗಿ ನಂಬುವವರಲ್ಲ, ವಿವರಿಸಿ ಹೇಳುತ್ತೇನೆ. ಕಳೆದ ಒಂದ
ವಾರದಿಂದ, ಯಾವುದೊ ಒಂದು ಔಷಧೀ ಪೌಡರಿಗಾಗಿ ಆ ವ್ಯಕ್ತಿ ನಮಗೆ ತೊಂದರ
ಕೊಡುತ್ತಿದ್ದಾನೆ. ಬೆಳಗಿನಿಂದ ಸಂಜೆಯವರೆಗೂ ಅದರ ಹೆಸರಿನ ಚೀಟಿಗಳೇ, ಅದರಲ್ಲಿ, 'ಅ
ಅಂಗಡಿಗೆ ಹೋಗು, ಈ ಅಂಗಡಿಗೆ ಹೋಗಿ ಬಾ' ಎಂದು ನನಗೆ ಆಜ್ಞೆ. ಲಂಡನ್ನಿನ ಅನೇ
ಕೆಮಿಸ್ಟರ ಅಂಗಡಿಗೆ ಎಡತಾಕಿ, ಎಡತಾಕಿ ಸುಸ್ತಾಗಿ ಹೋಗಿದ್ದೇನೆ.''

''ಆ ಚೀಟಿಗಳನ್ನು ನಿನಗೆ ಹೇಗೆ ಮುಟ್ಟಿಸುತ್ತಿದ್ದರು?''

''ಬಾಗಿಲು ಸಂದಿಯಿಂದ ದೂಡುತ್ತಿದ್ದರು. ಹಿಂದಕ್ಕೆ ಡಾಕ್ಟರರು ಯಾವುದೆ
ಪ್ರಯೋಗಗಳಲ್ಲಿ ತೊಡಗಿದಾಗ, ಬಾಗಿಲು ತೆಗೆಯದೆ ಹೀಗೇ ಚೀಟಿಗಳನ್ನು ಕಳಿಸುತ್ತಿದ್ದರು
ಈಗಂತೂ ದಿನಗಟ್ಟಲೆ ಬಾಗಿಲು ತೆರೆಯುತ್ತಿಲ್ಲ, ಎದುರೆದುರು ಮಾತಿಲ್ಲ, ಊಟವನ್ನು ಸಹಿತ

ಹೊರಗೆ ಯಾರೂ ಇಲ್ಲದ ವೇಳೆಯಲ್ಲಿ, ತಾವು ಮರೆಯಲ್ಲಿ ನಿಂತು ಬಾಗಿಲು ತರದಾಗ ಮಾತ್ರ ನಾವು ತಟ್ಟೆಯನ್ನು ಒಳಗೆ ದೂಡಬೇಕು.''

''ಹೂಂ! ಸರಿ ಕೊನೆಗೆ ಆ ಪೌಡರ್ ಸಿಕ್ಕಿತೇ?''

''ಇಲ್ಲ. ಪ್ರತಿಯೊಂದು ಅಂಗಡಿಯಿಂದಲೂ ಸ್ಯಾಂಪಲ್ ತರುತ್ತಿದ್ದೆ. ಇವರು ಅದು ಅಶುದ್ಧವಿದೆ ಎಂದು ಹೇಳಿ ಷರತು ಮಾಡುತ್ತಿದ್ದರು. ಮತ್ತೆ ಬೇರೆ ಅಂಗಡಿಗೆ ಧಾವಿಸುತ್ತಿದ್ದೆ. ನನ್ನ ಗೋಳು ಬೇಡ. ಪ್ರತಿ ಸಲ ಅಂಗಡಿಕಾರರಿಂದಲೂ ಬೈಸಿಕೊಳ್ಳಬೇಕು.''

''ಯಾವ ಔಷಧಿ? ಡಾಕ್ಟರರು ಬರೆದು ಕೊಟ್ಟಿದ್ದ ಚೀಟಿ ಯಾವುದಾದರೂ ನಿನ್ನಲ್ಲಿ ಇದೆಯೆ?''

''ಹಾಂ. ಒಂದು ಚೀಟಿ ಮಾತ್ರ ಇದೆ. ಮಾವ್ ಆ್ಯಂಡ್ ಕಂಪನಿಯವರಿಗೆ ಬರೆದದ್ದು. ಅವರು ಅದನ್ನು ಓದಿ, 'ಇನ್ನೊಮ್ಮೆ ಬರಬೇಡ' ಎಂದು ನುಡಿದು ಸಿಟ್ಟಿನಿಂದ ನನ್ನ ಕಡೆಗೆ ಎಸೆದರೆಂದು ಹಾಗೇ ಉಳಿದಿದೆ. ಇಕೊಳ್ಳಿ.''

— ಹೀಗೆ ಹೇಳುತ್ತ ಪೂಲನು ಆ ಮುದುಡಿಯಾದ ಚೀಟಿಯನ್ನು ನನ್ನ ಕೈಗಿತ್ತನು.

ಅದನ್ನು ಬಿಡಿಸಿ ಓದಿದೆ. ಅದು ನಿಶ್ಚಯವಾಗಿ ಜೆಕಿಲ್‌ನದೇ ಹಸ್ತಾಕ್ಷರವಾಗಿದ್ದಿತು.

☆ ☆ ☆ ☆

'ಮೆಸರ್ಸ್ ಮಾವ್ ಎಂಡ್ ಕಂಪನಿಯವರಿಗೆ, — ಅಭಿನಂದನೆಗಳು. ನೀವು ಕಳುಹಿದ ಸ್ಯಾಂಪಲ್ ಮೂರನೆಯದು ಕೂಡಾ ಅಶುದ್ಧವಾಗಿದೆ. ಪ್ರಯೋಗಿಸಿ ನೋಡಿಯೆ ಹೇಳುತ್ತಿದ್ದೇನೆ. ೧ಲ....ನೇ ಇಸವಿಯಲ್ಲಿ ಪೌಂಡುಗಟ್ಟಲೆ ನಾನು ಈ ಲವಣ ಮಿಶ್ರಣವನ್ನು ಕೊಂಡಿದ್ದೆನಷ್ಟೆ. ದಯವಿಟ್ಟು ಅದೇ ಸ್ಟಾಕ್ ಉಳಿದಿದ್ದರೆ ನನಗಾಗಿ ಹುಡುಕಿಸಿ ಕಳಿಸಿರಿ ಎಂದು ಇನ್ನೊಮ್ಮೆ ವಿನಂತಿಸುವೆ. ಹಣದ ಪ್ರಶ್ನೆಯೇ ಇಲ್ಲ, ಎಷ್ಟು ಬಿದ್ದರೂ ಕೊಡುವೆ. ಆದರೆ ಅದೇ ಲವಣಬೇಕು. ದಯವಿಟ್ಟು, ಅದೇ ಹಳೆಯ ಪೌಡರ್ ಕಳಿಸಿರಿ. ತಪ್ಪದೇ ಕಳಿಸಿರಿ.

ಇತಿ ನಿಮ್ಮ

ಡಾ. ಜೆಕಿಲ್

☆ ☆ ☆ ☆

ಈ ಪತ್ರವನ್ನೋದಿ ನನಗೇನು ಹೇಳಬೇಕೆಂಬುದೇ ತಿಳಿಯದಾಯಿತು.

''ಇದು ಡಾಕ್ಟರರದೇ ಕೈ ಬರಹ'' ಎಂದೆ ನಾನು.

''ಇರಬಹುದು, ಸರ್. ಆದರೆ ಆ ಅವನನ್ನು ನಾನು ಕಣ್ಣಾರೆ ನೋಡಿದ್ದೇನೆ.''

''ಆಂ! ಯಾರನ್ನು?''

''ಅದು ಹೀಗಾಯಿತು. ಮೊನ್ನೆ ಸಂಜೆ ನಾನು ಹಿತ್ತಿಲ ತೋಟದಲ್ಲಿ ಲೆಬೊರೇಟರಿ ಕೋಣೆಯ ಹಿಂಬದಿಯಿಂದ ಬರುತ್ತಿದ್ದೆ. ಒಳಗಿನ ಕಪಾಟನ್ನು ಯಾರೋ ಜೋರಾಗಿ ಗುದ್ದಿದಂತೆ ಸಪ್ಪಳವಾಯಿತು. ಕಿಟಕಿಯಲ್ಲಿ ಮೆಲ್ಲನೆ ಹಣಿಕಿ ಹಾಕಿನೋಡಿದೆ. ಬೇರೊಬ್ಬ ಅಲ್ಲಿ

ಕಾಲಪ್ಪಳಿಸುತ್ತ ನಿಂತಿದ್ದ. ಆಕಾರದಲ್ಲಿ ನಮ್ಮ ಸಾಹೇಬರಿಗಿಂತ ಕುಳ್ಳನಾಗಿ ಕಂಡ. ಆತ ನಮ್ಮ ಡಾಕ್ಟರ ಸಾಹೇಬರಲ್ಲವೆಂಬುದು ಖಂಡಿತ.''

''ಇದೆಲ್ಲಾ ವಿಚಿತ್ರವೇ ಆಗಿದೆಯಲ್ಲ! ಹಾಗಿದ್ದರೆ ಅಲ್ಲಿದ್ದವ ಯಾರೆಂದು ಗುರುತಿಸಿದೆಯಾ?''

''ಇಲ್ಲ, ಆತ ಮುಖದ ಮೇಲೆ ಒಂದು ಮುಖವಾಡವನ್ನು ಧರಿಸಿದ್ದನಾದ್ದರಿಂದ ಗುರುತು ಸಿಕ್ಕಲಿಲ್ಲ. 'ಯಾರವರು?' ಎಂದು ನಾನು ಗದರಿಸಿ ಕೇಳಬೇಕೆನ್ನುವಷ್ಟರಲ್ಲಿ ಆ ವ್ಯಕ್ತಿ ನನ್ನನ್ನು ನೋಡಿದವನೆ ಕೆಟ್ಟ ದನಿಯಿಂದ ಕೂಗಿ, ಫಕ್ಕನೆ ಆ ಕಿಟಕಿಯ ಬಾಗಿಲನ್ನು ಇಕ್ಕಿಕೊಂಡು ಬಿಟ್ಟನು. ಅದಕ್ಕೇ ಹೇಳಿದ್ದು ಸಾರ್, ನಮ್ಮ ಸಾಹೇಬರು ಅಲ್ಲಿ ಇಲ್ಲ–ಅಂತ. ನನಗಂತೂ ಅನಿಸುತ್ತದೆ, ನಮ್ಮ ಸಾಹೇಬರ ಕೊಲೆಯೇ ಆಗಿರಬೇಕು. ಅದಕ್ಕೇ ನಿಮ್ಮ ಕಡೆ ಬಂದದ್ದು—ಏನಾದರೂ ಇದರಿಂದ ನಮ್ಮನ್ನು ಪಾರು ಮಾಡುತ್ತೀರಿ ಅಂತ.''

''ಹೌದು. ಏನಾದರೂ ದಾರಿಯನ್ನು ಹುಡುಕಲೇಬೇಕು. ಆದರೆ ಅವರ ಕೊಲೆಯಾಗಿಲ್ಲವೆಂದು ನನ್ನ ಭಾವನೆ. ಯಾಕಂದರ ಈ ಚೀಟಿ ನೋಡಿದೆಯಾ? ನಿನ್ನೆ ತಾನೇ ಅವರು ತಮ್ಮ ಸ್ವಹಸ್ತದಿಂದ ಬರೆದದ್ದು.''

''ನಿಜ ಸಂಗತಿ ಹೇಳಿಬಿಡ್ತೇನೆ. ನಿಮ್ಮೆದುರು ಮುಚ್ಚಿಡುವುದಿಲ್ಲ, ಮುಖದ ಮೇಲೆ ಬಟ್ಟೆಯೆಳೆದುಕೊಂಡ ವ್ಯಕ್ತಿ ಇನ್ನಾರೂ ಅಲ್ಲ, ಆ ಹೈಡನೇ! ಅದು ಖಂಡಿತ!'' ಎಂದು ಪೂಲ್ ಹೇಳಿದ.

ಹೈಡನ ಹೆಸರೆತ್ತಿದ ಕೂಡಲೇ ನನ್ನ ರಕ್ತ ಇನ್ನಷ್ಟು ಬಿಸಿಯಾಯಿತು. ಈ ಪ್ರಕರಣವನ್ನು ಮುಗಿಸಲೇಬೇಕೆಂದು ನಿಶ್ಚಯಮಾಡಿದೆ.

''ಈಗ ನಮ್ಮ ಮುಂದಿರುವ ದಾರಿ ಒಂದೇ. ಅದೆಂದರೆ, ಬಾಗಿಲನ್ನು ಮುರಿದು ಒಳಗೆ ಪ್ರವೇಶ ಮಾಡಿಬಿಡಬೇಕು.''

''ಹೌದು, ಸರ್. ನನಗೂ ಹಾಗೇ ಅನಿಸುತ್ತದೆ. ನೀವು ಜೊತೆಗಿದ್ದೀರಿ ನಮಗೆಲ್ಲಾ ಅದೇ ಧೈರ್ಯ. ಬಂದದ್ದು ಬರಲಿ. ಇದನ್ನು ಮುಗಿಸೇ ಬಿಡೋಣ.''

ಪೂಲನು ಇತರ ಸೇವಕರಿಗೆಲ್ಲಾ ಅದು ಇದು ಕೆಲಸ ಹೇಳಿ, ಒಂದು ಕೊಡಲಿಯನ್ನೂ ಕಬ್ಬಿಣದ ಒಂದು ಹಾರೆಯನ್ನೂ ತಂದನು. ಲೆಬೊರೇಟರಿಯ ಇನ್ನೊಂದು ಬಾಗಿಲಿನಿಂದ ಒಳಗಿದ್ದವನು ತಪ್ಪಿಸಿಕೊಂಡು ಹೋಗದಂತೆ ಇತರ ಆಳುಗಳಿಗೆ ನಿಲ್ಲಹೇಳಿದೆವು.

''ಪೂಲ್, ಆ ಕೊಲೆಗಡುಕನನ್ನು ಇಂದು ಹಿಡಿದೇ ಬಿಡಬೇಕು. ನಿಮ್ಮ ಯಾರ ಮೇಲೂ ಈ ಪ್ರಕರಣ ಬಾರದಂತ ನೋಡಿಕೊಳ್ಳುವ ಜವಾಬ್ದಾರಿ ನನ್ನದು. ಯಾರಲ್ಲಿ? ಕತ್ತಲೆ ಹೆಚ್ಚುತ್ತಲಿದೆ. ಇನ್ನಷ್ಟು ಮೋಂಬತ್ತಿಗಳನ್ನು ಹಚ್ಚಿರಿ.'' ಎಂದು ಹೇಳಿದೆ.

ಭದ್ರತೆಯ ಮತ್ತು ಇತರೆ ಸಿದ್ಧತೆಗಳಾಗಲಿಕ್ಕೆಂದು ೧೦ ನಿಮಿಷ ಕಾಯ್ದೆವು. ರಾತ್ರಿಯ ಸಮಯ ಏರುತ್ತಲಿದ್ದುದರಿಂದ ಲಂಡನ್ ನಗರವು ಶಾಂತವಾಗಿದ್ದಿತು. ಸದ್ದಾಗುತ್ತಿದ್ದುದು ಆ ಲೆಬೊರೇಟರಿಯಲ್ಲೊಂದೇ! ಎಂದರೆ ಒಳಗಿದ್ದ ವ್ಯಕ್ತಿ ಅತ್ತಿಂದಿತ್ತ ಓಡಾಡುತ್ತಲಿದ್ದನು.

''ಕೇಳದೆಯಾ, ಪೂಲ್?'' ಎಂದೆ ನಾನು.

"ದಿವಸಾಗಲೂ ಇದು ಇದ್ದದ್ದೇ. ಅಂಗಡಿಯಿಂದ ಹೊಸ ಸ್ಯಾಂಪಲ್ ಪೌಡರ್ ಬಂದಾಗ ಮಾತ್ರ, ಒಂದಿಷ್ಟು ಧಪಧಪ ಸದ್ದು ಕಡಿಮೆಯಾಗಿರುತ್ತಿತ್ತು. ಅಷ್ಟೇ ಅಲ್ಲ, ಒಳಗಿದ್ದವ ಗಳಗಳನೆ ಅಳೋದನ್ನೂ ಕೇಳಿದ್ದೇವೆ!"

"ಅಳುವುದೆ?"

"ಹೂಂ. ಹೌದು! ಯಾರಾದರೂ ಸತ್ತರೆ ಜೋರಾಗಿ ಅಳುತ್ತಾರಲ್ಲ, ಹಾಗೆ! ಕೇಳಿದವರ ಕರುಳು ಬೆಂದಿರಬೇಕು!"

"ಸರಿ, ಪೂಲ್, ತಕ್ಕೋ ಕೈಯಲ್ಲಿ ಕೊಡಲಿಯನ್ನು," ಎಂದು ಆಜ್ಞಾಪಿಸಿ, ನಾನು ಆ ಲೆಬೊರೇಟರಿಯ ಬಾಗಿಲಿನ ಹತ್ತಿರ ಬಂದೆ. ಒಮ್ಮೆ ಜೋರಾಗಿ ಬಾಗಿಲನ್ನು ಬಡಿದು ಗಟ್ಟಿ ಸ್ವರದಿಂದ ಕೂಗಿದೆ.

"ಜೆಕಿಲ್, ನಾನು ಅಟರ್ಸನ್ ಬಂದಿದ್ದೇನೆ. ನಿನ್ನನ್ನು ನಾನು ಈಗ ಕಾಣಲೇಬೇಕು!" ಆ ಮಾತಿಗೆ ಉತ್ತರವೇ ಇಲ್ಲ.

"ಇಕೊ, ಇನ್ನೊಮ್ಮೆ ಹೇಳುವೆ. ನಿನಗೆ ಬೇಕಿರಲಿ, ಬಿಡಲಿ. ನಾನಂತೂ ಈಗ ನಿನ್ನನ್ನು ಮುಖತಃ ಕಾಣಲೇಬೇಕೆಂದು ಬಂದಿದ್ದೇನೆ. ನೀನು ಬಾಗಿಲನ್ನು ತೆರೆದಿ, ನೆಟ್ಟಗಾಯಿತು. ಇಲ್ಲವೆ ಬಾಗಿಲನ್ನು ಮುರಿದಾದರೂ ಒಳಗೆ ಬರುತ್ತೇವೆ, ಇದು ಖಂಡಿತ!"

"ಅಯ್ಯೋ! ಅಟರ್ಸನ್, ಬೇಡ, ದಯವಿಟ್ಟು ಹಾಗೆ ಮಾಡಬೇಡ" ಎಂದಿತು ಒಳಗಿನ ದನಿ.

ಆ ಧ್ವನಿ ಖಂಡಿತ ಜೆಕಿಲ್ಲನದಲ್ಲ! ಅದು ಹೈಡನದೇ ಆಗಿತ್ತು.

"ಅನುಮಾನವೇಕೆ ಪೂಲ್. ಹಾಕು ಏಟನ್ನು. ಒಳಗಿನ ಕೊಂಡಿ ಇರುವ ಭಾಗಕ್ಕೇನೇ ಏಟನ್ನು ಹಾಕು. ಆ ಕೊಂಡಿ ಕಳಚಿದ್ದಾದರೆ, ಬಾಗಿಲು ತಾನೇ ತೆರೆಯುವುದು."

ಸಶಕ್ತನಾದ ಪೂಲ್ ರಭಸದಿಂದ ಕೊಡಲಿಯನ್ನೆತ್ತಿ ಪ್ರಹಾರ ಮಾಡಿದ. ಒಂದು, ಎರಡು, ಮೂರು.... ಆದರೆ ಗಟ್ಟಿಮುಟ್ಟಾದ ಆ ಬಾಗಿಲಿಗೆ ಅಷ್ಟು ಸಾಕಾಗಲಿಲ್ಲ. ಐದನೆಯ ಹೊಡೆತವು ಕೊಂಡಿಯಿರಬಹುದಾದ ನಿರ್ದಿಷ್ಟ ಸ್ಥಳಕ್ಕೇನೇ ಬಿತ್ತಾದರಿಂದ, ಬಾಗಿಲು ತೆರೆದು ಬಿಟ್ಟಿತು. ನಮ್ಮ ಕಾರ್ಯ ಕೈಗೂಡಿತ್ತು.

ಒಂದು ಕ್ಷಣ ನಮಗೆ ಒಳನುಗ್ಗುವ ಧೈರ್ಯವೇ ಆಗಲಿಲ್ಲ. ಆ ವ್ಯಕ್ತಿ ಹೊರಬರುವನೋ ಅಥವಾ ಬೇರೇನಾದರೂ ಗಲಾಟೆ ಮಾಡುವನೊ ಒಂದು ಕಾಯುತ್ತ ನಿಂತೆವು. ಊಂಹು ಆ ಗಳಿಗೆಗೆ ಯಾವ ಸದ್ದೂ ಹೊರಬರಲಿಲ್ಲ, ಅಲ್ಲಿ ಮಸಣದಷ್ಟು ಶಾಂತಿ ಆವರಿಸಿತ್ತು.

ನಾವೇ ಮೆಲ್ಲನೆ ಹಣಿಕಿ ಹಾಕಿದೆವು. ಆ ಸ್ಥಳದಲ್ಲಿ ಮಂದ ಬೆಳಕಿನ ಲಾಂದ್ರವೊಂದು ತೂಗುತ್ತಿದ್ದಿತು. ಗೋಡೆಗೆ ಹೊಂದಿ ಇಟ್ಟಿದ್ದ ಕನ್ನಡಿಯು ಕಪಾಟಿನ ಒಂದೆರಡು ಡ್ರಾವರಗಳು ಹೊರಬಂದಿದ್ದವು. ಆದರೆ ಇನ್ನೊಂದು ಬದಿಗೆ ಒಂದು ಮೇಜು. ಅಲ್ಲಿಯ ಕಾಗದ ಪತ್ರಗಳು ಮತ್ತು ಪುಸ್ತಕಗಳು ವ್ಯವಸ್ಥಿತವಾಗಿ ಇದ್ದುವು. ಯಾವುದೊ ಗಾಜಿನ ಪಾತ್ರದಲ್ಲಿ ರಸಾಯನವೊಂದು ಕುದಿಯುತ್ತಿತ್ತು.

ಆದರೆ ಮನುಷ್ಯರ ಸುಳಿವಿಲ್ಲ.

ನಾವು ಮುಂದಡಿ ಇಟ್ಟು ಕೋಣೆಯೊಳಕ್ಕೆ ಬಂದಾಗಲೇ ಕುಳ್ಳ ದೇಹವೊಂದು ನಡುಮಧ್ಯೆ ಬೋರಲಾಗಿ ಮಲಗಿದ್ದುದು ಕಂಡು ಬಂತು. ಕೈಕಾಲುಗಳನ್ನು ತುಸು ಅಲ್ಲಾಡಿಸುತ್ತಿದ್ದರೂ ಉಸಿರನ್ನು ಎಳೆದೆಳೆದು ಬಿಡುತ್ತಿದ್ದಿತು. ಅವನನ್ನು ಅಂಗಾತ ಮಲಗಿಸಿದಾಗ ನಮಗೆ ಕಂಡದ್ದು ಹೈಡನ ಮುಖ! ಪ್ರಾಣ ಹೋಗುವ ಸ್ಥಿತಿಯಲ್ಲಿ ಇದ್ದ. ಬಹುಶಃ ವಿಷಪೂರಿತ ಔಷಧವೊಂದನ್ನು ಸೇವಿಸಿರಬೇಕೆಂದು ನಮಗನಿಸಿತು.

ಆದರೆ ನಮಗೆ ಬೇಕಾಗಿದ್ದ ಡಾ. ಜೆಕಿಲ್‌ನ ಸುಳಿವೇ ಇಲ್ಲ. ಕಪಾಟಿನ ಸಂದಿ, ಮೇಜಿನ ಕೆಳಗೆ ಹುಡುಕಿದೆವು. ಎಲ್ಲಿಯೂ ಜೆಕಿಲ್‌ನ ದೇಹದ ಸುಳಿವಿರಲಿಲ್ಲ.

''ರಸಾಯನವನ್ನು ಸುರುವಿ ನಮ್ಮ ಧಣಿಯನ್ನು ಜೀವಂತ ಸುಟ್ಟನೋ ಏನೊ ಈ ಭಂಡ'' ಎಂದು ಪೂಲ್ ಅಕ್ಕಸಗೊಂಡು ನುಡಿದನು.

ಜೆಕಿಲ್ ಆ ರಾತ್ರಿಗಂತೂ ಓಡಿ ಹೋಗಿರಲಿಲ್ಲ. ನಾನು ನಿಜಕ್ಕೂ ದಿಗ್ಭ್ರಾಂತನಾದೆ.

ರಾಸಾಯನಿಕ ಔಷಧಿಗಳನ್ನಿಟ್ಟಿದ್ದ ಕಪಾಟಿನ ಡ್ರಾವರ್‌ನ್ನು ಪೂಲ್ ಪರಿಶೀಲಿಸುತ್ತ ''ನಾನು ತಂದುಕೊಟ್ಟಿದ್ದ ಸ್ಯಾಂಪಲ್‌ಗಳೆಲ್ಲಾ ಇಲ್ಲೇ ಇವೆ'' ಅಂದನು.

ನಾನು ಆ ಮೇಜಿನ ಹತ್ತಿರ ಬಂದೆ. ಅಲ್ಲಿ ನನಗೆ ಎದ್ದು ಕಂಡದ್ದು, ಒಂದು ಕ್ರೈಸ್ತ ಪಾರಾಯಣ ಗ್ರಂಥ, ಜೆಕಿಲ್ ಅನೇಕ ವರ್ಷಗಳಿಂದ ಮನನ ಮಾಡುತ್ತಲಿದ್ದ ಪುಸ್ತಕವದು! ಅದರ ಹತ್ತಿರವೇ ಒಂದು ದೊಡ್ಡ ಪಾಕೀಟು ಇದ್ದಿತು. ನೋಡಲಾಗಿ ಅದರ ಮೇಲೆ ನನ್ನ ಹೆಸರು! ನನಗಾಗಿ ಬರೆದುದೇ. ಆತುರದಿಂದ ಅದನ್ನು ಒಡೆದೆನು.

ಅದರಲ್ಲಿ ಹಲವಾರು ಕಾಗದಗಳಿದ್ದುವು. ಮೊದಲಿಗೆ ನನ್ನ ಕಣ್ಣಿಗೆ ಬಿದ್ದುದು ಮೃತ್ಯುಪತ್ರ. ನನ್ನ ಮರಣದ ತರುವಾಯ, ಅಥವಾ ೩ ತಿಂಗಳವರೆಗೆ ಅದೃಶ್ಯನಾಗಿ ಬಿಟ್ಟರೆ ತನ್ನೆಲ್ಲ ಆಸ್ತಿಯು ದಾನವಾಗಿ ಸಲ್ಲಬೇಕೆಂಬ, ಆ ಹಿಂದಿನ ತಲೆತಿರುಕ ಬರವಣಿಗೆಯೇ ಈ ಮೃತ್ಯು ಪತ್ರದಲ್ಲಿಯೂ ಕಾಣಿಸಿತು. ಹಾಗಿದ್ದರೆ ಮತ್ತೊಮ್ಮೆ ಈ ಶಾಸನವನ್ನು ಬರೆದುದೇಕೆ ಎಂದು ಇನ್ನೊಂದು ಸಲ ಓದುವಾಗ ಗೊತ್ತಾಯಿತು. ಆ ದಾನ ಪಡೆಯುವವ ಎಡ್ವರ್ಡ್ ಹೈಡ್ ಆಗಿರಲಿಲ್ಲ. ಅದರ ಸ್ಥಳದಲ್ಲಿ ನನ್ನ ಹೆಸರು ಗೆಬ್ರಿಯಲ್ ಆಟರ್ಸನ್ ಎಂದು ಇದ್ದಿತು!

ಈ ಪರಿವರ್ತನೆಯ ಅರ್ಥವಾಗದೇ, ಒಮ್ಮೆ ಪೂಲನ ಕಡೆಗೆ, ಮತ್ತೊಮ್ಮೆ ಕೆಳಕ್ಕೆ ಬಿದ್ದಿದ್ದ ಹೈಡ್‌ನ ಶವದ ಕಡೆಗೆ ನೋಡಿದೆ.

ನನಗಾದ ಆಶ್ಚರ್ಯವೇನೆಂದರೆ, ಈ ಸುಧಾರಿತ ಮೃತ್ಯುಪತ್ರವು ಇಷ್ಟು ದಿನ ಸುರಕ್ಷಿತವಾಗಿ ಆ ಸ್ಥಳದಲ್ಲಿ ಉಳಿಯಿತಾದರೂ ಹೇಗೆ? ಹೈಡ್ ನನ್ನ ಹಿತ ಚಿಂತಕನೇನಲ್ಲ. ಅದೂ ಅವನ ಹೆಸರನ್ನು ತೆಗೆದು ಹಾಕಿ ಅವನ ಕೈಗೆ ದೊರೆಕಿದ್ದ ೨೫ ಸಾವಿರ ಪೌಂಡುಗಳ ದೊಡ್ಡ ಆಸ್ತಿಯನ್ನು ಕಸಿದುಕೊಂಡು ಇನ್ನೊಬ್ಬರಿಗೆ ಕೊಡಲಾದ ಆ ಮೃತ್ಯುಪತ್ರವನ್ನು ಹೈಡ್ ಉಳಿಯಗೊಟ್ಟನಾದರೂ ಹೇಗೆ?

ಈ ಹೊಸ ಉಯಿಲನ್ನು ಡಾ. ಜೆಕಿಲ್ ಅದೆಂದು ಬರೆದನೆಂಬುದನ್ನು ಪರಿಶೀಲಿಸುತ್ತೇನೆ; ಇಂದಿನದೇ ತಾರೀಖು!! ಅಂದರೆ ಡಾ. ಜೆಕಿಲ್ ಆ ದಿನ ಬೆಳಗಿನವರೆಗೆ ಅಲ್ಲಿಯೇ ಇದ್ದನೆಂದಂತಾಯಿತಲ್ಲ? ಮತ್ತೆ ಈಗೆಲ್ಲಿ ಕಣ್ಮರೆಯಾದದು? ನನಗಂತೂ ದಿಗ್ಭ್ರಮೆಯಾಗಿ

ಬಿಟ್ಟಿತು. ಪೂಲನದೂ ಅದೇ ಸ್ಥಿತಿ. ಡಾ. ಜೆಕಿಲ್ ಈ ಗಳಿಗೆಗೂ ಜೀವಂತವಿರಬಹುದೆಂದೇ ನಮಗೆ ಭಾಸವಾಯಿತು; ಆಸೆ ಹುಟ್ಟಿತು. ಹಾಗಿದ್ದರೆ ಈಗೆಲ್ಲಿ? ಓಡಿ ಹೋಗಿದ್ದರೆ! ಹಾಗೆ ಹೋದದ್ದೇಕೆ?

'ಈ ಪಾಕೀಟಿನಲ್ಲಿದ್ದ ಬೇರೆ ಕಾಗದ ಪತ್ರಗಳನ್ನೂ ನೋಡಿರಲ್ಲ? ಅದರಲ್ಲೇನಾದರೂ ಸುಳುವು ಸಿಕ್ಕಬಹುದು'' ಎಂದ ಪೂಲ್.

ಆ ಕಾಗದಗಳಲ್ಲಿ ಅತಿ ದೊಡ್ಡದಾದ ಒಂದು ಪತ್ರ, ಅದು ಕೂಡಾ ಅವತ್ತಿನ ತಾರೀಖಿನದೇ ದೊರೆಯಿತು. ಡಾ. ಜೆಕಿಲ್ ಸ್ವಯಂ ನನಗೆ ಬರೆದ ಸುದೀರ್ಘ ಪತ್ರವದು. ಅದನ್ನು ಓದಿದಾಗಲೇ ನನಗೆ ಡಾ. ಜೆಕಿಲ್ ಮತ್ತು ಹೈಡ್ ಇವರ ಬದುಕಿನ ರಹಸ್ಯವು ತಿಳಿದು ಬಂದದ್ದು.

೪

''ನನ್ನ ಪ್ರಿಯ ಅಟರ್ಸನ್,

ಕಳೆದ ಎಂಟು ದಿನಗಳಿಂದಲೂ ಒದ್ದಾಡುತ್ತಿದ್ದೇನೆ. ನಾನು ಸಿಕ್ಕಿಕೊಂಡ ಈ ಘೋರ ವಿಪತ್ತಿನಿಂದ ಪಾರಾಗುವುದು ಎಂಥ ಮಾತೋ ಏನೋ? ಅಂತೆಯೇ ನಿಜ ಸಂಗತಿಯನ್ನು, ಕಳೆದ ಹಲವಾರು ವರ್ಷಗಳಿಂದ ನಾನು ಬಿಚ್ಚಿಟ್ಟುಕೊಂಡಿದ್ದ ಈ ರಹಸ್ಯ ಘಟನೆಯನ್ನು ಈಗ ಹೇಳಿ ಬಿಡುತ್ತಿದ್ದೇನೆ. ನಿನ್ನಂಥ ಆಪ್ತ ಮಿತ್ರನಿಗೆ ಹೇಳದೇ ಇನ್ನಾರಿಗೆ ಹೇಳಲಿ? ನಿನಗಂತೂ ನಾನು ಅನೇಕ ಬಗೆಯಿಂದ ತೊಂದರೆ ಕೊಟ್ಟಿದ್ದೇನೆ. ಹೀಗಿದ್ದರೂ ನಾನು ವಿಪತ್ತಿನಲ್ಲಿ ಸಿಕ್ಕಿರುವೆನೆಂದಾಕ್ಷಣ ನೀನು ಸಹಾಯಕ್ಕೆ ಧಾವಿಸುತ್ತೀ ಎಂಬುದನ್ನು ನಾನು ಬಲ್ಲೆ. ಆದರೆ ಪರಿಸ್ಥಿತಿ ವಿಕೋಪಕ್ಕೆ ಹೋಗಿದೆ. ನೀನಾಗಲೀ ಯಾರೇ ಆಗಲಿ ನನಗೆ ಸಹಾಯಮಾಡಿ ನನ್ನನ್ನು ಪಾರುಮಾಡಿ ಮತ್ತೆ ಬದುಕಿಸಲಾರಿರಿ. ನಾನೇ ತಂದುಕೊಂಡ ವಿಪನ್ನಾವಸ್ಥೆಯಿದು....

ಹೇರಳ ಪಿತ್ರಾರ್ಜಿತ ಆಸ್ತಿಯಿದ್ದು ನನಗೆ ಈ ವೈದ್ಯಕೀಯ ವೃತ್ತಿಯಿಂದ ಹಣ ಗಳಿಸಬೇಕಾದ್ದೇನೂ ಇರಲಿಲ್ಲವೆಂಬುದನ್ನು ನೀ ಬಲ್ಲೆ. ನನಗೆ ವೈದ್ಯಕೀಯ ಕ್ಷೇತ್ರದಲ್ಲಿಯ ಹೊಸ ವೈಜ್ಞಾನಿಕ ಪ್ರಯೋಗಗಳಲ್ಲಿ ಆಸಕ್ತಿ ಬಹುಕಾಲದಿಂದ ಇದ್ದಿತೆಂಬುದೂ ನಿನಗೆ ತಿಳಿದ ವಿಷಯ.

ಆದರೆ ನಿನಗೆ ನಿಕಟವಾಗಿ ಗೊತ್ತಿರದ ಸಂಗತಿಯೊಂದಿದೆ. ಅದೆಂದರೆ ನನ್ನ ಐಷಾರಾಮೀ ಜೀವನ. ನಾನು ಸ್ವತಂತ್ರವಾಗಿ ಇರತೊಡಗಿದ ತರುಣ ಕಾಲದಲ್ಲಿಯೇ ನಾನೊಬ್ಬ ಹಣವಂತ, ಬುದ್ಧಿವಂತ ಮತ್ತು ಸುಸ್ವಭಾವಿ ಎಂಬ ಪದವಿಗಳು ಬಂದು ಬಿಟ್ಟವು. ಬಲು ಬೇಗ ನಾನು ಸಮಾಜದಲ್ಲಿ ಗಣ್ಯ ವ್ಯಕ್ತಿಯಾಗಿ ಬಿಟ್ಟೆ.

ಆದರೆ ನನಗೂ ಚೈನಿ ಮಾಡಬೇಕು, ಕ್ಲಬ್‌ಗಳಿಗೆ ಹೋಗಬೇಕು, ಕುಡಿಯಬೇಕು, ಇಸ್ಪೀಟು ಆಡಬೇಕು, ಹುಡುಗಿಯರೊಡನೆ ಸರಸವಾಡಬೇಕು ಎಂದೆಲ್ಲ ಅಪೇಕ್ಷೆ! ಹಿರಿಯರ

ವಿಷಯದಲ್ಲಿ ಗೌರವ, ದಲಿತರ ವಿಷಯದಲ್ಲಿ ಅನುಕಂಪ, ಸ್ನೇಹಿತರೊಡನೆ ಸರಸವೃತ್ತಿ ಇನ್ನೊಬ್ಬರಿಗೆ ನೆರವಾಗಬೇಕೆನ್ನುವ ಸಹಜಭಾವ–ಇವೇ ಮುಂತಾದ ಒಳ್ಳೆಯ ಗುಣಗಳ ಜೊತೆಗೆ ಕಾಮ, ಕ್ರೋಧ, ಮದಮತ್ಸರಾದಿಗಳೂ ಅಷ್ಟೇ ಸಹಜವಾಗಿ ನನ್ನಲ್ಲಿ ಮೇಲೆದ್ದು ಬರುತ್ತಿದ್ದವು. ಇವುಗಳನ್ನು ಮನಸ್ಸಿನೊಳಗಿಟ್ಟು ಸೊಗಸುಗಾರನಂತೆ, ಕದ್ದು ಮುಚ್ಚಿ ಮಾಡುವಾಗ ಯಾರಾದರೂ ನನ್ನನ್ನು 'ಉದಾರ ಹೃದಯದ ದೊಡ್ಡ ಮನುಷ್ಯ' ಎಂದು ಕರೆದದ್ದಾದರೆ ನನಗೆ ನಾಚಿಕೆಯೆನಿಸುತ್ತಿದ್ದಿತು! ಹೀಗಾಗಿ ಒಳಗೊಂದು, ಹೊರಗೊಂದು ಎಂಬ ವೃತ್ತಿ ತಾನಾಗಿಯೇ ನನ್ನಲ್ಲಿ ಮೈದಾಳಿತು.

ಹಾಗೆಂದು ನಾನು ಆಷಾಢಭೂತಿಯಾಗಿರಲಿಲ್ಲ. ಒಳ್ಳೆಯದನ್ನು ಆಡುವಾಗ, ಮಾಡುವಾಗ ನನ್ನಲ್ಲಿರುವ ಕೆಟ್ಟತನವು ಕೊಳೆತ ಮುಳ್ಳಿನಂತೆ ಅಳಕುತ್ತಿದ್ದಿತು. ಕೆಟ್ಟದ್ದನ್ನು ಮಾಡುತ್ತಿರುವಾಗ ನನ್ನಲ್ಲಿಯ ಒಳ್ಳೆಯತನ ಅಡ್ಡಿ ಬರುತ್ತಿದ್ದಿತು. ಹೀಗಾಗಿ ಒಳ್ಳೆಯದು—ಕೆಟ್ಟದು ಎಂಬುದರ ಧರ್ಮಸಂಕಟಕ್ಕೆ ಸಿಕ್ಕಿ ನಾನು ನಿತ್ಯವೂ ತೊಳಲಾಡುತ್ತಿದ್ದೆ. ಆಗ ನನಗೆ ಗೋಚರವಾದ ನಿತ್ಯ ಸಂಗತಿಯೆಂದರೆ, ಮನುಷ್ಯನು ನಿಜವಾಗಿ ಒಂದೇ ವೃತ್ತಿ—ಚೇತನದವನಲ್ಲ, ಅವನು ಒಳ್ಳೆಯತನ, ಕೆಟ್ಟತನ ಎಂಬೆರಡು ಅಂಶಗಳ ಸಮ್ಮಿಶ್ರವಾಗಿದ್ದಾನೆ—ಎಂಬುದು. ಯಾರನ್ನೂ ನಾವು ಪ್ರತ್ಯೇಕವಾಗಿ 'ಈತ ಕೇವಲ ಒಳ್ಳೆಯವನೇ, ಕೆಟ್ಟವನಲ್ಲ' ಎಂದು ಹೇಳುವುದು ತಪ್ಪಾಗುತ್ತದೆ. ಯಾಕೆಂದರೆ ಈ ಎರಡೂ ಅವನಲ್ಲಿ ಒಂದಕ್ಕೊಂದು ಹೊಸೆದುಕೊಂಡು ಬಿಟ್ಟಿರುತ್ತವೆ. ಅದರಂತೆ 'ಕೆಟ್ಟ' 'ದುಷ್ಟ' ಎಂದು ಯಾರನ್ನು ನಾವು ಖಚಿತವಾಗಿ ಕರೆಯಬಹುದೋ, ಅವನಲ್ಲಿಯೇ ಹಲವಾರು ಸದ್ಗುಣಗಳನ್ನು ಎತ್ತಿ ತೋರಬಹುದಲ್ಲವೆ?

ಹಾಗಿದ್ದರೆ ಇವೆರಡೂ ಅಂಶಗಳು ನಮ್ಮ ದೇಹದಲ್ಲಿ ಅದೆಂತು ಹಾಸುಹೊಕ್ಕಾಗಿವೆ? ಅವುಗಳ ಗುಣಧರ್ಮಗಳೇನು? ಅವುಗಳ ಮೂಲವೆಲ್ಲಿ? ಅವುಗಳನ್ನು ಬೇರ್ಪಡಿಸುವುದು ಸಾಧ್ಯವೆ? ಹಾಗೆ ಸಾಧ್ಯವಾದದ್ದೇ ಆದರೆ—ನಾವು ಮಾನಸಿಕವಾಗಿ ಇಷ್ಟೊಂದು ತೊಳಲಾಡುತ್ತೇವಲ್ಲ—ಅದೆಲ್ಲವೂ ಹೋಗಿ, ನಮ್ಮ ಬದುಕಿನಲ್ಲಿಯೂ ಸಮಾಜದಲ್ಲಿಯೂ ಶಾಂತಿ, ನೆಮ್ಮದಿಗಳುಂಟಾಗಬಹುದಲ್ಲವೆ?

ನನಗೆ ಭೌತಿಕ ಮತ್ತು ಅಧಿಭೌತಿಕ ಇವುಗಳಲ್ಲಿಯ ಸಂಬಂಧದ ಕುರಿತು ಮೊದಲಿನಿಂದಲೂ ಜಿಜ್ಞಾಸೆ. ಪರಕಾಯ ಪ್ರವೇಶದಂಥ ಅ–ವೈಜ್ಞಾನಿಕ ವಿಷಯದಲ್ಲಿಯೂ ನನಗೆ ನಂಬುಗೆಯಿದೆ. ಲೆನ್ಯನ್‌ನೊಡನೆ ಚರ್ಚಿಸಬಯಸಿದೆ. ಆದರೆ ಆತ ಆಸಕ್ತಿ ತೋರಿಸಲಿಲ್ಲವಷ್ಟೇ ಅಲ್ಲ; ಚೆನ್ನಾಗಿ ಬೈದುಬಿಟ್ಟ. ಆಗಲಿ; ಪ್ರಯೋಗಗಳಿಂದ ಸಿದ್ಧಮಾಡಿ ಒಮ್ಮೆ ಅವನಿಗೆ ಮನಗಾಣಿಸಿ ಕೊಡಲೇಬೇಕು ಎಂಬ ಈರ್ಷಾಭಾವ ಮೂಡಿತು. ಇದು ಹಲವಾರು ವರ್ಷಗಳ ಹಿಂದಿನ ಮಾತಾಯಿತು. ಇರಲಿ.

ಈ ವಿಷಯದಲ್ಲಿ ಅದೆಂತು ಪ್ರಯೋಗಗಳನ್ನು ಕೈಕೊಳ್ಳುವುದು? ಎಲ್ಲವೂ ಹೊಸತು ಆದರೂ ಆರಂಭಿಸಿದೆ. ಗುಣಾವಗುಣಗಳಿಗೆ ಹೊರಗಿನ ಪರಿಸರಕ್ಕಿಂತ ದೈಹಿಕ ರಚನಾವಿಶೇಷವೂ ಕಾರಣವಾಗಿದೆಯೆಂಬ ಸೂತ್ರವನ್ನು ಗಮನದಲ್ಲಿಟ್ಟುಕೊಂಡೆ.

ದೇಹವೆಂಬುದು ಒಂದು ರಾಸಾಯನಿಕ ಕ್ರಿಯೆಯಷ್ಟೆ? ನಮ್ಮ ಚೇತನ, ವೃತ್ತಿಗಳನ್ನು ರೂಪಿಸುವ ರಾಸಾಯನಿಕ ಘಟಕಗಳಾವಾವೆಂಬುದನ್ನು ಪರಿಶೋಧಿಸತೊಡಗಿದೆ.

ಇಲ್ಲ, ಇದಕ್ಕೂ ಹೆಚ್ಚು, ನಿನಗೆ ಈ ವೈಜ್ಞಾನಿಕ ವಿಷಯವನ್ನು ವಿವರಿಸಹೋಗುವುದಿಲ್ಲ. ಮೇಲಾಗಿ ಇದಿನ್ನೂ ಪ್ರಯೋಗಾವಸ್ಥೆಯಲ್ಲೇ ಇದೆ. ನನ್ನ ಲೆಬೊರೇಟರಿಯಲ್ಲಿಯ ಪ್ರಯೋಗಗಳಿಂದ ನಾನು ಕಂಡುಕೊಂಡ ಒಂದು ಮುಖ್ಯ ಮಾತೆಂದರೆ, ಯಾವುದೊಂದು ಒಳ್ಳೆಯ ಅಥವಾ ಕೆಟ್ಟದೆನ್ನುವ ಕಾರ್ಯಕ್ಕೆ ಉದ್ಯುಕ್ತನಾಗುವಾಗ ಒಳಗಿನಿಂದ ಒಂದು ಬಗೆಯ ಒತ್ತಡ ಉಂಟಾಗುವುದಷ್ಟೆ. ಅದೊಂದೆ ಘಟಕವು ಮೇಲೆದ್ದು ಬರುವಾಗ ಉಳಿದ ಅಥವಾ ಅದಕ್ಕೆ ವಿರುದ್ಧವಾದ ಘಟಕಗಳು ನಿವ್ನವಾಗಿ ಮುದುಡಿ ಹಿಂದುಳಿದು ಬಿಡುತ್ತವೆ—ಎಂಬುದು.

ಹಾಗಿದ್ದರೆ ಕೆಲ ಔಷಧಿಗಳಿಂದ ಅವನ್ನು ಸಂಪೂರ್ಣವಾಗಿ ಕಟ್ಟಿಹಾಕಲು ಸಾಧ್ಯವಿಲ್ಲವೇಕೆ?—ಎಂದು ಯೋಚಿಸಿದೆ. ವರ್ಷಗಟ್ಟಲೆ ಅವುಗಳ ಗುಣಸಾಂದ್ರತೆಯನ್ನು ಒರೆಗೆ ಹಚ್ಚಿ ಕೊನೆಗೊಮ್ಮೆ ಒಂದು ರಾಸಾಯನಿಕ ಔಷಧವನ್ನು ಸಿದ್ಧಗೊಳಿಸಿದೆ. ಅದರಿಂದ ಮನುಷ್ಯನಲ್ಲಿಯ ಮೇಲ್ಮಟ್ಟದ ಚೇತನವನ್ನೆಲ್ಲ ಸಂಪೂರ್ಣ ತಡೆಹಿಡಿದು, ಕೇವಲ ಕೆಳಭಾವನೆಗಳನ್ನು ರೂಪಿಸುವ ಘಟಕಗಳಷ್ಟೇ ಕ್ರಿಯಾಬದ್ಧವಾಗುವುದು ಸಾಧ್ಯವೆನಿಸಿತು.

ಇನ್ನಿದು ಯಶಸ್ವಿಯಾದದ್ದಾದರೆ, ಅದಕ್ಕೆ ವಿರುದ್ಧವಾಗಿ ಕೆಟ್ಟ ಭಾವನೆಗಳನ್ನೆಲ್ಲ ಮೂಲೆಗೊತ್ತಿ ಕೇವಲ ಒಳ್ಳೆಯ ಭಾವನೆಗಳಷ್ಟೇ ಮೇಲೆದ್ದು ಬರುವ ಔಷಧಿಗಳನ್ನೂ ಸಂಯೋಜಿಸಬಹುದೆಂದುಕೊಂಡೆ.

ಆದರೆ ಮೊದಲಿನ ಹಂತದಲ್ಲಿಯೇ ನಾನು ಯಶಸ್ವಿಯಾಗಿದ್ದೇನೆಂದು ಹೇಗೆ ತಿಳಿಯುವುದು? ಸಿದ್ಧಗೊಳಿಸಿದ ಔಷಧವನ್ನು ಯಾರ ಮೇಲೆ ಪ್ರಯೋಗಿಸಬೇಕು? ನನ್ನ ಮೇಲೇ ಪ್ರಯೋಗಿಸಿ ನೋಡಬೇಕು!

ನಾನು ಹೆದರಿದೆ. ಯಾಕೆಂದರೆ ನಾನು ಬಳಸಿದ ರಸಾಯನಗಳು ಅತ್ಯಂತ ತೀಕ್ಷ್ಣವಾಗಿದ್ದುವು. ಒಳಗಿನ ದೇಹಾಂಗಗಳನ್ನೆ ವ್ಯಸ್ತಗೊಳಿಸುವಷ್ಟು ಸಾಮರ್ಥ್ಯವುಳ್ಳವು. ಆದರಿಂದ ನನ್ನ ಪ್ರಾಣವೇ ಹೋಗಬಹುದೆಂದು ಭಾವಿಸಿ ಕೆಲ ದಿನ ತಡೆದೆ. ಆದರೆ ಹೊಸತೊಂದನ್ನು ಶೋಧನೆ ಮಾಡಿದುದರ ಉತ್ಸಾಹವು ಅದಮ್ಯವೆನಿಸಿತು.

ಒಂದು ಮಿಶ್ರಣವಂತೂ ಸಿದ್ಧವಾಗಿಯೇ ಇದ್ದಿತು. ಅದಕ್ಕೆ ಬೇರೊಂದು ಲವಣವನ್ನು ಬೆರೆಸಿ, ಆ ಔಷಧಿಯನ್ನು ಸೇವಿಸಿದರಾಯಿತು. ಹಾಗೆಂದು ಒಂದು ರಾತ್ರಿ—ಅದು ನನ್ನ ಬದುಕಿನ ಕಾಳರಾತ್ರಿಯೇ ಸೈ—ಸಿದ್ಧವಾಗಿದ್ದ ಆ ಮಿಶ್ರಣಕ್ಕೆ, ಲವಣವನ್ನು ಸೇರಿಸಿದೆ. ಅದು ಕತಕತನೆ ಕುದಿಯತೊಡಗಿತು. ಕುದಿನಿಂತ ಮೇಲೆ, ಆ ಪೇಲೆಯನ್ನು ಮೇಲೆತ್ತಿದೆ. ನನ್ನ ಕೈಗಳು ಥರಥರನೆ ನಡುಗುತ್ತಿದ್ದವು.... ಕಣ್ಣುಮುಚ್ಚಿ ಕುಡಿದು ಬಿಟ್ಟೆ.

ಉರಿ! ನಖಶಿಖಾಂತ ದೇಹದೊಳಗೆ ಉರಿ ಹತ್ತಿದಂತಾಯಿತು. ಮಾಂಸ, ಸ್ನಾಯುಗಳು ಬೇಯುತ್ತಿರುವಂತೆ ಎಲುವುಗಳು ಕರಗುತ್ತಿದ್ದಂತೆ ಭಾಸವಾಯಿತು. ಬಾಯಿಯಲ್ಲಿ ವಾಕರಿಕೆ

ಬಂತು. ನಾನು ಗಡಗಡನೆ ನಡುಗುತ್ತಲಿದ್ದೆ. ಆ ಗಳಿಗೆಗೆ ನಾನು ಸತ್ತೇ ಹೋಗುವೆನೆಂದು ನಂಬಿಬಿಟ್ಟೆ.

ದೈವಬಲ. ಹಾಗೇನಾಗಲಿಲ್ಲ. ದೀರ್ಘಬೇನೆಯಿಂದ ಅದೇ ಗುಣವಾದಂತೆ ನನಗನಿಸಿ, ಒಳಗಿನ ವೇದನೆ ನಿಂತಿತು. ದೈಹಿಕವಾಗಿ ನಾನು ಹೆಚ್ಚು ಎಳೆಯನಾಗಿ, ಹಗುರಾಗಿದ್ದಂತೆ ತೋರಿತು. ಸ್ವಾತಂತ್ರ್ಯ! ನಾನು ಯಾವುದೂ ಬಂಧನದಿಂದ ಮುಕ್ತನಾದ ಅನುಭವವನ್ನು ಹೊಂದಿದೆ. ನನ್ನ ಪಂಚೇಂದ್ರಿಯಗಳಿಗೆ ಹೊಸ ಶಕ್ತಿ ಬಂದಿತು! ಅವು ನನ್ನ ಮೂಲದ ದುರ್ಭಾವನೆಗಳಿಗೆ ಅಧೀನವಾಗಿ ಅತ್ತಿತ್ತ ಹರಿದಾಡಿ, ಹೊರನುಗ್ಗಲು ಯತ್ನಿಸುತ್ತಿದ್ದುದರ ಅರಿವು ಮೂಡಿತು. ಆ ಭಾವದಲ್ಲಿಯೇ ನನ್ನ ಕೈಗಳನ್ನು ನೋಡಿಕೊಂಡೆ. ಆದರೆ ಅವು ನನ್ನ ಕೈಗಳಂತೆ ನನಗನಿಸಲೇ ಇಲ್ಲ. ಅವು ಆಕಾರದಲ್ಲಿ ಚಿಕ್ಕವು! ಅರೆ, ಇದು ಹೇಗಾಯಿತು ಎಂದು ಧೇನಿಸಿದೆ.

ಆ ಸಮಯಕ್ಕೆ ಲೆಬೊರೇಟರಿಯಲ್ಲಿ ಕನ್ನಡಿ ಇರಲಿಲ್ಲ. ಈಗಿರುವ ಕನ್ನಡಿಯನ್ನು ಆಮೇಲೆ ತಂದು ಹಾಕಿದುದು. ನನ್ನ ದೇಹಾಕಾರದಲ್ಲಿ ಆದ ಬದಲಾವಣೆಯನ್ನು ಕಂಡುಕೊಳ್ಳಬೇಕೆಂದು ಮೆಲ್ಲನೆ ಹೊರಬಂದೆ. ಆಗ ಮಧ್ಯರಾತ್ರಿಯ ಸಮಯ ದಾಟಿ ಒಂದೆರಡು ತಾಸು ಕಳೆದಿರಬೇಕು. ಮನೆಯಲ್ಲಿರುವವರೆಲ್ಲ ಸುಖನಿದ್ರೆಯಲ್ಲಿ ಲೋಲಾಡುತ್ತಿದ್ದರು. ವಿಜಯೋತ್ಸಾಹದಿಂದ ನಾನು ಮಲಗುವ ಕೋಣೆಯವರೆಗೆ ನಡೆದುಕೊಂಡು ಹೋದೆ. ನನ್ನದೇ ಮನೆ; ನನ್ನದೇ ಕೋಣೆ. ಆದರೆ ಆ ಸ್ವರೂಪದಲ್ಲಿ ನಾನು ಅಪರಿಚಿತನಾಗಿದ್ದೆ.

ಮಲಗುವ ಕೋಣೆಗೆ ಬಂದವನೇ ಬಾಗಿಲಿಕ್ಕಿಕೊಂಡು, ಕನ್ನಡಿಯಲ್ಲಿ ನೋಡುತ್ತೇನೆ, ನನ್ನ ಮೂಲಸ್ವರೂಪವು ಸಂಪೂರ್ಣ ಬದಲಾಗಿ ಬಿಟ್ಟಿದೆ! ಡಾ. ಜೆಕಿಲ್ಲನ ಆಕೃತಿ, ಆಕಾರಗಳ ಕಿಂಚಿದಂಶವೂ ತಪ್ಪಿ ಕೂಡಾ ಸಿಗುವಂತಿಲ್ಲ! ಈ ವ್ಯಕ್ತಿ ಬೇರೆಯಾಗಿ ಕಂಡ. ಅವನಿಗೆ ಆ ಗಳಿಗೆಗೆ ಮನಸ್ಸಿಗೆ ತೋಚಿದ ಎಡ್ವರ್ಡ್ ಹೈಡ್ ಎಂಬ ಹೆಸರನ್ನಿಟ್ಟೆ.

ಆಶ್ಚರ್ಯವೆಂದರೆ ಹೈಡ್ ಆಕಾರದಲ್ಲಿ ನನಗಿಂತ ಕುಳ್ಳನಾದುದು. ಬಹುಶಃ ನನ್ನಲ್ಲಿಯ ಕೆಟ್ಟತನವು ಒಳ್ಳೆಯತನದಷ್ಟು ಬೆಳೆದಿರಲಿಲ್ಲವೆಂಬ ಕಾರಣದಿಂದ ಹೀಗಾಗಿರಬೇಕೆಂದು ಕೊಂಡೆ.

ಅವನ ಮುಖವೂ! ಅದರಲ್ಲಿ ಸದ್ಭಾವನೆಯ, ಸೌಜನ್ಯದ ಒಂದು ಎಳೆಯನ್ನು ಕೂಡಾ ಕಾಣುವಂತಿರಲಿಲ್ಲ. ಯಾರೇ ಆಗಲಿ ಅವನನ್ನು ಕಂಡರೆ ಸಾಕು. ತಕ್ಷಣ ಜಿಗುಪ್ಸಾಭಾವವನ್ನು ಕೆರಳಿಸುವಂತಿತ್ತು. ಆದರೆ ಈ ಗಳಿಗೆಗೆ ನನ್ನ ಮನಸ್ಸಿಗೆ ಹಾಗನೆನಿಸಲಿಲ್ಲ. ಎಷ್ಟೆಂದರೂ ಆ ವ್ಯಕ್ತಿ ಅದನ್ನು ರೂಪಿಸಿದ ಅಂಶಗಳು– ಅವು ನನಗೆ ಪರಿಚಿತವೇ. ನನ್ನಲ್ಲಿ ಇದ್ದವುಗಳೇ. ಅಂದ ಮೇಲೆ ಬೇಸರಿಸಲೇಕೆ? ಬದಲಾಗಿ ನಾನು ಯಾವುದೋ ಬಂಧವಿಮೋಚನೆಯ ಸುಖವನ್ನು ಅನುಭವಿಸುತ್ತಿದ್ದೆ. ಆ ರೂಪದಲ್ಲಿ ನಾನು ಏನು ಬೇಕಾದರೂ ಮಾಡಬಹುದು. ಯಾವುದಕ್ಕೂ ಹೆದರುವ ಅಗತ್ಯವೇ ಇಲ್ಲ. ಸ್ವಚ್ಛಂದ!.... ಸ್ವೇಚ್ಛಾಚಾರ!

ನಾನು ಕನ್ನಡಿಯಲ್ಲಿ ಆ ರೂಪವನ್ನು ನೋಡುತ್ತ ಹಾಗೇ ನಿಂತಿದ್ದೆ. ಮಾನವರೆಲ್ಲ ಒಳಿತು– ಕೆಡಕುಗಳ ಸಮ್ಮಿಶ್ರ ರೂಪದಲ್ಲಿದ್ದವರಾದರೆ; ಇವನೊಬ್ಬ ಅಲ್ಲ, ನಾನೇ ಈ ಗಳಿಗೆಗೆ ಕೆಟ್ಟತನದ, ಶುದ್ಧ ಹಾಗೂ ಸಂಪೂರ್ಣವಾದ ಕೆಡುಕಿನ ಸಾಕಾರ ಮೂರ್ತಿಯಾಗಿದ್ದೆ!

ಆಗ ನನಗೆ ಹೊಸತೊಂದು ಹೆದರಿಕೆ ಮೂಡಿತು. ಇದೆಲ್ಲ ಸರಿ! ನಾನು ನನ್ನ ಮೊದಲಿನ ರೂಪ, ಮೊದಲಿನ ವ್ಯಕ್ತಿತ್ವವನ್ನು ಮರಳಿ ಪಡೆಯಬಹುದೆ? ಪಡೆಯದಿದ್ದರೆ ಮುಂದೆ ನನ್ನ ಗತಿ?.... ಕೂಡಲೇ ಲೆಬೊರೇಟರಿಗೆ ಓಡಿದೆ. ಮತ್ತೆ ಆ ಮಿಶ್ರಣಕ್ಕೆ ಲವಣವನ್ನು ಬೆರೆಸಿದೆ. ಒಂದು ನಿಮಿಷ ತಡೆದವನೆ ಧೈರ್ಯದಿಂದ ಕುಡಿದುಬಿಟ್ಟೆ.

ಆಯಿತು. ಮತ್ತೊಮ್ಮೆ ನನಗೆ ಅದೇ ಉರಿಯ ವೇದನೆಯ ಅನುಭವವಾಯಿತು. ಕಾಳಕೂಟ ವಿಷವನ್ನು ಸೇವಿಸಿದವನಂತೆ ಸಹಿಸಿಕೊಂಡೆ. ತುಸು ಹೊತ್ತಿನ ಮೇಲೆ ಅದು ನಿಂತಿತು. ಮಿಶ್ರಣ ಪುನಃ ನನ್ನನ್ನು ಜೆಕಿಲ್‌ನನ್ನಾಗಿ ಪರಿವರ್ತಿಸಿತ್ತು!

ಆ ಅದ್ಭುತ ಸಾಧನೆಯ ಉನ್ಮಾದದಲ್ಲಿ ನಾನು ಕೇಕೆ ಹಾಕಿದೆ. ಅಹ್ಹಾ! ಬೇಕೆಂದಾಗ ನಾನು ಹೈಡನಾಗಬಹುದು. ನನ್ನ ಕೆಳ ತರಗತಿಯ ಇಚ್ಛೆಗಳನ್ನೆಲ್ಲ ಪೂರೈಸಿಕೊಂಡು, ಪುನಃ ಒಂದೇ ಮಿನಿಟಿನಲ್ಲಿ ಸಭ್ಯಗೃಹಸ್ಥನಾಗಿ ಬಿಡಬಹುದು. ಯಾರಿಗೂ ಗೊತ್ತಾಗುವದಿಲ್ಲ, ಜಗತ್ತನ್ನು ಈ ರೀತಿಯಾಗಿ ವಂಚಿಸಬಹುದಲ್ಲ! ಮೋಜು ಮಾಡಬಹುದು.

ನನ್ನ ಜೀವದ ಪ್ರತ್ಯಂಗವಾದ ಹೈಡನಿಗೆ ಎಲ್ಲ ವ್ಯವಸ್ಥೆಯಾಗಬೇಕಲ್ಲವೇ? ಅದಕ್ಕಾಗಿ ನಮ್ಮ ಮನೆಯ, ಹಿಂದಿನ 'ಸೋಹೋ' ವಸತಿಯಲ್ಲಿ ಅವನಿಗಾಗಿ ಒಂದು ಮನೆ ಹಿಡಿದೆ. ಅಲ್ಲಿ ಫರ್ನಿಚರಿನ ವ್ಯವಸ್ಥೆ ಮಾಡಿದೆ. ಅವನ ಆಕಾರದ ಬಟ್ಟೆಗಳನ್ನು ಹೊಲಿಸಿದೆ. ಆ ರೂಪದಲ್ಲಿ ನಾನು ಲೆಬೊರೇಟರಿಗೆ ಬಂದರೆ ಯಾರೂ ಅಡ್ಡಿ ಮಾಡಬಾರದಲ್ಲವೇ? ಆ ಬಗ್ಗೆ ನನ್ನ ಸೇವಕರಿಗೆ ತಾಕೀತು ಮಾಡಿದೆ.

ದಿನಗಳೆದಂತೆ ನಾನು ಮೇಲಿಂದ ಮೇಲೆ ಹೈಡನ ರೂಪವನ್ನು ಧಾರಣ ಮಾಡತೊಡಗಿದೆ. ಈ ಬಗೆಯ ಪರಕಾಯ ರೂಪಧಾರಣೆಯು ನನಗೆ ಅತಿ ಸಹಜ, ಅತಿ ಸುಲಭವಾಗಿಬಿಟ್ಟಿತು.

ನನ್ನ ದ್ವಂದ್ವ ಜೀವನದ ಎಲ್ಲ ವ್ಯವಸ್ಥೆಯನ್ನು ಸರಿಯಾಗಿ ಮಾಡಿದ್ದಾಗ, ಒಂದು ಸಲ ಸಿಕ್ಕಿಬಿದ್ದು ಬಿಟ್ಟೆ. ಅದೂ ನಿನ್ನ ಸಂಬಂಧಿಕನ ಕೈಯಲ್ಲಿ! ಆ ಹುಡುಗಿಯನ್ನು ತುಳಿದಾಗ, ಅವರೆಲ್ಲ ನನ್ನ ಬೆನ್ನು ಹತ್ತಿ ಬಂದರಷ್ಟೆ. ಆಗ ನಾನು ಅದೆಷ್ಟು ಹೆದರಿದ್ದೆ? ನನ್ನ ಗುಟ್ಟು ರಟ್ಟಾದೀತು ಎಂಬ ಭಯವೊಂದು ಕಡೆ. ನನ್ನ ಮೊದಲಿನ ರೂಪ–ವ್ಯಕ್ತಿತ್ವಗಳಿಗೆ ಹಿಂತಿರುಗುವ ಅವಕಾಶವೇ ಸಿಗದಿದ್ದರೆ—ಎಂಬ ಭಯವೂ ಇದ್ದಿತು. ಅದು ಕಾರಣವೇ ಅವರು ಕೇಳಿದಷ್ಟು ಹಣ ಕೊಡಲು ನಾನು ಸಿದ್ಧನಾದುದು. ಆದರೆ ಹಣವಿರಲಿಲ್ಲ, ಚೆಕ್ಕಿನ ಮೇಲೆ ನಾನು ಜೆಕಿಲ್ ಎಂದು ಸಹಿ ಮಾಡುತ್ತಲೂ ನಿನ್ನ ಸಂಬಂಧಿಕ ಗಲಾಟೆ ಮಾಡಿದ. ಆದರೆ ಹೇಗೂ ಆ ಪ್ರಕರಣ ಅಲ್ಲಿಗೇ ಮುಗಿಯಿತು. ಇನ್ನು ಮುಂದೆ ಇಂಥ ಪ್ರಸಂಗಬರಬಾರದೆಂದೇ, ಹೈಡನ ಹೆಸರಲ್ಲಿಯೂ ಬ್ಯಾಂಕಿನಲ್ಲಿ ಸಾಕಷ್ಟು ಹಣವನ್ನಿಟ್ಟೆ.

ಜೆಕಿಲ್ಲನಾಗಿ ನಾನುಕೆಟ್ಟ ನಡತೆಗಳಲ್ಲಿ ತೊಡಗಿದುದಿತ್ತಷ್ಟೆ? ಅವನ್ನು ಬಹಳವೆಂದರೆ 'ಅಸಭ್ಯ'ವೆಂದು ಹೆಸರಿಸಬಹುದು. ಆದರೆ ಹೈಡನಾಗಿ ನಾನು ಎಸಗಿದ ಕಾರ್ಯಗಳು ಶುದ್ಧ ಅತ್ಯಾಚಾರಗಳೇ. ಅದನ್ನು ಆಚರಿಸುವಾಗ ನನ್ನ ಮನಸ್ಸು—ಹೈಡನದು—ಕಲ್ಲಾಗಿರುತ್ತಿತ್ತು. ಸುಖ–ದುಃಖದ ಲೇಪವೇ ಇಲ್ಲದ ಹೃದಯ ಅವನದು.

ಆದರೆ ಜೆಕಿಲ್? ಅವನಿಗೆ ವಿವೇಕವೆಂಬುದಿತ್ತು, ಆತ್ಮಜಾಗೃತಿ ಇದ್ದಿತು. ಹೈಡನಾಗಿ ಮಾಡಿದ ಪಾಪಕರ್ಮಗಳೆಲ್ಲಾ ಜೆಕಿಲ್ಲನ ಮನಸ್ಸನ್ನು ಗಾಸಿಗೊಳಿಸತೊಡಗಿದವು. 'ಅಯ್ಯೋ, ನಾನು ಹೀಗೆ ಮಾಡಬಾರದಿತ್ತು' ಎಂದೆನಿಸುವುದು. ಆ ಪಾಪಕಾರ್ಯವನ್ನು ಸರಿಪಡಿಸುವುದಾಗಲೀ, ಪರಿಹಾರ ನೀಡುವುದಾಗಲೀ ಸಾಧ್ಯವಿದ್ದರೆ ಅವಶ್ಯವಾಗಿ ಹಾಗೆ ಮಾಡುತ್ತಿದ್ದೆ.

ನನ್ನ ಈ ದ್ವಂದ್ವ ಜೀವನದಲ್ಲಿ ಎರಡಕ್ಕೂ ಸಮಾನವಾಗಿದ್ದೆಂದರೆ ನನ್ನ ಸ್ಮರಣ ಶಕ್ತಿ! ಉಳಿದೆಲ್ಲ ರೀತಿಯಲ್ಲಿ ಅವೆರಡೂ ವ್ಯಕ್ತಿಗಳು, ವ್ಯಕ್ತಿತ್ವಗಳು ಬೇರೆಯಾಗಿರುತ್ತಿದ್ದವು. ಮತ್ತಾವ ಸಮಾನ ಧರ್ಮವೂ ಇದ್ದಿರಲಿಲ್ಲ. ಹೈಡನ ದುಷ್ಕೃತ್ಯಗಳಿಗೆ ಜೆಕಿಲ್ ಮರುಗುತ್ತಿದ್ದುದಕ್ಕೆ ಇದೇ ಕಾರಣವಾಗಿತ್ತು.

ಜೆಕಿಲ್ ಹೀಗೆ ಪಶ್ಚಾತ್ತಾಪ ಪಡುತ್ತಿದ್ದರೆ, ಹೈಡನಿಗೆ ಜೆಕಿಲ್‌ನ ಬಗ್ಗೆ ಏನೂ ಅನಿಸುತ್ತಿರಲಿಲ್ಲ! ಹೈಡ್ ಜೆಕಿಲ್‌ನಿಗೆ ಮಗನಂತಿದ್ದು, ತಂದೆಯ ಸ್ಥಾನದಲ್ಲಿ ಜೆಕಿಲ್ ಅವನ ಕಾರ್ಯದ ದುಷ್ಪರಿಣಾಮಗಳನ್ನು ಅನುಭವಿಸುತ್ತಿದ್ದರೆ, ಹೈಡ್ ನಿರ್ಲಕ್ಷ್ಯಭಾವದ ಪ್ರಬುದ್ಧ ಮಗನಂತ ವರ್ತಿಸುತ್ತಿದ್ದ.

ಹೈಡನ ಉಸಾಬರಿಯನ್ನೇ ಬಿಟ್ಟು ಬಿಡೋಣ. ಸಾಕಿನ್ನು ಇದರ ಸಹವಾಸ ಎಂದು ಒಮ್ಮೊಮ್ಮೆ ಅನಿಸುತ್ತಿತ್ತು. ಆದರೆ ಹಾಗೆ ಮಾಡಗೊಡದಷ್ಟು ನನಗೆ ಮೇಲಿಂದ ಮೇಲೆ ಹೈಡನಾಗುವ ಚಟ ಅಂಟಿಕೊಂಡುಬಿಟ್ಟಿತ್ತು.

ಒಂದು ದಿನ ನಾನು, ಹೈಡನ ರೂಪದಲ್ಲಿ ಮನದಣಿಯೆ ತಿರುಗಾಡಿ ಪುನಃ ಔಷಧ ಸೇವಿಸಿ, ಜೆಕಿಲ್‌ನಾಗಿ ನನ್ನ ಕೋಣೆಯಲ್ಲಿ ಮಲಗಿದ್ದೆ.

ಬೆಳಗಿನಲ್ಲಿ ಎಚ್ಚರವಾದಾಗ ನೋಡುತ್ತೇನೆ—ನಾನು ನನ್ನ ಕೋಣೆಯಲ್ಲಿ, ಆ ಸುಪ್ಪತ್ತಿಗೆಯ ಮೇಲೆ ಮಲಗಿರದೇ ಬೇರೆಲ್ಲಿಗೋ ಬಂದು ಮಲಗಿದ್ದೇನೆ—ಎಂಬ ಭಾವನೆಯಾಯಿತು. ಅರೆ, ಹೌದು. ಇದು ಸೋಹೋದ ಬಿಡಾರದಲ್ಲಿ ಹೈಡನಾಗಿ ಮಲಗುತ್ತಿದ್ದ ಮಂಚ.... ಇಲ್ಲಿಗೆ, ಅದಾವಾಗ ನಾನು ಬಂದೆ ಎಂದು ಧೇನಿಸುತ್ತಿರುವಾಗ ನನ್ನ ಕೈಗಳ ಕಡೆಗೆ ಗಮನ ಹರಿಯಿತು. ಅವು ನನ್ನ ಕೈಗಳಾಗಿರಲಿಲ್ಲ! ಹೈಡನವಾಗಿದ್ದವು.

ನಾನು ದಿಗ್ಭ್ರಮೆಗೊಂಡೆ. ನಾನು ಔಷಧವನ್ನೇನೂ ಸೇವಿಸಿರಲಿಲ್ಲ, ಅಂದ ಮೇಲೆ? ಹೈಡ್ ಹೇಗಾದೆ? ಆಗ ನನಗೆ ಸತ್ಯ ಸಂಗತಿ ಹೊಳೆಯಿತು. ಜೆಕಿಲ್‌ನಾಗಿ ನಾನು ಮಲಗಿದ್ದಾಗ, ತಾನಾಗಿಯೆ ದೇಹದಲ್ಲಿ ಪರಿವರ್ತನೆಯಾಗಿ, ಬೆಳಗಾಗುವಷ್ಟರಲ್ಲಿ ಹೈಡನಾಗಿದ್ದೆ. ರೂಢಿವಶದಿಂದ ಅದಾವಾಗೋ ಸೋಹೋದ ಮನೆಗೆ ಬಂದು ಮಲಗಿಕೊಂಡಿದ್ದೆ.

ನನಗೆ ದಿಕ್ಕುತೋಚದಂತಾಯಿತು. ಇನ್ನು ಪುನಃ ಜೆಕಿಲ್‌ನಾಗಬೇಕಾದರೆ ಔಷಧ ಸೇವಿಸಬೇಕು. ಹಾಗೆ ಸೇವಿಸಬೇಕೆಂದರೆ ಅದು ಲೆಬೊರೇಟರಿಯಲ್ಲಿದೆ. ಮಲಗುವ ಕೋಣೆಯಿಂದ ಅಲ್ಲಿಗೆ ಹೋಗುವುದೆಂದರ ಇನ್ನೆರಡು ಕೋಣೆಗಳನ್ನು ದಾಟಿಕೊಂಡು

ಹೋಗಬೇಕು. ಹೇಗೆ ಹೋಗುವುದು? ಸೇವಕರು ಎದ್ದಿದ್ದಾರೆ. ಬೆಳಗಿನ ಕೆಲಸದಲ್ಲಿ ನಿರತರಾಗಿದ್ದಾರೆ. ಪೂಲ್ ಬೆಳಗಿನ ಉಪಹಾರಕ್ಕೆ ಅಣಿಗೊಳಿಸುತ್ತಿದ್ದಾನೆ....

ಆರೆ? ನಾನು ಸುಳ್ಳೇ ಹೆದರಿದೆನಲ್ಲ, ಹೈಡನಿಗೂ ಈ ಮನೆಯಲ್ಲಿ ಅನಿರ್ಬಂಧ ಪ್ರವೇಶವಿದೆ ತಾನೆ? ಮತ್ತೇಕೆ ಯೋಚನೆ? ಎಂದವನೆ ನನ್ನ ಆ ದೊಡ್ಡದಾದ ಬಟ್ಟೆಗಳನ್ನು ತಕ್ಕಮಟ್ಟಿಗೆ ಸರಿಪಡಿಸಿಕೊಂಡು ಹೊರಗೆ ಕಾಲಿಟ್ಟೆ. ಒಬ್ಬಿಬ್ಬ ಸೇವಕರು ಕೆಟ್ಟಗಣ್ಣಿನಿಂದ ನೋಡಿದರು, 'ನಸುಕಿನಲ್ಲಿ ಏಕೊ ಈ ಶನಿ ಬಂದಿತು?'—ಎಂಬ ಭಾವದಿಂದ. ಅದನ್ನು ಗಣನೆಗೆ ತಾರದೇ ನಾನು ಲೆಬೊರೇಟರಿಯ ಒಳಗೆ ಹೋದೆ.

ಹತ್ತು ನಿಮಿಷಗಳ ತರುವಾಯ ಡಾ. ಜೆಕಿಲ್ಲನಾಗಿ ಉಪಾಹಾರದ ಮೇಜಿನ ಮುಂದೆ ಕುಳಿತಾಗ ನನಗೆ ಎಳ್ಳಷ್ಟೂ ಸಮಾಧಾನವಿರಲಿಲ್ಲ.

ಒಮ್ಮೆಂದೊಮ್ಮೆ ಔಷಧಸೇವನೆಯಿಲ್ಲದೆ ನಾನು ಹೈಡನಾಗಿಬಿಟ್ಟೆನಲ್ಲ, ಮುಂದೆ ನನ್ನ ಗತಿಯೇನು? ಜನಕ–ಪ್ರಕೃತಿಯನ್ನು ಹಿಂದೊತ್ತಿ ತಾನಾಗಿ ಮುಂದರಿಯುವಷ್ಟು ಹೈಡ್ ಪ್ರಬುದ್ಧನಾದನಲ್ಲ! ಅರ್ಥಾತ್ ನನ್ನ ದುರ್ಗುಣಗಳ ಕೈಯೇ ಮೇಲಾದಂತಾಯಿತಲ್ಲ? ನಾನು ಶೋಧಿಸಿದ ಔಷಧವನ್ನು ಬದಿಗಿರಿಸಿ, ನನ್ನ ವ್ಯಕ್ತಿತ್ವದಲ್ಲಿ ಹೈಡನೇ ಪ್ರಮುಖನಾಗಿ ನಿಂತರೆ, ಸಮಾಜದಲ್ಲಿ ನನ್ನ ಗತಿಯೇನಾದೀತು?

ಹೈಡನಿಂದ ಜೆಕಿಲ್‌ನ ರೂಪಧಾರಣ ಮಾಡುವಾಗ ಒಮ್ಮೊಮ್ಮೆ ಆ ಔಷಧವು ಪರಿಣಾಮಕಾರಿಯಾಗುತ್ತಿರಲಿಲ್ಲ. ಆಗೆಲ್ಲ ನಾನು 'ಡಬಲ್ ಡೋಸ್' ತಗೊಳ್ಳುತ್ತಿದ್ದೆ. ಈಚೆಗಂತೂ ಆ ಪ್ರಮಾಣವನ್ನು ಮೂರು ಪಟ್ಟು ಹೆಚ್ಚಿಸಬೇಕಾಗುತ್ತಿತ್ತು. ಅಂತೂ ನನ್ನ ಜೀವನ ಕ್ರಮೇಣವಾಗಿ ಅಡ್ಡಹಾದಿ ಹಿಡಿಯುತ್ತಲಿದೆ; ಪರಿಸ್ಥಿತಿ ನನ್ನ ಹಿಡಿತವನ್ನು ಮೀರುತ್ತಲಿದೆ ಎಂದು ತ್ರಸ್ತನಾದೆ. 'ಇಲ್ಲ, ಇನ್ನು ಮೇಲೆ ಹೈಡನಾಗಲೇಕೂಡದು. ನನ್ನ ದುಷ್ಪ್ರವೃತ್ತಿಗಳನ್ನು ಮೂಲದಲ್ಲೇ ಚಿವುಟಿ ಹಾಕಬೇಕು. ಜಗತ್ತಿನಲ್ಲಿ ಶಾಶ್ವತವಾಗಿ ಉಳಿಯುವುದು ಸುಗುಣವೊಂದೇ' ಎಂದು ನನಗೆಯೆ ಹೇಳಿಕೊಂಡೆ.

ಸರಿ, ಅಖಂಡ ಎರಡು ತಿಂಗಳ ವರೆಗೆ ನಾನು ಔಷಧ ಸೇವಿಸಲಿಲ್ಲ, ಹೈಡ್‌ನಾಗಲಿಲ್ಲ. ಆಗಿನ ನನ್ನ ಎಲ್ಲ ವೇಳೆಯನ್ನು ಸತ್ಕಾರ್ಯದಲ್ಲಿ, ಸತ್ಸಂಗದಲ್ಲಿ ಕಳೆಯತೊಡಗಿದೆ.

ಆದರ ನನ್ನೀ ನಿರ್ಧಾರ ಕುಡುಕನೊಬ್ಬ, ಸೆರೆಯನ್ನು ಮುಟ್ಟುವುದಿಲ್ಲವೆಂಬ ಪ್ರತಿಜ್ಞೆ ಮಾಡಿದಂತಿತ್ತು. ದುಶ್ಚಟವಿದ್ದವರು ಕೆಲಕಾಲ ಚಟದಿಂದ ದೂರವುಳಿದು, ಪುನಃ ದ್ವಿಗುಣಿತವಾಗಿ ತಮ್ಮ ಚಟದಲ್ಲಿ ಮಗ್ನರಾಗುತ್ತಾರಷ್ಟೆ. ನನ್ನ ಸ್ಥಿತಿಯೂ ಹಾಗೇ ಆಯಿತು. ಯಾವುದೊ ವಿಷಗಳಿಗೆಯಲ್ಲಿ ನಾನು ನನ್ನ ದುಷ್ಟತನಕ್ಕೆ ಮತ್ತೆ ತಲೆಬಾಗಿದೆ. ಹೈಡನ ರೂಪಧಾರಣೆ ಮಾಡಿದೆ. ಎರಡು ತಿಂಗಳ ಕಾಲ, ತಡೆಹಿಡಿದಿದ್ದ ಆ ದುಷ್ಟ ಶಕ್ತಿಗಳೆಲ್ಲ ರಭಸದಿಂದ ಮುನ್ನುಗ್ಗಿದವು.

ಅವತ್ತಿನ ರಾತ್ರಿಯೇ ಸರ್ ಡೆನ್ವರ್ಸರ ಅಮಾನುಷ ಕೊಲೆ ನನ್ನಿಂದ ಘಟಿಸಿದುದು. ಅವರನ್ನು ಕೊನೆಗಾಣಿಸಿದ ಗಳಿಗೆಗೆ ನನ್ನಲ್ಲಿಯ ಕ್ರೌರ್ಯಭಾವವು ತೃಪ್ತಿಯನ್ನೇನೊ ಪಡೆಯಿತು. ಆದರೆ ಅದರ ಪರಿಣಾಮ ಭೀಕರವಾಗಿ, ನನ್ನ ಜೀವವೇ ಅಪಾಯದಲ್ಲಿದೆ

ಎಂಬುದನ್ನು ಬಲು ಬೇಗ ಗ್ರಹಿಸಿದೆ. ಕೂಡಲೇ 'ಸೋಹೋ'ದಲ್ಲಿಯ ಮನೆಗೆ ಬಂದು ಕಾಗದ ಪತ್ರಗಳನ್ನು ಸುಟ್ಟು ಹಾಕಿದೆ. ಲೆಬೊರೇಟರಿಗೆ ಬಂದವನೆ, ಔಷಧವನ್ನು ಸೇವಿಸಿ ಮತ್ತೆ ಜೆಕಿಲ್‌ನಾಗಿ ಮಲಗಿಕೊಂಡೆ.

ಕೆಲವೇ ತಾಸುಗಳ ಹಿಂದೆ ನಾನು ಮಾಡಿದ ಆ ದುಷ್ಕ ದ ನೆನಹಿನ ಬಾಧೆಯಿಂದ ನರಳುತ್ತಿದ್ದೆನಾದ್ದರಿಂದ ಅದೆಂತು ನಿದ್ರೆ ಹತ್ತೀತು? ಬೆಳಿಗ್ಗೆ ನೀನು ಬಂದೆ. ಹೈಡನೇ ಕೊಲೆಗಡುಕನೆಂಬುದು ಸಿದ್ಧವಾಗಿದೆಯೆಂದೂ ಆ ಮೂಲಕ ನಾನೂ ಸಿಕ್ಕಿಬೀಳುವೆನೆಂದೂ ನೀನು ಎಚ್ಚರಿಸಿದೆ. ದುಃಖ, ಭಯ, ಪಶ್ಚಾತ್ತಾಪಗಳಿಂದ ನಿರ್ವಿಣ್ಣನಾಗಿ ಹೋಗಿದ್ದ ನಾನು ಅದೇನು ಉತ್ತರ ಕೊಟ್ಟೆನೊ! ಆದರೆ ಅಟರ್ಸನ್, ನಾನು ಆ ದುಷ್ಕೃತ್ಯದಿಂದ ಅದೆಷ್ಟು ಬೆಂದುಬೇಗುದಿಗೊಂಡೆನೆಂದು ನಿನಗೆ ಹೇಗೆ ಮನಗಾಣಿಸಿಕೊಡಲಿ? ನನ್ನ ಪಶ್ಚಾತ್ತಾಪ ಭಾವವನ್ನು ಆ ಪರಮಾತ್ಮನೊಬ್ಬನೇ ಬಲ್ಲ.

ನಾನು ಚೇತರಿಸಲಿಕ್ಕೆ ಕೆಲವು ದಿನಗಳೇ ಹಿಡಿದವು. ಇನ್ನು ನಾನು ಹೈಡನಾಗುವುದು ಸಲ್ಲ. ಅವನು ನನ್ನ ಪಾಲಿಗೆ ಸತ್ತಂತೆಯೇ. ಅವನು ಮತ್ತೆ ಬಂದದ್ದಾದರೆ, ಅವನೊಟ್ಟಿಗೆ ನನ್ನ ಸಾವೂ ನಿಶ್ಚಿತ — ಎಂಬ ವಿಚಾರದಿಂದ ಆ ಔಷಧದ ಗೊಡವೆಗೇ ಹೋಗಲಿಲ್ಲ. ಅದಕ್ಕೆ ಕೀಲಿ ಹಾಕಿ ಇಟ್ಟುಬಿಟ್ಟೆ.

ಡೆನ್ವರ್ಸ್ ಕೊಲೆಯ ಅಪರಾಧದಿಂದ ನನ್ನ ಆತ್ಮವನ್ನು ಸಂತಯಿಸಲೆಂಬಂತೆ ನನ್ನ ಶಕ್ತಿ ಮೀರಿ ದೀನ-ದಲಿತರ ಸೇವೆಗೆ ನಿಂತೆ. ಸಾಮಾಜಿಕ ಕಾರ್ಯಗಳಿಗೆ ಹಣ ನೀಡಿದೆ. ಒಬ್ಬನೇ ಇದ್ದಾಗ ದೇವರತ್ತ ಅವನನ್ನು ಕುರಿತ ಪ್ರಾರ್ಥನೆಯತ್ತ ನನ್ನ ಮನಸ್ಸು ಒಲಿಯಿತು.

ಇನ್ನು ಒಂದೇ ವಿಷಯ ಹೇಳುವುದಿದೆ. ಅದನ್ನು ತಿಳಿಯಲು ನೀನೂ ಆತುರನಾಗಿರುವೆಯೆಂಬುದನ್ನು ಬಲ್ಲೆ. ನಮ್ಮಿಬ್ಬರ ಪರಮ ಮಿತ್ರ ಲೆನ್ಯನ್‌ನ ಸಾವಿಗೆ ನಾನು ಹೇಗೆ ಕಾರಣನಾದೆನೆಂಬುದನ್ನು ನಿನಗೆ ಹೇಳಲೇ ಬೇಕು.

ಹೈಡನನ್ನು, ಆ ಭಂಡ ಜೀವನವನ್ನು ಮರೆತು ಬಿಟ್ಟು, ನೆಮ್ಮದಿಯಿಂದ ಬಾಳುತ್ತಿದ್ದ ದಿನಗಳವು. ಒಂದು ದಿನ ಜನನಿಬಿಡವಾದ ರೀಜೆಂಟ್ ಪಾರ್ಕಿನಲ್ಲಿ ಕುಳಿತಿದ್ದೆ. ಎಲ್ಲರಂತೆ ನಾನೂ ಒಬ್ಬ ಮನುಷ್ಯ, ಸಭ್ಯ ಗೃಹಸ್ಥ ಮತ್ತು ಗಣ್ಯ ನಾಗರಿಕ ಎಂದೆಲ್ಲ ಭಾವನೆಯಲ್ಲಿರುವಾಗ, ನನ್ನ ದೇಹದಲ್ಲಿ ಬದಲಾವಣೆಯಾಗತೊಡಗಿತು. ನೋಡ ನೋಡುವಷ್ಟರಲ್ಲಿ ನಾನು ಹೈಡನ ರೂಪವನ್ನು ತಾಳಿಬಿಟ್ಟಿದ್ದೆ!

ಒಂದು ಕ್ಷಣದ ಹಿಂದೆ, ನೂರಾರು ಜನರ ಮಧ್ಯದಲ್ಲಿ ನಿಶ್ಚಿಂತನಾಗಿ ಸುರಕ್ಷಿತನಾಗಿ ಇದ್ದ ನಾನು ಈಗ ಹೆದರಿಕೆಯಿಂದ ನಡುಗತೊಡಗಿದೆ. ನಾನಾಗ ಸುಪ್ರತಿಷ್ಠಿತ ನಾಗರಿಕನಾಗಿರಲಿಲ್ಲ. ಒಬ್ಬ ಕೊಲೆಗಡುಕನಾಗಿ ಅಷ್ಟು ಜನರ ಮಧ್ಯದಲ್ಲಿ ಕುಳಿತಿದ್ದೆ! ನನ್ನ ಆಕೃತಿಯು ಯಥಾಪ್ರಕಾರ ಕಿರಿದಾಗಿ, ನಾನು ಹಾಕಿಕೊಂಡಿದ್ದ ಬಟ್ಟೆಗಳು ಜೋಲು ಬಿದ್ದವು.

ಆಗ ನನಗೆ ಕಂಡ ದಾರಿ ಒಂದೇ : ಹೇಗಾದರೂ ಮಾಡಿ ಔಷಧವನ್ನು ಸೇವಿಸುವುದು. ಅದೋ, ನನ್ನ ಲೆಬೊರೇಟರಿಯ ಈ ಕಪಾಟಿನ ಒಳಗೆ ಭದ್ರವಾಗಿ ಕುಳಿತಿತ್ತು. ಇನ್ನು ನಾನು ಮನೆಗೆ ಹೋಗುವುದೆಂದರೆ, ನನ್ನ ಸೇವಕರೇ ನನ್ನನ್ನು ಹಿಡಿದು 'ಇಕೋ, ಡೆನ್ವರ್ಸ್‌ರ

ಕೊಲೆಗಡುಕ ಇವನೇ' ಎಂದು ಅತ್ಯಂತ ಸರಳವಾಗಿ ನನ್ನನ್ನು ಪೊಲೀಸರ ಕೈವಶ ಮಾಡದೇ ಬಿಡುವುದಿಲ್ಲ, ಅಂದ ಮೇಲೆ?

ನಾನು ಹೈಡನಾಗಿ ನನ್ನ ಸದ್ಗುಣಗಳನ್ನು ಕಳೆದುಕೊಂಡಿದ್ದರೂ, ನನ್ನ ಬುದ್ಧಿ ಶಕ್ತಿ ಹರಿತವಾಗೇ ಇದ್ದಿತು. ಕೂಡಲೇ ನನಗೆ ಲೆನ್ಯನ್‌ನ ನೆನಪಾಯಿತು. ನಾನು ಹೋಗಿ ಅವನ ಮುಂದೆ ನಿಂತು, ನಾನೇ ಜೆಕಿಲ್ ಎಂದರೆ ಅವನು ನಂಬುವನಾದರೂ ಹೇಗೆ? ಏನೇ ಆಗಲಿ, ಅವನ ಮುಖಾಂತರ ಹೇಗಾದರೂ ಮಾಡಿ ಔಷಧವನ್ನು ಪಡೆಯಬೇಕು; ಅದು ಮುಖ್ಯ— ಎಂದು ನಿರ್ಧರಿಸಿದೆ.

ಪಾರ್ಕಿನಲ್ಲಿ ಹೆಚ್ಚು ಹೊತ್ತು ಕುಳ್ಳಿರುವುದಂತೂ ಕ್ಷೇಮಕರವಿದ್ದಿಲ್ಲ. ಆದ್ದರಿಂದ ಹಾದಿಯಲ್ಲೇ ಹೊರಟಿದ್ದ ಟ್ಯಾಕ್ಸಿಯೊಂದನ್ನು ನಿಲ್ಲಿಸಿ, ಪೋರ್ಟ್‌ಲ್ಯಾಂಡ್ ರಸ್ತೆಯ ಒಂದು ಹೊಟೆಲಿಗೆ ಕರೆದೊಯ್ಯ ಹೇಳಿದೆ. ನನ್ನ ವೇಷ–ರೂಪಗಳನ್ನು ನೋಡಿ ಹೊಟೆಲಿನ ಆಳುಗಳು ಕುತ್ಸಿತ ನಗೆಯನ್ನು ನಕ್ಕರು.

ಅದನ್ನು ಗಣನೆಗೆ ತಾರದೇ, ಅವರು ನನಗೆ ತೋರಿದ ಕೋಣೆಯೊಳಗೆ ಪ್ರವೇಶಿಸಿ, ಅವರಿಂದ ಕಾಗದ, ಕವರುಗಳನ್ನು ಪಡೆದುಕೊಂಡೆ. ರಾತ್ರಿ ೧೧ ಗಂಟೆಯ ಸುಮಾರಿಗೆ ನನ್ನ ಲೆಬೊರೇಟರಿಗೆ ಹೋಗಿ, ಕೀಲಿಯನ್ನು ಮುರಿದು, ಆ ಔಷಧಗಳನ್ನಿರಿಸಿದ ತಬಕವನ್ನು ಹಾಗೆಯೇ ಹಿಡಿದುಕೊಂಡು ತಂದು ಅವನ ಮನೆಯಲ್ಲಿಟ್ಟುಕೊಳ್ಳಬೇಕೆಂದೂ, ಮಧ್ಯರಾತ್ರಿಗೆ ಒಬ್ಬ ಕುಳ್ಳನಾದ ಕುರೂಪ ವ್ಯಕ್ತಿ ಬರುವನೆಂದೂ, ಅವನಿಗೆ ಅದನ್ನು ಒಪ್ಪಿಸಬೇಕೆಂದೂ ಡಾ. ಲೆನ್ಯನ್‌ನಿಗೆ ಪತ್ರ ಬರೆದೆ. ಅದರಂತೆ ಪೂಲನಿಗೂ ಪತ್ರ ಬರೆದೆ. ಆವೆರಡೂ ಪತ್ರಗಳನ್ನು ಆಗಿಂದಾಗ ಅಂಚೆಗೆ ಹಾಕಿದೆ.

ಬಾಗಿಲಿಕ್ಕಿಕೊಂಡು, ಹೋಟೆಲಿನ ಆ ಕೋಣೆಯಲ್ಲಿ ನಾನು ಮುಂದಿನ ೧೨ ತಾಸುಗಳನ್ನು ಶೂನ್ಯ ಭಯದಲ್ಲಿ ಕಳೆಯಬೇಕಾದರೆ ಸಾಕುಬೇಕಾಯಿತು. ಮಧ್ಯರಾತ್ರಿಯಾಗುತ್ತಲೂ ಟ್ಯಾಕ್ಸಿಯ ಮೂಲೆಯಲ್ಲಿ ಮುದುಡಿಕೊಂಡು ಕುಳಿತು ಲೆನ್ಯನ್‌ನ ಮನೆಗೆ ಹೊರಟೆನು. ಒಂದು ವೇಳೆ ನನ್ನ ಪತ್ರವು ಆ ಸಂಜೆಗೆ ಮುಟ್ಟಿರದಿದ್ದರೆ ನಾ ಹೇಳಿದಂತೆ ಲೆನ್ಯನ್ ಮಾಡಿರದಿದ್ದರೆ? ಲೆನ್ಯನ್ ಹಾಗೆ ಮಾಡಿದ್ದರೂ ನನ್ನ ದ್ವಂದ್ವ ಜೀವನದ ರಹಸ್ಯವನ್ನು ತಿಳಿದಮೇಲೆ ಅವನ ಮನಸ್ಥಿತಿ ಏನಾದೀತು? ಅದರಲ್ಲಿಯೂ ಅವನು ಸೂಕ್ಷ್ಮಪ್ರಕೃತಿಯವ. ನನ್ನ ಹೊಸ ಶೋಧನೆಯನ್ನು ಕುರಿತು ಅವನು ತನ್ನ ಮೆಚ್ಚಿಕೆಯನ್ನು ಸೂಚಿಸಲೂ ಬಹುದು, ಅಥವಾ? ಡೆನ್ವರ್ಸರ ಕೊಲೆಗಡುಕ ಈತನೇ ಎಂದು ಪೊಲೀಸರಿಗೆ ಹಿಡಿದುಕೊಡಲಿಕ್ಕಿಲ್ಲವಷ್ಟೆ?

ಮುಂದಡಿಯನ್ನಂತೂ ಇಟ್ಟಿದ್ದಾಗಿತ್ತು. ಇನ್ನು ಹಿಂದಿರುಗುವ ಪ್ರಶ್ನೆಯೇ ಇರಲಿಲ್ಲ.

ನನ್ನ ಸುದೈವದಿಂದ ಡಾ. ಲೆನ್ಯನ್ ಆ ಔಷಧ ತಬಕವನ್ನು ತಂದು, ನನ್ನ–ಅಲ್ಲ, ಹೈಡನ ದಾರಿಯನ್ನು ಕಾಯುತ್ತಲಿದ್ದ. ನಾನು ಕೂಡಲೆ ಆ ಔಷಧವನ್ನು ಪೇಲಿಗೆ ಹಾಕಿ ಲವಣವನ್ನು ಸುರಿದೆ. ಗುಳು ಗುಳು ಸಪ್ಪಳ ಮಾಡುತ್ತ ಅದು ಕುದಿಯತೊಡಗಿತು. ಕೂಳು ಕಾಣದ ಭಿಕ್ಷುಕನಂತೆ ಅದನ್ನು ಹಪಾಪಿತನದಿಂದ ಒಂದೇ ಗುಟುಕಿಗೆ ನುಂಗಿದೆ.

ಕೆಲ ನಿಮಿಷಗಳವರೆಗೆ ವಿಲಿವಿಲಿ ಒದ್ದಾಡುತ್ತಲಿದ್ದು ನಂತರ, ಆವನ ಕಣ್ಣುದುರಿಗೇ ನಾನು ಡಾ. ಜೆಕಿಲ್‌ನಾಗಿ ಮಾರ್ಪಟ್ಟಿದ್ದು ಅವನ ಮನಸ್ಸಿನ ಮೇಲೆ ಆಘಾತವನ್ನೇ ಉಂಟು ಮಾಡಿತು. ಅವನ ಬಾಯಿಂದ ಮಾತೇ ಹೊರಡಲಿಲ್ಲ. ಆ ಕ್ಷಣಕ್ಕೆ ಒಳ್ಳೆಯದಾವುದು, ಕೆಟ್ಟದಾವುದು—ಇವರ ತಾರತಮ್ಯವೇ ತಿಳಿಯದಷ್ಟು, ಬದುಕಿ[illegible]ಯ ಶ್ರದ್ಧೆಯ ನೆಲೆಯೇ ತಪ್ಪಿಬಿಡುವಷ್ಟು, ಅವನ ಮೇಲೆ ನನ್ನ ರೂಪ–ವ್ಯತ್ಯಾಸವು ಪರಿಣಾಮ ಮಾಡಿತು. ಕೊನೆಗೆ ಅವನನ್ನೇ ಆಹುತಿ ತೆಗೆದುಕೊಂಡುಬಿಟ್ಟಿತು.

ಅತ್ಯಂತ ಆತ್ಮೀಯ ಗೆಳೆಯನನ್ನು ಈ ರೀತಿ ಕಳೆದುಕೊಂಡಿದ್ದರಿಂದಲೂ ನನ್ನ ಶೂನ್ಯ ಭವಿತವ್ಯದ ಹೆದರಿಕೆಯಿಂದಲೂ ನಾನು ಮನೆಬಿಟ್ಟು ಹೊರಡಲಿಲ್ಲ. ನಿನ್ನನ್ನು ಕಾಣಲು ಸಹಿತ ಮನಸ್ಸು ಮಾಡಲಿಲ್ಲ.

ಹೈಡ್ ಯಾವ ಕಾಲಕ್ಕೆ ತಾನಾಗಿಯೇ ರೂಪತಾಳುವನೋ ಎಂಬ ಅಂಜಿಕೆ ಇದ್ದಿತು. ನನ್ನ ದೌರ್ಭಾಗ್ಯ. ನಿಜವಾಗಿ ಪದೇ ಪದೇ ನಾನು ಹಾಗೆ ಆಗತೊಡಗಿದೆ. ಜೆಕಿಲ್‌ನಾಗಲು ಮೂರು–ನಾಲ್ಕು–ಐದು ಸಲ ಆ ಔಷಧವನ್ನು ನಾನು ತೆಗೆದುಕೊಳ್ಳಬೇಕಾಗುತ್ತಿತ್ತು. ನನ್ನ ಜೆಕಿಲ್‌ನ ಅವತಾರ ಸಮಾಪ್ತಿಯಾದಂತೆಯೇ ಎಂದುಕೊಂಡೆ. ದೇವರಲ್ಲಿ ಮೊರೆಯಿಟ್ಟೆ.

ನಾನು ಮಾಡಿದ ಕರ್ಮವೇ ಬಲವಂತವಾಗಿದ್ದಾಗ ದೇವರೇನು ಮಾಡಿಯಾನು? ಕಳೆದವಾರ, ನಾನು ಬೆರಸುತ್ತಿದ್ದ ಆ ಲವಣ ತೀರಿಹೋಯಿತು. ಅದನ್ನು ಬೆರಸದೇ ಆ ಔಷಧ ಪರಿಣಾಮಕಾರಿಯಾಗುವಂತಿಲ್ಲ. ಮಾವ್ ಆ್ಯಂಡ್ ಕಂಪನಿಯವರಲ್ಲಿ ತಂದಿದ್ದ ಔಷಧಿಯದು. ಅವರೇನೊ ಪುನಃ ಅದರ ಇನ್ನೊಂದು ಪ್ಯಾಕೆಟನ್ನು ಕಳಿಸಿಕೊಟ್ಟರು. ಆದರೆ ಅದು ಫಲಕೊಡಲೇ ಇಲ್ಲ. ಬಹುಶಃ ಅದು ಅಶುದ್ಧವಿರಬೇಕೆಂದು, ಬೇರೆ ಫಾರ್ಮಸಿಗಳಲ್ಲಿ ತರಲು ಪೂಲನನ್ನು ಓಡಾಡಿಸಿದೆ. ಅವುಗಳಲ್ಲಿ ಯಾವುದೂ ಉಪಯೋಗಕ್ಕೆ ಬರಲಿಲ್ಲ. ಎಂದರೆ ನನ್ನ ದೇಹದ ವಿಶಿಷ್ಟ ಘಟಕಗಳನ್ನು ಬೇರ್ಪಡಿಸುವ ಗುಣಗಳು ಅವುಗಳಲ್ಲಿ ಇರಲೇ ಇಲ್ಲ! ಬಹುಶಃ ಎಲ್ಲಕ್ಕೂ ಮೊದಲು ೮–೧೦ ವರ್ಷಗಳ ಹಿಂದೆ ತಂದಿದ್ದ ಆ ಲವಣದಲ್ಲಿ ಮಾತ್ರ ಆ ಗುಣ ಇದ್ದಿತ್ತೇನೋ? ಈಗದು ತೀರಿಯೇ ಹೋಯಿತಲ್ಲ. ಅದರ ಜೊತೆ ನನ್ನ ಬದುಕಿನ ದೀಪದ ತೈಲವೂ ತೀರಿಹೋಯಿತೆನ್ನಬೇಕು.

ಜೆಕಿಲ್‌ನ ಬಾಳ ದೀಪವು ನಂದಿ ಹೋದರೂ, ಹೈಡ್ ಬದುಕಿ ಇದ್ದಾನೆ! ಅವನ ಪಾಲಿಗೆ ಈಗ ಉಳಿದಿರುವುದು, ಅಸಹಾಯತೆಯಿಂದ ಅಳುವುದೊಂದೇ. ಅವನು ಬದುಕಲಿ, ಬೇಕಾದರೆ ಸಾಯಲಿ. ಅವನಿಗೆ ಏನಾದರೆ ನನಗೇನಂತೆ? ಇತಿ ನನ್ನ ದುರ್ಭಾಗ್ಯದ ಗೆಳೆಯ.

೮

ಪಾಕಿಸ್ತಾನದ ಗಾಡಿ

ಖುಶವಂತ್ ಸಿಂಗ್ ಅವರ
'ಟ್ರೇನ್ ಟು ಪಾಕಿಸ್ತಾನ್' ಕಾದಂಬರಿಯ ಕಥನ

೧೯೪೭ರಲ್ಲಿ ದೇಶವಿಭಜನೆಯಿಂದಾಗಿ, ಹತ್ತು ಲಕ್ಷ ಜನರ ಅಕಾರಣವಾದ ಅಮಾನುಷ ಕೊಲೆಯಾಯಿತು. ಒಂದು ಕೋಟಿ ಜನರು ನಿರಾಶ್ರಿತರಾದರು. ಈ ಹಿನ್ನೆಲೆಯಲ್ಲಿ ರಚಿತವಾದ ಕಾದಂಬರಿ ಇದು. ಹಿಂದೂ, ಸೀಖ್, ಮುಸಲ್ಮಾನರು ನೆಮ್ಮದಿಯಿಂದ ಕೂಡಿ ಬಾಳುತ್ತಿದ್ದರೂ ಜಾತೀಯತೆಯ ವಿಷವು ಅವರಲ್ಲಿ ಹೇಗ ಹರಡಬಲ್ಲುದು ಎಂಬುದನ್ನು ಖ್ಯಾತ ಪತ್ರಿಕೋದ್ಯಮಿ ಖುಶವಂತ್ ಸಿಂಗರು ಮನೋಜ್ಞವಾಗಿ ಚಿತ್ರಿಸಿದ್ದಾರೆ.

ಪಾಕಿಸ್ತಾನದ ಗಾಡಿ

ಮನೋಮಾಜರಾ ಪಂಜಾಬದ ಸತಲಜ್ ನದಿಯ ದಂಡೆಯ ಮೇಲಿನ ಒಂದು ಚಿಕ್ಕ ಹಳ್ಳಿ. ಅಲ್ಲಿರುವ ೭೦–೮೦ ಮನೆಗಳಲ್ಲಿ ಮೂರಕ್ಕೆ ಮಾತ್ರ ಹಂಚಿನ ಛಾವಣಿಗಳಿದ್ದವು. ಒಂದು, ಸೀಖ ಜನರ ಗುರುದ್ವಾರಾದ್ದು. ಇನ್ನೊಂದು, ಮಸೀದೆಯದು. ಮತ್ತೊಂದು, ಸಾಹುಕಾರ ಲಾಲಾ ರಾಮಲಾಲನದು. ಜನವಸತಿಯಲ್ಲಿ ಸೀಖರೂ ಮುಸ್ಲಿಮರೂ ಸಮಸಂಖ್ಯೆಯಲ್ಲಿದ್ದರು. ಸೀಖರೇ ಸುತ್ತಲಿನ ಅಧಿಕತರ ಭೂಮಿಯ ಮಾಲಿಕರು; ಮುಸ್ಲಿಮರು ಹಚ್ಚಾಗಿ ಅವರ ಗೇಣಿಯೊಕ್ಕಲುಗಳು. ಹಿಂದುಗಳ ಸಂಖ್ಯೆ ತೀರ ಕಡಿಮೆ.

ಮನೋಮಾಜರಾಕ್ಕೆ ವಿಶೇಷ ಮಹತ್ವವಿದ್ದುದು ಅಲ್ಲಿಯ ರೇಲ್ವೆ ನಿಲ್ದಾಣದಿಂದಾಗಿ. ಬಳಿಯಲ್ಲಿಯೇ ಹರಿಯುವ ಸತಲಜ್ ನದಿಗೆ ಹಾಕಿದ ದೊಡ್ಡ ಸೇತುವೆಯ ಮೂಲಕ ಗಾಡಿಗಳು ನಿಲ್ಲುವ, ಹೋಗುವ ಗದ್ದಲ ಯಾವಾಗಲೂ ಇದ್ದುದೇ. ಆ ಹಳ್ಳಿಗರ ದಿನಚರಿ ಗಾಡಿಗಳ ಹೋಗಬರುವ ವೇಳೆಗಳನ್ನೇ ಅವಲಂಬಿಸಿದ್ದಿತೆನ್ನಬಹುದು.

ಚುಮುಚುಮು ನಸುಕಿನಲ್ಲಿ ಮೇಲ್ ಗಾಡಿಯು ಸೇತುವೆಯ ಮೇಲಿಂದ ಹಾಯ್ದು ಲಾಹೋರಕ್ಕೆ ಹೋಗುವಾಗ ಎರಡು ಸಲ ಕೂಗಿದ ಮೇಲೆಯೇ ಮಸೀದೆಯ ಮುಲ್ಲಾನು ಗಡಬಡಿಸಿ ಏಳಬೇಕು. ಅವನ 'ಅಲ್ಲಾ ಹೋ ಅಕಬರ್' ಎಂಬ ಉಚ್ಚಸ್ವರದ ನಮಾಜನ್ನು ಕೇಳಿದ ಮೇಲೆಯೇ ಗುರುದ್ವಾರಾದ ಸಂತಜೀ ಮತ್ತು ಊರಿನ ರೈತಾಪಿ ಜನ ಜಾಗರಿಸಿಕೊಳ್ಳುತ್ತಿದ್ದರು. ಪ್ರಯಾಣಿಕರ ಗಾಡಿಗಳು ಅಲ್ಲಿ ನಿಲ್ಲುವುದು ಅಫರೂಪ. ಪ್ರತಿದಿನ ರಾತ್ರಿ ಗೂಡ್ಸ್‌ಗಾಡಿಯೊಂದು ಮಾತ್ರ ತಂಗುತ್ತಿದ್ದಿತು. ಅದರ ವ್ಯಾಗನ್‌ಗಳ ಧಡಿಕೆಯ ಮಂದ್ರಸ್ವರವು ಊರವರಿಗ ಜೋಗುಳ ಹಾಡಿದಂತೆ ಆಗಿ, ಅವರೆಲ್ಲ ನಿದ್ದೆಹೋಗಬೇಕು.

ಅದೆಷ್ಟೋ ವರುಷಗಳಿಂದ ನಡೆದುಕೊಂಡು ಬಂದ ಕ್ರಮವಿದು. ಯುದ್ಧ ಕಾಲದಲ್ಲಿ ಕಿಂಚಿತ್ ನೂಕು–ನುಗ್ಗಲು ಮತ್ತು ಗಾಡಿಗಳು ತುಸು ತಡವಾಗಿ ಬರುವುದರ ರೂಢಿ ಜನಕ್ಕೆ ಆಗತೊಡಗಿತು. ಅದರ ಮರು ವರುಷ ಗಾಡಿಗಳಲ್ಲಿಯ ದಟ್ಟಣೆ ಅತಿಯಾಗಿ ಜನ ಗಾಡಿಯ ಮೇಲ್ಗಡೆಯಲ್ಲಿಯೂ ಕುಳಿತು ಪ್ರವಾಸ ಮಾಡುವ ಅಪೂರ್ವ ದೃಶ್ಯವನ್ನು ಮನೋಮಾಜರಾದ ಜನ ಕಾಣುವಂತಾಯ್ತು. ಗಾಡಿಗಳ ಅನಿಯಮಿತತವಂತೂ ಹೇಳತೀರದಷ್ಟು. 'ಕಾಲ ಬದಲಾಗಿದೆ' ಎಂದು ಜನ ಆಡಿಕೊಂಡರು.

೧೯೪೭ರ ಅಗಸ್ಟ್ ತಿಂಗಳ ಕೊನೆಯ ಒಂದು ಸಂಜೆ, ಜಿಲ್ಲೆಯ ಮ್ಯಾಜಿಸ್ಟ್ರೇಟ್ ಮತ್ತು ಡೆಪ್ಯುಟಿ ಕಮಿಶನರ್ ಆದ ಹುಕುಮ್‌ಚಂದರು ಊರ ಹೊರಗಿನ 'ಡಾಕ್ ಬಂಗಲೆ'ಯ ಆರಾಮ ಕುರ್ಚಿಯ ಮೇಲೆ ಒರಗಿಕೊಂಡು ಬೇಸಗೆಯ ಕಾಲದ ಪಯಣದ ದಣಿವಾರಿಸಿಕೊಳ್ಳುತ್ತಿದ್ದರು. ಅವರ ಆಗಮನಕ್ಕೆ ತಕ್ಕ ವ್ಯವಸ್ಥೆ ಮಾಡಿದ್ದ ಸ್ಥಳೀಯ ಠಾಣೆಯ ಫೌಜದಾರನು ಬದಿಯಲ್ಲಿಯೆ ನಿಂತಿದ್ದನು.

''ಕೂಡಿರಿ, ಫೌಜದಾರ ಸಾಹೇಬ್,'' ಎಂದು ಹುಕುಮ್‌ಚಂದರು ಹುಕುಂ ಮಾಡಿದಾಗಲೇ ಅವನು ಕುಳಿತುಕೊಂಡನು.

"ಏನು? ಇಲ್ಲಿನ ಪರಿಸ್ಥಿತಿ ಹೇಗಿದೆ?" ಎಂದು ಕೇಳಿದರು— ಹುಕುಮ ಚಂದರು.

"ಇಲ್ಲಿಯವರೆಗಂತೂ ಯಾವ ತೊಂದರೆಯೂ ಇಲ್ಲಾ ಸರ್."

"ಇಲ್ಲಿ ಯಾರಾದರೂ ಶ್ರೀಮಂತ ಮುಸಲ್ಮಾನರಿದ್ದಾರೆಯೋ?"

"ಇಲ್ಲಾ ಸರ್. ಈ ಭಾಗದ ಮುಸಲ್ಮಾನರು ನೇಕಾರರೂ ಕುಂಬಾರರೂ ಕೂಲಿಯವರೂ ಆಗಿದ್ದಾರೆ. ಇಷ್ಟರತನಕವಂತೂ ಯಾವ ಗಲಭೆ ಇಲ್ಲ, ಇನ್ನೇನು, ಪಾಕಿಸ್ತಾನದಿಂದ ಬರುವ ನಿರಾಶ್ರಿತರು ಇಲ್ಲಿಯ ಸೀಖ, ಹಿಂದೂ ಜನರಿಗೆ ಚುಚ್ಚಿಕೊಟ್ಟದ್ದೇ ಆದರೆ ಕಷ್ಟವಾಗುವುದು."

"ಏನಿದ್ದರೂ ಶಾಂತಿ–ಸುವ್ಯವಸ್ಥೆಗಳನ್ನು ಕಾಯ್ದುಕೊಂಡು ಹೋಗಲೇ ಬೇಕು. ಇಲ್ಲಿಯ ಮುಸಲ್ಮಾನರಲ್ಲಿ ಪಾಕಿಸ್ತಾನಕ್ಕೆ ಹೋಗಬೇಕೆನ್ನುವವರು ಇದ್ದರೆ, ಆಗತ್ಯ ಅವರನ್ನು ಕಳಿಸಿಬಿಡಿರಿ. ಇಷ್ಟೇ, ಇಲ್ಲಿಂದ ಅವರು ಏನೂ ಹಚ್ಚಿಗೆ ಒಯ್ಯದಂತೆ ನೋಡಿಕೊಳ್ಳಿರಿ. ಪಾಕಿಸ್ತಾನದಿಂದ ಬರುವ ನಮ್ಮ ಜನರಿಂದ ಎಲ್ಲವನ್ನೂ ಕಸಿದುಕೊಂಡೇ ಕಳಿಸುತ್ತಾರೆ. ಆದರಿಂದ, ಅಲ್ಲಿಯ ಅಧಿಕಾರಿಗಳು ಕೆಲವೇ ತಿಂಗಳಲ್ಲಿ ಲಕ್ಷಾಧೀಶರಾಗಿದ್ದಾರೆ. ನಮ್ಮಲ್ಲಿಯೂ ಕೆಲವರು ಸುಮ್ಮನೆ ಬಿಟ್ಟಿಲ್ಲ, ಅನ್ನಿರಿ. ನಾನು ಹೇಳುವುದೇನೆಂದರೆ, ಈ ಖೂನಿ, ಹತ್ಯಾಕಾಂಡ ಮಾತ್ರ ಆಗದಂತೆ ನೋಡಿಕೊಳ್ಳಿರಿ."

ಡೆಪ್ಯುಟಿ ಕಮೀಶನರ್ ಸಾಹೇಬರ ಮಾತಿನ ಇಂಗಿತವನ್ನೂ, ಅವರು ತನ್ನಲ್ಲಿ ಇಟ್ಟಿರುವ ವಿಶ್ವಾಸವನ್ನೂ ಫೌಜದಾರನು ಅರಿಯದಿರಲಿಲ್ಲ. ಅವನು ಕಣ್ಸನ್ನೆ ಮಾಡಿದ ಮೇರೆಗೆ ಚೌಕೀದಾರನು ವಿದೇಶೀ ಮದ್ಯದ ಬಾಟಲಿ ಹಾಗೂ ಪೇಲೆಗಳನ್ನು ತಂದಿರಿಸಿದನು. ಅವುಗಳನ್ನು 'ಪರಾಮರಿಸುತ್ತ' ಹುಕುಮ್‌ಚಂದರು ಕೇಳಿದರು,

"ಮನೋಮಾಜರಾದ ಸ್ಥಿತಿ–ಹೇಗಿದೆ?"

"ಯಾವುದೇ ತೊಂದರೆ ಇಲ್ಲಾ ಸರ್. ಇಲ್ಲಿಯ ಲಂಬರದಾರನು* ಪ್ರತಿ ದಿನ ಠಾಣೆಗೆ ಬಂದು ವರದಿ ಕೊಡುತ್ತಾನೆ. ಯಾವ ನಿರಾಶ್ರಿತರೂ ಇದುವರೆಗೆ ಇಲ್ಲಿ ಬಂದಿಲ್ಲ. ಬ್ರಿಟಿಶರು ಹೊರಟುಹೋದ, ಅಥವಾ ದೇಶವು ವಿಭಜನೆಯಾದ ವಿಷಯವಾದರೂ ಇಲ್ಲಿಯವರಿಗೆ ಗೊತ್ತಿದೆಯೊ ಇಲ್ಲವೊ!"

"Very Good. ಆದರೂ ಇದು ಗಡಿಯಲ್ಲೇ ಇರುವ ಹಳ್ಳಿ. ಮೇಲಾಗಿ ದೊಡ್ಡ ಸೇತುವೆ ಬೇರೆ ಇದೆ. ಆದ್ದರಿಂದ ವಿಶೇಷ ನಿಗಾ ಇರಲಿ. ಇಲ್ಲಿ ಯಾರಾದರೂ ಗುಂಡಾ ಜನರು ಇದ್ದಾರೆಯೊ?"

"ಒಬ್ಬನೇ ಒಬ್ಬ ಇದ್ದಾನೆ. ಅವನೇ ಜಗ್ಗಾ. ಹಳ್ಳಿಯನ್ನು ಬಿಟ್ಟು ಹೋಗಕೂಡದೆಂದು ತಾವೇ ಒಮ್ಮೆ ಆರ್ಡರ್ ಮಾಡಿದ್ದೀರಿ. ಅವನು ಅದರಂತೆ ಲಂಬರದಾರನಿಗೆ ವರದಿ ಕೊಡುತ್ತಾನೆ"

"ಯಾವ ಜಗ್ಗಾ ಅವ?"

"ಜಗತ್‌ಸಿಂಗ್ ಎಂದು ಅವನ ಹೆಸರು. ಎರಡು ವರ್ಷದ ಹಿಂದೆ ಅಲಂಸಿಂಗನೆಂಬ ದರೋಡೆಖೋರನನ್ನು ಗಲ್ಲಿಗೇರಿಸಲಾಯಿತಷ್ಟೆ. ಅವನ ಮಗನೇ ಈತ. ಇಡೀ ಊರಿನಲ್ಲಿಯೇ

* ಹಳ್ಳಿಯ ಮುಲ್ಕೀ ಅಧಿಕಾರಿ

ಅವನಷ್ಟು ಎತ್ತರದ, ಬಲಿಷ್ಠನಾದ ಆಳು ಇಲ್ಲ. ಸದ್ಯಕ್ಕೆ ಯಾವುದೇ ರೀತಿಯಿಂದ ಅವನ ಉಪಟಳವಿಲ್ಲ.''

''ಹಾಂ! ಅವನೆ? ಈಗ ನೆನಪಿಗೆ ಬಂತು. ಅವನಂಥ ಬದ್ಮಾಷ್ ಊರಲ್ಲಿ ಸುಮ್ಮನೆ ಕುಳಿತಿದ್ದಾನೆಂದರ ಆಶ್ಚರ್ಯ.''

''ಅದು ನಿಜ, ಸರ್. ಪಂಜಾಬದ ಪೊಲೀಸರಿಂದ ನೀಗದ ಕೆಲಸವನ್ನು ೧೭ ವರ್ಷದ ಹುಡುಗಿಯೊಬ್ಬಳು ಮಾಡಿದ್ದಾಳೆ. ಅವಳ ಕಣ್ಣುಗಳ ಆಕರ್ಷಣೆಯೇ ಅವನನ್ನು ಊರಲ್ಲಿ ಕಟ್ಟಿ ಹಾಕಿದೆ!''

''ಹೀಗೋ! ಯಾರು ಆಕೆ?'' ಸಾಹೇಬರ ಆಸಕ್ತಿಯೂ ಚಿಗುರಿತು.

''ಆಕೆ ಇಮಾಮುಬಕ್ಷನೆಂಬ ಮುಲ್ಲಾನ ಮಗಳು.''

ಫೌಜದಾರನು ಜಗತ್‌ಸಿಂಗನ ಬಗ್ಗೆ ಹೇಳಿದುದು ಹದಿನಾರಾಣೆ ಸತ್ಯವಾಗಿದ್ದಿತು. ಅದೇ ದಿನ ರಾತ್ರಿ ಜಗ್ಗಾ ಎಂದಿನಂತೆ ಮನೆಯಲ್ಲಿ ತನ್ನ ತಾಯಿ ಮಲಗುವ ದಾರಿಯನ್ನೇ ನೋಡುತ್ತಿದ್ದನು. ಅಷ್ಟರಲ್ಲಿ ಅವನು ಅಪೇಕ್ಷಿಸಿದ್ದ ಸಂಕೇತದ ಧ್ವನಿ ಕೇಳಬಂದಿತು. ಅರ್ಥಾತ್ ಗೂಡ್ಸ್ ಗಾಡಿಯ ಆಗಮನವಾಗಿದ್ದಿತು! ತನ್ನ ಪ್ರೇಯಸಿ ನೂರನಳೂ ಈ ಗಳಿಗೆಗೆ ಮನೆ ಬಿಟ್ಟು ಹೊರಡುವಳು ಎಂಬ ಸಂದೇಶವನ್ನು ಅದು ತಂದಿದ್ದಿತು.

ಜಗ್ಗಾ ಊರ ಹೊರಗೆ ನದಿಯ ಮಳಲ ದಂಡೆಯ ಮೇಲೆ ಕುಳಿತುಕೊಂಡಿದ್ದನು. ಒಣ ಮೋಡಗಳ ಮರೆಯಲ್ಲಿದ್ದ ಚಂದ್ರನ ಮಬ್ಬುಬೆಳಕು ನಿತಾಂತವಾಗಿ ಪಸರಿಸಿತ್ತು. ಆ ಗಳಿಗೆಯಲ್ಲಿ ಹಿಂದಿನಿಂದ ಯಾರೋ ಬಂದು ಅವನ ಕಣ್ಣು ಮುಚ್ಚಿದರು.

ಪರಿಚಿತವಾದ, ಸುಕೋಮಲ ಕೈಬೆರಳುಗಳು. ಜಗ್ಗಾ ಅವಳ ಕೈಯನ್ನು ಹಿಡಿದು ಅವಳನ್ನು ತನ್ನ ಬದಿಗ ಎಳೆದುಕೊಳ್ಳುತ್ತ ಬಲಿಷ್ಠವಾದ ತನ್ನ ತೋಳುಗಳಿಂದ ಬಿಗಿದಪ್ಪಿದನು. ಅವನ ಪ್ರಣಯಾತುರದ ರಭಸಕ್ಕೆ ಸರಿಜೋಡಿಯಾಗಲು ಸಾಧ್ಯವಾಗದೇ ನೂರನಳು—

''ಬಿಡು ನನ್ನನ್ನು! ಬಿಟ್ಟುಬಿಡು. ನಾನು ಹೋಗುತ್ತೇನೆ'' ಎಂದು ಗೋಗರೆದಳು.

ಅಷ್ಟರಲ್ಲಿ ಎಲ್ಲಿಯೋ ಗುಂಡು ಹಾರಿದ ಸಪ್ಪಳ ಕೇಳಬಂತು.

ಬೆಚ್ಚಿಬಿದ್ದ ಆಕೆ, ''ಯಾರೋ ಗುಂಡು ಹಾರಿಸಿದರು. ಊರಿನಿಂದೇ ಕೇಳಬಂತಲ್ಲವೆ?'' ಎಂದಳು.

ಜಗ್ಗಾ, ''ಈಗೆಲ್ಲಿಯ ಗುಂಡು? ಅದಲ್ಲ ನಿನ್ನ ಭ್ರಮೆ,'' ಎನ್ನುತ್ತ ಅವಳನ್ನು ಒಂದು ಚಿಕ್ಕ ಬಂಡಗಲ್ಲಿನ ಹಿಂಬದಿಗೆ ಕರೆದೊಯ್ದನು. ಆಕೆ—

''ಅಯ್ಯೋ, ಈಗ ಬೇಡ, ನಿನಗೆ ಅಲ್ಲಾನ ಆಣೆಯಿದೆ. ನನ್ನನ್ನು ಬಿಟ್ಟು ಬಿಡು. ಹೀಗೆಲ್ಲ ಮಾಡಿದರ ನಾ ಇನ್ನೊಮ್ಮೆ ಬರುವುದೇ ಇಲ್ಲ'' ಎಂದಳು.

''ಬಿಟ್ಟು ಹೋಗುವವಳು ಈಗ ಬಂದೆಯೇಕೆ?'' ಎಂದು ಜಗ್ಗಾನ ಸವಾಲು.

ಆಗ ಮತ್ತೆ ಒಂದಲ್ಲ ನಾಲ್ಕೈದು ಗುಂಡು ಹಾರಿದುದರ ಸಪ್ಪಳ ಕೇಳ ಬಂದಿತು. ನೂರನ್ ನಿಜವಾಗಿಯೂ ಹೆದರಿದಳು. ''ಅಯ್ಯೋ, ಅಲ್ಲಿ ಯಾರದೋ ಖೂನಿಯಾಗುತ್ತಲಿದೆ. ನಿನಗ ಅದರ ಯೋಚನೆಯೇ ಇಲ್ಲ, ನನ್ನ ತಂದೆಗೆ ಎಚ್ಚರವಾಗಿ ನನ್ನನ್ನು ಹುಡುಕುತ್ತಾರೆ. ಇನ್ನೇನು ಗತಿ?'' ಎಂದಳು.

ಜಗ್ಗಾ ಅದಕ್ಕೆ ಕಿವಿಗೊಡುವ ಸ್ಥಿತಿಯಲ್ಲಿರಲಿಲ್ಲ. ಕೆಲಹೊತ್ತು ಯಾವ ಶಬ್ದವೂ ಕೇಳಬರಲಿಲ್ಲ. ಆಮೇಲೆ ಕೇಕೆ ಹಾಕುತ್ತ ಇತ್ತ ಕಡೆಗೇ ಹೊರಟಿರುವ ಜನದ ಸಪ್ಪಳ ಕೇಳಿಸಿತು.

ಹೌದು, ಐದಾರು ಜನ ಊರಿನ ಅಗಸೆಯ ಬಾಗಿಲಿನಿಂದ ಬರುತ್ತಿದ್ದರು. ಅವರಲ್ಲಿ ಒಬ್ಬನ ಕೈಯಲ್ಲಿ ಟಾರ್ಚ್ ಇದ್ದಿತು. ಭಯಾನ್ವಿತೆಯಾದ ನೂರಸಳನ್ನು ಬದಿಗೆ ಸರಿಸಿಕೊಂಡು ಜಗ್ಗಾ ಅತ್ತ ಕಡೆಗೆ ನೋಡಿದನು.

ಅವರು ಸಾಕಷ್ಟು ದೂರವಿದ್ದರು. ಕಣ್ಣಳವಿಗೆ ಬಂದಾಗ ಜಗ್ಗಾನಿಗೆ ಗುರುತು ಹತ್ತದೇ ಇರಲಿಲ್ಲ. ನೂರಸ್ ಜಗ್ಗಾನ ಮುಖ ನೋಡುತ್ತ

"ನಿನಗೆ ಅವರ ಗುರುತಿದೆಯ?" ಎಂದು ಕೇಳಿದಳು.

"ಗುರುತಿರದೆ ಏನು? ಅವನೇ ಬದ್ಮಾಷ್ ಮಲ್ಲಿ. ದರೋಡೆಗೆ ಇದು ಸಮಯವಲ್ಲ ಎಂದು ನೂರು ಸಲ ಹೇಳಿದ್ದೇನೆ. ಅದೂ ನಮ್ಮ ಊರಿಗೇ ಬಂದಿದ್ದಾನೆ. ಏನು ಸೊಕ್ಕು! ಇದನ್ನು ತೀರಿಸಲೇಬೇಕು"—ಎಂದು ಜಗ್ಗಾ ಕರಕರನೆ ಹಲ್ಲು ಕಡಿದನು. ಆ ರಭಸದಲ್ಲಿಯೇ ನೂರನಳನ್ನೂ ಮೇಲೆಬ್ಬಿಸಿ ಊರಿನ ಕಡೆ ಹೆಜ್ಜೆ ಹಾಕಿದನು.

ಅಷ್ಟರಲ್ಲಿ ಊರೊಳಗೆ ಅಲ್ಲಿ ಇಲ್ಲಿ ದೀಪಗಳು ಹೊತ್ತಿದ್ದವು. ಜನರ ಓಡಾಟ ಕೇಳಿಸಿತು.

"ಏನೊ ಅನಾಹುತವಾಗಿದೆ. ನನ್ನ ತಂದೆ ಹುಡುಕುತ್ತಾರೆ. ಅಪರಾತ್ರಿಯಲ್ಲಿ ನಾನು ಇಲ್ಲವೆಂದು ತಿಳಿದರೆ ಕೊಂದೇಬಿಡುತ್ತಾರೆ" ಎನ್ನುತ್ತ ಅಳತೊಡಗಿದಳು.

"ಸುಮ್ಮನಾಗುತ್ತೀಯೊ? ಏನು ಬಿಗಿಯಲೊ?" ಅರ್ಧ ತಾಸಿನ ಹಿಂದೆ ತನ್ನ ಮೇಲೆ ಪ್ರೀತಿಯ ಮಾತುಗಳ ಮಳೆಯನ್ನು ಹರಿಯಿಸಿದ ವ್ಯಕ್ತಿ ಈತನೇ ಎಂದು ನಂಬದಷ್ಟು ಒರಟುತನದಿಂದ ಜಗ್ಗಾ ಅವಳನ್ನು ಸುಮ್ಮನಿರಿಸಿದನು. ಊರು ಹತ್ತಿರ ಬಂತು. ಜಗ್ಗಾ ತುಸು ಶಾಂತನಾಗಿ ಕೇಳಿದ—"ನಾಳೆ ಬರುತ್ತೀಯಾ?"

"ಇಲ್ಲಿ ನನ್ನ ಜೀವ ಹೋಗುತ್ತಿರುವಾಗ ನಿನಗೆ ನಾಳಿನ ಚಿಂತೆ! ನಿನ್ನ ಮುಖವನ್ನೇ ನಾನು ಇನ್ನು ನೋಡುವುದಿಲ್ಲ" ಎಂದು ಅಳುತ್ತಲೇ ಕತ್ತಲೆಯಲ್ಲಿ ಆಕೆ ಕಣ್ಮರೆಯಾದಳು.

ಜಗ್ಗಾ ತನ್ನ ಮನೆಯ ಹಿಂಬದಿಗೆ ಬಂದು ನೋಡಿದಾಗ, ಅವನ ತಾಯಿಯ ಸುತ್ತು ಹಲವು ಜನ ಕುಳಿತಿದ್ದುದು ಕಾಣಿಸಿತು. ಅವರ ಮಾತಿನಿಂದ ದರೋಡೆಕೋರರು ಸಾಹುಕಾರ ರಾಮಲಾಲನ ಮನೆಯನ್ನು ನುಗ್ಗಿ ಹಣ, ದಾಗೀನುಗಳನ್ನು ಅಪಹರಿಸಿದ್ದಲ್ಲದೇ ಅವನನ್ನು ಕೊಂದು ಹಾಕಿದ್ದಾರೆಂದೂ ತಿಳಿಯಬಂತು. ಅವರು ತನ್ನ ತಾಯಿಗೆ ಕೇಳುತ್ತಿದ್ದ ಪ್ರಶ್ನೆಗಳ ಮೇಲಿಂದ ತನ್ನ ಮೇಲೆಯೆ ಅವರ ಗುಮಾನಿಯಿದೆಯೆಂದು ಅವನಿಗೆ ಸ್ಪಷ್ಟವಾಯಿತು.

ಜಗ್ಗಾ ಮನೆಯೊಳಗೆ ಕಾಲಿಡದೇ ಬಂದ ಹಾಗೆಯೇ ಹೊರಟುಬಿಟ್ಟನು. ಎರಡು ದಿನ ಅಲ್ಲಿ ಇಲ್ಲಿ ತಲೆಮರೆಸಿಕೊಂಡು ತಿರುಗಾಡಿದನು. ಕಣ್ಣಿಗೆ ನಿದ್ದೆಯಿಲ್ಲ, ಹೊಟ್ಟೆಗೆ ಆಹಾರವಿಲ್ಲ. ಊರಿಗೆ ಮರಳಿ ಯಾಕೆ ಹೋಗಬಾರದು? ಪೊಲೀಸರು ನಾಕು ದಿನ ಲಾಕಪ್‌ನಲ್ಲಿ ಇಟ್ಟಾರು. ತಾನಂತೂ ದರೋಡೆ, ಕೊಲೆ ಮಾಡಿಲ್ಲ—ಎಂದು ಯೋಚಿಸಿ ಮೂರನೆಯ ರಾತ್ರಿ ಹಿಂತಿರುಗಿದನು. ಇದ್ದು ಬಿದ್ದುದನ್ನು ಊಟ ಮಾಡಿ ಹೊರಸಿನ ಮೇಲೆ ನಿದ್ದೆ ಹೋದನು.

ಮಲಗಿದ್ದ ಮಗನಿಗೆ ಚದ್ದರನ್ನು ಹೊಚ್ಚಿ ನಸುಕಿನಲ್ಲಿ ಅವನ ತಾಯಿ ಹೊಲಕ್ಕೆ ಹೊರಟಳು. ಎರಡು ತಾಸು ಹೊತ್ತೇರಿದಮೇಲೆ ಹಿಂತಿರುಗಿ ಬಂದು ನೋಡುತ್ತಾಳೆ—ತನ್ನ ಮನೆಯ ಹೊರಗಡೆ ಪೋಲೀಸರು! ಒಳಗೆ ಬಂದಳು. ಪೋಲೀಸರು ಜಗ್ಗಾನ ಕೈಗೆ ಬೇಡಿ ತೊಡಿಸಿದ್ದಲ್ಲದೆ ಕಾಲಿಗೆ ಸರಪಳಿ ಕಟ್ಟಿದ್ದರು.

ಜಗ್ಗಾನಿಗೆ ಅದರ ಪರಿವೆಯೇ ಇಲ್ಲ. ಸುಖವಾಗಿ ಗೊರಕೆ ಹೊಡೆಯುತ್ತಿದ್ದಾನೆ! ಪೋಲೀಸರು ಸಿಂಹವನ್ನು ಕಟ್ಟಿಹಾಕಿದ ನಿಶ್ಚಿಂತೆಯಿಂದ ತಮ್ಮ ಬಂದೂಕಿನ ಹಿಂಬದಿಯಿಂದ ತಿವಿಯುತ್ತ ''ಏಳೋ ಬದ್ಮಾಷ್!'' ಎಂದು ಎಬ್ಬಿಸುತ್ತಿದ್ದಾರೆ.

ಮುದುಕಿ ತನ್ನ ಮಗನಿದ್ದಲ್ಲಿಗೆ ಧಾವಿಸಿದಳು. ಅವಳ ಅಳುವಿನ ಸ್ವರವೂ ಸೇರಿ ಜಗ್ಗಾ ಎದ್ದು ಕುಳಿತನು. ಪೋಲೀಸರ ಆಗಮನವನ್ನು ಅವನು ನಿರೀಕ್ಷಿಸಿಯೇ ಇದ್ದ.

ಮುದುಕಿ, ''ಅಯ್ಯೋ, ಅವನದೇನೂ ತಪ್ಪಿಲ್ಲ. ಗುರುವಿನ ಆಣೆ ಮಾಡಿ ಹೇಳುತ್ತೇನೆ. ಅವನು ಆ ರಾತ್ರಿ ಹೊಲಕ್ಕೆ ಹೋಗಿದ್ದನು. ದರೋಡೆಖೋರರ ಸಂಗಡ ಅವನು ಇರಲಿಲ್ಲ. ಅವನನ್ನು ಬಿಟ್ಟುಬಿಡಿರಿ'' ಎಂದು ಪೋಲೀಸರಿಗೆ ಅಂಗಲಾಚಿದಳು.

''ರಾತ್ರಿಯಾದ ಮೇಲೆ ಮನೆ ಬಿಟ್ಟು ಹೋಗಬಾರದೆಂದು ಹುಕುಂ ಆಗಿದ್ದರೂ ಅವನು ಹೋದನೇಕೆ?'' ಎಂದು ಜಮಾದಾರನ ಪ್ರಶ್ನೆ.

''ಅವ ನಿಜವಾಗಿಯೂ ಹೊಲಕ್ಕೆ ಹೋಗಿದ್ದ. ದರೋಡೆಖೋರರ ಸಂಗಡ ಇದ್ದಿಲ್ಲ, ಅವನದೇನೂ ತಪ್ಪಿಲ್ಲ'' ಎಂದು ಮುದುಕಿ ಅಳುವನ್ನೂ ಸೇರಿಸಿ ಚೀರಿದಳು.

ಜಮಾದಾರನು ಅಣಕದ ನಗೆಯಿಂದ ಹೇಳಿದನು : ''ನೋಡೋಣ, ನೋಡೋಣ, ನಿನ್ನ ಮಗನದು ತಪ್ಪಿಲ್ಲ ಅನ್ನುವುದಕ್ಕೆ ಏನಾದರೂ ಪುರಾವೆ ತಗೊಂಡು ಬಾ. ಅಲ್ಲೇ ಮ್ಯಾಜಿಸ್ಟ್ರೇಟ್ ಸಾಹೇಬರ ಮುಂದೆ ತೋರಿಸು.''

ಅಂದಹಾಗೆ ಅವಳಲ್ಲಿ ಒಂದು ಪುರಾವೆ ಇತ್ತು! ಆಕೆ ಅಳುವುದನ್ನು ನಿಲ್ಲಿಸಿ, ಒಳಗಿನಿಂದ ಒಂದು ಕಾಗದದ ಪೊಟ್ಟಣವನ್ನು ತಂದು ಜಮಾದಾರನ ಕೈಗಿತ್ತಳು. ಅದರಲ್ಲಿದ್ದುದು ಒಡಕು ಬಳೆಗಳು!

''ದರೋಡೆಖೋರರು ತಿರುಗಿ ಹೋಗುವಾಗ ಜಗ್ಗಾನನ್ನು ಒದರಿದರು. ಮತ್ತು ಇವನ್ನು ತೊಟ್ಟುಕೋ ಎಂದು ಹೇಳುತ್ತ ಕಿಟಕಿಯೊಳಗಿಂದ ಒಗೆದು ಹೋದರು. ಇವನು ಅವರ ಸಂಗಡ ಹೋಗಲಿಲ್ಲವೆಂದು ಅವರಿಗೆ ಸಿಟ್ಟು. ಜಗ್ಗಾನಿಗೆ ಅಪಮಾನ ಮಾಡಲೆಂದೇ....''

''ಬಾಯಿ ಮುಚ್ಚೇ!''

ಇದುವರೆಗೆ ಸಮಚಿತ್ತದಿಂದ ಪರಿಸ್ಥಿತಿಯನ್ನು ಅವಲೋಕಿಸುತ್ತಿದ್ದ ಜಗ್ಗಾ, ಮಲ್ಲಿಯು ತನಗೆ ಬಳೆಗಳನ್ನು ತೊಡಹೇಳಿದ ವರ್ತಮಾನವನ್ನು ಕೇಳಿ ಕಿಡಿಕಿಡಿಯಾದನು. ತಾಯಿಯನ್ನು ಗದರಿಸಿ ಸುಮ್ಮನಿರಿಸಿದನು.

''ಜಮಾದಾರ ಸಾಹೇಬ್! ನಾ ದರೋಡೆ ಮಾಡಿಲ್ಲ. ನಮ್ಮೂರೊಳಗೇ ನಾ ಹೇಗೆ ದರೋಡೆ ಮಾಡಿಯೇನು? ಆದೂ ಲಾಲಾ ನಮಗೆ ಆಪತ್ತಿನಲ್ಲಿ ನೆರವಾದವರು. ನನಗೆ ಈ ವಿಷಯ ಏನೂ ಗೊತ್ತಿಲ್ಲ'' ಎಂದು ನುಡಿದನು.

"ಹಾಗಿದ್ದರೆ ಈ ಬಳೆಗಳನ್ನು ನಿನಗೆ ಯಾರು ಕೊಟ್ಟದ್ದು? ನಿನಗದು ಗೊತ್ತಿರಲೇ ಬೇಕು"—ಎನ್ನುತ್ತ ಜಮಾದಾರನು ತನ್ನ ಬೊಗಸೆಯನ್ನು ಮುಂದೆ ಮಾಡಿದನೋ ಇಲ್ಲವೋ, ಜಗ್ಗಾ ಬೇಡಿಗಳನ್ನು ಹಾಕಿದ ತನ್ನ ಮುಷ್ಟಿಯನ್ನು ಆ ಬಳೆಗಳ ಮೇಲೆ ಅಪ್ಪಳಿಸಿದನು. ಜಮಾದಾರನ ಕೈಗೆ ಚೂರುಗಳು ತಾಕಿ ರಕ್ತ ಬಂದಿತು. ಪೊಲೀಸರು ಜಗ್ಗಾನನ್ನು ಸುತ್ತುವರಿದು ಕೈಬಡಿಗೆ–ಬಂದೂಕುಗಳಿಂದ ಇಕ್ಕರಿಸತೊಡಗಿದರು. ಜಗ್ಗಾನ ತಾಯಿಯು ಆಕ್ರೋಶ ಗೈಯುತ್ತ ಅವನ ಮೈಗೆ ಅಡ್ಡಲಾಗಿ ನಿಂತಾಗಲೇ ಅವರು ನಿಲ್ಲಿಸಿದರು.

ಜಮಾದಾರನು ತನ್ನ ರಕ್ತಸಿಂಚಿತ ಕೈಗಳನ್ನು ಒರೆಸಿಕೊಳ್ಳುತ್ತ, "ಆಗಲಿ. ಈ ಸೂವರ್‌ನ ಬಾಯಿಂದ ದರೋಡೆಖೋರರ ಹೆಸರನ್ನು ಹೇಳಿಸದೇ ಬಿಡುವುದಿಲ್ಲ" ಎಂದು ಹೇಳಿ ಜಗ್ಗಾನನ್ನು ಎಳೆದೊಯ್ಯಲು ಆಜ್ಞಾಪಿಸಿದನು.

ಹೊರಗೆ ಬಂದೊಡನೆಯೇ ಜಗ್ಗಾನ ಕೋಪ ತಣ್ಣಗಾಗಿದ್ದಿತು. ಪೊಲೀಸರು ತನ್ನನ್ನು ಬಂಧಿಸುವುದು ಮೊದಲ ಸಲವೇನೂ ಆಗಿರಲಿಲ್ಲ. ದಾರಿಯಲ್ಲಿ ನೋಡುತ್ತ ನಿಂತವರ ಕಡೆಗೆ ಕೈಮಾಡಿ ನಗುತ್ತಲೇ ಮುಂದೆ ಸಾಗಿದನು.

ರಾಮಲಾಲನ ಕೊಲೆಯ ಸಂಬಂಧದಲ್ಲಿ ಸಂಶಯಾಸ್ಪದರೆಲ್ಲರನ್ನೂ ಹಿಡಿದು ತರಬೇಕೆಂಬ ಫೌಜದಾರ ಸಾಹೇಬರ ಆಜ್ಞೆಯನ್ನು ಜಮಾದಾರನು ಇನ್ನೊಬ್ಬ ವ್ಯಕ್ತಿಗೂ ಅನ್ವಯಿಸಿದ್ದನು. ಅವನೇ ಇಕ್‌ಬಲ್. ಗುರುದ್ವಾರಾದಲ್ಲಿ ತಂಗಿದ್ದ ಅವನನ್ನು ಹಿಡಿದು ತರಲು ಬೇರೆ ಇಬ್ಬರು ಪೊಲೀಸರನ್ನು ಕಳಿಸಲಾಗಿದ್ದಿತು. ಅವನು ಸುಶಿಕ್ಷಿತನಾಗಿ ಕಾಣುತ್ತಿದ್ದುದರಿಂದ ಬೇಡಿ ಹಾಕಿರಲಿಲ್ಲ.

ಎಲ್ಲರೂ ಡಾಕ್‌ಬಂಗಲೆಗೆ ಬಂದರು. ತಾನು ಕ್ಯಾಂಪ್ ಹಾಕಿದ ದಿನವೇ ಭೀಕರವಾದ ಕೊಲೆ ಮತ್ತು ದರೋಡೆ ನಡೆದದ್ದರಿಂದ ಹುಕುಮ್‌ಚಂದರು ವ್ಯಗ್ರರಾಗಿದ್ದರು. ಫೌಜದಾರನು ಪೂರ್ವಪರಿಶೀಲನೆ ಮುಗಿಸಿಕೊಂಡು, ಜಮಾದಾರನೊಂದಿಗೆ ಸಾಹೇಬರ ಹತ್ತಿರ ಬಂದನು. ಬಂಧಿಸಿ ತಂದವರ ಬಗ್ಗೆ ವರದಿಯಾಯಿತು. ಅವರಲ್ಲಿ ಜಗ್ಗಾ ತನ್ನ ಊರಿನಲ್ಲಿಯೆ ದರೋಡೆ ಮಾಡುವುದು ಅಸಂಭವವೆಂದು ಹುಕುಮ್‌ಚಂದರಿಗೆ ಮೊದಲ ನಿಟ್ಟಿಗೇ ಅನಿಸಿತು.

ಅದೇ ಮಾತನ್ನು ಅನುಮೋದಿಸುತ್ತ ಫೌಜದಾರನು—

"ಹೌದು ಸಾಹೇಬ್. ಜೊತೆಗೆ ಕೊಲೆಗಾರರು ಬಿಟ್ಟು ಹೋದ ಬಳೆಗಳೂ ಇವೆಯಲ್ಲ. ಆ ಮೂಲಕ ಅವರೆಲ್ಲರ ಹೆಸರನ್ನು ಜಗ್ಗಾನಿಂದ ಹೊರಡಿಸಿ ಕೂಡಲೇ ತಮಗೆ ವರದಿ ಮಾಡುವೆ" ಎಂದನು.

"ಸರಿ. ಆ ಇನ್ನೊಬ್ಬ?"

"ಅವನು ದಿಲ್ಲಿಯಿಂದ ಬಂದಿದ್ದಾನೆ, ಸರಕಾರ್. ಎಜ್ಯುಕೇಟೆಡ್ ವ್ಯಕ್ತಿ. ಹೆಸರು ಇಕ್‌ಬಲ್ ಎಂದು—"

"ಯಾವ ಇಕ್‌ಬಲ್?" ಇಕಬಲ್ ಎಂಬುದು ಸೀಖರಿಗೂ ಮುಸ್ಲಿಮರಿಗೂ ಸಮಾನವಾದ ಹೆಸರು.

ಜಮಾದಾರ ಉತ್ತರಿಸಿದ : "ಸರಕಾರ, ತಾನು ಯಾವ ಜಾತಿಯವ, ಯಾತಕ್ಕಾಗಿ ಬಂದದ್ದು ಇದಾವುದನ್ನೂ ಹೇಳುವುದಿಲ್ಲವಂತೆ. ಕೋರ್ಟಿನಲ್ಲಿಯೇ ಹೇಳುವೆ ಅನ್ನುತ್ತಾನೆ."

"ಹೀಗೇನು?"

"ಸಾಹೇಬ್, ಅವನು ರಾಜಕೀಯ ಚಳುವಳಿಗಾರನ ಹಾಗೆ ಕಾಣುತ್ತಾನೆ. ಅವನ ಬಗ್ಗೆಯೂ ತಮಗೆ ಬೇಗ ರಿಪೋರ್ಟ್ ಮಾಡುತ್ತೇನೆ. ವಾರಂಟ್‌ಗೆ ಅಷ್ಟು ಸಹಿಮಾಡುವಿರಾ?"

ಮ್ಯಾಜಿಸ್ಟ್ರೇಟರ ಸಹಿ ಪಡೆದ ಮೇಲೆ ಜಗ್ಗಾ ಮತ್ತು ಇಕ್‌ಬಲ್ ಇಬ್ಬರನ್ನು ಒಂದು ಜಟಕಾ ಬಂಡಿಯಲ್ಲಿ ಚಂದನನಗರಕ್ಕೆ ಕರೆದುಕೊಂಡು ಹೊರಟರು.

ಮಧ್ಯ ವಯಸ್ಸಿನ ಜಟಕಾವಾಲಾ ಜಗ್ಗಾನ ಪರಿಚಯದವನೇ. ಅವನ ಹೆಂಡತಿ ಕೆಲ ವರ್ಷಗಳ ಹಿಂದೆ ತೀರಿಕೊಂಡದ್ದು ಜಗ್ಗಾನ ನೆನಪಿಗೆ ಬಂತು.

"ಭೋಲಾ, ಮುಸಲ್ಮಾನರು ತಾವು ಅಪಹರಿಸಿದ ಸ್ತ್ರೀಯರನ್ನು ಬಹಳ ಕಮ್ಮಿ ಬೆಲೆಗೆ ಮಾರಾಟ ಮಾಡುತ್ತಾರಂತೆ. ನೀನೂ ಸೋವಿಯ ದರದಲ್ಲಿ ಒಂದು ಒಳ್ಳೇ ಹೆಣ್ಣನ್ನು ಪಡೆದು ಮದುವೆಯಾಗಬಾರದೇಕೆ?" ಎಂದು ಜಗ್ಗಾ ನಗೆಯಾಡಿದನು.

"ಅದ್ಯಾಕೊ ಸರದಾರಾ, ನೀನು ಏನೂ ಹಣ ಖರ್ಚುಮಾಡದೇ ಮುಸಲ್ಮಾನ್ ಹೆಣ್ಣನ್ನು ಪಡೆಯಬಹುದು! ಅಲ್ಲವೆ? ಶೀಲಗೆಟ್ಟ ಹೆಣ್ಣನ್ನು ಮದುವೆಯಾಗುವಷ್ಟು ನಾನೇನು ಗತಿಗೆಟ್ಟಿಲ್ಲ" ಜಟಕಾವಾಲಾ ಹೇಳಿದನು.

ಜಗ್ಗಾನಿಗೆ ಆಘಾತವೇ ಆಯಿತು. "ಏ, ಭೋಲಾ, ನನ್ನ ಕೈಗೆ ಬೇಡಿ ಇರದಿದ್ದರೆ ನಿನ್ನ ನಾಲಗೆಯನ್ನು ಕಿತ್ತು, ಹಲ್ಲನ್ನೇ ಪುಡಿಪುಡಿ ಮಾಡುತ್ತಿದ್ದ" ಎಂದು ಹೇಳುತ್ತ ಜಗ್ಗಾ ಅಕ್ಕಸತನದಿಂದ ಉಗುಳಿದನು.

ಅಂತೂ ಚಂದನನಗರದ ಒಬ್ಬ ಟಾಂಗಾವಾಲಾನಿಗೂ ತನ್ನ—ನ್ನೂರನಳ ಸಂಬಂಧ ತಿಳಿದಿರಬೇಕಾದರೆ, ಈ ವಿಷಯ ಇನ್ನೆಷ್ಟು ಬೊಬ್ಬಾಟವಾಗಿದೆಯೊ ಎಂದು ಅವನಿಗೆ ಕಳವಳವಾಯಿತು. 'ನಿನ್ನ ಮುಖವನ್ನೇ ನೋಡುವದಿಲ್ಲ'—ಎಂದು ಹೇಳಿ ಹೋಗಿದ್ದ ಅವಳ ಮುಗ್ಧ ಮುಖ ಅವನ ಕಣ್ಣಿಗೆ ಕಟ್ಟಿತು.

ಜಗ್ಗಾ ಮರಳಿ ಠಾಣೆಗೆ ಬಂದದ್ದು ಅಲ್ಲಿಯ ಪೋಲೀಸಿನವರಿಗೆ ಮೋಜಿನ ಸಂಗತಿಯೇ ಆಯಿತು. ಅವರು ಅವನನ್ನು ಸ್ವಾಗತಿಸಿದ ರೀತಿ ಇದು :

"ಮತ್ತೆ ಬಂದಿಯೇನಪ್ಪಾ? ಇದು ನಿನ್ನ ಮಾವನ ಮನೆ ಅಂತ ತಿಳಿದ್ದಾಗೆ ಕಾಣಿಸ್ತದೆ."

"ಹೌದು, ನಾನು ಕೆಡಿಸಿದ ಅನೇಕ ಹುಡಿಗೆಯರ ಅಪ್ಪಂದಿರೇ ಇಲ್ಲಿ ಪೋಲೀಸರಾಗಿ ಇರುವಾಗ ಇದು ನನ್ನ ಮಾವನ ಮನೇನೇ ಅಲ್ಲವೆ!" ಎಂದು ಜಗ್ಗಾ ಚುರುಕಾಗಿ ಹೇಳಿದನು.

"ಇನ್ನೂ ನಿನ್ನ ಬದ್ಮಾಷಗಿರಿ ಬಿಟ್ಟಿಲ್ಲ. ಫೌಜದಾರ ಸಾಹೇಬರು ಬರಲಿ ತಡೀ ಮಗನೇ, ನಿನ್ನ ಗುದದೊಳಗೆ ಖಾರಪುಡಿ ತುರುಕಿದೆವೆಂದರ ಗೊತ್ತಾಗುತ್ತದೆ" ಎಂದರವರು.

☆ ☆ ☆ ☆

ಆ ವರ್ಷದ ಸೆಪ್ಟೆಂಬರ್ ತಿಂಗಳಲ್ಲಿ ಮನೋಮಾಜರಾದ ನಿತ್ಯ ಬದುಕಿನ ಕ್ರಮವೇ ತಪ್ಪಿದಂತಾಗಿತ್ತು. ಗಾಡಿಗಳು ಯಾವಾಗ ಬಂದು ಹೋಗುವವೆಂಬುದರ ಲೆಕ್ಕವೇ ಹತ್ತುತ್ತಿರಲಿಲ್ಲ. ಸ್ಟೇಶನ್ ಮತ್ತು ಸೇತುವೆಯ ನಡುವೆ ರಕ್ಷಣೆಗಾಗಿ ಸೀಖ ಸೈನಿಕರ ಒಂದು ಚಿಕ್ಕ ಪಡೆಯು ತಳವೂರಿತ್ತಾದ್ದರಿಂದ, ಆ ಕಡೆಗೆ ಜನರು ಹೆಚ್ಚಾಗಿ ಹಾಯುತ್ತಿರಲೂ ಇಲ್ಲ.

ಅಂದು ಪಾಕಿಸ್ತಾನದ ಕಡೆಯಿಂದ ಒಂದು ಗಾಡಿಯು ಮನೋಮಾಜರಾ ಸ್ಟೇಶನ್ನಿನಲ್ಲಿ ಬಂದು ನಿಂತಿತು. ಅದರ ಮೇಲ್ಗಡೆ ಯಾರೂ ಕುಳಿತಿರದ್ದರಿಂದ ಅದು ಹಳೆಯ ದಿನಗಳ ನಿತ್ಯ ಗಾಡಿಯ ನೆನಪನ್ನು ತಂದುಕೊಟ್ಟಿತು. ಗಾಡಿಯು ಬಲು ಹೊತ್ತು ಹಾಗೇ ನಿಂತೊಡನೆ, ಜನ ತಮ್ಮ ಮನೆಯ ಮಾಳಿಗೆಯ ಮೇಲೆ ನಿಂತು ನೋಡತೊಡಗಿದರು. ಕೆಲ ಸೈನಿಕರು ಸ್ಟೇಶನ್ನಿನ ಒಳಹೊರಗೆ ಹೋಗುವುದು ಕಂಡಿತಲ್ಲದೆ, ನೆತ್ತಿಯ ಮೇಲಿನ ಸೂರ್ಯ ಕೆಳಗಿಳಿದರೂ ಆ ಗಾಡಿಯಿಂದ ಪ್ರಯಾಣಿಕರು ಇಳಿಯುವುದಾಗಲಿ, ಗಾಡಿಯ ಮುಂದೆ ಸಾಗುವ ಲಕ್ಷಣವಾಗಲಿ ಕಾಣಲೇ ಇಲ್ಲ.

ಗುರುದ್ವಾರದ ಮುಂದಿನ ಬಯಲಲ್ಲಿ ನಿಂತಿದ್ದ ಊರಿನ ಪ್ರಮುಖರಾದ ಲಂಬರದಾರ ಬಂತಾಸಿಂಗ್, ಗುರುದ್ವಾರದ ಮೀತ್‌ಸಿಂಗ್ ಮತ್ತು ಚಾಚಾ ಇಮಾಮ ಬಕ್ಷ ಇವರ ಸುತ್ತ ಜನ ನೆರೆಯಿತು.

ಇಮಾಮಬಕ್ಷ, ಬಂತಾಸಿಂಗನನ್ನು ಕೇಳಿದನು : ''ಲಂಬರದಾರಾ, ಡೆಪ್ಟಿ ಕಮೀಶನರ ಸಾಹೇಬರು ನಿನಗೇಕೆ ಹೇಳಿಕಳಿಸಿಲ್ಲ? ಅಲ್ಲಿ ನಡೆದಿದ್ದಾದರೂ ಏನು?''

''ಚಾಚಾ, ನಾನೇನು ಹೇಳಲಿ? ಅವರು ನನಗೆ ಹೇಳಿ ಕಳಿಸಿಲ್ಲ.''

''ಗಾಡಿಗಳಲ್ಲಿ ಅನೇಕ ದುರ್ಘಟನೆಗಳು ನಡೆಯುತ್ತ ಇವೆ ಎಂದು ಕೇಳಿದ್ದೇನೆ. ಇದೂ ಒಂದು ಅಂಥದೇ ಇರಬಹುದೇನೊ'' ಎಂದು ಇಮಾಮಬಕ್ಷ ಸಾವಕಾಶವಾಗಿ ಹೇಳಿದ.

'ದುರ್ಘಟನೆ' ಎಂಬ ಪದದಿಂದ, ಇದು ವರೆಗೆ ಅವರು ಬರಿಯ ಕೇಳಿದ್ದ ಜಾತಿಯ ಗಲಭೆಗಳು ಅಸ್ಪಷ್ಟವಾಗಿ ಸ್ಮರಣೆಗೆ ಬಂದವು.

ಅಷ್ಟರಲ್ಲಿ ಒಬ್ಬ ಸೀಖ ಸೈನಿಕನೊಂದಿಗೆ ಇಬ್ಬರು ಪೋಲೀಸರು ಬಂದು, ಲಂಬರದಾರನನ್ನು ತುಸು ಅಂತರದಲ್ಲಿ ಕರೆದುಕೊಂಡು ಹೋಗಿ ಸಂಭಾಷಣೆ ನಡೆಸಿದರು. ಮತ್ತು ''ಬೇಗ! ಇನ್ನರ್ಧ ತಾಸಿನಲ್ಲಿ ಎಲ್ಲವೂ ಸಿದ್ಧವಾಗಬೇಕು'' ಎಂದು ಆಜ್ಞಾಪಿಸಿ ಹೊರಟು ಹೋದರು.

ಬಂತಾಸಿಂಗ್ ಅದೇ ಆಜ್ಞೆಯನ್ನು ಚಲಾಯಿಸುತ್ತ ''ಎಲ್ಲರೂ ನಿಮ್ಮ ನಿಮ್ಮ ಮನೆಯಲ್ಲಿಯ ಉರುವಲು ಕಟ್ಟಿಗೆ ಮತ್ತು ಚಿಮಣಿ ಎಣ್ಣೆಯನ್ನು ತೆಗೆದುಕೊಂಡು ಬರಬೇಕು. ಅದರ ಕಿಮ್ಮತ್ತನ್ನು ಆಮೇಲೆ ಸರಕಾರದವರು ಕೊಡುತ್ತಾರೆ. ಈಗಿಂದೀಗ ತರತಕ್ಕದ್ದು'' ಎಂದನು.

ಎಲ್ಲರೂ ಬಂತಾಸಿಂಗನನ್ನು ಮುತ್ತಿಕೊಂಡು, ''ಏನು, ಏನಾಯಿತು? ಅದ್ಯಾತಕ್ಕೆ'' ಎಂದು ಕೇಳತೊಡಗಿದರು.

ಆದರೆ ಪೋಲೀಸರು ಅವನಿಗೂ ನಿಜ ಸಂಗತಿ ತಿಳಿಸಿರಲಿಲ್ಲ.

ಹಳ್ಳಿಗರು ಲಗುಬಗೆಯಿಂದ ಎಣ್ಣೆ, ಕಟ್ಟಿಗೆಗಳನ್ನು ಹೊತ್ತುಕೊಂಡು ಊರ ಹೊರಗೆ ಬಂದರು. ಅಲ್ಲಿ, ಈಗಾಗಲೇ ಚಂದನನಗರದಿಂದ ಉರುವಲನ್ನು ತುಂಬಿ ತಂದಿದ್ದ ಎರಡು ಟ್ರಕ್‌ಗಳನ್ನು ಕಂಡರು. ಅದಕ್ಕೆ ತಮ್ಮದಷ್ಟನ್ನು ಸೇರಿಸಿ, ತಂತಮ್ಮ ಮನೆಗಳ ಮಾಳಿಗೆಗಳನ್ನೇರಿದರು.*

ತಾಸೆರಡು ತಾಸು ಕಳೆದ ಮೇಲೆ ಸೂರ್ಯನು ಅಸ್ತಂಗತನಾದನು. ಸ್ಟೇಶನ್ನಿನ ಆ ಬದಿಯಿಂದ ಕರಿಯ ಹೊಗೆ ಮೇಲೆದ್ದು ಬಂತು. ತುಸು ಹೊತ್ತಿನಲ್ಲಿ ಉರಿ ಕಾಣಿಸಿತು. ಕತ್ತಲೆ

ಹೆಚ್ಚಿದಂತೆ ಅದರ ಕೆಂಪು ನಾಲಿಗೆಗಳು ಭೀಕರವಾಗಿ ಹೊಯ್ದಾಡುತ್ತಲೇ ಇದ್ದವು. ತೆಳುವಾಗಿ ಗಾಳಿ ಬೀಸಿದಾಗ, ಒಂದು ಬಗೆಯ ದುರ್ಗಂಧ—ನೂರಾರು ಪ್ರಾಣಿಗಳ ಮಾಂಸ ಬೇಯುತ್ತಿದ್ದ ದುರ್ವಾಸನೆ ತೇಲಿ ಬಂತು.

ಆ ಬಡ ಹಳ್ಳಿಗರಿಗೆ ಆಗ ಅರ್ಥವಾಯಿತು. ಅದನ್ನು ಬಾಯಿ ಬಿಟ್ಟು ಹೇಳದಷ್ಟು ಅವರು ದಿಙ್ಮೂಢರಾಗಿದ್ದರು. ಪಾಕಿಸ್ತಾನದಿಂದ ಬಂದ ಆ ಗಾಡಿಯಲ್ಲಿ ಡ್ರೈವರ್‌ನನ್ನು ಬಿಟ್ಟು ಬೇರೆ ಯಾವ ಜೀವಂತ ಪ್ರಾಣಿಯೂ ಇರಲಿಲ್ಲ.

ಡಬ್ಬಿಗಳಲ್ಲಿ ಕಿಕ್ಕಿರಿದು ತುಂಬಿದ್ದ ಆ ಶವಗಳ ಮುಂದಿನ ಹೊಣೆ ಹುಕುಮಚಂದರ ಮೇಲೆ ಸ್ವಾಭಾವಿಕವಾಗಿ ಬಿದ್ದಿತ್ತು. ಅವುಗಳ ಸಾಮೂಹಿಕ ದಹನ ಕ್ರಿಯೆ ಸೂಸುತ್ರವಾಗಿ ಸಾಗಿದೆಯೆಂಬುದನ್ನು ಖಾತ್ರಿ ಮಾಡಿಕೊಂಡು ಅವರು ಡಾಕ್ ಬಂಗಲೆಗೆ ಹಿಂತಿರುಗಿದಾಗ ಮಧ್ಯ ರಾತ್ರಿ ಸಮೀಪಿಸಿತ್ತು.

ಬಂದವರೇ ಸ್ನಾನ ಮಾಡಿದರು. ದಣಿದ ದೇಹಕ್ಕೆ ತುಸು ಹಿತವೆನಿಸಿದರೂ ದಿಮ್ಮೆನ್ನುತ್ತಿದ್ದ ತಲೆನೋವು ಹೋಗಿರಲಿಲ್ಲ. ಊಟವನ್ನು ಮಾಡದೇ ಹಾಸಿಗೆಯ ಮೇಲೆ ಅಡ್ಡಾದರು. ದೊಡ್ಡದೊಂದು ಯಜ್ಞಭಾರ ಇಳಿಯಿತೆಂಬ ಸಮಾಧಾನವನ್ನು ಎಳೆದು ತಂದು ಕಣ್ಣು ಮುಚ್ಚಿ ಮಲಗಲೆಂದರೆ, ಅಲ್ಲಿ ದಹನಗೊಳ್ಳುತ್ತಿದ್ದ ಯಜ್ಞಪಶುಗಳು ಇವರ ಒಳಗಣ್ಣಿನ ಮುಂದೆ ಕುಣಿಯತೊಡಗಿದವು.

ವಿವಿಧ ವೇಷಗಳ, ವಿವಿಧ ವಯಸ್ಸಿನ, ಸ್ತ್ರೀ, ಪುರುಷ, ಶಿಶು, ಮುದುಕ ಎಂಬ ಯಾವ ಭೇದವೂ ಇಲ್ಲದ ದೇಹಗಳು! ಹಮಾಲರು ಟ್ರಂಕು ಹಾಸಿಗೆ ಸುರುಳಿಗಳೆಂಬಂತೆ ಅವನ್ನು ಎತ್ತೆತ್ತಿ ಒಗೆಯುತ್ತಿದ್ದ ಆ ದೃಶ್ಯ! ಕೆಲವು ದೇಹಗಳು ಬಾಗಿಲು ತೆರೆದೊಡನೆ ತಾವಾಗಿಯೆ ಕೆಳಗುರುಳಿ ಬಿದ್ದಿದ್ದವು. ಒಳಗಡೆ, ಭಯದಿಂದ ಚೀರಲೆಂದು ಬಾಯ್ದೆರೆದಾಗಲೇ ಪ್ರಾಣ ಹೋಗಿದ್ದ ದೇಹಗಳಿದ್ದವು. 'ನಾನು ಇನ್ನೂ ಬದುಕಬೇಕೆನ್ನುತ್ತೇನೆ'—ಎಂದು ಹೇಳುವಂತೆ ತೆರೆದ ಕಣ್ಣುಗಳುಳ್ಳ ಹೆಣಗಳು ತನ್ನನ್ನೇ ನೋಡುತ್ತಿದ್ದವು. ಎಲ್ಲೆಲ್ಲಿಯೂ—ಸಂಡಾಸದಲ್ಲಿ ಸಹ, ಅದು ಸುರಕ್ಷಿತವೆಂದು ಹೊಕ್ಕಾಗ ಚೂರಿ ತಿವಿತಕ್ಕೆ ಗುರಿಯಾದ ಹೆಣಗಳೂ ಇದ್ದುವು. ಮೂಲೆಯೊಂದರಲ್ಲಿ ಒಬ್ಬ ವೃದ್ಧೆಯು ಮಗುವನ್ನು ಎದೆಗವಚಿಕೊಂಡೇ ನೆಲಕ್ಕುರುಳಿದ್ದಳು. ಎಲ್ಲಕ್ಕಿಂತ ಭೀಕರವೆಂದು ತೋರಿದ್ದ ಆ ಬಿಳಿಯ ಗಡ್ಡದ ಮುದುಕನ ದೇಹ. ಆತ ಸಾಮಾನನ್ನಿಡುವ ರ‍್ಯಾಕಿನಲ್ಲಿ ಸಾಮಾನುಗಳ ಸಂದಿಯಲ್ಲಿಯೇ ಇನ್ನೂ ಕುಳಿತಿದ್ದನು. 'ಆಹಾ, ಅವನೊಬ್ಬನಾದರೂ ಬದುಕಿ ಇದ್ದಾನೆ' ಎಂಬ ಭ್ರಾಂತಿಯನ್ನು ಹುಟ್ಟಿಸುವಂತ ಹಾಗೇ ಕುಳಿತಿದ್ದನು.

ಉದ್ವೇಗದಿಂದ ಹುಕುಮ್‌ಚಂದರು 'ಬಾಬಾ' ಎಂದು ಗಟ್ಟಿಯಾಗಿ ಚೀರಿದರು. ಕಣ್ಣು ತೆರೆದು ನೋಡಿದರು. ತೆರದಿಟ್ಟ ಕಿಡಿಕಿಯಿಂದ ಸಿಡಿಲಿನ ಖಟ್–ಖಡಲ್ ಕೇಳಿ ಬಂದಿತು. ವರ್ಷಾಕಾಲದ ಆರಂಭದ ಮಳೆ ಒಮ್ಮೆಲೇ ಜೋರಾಗಿ ಸುರಿಯತೊಡಗಿತು.

ಅವರಿಗೆ ಗಾಬರಿ! ಮಳೆಯಿಂದಾಗಿ ಸ್ಟೇಶನ್ನಿನ ಆ ಬದಿಗೆ ಹೊತ್ತಿಸಿ ಬಂದಿದ್ದ ಅಗ್ನಿಕಾಂಡಕ್ಕೆ ವ್ಯತ್ಯಯವಾಗಿದ್ದರೆ? ಗಡಬಡಿಸಿ ಮೇಲೆದ್ದರು. ವೇಳೆಯನ್ನು ನೋಡಿದರು. ಆರು ಗಂಟೆಯಾಗುತ್ತ ಬಂದಿತ್ತು. ಅವಸರದಲ್ಲಿ ಮುಖ ತೊಳೆದು, ಆಳು ತಂದಿದ್ದ ಚಹಾ,

ಬಿಸ್ಕತ್ತುಗಳನ್ನು ತುರುಕಿಕೊಂಡು ಹೊರಡಬೇಕೆನ್ನುವಷ್ಟರಲ್ಲಿ ಸ್ಟೇಶನ್ನಿನಲ್ಲಿಯೇ ಉಳಿದುಕೊಂಡಿದ್ದ ಫೌಜದಾರನು ಬಂದನು. ನಿದ್ರೆ, ವಿಶ್ರಾಂತಿಗಳಿಲ್ಲದೆ ಅವನ ಕಣ್ಣುಗಳೂ ಆರಕ್ತವಾಗಿದ್ದವು.

''ಏನು? ಮಳೆ ರಾತ್ರಿಯೂ ಸುರಿಯಿತೆ? ಅಲ್ಲಿಯ ಪರಿಸ್ಥಿತಿ ಹೇಗಿದೆ?''

''ಸಾಹೇಬ್, ನನಗೂ ಅದೇ ಗಾಬರಿಯಿದ್ದಿತು. ಪುಣ್ಯಕ್ಕೆ ಎಲ್ಲ ಬೂದಿಯಾದ ಮೇಲೆಯೇ ಮಳೆ ಬಂತು.''

ಹುಕುಮ್‌ಚಂದರು ಸಮಾಧಾನದ ಉಸಿರು ಬಿಡುವಂತಾಯಿತು. ಫೌಜದಾರನು ಚಹವನ್ನು ಸೇವಿಸುತ್ತಿದ್ದಾಗ ಕೇಳಿದರು :

''ಎಷ್ಟು ಹೆಣ ಇದ್ದವಂತೆ? ಎಣಿಸಿದಿರೇನು? ವರದಿ ಕೊಡಲಿಕ್ಕೆ ಅಂಕಿ ಬೇಕಲ್ಲ'' ಎಂದು ಒಣ ನಗೆಯನ್ನು ನಕ್ಕರು.

''ಸಮಯವೆಲ್ಲಿತ್ತು ಸರ್? ಆದರೂ ೧೫೦೦ ಜನ ಇದ್ದಿರಬಹುದು.''

''ಅಬ್ಬಾ, ೧೫೦೦ ಜನರ ಸಾವು! ಇತರ ಕಡೆಗೂ ಹೀಗೆಯೇ ನಡೆದಿರಬೇಕು. ಇದೆಲ್ಲಿಗೆ ನಮ್ಮನ್ನು ಕೊಂಡೊಯ್ಯುವುದೊ! ಹರೇರಾಮ್!''

ಹುಕುಮ್‌ಚಂದರಿಗೆ ಇನ್ನು ಮುಂದಿನ ಚಿಂತೆ ಆರಂಭವಾಯಿತು. ''ಅಂದ ಹಾಗೆ ಇಲ್ಲಿಯ ಮುಸಲ್ಮಾನರು ಏನನ್ನುತ್ತಾರೆ?'' ಎಂದು ಕೇಳಿದರು.

''ಇಲ್ಲಿಯ ಸುತ್ತಲಿನ ಹಳ್ಳಿಗಳಿಂದ ಮುಸಲ್ಮಾನರು ಹೋಗತೊಡಗಿದ್ದಾರೆ. ಅನೇಕರು ಚಂದನನಗರ ನಿರಾಶ್ರಿತ ಕ್ಯಾಂಪಿನಲ್ಲಿ ತಂಗಿದ್ದಾರೆ. ಪಾಕಿಸ್ತಾನದ ಲಾರಿಗಳು ಕ್ಯಾಂಪಿನಿಂದ ಆ ಜನರನ್ನು ಕೊಂಡೊಯ್ಯುತ್ತಲಿವೆ.''

''ಅದು ಗೊತ್ತಯ್ಯ, ಮನೋಮಾಜರಾದವರು?''

''ಅವರು ಯಾರೂ ಊರು ಬಿಟ್ಟಿಲ್ಲ ಸರ್. ಆದರೆ ನಿನ್ನೆ ಕಾಲುಹೊಳೆಯನ್ನು ದಾಟಿ ೪೦-೫೦ ಜನ ಸೀಖ ನಿರಾಶ್ರಿತರು ಪಾಕಿಸ್ತಾನ ಭಾಗದಿಂದ ಬಂದು ಗುರುದ್ವಾರದಲ್ಲಿ ತಂಗಿದ್ದಾರಂತೆ. ಲಂಬರದಾರ್ ಹೇಳಿದ-ಬಂದಿರುವ ನಿರಾಶ್ರಿತರಲ್ಲ ರೈತರು, ಬಡವರು. ವಿಶೇಷ ಕಳೆದುಕೊಂಡವರಲ್ಲ. ಅವರಿಗೆ ಇಲ್ಲಿಯ ಮುಸಲ್ಮಾನರೂ ಆಹಾರಾದಿಗಳನ್ನು ಒದಗಿಸಿದ್ದಾರಂತೆ. ಅವರಿಂದೇನೂ ತೊಂದರೆಯಿಲ್ಲ''

''ಅದೇನಿದ್ದರೂ ಇಲ್ಲಿಯ ಮುಸಲ್ಮಾನರನ್ನು ಸ್ಥಳಾಂತರಿಸಲೇಬೇಕು. ಎಷ್ಟು ಬೇಗ ಹೋಗುತ್ತಾರೋ ಅಷ್ಟು ಕ್ಷೇಮವೇ,'' ಅನಾಹುತದ ಚಿಂಕಿ ಹಬ್ಬುವ ಭಯದಿಂದ ಹುಕುಮ್‌ಚಂದರು ಹೇಳಿದರು. ಊರಲ್ಲಿಯ ಸೀಖ-ಮುಸ್ಲಿಂ ಬಾಧವ್ಯವು ಅನ್ಯೋನ್ಯವಾಗಿದ್ದುದನ್ನು ಬಲ್ಲ ಫೌಜದಾರನು ಈಗ ಈ ದಿಸೆಯಲ್ಲಿ ಯೋಚಿಸಬೇಕಾಗಿ ಬಂತು.

ಹುಕುಮ್‌ಚಂದರು ಕೇಳಿದರು :

''ರಾಮಲಾಲನ ಕೊಲೆಯ ತನಿಖೆ ಎಲ್ಲಿಗೆ ಬಂತು?''

''ನಡೆದಿದೆ, ಸರ್ ಜಗ್ಗಾ ಕೆಲವು ಜನ ದರೋಡೆಖೋರರ ಹೆಸರು ಹೇಳಿದ್ದಾನೆ. ಅವರ ನಾಯಕನ ಹೆಸರು ಹೇಳಿದ್ದಾನೆ. ಅವರ ನಾಯಕನ ಹೆಸರು ಮಲ್ಲಿ ಅಂತ. ಅವರಲ್ಲ ಇಲ್ಲೇ

ಮಗ್ಗುಲಿನ ಹಳ್ಳಿಯಾದ ಕಪೂರಾದವರು ಅವರನ್ನು ಬಂಧಿಸಿದ್ದೇವೆ. ಒಂದು ಕಾಲಕ್ಕೆ ಅವರೆಲ್ಲ ಜಗ್ಗಾನ ಸ್ನೇಹಿತರೇ. ಆದರೆ ಆ ದಿನ ಮಾತ್ರ ಜಗ್ಗಾ ಅವರೊಟ್ಟಿಗೆ ಇರಲಿಲ್ಲ.''

''ಈ ಮಲ್ಲಿ ಮತ್ತು ಅವನ ಸಂಗಡಿಗರು ಯಾರು? ಮುಸಲ್ಮಾನರೋ, ಸೀಖರೋ?''

''ಅವರೆಲ್ಲ ಸೀಖರೇ''

''ಅವರು ಮುಸಲ್ಮಾನರಿದ್ದಿದ್ದರೆ ಅದೆಷ್ಟು ನೆಟ್ಟಗಿತ್ತು! ಆಗ ಇಲ್ಲಿಯ ಸೀಖರು ಅತ್ಯಂತ ಸುಲಭವಾಗಿ ಮುಸಲ್ಮಾನರನ್ನು ಹೋಗಗೊಡುತ್ತಿದ್ದರು.''

ಫೌಜದಾರನಿಗೆ ಅವರ ವಿಚಾರಧಾರೆಯ ಸ್ಪಷ್ಟ ಕಲ್ಪನೆ ಆಗತೊಡಗಿತು. ಹುಕುಮ್‌ಚಂದರು ಹೇಳಿದರು :

''ಹೀಗೆ ಮಾಡಿರಿ. ಆ ಮಲ್ಲಿ ಮತ್ತು ಅವನ ಸಂಗಡಿಗರನ್ನು ಬಿಡುಗಡೆ ಮಾಡಿರಿ. ಆದರೆ ಅವರ ಮೇಲೆ ನಿಗಾ ಇರಲಿ. ನಿಧಾನವಾಗಿ ಅವರನ್ನು ಮತ್ತೆ ಬಂಧಿಸಿದರಾಯಿತು. ಅವರನ್ನು ಮನೋಮಾಜರಾದ ಊರಿನ ಮಧ್ಯದಲ್ಲೇ ಬಿಡಬೇಕು! ಮತ್ತು ಆ ಗುರುದ್ವಾರದಲ್ಲಿದ್ದ ಆ ಇಕ್‌ಬಲ್ ಮುಸ್ಲಿಂ ಲೀಗಿನವ ಎಂಬ ಸುದ್ದಿ ಊರಲ್ಲಿ ಹರಡಲಿ.''

''ಸಾಹೇಬ್, ಆ ಇಕ್‌ಬಲ್ ಮುಸಲ್ಮಾನನೆಂದೇ ನನಗನಿಸುವುದು.''

''ಫೌಜದಾರ ಸಾಹೇಬ್! ಎಲ್ಲಿ ಹೋಯಿತು ನಿಮ್ಮ ಕಲ್ಪನಾಶಕ್ತಿ? ಮುಸ್ಲಿಂ ಲೀಗಿನವರು ಈ ಗಲಭೆಯ ದಿನಗಳಲ್ಲಿ ಒಂಟಿಯಾಗಿ ಬರುವುದಾದರೂ ಶಕ್ಯವಿದೆಯೇ? ಆದರೂ ಈಗ ಮನೋಮಾಜರಾದವರ ಮಟ್ಟಿಗೆ ಅವನು ಮುಸಲ್ಮಾನನೇ! ಇಷ್ಟಾದ ಮೇಲೆ ಮುಸ್ಲಿಂ ನಿರಾಶ್ರಿತ ಕ್ಯಾಂಪಿಗೆ ಹೇಳಿ ಕಳಿಸಿರಿ— ಇಲ್ಲಿಯ ಮುಸಲ್ಮಾನರು ಹೋಗುವವರಿದ್ದಾರೆಂದು.''

☆ ☆ ☆ ☆

ಬಂಧಿಸಿದ ಸ್ವಲ್ಪ ಸಮಯದಲ್ಲೇ ಹೀಗೆ ತಮ್ಮ ಬಿಡುಗಡೆಯಾದುದು ಮಲ್ಲಿ ಮತ್ತು ಅವನ ಹಸ್ತಕರಿಗೆ ಅಚ್ಚರಿಯಾಯಿತು. ಅದರಂತೆ ಜಗ್ಗಾನಿಗೆ ಕೂಡ. ಅವರೆಲ್ಲ ಹೊರಬರುವಾಗ ಜಗ್ಗಾ ಬೇರಡೆ ಮುಖ ತಿರುವಿದನು.

ಬಿಡುಗಡೆ ಹೊಂದಿದ ಮಲ್ಲಿಯು ಜಗ್ಗಾನ ಅಪಮಾನ ಮಾಡುವ ಒಂದು ಸಂಧಿ ದೊರಕಿತೆಂದು ಭಾವಿಸಿದನು. ''ಓಹೋ, ನಮ್ಮ ಹಳೆ ದೋಸ್ತ್ ಇಲ್ಲೇ ಇದ್ದಾನಲ್ಲ'' ಎಂದನು.

''ಇರಲೊಲ್ಲ ಬಿಡು'' ಅವನ ಗ್ಯಾಂಗಿನವರಲ್ಲೊಬ್ಬ ನುಡಿದ.

''ಛೇ, ಹಾಗೇ ಹೇಗೆ ಹೋಗುವುದು? ಸತ್ ಶ್ರೀ ಅಕಾಲ್ ಜಗತ್ ಸಿಂಹಜೀ!''

ಕಬ್ಬಿಣ ಸಳಿಗಳ ಹಿಂದೆ ಇದ್ದ ಜಗ್ಗಾ ಏನೆಂದು ಉತ್ತರಿಸಬೇಕು?

''ಏನು ದೋಸ್ತ್, ನಾವು ನಿನ್ನ ಸಲುವಾಗಿ ಕಾಳಜಿ ಮಾಡುತ್ತಿರುವಾಗ ನೀನು ಮುಖ ತಿರುವಬೇಕೆ? ನಾವಂತೂ ಹೊರಟಿದ್ದೇವೆ. ಏನಾದರೂ ತಮ್ಮ ಸಂದೇಶವನ್ನು ಊರಲ್ಲಿ ಮುಟ್ಟಿಸುವದಿದ್ದರೆ ಅಗತ್ಯ ಹೇಳಬೇಕು. ಅಂದರೆ, ಆ ಮುಲ್ಲಾನ ಮಗಳಿಗೆ ನಿಮ್ಮ ಪ್ರೇಮ ಸಂದೇಶ...''

ಜಗ್ಗಾನ ರಕ್ತ ಕುದಿಯುತ್ತಿದ್ದುದೆಲ್ಲ ಮುಖದ ಮೇಲೆ ಒತ್ತರಿಸಿ ಬಂದಿತು.

ಮಲ್ಲಿ ಅಷ್ಟಕ್ಕೆ ಬಿಡದೇ ಇನ್ನಷ್ಟು ಜಗ್ಗಾನ ಹತ್ತಿರ ಬಂದು, ನಾಟಕೀಯವಾಗಿ ಬಾಗುತ್ತ ''ಜಗತ್ ಸಿಂಹಜೀ, ಹೋಗಿ ಬರುತ್ತೇವೆ. ಸತ್ ಶ್ರೀ ಅಕಾಲ್'' ಎಂದನು.

ಕೂಡಲೇ ಜಗ್ಗಾ ತನ್ನ ನೀಳವಾದ ಕೈಗಳನ್ನು ಹೊರಚಾಚಿ ಮಲ್ಲಿಯ ತಲೆಗೂದಲನ್ನು ಗಟ್ಟಿಯಾಗಿ ಹಿಡಿದು ಅವನ ತಲೆಯನ್ನು ಹಿಂದೆ, ಮುಂದೆ ಎಳೆಯುತ್ತ ಕಬ್ಬಿಣದ ಸಳಿಗಳಿಗೆ ಒಂದೇ ಸಮನೆ ಘಟ್ಟಿಸತೊಡಗಿದನು. ಅದರ ರಭಸಕ್ಕೆ ಸುತ್ತಲಿನವರು ಗಾಬರಿಗೊಂಡು ಕಕ್ಕಾವಿಕ್ಕಿಯಾದರು. ಹತ್ತಿರವಿದ್ದ ಪೊಲೀಸರು ಬಿಡಿಸಿಕೊಳ್ಳಲಾಗದೆ ಗದ್ದಲ ಮಾಡತೊಡಗಿದರು. ಜಗ್ಗಾ ಒಂದೇ ಸಮನೆ ಪ್ರಹಾರ ಮಾಡುತ್ತಲೇ ಇದ್ದ. ಮಲ್ಲಿಯ ಮುಖ, ಮೂಗು, ಕಣ್ಣುಗಳ ಮೇಲೆಲ್ಲ ರಕ್ತದ ಧಾರೆ ಹರಿಯಿತು.

ಫೌಜದಾರನು ಕೂಡಲೇ ಧಾವಿಸಿ ಬಂದನು. ಜೇಲಿನ ಬಾಗಿಲನ್ನು ತೆರೆದು ಒಳಹೊಕ್ಕವನೇ ಬಂದೂಕಿನ ಹಿಂಬದಿಯಿಂದ ಜಗ್ಗಾನ ತಲೆಗೆ ಏಟುಗಳನ್ನು ಹಾಕುತ್ತ ಅವನನ್ನು ಬಲವಾಗಿ ಒದ್ದಾಗಲೇ ಜಗ್ಗಾ ತನ್ನ ಹಿಡಿತವನು ಸಡಲಿಸಿದುದು. ಅತ್ಯಂತ ನಿತ್ರಾಣನಾಗಿದ್ದ ಮಲ್ಲಿಯು ಮೇಲಿನಿಂದ ಕೆಳಕ್ಕೊಗೆದ ಅರಿವೆಯ ಮುದ್ದೆಯಂತೆ ನೆಲಕ್ಕೆ ಬಿದ್ದನು.

ಪೊಲೀಸರು ನೀರು ತಂದು ಮಲ್ಲಿಯ ಮುಖವನ್ನು ತೊಳೆದರು. ಅವನ ಸಂಗಡಿಗರ ಸಹಾಯದಿಂದ ಅವನನ್ನು ಹೊತ್ತುಕೊಂಡು ಹೊರಕ್ಕೆ ನಿಂತಿದ್ದ ಜಟಕಾ ಬಂಡಿಯಲ್ಲಿ ಕೂಡ್ರಿಸಿಕೊಂಡು ಮಸೋಮಾಜರಾದತ್ತ ಸಾಗಿದರು.

ಜಟಕಾ ಬಂಡಿಯು ಗುರುದ್ವಾರಾದ ಮುಂದೆ ಬಂದು ನಿಲ್ಲುತ್ತಲೂ ಜನ ಸೇರಿತು. ಈ ಆಪಾದಿತರನ್ನು ಪೊಲೀಸರು ಬಿಟ್ಟುಕೊಟ್ಟದ್ದೇಕೆ? ಬಹುಶಃ ಕೊಲೆ ಮಾಡಿದವರು ಬೇರೆಯೇ ಇರಬೇಕೆಂಬ ಪುರಾವೆ ಪೋಲೀಸರಿಗೆ ಸಿಕ್ಕಿರಬೇಕೆ?

ಜನ ಹೀಗೆ ತಮ್ಮಲ್ಲಿ ಯೋಚಿಸುತ್ತಿದ್ದಾಗ ಜಮಾದಾರನು ಲಂಬರದಾರನನ್ನು ಬದಿಗೆ ಕರೆದು ಸಂಭಾಷಿಸಿದನು. ಅನಂತರ ಲಂಬರದಾರನು ತನ್ನ ಜನರ ಸಮೀಪಕ್ಕೆ ಬಂದು "ಜಮಾದಾರ ಸಾಹೇಬರು ಕೇಳುತ್ತಿದ್ದಾರೆ—ಸುಲ್ತಾನ್ ಮತ್ತು ಅವನ ಗ್ಯಾಂಗಿನವರ ಬಗ್ಗೆ ನಿಮಗೇನಾದರೂ ಗೊತ್ತಿದೆಯೆ? ಅಂತ."

"ಹೋ, ಗೊತ್ತಿದೆ. ಅವನೂ ಅವನ ಗ್ಯಾಂಗಿನವರೂ ಪಾಕಿಸ್ತಾನಕ್ಕೆ ಹೊರಟು ಹೋಗಿದ್ದಾರೆ."

"ಲಾಲಾನ ಕೊಲೆಗಿಂತ ಮುಂಚೆಯೋ, ಆಮೇಲೆಯೊ?"

"ಛೇ, ಅದಕ್ಕೂ ಎಷ್ಟೋ ಮೊದಲೇ ಅವರು ಹೋದದ್ದು ಎಂದು ಹಲವರು ಹೇಳಬೇಕೆನ್ನುವಷ್ಟರಲ್ಲಿ, ಯಾರೋ ಒಬ್ಬರು, "ಆಮೇಲೇನೇ ಹೋದದ್ದು" ಎಂದು ಒದರಿದರು.

ತಕ್ಷಣ ಜಮಾದಾರನು ಕೇಳಿದನು :

"ಇಕ್‌ಬಲ್ ಎಂಬ ಮುಸ್ಲಿಂ ಲೀಗಿನ ಯುವಕನ ಬಗ್ಗೆ ಏನಾದರೂ ಗೊತ್ತಿದೆಯೋ?"

ಈ ಪ್ರಶ್ನೆಯಿಂದ ಸ್ವತಃ ಲಂಬರದಾರನೇ ದಿಗಿಲುಗೊಂಡನು. ಗುರುದ್ವಾರಾದ ಮಿತ್‌ಸಿಂಗನು ಅವನು ಸೀಖನೆಂದೇ ಹೇಳಿದ್ದ ಹಾಗೆ ನೆನಪು. ಈ ವಿಷಯದಲ್ಲಿ ಉತ್ತರ ಕೊಡಲು ಮೀತಸಿಂಗನೇ ಯೋಗ್ಯನೆಂದು ಕೆಲವರು ಅವನನ್ನು ಮುಂದೆ ಮಾಡಿದರು. ಅವನು ಬಾಯಿ ತೆರೆಯುವುದಕ್ಕೆ ಅವಕಾಶ ಕೊಡದೇ ಜಮಾದಾರ ಕೇಳಿದನು :

“ಇಲ್ಲಿ ಇದ್ದಾಗ ಅವನ ವರ್ತನೆ ಸಂಶಯ ಬರುವಂತಿದ್ದಿತ್ತೆ?”

‘ಹೌದು’ ಎನ್ನುವುದಕ್ಕೆ ಕೆಲವು ಸಂಗತಿಗಳಿದ್ದುವು! ಇಕ್‌ಬಲ್‌ನು ತಿರುಗಾಡಲಿಕ್ಕೆಂದೇ ಇರಲಿ, ಹೊಲಗಳ ಕಡೆಗೆ, ರೇಲ್ವೆ ಹಳಿಯ ಗುಂಟ ಓಡಾಡಿದ್ದನು. ಹಾಗೆಂದು ಕೆಲವರು ಹೇಳಿಬಿಟ್ಟರು.

“ಜಮಾದಾರ ಸಾಹೇಬ್.”

ಮಾತನಾಡಬಂದ ಮೀತಸಿಂಗನನ್ನು ಕುರಿತು, “ಸುಮ್ಮನಿರಯ್ಯ; ಆಮೇಲೆ ಹೇಳೀಯಂತೆ” ಎಂದು ಅವನನ್ನು ತಡೆದು,

“ಈ ಯುವಕ ರಾಮಲಾಲನ ಕೊಲೆಗಿಂತ ಮುಂಚೆಯೆ ಬಂದಿದ್ದನಲ್ಲವೆ?”

ಈ ಪ್ರಶ್ನೆಯಿಂದಂತೂ ಜನ ತಬ್ಬಿಬ್ಬಾದರು. ಛೇ, ಛೇ, ರಾಮಲಾಲನ ಕೊಲೆಗೂ ಆ ಸುಶಿಕ್ಷಿತ ಹಾಗೂ ಶ್ರೀಮಂತ ತರುಣನಿಗೂ ಏನು ಸಂಬಂಧವಿದ್ದೀತು? ಆದರೂ ಈ ಸುಶಿಕ್ಷಿತ ಜನರದು ನಿಶ್ಚಿತವಾಗಿ ಹೇಳಲಿಕ್ಕೆ ಬರುವುದಿಲ್ಲ. ಕೇವಲ ದುಡ್ಡಿಗೆಂದು ಈಗಿನ ದಿನಗಳಲ್ಲಿ ಕೊಲೆಯಾಗುವದಿಲ್ಲಷ್ಟೆ....

ಜನರ ಗುಜುಗುಜು ಮಾತು ನಡೆದಾಗಲೇ ಜಮಾದಾರನು ಹೊರಟ ನಿಂತನು.

“ಇಕೂ, ಲಾಲಾನ ಕೊಲೆಯ ಬಗ್ಗೆ ಹೆಚ್ಚಿನ ಮಾಹಿತಿ ಸುಲ್ತಾನ್, ಇಕ್‌ಬಲ್‌ರ ಬಗ್ಗೆ ಹೆಚ್ಚಿನ ಮಾಹಿತಿ ಗೊತ್ತಾದರ ಕೂಡಲೇ ಠಾಣೆಗೆ ಬಂದು ತಿಳಿಸತಕ್ಕದ್ದು. ಲಂಬರ್‌ದಾರ್, ಲಕ್ಷ್ಯಕ್ಕೆ ಬಂತೇ?” ಎಂದು ಹೇಳಿದವನೆ ತನ್ನ ಹಿಂದೆ ಸಾಗಿ ಬರುತ್ತಿದ್ದ ಮೀತ್‌ಸಿಂಗನ ಕಡೆಗೆ ಹೊರಳಿಯೂ ನೋಡದೆ ಮುನ್ನಡೆದನು.

ತುಸು ಹೊತ್ತಿನ ಮೇಲೆ ಕೆಲ ಪ್ರಮುಖ ಸೀಖ ರೈತರು ಗುರುದ್ವಾರದ ಬದಿಯಲ್ಲಿಯ ಒಂದು ಕೋಣೆಯಲ್ಲಿ ಸೇರಿದರು.

“ಅಲ್ಲ ಈ ಮುಸಲ್ಮಾನರು ನಮ್ಮ ಮೇಲೆ ಪಾಳತಿ ಇಡಲಿಕ್ಕೆಂದು ತಮ್ಮೊಬ್ಬ ಮನುಷ್ಯನನ್ನು ಕಳಿಸುವುದೆಂದರ ನಾವೇನು ಅವರಿಗೆ ಮಾಡಿದ್ದೆವು? ಇದೆಂಥ ಭಂಡತನ” ಎಂದು ಅವರಲ್ಲೊಬ್ಬ ನುಡಿದನು.

ಆಗ ಮೀತ್‌ಸಿಂಗನು, “ಯಾರು? ಇಕ್‌ಬಲ್‌ನೆ? ನಾನು ಅವನ ಸಂಗಡ ಸಾಕಷ್ಟು ಮಾತಾಡಿದ್ದೇನೆ. ಏನೋ ಸುಧಾರಿತ ಯುವಕ, ಗಡ್ಡ ಮೀಸೆ ತೆಗೆಸಿದ್ದಾನೆ. ಎಲ್ಲ ಸೀಖರೂ ಹಾಕಿಕೊಳ್ಳುವಂತೆ ಅವನೂ ಕಬ್ಬಿಣದ ಬಳೆ ಹಾಕಿಕೊಂಡಿದ್ದಾನೆ. ಇಷ್ಟಕ್ಕೂ ಲಾಲಾನ ಕೊಲೆಯಾದ ಮರುದಿವಸ ಅವನು ಬಂದದ್ದು” ಎಂದನು.

“ಸಂತಜೀ, ಒಬ್ಬ ಮುಸಲ್ಮಾನನು ಬಳೆ ಧರಿಸಿ ಸೀಖನಾಗಲಾರನೇನು? ನೀವಂತೂ ಬೆಳ್ಳಗಿದ್ದದ್ದೆಲ್ಲ ಹಾಲೆಂದು ತಿಳಿಯುವವರು.”

“ಲಾಲಾ ಅಂತೂ ಸತ್ತೇ ಹೋದ, ಈ ಯುವಕನೂ ಹಾಳಾಗಿ ಹೋಗಲಿ, ಅವರ ಗೊಡವೆ ಬೇಡ. ಆದರೆ ನಮ್ಮ ಬಳಿಯಲ್ಲೇ ಇರುವ ಈ ಘಾತುಕರನ್ನು ಏನು ಮಾಡೋಣ? ಇಷ್ಟು ದಿನ ನಮ್ಮ ಉಪ್ಪುಂಡು ನಮ್ಮ ಹೊಲದಲ್ಲೇ ಬದುಕು ಮಾಡಿಕೊಂಡು ಈ ಭಂಡರು ಈಗ ನಮಗೇ ತಿರುಗಿಬಿದ್ದರಲ್ಲ? ಹಾವಿಗೆ ಹಾಲೆರೆದಂತಾಯ್ತು”—ಬಿಸಿ ನೆತ್ತರದ ಓರ್ವ ತರುಣನು ಹೇಳಿದ. ಈ ಮಾತಿನಿಂದ ಮೀತ್‌ಸಿಂಗನು ಸಿಟ್ಟುಗೊಂಡನು.

"ಏನು ಮಾಡಿದರೋ ಅವರು ನಿನಗೆ? ನಿನ್ನ ಹೊಲದಿಂದ ನಿನ್ನನ್ನು ಹೊರಗೆ ಹಾಕಿದರೋ? ಏನು, ನಿನ್ನ ಹೆಣ್ಣುಮಕ್ಕಳ ಮೇಲೆ ಕೈ ಮಾಡಿದರೋ? ಹೇಳು, ಅವರು ನಿನಗ ಮಾಡಿದ್ದಾದರೂ ಏನು?"

"ನನ್ನನ್ನೇನು ಕೇಳುತ್ತೀ! ಅಲ್ಲೇ ಗುರುದ್ವಾರಾದಲ್ಲಿ ಇಳಿದಿರುವ ನಿರಾಶ್ರಿತರನ್ನು ಕೇಳು. ನಿನ್ನಂಥ ಮೊದ್ದು ಸಂತಜೀಯವರನ್ನೂ ಗ್ರಂಥ ಸಾಹೀಬವನ್ನೂ ಒಳಗಿಕ್ಕಿ ಪಾಕಿಸ್ತಾನದಲ್ಲಿ ಬೆಂಕಿ ಹಚ್ಚಿದರೆಂದೇ ಇವರೆಲ್ಲ ಓಡಿ ಬಂದದ್ದು."

"ಇರಬಹುದು, ಆದರೆ ನಮ್ಮ ಊರಿನವರೇನು ತಪ್ಪು ಮಾಡಿಲ್ಲವಲ್ಲ?"

"ಅವರೂ ಮುಸಲ್ಮಾನರು ಎಂಬುದು ನೆನಪಿರಲಿ" ಎಂದನಾತ.

ಆಯಿತು, ಬೆಣ್ಣೆಯ ಮುದ್ದೆಯನ್ನು ಚೂರಿಯಿಂದ ಎರಡು ಭಾಗ ಮಾಡಿದಂತೆ ಮನೋಮಾಜರಾದ ಜನರಲ್ಲಿ ಸೀಖ–ಮುಸ್ಲಿಮರ ಇಬ್ಬಣವಾಯಿತು. ಮುಸಲ್ಮಾನರೂ ತಮ್ಮತಮ್ಮಲ್ಲಿ ಮಾತನಾಡಿಕೊಂಡರು. ಅಂಬಾಲಾ, ಪತಿಯಾಳಾ, ಕಪೂರ್ಥಲಾಗಳಲ್ಲಿ ಸೀಖರು ಮುಸಲ್ಮಾನರನ್ನು ತುಂಡುತುಂಡಾಗಿ ಕತ್ತರಿಸಿದುದನ್ನು ಅವರು ಕೇಳಿದ್ದರು. ಆದರೆ ವಿಶೇಷ ಗಮನಿಸಿರಲಿಲ್ಲ. ಈಗ ಅದು ದೊಡ್ಡದಾದ ಸಂಗತಿಯೆನಿಸಿತು. ಮಸೀದೆಯ ಆವಾರದಲ್ಲಿಯ ಹಂದಿಗಳನ್ನು ಕಡಿದು ಮತ್ತು ಕುರಾನಿನ ಪ್ರತಿಗಳನ್ನು ಸುಟ್ಟದ್ದರ ಪ್ರಸ್ತಾಪವೂ ಬಂದಿತು. ತಮ್ಮ ಊರಿನ ಪ್ರತಿಯೊಬ್ಬ ಸೀಖನು ಛದ್ಮವೇಷದ ವೈರಿ ಎಂಬ ಹೆದರಿಕೆ ಮೂಡಿತು. 'ಪಾಕಿಸ್ತಾನ' ಎಂಬ ಪದದಲ್ಲಿ ಅಭಯದ, ಆಶ್ರಯದ ಅರ್ಥವನ್ನು ಕಾಣತೊಡಗಿದರು.

ಇತ್ತ ಸೀಖರು 'ಮುಸಲ್ಮಾನರನ್ನು ಎಂದಿಗೂ ನಂಬಕೂಡದು' ಎಂದು ತಮ್ಮೊಬ್ಬ ಗುರು ಹೇಳಿದ್ದ ಮಾತನ್ನು ನೆನೆದುಕೊಂಡರು. ತಮ್ಮ ಧರ್ಮದ ಮೂರು ನಾಲ್ಕು ಗುರು ಜನರನ್ನು ಮುಸಲ್ಮಾನರೇ ಕೊಂದಿದ್ದಲ್ಲವೆ? ಅದರಲ್ಲಿ ಮುಸ್ಲಿಮರು ಸ್ತ್ರೀಯರಿಗ ಮರ್ಯಾದೆಯನ್ನು ತೋರಿಸಿದವರೇ ಅಲ್ಲ. ಮಾನ ರಕ್ಷಣೆಗೆಂದು ತಮ್ಮ ಸ್ತ್ರೀಯರು ಬಾವಿಯಲ್ಲಿ ಹಾರಿಯೊ, ವಿಷವನ್ನು ಕುಡಿದೊ ಪ್ರಾಣ ನೀಗಿದ ವಿಷಯವನ್ನು ಅದೇ ಬಂದಿದ್ದ ನಿರಾಶ್ರಿತರು ಹೇಳಿಯೇ ಇದ್ದರು. ಅಂತೂ ತಲತಲಾಂತರದಿಂದ ಕೂಡಿ ಬಾಳಿದ ತಮ್ಮೂರಿನ ಪ್ರತಿಯೊಬ್ಬ ಮುಸಲ್ಮಾನನನ್ನು ಸಂಶಯ ದೃಷ್ಟಿಯಿಂದ ನೋಡತೊಡಗಿದರು.

ಬೆಳಗಾಗುವುದರಲ್ಲಿ ಸ್ಥಳೀಯ ಮುಸಲ್ಮಾನರನ್ನು ಬೇರೆಲ್ಲಿಗೂ ಕಳಿಸಲಿರುವರೆಂಬ ವಾರ್ತೆ ಹರಡಿತು. ಆ ದಿನ ರಾತ್ರಿ ಲಂಬರದಾರನ ಮನೆಯಲ್ಲಿ ಅನೇಕ ಸೀಖರು ಸೇರಿ, ಕಂದೀಲಿನ ಬೆಳಕಿನ ಸುತ್ತ ಕುಳಿತು ಚರ್ಚೆಯಲ್ಲಿ ತೊಡಗಿದ್ದರು. ಲಂಬರದಾರ ಹೇಳುತ್ತಲಿದ್ದ:

"ನಮ್ಮ ಸುತ್ತಲಿನ ಹಳ್ಳಿಗಳಲ್ಲಿಯ ಎಲ್ಲ ಮುಸಲ್ಮಾನರು ಊರು ಬಿಟ್ಟು ಹೋಗಿದ್ದಾರಂತೆ."

"ಅಲ್ಲ, ಆ ಹಳ್ಳಿಯ ಜನ ಅವರನ್ನೆಲ್ಲ ಅದು ಹೇಗೆ ಹೋಗಗೊಟ್ಟರೂ?"

ಲಂಬರದಾರ ಮತ್ತೆ ಹೇಳಿದನು :

"ಈಗ ನಾವೇನು ಮಾಡಬೇಕೆಂಬುದನ್ನು ಯೋಚಿಸಬೇಕಲ್ಲ. ನಾವಂತೂ ನಮ್ಮ ಮುಸ್ಲಿಂ ಬಾಂಧವರಿಗೆ ಅನ್ಯಾಯ ಮಾಡೆವು. ಆದರೆ ಇತರರ ಮನಸ್ಸಿನಲ್ಲಿದ್ದದ್ದು ನಮಗೆ ಹೇಗೆ ತಿಳಿಯಬೇಕು? ಇನ್ನು ನಮ್ಮಲ್ಲಿಗೆ ಬರುವ ನಿರಾಶ್ರಿತರಿಗೆ ನಾವು ಬೇಡವೆಂದು

ಹೇಳಲಿಕ್ಕಾಗುತ್ತದೆಯೆ? ನಮ್ಮ ಧರ್ಮಕ್ಕೇ ಅದು ವಿರುದ್ಧ. ಹಾಗೆಂದು ಅವರು ನಮ್ಮೂರಿನ ಮುಸಲ್ಮಾನರ ಮೇಲೆ ತಮ್ಮ ದ್ವೇಷ ಸಾಧಿಸಲಿಕ್ಕೆ ಬಿಡುವಂತಿಲ್ಲ.''

ಆ ವೇಳೆಗೆ ಬಾಗಿಲಲ್ಲಿ ಕೆಲ ಜನ ಕಾಣಿಸಿಕೊಂಡರು.

''ಅರೆ, ಚಾಚಾ ಬಂದಿದ್ದಾರಲ್ಲ. ಸಲಾಮ್, ಚಾಚಾ ಇಮಾಮ್‌ಬಕ್ಷ್. ಸಲಾಮ್ ಖೈರ್ ದೀನ್, ಒಳಗೆ ಬನ್ನಿರಿ.''

ಬಂದವರೆಲ್ಲ ಕುಳಿತುಕೊಂಡರು. ಕ್ಷಣ ಹೊತ್ತಿನ ಮೌನವನ್ನು ಮುರಿದು ಇಮಾಮು ಬಕ್ಷ ಕೇಳಿದನು :

''ಭಾಯಿ, ಕೊನೆಗೆ ನಮ್ಮ ಬಗ್ಗೆ ನೀವು ಏನು ನಿರ್ಣಯ ಮಾಡಿದಿರಿ?''

''ಇದೇನು ಕೇಳುತ್ತೀರಿ, ಚಾಚಾ? ಈ ಊರು ನಮ್ಮದು ಹೇಗೋ, ನಿಮ್ಮದೂ ಹೌದು''

''ಅದು ಸರಿ. ಪಾಕಿಸ್ತಾನವನ್ನು ತಗೊಂಡು ನಾವೇನು ಮಾಡುವುದಿದೆ? ನಮ್ಮ ಅಜ್ಜ, ಮುತ್ತಜ್ಜ ಹುಟ್ಟಿದ್ದು, ಬೆಳೆದದ್ದು ಉಂಡದ್ದು ಎಲ್ಲ ಇಲ್ಲಿಯೇ. ಆದರೇನು ಮಾಡೋಣ?'' ಎಂದು ನುಡಿಯುತ್ತಿರುವಾಗ ಇಮಾಮುಬಕ್ಷನ ದನಿ ಭಾರವಾಯಿತು. ಮೀತ್‌ಸಿಂಗ್ ಅವನ ಹತ್ತಿರ ಸರಿದು ಅವನ ಹೆಗಲ ಮೇಲೆ ಕೈ ಹಾಕಿದನು. ಇಮಾಮ್‌ಬಕ್ಷ ಮುಂದುವರಿಸಿದನು,

''ಸುತ್ತಲಿನ ಹಳ್ಳಿಗಳ ಮುಸಲ್ಮಾನರು ಹೊರಟು ಹೋಗಿದ್ದಾರೆ. ನಾವಷ್ಟೇ ಉಳಿದವರು. ನೀವು ಹೋಗೆಂದರೆ ನಾವೂ ಹೊರಡುತ್ತೇವೆ.''

''ಚಾಚಾ, ನಾವಿರುವ ವರೆಗೆ ಯಾರೂ ನಿಮ್ಮ ಕೂದಲೆಳೆಯನ್ನು ಮುಟ್ಟಲಾರರು. ನಿಮ್ಮನ್ನು ರಕ್ಷಿಸುವಲ್ಲಿ ನಾವು ಎಂದೂ ಹಿಂದಾಗಲಿಕ್ಕಿಲ್ಲ.''

''ಹೌದು, ಚಾಚಾಗೆ ಅದೇನು ಗೊತ್ತಿಲ್ಲವೇನು? ಆದರೂ ನೂರಾರು ಜನ ಆಯುಧ ಸಹಿತವಾಗಿ ಬಂದು ನಿಂತರೆ ಇವರನ್ನು ರಕ್ಷಿಸುವುದು ಸಾಧ್ಯವೆ?''

''ನೂರು ಏಕ ಸಾವಿರ ಜನ ಬರಲಿ, ನಮ್ಮ ಹೆಣದ ಮೇಲೆ ಕಾಲಿಟ್ಟೇ ಅವರು ಹೋಗಬೇಕಾಗುತ್ತದೆ.''

ಕೊನೆಯವನ ಮಾತಿನಲ್ಲಿ ಭಾವನಾವೇಶವಷ್ಟೇ ಇದೆ ಎಂದು ಅರಿತ ಲಂಬರದಾರನು ಹೇಳಿದನು :

''ಚಾಚಾ, ನಿಜವಾಗಿಯೂ ನಾವು ಧರ್ಮಸಂಕಟದಲ್ಲಿ ಬಿದ್ದಿದ್ದೇವೆ. ನೀವು ಬಿಟ್ಟು ಹೋಗಬೇಕೆಂದು ನಾವು ಕನಸಿನಲ್ಲಿಯೂ ಎಣಿಸುವವರಲ್ಲ, ಆದರೆ ಹೊರಗಿನಿಂದ ಬಂದ ಜನ ಏನು ಮಾಡಿಯಾರೆಂಬ ನಿಯಮವಿಲ್ಲ. ಮಳೆಗಾಲ ಆರಂಭವಾಗಿದ್ದು ನದಿಯ ಕಾಲುಹೊಳೆ ಬಂದ್ ಆಗಿದೆ. ನೀವೀಗ ನದಿಯನ್ನು ದಾಟಿ ಹೋಗುವಂತೆಯೂ ಇಲ್ಲ. ನನಗೆ ಅನಿಸುವುದೆಂದರೆ, ನೀವು ಕೆಲ ಕಾಲದವರೆಗೆ ನಿಮ್ಮ ನಿರಾಶ್ರಿತ ಕ್ಯಾಂಪಿಗೆ ಹೋಗುವುದು ಒಳ್ಳೆಯದೇನೊ. ನಿಮ್ಮ ಮನೆ, ದನಕರುಗಳನ್ನು ನಾವು ನೋಡಿಕೊಳ್ಳುತ್ತೇವೆ. ಇದೆಲ್ಲ ಗದ್ದಲ ಮುಗಿದ ಮೇಲೆ ನೀವೆಲ್ಲ ಪುನಃ ಬಂದುಬಿಡಿರಿ.''

'ನೀವು ಇಲ್ಲಿ ಇರುವುದು ಬೇಡ' ಎಂದು ಪರ್ಯಾಯವಾಗಿ ತಾನು ಅವರಿಗೆ ಹೇಳಿದಂತಾಯಿತೆಂದು ಲಂಬರದಾರ ನಾಲಿಗೆ ಕಚ್ಚಿಕೊಂಡನು.

''ಅಲ್ಲ, ನಾನು ನಿಮ್ಮ ಹಿತಕ್ಕಂದೇ ಈ ಸೂಚನೆಯನ್ನು ಮಾಡುತ್ತಿರುವುದು. ನೀವು ಇಲ್ಲೇ

ಇರಬೇಕೆಂದು ನಿರ್ಧರಿಸಿದ್ದಾದರೆ, ನಾವು ನಿಮ್ಮನ್ನು ರಕ್ಷಿಸುವುದರಲ್ಲಿ ಎಂದೂ ಹಿಂದೆ ಬೀಳುವುದಿಲ್ಲ.''

ಮತ್ತೆ ಕೆಲ ಕಾಲ ಮೌನವಾವರಿಸಿತು. ಎಲ್ಲರೂ ಇಮಾಮ್‌ಬಕ್ಷನ ಕಡೆಗೇ ನೋಡುತ್ತಲಿದ್ದರು.

ಇಮಾಮಬಕ್ಷ ಮೆಲ್ಲಗೆ ಹೇಳಿದನು : ''ಆಗಲಿ ಲಂಬರದಾರಾ, ನೀನು ಹೇಳೋದು ಸರಿ. ಹಾಗೇ ಮಾಡಬೇಕಾದೀತು. ಆದರೆ..... ಈ ಊರು ಈ ಮನೆ.... ನಿಮ್ಮನ್ನೆಲ್ಲ ಬಿಟ್ಟು ಹೋಗುವುದೆಂದರೆ'' ಹೇಳಹೇಳುತ್ತ ಇಮಾಮಬಕ್ಷನ ಕಣ್ಣಲ್ಲಿ ನೀರು ಚಿಮ್ಮಿತು. ಮಾತು ಹೊರಡಲಿಲ್ಲ. ಅಲ್ಲಿ ಇದ್ದವರೆಲ್ಲ ಪರಸ್ಪರ ತಬ್ಬಿಕೊಂಡು ಹಾರ್ದಿಕವಾಗಿ ಅಳತೊಡಗಿದರು.

ಮಧ್ಯರಾತ್ರಿ ಸಮೀಪಿಸುತ್ತಿತ್ತು. ಜಗ್ಗಾನ ಮನೆಯಲ್ಲಿ ಅವನ ತಾಯಿ ಮಲಗಿದ್ದಾಗ, ಬಾಗಿಲು ಚಿಲಕವನ್ನು ಬಡಿದ ಸದ್ದಾಯಿತು.

''ಯಾರವರು? ಜಗ್ಗಾ, ಬಂದಿಯೇನೊ'' ಎನ್ನುತ್ತ ಮುದುಕಿ ಎದ್ದು ಕುಳಿತಳು.

ಬಂದವಳು ನೂರನ್, ಅದೆಂತು ತನ್ನ ಹೆಸರನ್ನು ಹೇಳಿಯಾಳು? ಮತ್ತೊಮ್ಮೆ ಕದ ತಟ್ಟಿದಳು.

ಕೊನೆಗೊಮ್ಮೆ ಬಾಗಿಲು ತೆಗೆದಾಗ ನೂರೂ ಒಳಗೆ ಬಂದವಳೇ ಬಾಗಿಲಿಕ್ಕಿ ಕೊಂಡಳು.

''ನಾನು ನೂರೂ, ಇಮಾಮ್‌ಬಕ್ಷನ ಮಗಳು.''

''ಇಲ್ಲಿಗೇಕೆ ಬಂದಿಯೇ?''

''ಜಗ್ಗಾ ಬಂದಿದ್ದಾನೆಯೆ ಎಂದು ಕೇಳಲಿಕ್ಕೆ ಬಂದೆ.''

''ಅವನನ್ನು ತೆಗೆದುಕೊಂಡು ನಿನಗೇನು ಮಾಡೋದಿದೆಯೇ ಸೆಟವೀ? ನಿನ್ನ ಬೆನ್ನು ಹತ್ತಿ ನನ್ನ ಮಗ ಏನೆಲ್ಲ ಒದ್ದಾಡಿದ. ಅಪರಾತ್ರಿಯಲ್ಲಿ ಹೀಗೆ ಮನೆ ಮನೆ ತಿರುಗುತ್ತೀ ಅನ್ನುವುದು ನಿಮ್ಮ ಅಪ್ಪನಿಗೆ ಗೊತ್ತಿದೆಯೇನು?''

ನೂರನ್ ಅಳತೊಡಗಿದಳು. ''ನಾವು ನಾಳೆ ಹೊರಟು ಹೋಗುತ್ತೇವೆ.''

''ಹೋಗೇಬಿಡು, ಈಗೇ!'' ಎಂದಳಾ ಮುದುಕಿ.

''ಹೇಗೆ ಹೋಗಲಿ, ಬೀಬೀ, ಜಗ್ಗಾ ನನ್ನನ್ನು ಮದುವೆಯಾಗುವುದಾಗಿ ವಚನ ಕೊಟ್ಟಿದ್ದ.''

''ಏನು? ಜಗ್ಗಾ ಮುಸಲ್ಮಾನ ಹುಡುಗಿಯನ್ನು ಮದುವೆಯಾಗೋದೆ? ತೊಲಗಿಲ್ಲಿಂದ! ಒಂದು ಕ್ಷಣ ಹೆಚ್ಚು ನಿಂತದ್ದಾದರೆ ಓಣಿಯ ಜನರನ್ನೆಲ್ಲ ಕೂಗಿ ಕರೆಯುತ್ತೇನೆ.''

ಮುದುಕಿಯ ಅಬ್ಬರಕ್ಕೆ ನೂರೂ ಅಳುವುದನ್ನು ನಿಲ್ಲಿಸಿ ಹೇಳಿದಳು. ''ಆಗಲಿ, ಹೋಗುತ್ತೇನೆ, ಬೀಬಿ. ಆದರೆ ನನ್ನ ಮೇಲೆ ಸಿಟ್ಟಿಗೇಳಬೇಡ. ನನ್ನದು ತಪ್ಪಾಗಿದೆ. ಜಗ್ಗಾ ಬಂದಮೇಲೆ, ನಾ ಬಂದಿದ್ದೆ; ಸತ್ ಶ್ರೀ ಅಕಾಲ್ ಹೇಳಿದೆ ಅಂತ ತಿಳಿಸುವಿಯಾ?'' ನೂರನಳ ದುಃಖ ಮತ್ತೆ ಉಕ್ಕಿ ಬಂದು ಮುದುಕಿಯ ಕಾಲಡಿಗೆ ಕುಸಿದಳು.

ಆದರೂ ಮುದುಕಿಯ ಮನಸ್ಸು ಮಿದುವಾಗಿರಲಿಲ್ಲ. ''ಆಗಲಿ, ಹೇಳುತ್ತೇನೆ'' ಎಂದು ಬಿರುದನಿಯಲ್ಲೇ ನುಡಿದಳು.

''ಬೀಬೀ.''

''ಏನು?''

''ಬೀಬೀ, ಹೇಗೆ ಹೇಳಲಿ? ನಾನು....ನನ್ನ ಹೊಟ್ಟೆಯಲ್ಲಿ ಜಗ್ಗಾನ ಕೂಸು ಇದೆ. ನನ್ನ ತಂದೆಗ ಗೊತ್ತಾಯಿತೆಂದರೆ ನನ್ನನ್ನೂ ಅದನ್ನೂ ಕೂಡಿಯೇ ಕೊಂದುಬಿಡುವರು.'' ನೂರೂ ಅವಳ ಕಾಲುಗಳನ್ನು ಅಪ್ಪಿಕೊಂಡು ರೋದಿಸತೊಡಗಿದಳು.

ಮುದುಕಿಯು ಅವಳನ್ನು ಮೇಲೆಬ್ಬಿಸಿ ಹೊರಸಿನ ಮೇಲೆ ಕೂಡ್ರಿಸಿಕೊಂಡಳು. ಹೊರಗಿನ ಮಳೆಯಿಂದ ನೂರನ್ ಒದ್ದೆಯ ಮುದ್ದೆಯಾಗಿದ್ದಳು.

''ಎಷ್ಟು ದಿನ ಆಯಿತು?''

''ಮೊನ್ನೆ ನನಗೆ ಗೊತ್ತಾಯಿತು. ಈಗ ಎರಡನೇ ತಿಂಗಳು. ನಾನು ಏನು ಮಾಡಲಿ, ಬೀಬೀ, ತಿಳಿಯದಾಗಿದೆ.''

''ನಾನಂತೂ ನಿನ್ನನ್ನು ನಿಲ್ಲಿಸಿಕೊಳ್ಳಲು ಶಕ್ಯವಿಲ್ಲ. ಜಗ್ಗಾ ಬಂದಮೇಲೆ ಅವನಿಗೆ ಈ ವಿಷಯ ಹೇಳುವೆ. ಅವನೇ ನಿನ್ನನ್ನು ಹುಡುಕಿಕೊಂಡು ಬರತಾನೆ.''

ಹೌದು. ತನ್ನ ಜಗ್ಗಾ ಇದ್ದಲ್ಲಿಂದ ಹುಡುಕಿಕೊಂಡು ಬರುವ ಎಂಬ ಭಾವನೆ ಮೂಡಿಬಂದು ಅವಳು ಕಣ್ಣೊರಸಿಕೊಂಡಳು. ತುಸು ಧೈರ್ಯ ಮೂಡಿತು. ಹೊರಡಲೆಂದು ಎದ್ದು ನಿಂತಳು. ತಾನು ಈ ಮನೆಗೆ ಸಂಬಂಧಿಸಿದವಳು. ಈ ಮನೆ ತನ್ನದು. ತಾನು ಕುಳಿತ ಹೊರಸು, ಅಲ್ಲಿಯ ಸಾಮಾನು—ಎಲ್ಲ ತನಗೆ ಸಂಬಂಧಿಸಿದ್ದು ಎಂದು ಅವಳಿಗನಿಸಿತು. ಮುದುಕಿಗೆ ಇನ್ನೊಮ್ಮೆ ಮನಮುಟ್ಟಿ ನಮಸ್ಕರಿಸುತ್ತ, ''ಸತ್ ಶ್ರೀ ಅಕಾಲ್, ಬೀಬೀ. ಜಗ್ಗಾನಿಗೆ ಹೇಳಿರಿ. ನಾ ಬಂದಿದ್ದೆ ಅಂತ ಹೇಳಿರಿ'' ಎನ್ನುತ್ತ ಹೊರಬಿದ್ದಳು.

ಅಷ್ಟು ರಾತ್ರಿಯಿದ್ದರೂ ಅನೇಕ ಮನೆಗಳಲ್ಲಿ ಗುಬ್ಬಿ ಚಿಮಣಿಯ ದೀಪಗಳು ಉರಿಯುತ್ತಲಿದ್ದವು. ಕೆಲವರು ಸಾಮಾನನ್ನು ಕಟ್ಟುವುದರಲ್ಲಿ ಮಗ್ನರಾಗಿದ್ದರು. ಕೆಲವರು ಅಗಲುವ ಮುನ್ನ ತಂತಮ್ಮ ಸುಖದುಃಖಗಳನ್ನು ಹೇಳಿಕೊಳ್ಳುತ್ತಿದ್ದರು.

ತೀರ ನಸುಕಿನಲ್ಲಿ ನಿದ್ದೆ ಹೋಗಿದ್ದರಿಂದ, ಮರುದಿನ ತಾಸು ಹೊತ್ತು ಏರಿದ್ದರೂ ಯಾರೂ ಹಾಸಿಗೆ ಬಿಟ್ಟು ಎದ್ದಿರಲಿಲ್ಲ. ಊರೊಳಗ ಧಾವಿಸಿದ ಕೆಲವು ಟ್ರಕ್ಕುಗಳು ಮತ್ತು ಒಂದು ಜೀಪ್‌ನ ಸದ್ದು ಅವರಿಗೆ ಕೇಳಿಸಿದಾಗಲೇ ಅವರೆಲ್ಲ ಗಡಬಡಿಸಿ ಮೇಲಕ್ಕೆದ್ದರು.

''ಹೂಂ, ಮುಸಲ್ಮಾನರೆಲ್ಲ ಹೊರಗೆ ಬನ್ನಿರಿ. ಪಾಕಿಸ್ತಾನಕ್ಕೆ ಹೋಗುವವರು ಸಿದ್ಧರಾಗಿರಿ,'' ಜೀಪ್‌ನ ಧ್ವನಿವರ್ಧಕವು ಸಾರಿತು.

ಮುಸಲ್ಮಾನರು ಒಬ್ಬೊಬ್ಬರಾಗಿ ಹೊರಬಂದರು. ಗೋಣಿಯ ಚೀಲ, ಅರಿವೆಯ ಗಂಟು, ಮುರುಕು ಟ್ರಂಕು, ಡಬ್ಬಿಗಳು, ಚಾಪೆಯ ಸುರುಳಿ ಏನೆಲ್ಲ ಸಾಮಾನನ್ನು ಹೊತ್ತು ಕೊಂಡಿದ್ದರು. ಸಣ್ಣ ಮಕ್ಕಳು ಕೂಡ ಒಂದೊಂದು ಗಂಟನ್ನು ಹೊತ್ತಿದ್ದವು. ಜೊತೆಗೆ ಎತ್ತು ಎಮ್ಮೆ ಆಡುಗಳನ್ನೂ ಕೆಲವರು ತಂದಿದ್ದರು!

ಜೀಪ್‌ನಲ್ಲಿ ಖಾಕಿ ವೇಷದ ಇಬ್ಬರು ಅಧಿಕಾರಿಗಳಿದ್ದರು. ಒಬ್ಬ ಸೀಖ್, ಇನ್ನೊಬ್ಬ ಮುಸಲ್ಮಾನ. ಆ ಮುಸ್ಲಿಂ ಅಧಿಕಾರಿಯು ಜೀಪಿನಿಂದ ಕೆಳಗಿಳಿದವನೇ—

''ಛೇ, ಛೇ, ಇವನ್ನೆಲ್ಲ ಸಂಗಡ ನೀವು ತರುವಂತಿಲ್ಲ. ಈ ಟ್ರಕ್ಕುಗಳು ನೆಟ್ಟಗೆ ಪಾಕಿಸ್ತಾನಕ್ಕೆ ಹೋಗುವುದಿಲ್ಲ. ಇಲ್ಲಿಂದ ಚಂದನನಗರದ ಕ್ಯಾಂಪಿಗೆ ಹೋಗುವವು. ಅಲ್ಲಿಂದ ನಿಮ್ಮನ್ನೆಲ್ಲ

ಒಂದು ರೈಲು ಗಾಡಿಯ ಮೂಲಕ ಪಾಕಿಸ್ತಾನಕ್ಕೆ ಸಾಗಿಸುವವರಿದ್ದೇವೆ. ಕಾರಣ ನಿಮ್ಮ ಸಂಗಡ ಕೇವಲ ನಗದು ಹಣ, ಆಭರಣ, ಬಟ್ಟೆಬರೆ, ಹಾಸಿಗೆ, ಅವಶ್ಯವಿದ್ದ ಪಾತ್ರೆ–ಪರಡಿ ಇಷ್ಟನ್ನೇ ತಗೊಳ್ಳತಕ್ಕದ್ದು. ಉಳಿದ ಸಾಮಾನೆಲ್ಲ ಇಲ್ಲಿಯೇ ಇರಲಿ''

ಲಂಬರದಾರನಿಗೆ ಇದನ್ನು ಕೇಳಿ ದಿಗಿಲಾಯಿತು. ''ಇಲ್ಲ ಸಾಹೇಬ. ಅದು ಶಕ್ಯವಿಲ್ಲ ಏನೋ ನಾಲ್ಕೈದು ದಿನದ ಮಾತಾದರೆ ನಾವು ಇವರ ವಸ್ತುಗಳನ್ನೆಲ್ಲ ನೋಡಿಕೊಳ್ಳಬಹುದಿತ್ತು. ಪಾಕಿಸ್ತಾನಕ್ಕೆ ಇವರೆಲ್ಲ ಹೋಗುವವರೆಂದ ಮೇಲೆ ಬರುವುದು ಎಷ್ಟು ತಿಂಗಳೋ ಏನೊ. ಇನ್ನೊಬ್ಬರ ವಸ್ತುವನ್ನು, ಅದೂ ನಮ್ಮ ಬಾಂಧವರಂತೆ ಇದ್ದ ಇವರ ಸಾಮಾನುಗಳನ್ನು ಮುಟ್ಟುವುದೆಂದರೆ....''

'ಬಾಂಧವರಂತೆ' ಎಂಬ ಶಬ್ದವನ್ನು ಕೇಳಿ ಆ ಮುಸ್ಲಿಂ ಅಧಿಕಾರಿಯು ಕಣ್ಣನ್ನು ಹಿಗ್ಗಿಸಿ ಕುತ್ಸಿತ ನಗೆಯೊಂದಿಗೆ ಕೇಳಿದನು :

''ಶಾಬಾಸ್, ಲಂಬರದಾರ ಸಾಹೇಬ್. ನಿನ್ನೆ ನೀವು ಇದೇ ಬಾಂಧವರನ್ನು ಕೊಲ್ಲಬೇಕೆಂದಿದ್ದೀರಿ. ಇಂದು ಹೀಗೆ ಮಾತನಾಡುತ್ತಿದ್ದೀರಿ. ನಾಳೆ ನೀವು ಪುನಃ ಮನಸ್ಸನ್ನು ಬದಲಿಸಲಿಕ್ಕಿಲ್ಲವೆಂದು ಹೇಗೆ ಹೇಳುವುದು? ಹಾಂ. ಇದು ಕೇಳ್ರಿ. ನಿಮಗ ಹತ್ತು ಮಿನಿಟಿನ ಅವಧಿ ಕೊಡುತ್ತೇನೆ. ಅಷ್ಟರಲ್ಲಿ ನಿಮ್ಮ ಸಣ್ಣ ಸಾಮಾನುಗಳನ್ನಷ್ಟೆ ತೆಗೆದುಕೊಂಡು ಟ್ರಕ್ ಹತ್ತಬೇಕು.''

ಮುಸಲ್ಮಾನರು ಮುಂದೆ ಬಂದು ಅವನ ಸಂಗಡ ವಾದ ಹಾಕತೊಡಗಿದರು. ಇದುವರೆಗೆ ತುಸು ಅಂತರದಲ್ಲಿ ನಿಂತಿದ್ದ ಸೀಖ ಜನರೂ ಸೀಖ ಸರದಾರನ ಹತ್ತಿರ ಬಂದು, 'ತಾವು ಊರು ಬಿಟ್ಟು ಹೋಗುವವರ ಸರಕಿನ ಜವಾಬ್ದಾರಿಯನ್ನು ತೆಗೆದುಕೊಳ್ಳುವವರಲ್ಲ' ಎಂದು ಹೇಳಿದರು.

ಮಿತ್‌ಸಿಂಗ್ ಮುಂದೆ ಬಂದು ಆ ಸೀಖ್ ಸರದಾರನಿಗೆ ಹೇಳತೊಡಗಿದನು :

''ಯಾಕೆ, ಸರದಾರ ಸಾಹೇಬ್, ನಮ್ಮ ಲಂಬರದಾರ ಹೇಳುವುದು ಸರಿಯಲ್ಲವೆ? ಇನ್ನೊಬ್ಬರ ವಸ್ತುವನ್ನು ನಾವು ಮುಟ್ಟುವುದು ಅನ್ಯಾಯವಾಗುತ್ತದ.''

''ಹೌದು, ಭಾಯೀ. ಇನ್ನೊಬ್ಬರ ವಸ್ತುವನ್ನು ಮುಟ್ಟುವುದು ಅನ್ಯಾಯ. ಇನ್ನೊಬ್ಬರ ಹೆಂಗಸರನ್ನು ಹಿಡಿದುಕೊಳ್ಳುವುದು ಅನ್ಯಾಯದ್ದು. ಅದೇ ನಮ್ಮ ಆಸ್ತಿಯನ್ನು ಇನ್ನೊಬ್ಬರು ದೋಚಿಕೊಂಡು ಹೋಗುವಾಗ ನಾವು ಸುಮ್ಮನಿರಬೇಕು. ನಮ್ಮ ಹೆಂಗಸರನ್ನು ಹಿಡಿದು ನಡುಬೀದಿಯಲ್ಲಿಯೇ ಶೀಲಭಂಗ ಮಾಡುವುದನ್ನು ನೋಡುತ್ತ ನಾವು ಹಾಗೆಯೇ ನಿಲ್ಲಬೇಕು. ಇನ್ನೊಬ್ಬರು ನಮ್ಮ ಮುಖಕ್ಕೆ ಉಗುಳಿ ನಮ್ಮ ಅಂಡಿನ ಮೇಲೆ ಒದ್ದು ದೂಡಿದಾಗಲೂ ನಾವು ಸುಮ್ಮನೆ ಹಿಂದಿರುಗಿ ಬರಬೇಕು ಅಲ್ಲವೆ?''

ಅಕಸ್ಮಾತನದಿಂದ ಹೇಳಿದ ಸೀಖ ಸರದಾರನ ಆ ಮಾತುಗಳನ್ನು ಕೇಳಿ ಮನೋಮಾಜರಾದ ಸೀಖರು ಕಕ್ಕಾವಿಕ್ಕಿಯಾದರು.

ಅಷ್ಟರಲ್ಲಿ ಮಲ್ಲಿಯ ಗ್ಯಾಂಗಿನವರೂ ಕೆಲ ನಿರಾಶ್ರಿತರೂ ಅಲ್ಲಿಗೆ ಬಂದರು. ಅವರಾರೂ ಮನೋಮಾಜರಾದವರಲ್ಲ. ಮಲ್ಲಿಯು ಸಹಾಸ್ಯವದನನಾಗಿ ಇಬ್ಬರೂ ಸೈನಿಕ ಸರದಾರರನ್ನು ಉದ್ದೇಶಿಸಿ ಹೇಳಿದನು :

"ಸಾಹೇಬ್, ಈ ಹಳ್ಳಿಯ ಜನರು ಬಹಳ ಉದಾರಿಗಳು. ತಮ್ಮನ್ನೇ ತಾವು ರಕ್ಷಿಸಿಕೊಳ್ಳಲಾರದವರು. ಇನ್ನೊಬ್ಬರ ಆಸ್ತಿಪಾಸ್ತಿಯನ್ನೆಂತು ನೋಡಿಕೊಂಡಾರು? ನೀವೇನು ಕಾಳಜಿ ಮಾಡಬೇಡಿರಿ. ಈ ಮುಸಲ್ಮಾನರ ಎಲ್ಲ ಆಸ್ತಿ–ಸೊತ್ತಿನ ಜವಾಬ್ದಾರಿ ನಮ್ಮಗಿರಲಿ. ಬೇಕಾದರೆ ಒಂದಿಬ್ಬರು ಸೈನಿಕರನ್ನು ನಮ್ಮ ಸಹಾಯಕ್ಕೆ ಕೊಟ್ಟಿರ್ರಿ. ಥಕ್ಕನೆ ಈ ಜನರಲ್ಲಿ ಯಾರಾದರೂ ಲೂಟಿ ಮಾಡುವವರಿದ್ದರೆ, ನಿಲ್ಲಿಸಬಹುದು."

ಮಲ್ಲಿಯಂಥ ಬದ್ಮಾಷನ ಕೈಯಲ್ಲಿ ತಮ್ಮ ವಸ್ತುಗಳನ್ನು ಒಪ್ಪಿಸುವುದೆ? ಅವನ ಮಾತುಗಳನ್ನು ಕೇಳಿ ಸೀಖ, ಮುಸ್ಲಿಂ ಇಬ್ಬರೂ ದಿಙ್ಮೂಢರಾದರು. ಅಸಹಾಯ ಭಾವದಿಂದ ಒದರಾಡತೊಡಗಿದರು ಗದ್ದಲವೋ ಗದ್ದಲ! ಅಂಥದರಲ್ಲಿ, ಮುಸ್ಲಿಂ ಸರದಾರ ಉಚ್ಚ ಸ್ವರದಿಂದ ಕೂಗಿ ಹೇಳಿದ :

"ಇದು ನೋಡಿರಿ! ಈಗ ಬಂದ ಮಹನೀಯರು ನೀವಿಲ್ಲಿ ಬಿಟ್ಟು ಹೋದ ಸಾಮಾನುಗಳ ಯೋಗಕ್ಷೇಮ ನೋಡಿಕೊಳ್ಳುತ್ತಾರಂತೆ. ಇನ್ನು ನೀವು ಗಾಡಿ ಹತ್ತಿದಿರಿ, ನೆಟ್ಟಗಾಯಿತು. ಇಲ್ಲವಾದರೆ ಬಂದಷ್ಟೇ ಜನರನ್ನು ಹೇರಿಕೊಂಡು ಟ್ರಕ್ಕುಗಳು ಹೊರಡುವವು. ಕೇವಲ ಐದು ನಿಮಿಷದ ಅವಧಿ ನಿಮಗೆ ಕೊಟ್ಟಿದ್ದೇನೆ."

ಆಯಿತು, ನೂಕು ನುಗ್ಗುತ್ತ ಜನ ಟ್ರಕ್ ಏರಿದರು. ತಾವು ಬಿಟ್ಟು ಹೋಗಬೇಕಾದ ವಸ್ತುಗಳ ವ್ಯವಸ್ಥೆ ಮಾಡುವದಿರಲಿ, "ಹೋಗಿ ಬರುತ್ತೇವೆ" ಎಂದು ಬೀಳ್ಕೊಡುವುದಕ್ಕೂ ಅವಕಾಶವಿರಲಿಲ್ಲ.

ಟ್ರಕ್‌ಗಳು ಕಣ್ಮರೆಯಾಗುತ್ತಲೇ ಸೀಖ ಸರದಾರನು ಇತರ ಹಳ್ಳಿಗರನ್ನುದ್ದೇಶಿಸಿ. ಮಲ್ಲಿಯನ್ನು ಅಲ್ಲಿಯ ಮುಸ್ಲಿಂ ಆಸ್ತಿಯ ಪಾರುಪತ್ಯಗಾರನನ್ನಾಗಿ ನೇಮಿಸಿದ್ದಾಗಿಯೂ ಅವನಿಗ ಅಡ್ಡಿ ಮಾಡಿದವರನ್ನು ಶಿಕ್ಷಿಸುವುದಾಗಿಯೂ ಸಾರಿ, ಜೀಪ್ ಹತ್ತಿ ಹೊರಟು ಹೋದನು.

ಇತ್ತ ಮಲ್ಲಿ ಮತ್ತು ಅವನ ಸಂಗಡಿಗರು ಊರೊಳಕ್ಕೆ ಬಂದು ಮುಸ್ಲಿಂ ಮನೆಗಳ ಕೀಲಿ ಮುರಿದು, ತಮಗೆ ಬೇಕಾದ ಸಣ್ಣ ದೊಡ್ಡ ಪದಾರ್ಥಗಳನ್ನೂ ಎಲ್ಲ ದನಕರುಗಳನ್ನೂ ಹಾಡುಹಗಲೇ ಎತ್ತಿಕೊಂಡು ಹೊರಟುಹೋದರು!

ಮನೋಮಾಜರಾದ ವಿಪತ್ಪರಂಪರೆ ಅಲ್ಲಿಗೆ ಮುಗಿಯಲಿಲ್ಲ. ಸಂಜೆಯ ಮುಂದೆ ದನಕಾಯುವ ಹುಡುಗನೊಬ್ಬನು ಬಂದು 'ನದಿಯ ನೀರಿನ ಪಾತಳಿಯು ಏರುತ್ತಲಿದೆ' ಎಂಬ ಸುದ್ದಿಯನ್ನು ತಂದನು. ಗಾಬರಿಗೊಂಡ ಲಂಬರದಾರನೂ ಇನ್ನು ಕೆಲವರೂ ನದಿಯ ಕಡೆಗೆ ಸಾಗಿದರು. ನದಿಯ ಪಾತ್ರವು ಕ್ಷಣಕ್ಷಣಕ್ಕೆ ಅವರ ಕಣ್ಣೆದುರೇ ಅಗಲವಾಗುತ್ತ ನಡೆದಿದ್ದಿತು; ಅಬ್ಬರಿಸುತ್ತಿದ್ದಿತು. ಕಂಬಗಳೂ ರೈಲು ಸೇತುವೆಯೂ ಮಾತ್ರ ಕಾಣಿಸುತ್ತಿದ್ದವು. ಇಷ್ಟು ದೊಡ್ಡ ಪ್ರಮಾಣದಲ್ಲಿ ನದಿಗೆ ಮಹಾಪೂರವು ಬಂದುದಿಲ್ಲ ಎಂದು ಆಡಿಕೊಳ್ಳುತ್ತ ಊರ ಕಡೆ ಹಿಂತಿರುಗಿದರು.

ಆದರೂ ಸಂಜೆ ನದಿಯ ಮೇಲೆ ಕಣ್ಣಿಡಲು ಸರದಿಯ ಮೇಲೆ ಮೂರು ಮೂರು ಜನ ನಾಲ್ಕು ತಂಡಗಳನ್ನು ನಿರ್ಮಿಸಲಾಯಿತು. ನಡುರಾತ್ರಿಯ ನಂತರ ನರಳುತ್ತಿದ್ದ ಕಾವಲುತಂಡ

ಉತ್ತೇಜಿತವಾಗಿತ್ತು. ನದಿಯ ಮೇಲಿಂದ ಆರ್ತನಾದ ಕೇಳಿಸುತ್ತಿದೆ ಎಂದವರು ಹೇಳುತ್ತಿದ್ದರು. ಲಂಬರದಾರ ಅವರೊಡನೆ ನದೀತೀರಕ್ಕೆ ಹೋದ.

ನಾಲ್ವರೂ ನಿಂತು ಆಲಿಸತೊಡಗಿದರು.

"ಕೇಳಿದೆಯಾ?"

"ಚುಪ್!"

ರೈಲುಗಾಡಿ ಬರುತ್ತಿತ್ತು. ಮಬ್ಬುಗತ್ತಲೆಯಲ್ಲಿ ಅದರ ಹೊಗೆಯಷ್ಟೇ ಗೋಚರಿಸುತ್ತಿತ್ತು. ಆದರೆ ಗಾಡಿಯಲ್ಲಿ ಒಂದೂ ದೀಪವಿಲ್ಲ—ಎಂಜಿನ್ನಿನ ದೀಪ ಕೂಡ. ಕೇವಲ ಎಂಜಿನ್ನು ಕಾರುವ ಕಿಡಿಗಳಷ್ಟೇ. ಅದು ಮನೋಮಾಜರಾದಲ್ಲಿ ನಿಂತಿತು.

"ಪಾಕಿಸ್ತಾನದಿಂದ ಬಂದ ಗಾಡಿ."

"ಗಾಡಿ ದೆವ್ವದಂತೆ ಕಾಣುತ್ತಿದೆ," ಎಂದ ಇನ್ನೊಬ್ಬ.

ಕೆಲವೇ ದಿನಗಳ ಹಿಂದೆ ರೈಲು ಕಂಬಿಗಳಾಚೆ ಸಾವಿರಾರು ಹೆಣಗಳನ್ನು ಸುಟ್ಟಿದ್ದ ಸ್ಥಳದಿಂದ ನರಿಗಳ ಕೂಗು ಕೇಳಿಸಿತು.

ಬೆಳಗಾಯಿತು. ಮೋಡ ಸರಿಯಿತು. ರಭಸದ ಪ್ರವಾಹದಲ್ಲಿ ಗಂಡಸರ, ಹೆಂಗಸರ ಹೆಣಗಳು ತೇಲಿ ಬರುತ್ತಿರುವುದು ಕಾಣಿಸತೊಡಗಿತು. ಅವರ ಹೊಟ್ಟೆಗಳ ಮೇಲೆ ಬಲವಾಗಿ ತಬ್ಬಿಕೊಂಡ ಚಿಕ್ಕ ಮಕ್ಕಳು ನಿದ್ದೆಯಲ್ಲಿವೆಯೋ ಎಂಬಂತಿದ್ದವು. ಗಗನವೆಲ್ಲ ಹದ್ದುಗಳಿಂದ ತುಂಬಿತ್ತು. ಅವು ಕೆಳಗಿಳಿದು ತೇಲುತ್ತಿರುವ ಹೆಣಗಳನ್ನು ಕುಕ್ಕಿ ಕುಕ್ಕಿ ಹೊರಳಿಸುತ್ತಿದ್ದವು. ದಡದಲ್ಲಿದ್ದವರು ಕಣ್ಣು ಮುಚ್ಚಲಾರದೆ ನೋಡುತ್ತಲೇ ಇದ್ದರು.

"ಯಾವುದೋ ಹಳ್ಳಿಯ ಜನ ನೆರೆಗೆ ಸಿಕ್ಕಿ ತೇಲುವಂತಿದೆ" ಎಂದ ಲಂಬರದಾರ.

"ಲಂಬರದಾರಾ, ಇವರು ನೆರೆಯಲ್ಲಿ ಮುಳುಗಿದವರಲ್ಲ. ಇವರ ಕೊಲೆಯಾಗಿದೆ" ಎಂದನೊಬ್ಬ.

ಈಗ ರೈಲು ಗಾಡಿಯಲ್ಲಿ ಏನಿದೆಯೆಂಬುದರ ಬಗ್ಗೆ ಯಾರಿಗೂ ಸಂಶಯ ಉಳಿಯಲಿಲ್ಲ. ಮತ್ತೆ ಕಟ್ಟಿಗೆಗಾಗಿ ಸೈನಿಕರು ಹಳ್ಳಿಗೆ ಬರುವರೆಂದು ಅವರಿಗೆ ಖಂಡಿತವಾಯಿತು.

ಮನೋಮಾಜರಾದ ಸೀಖರಾರಿಗೂ ಆ ದಿನ ತಮ್ಮ ಮನೆಗೆ ಹೋಗಲು ಮನಸ್ಸಾಗದೇ ಅವರೆಲ್ಲ ಗುರುದ್ವಾರಾದ ಆವಾರದಲ್ಲಿ ಸೇರಿದ್ದರು. ಲಂಬರದಾರನು ಬಂದು ನದಿಯ ಭೀಕರ ಸ್ವರೂಪವನ್ನು ವಿವರಿಸಿದನು. ಮೀತ್‌ಸಿಂಗನು 'ಗ್ರಂಥ'ದಿಂದ ಪದ್ಯಗಳನ್ನು ಓದತೊಡಗಿದನು. ಇಡೀ ದಿನದ ಘಟನೆಗಳು ಅವರ ಚಿತ್ತವೃತ್ತಿಯನ್ನು ಬಲವಾಗಿ ಕದಡಿದ್ದವು. ಅವರ ದೈಹಿಕ ದಣಿವನ್ನು ಹೆಚ್ಚಿಸಿದ್ದವು. ರಾತ್ರಿ ಹೆಚ್ಚಿದಂತೆಲ್ಲ ಮಕ್ಕಳು ತಮ್ಮ ತಾಯಂದಿರ ತೊಡೆಯ ಮೇಲೆ ನಿದ್ದೆ ಹೋದವು.

ಅಷ್ಟರಲ್ಲಿ ಜೀಪಿನ ಸಪ್ಪಳವಾಯಿತು. ಅನಂತರ ಹೊರಗಿನಿಂದ ಯಾರೋ ಕೂಗಿದಂತಾಯಿತು. "ಇಲ್ಲಿ ಯಾರಾದರೂ ಸೀಖರು ಬದುಕಿದ್ದಾರೊ, ಎಲ್ಲರೂ ಸತ್ತು ಹೋಗಿದ್ದಾರೊ?"

ಆ ಧ್ವನಿಯ ಅಬ್ಬರಕ್ಕೆ ಅನೇಕರು ಎದ್ದು ನಿಂತರು. ಲಂಬರದಾರನೂ ಮೀತ್‌ಸಿಂಗನೂ ಆಗಂತುಕರನ್ನು ಮಾತನಾಡಿಸಲೆಂದು ಮುಂದೆ ಬಂದರು.

ಬಂದವರ ಕೈಯಲ್ಲಿ ಬಂದೂಕು ಮತ್ತಿತರ ಶಸ್ತ್ರಗಳಿದ್ದುವು. ಅವರೆಲ್ಲ ಸೈನಿಕರ ಹಾಗೆ ವೇಷ ಧರಿಸಿದ ಸೀಖರಾಗಿದ್ದರು. ಅವರ ಮುಖಂಡನೋ, ಅದೇ ಮೀಸೆ ಒಡೆದ ಓರ್ವ ಯುವಕ.

"ನೀವು ಜೀವಂತ ಇದ್ದೀರಾ? ಎಂದು ಕೆಣಕಿ ಮತ್ತೊಮ್ಮೆ ಕೇಳಿದ ಅವನ ಪ್ರಶ್ನೆಗೆ ಲಂಬರದಾರ, "ನಮ್ಮಲ್ಲಿ ಯಾರೂ ಸತ್ತಿಲ್ಲ, ತಿಳಿಯಿತೆ? ಏನು ಬೇಕು ನಿಮಗೆ?" ಎಂದು ಕೇಳಿದನು.

ಮುಖಂಡ ಯುವಕನು ತನ್ನ ಎಂಟು ಹತ್ತು ಜನರೊಡನೆ ಒಳಗೆ ಬಂದು ಕುಳಿತನು.

"ಇದು ಸೀಖರ ಹಳ್ಳಿಯೆ?"

"ಹೌದು, ಸರ್. ಕೆಲ ಮುಸ್ಲಿಮರಿದ್ದರು. ನಿನ್ನೆ ಬೆಳಿಗ್ಗೆ ಹೋಗಿದ್ದಾರೆ."

"ನೀವೆಂಥ ಸೀಖರು? ಗಂಡಸರೋ, ಷಂಡರೊ? ಎಷ್ಟು ಜನ ಸೀಖ, ಹಿಂದೂ ಜನರ ಹೆಣಗಳನ್ನು ತುಂಬಿಕೊಂಡು ನಿಮ್ಮ ಊರಿನ ಮುಂದೆಯೇ ಗಾಡಿಗಳು ಹೋದವು. ನೀವೇನು ಮಾಡಿದಿರಿ? ರಾವಲ್‌ಪಿಂಡಿ, ಮುಲ್ತಾನ, ಗುಜರಾನ್‌ವಾಲಾ ಎಲ್ಲ ಕಡೆಗೂ ಸೀಖರ ಕೊಲೆ, ಸುಲಿಗೆ, ಶೀಲಭಂಗ–ಏನೆಲ್ಲ ನಡೆಯಿತು? ನೀವೇನು ಮಾಡಿದಿರಿ? ಸುಖವಾಗಿ ಉಂಡು, ಮಲಗಿದಿರಿ! ನೀವು ಶೂರ ಸೀಖರು!"

"ಸರದಾರ್‌ಜಿ, ಬೇಕಾದರೆ ಪಾಕಿಸ್ತಾನದೊಡನೆ ನಮ್ಮ ಸರಕಾರ ಯುದ್ಧವನ್ನು ಸಾರಲಿ. ನಾವು ಸೈನ್ಯವನ್ನು ಸೇರುತ್ತೇವೆ. ಇಲ್ಲಿ ಮನೋಮಾಜರಾದಲ್ಲಿ ಕುಳಿತು ನಾವೇನು ಮಾಡುವ ಹಾಗಿದ್ದೇವೆ?"

"ಸರಕಾರ? ನಮ್ಮ ಷಂಡ ಸರಕಾರ ಏನಾದರೂ ಮಾಡುತ್ತದೆಂದು ನೀವು ತಿಳಿದಿದ್ದೀರಾ? ನಿಮ್ಮ ಅಕ್ಕ–ತಂಗಿಯರ ಮೈಗೆ ಕೈ ಹಚ್ಚುವ ಕಾಲಕ್ಕೆ ಪಾಕಿಸ್ತಾನದ ಮುಸಲ್ಮಾನರು ತಮ್ಮ ಸರಕಾರಕ್ಕೆ ಬರೆದು, ಪರ್ಮಿಟ್ ತರಿಸಿಕೊಳ್ಳುತ್ತಾರೇನು? ನಮ್ಮ ನಿರಪರಾಧಿ ಸೀಖ ಬಾಂಧವರನ್ನು ತುಂಬಿಕೊಂಡು ಹೊರಟ ಟ್ರೇನುಗಳನ್ನು ನಡುದಾರಿಯಲ್ಲಿ ನಿಲ್ಲಿಸಿ ಹುಡುಗರು ಹೆಂಗಸರು ಎನ್ನದೆ, ಪ್ರತಿಯೊಬ್ಬರನ್ನೂ ತುಂಡರಿಸಿ ಕೊಂದು, ಅದೇ ಟ್ರೇನನ್ನು ನಮ್ಮ ಕಡೆಗೆ ಅಟ್ಟುವಾಗ, ತಮ್ಮ ಸರಕಾರದ ಪರವಾನಿಗೆಯನ್ನು ಅವರು ಪಡೆಯುತ್ತಾರೇನು?"

ಮಾತಿನ ಆ ಅಬ್ಬರಕ್ಕೆ ಅಲ್ಲಿ ನೆರೆದಿದ್ದವರ ಧರ್ಮಭಾವನೆ ಪುಟದೆದ್ದಿತು. ತಮ್ಮ ಧರ್ಮದ ರಕ್ಷಣೆಗೆ ಏನಾದರೂ ಮಾಡಲೇಬೇಕು ಎಂದೆನಿಸಿತು.

"ಸರದಾರ ಸಾಹೇಬ್, ಈಗ ನಮಗೇನು ಮಾಡಬೇಕೆನ್ನುತ್ತೀರಿ?" ಎಂದು ಲಂಬರದಾರನು ಕೇಳಿದನು.

"ಹೀಗೆ ಹಾದಿಗೆ ಬರ್ರಿ. ಮತ್ತು ಲಕ್ಷ್ಯಗೊಟ್ಟು ಕೇಳಿರಿ. ನಾಳೆ ರಾತ್ರಿ ಮುಸಲ್ಮಾನರನ್ನು ತುಂಬಿಕೊಂಡು ಒಂದು ಗಾಡಿ ಚಂದನನಗರದಿಂದ ಹೊರಟು ಪಾಕಿಸ್ತಾನಕ್ಕೆ ಹೋಗಲಿದೆ. ನಿಮ್ಮಲ್ಲಿ ಗಂಡಸುತನವಿದ್ದರೆ, ಅದರಲ್ಲಿದ್ದ ಶಕ್ಯವಿದ್ದಷ್ಟು ಜನರನ್ನು ತುಂಡರಿಸಿ ಪಾಕಿಸ್ತಾನಕ್ಕೆ ಕಳಿಸಬೇಕು. ಇಂಥ ಹತ್ತಾರು ಗಾಡಿಯಲ್ಲಿ ಅವರು ನಮ್ಮ ಬಾಂಧವರ ಶವಗಳನ್ನು ಕಳಿಸಿಕೊಟ್ಟಿದ್ದಾರೆಂಬುದು ನೆನಪಿರಲಿ."

"ಆ ಗಾಡಿಯಲ್ಲಿ ನಮ್ಮ ಊರಿನ ಮುಸಲ್ಮಾನರೂ ಇರುತ್ತಾರೇನೊ" ಎಂದು ಸಣ್ಣ ದನಿಯಲ್ಲಿ ಮಿಾತ್‌ಸಿಂಗ್ ಹೇಳಿದನು.

"ಭಾಯೀ, ನಿಮಗೆ ಹೇಳಿಯೇ ಅವರು ಪಾಕಿಸ್ತಾನಕ್ಕೆ ಟಿಕೀಟು ತಗೊಂಡಿದ್ದಾರೆಯ? ಏನು, ನಿಮ್ಮ ಮಗನೇ ಅಲ್ಲಿ ರೇಲ್ವೆ ಟಿಕೀಟು ಕೊಟ್ಟಿದ್ದಾನೆಯೊ? ಆ ಗಾಡಿಯಲ್ಲಿ ಯಾವ ಊರಿನ ಮುಸಲ್ಮಾನರಿದ್ದಾರೆಂಬುದನ್ನು ತೆಗೆದುಕೊಂಡು ಏನು ಮಾಡಬೇಕಾಗಿದೆ? ಅವರು ಮುಸಲ್ಮಾನರಿದ್ದಾರೆ, ಅಷ್ಟು ಸಾಕು. ಯಾವ ಮುಸಲ್ಮಾನನನ್ನೂ ಇಲ್ಲಿಂದ ಜೀವಂತಕಳಿಸುವುದಿಲ್ಲ. ಹೇಳಿರಿ ಇದಕ್ಕೆ ಸಿದ್ಧರಿದ್ದೀರಾ? ಕೆಲ ಹೊತ್ತು ಯಾರೂ ಮಾತನಾಡಲಿಲ್ಲ! ಆದರೆ ದೂರದ ಕತ್ತಲೆಯಲ್ಲಿ ತನ್ನ ಸಂಗಡಿಗರೊಡನೆ ನಿಂತಿದ್ದ ಮಲ್ಲಿಯು ಮುಂದೆ ಬಂದು ಹೇಳಿದ "ಸರದಾರಸಿಂಗ್, ಹೊರಗೆ ಸೇತುವೆಯ ಹತ್ತಿರ ಮಿಲಿಟರಿ ಕಾವಲು ಇದೆಯಲ್ಲ?"

"ಅದರ ಬಗ್ಗೆ ನೀವು ಚಿಂತಿಸುವ ಕಾರಣವಿಲ್ಲ. ಅವರು ನಿಮಗೆ ಏನೂ ಮಾಡದಂತೆ ನಾವು ನೋಡಿಕೊಳ್ಳುತ್ತೇವೆ. ಹುಂ. ಈ ಕೆಲಸದಲ್ಲಿ ನೆರವಾಗಲು ಯಾರೂ ಸಿದ್ಧರಿಲ್ಲವೆ?"

"ಸಾಹೇಬ್, ನಾನು ಇದ್ದೇನೆ. ನೀವು ಹೇಳಿದ ಕೆಲಸಕ್ಕೆ ಜೀವವನ್ನೂ ಕೊಡಲು ಸಿದ್ಧನಿದ್ದೇನೆ"—ಹೇಳಿದವ ಮಲ್ಲಿ!

ಜೈಲಿನಲ್ಲಿ ಜಗ್ಗಾನಿಂದ ಪೆಟ್ಟು ತಿಂದ ವಿಷಯ ಜನಜನಿತವಾಗಿತ್ತಾದ್ದರಿಂದ, ತನ್ನ ಪ್ರತಿಷ್ಠೆಯನ್ನು ಹೆಚ್ಚಿಸುವ ಈ ಅವಕಾಶವನ್ನು ಮಲ್ಲಿಯು ತಾನಾಗಿ ಆಯ್ದುಕೊಂಡನು. "ಭಲೇ! ಮತ್ತಾರು? ನಮ್ಮ ದೇಶಕ್ಕಾಗಿ, ಧರ್ಮರಕ್ಷಣೆಗಾಗಿ, ಜೀವಬಿಡಲು ಇನ್ನಾರೂ ಮುಂದೆ ಬರಲಾರರೆ? ಛೇ, ಸೀಖರು ಇಷ್ಟು ಹೇಡಿಗಳಾಗುತ್ತ ನಡೆದಿದ್ದಾರೆಯೆ?" ಮಿಾತ್‌ಸಿಂಗ್ ಗಂಟಲು ಸರಿಮಾಡಿಕೊಂಡು ಮೆಲ್ಲಗೆ ಕೇಳಿದ : "ಆದರೆ.... ಅಂದರೆ ಪಾಕಿಸ್ತಾನದ ಮುಸಲ್ಮಾನರು ಮಾಡಿದ್ದಕ್ಕೆ ಇಲ್ಲಿನ ಮುಸಲ್ಮಾನರ ಮೇಲೆ ಸೇಡು ತೀರಿಸಿಕೊಳ್ಳುವುದೇನು ನ್ಯಾಯ? ಇವರೇನು ತಪ್ಪು ಮಾಡಿದ್ದಾರೆ?"

ತರುಣ ತಿರಸ್ಕಾರದಿಂದ ನುಡಿದ, "ಪಾಕಿಸ್ತಾನದಲ್ಲಿದ್ದ ಸೀಖರೂ ಹಿಂದುಗಳೂ ಏನು ಮಾಡಿದ್ದರು? ಅವರು ನಿರಪರಾಧಿಗಳಾಗಿರಲಿಲ್ಲವೆ? ಅವರ ಹೆಂಗಸರು ಏನು ತಪ್ಪು ಮಾಡಿದರೆಂದು ಅವರ ಶೀಲಭಂಗ ಮಾಡಿದರು? ಅವರ ಮಕ್ಕಳು ಕೊಲೆ ಮಾಡಿದ್ದರೇ? ಮತ್ತೇಕೆ ಅವರನ್ನು ಶೂಲಕ್ಕೇರಿಸಿದರು?"

ಮಿಾತ್‌ಸಿಂಗನ ಬಾಯಿ ಕಟ್ಟಿತು. ತಡವಿಲ್ಲದೆ ಜನ ಮುಂದೆ ಬರತೊಡಗಿದರು! ಮಲ್ಲಿಯ ಸಂಗಡಿಗರೂ ಕೆಲ ನಿರಾಶ್ರಿತರೂ ಸೇರಿದ್ದರು. ಹಿಂದಿನ ದಿನ ಬೆಳಿಗ್ಗೆ ತಮ್ಮ ಮುಸಲ್ಮಾನ ಬಾಂಧವರು ಊರು ಬಿಟ್ಟು ಹೋಗುವಾಗ ಅತ್ತಿದ್ದ ಮನೋಮಾಜರಾದ ಕೆಲವರೂ ಅದರಲ್ಲಿದ್ದರು. ಸುಮಾರು ೫೦ ಜನರಾದರೂ ಹೀಗೆ ಮುಂದೆ ಬಂದಿರಬೇಕು.

"ಇಷ್ಟು ಜನ ಸಾಕು. ನಾವು ಬದಿಯ ರೂಮಿನಲ್ಲಿ ಕುಳಿತು ಮುಂದಿನ ವಿಚಾರ ಮಾಡೋಣ" ಎಂದು ಅವರೆಲ್ಲರನ್ನು ಅಲ್ಲಿಗೆ ಕರದೊಯ್ದು ಬಾಗಿಲಿಕ್ಕಿಕೊಂಡನು.

"ನಮ್ಮ ಯೋಜನೆ ಹೀಗಿದೆ. ನಾಳೆ ಕತ್ತಲಾದ ಮೇಲೆ ನಾವು ಸೇತುವೆಯ ಮೊದಲ ಕಮಾನಿನ ಮೇಲ್ಗಡೆ ಒಂದು ಹುರಿನೂಲಿನ ಹಗ್ಗವನ್ನು ಕಟ್ಟೋಣ. ಆ ಹಗ್ಗವು ಎಂಜಿನ್ನಿನ

ಅಥವಾ ಡಬ್ಬಿಗಳ ಮೇಲ್ಗಡೆ ಒಂದು ಫೂಟಿನಷ್ಟು ಎತ್ತರದಲ್ಲಿರಬೇಕು. ಗಾಡಿ ಬಂದಿತೆಂದರೆ, ಆದರ ಮೇಲ್ಗಡೆ ಕುಳಿತ ಎಲ್ಲರಿಗೂ ಅದು ತಾಕಿ ಅವರು ಪಟಪಟನೆ ಬೀಳುವರು. ಅದರಿಂದ ಕನಿಷ್ಠ ನಾಲ್ಕೈದು ನೂರು ಜನರಾದರೂ ಸಾಯುವರು.''

ಎಷ್ಟು ಸುಲಭವಾದ ಆದರೆ ಭೀಕರವಾದ ಮರಣಸಾಧನ! ಅದನ್ನು ಕೇಳುತ್ತಿದ್ದಂತೆ ನೆರೆದವರು ರೋಮಾಂಚನಗೊಂಡರು.

''ಗಾಡಿಯು ಮಧ್ಯರಾತ್ರಿಯ ಸುಮಾರಿಗೆ ಚಂದನನಗರ ಸ್ಟೇಶನ್ನಿನಿಂದ ಹೊರಡುವುದು. ಅದಕ್ಕೆ ಎಲ್ಲಿಯೂ ದೀಪಗಳಿರುವದಿಲ್ಲ. ಎಂಜಿನ್ನಿಗೂ ಕೂಡ. ಕತ್ತಲೆಯಲ್ಲಿ ಅದರ ಸಪ್ಪಳದ ಮೇಲಿಂದಲೇ ನಾವು ಗುರುತಿಸಬೇಕಾಗುವುದು. ಆದರೂ ಟಾರ್ಚ್ ಹಿಡಿದಿರುವ ಜನರನ್ನು ಪ್ರತಿ ನೂರು ಯಾರ್ಡಿಗೆ ಒಬ್ಬೊಬ್ಬರಂತೆ ನಿಲ್ಲಿಸೋಣ. ಗಾಡಿಯು ವೇಗದಿಂದ ಹೊರಟಿದ್ದರೆ, ಮೇಲಿನವರೆಲ್ಲರೂ ಸಾಯುತ್ತಾರೆ. ಅಲ್ಲದೇ, ನಮ್ಮ ಬಂದೂಕು, ಪಿಸ್ತೂಲುಗಳಿಂದ ಒಳಗೆ ಇದ್ದವರಲ್ಲಿ ನೂರಿನ್ನೂರು ಜನರನ್ನಾದರೂ ಕೊಲ್ಲಬಹುದು. ಆದರೆ ದೀಪವಿಲ್ಲದಿರುವುದರಿಂದ ಗಾಡಿಯು ಸಾವಕಾಶ ಹೋಗುವುದೇ ಹೆಚ್ಚು ಸಂಭವ. ಆಗ ನಾವು ಗಾಡಿಯ ಒಳಗಿನ ಜನರನ್ನು ತುಂಡರಿಸಬಹುದು. ಗಾಡಿಯಲ್ಲಿ ಪಾಕಿಸ್ತಾನ ಸೈನಿಕರೇನೊ ಇರುತ್ತಾರೆ, ಏನಂತೆ? ಕತ್ತಲಲ್ಲಿ ಅವರು ಎಲ್ಲೆಂದು ಗುಂಡು ಹಾರಿಸಬಲ್ಲರು? ಆದ್ದರಿಂದ ನಿಮಗಾರಿಗೂ ಅಪಾಯವಿಲ್ಲ. ನಮ್ಮ ಗುಂಪಿನ ಸಪ್ಪಳಕ್ಕೆ ಗಾಡಿಯನ್ನು ನಿಲ್ಲಿಸಿದರಂತೂ ಬಹಳೇ ಉತ್ತಮವಾಗುವುದು. ಆಗ ಹೆಣಗಳಿಂದ ತುಂಬಿಕೊಂಡೇ ಗಾಡಿ ಮುಂದೆ ಸಾಗುವುದು!''

ಅವನ ಹಂಚಿಕೆಯಲ್ಲಿ ಯಾವ ನ್ಯೂನತೆಯೂ ಅವರಿಗೆ ಕಾಣಲಿಲ್ಲ, ತಮ್ಮ ಜೀವಕ್ಕೂ ಅಪಾಯವಿಲ್ಲ.... ಎಲ್ಲರೂ ಉತ್ತೇಜಿತರಾಗಿ 'ಹೋ' ಎಂದರು. ''ಈಗ ರಾತ್ರಿ ಬಹಳವಾಯಿತು. ಹೋಗಿ ಮಲಗಿಕೊಳ್ಳಿರಿ. ನಾಳೆ ಬೆಳಿಗ್ಗೆ ಸೇತುವೆಯ ಹತ್ತಿರ ಹೋಗಿ ಸ್ಥಳಪರೀಕ್ಷೆ ಮಾಡಿಕೊಂಡು, ಯಾರು ಯಾರು ಎಲ್ಲಿ ಎಲ್ಲಿ ನಿಲ್ಲಬೇಕೆಂಬುದನ್ನು ನಿರ್ಧರಿಸೋಣ'' ಎಂದನು.

ಅತ್ಯಂತ ಬಹಿರಂಗವಾಗಿಯೆ ನಡೆದ ಈ ಹತ್ಯಾಕಾಂಡದ ಯೋಜನೆಯ ವಿವರಗಳು ಫೌಜದಾರನಿಗೆ ಲಂಬರದಾರನಿಂದ ಸಿಗುತ್ತಲೂ ಅವನು ಹುಕುಮ್‌ಚಂದರ ಹತ್ತಿರ ಧಾವಿಸಿದನು.

''ಫೌಜದಾರ ಸಾಹೇಬ, ಆಗಲಿ, ಆಗಲಿ. ಬೇರೆ ಪೊಲೀಸ್ ಠಾಣೆಗಳಿಗೆ ಸಹಾಯಕ್ಕಾಗಿ ಸೂಚನೆ ಕಳಿಸಿರಿ. ಯಾರೂ ಸಹಾಯ ಕಳಿಸುವುದಿಲ್ಲ. ಆದರೂ ನಮ್ಮ ಡ್ಯೂಟಿ ನಾವು ಮಾಡಿದ್ದೇವೆ ಎಂಬ ಬಗ್ಗೆ ದಾಖಲೆ ಇರಲಿ ಅಷ್ಟೇ.''

ಈ ಒಂದು ವಾರದಲ್ಲಿ ಹುಕುಮ್‌ಚಂದರು ಮುದುಕರಂತಾಗಿಬಿಟ್ಟಿದ್ದರು. ಅವರ ಮುಖದಲ್ಲಿ ಕಳೆಯಿರಲಿಲ್ಲ, ಕಾರ್ಯದಲ್ಲಿ ಉತ್ಸಾಹವಿರಲಿಲ್ಲ.

''ಏನು ಮಾಡೋದಿದೆ ಫೌಜದಾರ. ಜಗತ್ತಿಗೇ ಹುಚ್ಚು ಹಿಡಿದು ಬಿಟ್ಟಿದೆ. ೪೦ ಕೋಟಿ ಜನರಲ್ಲಿ ಮತ್ತೊಂದು ಸಾವಿರ ಜನ ಸತ್ತರೆ ಏನಾಗಬೇಕಾಗಿದೆ? ಈ ಸಲ ಸತ್ತವರಿಗಾಗಿ ನಾವು

ಕಟ್ಟಿಗೆ, ಚಿಮಣಿ ಎಣ್ಣೆಗಾಗಿ ಧಡಪಡಿಸಬೇಕಾಗಿಲ್ಲ. ಹತ್ತಿರದಲ್ಲೇ ಸತಲಜ್ ತುಂಬಿ ಹರಿಯುತ್ತಿದೆ! ಶವಗಳನ್ನು ಎತ್ತಿ ಬಿಸುಟುಬಿಟ್ಟರಾಯಿತು.''

ಹುಕುಮ್‌ಚಂದರಿಗಿಂತ ಒಂದು ತೂಕ ಹೆಚ್ಚೇ ನಿರ್ವಿಣ್ಣನಾಗುವಂಥ ಸ್ಥಿತಿ ಫೌಜದಾರನದಾಗಿತ್ತು. ಹೇಳಿದ :

''ಚಂದನ ನಗರದ ಸ್ಥಳಿಕ ಮುಸಲ್ಮಾನರನ್ನೂ ಪಾಕಿಸ್ತಾನಕ್ಕೆ ಈ ರೈಲು ಮಾರ್ಗವಾಗಿ ಕಳಿಸಬೇಕೆಂದೆ. ಅದು ತಿಳಿದೊಡನೆಯ ನೂರಾರು ಜನ ಸಶಸ್ತ್ರರಾಗಿ ಬಂದರು. ಊರಿನ ಮುಸಲ್ಮಾನರ ಮನೆಗಳನ್ನು ಮುತ್ತಬೇಕೆಂದರು. 'ಪಾಕಿಸ್ತಾನದ ಒಂದು ಸೈನ್ಯದ ಪಡೆ ಊರಲ್ಲಿ ಇದೆ' ಎಂದು ನಾನು ಹೇಳುತ್ತಲೂ ಅವರು ಆ ಊಸಾಬರಿಗ ಹೋಗಲಿಲ್ಲ. ಕೂಡಲೇ ಊರಲ್ಲಿಯ ಪ್ರತಿಯೊಬ್ಬ ಮುಸಲ್ಮಾನನಿಗೆ ಮುಂಚೆಯೇ ಕ್ಯಾಂಪಿಗೆ ಹೊರಟು ಹೋಗಬೇಕೆಂದು ಹೇಳಿಕಳಿಸಿ ಒತ್ತಾಯಿಸಿದೆ. ಇತ್ತ ಸೀಖರಿಗ ನಾನು ಸುಳ್ಳು ಹೇಳಿದೆಯೆಂದು ತಿಳಿಯುತ್ತಲೂ ಮತ್ತೆ ಧಾವಿಸಿಬಂದರು. ಒಂದೈದು ಮಿನಿಟು ತಡವಾಗಿದ್ದರೆ ಒಬ್ಬ ಮುಸಲ್ಮಾನನೂ ಉಳಿಯುತ್ತಿದ್ದಿಲ್ಲ. ಕೊನೆಗೆ ಊರಲ್ಲಿಯ ಮುಸ್ಲಿಂ ಮನೆಗಳಿಗೆ ನುಗ್ಗಿ ಇದ್ದು ಬಿದ್ದುದನ್ನೆಲ್ಲ ದೋಚಿಕೊಂಡು ಹೋದರು. ನಾನು ಸುಳ್ಳು ಹೇಳಿದೆನೆಂದು ನನ್ನನ್ನೇ ಮುಗಿಸಲು ಠಾಣೆಗೆ ಬರುವವರಿದ್ದರು. ಹೇಗೋ ತಪ್ಪಿತೆನ್ನಿರಿ. ಅಂತೂ ಎಲ್ಲರಿಗೂ ನನ್ನ ಮೇಲೆ ಸಿಟ್ಟು. ಮುಸಲ್ಮಾನರಿಗೆ ತಮ್ಮ ಮನೆಗಳಿಂದ ಹೊರಡಿಸಿದೆನೆಂದು ಸಿಟ್ಟು. ಸೀಖರಿಗೆ ತಮಗೆ ಸಿಕ್ಕುತ್ತಿದ್ದ ಲೂಟಿ ಮತ್ತು ಕೊಲೆಗಳನ್ನು ತಪ್ಪಿಸಿದೆನೆಂದು! ಸರಕಾರಕ್ಕಂತೂ ಸರಿಯೇ. ಅಂತೂ ಒಬ್ಬರೂ ಸಾಯದೇ ಕೆಲಸ ಬಗೆಹರಿಯಿತೆಂದು ಸಮಾಧಾನಪಡುವಷ್ಟರಲ್ಲಿ ಈಗ ಓಡುವ ಗಾಡಿಯ ಮೇಲೆ ದಾಳಿ ಮಾಡುವವರಿದ್ದಾರೆಂಬ ವರ್ತಮಾನ ಇದೆ.''

ಇದನ್ನು ಕೇಳಿ ಹುಕುಮಚಂದರ ಮುಖವು ಇನ್ನಷ್ಟು ವಿವರ್ಣವಾಯಿತು. ಅದಕ್ಕೆ ಒಂದು ಖಾಸಗೀ ಕಾರಣವೂ ಇದ್ದಿತು. ಚಂದನನಗರದ ಮುಸ್ಲಿಮರಲ್ಲಿ ಹುಕುಮ್‌ಚಂದರ ಓರ್ವ ಹೂಡಿಕೆಯ ಹೆಂಗಸು ಇದ್ದಳು. ಆಕೆ ಇವರಿಗಾಗಿಯೇ ಮೀಸಲಿದ್ದ ಹೆಣ್ಣು. ಅದೂ ವಯಸ್ಸಿನಲ್ಲಿ ಚಿಕ್ಕವಳು. ಫೌಜದಾರನ ಮಾತಿನಿಂದ ಸುರಕ್ಷಿತ ಸ್ಥಳವನ್ನು ಸೇರಿದ ಎಲ್ಲ ಮುಸ್ಲಿಮರಲ್ಲಿ ಅವಳೂ ಒಬ್ಬಳಿರುವಳೆಂದಂತಾಯಿತು. ತನ್ನನ್ನೇ ನಂಬಿಕೊಂಡಿದ್ದ ಆ ಎಳೆಯ ಜೀವ ಕಣ್ಣಿನಿಂದ ದೂರ ಹೋಗುವದೆಂಬ ಮಾತಂತಿರಲಿ, ಅವಳ ಜೀವವನ್ನು ಉಳಿಸುವುದಕ್ಕೆ ತಾನೇನು ಮಾಡುವಹಾಗಿದ್ದೇನೆ—ಎಂಬ ಯೋಚನೆಯಲ್ಲಿ ಹುಕುಮ್‌ಚಂದರು ಮುಳುಗಿದರು.

ಫೌಜದಾರನು ಇನ್ನೇನೊ ವಿವರಿಸುತ್ತಿದ್ದಾಗ ಹುಕುಮಚಂದರು ಒಮ್ಮೆಲೆ ಹೇಳಿದರು :

''ಆ ಲಾಲಾನ ಕೊಲೆಯ ಸಂಬಂಧವಾಗಿ ಇಬ್ಬರನ್ನು ಬಂಧಿಸಿದ್ದಿರಲ್ಲ? ಮುಂದೇನಾಯಿತು?''

ಈ ಮಹಾಗದ್ದಲದಲ್ಲಿ ಅವರನ್ನು ಕುರಿತ ಪ್ರಶ್ನೆ ಫೌಜದಾರನಿಗ ಅರ್ಥವಿಲ್ಲದ್ದಾಗಿ ಕಂಡಿತು.

''ಅವರಿನ್ನೂ ಲಾಕಪ್ಪಿನಲ್ಲಿಯೇ ಇದ್ದಾರೆ.''

"ಮನೋಮಾಜರಾದಲ್ಲಿ ಪಾಕಿಸ್ತಾನಕ್ಕೆ ಹೋಗಲಿಕ್ಕೆ ಒಲ್ಲೆನೆಂದ ಯಾರಾದರೂ ಮುಸಲ್ಮಾನರು ಉಳಿದಿದ್ದಾರೆಯೆ?"

"ಇಲ್ಲ ಸಾಹೇಬ್. ಹೆಣ್ಣು ಗಂಡು ಹುಡುಗರು ಎಲ್ಲರೂ ಹೋಗಿದ್ದಾರೆ" ಫೌಜದಾರನಿಗೆ ಇನ್ನೂ ಅರ್ಥವಾಗದಿದ್ದಾಗ ಹುಕುಮ್‌ಚಂದರು ಮತ್ತೆ ಕೇಳಿದರು :

"ಆ ದರೋಡೆಖೋರನ ಹುಡುಗಿಯೊಬ್ಬಳು ಇದ್ದಾಳೆಂದಿದ್ದಿರಲ್ಲ? ಅವಳೂ ಹೋಗಿದ್ದಾಳೇನು?"

"ಹೌದು ಸರ್. ಅವಳೂ ಹೋಗಿದ್ದಾಳೆ. ಆ ಹುಡುಗಿಯ ಅಪ್ಪನೇ ಊರಿನ ಮುಸಲ್ಮಾನರ ಮುಖಂಡನಂತಿದ್ದ."

"ಎಲ್ಲಿ? ಕಾಗದ, ಪೆನ್ನು ಕೊಡಿರಿ" ಎಂದು ಫೌಜದಾರನ ಪೆನ್ನನ್ನೇ ಇಸಿದುಕೊಂಡು ಹುಕುಮ್‌ಚಂದರು ಆರ್ಡರ್ ಬರೆಯುತ್ತ, "ಅವರಿಬ್ಬರನ್ನೂ ಈಗಿಂದೀಗ ಬಿಡುಗಡೆ ಮಾಡಿರಿ. ವಿಶೇಷತಃ ಆ ದರೋಡೆಖೋರನನ್ನು ಕೂಡಲೇ ಮನೋಮಾಜರಾಕ್ಕೆ ಕಳಿಸಿ ಅಲ್ಲೇ ಬಿಡುಗಡೆ ಮಾಡಿದರೂ ಚಿಂತೆಯಿಲ್ಲ. ಅಂತೂ ಸಂಜೆಯ ಒಳಗಾಗಿ ಅವನು ತನ್ನ ಊರಲ್ಲಿ ಇರಬೇಕು. ಇಂದಿನ ರಾತ್ರಿಯ ದುರಂತದ ಯೋಜನೆಯ ಸುದ್ದಿ ಅವನಿಗೆ ತಲುಪಬೇಕು!"

ಅರ್ಥವಾಯಿತು ಫೌಜದಾರನಿಗೆ. ತನ್ನ ಹುಡುಗಿಯ ಸಲುವಾಗಿ ಏನಾದರೂ ಜಗ್ಗಾ ಉಪಾಯ ಮಾಡಿಯಾನು. ಅಲ್ಲದೆ ಅವನ ವೈರಿಯಾದ ಮಲ್ಲಿಯೂ ಆ ಹತ್ಯಾಕಾಂಡದಲ್ಲಿ ಸೇರಿಕೊಂಡಿದ್ದಾನೆಂದು ತಿಳಿದ ಮೇಲಂತೂ ಜಗ್ಗಾ ಸುಮ್ಮನೆ ಕೂಡಲಿಕ್ಕಿಲ್ಲ.

ಠಾಣೆಗೆ ಬಂದವನೇ, ಇಕ್‌ಬಲ್ ಮತ್ತು ಜಗ್ಗಾನನ್ನು ಬಿಡುಗಡೆ ಮಾಡುತ್ತ ಆತ ಹೇಳಿದ: "ಊರಲ್ಲಿ ಬಹಳಷ್ಟು ಸ್ಥಿತ್ಯಂತರಗಳಾಗಿವೆ. ಎಲ್ಲ ಮುಸಲ್ಮಾನರು ಹೊರಟು ಹೋಗಿದ್ದಾರೆ."

"ಹೌದೆ? ಫೌಜದಾರ ಸಾಹೇಬ್, ಏನಾದರೂ ಗಲಾಟೆಯಾಯಿತೆ? ಯಾಕೆ ಊರು ಬಿಟ್ಟು ಹೋದರು?" ಎಂದು ಜಗ್ಗಾ ಕೇಳಿದನು. "ಆಗುವುದರಲ್ಲಿತ್ತು, ಊರಲ್ಲಿ ಅನೇಕ ಹೊರಗಿನ ಸೀಖ ಜನರು ಸೇರಿಕೊಂಡು, ಮುಸಲ್ಮಾನರನ್ನು ಹೊಡೆ-ಬಡೆಯಲು ಚಡಪಡಿಸುತ್ತಿದ್ದಾರೆ. ಮಲ್ಲಿ ಮತ್ತು ಅವನ ಸಂಗಡಿಗರೂ ಸೇರಿಕೊಂಡಿದ್ದಾರೆ. ಮುಸಲ್ಮಾನರನ್ನು ನಾವು ಹೇಗೋ ಪಾರು ಮಾಡಿದೆವು. ಆದರೂ ಮಲ್ಲಿ ಮತ್ತು ಅವನ ಸಂಗಡಿಗರು, ಅವರ ದನಕರು, ಚಕ್ಕಡಿ, ಎಲ್ಲವನ್ನೂ ದೋಚಿಕೊಂಡು ಹೋಗಿದ್ದಾರೆ."

"ಹೌದೇ? ಸುಪ್ಪರ್! ಅವನ ಕೈಯನ್ನು ಕತ್ತರಿಸಿ, ಅವನ ಮುಖಕ್ಕೆ ಉಗುಳದಿದ್ದರೆ ನಾನು ಜಗ್ಗಾನೇ ಅಲ್ಲ" ಎಂದನು.

"ಏನು, ಮಹಾ ಶೂರನ ಹಾಗೆ ಮಾತನಾಡುತ್ತಿದ್ದೀಯೆ. ಅವತ್ತು ತಪ್ಪಿ ನಿನ್ನ ಕೈಗೆ ಸಿಕ್ಕ ಅಂತ ಹೆಮ್ಮೆ ಪಡಬೇಡ. ಅವನೇನು ಕೈಗೆ ಬಳೆ ಇಟ್ಟಿಲ್ಲ. ಅವನ ಸಂಗಡಿಗರಲ್ಲದೆ ಬೇರೆ ಜನರೂ ಶಸ್ತ್ರಾಸ್ತ್ರ ಹಿಡಿದು ಇಧ್ದಾರೆ. ತಿಳೀತೆ?"

"ಆಗಲಿ. ಆಗಲಿ. ಒಮ್ಮೆ ಮಲ್ಲಿಯ ಸಮಾಚಾರ ತಗೊಂಡೇ ನಿಮಗ ತೋರಿಸುತ್ತೇನೆ. ಆಗ ಹೇಗೂ ಅಂವ ನನ್ನ ಮೇಲೆ ಫಿರ್ಯಾದನ್ನು ಕೊಡಲಿಕ್ಕೆ ನಿಮ್ಮ ಬಳಿ ಬಂದೇ ಬರುತ್ತಾನಲ್ಲ" ಎನ್ನುತ್ತ ಜಗ್ಗಾ ತನ್ನ ಅಂಗ್ಯೆಯ ಮೇಲೆ ತಾನೇ ಉಗುಳಿ ತೊಡೆಗೆ ಒರಸಿಕೊಂಡನು.

ಫೌಜದಾರನು ಅಣಕದ ನಗೆಯಿಂದ "ಇಕ್ಬಲ್‌ಬಾಬೂ, ನೀವೇನೂ ಹೆದರಬೇಡಿರಿ. ಇಡೀ ನಮ್ಮ ಜಿಲ್ಲೆಯಲ್ಲಿಯೆ ಮಹಾವಸ್ತಾದನಾದ ಜಗ್ಗಾ ನಿಮ್ಮ ಜೊತೆಗೆ ಇದ್ದಾನೆ," ಎನ್ನುತ್ತ ಇಬ್ಬರನ್ನೂ ಜಟಕಾ ಹತ್ತಿಸಿದನು.

ಜಟಕಾದಲ್ಲಿ ಕುಳಿತಾಗ ಜಗ್ಗಾನಿಗೆ ನೂರನಳದೇ ಯೋಚನೆ. ಯಾರು ಊರು ಬಿಟ್ಟು ಹೋದರೂ ಊರವರು ಚಾಚಾ ಇಮಾಮಬಕ್ಷನನ್ನು ಹೊರಗೆ ಹಾಕಲಾರರು. ಒಂದು ವೇಳೆ ಅವನು ಹೋಗಿದ್ದರೂ ನೂರೂ ತಲೆಮರಸಿ, ತಪ್ಪಿಸಿಕೊಂಡು ಊರಲ್ಲೇ ಉಳಿದಿರಬಹುದು. ಮಲ್ಲಿಯು ಅವಳ ಮೇಲೆ ಕೈ ಮಾಡಿರಲಿಕ್ಕಿಲ್ಲವಷ್ಟೆ. ನನ್ನ ತಾಯಿಯ ಹತ್ತಿರ ಏನಾದರೂ ಆಕೆ ಬಂದಿದ್ದಾದರೆ, ಎಲ್ಲ ವಿಷಯ ತಿಳಿಯುವುದು. ನೂರನಳಿಗೆ ನನ್ನ ತಾಯಿ ಆಶ್ರಯ ಕೊಟ್ಟಿರದಿದ್ದರೆ ತಾಯಿಯ ಮುಖವನ್ನೆ ತಾನು ನೋಡುವುದಿಲ್ಲ....

ಊರು ಮುಟ್ಟುತ್ತಲೂ ಇಕಬಲ್ ಭಾಯಿಗೆ ಒಂದು ನಮಸ್ಕಾರವನ್ನೂ ಹೇಳದೆ ಜಗ್ಗಾ ತನ್ನ ಮನೆಗೆ ಧಾವಿಸಿದನು.

☆ ☆ ☆ ☆

ಆ ದಿನ ರಾತ್ರಿ ೧೧ ಗಂಟೆಗೆ ಚಂದ್ರನು ಉದಯಿಸಿದ. ಮೊದಲೇ ನಿಸ್ತೇಜನಂತಿದ್ದ ಚಂದ್ರನ ಬೆಳಕು ಸೇತುವೆಯ ಬಳಿ ಇದ್ದೂ ಇಲ್ಲದಂತಿತ್ತು. ಆದರೆ ಕಣ್ಣಿಟ್ಟು ನೋಡಿದ್ದಾದರೆ, ಅಲ್ಲಲ್ಲಿ ರೇಲ್ವೆ ಹಳಿಗುಂಟ ಹಾಗೂ ಸೇತುವೆಯ ಅನುಕೂಲ ಸ್ಥಳಗಳಲ್ಲಿ ಬಡಿಗೆ, ಬಂದೂಕುಗಳನ್ನು ಹಿಡಿದ ಜನ ಕುಳಿತದ್ದನ್ನು ಕಾಣಬಹುದಿತ್ತು. ಸೇತುವೆಯ ಮೊದಲ ಕಮಾನಿನ ಮೇಲ್ಗಡೆ, ಅಡ್ಡಲಾಗಿ ಹಗ್ಗವೊಂದನ್ನು ಕಟ್ಟಿದ್ದರು. ಅದರ ಹುರಿಕಟ್ಟು, ಬೆಳದಿಂಗಳ ಛಾಯೆಯಲ್ಲಿ ಕರಗಸದ ಬಾಯಿಯಂತೆ ಹೊಳೆಯುತ್ತಿತ್ತು.

ರೈಲಿನ ಬರವನ್ನೆ ಕಾಯುತ್ತಿದ್ದ ಆ ಜನರಿಗೆ ಒಬ್ಬರೊಬ್ಬರ ಮುಖ ಕಾಣುತ್ತಿದ್ದಿಲ್ಲವಾಗಿ ಒಂದಿಷ್ಟು ಗಟ್ಟಿಯಾಗಿಯೆ ಮಾತನಾಡುತ್ತಿದ್ದರು. ಮುಖಂಡನು ಕುಳಿತಲ್ಲಿಂದಲೇ ಒದರಿದನು:

"ಸುಮ್ಮನಾಗುವಿರೊ? ನಿಮ್ಮ ಗದ್ದಲದಲ್ಲಿ ಗಾಡಿ ಬರುವುದು ಕೇಳಿಸುವಂತೆಯೇ ಇಲ್ಲ."

ಅವನ ಅಪ್ಪಣೆಯ ಮೇರೆಗೆ ಒಬ್ಬನು ರೇಲ್ವೆ ಹಳಿಗೆ ಕಿವಿಯನ್ನು ಹಚ್ಚಿ "ಗಾಡಿಯು ಬರುವ ಲಕ್ಷಣ ಕಾಣುತ್ತಿದೆ" ಎಂದ.

ಅಷ್ಟರಲ್ಲಿ ಆ ದಿಕ್ಕಿನಿಂದ ಹಸಿರು ದೀಪದ ಸಂಜ್ಞೆಯು ಕಾಣಿಸಿಕೊಂಡು ಮರುಗಳಿಗೆಗೇ ಕಣ್ಮರೆಯಾಯಿತು. ಗಾಡಿಯ ಸದ್ದು ಬರುವುದರ ಕಡೆಗೇ ಎಲ್ಲರೂ ತಮ್ಮ ದೃಷ್ಟಿಯನ್ನು ತಿರುಗಿಸಿದ್ದರು. ಅನಂತರ ಸೆಟೆದು ನಿಂತ ಆ ಹಗ್ಗದತ್ತ ನೋಡಿದರು. ವೇಗದಿಂದ ಗಾಡಿ ಬಂದದ್ದಾದರೆ ಅದು ಅನೇಕ ಜನರನ್ನು ಎರಡಾಗಿ ತುಂಡರಿಸಬಹುದಿತ್ತು. ಅದನ್ನು ಕಲ್ಪಿಸಿಕೊಂಡು ಅವರು ನಡುಗಿದರು.

ಅಷ್ಟರಲ್ಲಿ ಹಗ್ಗ ಕಟ್ಟಿದ್ದ ಸೇತುವೆಯ ಕಮಾನನ್ನು ಹಿಂದಿನ ಬದಿಯಿಂದ ಒಬ್ಬ ಏರುತ್ತಲಿದ್ದ. ಹಗ್ಗವಿದ್ದಲ್ಲಿಗೆ ಮುಟ್ಟಿದಾಗಲೆ ಅವನನ್ನು ಕೆಲವರು ನೋಡಿದ್ದು. ನೋಡಿದವರಾದರೂ ಬಹುಶಃ ಅವನು ಹಗ್ಗದ ಗಂಟನ್ನು ಪರೀಕ್ಷಿಸುತ್ತಿದ್ದಾನೆಂದು ಭಾವಿಸಿದರು.

ಆತ ಹಗ್ಗದ ಮೇಲೆ ಉದ್ದಕ್ಕೆ ಮಲಗಿದಂತೆ ಕಂಡಿತು. ಕಾಲುಗಳು ಹಗ್ಗದ ಗಂಟಿನ ಬಳಿ ಇದ್ದವು. ಕೈಗಳು ಹಗ್ಗದ ನಡುವಿನವರೆಗೂ ನೀಡಿದ್ದವು.

ಇತ್ತ ಗಾಡಿ ಬರುವುದು ಕ್ಷೀಣ ಚಂದ್ರಪ್ರಕಾ .ದಲ್ಲಿ ಕಾಣಸುತ್ತಿತ್ತು. ಅದು ಹತ್ತಿರವಾಯಿತು. ಎಲ್ಲಿಯೂ ಅದಕ್ಕೆ ದೀಪವಿರಲಿಲ್ಲ!

ಆದರೆ ಎಲ್ಲ ಡಬ್ಬಿಗಳ ಮೇಲ್ಗಡೆ ಕಿಕ್ಕಿರಿದು ತುಂಬಿದ ಜನಸಮುದಾಯವನ್ನು ಬೆಳುದಿಂಗಳಲ್ಲಿ ಗುರುತಿಸಬಹುದಾಗಿತ್ತು. ಇನ್ನೂ ಹಗ್ಗಕ್ಕೆ ಜೋತು ಬಿದ್ದ ಆ ದೀರ್ಘಕಾಯದ ವ್ಯಕ್ತಿಯನ್ನು ನೋಡಿದವನೇ, ಮುಖಂಡನು ಒದರಿದನು, ''ಯಾರವರು? ಮೂರ್ಖ, ಇಳಿ ಸಾಯಬೇಕೆನ್ನುತ್ತೀಯಾ?'' ಆ ವ್ಯಕ್ತಿಯ ದನಿ ಬಂದ ಕಡೆ ಕ್ಷಣಕಾಲ ಹೊರಳಿ ಮತ್ತೆ ಸೊಂಟದಿಂದ ಕೃಪಾಣವನ್ನು (ಕಿರುಗತ್ತಿ) ಹೊರದೆಗೆದು ಹಗ್ಗವನ್ನು ಕೊಯ್ಯತೊಡಗಿತು.

''ಯಾರವನು? ಏನು ಮಾಡುತ್ತಿದ್ದಾನೆ?''


ವಿಚಾರಿಸಲು ಸಮಯವಿರಲಿಲ್ಲ. ಜನ ಸೇತುವೆಯಿಂದ ಗಾಡಿಯತ್ತ, ಗಾಡಿಯಿಂದ ಸೇತುವೆಯತ್ತ ನೋಡಿದರು. ಆ ಆಜಾನುಬಾಹು ಭರದಿಂದ ಹಗ್ಗವನ್ನು ಕೊಯ್ಯುತ್ತಿದ್ದ.

ಗಾಡಿ ಹತ್ತಿರವೇ ಬಂದಿತು. ಮುಖಂಡನು ಬಂದೂಕು ಎತ್ತಿ ಅವನ ಮೇಲೆ ಗುಂಡು ಹಾರಿಸಿದನು. ಅದು ಗುರಿಗೆ ನಾಟಿ ಅವನ ಕಾಲು ಹಗ್ಗದಿಂದ ಕೆಳಗೆ ಜೋತಾಡಿತು. ಇನ್ನೂ ಒಂದು ಗುಂಡು ಅವನ ದೇಹವನ್ನು ಹೊಕ್ಕಿತಾದರೂ ಆತನು ಹಗ್ಗವನ್ನು ತನ್ನ ಬಗಲಲ್ಲಿ ಅದಮಿ ಹಿಡಿದನು. ಇನ್ನೊಂದು ಕೈಯಲ್ಲಿಯ ಕಿರುಗತ್ತಿಯಿಂದ ಹುಚ್ಚು ಆವೇಶದಿಂದ ಹಗ್ಗವನ್ನು ಕರಕರನೆ ಕೊಯ್ಯುತ್ತಲೇ ಇದ್ದನು. ಮತ್ತಾರೋ ಇನ್ನೊಂದು ಗುಂಡು ಹಾರಿಸಿದರು. ಹಗ್ಗದ ಮೇಲಿದ್ದವನು ಜಾರಿದರೂ ಸಾವರಿಸಿಕೊಂಡು ಕೈಗಳಿಂದಲೂ ಗದ್ದದಿಂದಲೂ ಹಗ್ಗವನ್ನು ಅದಮಿ ಹಿಡಿದನು. ಆಮೇಲೆ ನಿಲುಕಿ ಹಗ್ಗವನ್ನು ಎಡ ಕಂಕುಳಲ್ಲಿ ಅವಚಿಕೊಂಡು ಮತ್ತೆ ಬಲಗೈಯಿಂದ ಕೊಯ್ಯತೊಡಗಿದನು.

ಹಗ್ಗ ಎಳೆಎಳೆಯಾಗಿ ಹರಿಯಿತು. ಇನ್ನು ಕೆಲವೆಳೆಗಳಷ್ಟೇ ಉಳಿದಿದ್ದವು.

ಗಾಡಿಯು ಉರಿಯ ಕಿಡಿಗಳನ್ನು ಸೂಸುತ್ತ ಸೇತುವೆಯ ಕೆಲವೇ ಗಜದೊಳಗೆ ಬಂತು. ಈ ಹೊಸ ಅವಾಂತರದಲ್ಲಿ ಮುಖಂಡನಿಗೆ ಮುಂದಿನ ಆಜ್ಞೆಗಳನ್ನು ಕೊಡುವುದಾಗಲೇ ಇಲ್ಲ! ಬದಲಾಗಿ ಹಗ್ಗವನ್ನು ಇನ್ನೂ ಕೊಯ್ಯುತ್ತಿದ್ದ ಆ ವ್ಯಕ್ತಿಯ ಮೇಲೆ ಪಟಪಟನೆ ಗುಂಡಿನ ಮಳೆಗರೆದನು.

ಆದರೇನು? ಎಂಜಿನ್ ಮೊದಲಿನ ಕಮಾನನ್ನು ಪ್ರವೇಶಿಸುವಷ್ಟರಲ್ಲಿ ಹಗ್ಗವು ಎರಡು ತುಂಡಾಗಿದ್ದಿತು. ಅದರ ಜೊತೆಗೆ ಆ ವ್ಯಕ್ತಿಯೂ ಕೆಳಗೆ ಬಿದ್ದನು. ಓಡುತ್ತ ಬಂದ ಗಾಡಿಯು ಅವನ ಮೇಲೆ ಹಾಯ್ದು ಪಾಕಿಸ್ತಾನದತ್ತ ಭರದಿಂದ ಸಾಗಿತು.



ಡಾ. ಶ್ರೀನಿವಾಸ ಹಾವನೂರ
(೧೯೨೯–೨೦೧೦)

ಕಾದಂ–ಕಥನವೆಂಬುದು ಕನ್ನಡದಲ್ಲಿ ಒಂದು ನವೀನ ಸಾಹಿತ್ಯ ರೂಪ. ಇದು ಕಾದಂಬರಿಯ ಡೈಜೆಸ್ಟ್ ಅಥವಾ ಸಾರಾಂಶವಲ್ಲ. ಕಾದಂಬರಿಯೊಂದರ ಕೆಲವು ಹೃದ್ಯವಾದ ಸನ್ನಿವೇಶಗಳನ್ನು ಯಥಾವತ್ತಾಗಿ ಕೊಡುತ್ತ ಅ ಮೂಲಕ ಹೇಳಲಾದ ಕಥನವಿದು.

ಇಲ್ಲಿ ಸಾಕಷ್ಟು ವೈವಿಧ್ಯವಿದೆ. ಪೌರಾಣಿಕ, ಐತಿಹಾಸಿಕ ಕಥನಗಳಿವೆ. ಕಾರ್ಮಿಕ, ಹರಿಜನರ ಸಮಸ್ಯೆಗಳಂಥ ಸಮಕಾಲೀನ ವಸ್ತುವಿನೊಂದಿಗೆ ವೈಜ್ಞಾನಿಕ ಕಲ್ಪನೆಯ ಕಥೆಗಳೂ ಸಮಾವೇಶವಾಗಿವೆ. ಒಟ್ಟಿನ ಆಯ್ಕೆಯಲ್ಲಿ ಬದುಕಿನ ಮೌಲ್ಯಗಳನ್ನು ಎತ್ತಿ ಹಿಡಿಯುವ ಉದಾತ್ತ ಕೃತಿಗಳಿಗೆ ಹೆಚ್ಚು ಗಮನ ಕೊಡಲಾಗಿದೆ.

ಹೇಮಂತ ಸಾಹಿತ್ಯ
ರಾಜಾಜಿನಗರ, ಬೆಂಗಳೂರು–10